# ತುಳು ನಾಟಕ ಪರಂಪರೆ

ಮುದ್ದು ಮೂಡುಬೆಳ್ಳೆ

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ

# ಮುದ್ದು ಮೂಡುಬೆಳ್ಳೆ

ಉಡುಪಿ ತಾಲೂಕಿನ ಗ್ರಾಮಾಂತರ ಪ್ರದೇಶವಾದ ಮೂಡುಬೆಳ್ಳೆಯಲ್ಲಿ ಜನಿಸಿ, ತನ್ನ ಹದಿಮೂರನೆಯ ವಯಸ್ಸಿನಲ್ಲಿ (1968ರಲ್ಲಿ) ಪ್ರಕಟವಾದ ಪ್ರಥಮ ಕತೆಯೊಂದಿಗೆ ಕತೆಗಾರ, ಕವಿ, ಜಾನಪದ ಅಧ್ಯಯನಕಾರ ಮುದ್ದು ಮೂಡುಬೆಳ್ಳೆ 'ಮುಮುಕ್ಷು', 'ಶ್ರೀವತ್ಸ', 'ಆರಾಧಕ' ಕಾವ್ಯನಾಮಗಳಲ್ಲೂ ಕಳೆದ ಐದು ದಶಕಗಳಿಂದ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಬರೆಯುತ್ತಾ, ಕನ್ನಡ ಮತ್ತು ತುಳು ಭಾಷೆಗಳಲ್ಲಿ 32 ಕೃತಿಗಳನ್ನು ಪ್ರಕಟಿಸಿದ್ದಾರೆ.

'ಓದುತ್ತೀರಾ ನನ್ನ ಕತೆ?' (1984), 'ಮೆಟ್ಟಿಲುಗಳು' (1990), 'ಗೂಢ' (1997), 'ಸುಖಧ್ವನಿ' (2007), 'ಮೂಡುಬೆಳ್ಳೆ ಕಥೆಗಳು' (2012) ಕಥಾಸಂಕಲನಗಳು ಪ್ರಕಟವಾಗಿವೆ. 'ನಮನ' (1978), 'ಭಾವಗೇಯ ಯಾನ' (2018), 'ನಾಡು ನುಡಿಯಿದೊಂದು ಬಗೆ' (1993), 'ಕಾಂತಬಾರೆ-ಬೂದಬಾರೆ' (1998), 'ತುಳು ರಂಗಭೂಮಿ' (2005) ಮುಂತಾದವು ಇವರ ಪ್ರಮುಖ ಅಧ್ಯಯನ ಕೃತಿಗಳು. 'ಕಾಂತಬಾರೆ-ಬೂದಬಾರೆ' ಕೃತಿಗೆ 2013ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಕ್ಕಮ್ಮ ಗಿರಿಗೌಡ ರುದ್ರಪ್ಪ ದತ್ತಿ ಪ್ರಶಸ್ತಿ ಲಭಿಸಿದೆ.

ಮೂಡುಬೆಳ್ಳೆಯವರು ಈ ಹಿಂದೆ ಕೊಂಕಣಿ, ಇಂಗ್ಲಿಷ್‌ನಲ್ಲೂ ಬರೆದವರು. ಹತ್ತಾರು ಸ್ಮರಣ ಸಂಪುಟಗಳ ಸಂಪಾದಕ ಮಂಡಳಿಯಲ್ಲಿದ್ದರು. ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಹಲವು ವಿಚಾರ ಗೋಷ್ಠಿಗಳಲ್ಲಿ ಸಂಶೋಧನ ಪ್ರಬಂಧಗಳನ್ನು ಮಂಡಿಸಿದ್ದಾರೆ. 1985ರಿಂದ ಮಂಗಳೂರು ಆಕಾಶವಾಣಿಯಲ್ಲಿ ಕಾರ್ಯಕ್ರಮ ನಿರೂಪಕರಾಗಿದ್ದು, ಪ್ರಸ್ತುತ ಮಂಗಳೂರು ವಿಶ್ವವಿದ್ಯಾನಿಲಯದ ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠದ ನಿರ್ದೇಶಕರು.

# ತುಳುನಾಟಕ ಪರಂಪರೆ

ಮುದ್ದು ಮೂಡುಬೆಳ್ಳೆ

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ
ತುಳುಭವನ, ಉರ್ವಸ್ಟೋರ್, ಮಂಗಳೂರು - 575 006

**TULU NATAKA PARAMPARE**
A study on History and development of
Tulu Theatre and Plays by
**Muddu Moodubelle**
'Manaswini'
Ashok Nagar, Mangaluru - 575 006
Mobile : 9482975125
email : muddumoodubelle@gmail.com

Chief Editor
**A.C. Bhandari**
President, Karnataka Tulu Sahitya Academy

Publisher
**Chandrahasa Rai B.**
Registrar, Karnataka Tulu Sahitya Academy

Published by
**Karnataka Tulu Sahitya Academy**
Mangaluru - 575 006
Dakshina Kannada, Karnataka, INDIA
Tel : +91 824 2459389
Email : tulu.academy@yahoo.co.in

© Karnataka Tulu Sahithya Academy
First Impression : 2019
No. of copies : 300
Paper used : 80 gsm NS Maplitho
Size : Demy 1/8
Pages : 308
Price : Rs. 400

Photos : **Author's Research Sources**

Cover Design : **Kallur Nagesh**

Designed & printed at
**Aakrithi Prints**
Light House Hill Road, Mangaluru - 1
Phone : 0824 2443002

## ಕೊಡಿನುಡಿ–ಮುನ್ನುಡಿ

ತುಳು ಭಾಷೆ ಸಂಸ್ಕೃತಿ ಪ್ರಾರ್ಕ್ಡ್ದಿಂಚನೇ ದಿಂಜ ಪೊರ್ಲುಗು ಪೋಲಿಕೆದವು. ಜಾತಿಮತ ಒವ್ವೇ ಆದಿಪ್ಪಡ್; ತುಳುನಾಡ್‌ಡ್ ಮಾತೆರ್ಲಾ ಒಂಜಿಪ್ಪೆ ಬಾಲೆಲ್ಲೆಕೊ ಬಾಳ್ವೆ ಮಲ್ತೊಂದು ಬರೊಂದುಪ್ಪುನಕ್ಲು. ಇಂಚಿತ್ತಿ ಸಂಸ್ಕೃತಿ ಒರಿದ್ ಬರ್ಪಿನೆಟ್ ತುಳು ನಾಟಕೊಲೆನವು ಮಿತ್ತರ್ಮೆದ ಮೇನತ್ತ್. ಕರಿನ ಸುಮಾರ್ ನೂದೊರ್ಸ ಪಿರವು ಕೊಡಿತ್ತ್‌ದ್, ಸಾಲೆ ಸಂಗೊಲೆನ ಮತ್ತರ್ಮೆಡ್, ಸಾಲೆದ ಗುರುಕುಲು, ಸಮಾಜ ಚಿಂತಕೆರೆನ ಉಮೇದ್‌ಡ್ ಬಲತೊಂದು ಬತ್ತಿಂಚಿ ತುಳುನಾಟಕ ರಂಗೊನ್ ಬುಲೆಪಾಯಿ ನಕುಲು ಮಾಧವ ತಿಂಗಳಾಯೆರ್, ಕೆಮ್ತೂರು ದೊಡ್ಡಣ್ಣ ಶೆಟ್ರ್, ಭಂಡಾರಿ, ಕಿರೋಡಿಯನ್, ಕೆ.ಎನ್. ಟೇಲರ್, ಡಾ। ದಂಡೆಕೇರಿ ದುಂಬಾಯಿನಕುಲು ಅತ್ತಂದೆ ಸದಾನಂದ ಸುವರ್ಣ, ಮನು ಇಡ್ಯ, ಅಮೃತ ಸೋಮೇಶ್ವರ, ಡಿ.ಕೆ. ಚೌಟೆರೆನಂಚಿತ್ತಿ ಪೊಸ ದಿಟ್ಟಿದ ನಾಟಕಕಾರೆರ್, ರಂಗಕರ್ಮಿಲು. ರಡ್ಡ್‌ಸಾರ ಒರ್ಸ ಪಿರಾಕ್‌ದ ಗ್ರೀಕ್ ನಾಟಕೊಡ್ ಸನಾ ತುಳು ನುಡಿಕುಲು ಇತ್ತಿನ ಪ್ರಾಕ್ತನೊನು ವಿದ್ವಾಂಸೆರ್ ನಾಡ್ದ್‌ಕೊರ್ತೆರ್.

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಪುಟ್ಟ್‌ದ್ ಬತ್ತ್‌ದ್ 25 ವರ್ಷ ದಿಂಜೊಂದುಂಡು. ಅಕಾಡೆಮಿದ ಸುರುಡ್ದಿಂಚಿದ ಬೇತೆ ಬೇತೆ ಗುರ್ಕಾರೆರ್, ಸದಸ್ಯೆರ್ನಕುಲು ತುಳುಬಾಷೆ ಬದ್ಕ್‌ಗಾದ್ ಅಕಾಡೆಮಿ ಮಲ್ಪೊಡಾಯಿ ಕಜ್ಜೊಲೆನ್ ಯೋಜನಾಬದ್ಧವಾದ್ ಮಲ್ತೊಂದು ಬತ್ತೆರ್. ಬೊಲ್ಲಿಪರ್ಬದ ಈ ವರ್ಸೊಡು ಅಂಚಿತ್ತಿನ ಕೆಲವು ಪೊಸ ನದ್‌ರ್ಲು ಉಲ್ಲ. ಅವೆಟ್ ಒಂಜಿ ಶತಮಾನದ ಪಜ್ಜೆಡುಪ್ಪುನ ತುಳು ರಂಗನಾಟಕೊಲೆನ ಇತಿಹಾಸೊನು ದಾಕಲ್ ಮಲ್ಪೊಡುಂದ್. ಈ ದಿಟ್ಟಿನ್ ತೆರಿಯೊಂದು ತುಳು ನಾಟಕ ಪರಂಪರೆ ಪನ್ಪಿ ಈ ಕೃತಿನ್, ತನ ಪಾಕವರ್ಸೊಲೆನ ಅಧ್ಯಯನ, ತಪಸ್‌ದ ಪಲಿತ ಇನ್ನಿಲೆಕ ಸಜ್ಜಿ ಮಲ್ತ್ ಕೊರ್ತಿನಾರ್ ಸಿರಿ ಮುದ್ದು ಮೂಡುಬೆಳ್ಳೆ.

ತುಳು ನಾಟಕರಂಗ ಬೀಜರೂಪೊಡು ಉಂಡಾದ್ ಬಲತೊಂದು ಬತ್ತಿನ ಇಡೀ ಚರಿತ್ರೆನ್ ಮುಲ್ಪ ತೋಜಾದೆರ್. ಆನಿಡ್ದಿನಿ ಮುಟ್ಟದ ನಾಟಕಕಾರೆರ್, ರಂಗನಟೆರ್ ಆಂಜೊವು–ಪೊಂಜೊವು, ನಿರ್ದೇಶಕೆರ್ ಮಾತ್ರತ್ತಂದೆ ತುಳು ರಂಗಭೂಮಿದ ಅಂಗಾಂಗೊಲಾಯಿನ ಪ್ರಸಾದನ, ದುಸ್ತೈತದಕುಲು, ಬೊಲ್ಪು, ಪರಿಕರದಕ್ಲು, ಕೂಟೊಲು, ಆ ಕಾಲೊಡ್ದು ಈ ಕಾಲ ಮುಟ್ಟದ ಬಲಕೆ, ಏರ್ತೆ–ಜಪ್ಪೆಲ್ ಬೆರಿಸಾಯದಕ್ಲು – ಇಂಚಿತ್ತಿ ಎಗ್ಗೆ ಎಗ್ಗೆಲೆನ್ ಸಕೊಟು ಸರ್ಕೆಡ್ ತೆರಿಪಾದ್ ಕೊರ್ಪಿಂಚಿ ಮಾಮಲ್ಲ ಆದಾರಗ್ರಂತ ಆದ್ ಈ ಕೃತಿ ಉಂಡೂಂದ್ ಸಂತೋಸ್‌ಡ್ ಪನೊಲಿಯಾತ್ಂಡ್.

ಈ ಮಾಮಲ್ಲ ದುನ್ನಬಾರದ ಕೃತಿನ್ ಮೊಡೆಯಿನ ಶ್ರೀ ಮುದ್ದು ಮೂಡುಬೆಳ್ಳೆ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿದ ಮಾಜಿ ಸದಸ್ಯೆರ್. ತುಳು, ಕನ್ನಡದ ಪೆರಿಯ ಕಬಿ, ಸಾಹಿತಿ ಸಂಶೋಧಕೆರಾದ್ ಕಡ್ಜಿಲ್ದ ಬೇಲೆಲೆನ್ ಇತ್ತೋರ್ತ್‌ಗೇ ಬೆನ್ತಿನಾರಾಂಡಲಾ, ಅಪ್ಪೆಬಾಸೆ ತುಳುನೇ ಉಸುಲುಡು ತಾಂಗೊಂದಿನ ಮೇರ್ ಮೂಲತಃ ರಂಗಕರ್ಮಿ, ರಂಗನಟೆ, ನಾಟಕಕಾರೆ, ನಿರ್ದೇಶಕೆರ್. ಬೇತೆ ಬೇತೆ ಉದ್ಯೋಗೊಲೆಡ್ ಬೇತೆ ಬೇತೆ ಊರು, ಜನಮಾನಿನ ಬದ್ಕ್‌ನ್ ತೂದು ತೆರಿಯಿನಾರ್, 2005 ಇಸವಿಡೇ 'ತುಳು ರಂಗಭೂಮಿ' ಪನ್ಪಿ ಕೃತಿನ್ ಕೊರ್ತಿನಾರ್. ಅಖಿಲಭಾರತ ಆಕಾಶವಾಣಿದ ಉದ್ಘೋಷಕೆ ರಾದಿತ್ತ್‌ದ್, ತನ್ನ ಬೇಲೆದ ಮಾಧ್ಯಮೊಡು ಸೃಜನಶೀಲತೆದ ನಾನಾ ಮರ್ಗಿಲ್‌ಲೆಡ್ ಬೆಂದ್‌ದ್ ಗೆಲ್ಮೆ ಪಡೆಯಿನಾರ್. ನಾಟಕ ರೂಪಕೊಲೆನ ರೂಪಣೆ, ನಿರ್ದೇಶನೊಗು ರಾಜ್ಯ, ರಾಷ್ಟ್ರಪ್ರಶಸ್ತಿಲೆನ್ ಪಡೆತೊಂದಿನಾರ್. ತನ್ನ ಅಲ್‌ಂಬೊಗದ, ಪೊಲಬುಲೆನ ಸರ್ವಸಾಧ್ಯತೆಲೆನ್ ಕೂಡಾದ್ ಈ 'ತುಳುನಾಟಕ ಪರಂಪರೆ' ಸಮಗ್ರ ಅಧ್ಯಯನ ಗ್ರಂತೊನು ಅಕಾಡೆಮಿಗ್ ಸಜ್ಜಿಮಲ್ತ್ ಕೊರ್ತೆರ್. ತುಳುವೆರ್ ಮಾತ್ರ ಅತ್ತ್. ತುಳು ಓದ್ಯರಾವಂದಿನ ಬಾಕಿದಕುಲೆಗ್ಲಾ ಓದ್ಯರಾವೊಡುಂದ್ ಈ ಬೂಕುದ ಬರವು ಕನ್ನಡೊಡುಂಡು. ಉಂದೊಂಜಿ ಏಪೊಗ್ಲಾ ನೆಂಪುದ ಮಾಮಲ್ಲ ಬೇಲೆ.

ಉಡಲೊರ್ಮೆ ಎಡ್ಡೆಪು ಬಾಮ್ಯೊಂದುಲ್ಲೆ.

ಮಂಗಳೂರು
8–3–2019

ಎ.ಸಿ. ಭಂಡಾರಿ
ಗುರ್ಕಾರ್ರ್
ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ

# ರಂಗಾಧ್ಯಯನ ನೇಪಥ್ಯ

ತುಳು ನಾಟಕ ಪರಂಪರೆಯ ಕುರಿತಾಗಿ 1980ರಿಂದ ಅಧ್ಯಯನ ಮಾಡುತ್ತ ಬಂದೆ. 2005ರಲ್ಲೊಮ್ಮೆ ಆ 25 ವರ್ಷ ಕಾಲದ 'ತುಳು ರಂಗಭೂಮಿ' ಅಧ್ಯಯನವನ್ನು ಪ್ರಕಟಿಸಿದೆ. ಅದರ ಪೂರ್ಣ ತಿದ್ದುಪಡಿ ಹಾಗೂ ಅನಂತರದ ಬೆಳವಣಿಗೆಗಳ ವಿಸ್ತಾರ ಪರಿಶೋಧನೆ ಈ ಕೃತಿ.

ತುಳುವಿನಲ್ಲಿ ನಾಟಕ ಕೃತಿಗಳ ಉಗಮ, ಬೆಳವಣಿಗೆಯ ಇತಿಹಾಸ ವಿವರಗಳನ್ನು ಪ್ರಧಾನವಾಗಿ ಇಲ್ಲಿ ಕಾಣಿಸಲಾಗಿದೆ. ರಂಗಪ್ರಯೋಗಗಳ ಕುರಿತೂ ಸಂಕ್ಷಿಪ್ತವಾಗಿ ಅಲ್ಲಲ್ಲೇ ವಿವರಗಳನ್ನೂ ಚಿತ್ರ ಸಹಿತವಾಗಿ ನೀಡುತ್ತಾ ಒಂದು ಸಮಗ್ರತೆಗೂ ಪ್ರಯತ್ನಿಸಿದ್ದೇನೆ. ಇಂದು ಕಣ್ಮುಂದೆ ಇಲ್ಲದ ಕೆಲವು ಆರಂಭಿಕ ಹಿರಿಯರ ವಿವರ ಒಂದಿಷ್ಟು ಹೆಚ್ಚು ಹೇಳುತ್ತಾ ಮುಂದಿನವರನ್ನು ಸಂಕ್ಷಿಪ್ತವಾಗಿಯೂ ನೀಡಲಾಗಿದೆ. ಹಾಗಿದ್ದೂ, ಸಾಕಷ್ಟು ವ್ಯಾಪಕ ಹರವುಳ್ಳ ಈ ವಿಷಯ ಮತ್ತು ನನ್ನ ಏಕವ್ಯಕ್ತಿ ಅಧ್ಯಯನ – ಒಂದರ್ಥದಲ್ಲಿ ಖಂಡಿತಕ್ಕೂ ಸಮಗ್ರವಲ್ಲ ಎನ್ನುವ ಅರಿವು ನನಗಿದೆ.

* * *

**ರಂಗಭೂಮಿ ಅಧ್ಯಯನದ ಹಿನ್ನೆಲೆಯ ಬಗ್ಗೆ ನಾಲ್ಕು ಮಾತು:**

ಹತ್ತನೇ ವಯಸ್ಸಿನಿಂದ ನಾಟಕಾಭಿನಯ, ಮುಂದೆ ಕನ್ನಡ, ತುಳು ಭಾಷೆಗಳಲ್ಲಿ ಪೌರಾಣಿಕ, ಜನಪದ, ಸಾಮಾಜಿಕವೆಂದು ಆಗೀಗ ಕಿರುನಾಟಕಗಳನ್ನು ರಚಿಸಿ, ಪ್ರದರ್ಶಿಸುವ ಮೂಲಕ ಬಾಲ್ಯ ದಿಂದಲೇ ಇದ್ದ ನನ್ನ ನಾಟಕಾಸಕ್ತಿ, ಮುಂದೆ ಜೀವನೋಪಾಯಕ್ಕಾಗಿ ಊರೂರು ಸುತ್ತುವಾಗಲೂ ಅವಕಾಶವಾದಾಗಲೆಲ್ಲ ರಂಗಭೂಮಿ, ನಾಟಕ ರಚನೆಯ ನಂಟು ಬೆಳೆಯಿತು. ಬಹುಷಃ ಶಾಲಾ ದಿನಗಳಲ್ಲಿ ಕೆಮ್ಮೂರು ದೊಡ್ಡಣ್ಣ ಶೆಟ್ಟರ ನಾಟಕಗಳನ್ನು ನಿರಂತರವಾಗಿ ನೋಡುತ್ತಿದ್ದುದೂ ಈ ಸ್ಫೂರ್ತಿಗೆ ಕಾರಣವಿದ್ದೀತು. 70–80ರ

ದಶಕದಲ್ಲಿ ಕೆಲವು ಐತಿಹಾಸಿಕ, ಪೌರಾಣಿಕ ನಾಟಕಗಳಲ್ಲಿ ಕಥಾನಾಯಕನಾಗಿಯೂ, ಸಾಮಾಜಿಕ ನಾಟಕಗಳಲ್ಲಿ ಗಾಯನದೊಂದಿಗೆ ಸ್ತ್ರೀ ಪಾತ್ರವನ್ನೂ ಆಗೀಗ ನಿರ್ವಹಿಸಿದ್ದಿದೆ.

1972–75 ಅವಧಿಯಲ್ಲಿ ಮುಂಬಯಿಯಲ್ಲಿದ್ದೆ. ಆಗ ಅಲ್ಲೂ ನಾಟಕ ಚಟುವಟಿಕೆ ನಡೆಸಿದ್ದಿದೆ. 1976–79ರ ವರ್ಷಗಳಲ್ಲಿ ಉಡುಪಿಯ ಪೂರ್ಣಪ್ರಜ್ಞ ಸಂಧ್ಯಾ ಕಾಲೇಜಿನಲ್ಲಿ ನಾನು ವಿದ್ಯಾರ್ಥಿಯಾಗಿದ್ದಾಗ, ನಮ್ಮ ಪ್ರಾಧ್ಯಾಪಕ ಶ್ರೀ ಮುರಳೀಧರ ಉಪಾಧ್ಯರ ಅಭಿರುಚಿ, ಮಾರ್ಗದರ್ಶನದಿಂದಾಗಿ ಕಾಲೇಜು ವಾರ್ಷಿಕೋತ್ಸವಗಳಿಗೆ ನಾವು ರಾಮ ಕಿರೋಡಿಯನ್, ಪಿ.ಯಸ್. ದಂಡಕೇರಿ ಮುಂತಾದವರ ತುಳು ನಾಟಕಗಳನ್ನಾಡಿದುದೂ ಅಲ್ಲಿನ ಮಟ್ಟಿಗೆ ಪ್ರಥಮ ವಿಶೇಷವಾಗಿತ್ತು.

ಎಂಭತ್ತರ ದಶಕದ ಆರಂಭದ ವೇಳೆಗೆ ಅಕಾಡೆಮಿಯಿಂದ ನಾಟಕ ತರಬೇತಿ ಪಡೆಯುವ ಅವಕಾಶವೂ, ಅನೇಕ ತರಬೇತಿ ಶಿಬಿರಗಳಲ್ಲಿ ಭಾಗವಹಿಸುವ ಸಂದರ್ಭಗಳೂ ಒದಗಿದವು. ಭಾರತೀಯ ಮತ್ತು ಪಾಶ್ಚಾತ್ಯ ನಾಟಕ, ರಂಗಭೂಮಿಯನ್ನು ಸ್ವಲ್ಪಮಟ್ಟಿಗೆ ಅಧ್ಯಯನ ಮಾಡುವುದೂ ಸಾಧ್ಯವಾಯಿತು. ಕೆಲವು ಪ್ರಬುದ್ಧ ನಿರ್ದೇಶಕರ ಸಂಪರ್ಕ ಒದಗಿತು.

ಸುಮಾರು 1980ರ ವೇಳೆಗೆ – ಆಗ ಕಾರ್ಕಳದಲ್ಲಿದ್ದ ನಾನು ನಾಟಕ ಸ್ಪರ್ಧೆಗಳಿಗೆ ತೀರ್ಪುಗಾರನೂ ಆಗಿದ್ದೆ. ನಾಟಕಗಳಲ್ಲಿ ಅಭಿನಯಿಸುತ್ತಿರುವಂತೆಯೇ ತುಳು ನಾಟಕ ಪ್ರದರ್ಶನಗಳ ಕುರಿತು ಅಂದಿನ 'ನವಭಾರತ' ಪತ್ರಿಕೆಗೆ ಸಮೀಕ್ಷೆ ಬರೆಯುವುದಿತ್ತು. 1984ರ ತುಳು ಸಾಹಿತ್ಯ ಸಮ್ಮೇಳನದಲ್ಲಿ ಅದೇ ಪ್ರಥಮವಾಗಿ 'ತುಳು ನಾಟಕ – ವಸ್ತುಭಾಷೆ–ತಂತ್ರ' ಎನ್ನುವ ವಿಷಯವಾಗಿ ಪ್ರಬಂಧ ಮಂಡಿಸುವ ಕೆಲಸವನ್ನು ಮಂಗಳೂರು ತುಳುಕೂಟ ನನಗೆ ನೀಡಿತ್ತು. ಅದೂ ದಿ| ಕೆಮ್ತೂರು, ದಿ| ಕಿರೋಡಿಯನ್, ದಿ| ವಿಶುಕುಮಾರ್ – ಮುಂತಾದ ಹಿರಿಯರ ಸಮ್ಮುಖದಲ್ಲಿ! ಹಾಗಾಗಿ, ತುಳು ನಾಟಕಗಳ ಅಧ್ಯಯನ ಹೆಚ್ಚಿಸಬೇಕಾಯಿತು.

ಹೀಗೆ ಆರಂಭವಾದ ನನ್ನ ತುಳುನಾಟಕಗಳ ಅಧ್ಯಯನ, ದಶಕಗಳುದ್ದಕ್ಕೆ ನನ್ನ ಹತ್ತು ಹಲವು ಚಟುವಟಿಕೆಗಳ ಜಂಜಾಟಗಳ ನಡುವೆ ಕಂಡೂ ಕಾಣದಂತೆ ಸಾಗಿ ಬಂದಿದೆ. ನಾಟಕಗಳನ್ನು ನೋಡಲು ಊರೂರಿಗೆ ಓಡಾಡುವುದು, ನಾಟಕ ಕೃತಿಗಳನ್ನು ಹುಡುಕುವುದು, ಪತ್ರ ವ್ಯವಹಾರ – ಹೀಗೆ. ಕೆಲವೊಮ್ಮೆ ದಣಿದು 'ಈ ಕೆಲಸ ನನ್ನಿಂದಾಗದು' ಎಂದುಕೊಂಡದ್ದೂ ಇದೆ. ಬಾನುಲಿಯ ನೌಕರಿಗೆ ಬಂದ ಮೇಲಂತೂ 'ಶಿಫ್ಟ್ ಡ್ಯೂಟಿ'ಯಿಂದಾಗಿ ರಂಗಭೂಮಿಯಲ್ಲಿ ಅಭಿನಯ ಅಸಾಧ್ಯವಾಯಿತು. ಮಾಧ್ಯಮದಲ್ಲಿದ್ದು ಕೊಂಡೇ ಅಭಿರುಚಿ ಮುಂದುವರಿಸಿದೆ.

2003ರಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯವು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಸಹಯೋಗದಲ್ಲಿ 'ತುಳು ಸಾಹಿತ್ಯ ಚರಿತ್ರೆ' ಪ್ರಕಟಿಸುವ ಯೋಜನೆ ಕೈಗೊಂಡಾಗ ಅದರಲ್ಲಿ ತುಳುನಾಟಕಗಳ ಕುರಿತಾಗಿ ನಿರ್ದಿಷ್ಟ ಚೌಕಟ್ಟಿನ ಲೇಖನ ಬರೆಯುವ ಜವಾಬ್ದಾರಿ ನನಗೊದಗಿಸಲಾಯಿತು. ಹಾಗೆ ಬರೆದುಕೊಟ್ಟ ಲೇಖನವೂ

ಎರಡು ಬಾರಿ ಕಣ್ಮರೆಯಾಯಿತು! ನಾನಂತೂ ಅಧ್ಯಯನವನ್ನು ಮುಂದುವರಿಸುತ್ತ ಬಂದೆ. ಆ ಸಂಕ್ಷಿಪ್ತ ಲೇಖನ ನನ್ನ ಈ ಹಿಂದಿನ ಅಧ್ಯಯನ ಕೃತಿಯಾದ 'ನಾಡು ನುಡಿಯಿದೊಂದು ಬಗೆ' (2003) ಎನ್ನುವ ಸಂಕಲನದಲ್ಲಿದೆ. ಅದನ್ನು ನಾಟಕರಂಗದ ಹಲವು ಹಿರಿಯರಿಗೆ, ತಜ್ಞರಿಗೆ ಓದಲು ಕೊಟ್ಟೆ. ಶ್ರೀ ಸದಾನಂದ ಸುವರ್ಣ, ಶ್ರೀ ಮಚ್ಚೇಂದ್ರನಾಥ ಪಾಂಡೇಶ್ವರ, ದಿ। ಜೆ. ರವೀಂದ್ರ, ರತ್ನಾಕರ ರಾವ್, ವಿ.ಜಿ. ಪಾಲ್, ಕೆ.ಎನ್. ಟೇಲರ್, ಶ್ರೀನಿವಾಸ ಕಾರ್ಕಳ, ಶಿವಾನಂದ ಕರ್ಕೇರ, ಕೆ. ಆನಂದ ಗಾಣಿಗ – ಮುಂತಾದವರು ಅಂದು ನೀಡಿದ ಸಲಹೆಗಳು ಅಮೂಲ್ಯ. ಈ ಬಾರಿಯ ಮರು ಅಧ್ಯಯನದ ವೇಳೆ ಲಕ್ಷ್ಮಣ ಕುಮಾರ್ ಮಲ್ಲೂರು, ತಮ್ಮಲಕ್ಷ್ಮಣ, ವಸಂತ ಕದ್ರಿ, ಶರತ್ ಶೆಟ್ಟಿ, ಕೃಷ್ಣ ಜಿ. ಮಂಜೇಶ್ವರ, ಉಮೇಶ್ ಮಿಜಾರ್, ರಮಾ ಬಿ.ಸಿ.ರೋಡ್, ರೋಹಿದಾಸ್ ಕದ್ರಿ, ಹೆಚ್.ಕೆ. ನಯನಾಡು, ಡಾ। ಈಶ್ವರ ಅಲೆವೂರು ಮುಂಬೈ ಮುಂತಾದವರು ನೀಡಿದ ಮಾಹಿತಿಗಾಗಿ ಕೃತಜ್ಞ. ಇಂದು ಕಣ್ಣೆದುರಿಗಿಲ್ಲದ ಯಶೋಧರಾದೇವಿ, ಮೊೖದಿನಬ್ಬರಂತಹ ಹತ್ತಾರು ರಂಗಕರ್ಮಿಗಳ ಚಟುವಟಿಕೆಗಳ ಬಗ್ಗೆ, ಅವರ ಭಾವಚಿತ್ರದ ಕುರುಹುಗಳಿಗಾಗಿ ಬಹಳಷ್ಟು ಅಲೆದಾಡಬೇಕಾಯಿತು. ಒಬ್ಬರ ಕುರಿತ ಸರ್ವಾಂಗ ಮಾಹಿತಿಗಾಗಿ 8–10 ಮಂದಿಯನ್ನು ಸಂಪರ್ಕಿಸಿದ್ದೂ ಇದೆ. ಹಲವಾರು ಹುಡುಕಾಟಗಳು ಫಲ ನೀಡಿದರೂ, ಕೆಲವು ಮಾಹಿತಿಗಳು ಕಡೆಗೂ ಅಪೂರ್ಣವಾಗಿಯೇ ಉಳಿದು ವ್ಯರ್ಥ ಪ್ರಯಾಸದ ನೋವೂ ಇದೆ.

ಆಕಾಶವಾಣಿ ಉದ್ಯೋಗದ ಸುಮಾರು 30 ವರ್ಷ ಕಾಲಾವಧಿಯಲ್ಲಿ ನೂರಾರು ತುಳು ನಾಟಕ ರಂಗದವರ ಸಂದರ್ಶನ ಅವಕಾಶ. ತುಳುನಾಟಕ ಕಲಾವಿದರ ಒಕ್ಕೂಟ (ರಿ.) ಇದರ ಆರಂಭಕಾಲದ ಒಂದು ಅವಧಿಯಲ್ಲಿ ಜೊತೆ ಕಾರ್ಯದರ್ಶಿಯೂ ಆಗಿದ್ದೆ. ಒಕ್ಕೂಟದ ಸ್ಥಾಪಕ ಅಧ್ಯಕ್ಷರಾದ ಹಿರಿಯ ನಾಟಕಕಾರ ದಿ। ಮಚ್ಚೇಂದ್ರನಾಥ ಪಾಂಡೇಶ್ವರರು 2003ರಲ್ಲೇ ಈ ಹಸ್ತಪ್ರತಿಯ ಕರಡನ್ನು ಓದಿ ಅಭಿಮಾನದ ನುಡಿ ಬರೆದುಕೊಟ್ಟಿದ್ದರು. ಅದನ್ನೂ ಗೌರವಸೂಚಕವಾಗಿ ಕೃತಿಯ ಕೊನೆಯಲ್ಲಿ ನೀಡಿರುವೆ.

2004ರಲ್ಲಿ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ದಶಮಾನೋತ್ಸವ ಸಂದರ್ಭಕ್ಕಾಗಿ ತುಳುನಾಟಕ ಪರಂಪರೆಯ ಈ ನನ್ನ ಅಧ್ಯಯನ ಕೃತಿಯನ್ನು ಪ್ರಕಟಿಸಲು ಆಯ್ಕೆ ಮಾಡಿದ್ದರೂ ನಾನೇ ಹಿಂದೆ ಸರಿದು ನಿಂತು ಆಗ ಮುದ್ರಣ ಸಾಧ್ಯವಾಗಿರಲಿಲ್ಲ. ಮುಂದೆ 2005ರಲ್ಲಿ 'ರಂಗಭೂಮಿ' ಸಂಕ್ಷಿಪ್ತ ಕೃತಿಯನ್ನು ಸ್ವಂತ ಪ್ರಕಾಶನದಲ್ಲಿ ಹೊರತಂದಿದ್ದೆ. ಆ ಬಳಿಕ ರಂಗಾಸಕ್ತರಿಗೆ, ಸಂಶೋಧಕರಿಗೆ, ತುಳು ನಾಟಕ ಕುರಿತು ಮಾತನಾಡುವವರಿಗೆ ಇದೊಂದು ಆಕರ ಕೃತಿಯಾಯಿತು. ಕೆಲವು ಸಂಶೋಧಕರು ತಮ್ಮ ಪಿಎಚ್.ಡಿ. ಗ್ರಂಥಗಳಲ್ಲಿ ಅದರ ಪುಟಗಳನ್ನು ಹಾಕಿಕೊಂಡರು. ಮೊದಲು ಅಧ್ಯಯನ ಮಾಡಿದವರನ್ನು ಉಲ್ಲೇಖಿಸಲು ಕೆಲವರು ಮರೆತರೂ ಒಟ್ಟಿನಲ್ಲಿ ಈ ಅಧ್ಯಯನವು ಅನೇಕರಿಗೆ ಪ್ರಯೋಜನಕಾರಿಯಾದುದು ಸಂತೋಷ. ಈಗಲೂ ಮೂವರು ಸಂಶೋಧನ ವಿದ್ಯಾರ್ಥಿಗಳು ನನ್ನ ಕೃತಿಯನ್ನು ಆಧರಿಸಿ ಸಂಶೋಧನೆಗೆ

ತೊಡಗಿದವರಿದ್ದಾರೆ.

ಇದೀಗ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ 'ಬೆಳ್ಳಿಹಬ್ಬ' ಹೊಸ್ತಿಲಲ್ಲಿ ಅದರ ಈಗಿನ ಅಧ್ಯಕ್ಷರಾದ ಶ್ರೀ ಎ.ಸಿ. ಭಂಡಾರಿಯವರು ತಮ್ಮ ಹಲವು ಯೋಜನೆಗಳ ಜೊತೆಯಲ್ಲಿ ಈ ಕೃತಿ ಪ್ರಕಟಣೆಯನ್ನು ಒಪ್ಪಿ ಹಸ್ತಪ್ರತಿ ಸಿದ್ಧಮಾಡಿಕೊಡಲು ಸೂಚಿಸಿದರು. ಹಾಗಾಗಿ ಈ ಹಿಂದಿನ ನನ್ನ ಅಧ್ಯಯನವನ್ನು ಮತ್ತಷ್ಟು ಮುಂದುವರಿಸಿ ಪರಿಷ್ಕರಿಸಿ ಕೃತಿಯನ್ನು ಈ ಸ್ವರೂಪದಲ್ಲಿ ಸಿದ್ಧಪಡಿಸಿರುವೆ. ಈ ನಡುವೆ ತುಳುರಂಗಭೂಮಿಯ ಹಲವರಿಂದ ಮಾಹಿತಿ, ಸಲಹೆಗಳನ್ನು ಪಡೆದಿರುವೆ. ತುಳುವರಂತೆಯೇ ತುಳುವೇತರರಿಗೂ ಈ ಮಾಹಿತಿಗಳು ಒದಗಬೇಕು ಎನ್ನುವ ಕಾರಣದಿಂದ ಈ ಕೃತಿ ಕನ್ನಡದಲ್ಲಿದೆ.

ಅಕಾಡೆಮಿಯ ಮೂಲಕ ಈ ತುಳುನಾಟಕ ಪರಂಪರೆ ಅಧ್ಯಯನ ಕೃತಿಯನ್ನು ಪ್ರಕಟಿಸಲು ಆಯ್ಕೆ ಮಾಡಿದ ಅಧ್ಯಕ್ಷರು, ಸಮಿತಿ ಸದಸ್ಯರು ಹಾಗೂ ರಿಜಿಸ್ಟ್ರಾರ್ ಶ್ರೀ ಬಿ. ಚಂದ್ರಹಾಸ ರೈ ಇವರಿಗೆ ಕೃತಜ್ಞ. ಹಿರಿಯ ರಂಗಭೂಮಿ ಮತ್ತು ಚಲನಚಿತ್ರ ನಿರ್ದೇಶಕ ಶ್ರೀ ಸದಾನಂದ ಸುವರ್ಣರು ತಮ್ಮ ವಯೋಸಹಜ ನಿಶ್ಶಕ್ತಿಯ ನಡುವೆಯೂ ಈ ಕೃತಿಯನ್ನು ಸಾದ್ಯಂತವಾಗಿ ಓದಿ ಅಭಿಪ್ರಾಯ ನುಡಿಯನ್ನು ನೀಡಿರುವುದು ತುಂಬಾ ಸಂತೃಪ್ತಿಯ ವಿಷಯ. ಡಿಟಿಪಿಯಲ್ಲಿ ಸಹಕರಿಸಿದ ಮಮತಾ, ಫೋಟೋ ಸ್ಕ್ಯಾನಿಂಗ್‌ನಲ್ಲಿ ಸಹಕಾರ ನೀಡಿದ ರವಿರಾಜ್, ಪುಸ್ತಕ ವಿಷಯಕ್ಕೆ ಸೂಕ್ತವಾಗಿ ಪುಟವಿನ್ಯಾಸಗೊಳಿಸಿದ ಶ್ರೀಮತಿ ಭಾರತಿ, ಕೃತಿಯ ಮುಖಚಿತ್ರ ವಿನ್ಯಾಸಗೊಳಿಸಿ ಕೃತಿಯನ್ನು ಮುದ್ರಿಸಿದ ಆಕೃತಿಕಾರ ಕಲ್ಲೂರು ನಾಗೇಶ ಇವರೆಲ್ಲರಿಗೂ ಕೃತಜ್ಞ.

ಮಂಗಳೂರು                                                        ಮುದ್ದು ಮೂಡುಬೆಳ್ಳೆ

1 ಮಾರ್ಚ್ 2019

# ಪುಟನೋಟ

ಕೊಡಿನುಡಿ–ಮುನ್ನುಡಿ / 5

ರಂಗಾಧ್ಯಯನ ನೇಪಥ್ಯ / 7

1. ಪ್ರವೇಶಿಕೆ / 13

2. ಸ್ವಾತಂತ್ರ್ಯಪೂರ್ವ ನಾಟಕಗಳು / 22

3. ಸ್ವಾತಂತ್ರ್ಯೋತ್ತರ ನಾಟಕಗಳು / 29
   - i. ಕೆಮ್ತೂರು ಯುಗ / 29
   - ii. ವೃತ್ತಿನಾಟಕ ತಂಡಗಳು / 29
   - iii. ಹಿರಿಯ ತಲೆಮಾರಿನ ನಾಟಕಕಾರರು / 33

4. ತುಳು ರಂಗಭೂಮಿಯಲ್ಲಿ ಮಹಿಳೆಯರು / 90

5. ಹಾಸ್ಯನಾಟಕಗಳ ಜಯಭೇರಿ / 111

6. ಮುಂಬಯಿಯ ತುಳು ನಾಟಕರಂಗ / 120

7. ತುಳು ನಾಟಕಗಳ ಸೀಮೋಲ್ಲಂಘನ / 137

8. ಆಕಾಶವಾಣಿ ಪ್ರಸಾರಿತ ತುಳು ನಾಟಕಗಳು / 139

9. ತುಳುನಾಟಕ ರಂಗಕ್ಕೆ ಅನ್ಯ ಮಾತೃಭಾಷಿಯರ ಕೊಡುಗೆ / 147

10. ಆಧುನಿಕ ತುಳುರಂಗ ಭೂಮಿ : ಪ್ರಾಯೋಗಿಕ ನೆಲೆ / 152

11. ತುಳುವಿನಲ್ಲಿ ಪ್ರಯೋಗವಾದ ಅನುವಾದ ನಾಟಕಗಳು / 171

12. ತುಳು ರಂಗಭೂಮಿ – ಪ್ರಬುದ್ಧತೆಯತ್ತ / 183

13. ತುಳು ರಂಗಭೂಮಿ – ವಿಭಿನ್ನ ಆಯಾಮಗಳು / 192
   - i. ನಿರ್ದೇಶಕರಾಗಿ ದುಡಿದವರು / 192

ii. ರಂಗನಟರಾಗಿ ಮಿಂಚಿದವರು / 200

iii. ನೂರಾರು ತುಳು ನಾಟಕ ತಂಡಗಳು, ನಾಟಕಕಾರರು / 214

iv. ಧ್ವನಿ, ಬೆಳಕು, ದೀಪಾಲಂಕಾರ / 217

v. ರಂಗಸಜ್ಜಿಕೆ (ಸ್ಟೇಜ್ ಸೆಟ್ಟಿಂಗ್) / 223

vi. ಹಳೆಗಾಲದ ಕೆಲವು ತುಳು ನಾಟಕಗಳ ಪದ್ಯಗಳು / 227

vii. ಸಂಗೀತ ಸಂಯೋಜನೆ / ಸಂಗೀತ ನಿರ್ದೇಶನ / 230

viii. ಹಿನ್ನೆಲೆ ಗಾಯನ / 236

14. ವಸ್ತು, ಭಾಷೆ, ತಂತ್ರದ ದೃಷ್ಟಿಯಿಂದ ತುಳು ನಾಟಕಗಳು / 239

15. ಸಮಕಾಲೀನ ವೃತ್ತಿಪರ ನಾಟಕ ತಂಡಗಳು / 250

16. ತುಳುನಾಟಕರಂಗ ಪ್ರಗತಿ ನೋಟದ ಹೆಜ್ಜೆಗುರುತುಗಳು / 264

17. ತುಳುರಂಗಭೂಮಿ – ಇಂದಿನ ಸವಾಲುಗಳು / 278

14. ಪ್ರಕಟಿತ ತುಳುನಾಟಕಗಳು (ಒಂದು ಸ್ಥೂಲ ಯಾದಿ) / 289

19. ಆಕರ/ಮಾಹಿತಿ ಮೂಲಗಳು / 305

# ಪ್ರವೇಶಿಕೆ

ಪಂಚ ದ್ರಾವಿಡ ಭಾಷೆಗಳಲ್ಲಿ ಒಂದಾಗಿರುವ ತುಳುವಿಗೆ ಅತ್ಯಂತ ಪ್ರಾಚೀನ ವಾಕ್ ಪರಂಪರೆ, ಸಂಸ್ಕೃತಿಯಿದೆ. ತುಳುವರ ನಾಗಾರಾಧನೆಯೂ ಭೂತಾರಾಧನೆಯೂ[1] ಜನಪದ ಹಾಡು, ಕುಣಿತ, ಸಾಹಿತ್ಯ ಸಂಗೀತ, ವಿನೋದ–ವಿಡಂಬನೆ, ವೇಷಭೂಷಣ, ಆರಾಧನೆ, ಸಾಮಾಜಿಕ ಸ್ವಾಸ್ಥ್ಯ ರೂಪಗಳೆಲ್ಲವನ್ನು ಒಳಗೊಂಡ, ಪ್ರಾಚೀನ ಪರಂಪರೆಯಾಗಿದೆ. ಇವುಗಳಲ್ಲೆಲ್ಲ ನಾಟಕಾಂಶಗಳು ಹುದುಗಿವೆ.[2]

ಸಾವಿರಾರು ವರ್ಷಗಳ ಇತಿಹಾಸವಿರುವ ಭೂತಾರಾಧನೆಗೆ ಅದರದೇ ಆದ ಧಾರ್ಮಿಕ ಜಾನಪದೀಯ ಚೌಕಟ್ಟು ಇದೆ, ಹಾಗಾಗಿ ಅದು ಜನಪದ ರಂಗಭೂಮಿ. ನಾಗಾರಾಧನೆಯೂ ಅದರ ಬಹು ಪ್ರಾಚೀನ ನಾಗಮಂಡಲವೂ ಧಾರ್ಮಿಕ ರಂಗಭೂಮಿ 400–500 ವರ್ಷಗಳ ಇತಿಹಾಸವಿರುವ ಯಕ್ಷಗಾನಕ್ಕೆ ಅದರದ್ದೇ ಆದ ಕಟ್ಟುನಿಟ್ಟಾದ ಸಂಪ್ರದಾಯವಿದೆ. ಹಾಗಾಗಿ ಅದು ಸಾಂಪ್ರದಾಯಿಕ ರಂಗಭೂಮಿ.

ಆದರೆ ನಾಟಕ ಅದು ಮೂಲಾರ್ಥದಲ್ಲಿ ಧಾರ್ಮಿಕ ಯಜ್ಞವೆನಿಸಿ ಸಾಂಪ್ರದಾಯಿಕವಾಗಿದ್ದರೂ ಶಿಕ್ಷಣ, ಮನರಂಜನೆಯನ್ನು ಒಳಗೊಂಡಿರ ಬೇಕಾದ ಕಲಾಪ್ರಕಾರ ಎಂಬುದಾಗಿ ನಾಟ್ಯಶಾಸ್ತ್ರ ಜನಕ ಭರತ ನಿರೂಪಿಸುತ್ತಾನೆ.

ನೋಡಿದೊಡನೆಯೇ ಎಲ್ಲರಿಗೂ ಅರ್ಥವಾಗುವ 'ಯಜ್ಞ' ನಾಟಕ ಹಾಗಾಗಿ ಕಾಳಿದಾಸನು ನಾಟಕವನ್ನು 'ಚಾಕ್ಷುಶಯಜ್ಞ' ಎಂದು ಕರೆದಿರುವನು.

ವೈದಿಕ ಪುರಾಣದ ಪ್ರಕಾರ, ಕೆಲವು ಋಷಿಮುನಿಗಳು ಸಾಮಾನ್ಯ ಜನರಲ್ಲಿ ಅರಿವು ಮೂಡಿಸಬೇಕು ಎಂಬ ಉದ್ದೇಶದಿಂದ ಬ್ರಹ್ಮನಲ್ಲಿ ಬಂದು 'ಸಾಮಾನ್ಯ ಜನರಿಗೆ ಅರ್ಥವಾಗುವ ಐದನೇ ವೇದವನ್ನು ಸೃಷ್ಟಿಸಿಕೊಡಿ' ಎಂದು ಕೇಳಿದರಂತೆ ಆಗ ಬ್ರಹ್ಮನು ಭರತ ಮುನಿಯನ್ನು ಈ ಕೆಲಸಕ್ಕಾಗಿ ನೇಮಿಸಿದ. ಅವನು ನಾಟ್ಯಶಾಸ್ತ್ರವನ್ನು ರಚಿಸಿದ. ಹಾಗೆ ಮುಂದೆ ನಾಟಕ ಪ್ರಯೋಗಗಳು ದೇವಲೋಕದಲ್ಲಿ ಮೊದಲಾಗಿ ಭೂಮಿಲೋಕದಲ್ಲಿ ಮುಂದುವರಿದವು. ಇದು ಪುರಾಣಗಳ ಉಲ್ಲೇಖ

ವಾದರೆ ಇತಿಹಾಸ ದೃಷ್ಟಿಯಿಂದ ಸುಮಾರು ಕ್ರಿ.ಪೂ. 500ರ ವೇಳೆಗೆ ಗ್ರೀಸ್ ದೇಶದಲ್ಲಿ ಹುಟ್ಟಿಕೊಂಡ ರಂಗಭೂಮಿ ಮುಂದೆ ಶತಮಾನ ಅಂತರದಲ್ಲಿ ಇತರ ದೇಶಗಳಿಗೆ ಹರಡಿತು. ಭಾರತದಲ್ಲಿ ಪಾರ್ಸಿ ನಾಟಕ ತಂಡಗಳ ಮೂಲಕ ಕ್ರಿ.ಶ. 1870ರ ವೇಳೆಗೆ ನಾಟಕ ತಂಡಗಳು ಹುಟ್ಟಿಕೊಂಡವು. 1872ರಲ್ಲಿ ಬಂಗಾಳದಲ್ಲಿ ಮತ್ತು 1880ರಲ್ಲಿ ಮರಾಠಿಯಲ್ಲಿ ನಾಟಕ ತಂಡಗಳ ಉಗಮವಾಯಿತು. ಅವುಗಳ ಸಂಚಾರದ ಪ್ರಭಾವದಿಂದಾಗಿ 1890ರ ವೇಳೆಗೆ ಕರ್ನಾಟಕದಲ್ಲಿ ನಾಟಕ ಚಟುವಟಿಕೆ ಆರಂಭಗೊಂಡಿತು.

ತುಳುನಾಡಿನ ತುಳುವ ಸಂಸ್ಕೃತಿಯಲ್ಲಿ ದೈವಾರಾಧನೆ ಅಥವಾ ಭೂತಾರಾಧನೆ ಎನ್ನುವುದು ಪ್ರಾಚೀನ ಕಾಲದಲ್ಲಿ ಸಾಂಕೇತಿಕವಾಗಿತ್ತು. ತುಳುನಾಡಿನಲ್ಲಿ ಜನನ ಮರಣ, ಜೀವನಾವರ್ತಕ ಸಂದರ್ಭಗಳಲ್ಲಿ ಪೂಜಾನೃತ್ಯವೇ ಆರಂಭಿಕ ರಂಗಭೂಮಿಯಾಗಿತ್ತು. ಮುಂದೆ ದೀರ್ಘಾವಧಿಗಳಲ್ಲಿ ಹಂತಹಂತದ ವಿಸ್ತಾರ, ಸಮೃದ್ಧಿಗಳಾಗಿ ರಂಗಭೂಮಿ ಎನ್ನುವುದು ಇಂದಿನ ಹಂತಕ್ಕೆ ತಲಪಿದೆ.

ಶಿಲಾಯುಗದ ಕಾಲದಲ್ಲಿ ಮನುಷ್ಯರು ತೀರಿಕೊಂಡಾಗ ಅವರನ್ನು ಮಣ್ಣಿನೊಳಗೆ ಹುಗಿಯಲಾಗುತ್ತಿತ್ತು. ಹೆಣ ಸುಡುವ ಪದ್ಧತಿ ಆ ಮೇಲಿನದು. ಹಾಗಿದ್ದರೂ ಸತ್ತವರ ಎಲುಬಿನ ಭಸ್ಮವನ್ನು ಮಡಿಕೆಗಳಲ್ಲಿ ತುಂಬಿಸಿ ಹೂತಿಡಲಾಗುತ್ತಿತ್ತು (ಈ ಪದ್ಧತಿ ಜಗತ್ತಿನ ಇತರೆಡೆಯೂ ಇದೆ) ಅದರ ಸುತ್ತ 32 ಕಲ್ಲುಗಳನ್ನು ವೃತ್ತಾಕಾರವಾಗಿ ಇರಿಸುತ್ತಿದ್ದರು. ಆವರಣದ ಸುತ್ತ ಸತ್ತವರ ಗುಣಗಾನ ಮಾಡುತ್ತಾ ಒಡನಾಡಿಗಳು ನರ್ತಿಸುತ್ತಿದ್ದರು. ಇಂತಹ ದ್ರಾವಿಡ ನೃತ್ಯಗಳು ಯಾವಾಗಲೂ ವೃತ್ತಾಕಾರ-8 ಅಂಕಿಯ ಆಕಾರದ ವೃತ್ತದಲ್ಲಿರುತ್ತಿದ್ದವು. ದೈವಾರಾಧನೆಯ ನೇಮಕೋಲದಲ್ಲೂ 8ರ ಆಕಾರದಲ್ಲಿ ನರ್ತಿಸುವುದಿದೆ. ಯಕ್ಷಗಾನದ ರಂಗಸ್ಥಳದಲ್ಲೂ, ನಾಗಮಂಡಲ ನೃತ್ಯವೂ ಈ ಅಷ್ಟಾಕಾರ.

ಹಿಂದಿನ ಕಾಲದಲ್ಲಿ ಹೆಣ್ಣು ಗರ್ಭಿಣಿಯಾದಾಗ ಆಗಿಹೋದ ಹಿರಿಯರು (ಹೆಣ್ಣಾಗಲೀ ಗಂಡಾಗಲೀ) ಆ ಗರ್ಭಿಣಿಯ ಗರ್ಭದಲ್ಲಿ ಮತ್ತೆ ಹುಟ್ಟಿಬರುತ್ತಾರೆ/ಬರಬೇಕು ಎನ್ನುವ ಹಂಬಲದೊಂದಿಗೆ 'ಬಯಕೆ ಸಮ್ಮಾನ' ಸಂದರ್ಭದಲ್ಲೂ ಕೋಲಗಳಾಗುತ್ತಿದ್ದವಂತೆ. ಇದು ಫಲವಂತಿಕೆಯ ಪೂಜಾನೃತ್ಯ ಇದುವೇ ತುಳುವರ ಪ್ರಾಚೀನ ನಾಟಕಕಲೆ.

ರಂಗಭೂಮಿ ಎನ್ನುವುದು ಸಾಮಾನ್ಯ ಅರ್ಥದಲ್ಲಿ ನಾಟಕ ವೇದಿಕೆಯಲ್ಲಿ ಎಡಕ್ಕೊಬ್ಬ, ಬಲಕ್ಕೊಬ್ಬ ಇದ್ದುಕೊಂಡು ಸಂಭಾಷಣೆ ಹೇಳುವುದು ಅದಕ್ಕೆ ತಕ್ಕ ವೇಷಭೂಷಣ, ಚಲನೆ, ಹಾವಭಾವ ಅಭಿನಯ, ನೆರಳು-ಬೆಳಕು, ಇಂಥದರಲ್ಲಿ 'ಪ್ರದರ್ಶನ' ಮಾತ್ರ ಉದ್ದೇಶ. ವಾರ್ಷಿಕೋತ್ಸವಗಳ ನಾಟಕಗಳು, ಆರ್ಥಿಕ ದೃಷ್ಟಿಯ ನಾಟಕಗಳೆಂದರೆ ಸಾಮಾನ್ಯವಾಗಿ ಹೀಗೆ ಆದರೆ ಹವ್ಯಾಸಿಗಳ ಪ್ರಯೋಗ ರಂಗಭೂಮಿ ಎಂದರೆ ಅದರದ್ದೊಂದು ವಿಶಿಷ್ಟ ಲೆಕ್ಕಾಚಾರ; ಶಿಸ್ತು.

ಇಂತಹ ಪ್ರಯೋಗ ರಂಗಭೂಮಿಯಲ್ಲಿ ಒಂದು ಕತೆ, ಕತೆಗೆ ತಕ್ಕ ಪಾತ್ರ ಬೇಕಾದ ವರ್ಣಾಲಂಕಾರ, ಉಡುಗೆತೊಡುಗೆ, ಸಂಗೀತ, ಬೆಳಕಿನ ವಿನ್ಯಾಸ, ರಂಗವಿನ್ಯಾಸ ಇರುವಂತೆಯೇ ತುಳುವರ ಪ್ರಾಚೀನವಾದ ದೈವಾರಾಧನೆಯಲ್ಲಿಯೂ ಇಂಥದೊಂದು

ರಂಗಶಿಸ್ತು ಇದೆ. ದೈವಾರಾಧನೆಯ 16 ಕಟ್ಟು ಕಟ್ಟಳೆ ರಿವಾಜು, ವಾದ್ಯಗಾರರು, ಡೋಲಿನವರ ಸಂಗೀತ, ದೈವಪಾತ್ರಿ, ದೈವನರ್ತಕ, ಮದಿಪುಗಾರ, ಮುಕ್ಕಾಲ್ದಿ, ಜೀಟಿಗೆ ಇತ್ಯಾದಿ ಬೇರೆಬೇರೆ ಹೊಣೆಯುಳ್ಳವರು, ಊರಜನರು; ದೈವನರ್ತಕರ ಸಿದ್ಧತೆ, ವಸ್ತ್ರಾಲಂಕಾರ, ಮುಖವರ್ಣಿಕೆ ನೇಮದ ಪೂರ್ವದಲ್ಲಿ ಮತ್ತು ನೇಮದ ಕಳದಲ್ಲಿ ನಡೆಯುವ ವಿವಿಧ ವಿಧಿವತ್ತಾದ ಹಂತಗಳು ಪಾತ್ರಿಯ, ನರ್ತಕನ ಮೈಯಲ್ಲಿ ದೈವದ ಒಸಯೊ, ಆಗುಹೋಗಿನ ನ್ಯಾಯವಿಚಾರಣೆ, ಬಲಿಬಾರಣೆ, 'ಸತ್ಯ'ದ ಗಂಧಪ್ರಸಾದ ಮುಂತಾದ ಕಟ್ಟುನಿಟ್ಟಾದ ಮತ್ತು ಶಿಸ್ತುಬದ್ಧವಾದ ರಂಗಸಂಪ್ರದಾಯಗಳಿದ್ದು, ನೆಮ್ಮದಿ ಕೃತಕೃತ್ಯತೆಯ ಆತ್ಮಸಂತೃಪ್ತಿಯ ಸಾಮೂಹಿಕ ಭಾವದ ಫಲಿತಾಂಶವಿರುತ್ತದೆ.

ಹಾಗಾಗಿಯೇ ತುಳುವರ ದೈವಾರಾಧನೆಯನ್ನು 'ಜನಪದ ರಂಗಭೂಮಿ' ಎನ್ನಲಾಗುತ್ತದೆ. ಅದು ನಾಟಕವಲ್ಲ' ಧಾರ್ಮಿಕತೆಯ ಅಂಗವಾದ ಒಂದು ರಂಗಭೂಮಿ. ದೈವಾರಾಧನೆಯ ನೇಮ ಒಂದೇ ಅಲ್ಲ, ಇನ್ನಿತರ ಹಾಡು, ಕುಣಿತ, ಜೀವನಾವರ್ತನ ಕಲಾ ಪ್ರಕಾರಗಳು ಇವೆಲ್ಲವೂ ರಂಗಭೂಮಿಯ ಪ್ರಕಾರಗಳೇ. ಹಾಗಾಗಿ ದೈವಾರಾಧನೆ, ನಾಗಾರಾಧನೆ ಮತ್ತು ಯಕ್ಷಗಾನದ ಸಹಸ್ರಾರು ವರ್ಷಗಳ ಸಮೃದ್ಧ ಹಿನ್ನೆಲೆ ತುಳುನಾಡಿನಲ್ಲಿರುವುದರಿಂದ ನಾಟಕ ವೇದಿಕೆಯ ರಂಗಭೂಮಿ ಸ್ವರೂಪವು ಸಾಕಷ್ಟು ವಿಳಂಬವಾಗಿ ಒಂದು ಶತಮಾನದ ಹಿಂದಷ್ಟೇ ಆರಂಭವಾದಂತೆ ತೋರುತ್ತದೆ. ಇಷ್ಟಿದ್ದರೂ ಇತಿಹಾಸದ ಅಪರೂಪದ ಕಾಲಘಟ್ಟಗಳಲ್ಲಿ ನಾಟಕ, ಪ್ರಹಸನಗಳ ಪ್ರದರ್ಶನದ ಉದಾಹರಣೆಗಳೂ ವಿರಳವಾಗಿ ದೊರೆಯುತ್ತವೆ.

**2000 ವರ್ಷ ಹಿಂದಿನ ಗ್ರೀಕ್–ತುಳು ಪ್ರಹಸನ 'ಸರಿತಿ' (ಝುರಿಶನ್)**

ಕ್ರಿ.ಶ. 1897ರಲ್ಲಿ ಗ್ರೀಸ್ ದೇಶದ ಪುರಾತತ್ವ ಇಲಾಖೆಯವರು ಆಕ್ಸಿರಿಂಸ್ ಎನ್ನುವ ಕಣಿವೆ ಪ್ರದೇಶದಲ್ಲಿ ಸಂಶೋಧನಾರ್ಥ ಕೈಗೊಂಡ ಭೂ ಅಗೆತದ ವೇಳೆ ದೊಡ್ಡ ಪ್ರಮಾಣದಲ್ಲಿ ದೊರೆತ ಪೆಪಿರಿ (Papyri–ಪ್ಯಾಪಿರಸ್ ಮರದ ತೊಗಟೆಯಿಂದ ತಯಾರಿಸಿದ ಬರೆಯುವ ಹಾಳೆ)ಯಲ್ಲಿ ಕ್ರಿಸ್ತಪೂರ್ವದ 3ನೇ ಶತಮಾನದ ಗ್ರೀಕ್ ನಾಟಕ ಪುಸ್ತಕವೊಂದು ದೊರೆಯಿತು. ಲಂಡನಿನ Egypt Exploration Societyಯು ಅಂತಹ ಅನೇಕ ಶೋಧನೆಗಳನ್ನು ಪ್ರಕಟಿಸಿತು. ಅವುಗಳಲ್ಲಿ ಓಕ್ಸಾನ್‌ಚುನ್ ಪೆಪಿರಿಯ (A Page from the Oxyahynchus Papyiri with Tulu Verses in the Greek Script and English Translation) ಒಂದು ಪುಟದಲ್ಲಿರುವ **ಗ್ರೀಕ್ ಭಾಷೆಯಲ್ಲಿ ಬರೆದ ತುಳು ಸಾಲುಗಳು** ಮುಂದೆ ಚರ್ಚಿತವಾದವು. ಇದು 1903ರಲ್ಲಿ ಪ್ರಕಟವಾಯಿತು. ಅದು ಕ್ರಿ.ಶ. 2ನೆಯ ಶತಮಾನದಲ್ಲಿ ರಚಿತವಾದದ್ದೆಂದು ಅದೇ ಗ್ರಂಥದ ಪುಟ 4ರಲ್ಲಿ ಬರೆಯಲಾಗಿದೆ.[3]

1903ರಲ್ಲಿ ಮುಂಬಯಿಯ ಕ್ಸೇವಿಯರ್ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಡಾ. ಹುಲ್‌ಷ್ (Dr. Hulzseh) ಎಂಬ ಜರ್ಮನ್ ವಿದ್ವಾಂಸ ಅದರ ಶಬ್ದಗಳು ದಕ್ಷಿಣ

ಭಾರತೀಯ ಭಾಷೆ(?) (ಬಹುಶಃ ತುಳು) ಆಗಿದೆ ಎಂದು ಕಂಡುಕೊಂಡರು. 1927ರಲ್ಲಿ ರಾಷ್ಟ್ರಕವಿ ಗೋವಿಂದ ಪೈಗಳು ಆ ಭಾಷೆ ಕನ್ನಡ ಎಂದು ಅಭಿಪ್ರಾಯಪಟ್ಟರು. ಮದ್ರಾಸಿನ ಮಡಿವನಂ ಎಂಬ ತಮಿಳು ನಿಘಂಟುಕಾರ ಆ ಭಾಷೆ 'ತಮಿಳು' ಎಂದರು. ಪ್ರೊ. ಬಿ.ಎಂ. ಶ್ರೀಕಂಠಯ್ಯನವರು 1908ರಲ್ಲಿ ತಮ್ಮ 'ಕರ್ನಾಟಕದ ಪರಂಪರೆ' ಕೃತಿಯಲ್ಲಿ 'ಅದು ಭಾರತೀಯ ಭಾಷೆ ಆಗಿದ್ದರೆ ಅದು ತುಳು ಭಾಷೆ ಹೊರತು ಕನ್ನಡವಲ್ಲ' ಎಂದು ಪ್ರತಿಪಾದಿಸಿದರು. ಪ್ರೊ. ಬಿ.ಎಂ. ಶ್ರೀಯವರ ಅಭಿಪ್ರಾಯವನ್ನು ಗಮನಿಸಿ ಸ್ಕ್ವಾಡ್ರನ್ ಲೀಡರ್ ಪಿ. ಸತೀಶ್ ರೈಯವರು ಈಜಿಪ್ಟ್ ಎಕ್ಸ್‌ಪ್ಲೋರೇಶನ್ ಸೊಸೈಟಿಯೊಂದಿಗೆ ಪತ್ರವ್ಯವಹಾರ ಮಾಡಿ ಅಲ್ಲಿಂದ ಮೂಲ ಪ್ರತಿಯ ನಕಲನ್ನು ತರಿಸಿಕೊಂಡರು. ಅದರಲ್ಲಿದ್ದ 144 ಪದಗಳು ಆಡು ಭಾಷೆಯಾದ ತುಳು ಭಾಷೆಯದೆಂದು, ಆ ತುಳು ಭಾಷೆ ಈಗ ಪ್ರಚಲಿತದಲ್ಲಿರುವ ತುಳುಭಾಷೆಯ ವೈಶಿಷ್ಟ್ಯವನ್ನು ಹೊಂದಿದೆ ಎಂಬುದನ್ನು ಗುರುತಿಸಿದರು.ಇದನ್ನು ಕನ್ನಡ ಮತ್ತು ತುಳು ವಿದ್ವಾಂಸರು ದೃಢಪಡಿಸಿದರು.

ಆ ನಾಟಕದಲ್ಲಿ ತುಳು ಬರವಣಿಗೆಯು ಗ್ರೀಕ್ ಅಕ್ಷರಗಳಿಂದ ಮುಂದುವರಿಕೆಯಾಗಿದ್ದು, ಗ್ರೀಕ್ ಬರವಣಿಗೆಯಂತೆ ಶಬ್ದಗಳಾಗಿ ಪ್ರತ್ಯೇಕಿಸಲ್ಪಟ್ಟಿಲ್ಲ. ರೋಮನ್ ಲಿಪಿಯಲ್ಲಿ ಬರೆದ ಅದನ್ನು ತುಳು ಭಾಷೆ ಬಲ್ಲ ಯಾರಾದರೂ ಸುಲಭದಲ್ಲಿ ಗುರುತಿಸಿ ಅರ್ಥಮಾಡಿಕೊಳ್ಳಬಲ್ಲರು ಎಂಬುದು ತಿಳಿದುಬಂತು. (ಲೇಖನ: ಗ್ರೀಕ್ ಹಸ್ತಪ್ರತಿಯಲ್ಲಿ ತುಳು ಕವಿತೆ' ಪು.41–46.'ವಿಶಿಷ್ಟ ತುಳುನಾಡು' ಡಾ. ಬೆಳ್ಳಿಪ್ಪಾಡಿ ಸತೀಶ್ ರೈ, ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್–2015.

ಈ ಮೇಲಿನ ಉಲ್ಲೇಖದ ಪ್ರಕಾರ 'ಸರಿತಿ' (ಝರಿಶನ್) ಎನ್ನುವ ಈ ನಾಟಕದ ನಾಯಕಿಯ ಹೆಸರು 'ಸರಿತಿ'. ಅವಳು ಮಂಗಳೂರು ಸಮೀಪದ ಪಣಂಬೂರಿನ ದೇವಾಲಯದಲ್ಲಿ 'ಪೂಜಾರಿಣಿ'ಯಾಗಿದ್ದಳು. ಚಂದ್ರದೇವತೆಗೆ ತನ್ನನ್ನು ಸಮರ್ಪಿಸಿಕೊಂಡಿದ್ದಳು. ಅವಳ ತಂದೆ ಹಿಂದೊಮ್ಮೆ ಗ್ರೀಕ್ ದೇಶದಿಂದ ಮಂಗಳೂರು ಕಡಲ ಕಿನಾರೆಯ ಪಣಂಬೂರಿಗೆ ಪ್ರವಾಸಿಯಾಗಿ ಬಂದವನು ಪಣಂಬೂರಿನ ಹೆಣ್ಣನ್ನು ಮದುವೆಯಾಗಿ ಎರಡು ಮಕ್ಕಳಾದ ಮೇಲೆ ಗ್ರೀಸ್‌ನ ಅಥೆನ್ಸ್‌ಗೆ ಹಿಂತಿರುಗಿದ್ದ. ಸರಿತಿಗೆ ತನ್ನ ಸೋದರ 'ಗಾಮ'ನ ಜೊತೆಗೆ ಗ್ರೀಸ್‌ನ ಅಥೆನ್ಸ್‌ನಲ್ಲಿರುವ ತನ್ನ ತಂದೆಯನ್ನು ಸಂದರ್ಶಿಸುವ ಪ್ರಬಲೇಚ್ಛೆ. ಸರಿತಿಗೂ ಅವಳ ಸೋದರನಿಗೂ ತುಳು ಮತ್ತು ಗ್ರೀಕ್ ಭಾಷೆಗಳೆರಡೂ ಚೆನ್ನಾಗಿ ಬರುತ್ತಿತ್ತು. ಆದುದರಿಂದ ಅವರಿಬ್ಬರೂ ಗ್ರೀಕ್ ತಂದೆಗೆ ಮತ್ತು ಪಣಂಬೂರಿನ ತುಳು ತಾಯಿಗೆ ಜನಿಸಿದ ಮಕ್ಕಳೆಂದು ತಿಳಿಯಬಹುದು.

ತಮ್ಮನ್ನು ಬಂಧನದಲ್ಲಿರಿಸಿಕೊಂಡಿದ್ದ ಸ್ಥಳೀಯ ತುಳು ಅರಸನ ಜನರಿಂದ ತಪ್ಪಿಸಿಕೊಂಡು ಈ ಅಣ್ಣ ತಂಗಿ ಗ್ರೀಸ್‌ನಿಂದ ಬಂದ ಹಡಗನ್ನೇರಿ ಗ್ರೀಸ್‌ಗೆ ತೆರಳುತ್ತಾರೆ. ಹೀಗೆ ಪಾರಾಗಲು ಅವರು ತಮ್ಮನ್ನು ಸೆರೆಯಲ್ಲಿಟ್ಟವರಿಗೆ ದ್ರಾಕ್ಷಾರಸವನ್ನು ಕುಡಿಸಿ ಅಮಲು ಬರುವಂತೆ ಮಾಡಿ ಓಡಿಹೋಗುತ್ತಾರೆ. ಹೀಗೆ ಅಲ್ಲಿನ ತುಳುವರು ಡೋಲು ಬಡಿಯುತ್ತಾ, ಹಾಡುತ್ತಾ ಕುಣಿಯುತ್ತಾ ಇರುವುದನ್ನು, ದ್ರಾಕ್ಷಾರಸ (?) ಕುಡಿದು

ಹಾಡುವ ಉದ್ಗಾರಗಳನ್ನು ಈ ನಾಟಕದಲ್ಲಿ ತುಳುವಿನಲ್ಲಿ ಬರೆಯಲಾಗಿದೆ. ಅವರ ಮುಖ್ಯಸ್ಥನು (ಗುರಿಕಾರ)ತನ್ನ ಜನರಿಗೆ ಕುಡಿಯಲು ಕುಣಿಯಲು ಹಾಡಿನ ರೂಪದಲ್ಲಿ ತಿಳಿಸುತ್ತಾನೆ. ಆಕ್ಸ್‌ಫರ್ಡ್ ಸಂಪಾದಕ ಇದನ್ನು 'ಸರಳ ಸಂಗೀತ ಪ್ರಹಸನ' ಎಂದು ಕರೆದಿದ್ದಾನೆ.

Some Contributions of South India to Indian Culture- S. Krishnaswamy ಕೃತಿಯ ಅಧ್ಯಯನದ ಮೇಲಿಂದ, ಮುಂಬಯಿಯ ಸಂಶೋಧಕ ಬಾಬುಶಿವ ಪೂಜಾರಿಯವರು ತಮ್ಮ 'ಬಿಲ್ಲವರು ಒಂದು ಅಧ್ಯಯನ' (2003) ಕೃತಿಯಲ್ಲಿ 'ಸರಿತಿ'ಯ ಮೂಲದ ಬಗ್ಗೆ ಹೀಗೆ ಬರೆದಿರುವರು. 'ಗ್ರೀಕಿನ ಯುವತಿ ಹಡಗಿನಲ್ಲಿ ಪ್ರಯಾಣಿಸುತ್ತಿರುವಾಗ ಹಡಗು ಒಡೆದುಹೋಯಿತು. ಅವಳು ತುಳುನಾಡಿನ ಕರಾವಳಿಯನ್ನು ಸೇರಿ ಇಲ್ಲಿನ ರಾಜನ ಆಶ್ರಯ ಪಡೆದಳು. ಸ್ವಲ್ಪ ಕಾಲಾ ನಂತರ ಇನ್ನೊಂದು ಹಡಗಿನಲ್ಲಿ ಅವಳನ್ನು ಹುಡುಕಿಕೊಂಡು ಬಂದ ಗ್ರೀಕರು ತಮ್ಮ ಯುವತಿ ಇಲ್ಲಿ ರಾಜನ ಆಶ್ರಯದಲ್ಲಿ ಇರುವುದನ್ನು ಕಂಡರು. ಆ ಹೊತ್ತಿನಲ್ಲಿ ಅಲ್ಲಿ ಪಾನಗೋಷ್ಠಿ ನಡೆಯುತ್ತಿತ್ತು. ಆಗ ಗುಂಪಿನ ಜನರು ಆಡುವ ಮಾತುಗಳು 'ಏ ಕೂಸೆ, ಕರೆವನು ನಮ್ಮನ್ನು ಬಾ ಎಂದು ಕರೆವಳಲ್ಲವೇ.... ಬಯ್ಯುತ್ತಿ... ಹೊರಟೆ... ಕಳ್ ಮೊಗೆ (ಮುಗೈ?) ತಾ... (ಉಲ್ಲೇಖ : ಬಾಬು ಶಿವ ಪೂಜಾರಿ, 2003).

ಈ ಮೇಲಿನ ಮಾತುಗಳಾದ 'ಕಳ್ ಮೊಗೆ ತಾ' ಇವು ಕಳ್ಳಿನ ಮೊಗೆ (ಮುಗಯಿ) ಅಳತೆಯ ಪಾತ್ರೆಗೆ ಸಂಬಂಧಿಸಿದ್ದು ಆ ಗೋಷ್ಠಿಯಲ್ಲಿ 'ಅಳುಪ ನಾಯಕನಿದ್ದ' ಎಂದು




'ಸರಿತಿ' ಪ್ರಹಸನದಲ್ಲಿರುವ ತುಳು–ಗ್ರೀಕ್ ಅಕ್ಷರ




ಕೃಪೆ : ಟಿ.ಎಲ್. ಗಟ್ಟಿ ಅವರ ಪುಸ್ತಕ

ಗೋವಿಂದ ಪೈಗಳ ಅಭಿಪ್ರಾಯ. ತುಳುವಿನಲ್ಲಿ ಆಡಿದ್ದ ಆ ಮಾತುಗಳು 'ಏ ಪೊಣ್ಣೇ ಕಳಿತ್ತ ಮುಗಯಿ ಪತೊಂದು ಬಲಾ...' ಎಂಬಂತೆ ಅಂದಿನ ಉಚ್ಚಾರಗಳಲ್ಲಿ ಇದ್ದಿರಬೇಕು. ಈ ನಾಟಕವನ್ನು ಬರೆದವನು ತುಳು, ಗ್ರೀಕ್ ಎರಡನ್ನೂ ಬಲ್ಲ ತುಳುವನೇ ಆಗಿರಬೇಕು ಎಂದು ಪಿ.ಎಸ್. ರೈ ಮತ್ತು ಬಾಬು ಶಿವ ಪೂಜಾರಿಯವರ ಅಭಿಮತ. ಸರಿತಿ, ಆಕೆಯ ಅಣ್ಣ ಈರ್ವರೂ ಪಣಂಬೂರು ಕಡಲ ತೀರದಿಂದ ಹಡಗಿನ ಮೂಲಕ ಗ್ರೀಕ್ ದೇಶಕ್ಕೆ ತೆರಳುವಲ್ಲಿಗೆ ನಾಟಕದ ಕತೆ ಮುಕ್ತಾಯವಾಗುತ್ತದೆ.

ಇತ್ತೀಚೆಗೆ 2012ರಲ್ಲಿ ಬೆಂಗಳೂರಿನ ಟಿ.ಎಲ್. ಗಟ್ಟಿಯವರು ಈ ಕಥಾವಸ್ತುವನ್ನೆತ್ತಿಕೊಂಡು ಸ್ವಲ್ಪ ವಿಸ್ತಾರವಾದ 'ಸರಿತಿ' ತುಳು ನಾಟಕವನ್ನು ಬರೆದು ಪ್ರಕಟಿಸಿರುವರು. ಇದನ್ನು ಅನಾವರಣಗೊಳಿಸುವ ಅವಕಾಶವೂ ಈ ಲೇಖಕನದಾಗಿತ್ತು.

ಟಿ.ಎಲ್ ಗಟ್ಟಿಯವರು 'ಸರಿತಿ' ದೃಶ್ಯರೂಪಕದಲ್ಲಿ ಸರಿತಿ ಮತ್ತು ಅವಳ ತಮ್ಮ 'ಗಾಮ' ಪಣಂಬೂರಿನ ಮಾರಿಗುಡಿಯಲ್ಲಿ ಸೇವೆ ಮಾಡುತ್ತಿರುವವರು ಎಂದು ಬರುತ್ತದೆ. ಉಳಿದ ಕಥೆಯೆಲ್ಲವೂ ಈ ಹಿಂದಿನ ವಿವರದಂತೆಯೇ ಇದೆ. ವಾಯು ಸೇನಾಧಿಕಾರಿಯಾಗಿದ್ದ ಸ್ಕ್ವಾಡ್ರನ್ ಲೀಡರ್ ಪಿ. ಎಸ್. ರೈ (1911)ಯವರು ಈ ಗ್ರೀಕ್-ತುಳು ನಾಟಕದ ಮೂಲದ ಚರ್ಚೆಯಿಂದ ಕುತೂಹಲಗೊಂಡು ಅಧ್ಯಯನ ಮಾಡಿ ಆ 36 ಸಾಲುಗಳು ತುಳುವಿನವು ಎಂದು 1984ರ ದೆಹಲಿಯ ಸೆಮಿನಾರ್‌ನಲ್ಲಿ ವಿಚಾರ ಮಂಡಿಸಿ ಸಾಧಿಸಿ ತೋರಿಸಿದರು. ಆ ಶೋಧನೆಯ ಆಧಾರದಿಂದ ರಚಿತವಾದ ಕೃತಿಯದು ಎಂದು ಟಿ.ಎಲ್. ಗಟ್ಟಿ ಬರೆಯುತ್ತಾರೆ.

ಗೋವಿಂದ ಪೈಗಳ ವಿಶ್ಲೇಷಣೆಗಳಲ್ಲಿ 'ಸರಿತಿ' ಎಂಬ ಪಣಂಬೂರಿನ ಹೆಣ್ಣುಮಗಳು ದೇವಸ್ಥಾನದಲ್ಲಿ ಚಂದ್ರದೇವನ ಉಪಾಸಕಿಯಾಗಿದ್ದಳು ಎನ್ನುವಂತೆ ಉಲ್ಲೇಖವಿದ್ದರೆ ಪಿ.ಎಸ್. ರೈಯವರ ಶೋಧನೆಯನ್ನು ತನ್ನ ದೃಶ್ಯರೂಪಕಕ್ಕೆ ಬಳಸಿಕೊಂಡ ಟಿ.ಎಲ್. ಗಟ್ಟಿಯವರು 'ಪಣಂಬೂರಿನ ಮಾರಿಗುಡಿಯಲ್ಲಿ ಸರಿತಿ ಪೂಜೆಯವಳು' ಎಂದು ಬರೆಯುತ್ತಾರೆ.

ಈ ನಾಟಕದಲ್ಲಿರುವ ಇನ್ನಷ್ಟು ಮಾತುಗಳು ಹೀಗಿವೆ :

"ತೂಕುತ್ ಪರ್ ಓ ಮೆಲ್ಲ ಕುರ್ಕ್, ಬೆರಿಕ್ಕೊಂಜಿ ದಮ್ಮ್ ಪೆಟ್ಟ್‌ಕ್ ಈಯೋ! ಪಗತ್ ಕೊರ್ತೆಂಬೆ ಬೆರಿ ಅಯ್ಯೋ! ತಪ್ಪುಂಬೆ, ಒಂಜಿ ಪೆಟ್ಟ್‌ಕ್, ಈಯೋ ದಮುಕೊಂಜಿ ಪೆಜಿಂಬೇ! ಲೇಲೇ ಇಂಬ್ಯಾ! ಬಿರಾದ್ ಕೂಟ್..."

(Thooketh par wo mellow kuruk, Berikkonji Tham Pettek yeeoh! Pakath korthambe beri! Ayyoh! Thappumbey wonji pettek yeeoh, Thamukonji pejimbey! Lellay! Imbya! Biraaath kuttu)

ಈ ಮಾತುಗಳು ಕಳ್ಳು, ಸಾರಾಯಿ ಕುಡಿಯುತ್ತಿರುವವರು, ಕುಡಿತದ ಸಂದರ್ಭ ವಿನೋದವಾಡುವ ನುಡಿಗಳು. ತುಳುಭಾಷೆಯ ನುಡಿ ಇಂದಿನಂತೆ ಅಂದೂ ಇತ್ತೆನ್ನುವುದು ಸ್ಪಷ್ಟ.

2000 ವರ್ಷಗಳ ಹಿಂದಿನಿಂದಲೇ ಮಂಗಳೂರಿಗೂ ಗ್ರೀಸ್ ದೇಶಕ್ಕೂ ಸಂಪರ್ಕ ಇದ್ದುದು ಇತಿಹಾಸದಿಂದ ತಿಳಿಯುತ್ತದೆ. ಈ ನಾಟಕದಲ್ಲಿ 'ಕಳಿ–ಮೊಗೆ' (ಮುಗಯಿ) ಎನ್ನುವ ಪದಗಳು ಬರುತ್ತವೆ ಹಾಗಾಗಿ ಪಣಂಬೂರಿನ ಪಾನಗೋಷ್ಠಿಯಲ್ಲಿ ವಿತರಣೆಯಾಗಿದ್ದುದು ಆ ಕಾಲಮಾನ, ಪಣಂಬೂರು ಪ್ರದೇಶದಲ್ಲಿ ಆಗಿನ ಜನಸಮುದಾಯ (ಉದಾ : ಕೊರಗರು, ಮೊಗವೀರರು, ಬಿಲ್ಲವರು) ಇವನ್ನೆಲ್ಲಾ ಗಮನಿಸಿದರೆ ಸರಿತಿ ಕಳ್ಳು ಇಳಿಸುವ, ವಿತರಿಸುವ ಬಿಲ್ಲವ ಸಮುದಾಯದ ಹೆಣ್ಣಾಗಿರಬಹುದು ಎಂದು ಸಂಶೋಧಕ ಬಿ.ಎಸ್. ಪೂಜಾರಿಯವರ ಅಭಿಮತ. ಗ್ರೀಕ್‌ನಿಂದ ಬಂದ ವೈನ್ ಆಗಿರದೆ ಸ್ಥಳೀಯವಾದ ತೆಂಗಿನಮರದಿಂದ ಇಳಿಸಿದ ಕಳ್ಳು (ಹೆಂಡ) ಆಗಿರುವ ಸಾಧ್ಯತೆಯೇ ಹೆಚ್ಚು.

ನಮಗಿಲ್ಲಿ ಮುಖ್ಯವಾಗುವುದು ಏನೆಂದರೆ 2ನೇ ಶತಮಾನದಲ್ಲಿ ಗ್ರೀಕ್‌ನಲ್ಲಿ ಬಂದ ನಾಟಕ (ಪ್ರಹಸನ) 'ಸರಿತಿ' ತುಳುವಿನದಾಗಿತ್ತು ಎನ್ನುವುದು.

ಇಷ್ಟಿದ್ದರೂ ಗ್ರೀಕ್ ಪ್ರಹಸನದಲ್ಲಿರುವ ತುಳು/ಕನ್ನಡ ಸಾಲುಗಳ ಬಗೆಗೆ ಅಕಡೆಮಿಕ್ ವಲಯದೊಳಗಿನ ಇತಿಹಾಸಕಾರರು ಪುನರ್ವಿಮರ್ಶೆಯನ್ನು ಆಗಾಗ ಮುಂದುವರಿಸುತ್ತಲೇ ಇದ್ದಾರೆ (ಉಲ್ಲೇಖ : ಗ್ರೀಕ್ ಪ್ರಹಸನದಲ್ಲಿ ಕನ್ನಡ–ತುಳು ಒಂದು ಪುನರ್ವಿಮರ್ಶೆ – ಇತಿಹಾಸ ದರ್ಶನ ಸಂಚಿಕೆ, ಸಂಪುಟ 6, 1991, ಪು. 212–217).

2000 ವರ್ಷಗಳ ಹಿಂದಿನ ಈ ಗ್ರೀಕ್ – ತುಳು 'ಸರಿತಿ'ಯ ನಂತರ ತುಳುನಾಟಕಗಳ ಪ್ರಸ್ತಾಪವಿಲ್ಲದೆ ಸುದೀರ್ಘ ನಿರ್ವಾತ ಗೋಚರಿಸುತ್ತದೆ.

* * *

ತುಳು ಭಾಷೆಯಲ್ಲಿ ಅಪಾರವಾದ ಶಬ್ದ ಸಂಪತ್ತು, ಸುಂದರ ನುಡಿಕಟ್ಟುಗಳಿವೆ. ಹೀಗಿದ್ದರೂ ತುಳು ಭಾಷೆಯಲ್ಲಿ ಶುದ್ಧ ನಾಟಕ ಪ್ರಕಾರವೆಂಬುದರ ಉದಯ ಸ್ವಲ್ಪ ವಿಳಂಬವಾಗಿಯೇ ಆಯಿತೆನ್ನಬಹುದು. ಇದಕ್ಕೆ ಬಹುಮುಖ್ಯ ಕಾರಣವೆಂದರೆ ಒಂದು– ತುಳುವರಿಗೆ ತಮ್ಮದೇ ಆದ ಜನಪದ ರಂಗಭೂಮಿ ಇತ್ತು. ಇನ್ನೊಂದು–ಇತಿಹಾಸದ ವಿವಿಧ ಕಾಲಘಟ್ಟಗಳಲ್ಲಿ ತುಳುನಾಡು ವಿವಿಧ ಅಧೀನ ಸಂಸ್ಕೃತಿಗೆ ಒಳಗಾದುದು. ಭಾಷಾವಾರು ಪ್ರಾಂತ ರಚನೆಯ ಬಳಿಕ, ತುಳುನಾಡು ಕನ್ನಡ ನಾಡಿನ ಅಂಗವಾಯಿತು; ದಕ್ಷಿಣ ಕನ್ನಡ ಜಿಲ್ಲೆಯೆಂದಾಯಿತು. ತುಳುನಾಡಿನಲ್ಲಿ ರಾಜಭಾಷೆ ಆಗಿದ್ದುದು ಕನ್ನಡ. ಓದು ಬರಹ ಬಲ್ಲವರಾಗಿ ಸಾಹಿತ್ಯ ರಚನೆ, ನಾಟಕ ರಚನೆಗೆ ತೊಡಗಿದವರೂ ಕನ್ನಡ ಮತ್ತಿತರ ಭಾಷೆಗಳಲ್ಲೇ ಬರೆದರು. ತುಳುವಿಗೆ ಲಿಪಿ ಇದ್ದರೂ ಇಲ್ಲವೆನ್ನುವ ಕಾರಣವೊಡ್ಡಿ ಈ ಭಾಷೆ ಅನ್ಯರಿಂದಲೂ, ಸ್ವಭಾಷಿಕರಿಂದಲೂ ಅಲಕ್ಷ್ಯ ಅವಜ್ಞೆಗೀಡಾಗಿಯೇ ಸಾಗಿಬಂತು. ತುಳುವಿನ ಅನರ್ಘ್ಯ ಸಾಂಸ್ಕೃತಿಕ ನಿಕ್ಷೇಪ ಗುಪ್ತನಿಧಿಯಾಗಿಯೇ ಬಹುಕಾಲ ಉಳಿಯಿತು.

ತುಳುವಿನಲ್ಲಿ ಶಾಸ್ತ್ರಕಾವ್ಯ ರಚನೆ, ಮಿಶನರಿಗಳ ಸಾಹಿತ್ಯಸೇವೆಯ ಕಾಲಮಾನವೆಲ್ಲ

ದಾಟಿದ ಮೇಲೆ, ಪಣಿಯಾಡಿಯವರ ತುಳು ಚಳವಳಿ–ತುಳುವಿನ ಪುನರುಜ್ಜೀವನ ಕಾಲದಲ್ಲಷ್ಟೇ ನಾಟಕ ಪ್ರಕಾರವೆಂಬುದು ಮೊಳೆತಂತೆ ತೋರುತ್ತದೆ. ರಾಜ್ಯಗಳ ಪುನರ್ವಿಂಗಡಣೆಯ (1956)ಕಾಲದವರೆಗೂ ತುಳುನಾಡು ಆಗಿನ ಮದರಾಸು ಪ್ರಾಂತ್ಯಕ್ಕೆ ಒಳಪಟ್ಟಿತ್ತು. 1870–80ರ ವೇಳೆಗೆ ತುಳುನಾಡಿನಲ್ಲಿ ಪಾರ್ಸಿ, ಉರ್ದು, ಮರಾಠಿ, ತಮಿಳು, ಹಾಗೂ ಕನ್ನಡ ಕಂಪೆನಿ ನಾಟಕಗಳು ಪರಿಚಯವಾಗತೊಡಗಿದವು. ಹಾಗೆ ನೋಡಿದರೆ ನಾಟಕ ಚಟುವಟಿಕೆ ಅವಿಭಜಿತ ದ.ಕ. ಜಿಲ್ಲೆಯಲ್ಲಿ ಕಾಣಿಸಿಕೊಂಡದ್ದೇ ಕ್ರಿ.ಶ. 1892ರಲ್ಲಿ. ಮಂಗಳೂರಿನ ಶ್ರೀ ನಾರಾಯಣ ಭಟ್ಟರೆಂಬವರು ತನ್ನ ಮಿತ್ರರೊಡಗೂಡಿ 'ದತ್ತಜನ್ಮ' ಮತ್ತು 'ಸಂತ ತುಕಾರಾಮ'ಎಂಬ ಮರಾಠಿ ನಾಟಕಗಳನ್ನು ಮಂಗಳೂರಿನ ಶ್ರೀದತ್ತಾತ್ರೇಯ ದೇವಸ್ಥಾನದ ಮುಂಭಾಗದಲ್ಲಿ ಆಡಿ ತೋರಿಸಲು ತೊಡಗಿದರಂತೆ. 1902ರಲ್ಲಿ ಪ್ರಥಮ ನಾಟಕ ಮಂಡಳಿಯನ್ನು ಕಟ್ಟಿದವರು ಅಪ್ಪು ಇಂದ್ರರು ಎಂಬವರು. ಮಂಗಳೂರಿನಲ್ಲಿ ಶಾಬೂ ಸಾಹೇಬರ ನಾಟಕ ತಂಡವೂ ಆರಂಭವಾಯಿತು.

ಕರಾವಳಿಯ ಮಂಗಳೂರು ಭಾಗದಲ್ಲಿ ಶಿಕ್ಷಣ ಸಂಸ್ಥೆಗಳು ಸರಕಾರಿ ಟ್ರೈನಿಂಗ್ ಶಾಲೆಗಳ ಸ್ಥಾಪನೆಯು ರಂಗಭೂಮಿಗೆ ಹೊಸ ದಿಕ್ಕನ್ನು ತೋರಿಸುವುದರಲ್ಲಿ ತನ್ನದೇ ಪ್ರಭಾವ ಬೀರಿತು. 1838ರ ಬಿ.ಇ.ಎಂ. ಶಾಲೆ, 1866ರ ಪ್ರಾಂತೀಯ ಶಾಲೆ (ಮುಂದಿನ ವಿಸ್ತಾರ ಸ್ವರೂಪ ಇಂದಿನ ವಿ.ವಿ. ಕಾಲೇಜು, ಹಂಪನಕಟ್ಟೆ), ಇವುಗಳ ನಂತರ 1870ರಲ್ಲಿ ಗಣಪತಿ ಪ್ರಾಥಮಿಕ ಶಾಲೆ ಸ್ಥಾಪನೆಗೊಂಡಿತು. 1880ರಲ್ಲಿ ಸಂತ ಅಲೋಶಿಯಸ್ ಕಾಲೇಜು ಆರಂಭವಾಯಿತು. 1891ರಲ್ಲಿ ಕೆನರಾ ಹೈಸ್ಕೂಲ್ ಬಳಿಕ ಸರಕಾರಿ ಕಾಲೇಜು ಆರಂಭಗೊಂಡಿತು.

1912ರವರೆಗೆ ಅಲೋಶಿಯಸ್ ಕಾಲೇಜಿನಲ್ಲಿ ಇಂಗ್ಲಿಷ್ ನಾಟಕದ ಭಾಗಗಳನ್ನು ಆಡಲಾಗುತ್ತಿತ್ತು. ಮುಂದೆ ಕನ್ನಡ ಅಧ್ಯಾಪಕರಿಂದಾಗಿ ಕನ್ನಡ ನಾಟಕಗಳನ್ನು ಆಡಿಸುವುದು ಆರಂಭವಾಯಿತು. ಬ್ರಿಟಿಷ್ ಮದ್ರಾಸ್ ಪ್ರಾಂತ್ಯವಾಗಿದ್ದ ಅಂದಿನ ಸೌತ್ ಕೆನರಾ ಜಿಲ್ಲೆಯ ಸ್ಕೂಲ್ ಡೇಗಳಲ್ಲಿ ಕನ್ನಡ ನಾಟಕಗಳು ಆರಂಭವಾದದ್ದು ಆಗ ಕೆನರಾ ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿದ್ದ (ಮುಂದೆ ಪ್ರಸಿದ್ಧ ಸಾಹಿತಿಯಾದ) ಎಂ.ಎನ್. ಕಾಮತ್ (1883–1941)ರಿಂದಾಗಿ. ಅವರು 'ಮೌರ್ಯ ಸಿಂಹಾಸನ' (1919), ಮರ್ಜಿ (1936) ಇತ್ಯಾದಿ ತನ್ನ ನಾಟಕಗಳನ್ನು ತಾನೇ ನಿರ್ದೇಶಿಸುತ್ತಿದ್ದರು. ಅವುಗಳ ಹಾಡುಗಳೂ ಜನಪ್ರಿಯವಾಗಿದ್ದವು (ಮುರಳೀಧರ ಉಪಾಧ್ಯ– ಎಂ.ಎನ್. ಕಾಮತ್ ಲೇಖನ).

ಮಂಗಳೂರು ಸರಕಾರಿ ತರಬೇತಿ ಶಾಲೆಯಲ್ಲಿ 1914ರ ವೇಳೆಯಿಂದ ವಿದ್ಯಾರ್ಥಿಗಳು, ವಿದ್ಯಾರ್ಥಿನಿಯರು ಪ್ರತ್ಯೇಕವಾಗಿ ನಾಟಕಗಳನ್ನು ಆಡತೊಡಗಿದರು. ಇಲ್ಲಿ ಶಿಕ್ಷಕ ವಿದ್ಯಾರ್ಥಿಗಳ ಅಪೇಕ್ಷೆ; ಆಗ ಶಾಲೆಗಳ ಇನ್ಸ್‌ಪೆಕ್ಟರ್ ಆಗಿದ್ದ ಪಂಜೆ ಮಂಗೇಶರಾಯ (1874–1937)ರ ಸಂತೋಷದ ಒಪ್ಪಿಗೆಯಿಂದಾಗಿ ತುಳು ನಾಟಕಗಳ ಪ್ರಯೋಗವು ನಡೆಯಿತು.

ಅದೇ ವೇಳೆಗೆ ಬೋಳೂರಿನಲ್ಲಿ 1936ರಲ್ಲಿ ತಲಪಾಡಿ ವೆಂಕಟರಾವ್ ಎಂಬವರ

ನೇತೃತ್ವದಲ್ಲಿ ರಂಗಾಸಕ್ತರು ಕೂಡಿ 'ಕರ್ನಾಟಕ ನಾಟಕ ಸಭಾ ಬೋಳೂರು' ಸ್ಥಾಪನೆಗೊಂಡಿತು. ಇವರು ನಾಟಕ ಪ್ರದರ್ಶನ ನಡೆಸುವುದರೊಂದಿಗೆ ಪರದೆ, ವೇಷಭೂಷಣ ಮುಂತಾದ ವ್ಯವಸ್ಥೆಗಳನ್ನು ಪ್ರಾರಂಭಿಸಿದರು (ಅಶೋಕನಗರ ಶಾಲೆ) ಹೀಗೆಯೇ ಮುಂದೆ ಕನ್ನಡ ನಾಟಕ ರಂಗ ನಿಧಾನವಾಗಿ ಬೆಳೆಯಿತು. ಶಿವರಾಮ ಕಾರಂತರ ಪ್ರಯೋಗಗಳು ನಡೆದವು. ಡಾ. ಶಿವರಾಮ ಕಾರಂತರು ಮೊದಲು ಮಂಗಳೂರಿನಲ್ಲಿ ವೃತ್ತಿತಂಡಗಳ ಮೂಲಕ ಕೆಲವು ಕನ್ನಡ ನಾಟಕಗಳನ್ನು ಆಡಿಸಿದರು. ಬಳಿಕ ಪುತ್ತೂರು ಬಾಲವನದಲ್ಲಿದ್ದುಕೊಂಡು ಮಕ್ಕಳ ತಂಡ ಕಟ್ಟಿ ತರಬೇತಿ ನೀಡಿದರು. ಕಿಸಾ ಗೌತಮಿ, ಸೋಮಿಯ ಸೌಭಾಗ್ಯ, ಸಾವಿತ್ರಿ –ಸತ್ಯವಾನ್ ಮುಂತಾದ ಗೀತ ನಾಟಕಗಳು ಅವರ ನಿರ್ದೇಶನದಲ್ಲಿ ಅರುವತ್ತರ ದಶಕದಲ್ಲಿ ಪ್ರಯೋಗವಾದವು. 1965ರಲ್ಲಿ ಉಡುಪಿಯಲ್ಲಿ 'ರಂಗಭೂಮಿ' ನಾಟಕ ಸಂಸ್ಥೆ ಹುಟ್ಟಿಕೊಂಡಿತು. ಕಂಪನಿ ನಾಟಕ ತಂಡಗಳೂ ಹವ್ಯಾಸಿಗಳೂ ಹೊರಗಡೆಯಿಂದ ಇಲ್ಲಿಗೆ ಬಂದು ಪ್ರದರ್ಶನ ನೀಡಿ ಹೋಗಲಾರಂಭಿಸಿದರು. ಹೀಗೆ ಈ ನೆಲದಲ್ಲಿ ನಾಟಕಕ್ಕೆ 'ರಂಗ' ಸಿದ್ಧವಾಯಿತು.

**ಟಿಪ್ಪಣಿ**

1. 'ಹಳೇ ಶಿಲಾಯುಗದ ವಾಸ್ತವಿಕ ರಂಗಕ್ರಿಯೆಗಳು ಹೊಸ ಶಿಲಾಯುಗದ ಸಾಂಕೇತಿಕ ಆಚರಣೆಗಳಾದವು. ಕ್ರಿಯಾವಿಧಿಗಳಾದವು. ಇಂತಹುದೇ ಸಾಂಕೇತಿಕತೆ ನಮ್ಮ ದ.ಕ. ಜಿಲ್ಲೆಯ 'ಭೂತ'ದ ಆಚರಣೆಯಲ್ಲೂ ನಾಗಾರಾಧನೆಯಲ್ಲೂ ಗೋಚರಿಸುತ್ತದೆ'. ಕೆ.ವಿ. ಅಕ್ಷರರಂಗಪ್ರಪಂಚ, ಪು.26–27–1994.
2. 'ಅನುಕರಣ' ಪ್ರವೃತ್ತಿ, ರಂಜನೆಯ ಬಯಕೆ ಅನಾದಿಕಾಲದಿಂದಲೂ ಮನುಷ್ಯನ ಸ್ವಭಾವವಾಗಿದೆ' ಆದ್ಯ ರಂಗಾಚಾರ್ಯ ಕನ್ನಡ ರಂಗಭೂಮಿಯ ಪುರೋಭಿವೃದ್ಧಿ –1968 ಪು. 8.
3. 'ಬಿಲ್ಲವರು : ಒಂದು ಅಧ್ಯಯನ', ಬಾಬುಶಿವ ಪೂಜಾರಿ, 2003, ಪುಟ 9, 10.

# ಸ್ವಾತಂತ್ರ್ಯಪೂರ್ವ ನಾಟಕಗಳು

### ತುಳು ಆರಂಭದ ಪ್ರಹಸನಗಳು

ಇಪ್ಪತ್ತನೆಯ ಶತಮಾನದ ಪ್ರಾರಂಭ ಕಾಲಕ್ಕೆ ಮಂಗಳೂರಿನ ಶಿಕ್ಷಕ ತರಬೇತಿ ಶಾಲೆಯಲ್ಲಿ ವಾರ್ಷಿಕೋತ್ಸವಕ್ಕೆಂದು ಕನ್ನಡ ನಾಟಕಗಳನ್ನು ಆಡಿಸುತ್ತಿದ್ದರು. ಸುಮಾರು 1915ರ ಸುಮಾರಿಗೆ ತುಳುವ ವಿದ್ಯಾರ್ಥಿಗಳು 'ಕನ್ನಡದ ಒಟ್ಟಿಗೆ ತಮಗೊಂದು ತುಳುವಿನ 'ಸಂಗತಿ'ಗಳನ್ನು ಅಭಿನಯಿಸಲು' ಅವಕಾಶ ಕೇಳುತ್ತಾರೆ. ಪಂಜೆ ಮಂಗೇಶರಾಯರು ಆಗ ಶಾಲಾ ಇನ್ಸ್‌ಪೆಕ್ಟರ್‌ರಾಗಿ ಅಲ್ಲಿದ್ದರು. ಪಂಜೆಯವರು ಒಪ್ಪಿದರು. ಹಾಗಾಗಿ ತುಳುವಿನ ಸುಮಾರು 15 ನಿಮಿಷ ಕಾಲಾವಧಿಯ ಪ್ರಹಸನ ಗಳನ್ನು ಅಭಿನಯಿಸಲು ಅವಕಾಶ ಸಿಕ್ಕಿತು.* ಅದು ಪರಿಪೂರ್ಣ ನಾಟಕವಲ್ಲ, ಪುಟ್ಟ ಪ್ರಹಸನ. ಹೀಗಿದ್ದರೂ 'ತುಳು ಪ್ರಹಸನ'ಗಳಿಗೆ ಅವಕಾಶವಿತ್ತ ಪಂಜೆಯವರೇ ಒಂದು ರೀತಿ ಪ್ರಾತಃಸ್ಮರಣೀಯರಾಗುತ್ತಾರೆ. (* ಮಾಹಿತಿ : ದಿ. ರಾಮ ಕಿರೋಡಿಯನ್, ದಿ. ಯು.ಆರ್. ಚಂದರ್).

### ಪಣಿಯಾಡಿ ಚಳವಳಿ ಕಾಲ

ಸ್ವಾತಂತ್ರ್ಯ ಪೂರ್ವದ ತುಡಿತ ಮಿಡಿತ, ಆದರ್ಶ, ಧ್ಯೇಯೋದ್ದೇಶ ಗಳು ಪ್ರತ್ಯೇಕವೂ ಪೂರ್ವ ನಿರ್ಧರಿತವೂ ಆಗಿದ್ದವು. ಮಹಾತ್ಮಾಗಾಂಧಿಯ ಸ್ವಾತಂತ್ರ್ಯ ಆಂದೋಲನವು ತಳಮಟ್ಟದಲ್ಲಿ ತೊಡಗಿಕೊಳ್ಳಬೇಕಾದ ಪರಿಯನ್ನು ಗ್ರಹಿಸಿಕೊಂಡ ಉಡುಪಿಯ ಪಣಿಯಾಡಿ ಶ್ರೀನಿವಾಸ ಉಪಾಧ್ಯಾಯರು ಪುಣೆಯ ನೌಕರಿ ತೊರೆದು ತಾಯ್ನಾಡಾದ ಉಡುಪಿಗೆ ಬಂದರು. ತುಳುವಿನ ಪುನರುಜ್ಜೀವನಕ್ಕಾಗಿ ಟೊಂಕಕಟ್ಟಿ ದುಡಿದರು. ತುಳುವರು ತಮ್ಮ ಭಾಷೆ, ಸಂಸ್ಕೃತಿಯ ಕುರಿತು ಅಭಿಮಾನ ಬೆಳೆಯಿಸಿ ಕೊಳ್ಳುವ ನಿಟ್ಟಿನಲ್ಲಿ ಮಾಡುವ ಕೆಲಸಗಳೂ ನಿಜದ ಸ್ವಾತಂತ್ರ್ಯ ಹೋರಾಟ ಸ್ವದೇಶಿಯತೆ ಎಂಬುದಾಗಿ ಯೋಚಿಸಿದ್ದ ಪಣಿಯಾಡಿಯವರು ಉಡುಪಿ ಯಲ್ಲಿ 1928ರಲ್ಲಿ 'ತುಳುವ ಸಾಹಿತ್ಯಮಾಲೆ' ಪ್ರಕಟಣೆ ಆರಂಭಿಸಿದರು. ಈ ಮಾಲೆಯಲ್ಲಿ 1933ರಲ್ಲಿ ಪ್ರಕಟವಾದ, ದಿ| ಮಾಧವ ತಿಂಗಳಾಯರ ನಾಟಕವೇ 'ಜನಮರ್ಲ್'.

ಮಂಗಳೂರಿನ ಸ್ವಾತಂತ್ರ್ಯ ಹೋರಾಟಗಾರರ ಮನೆತನದ ದಿ. ಮೋನಪ್ಪ ತಿಂಗಳಾಯರು ಹ್ಯೊಗೆಬಜಾರಿನಲ್ಲಿ 1910ನೇ ಇಸವಿಯಲ್ಲಿ 'ಶ್ರೀ ತುಳು ಕರ್ನಾಟಕ ಮೊಗವೀರ ಜ್ಞಾನೋದಯ ಸಮಾಜ' ಎಂಬ ಸಂಸ್ಥೆಯನ್ನು ಕಟ್ಟಡದೊಂದಿಗೆ ಸ್ಥಾಪಿಸಿದ್ದರು.

**ಎಚ್. ಕೃಷ್ಣಪ್ಪ ತಿಂಗಳಾಯರು (1899–1980)**



ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದು ಮಾತ್ರವಲ್ಲದೆ ನಾಟಕ ಬರೆದು ನಾಟಕ ಪ್ರದರ್ಶನ ಮಾಡುತ್ತಿದ್ದರು. ಸಮಾಜ ಸುಧಾರಣೆಯ ಅಸ್ತ್ರವಾಗಿ ನಾಟಕವನ್ನು ಉಪಯೋಗಿಸುವ ಉದ್ದೇಶದಿಂದ ಅವರು 1919ರಲ್ಲಿ 'ಶ್ರೀ ಸತ್ಕಾರ್ಯೋತ್ತೇಜಕ ನಾಟಕ ಸಭಾ' ಎಂಬ ಸಂಸ್ಥೆಯನ್ನು ಕಟ್ಟಿ ತುಳು, ಕನ್ನಡ ನಾಟಕಗಳನ್ನು ರಚಿಸಿ ಜಿಲ್ಲೆಯ ಹಲವೆಡೆ ಪ್ರದರ್ಶಿಸಿದ್ದರು. (ಪ್ರೇಮಚಂದ್ರ ಕೆ. ತಿಂಗಳಾಯರು ಬರೆದ ಕೃತಿ 'ಬಹುಮುಖ ಪ್ರತಿಭೆಯ ನಾಟಕಕಾರ ದಿ. ಮಾಧವ ತಿಂಗಳಾಯ' – 2018) ದಿ. ಕೃಷ್ಣಪ್ಪ ತಿಂಗಳಾಯರು ದಿ. ಮಾಧವ ತಿಂಗಳಾಯರ ಸೋದರಮಾವ ಅವರು ಪ್ರಾಚೀನ ತುಳುನಾಡಿನ ಬಗ್ಗೆ ಅಧ್ಯಯನ ಮಾಡಿ 'ತುಳುನಾಡ ಗತವೈಭವ' ಎಂಬ ಪೌರಾಣಿಕ ನಾಟಕವನ್ನೂ 'ತುಳುವರೆ ಅಭ್ಯುದಯ' ಎನ್ನುವ ತುಳು ನಾಟಕವನ್ನೂ ಬರೆದಿದ್ದರು. 1926ರ ಮೇ ತಿಂಗಳಲ್ಲಿ ಜ್ಞಾನೋದಯ ಶಾಲಾ ಮಕ್ಕಳು ಇದನ್ನು ಪ್ರದರ್ಶಿಸಿದ್ದರು.

1923ರಲ್ಲಿ ಕೃಷ್ಣಪ್ಪ ತಿಂಗಳಾಯರು ಬರೆದು ನಿರ್ದೇಶಿಸಿದ ಮತ್ತೊಂದು ತುಳುನಾಟಕ 'ಗಡಂಗ್‌ದ ಗಮ್ಮತ್' ಕುಡಿತದ ದುಷ್ಪರಿಣಾಮದ ಕತೆಯಾದರೆ 'ಮಾರಿಗುಡಿಯ ಮಾರಮ್ಮ' ನಾಟಕವು ಪ್ರಾಣಿಬಲಿಯನ್ನು ಖಂಡಿಸುವ ಕತೆಯಾಗಿತ್ತು.

**ಮಾಧವ ತಿಂಗಳಾಯ (1913–1934)**



ಕೃಷ್ಣಪ್ಪ ತಿಂಗಳಾಯರು ಹೀಗೆ ನಾಟಕ ಕಲೆಯಲ್ಲಿ ಪ್ರಸಿದ್ಧಿ ಪಡೆದುದರಿಂದ ಬಾಲಕ ಮಾಧವ ತಿಂಗಳಾಯರನ್ನೂ ನಾಟಕ ಬರೆಯುವಂತೆ ಮಾವನೂ, ಅಜ್ಜನೂ ಪ್ರೋತ್ಸಾಹಿಸಿದರು. ಅದರ ಫಲವಾಗಿ ಮಾಧವ ತಿಂಗಳಾಯರು ಹೈಸ್ಕೂಲಿನಲ್ಲಿ ಕಲಿಯುತ್ತಿರುವಾಗಲೇ ಸಾಹಿತ್ಯಾಸಕ್ತಿ ಬೆಳೆಸಿದವರು. ಕಿರಿಯ ವಯಸ್ಸಿನಲ್ಲಿ ಸಾಹಿತ್ಯ ಬರವಣಿಗೆ, ನಾಟಕಗಳ ರಚನೆ, ಪ್ರದರ್ಶನ, ನಾಟಕದಲ್ಲಿ ಹೆಚ್ಚಾಗಿ ಸ್ತ್ರೀಪಾತ್ರ ದೇಶಭಕ್ತಿಯ ಪದ್ಯಗಳನ್ನು ಬರೆದು,

ಸ್ವತಃ ಹಾಡುವ ಪ್ರತಿಭೆಯಿದ್ದ ಅವರು ತನ್ನ 15ನೆಯ ವಯಸಿನಲ್ಲಿಯೇ (1928) ರಚಿಸಿದ 'ಜನಮರ್ಲ್' ತುಳು ಸಾಮಾಜಿಕ ನಾಟಕವು ಪ್ರಯೋಗವಾಗಿ ಜನಸಾಮಾನ್ಯರ ಮೆಚ್ಚುಗೆಯನ್ನು ಪಡೆದಿತ್ತು. ತುಳುಭಾಷೆಯ ಅಭಿವೃದ್ಧಿಗಾಗಿ ದುಡಿಯುತ್ತಿದ್ದ ಉಡುಪಿಯ ಎಸ್.ಯು. ಪಣಿಯಾಡಿಯವರು ತಮ್ಮ 'ತುಳುವ ಸಾಹಿತ್ಯ ಮಾಲೆ'ಯಲ್ಲಿ ಈ ನಾಟಕವನ್ನು 1933ರಲ್ಲಿ ಮುದ್ರಿಸಿ ಪ್ರಕಟಿಸಿದರು. 'ಮಾಧವ ತಿಂಗಳಾಯರು ತನ್ನ ಅಲ್ಪಾಯುಷ್ಯದಲ್ಲಿಯೇ ಸುಮಾರು 30ರಷ್ಟು ಕಿರು ಹಾಗೂ ದೊಡ್ಡ ನಾಟಕಗಳನ್ನು, ಪದ್ಯಗಳನ್ನು ತುಳು ಮತ್ತು ಕನ್ನಡ ಭಾಷೆಯಲ್ಲಿ ಬರೆದಿದ್ದಾರೆ. ನಾಟಕ ಕೃತಿಗಳಲ್ಲಿ ಹೆಚ್ಚಿನವು ಕೈಬರಹದ್ದಾಗಿದ್ದು, ಕೊಂಡು ಹೋದವರು ಹಿಂತಿರುಗಿಸದೆ ಕೇವಲ 10 ಕೃತಿಗಳು ಮಾತ್ರ ಲಭ್ಯವಿದೆ (ಪ್ರಫುಲ್ಲಚಂದ್ರ ತಿಂಗಳಾಯ–'ದಿ. ಮಾಧವ ತಿಂಗಳಾಯ' ಕೃತಿಯಲ್ಲಿ 2018).

**ಪ್ರಥಮ ಪ್ರಕಟಿತ ತುಳು ನಾಟಕ 'ಜನಮರ್ಲ್' (1933)**

ತುಳುವಿನಲ್ಲಿ ಪ್ರಥಮದ್ದೆನ್ನಲಾದ ಈ ನಾಟಕ ಕೃತಿ ಪ್ರಕಟವಾಗುವುದಕ್ಕೂ ಒಂದೆರಡು ದಶಕಗಳ ಹಿಂದೆಯೇ ತುಳು ನಾಟಕ ಪ್ರದರ್ಶನಕ್ಕೆ ನಾಂದಿ ಆಗಿರಬೇಕು ಎಂಬ ಸಂದರ್ಭ ಮತ್ತು ಹಿನ್ನೆಲೆಯ ಸೂಚನೆಯನ್ನು ಆ ಕೃತಿಗೆ 'ಎಡ್ವಕೇಟ್ ರಂಗರಾವ್ ತಲಚೇರಿಕರ'ರು ಬರೆದಿದ್ದ ಮುನ್ನುಡಿಯ ಮಾತುಗಳು ತಿಳಿಸುತ್ತವೆ. 'ನನ್ನ ಪ್ರಿಯಮಿತ್ರರಾದ ಮಾಧವ ತಿಂಗಳಾಯರು ಇನ್ನೂ ಎಳೆಯರಾದರೂ ರಂಗಭೂಮಿಯ ಸೇವೆ ಮಾಡುವವರಲ್ಲಿ ನಮ್ಮ ಮಂಗಳೂರಿನ ಮಟ್ಟಿಗಾದರೂ ಇವರ ಪ್ರಥಮ ಹೆಸರು ಪ್ರಥಮ ಪಂಕ್ತಿಯಲ್ಲಿ ಬರೆಯಲ್ಪಡಲು ಯೋಗ್ಯವಾದುದೆಂದು ನಿಸ್ಸಂದೇಹವಾಗಿ ಹೇಳಬಹುದು. ಸೇವಾದಳ ನಾಟಕ ಮಂಡಳಿಯ ನಾಟಕಗಳನ್ನು ನೋಡಿದವರಿಗೆ ಇವರು ಶ್ರೇಷ್ಠ ವರ್ಗದ ನಟರೆಂದು ಬೇರೆ ಹೇಳಬೇಕಾಗಿಲ್ಲ. ಇವರು ಬರೆದ ಒಂದೆರಡು ತುಳು ನಾಟಕಗಳನ್ನು ಮೊಗವೀರ ಶ್ರೀ ಜ್ಞಾನೋದಯ ಸಮಾಜದ ನಾಟಕ ಸಂಘದವರು ಅಭಿನಯಿಸಿದ್ದಾರೆ.

'ತುಳುಭಾಷೆಯಲ್ಲಿ ಬರೆದ ಈ ನಾಟಕವು ಕನ್ನಡವರಿಯದ ಬಹುಸಂಖ್ಯಾತ ತುಳುವರಿಗೆ ಮನೋರಂಜನೆಯಾಗುವ ಹಾಗೂ ತಿಳಿಯುವ ರೀತಿಯಲ್ಲಿ ಸಂಸ್ಕೃತಿಯ ಚಿತ್ರವನ್ನು ಅವರ ಮುಂದಿಟ್ಟು ತನ್ಮೂಲಕ ಸಮಾಜೋನ್ನತಿಯಾಗಲು ಈ ತರದ ನಾಟಕಗಳು ಬಲವಾದ ಸಾಧನ. ತುಳುನಾಡಿನ ಸಾಮಾನ್ಯ ಜನಜೀವನವು ಎಷ್ಟು ಉತ್ತಮ ರೀತಿಯಲ್ಲಿ ಇದರಲ್ಲಿ ಚಿತ್ರಿತವಾಗಿದೆ ಯೆಂಬುದು ವಾಚಕರಿಗೆ ಇದನ್ನು ಓದಿದರೆ ತಿಳಿಯುವುದು.'

ತಲಚೇರಿಕರರ ಈ ಮುನ್ನುಡಿಯ ಮಾತುಗಳಲ್ಲಿ ಗಮನಕ್ಕೆ ಬರುವ ಅಂಶವೆಂದರೆ ಆ ಮೊದಲೇ ತುಳುನಾಟಕಗಳ ಮೊಳಕೆಗಳು ಕಾಣಿಸಿದ್ದವು. ಮಾಧವ ತಿಂಗಳಾಯರು ಇತರ ತುಳು ನಾಟಕಗಳನ್ನೂ ಬರೆದರು, ಅವರು ಉತ್ತಮ ನಟರಾಗಿದ್ದರು. ಎರಡು ಸಂಸ್ಥೆಗಳ ನಾಟಕಗಳಲ್ಲಿ ಅಭಿನಯಿಸಿದ ಹಿನ್ನೆಲೆಯವರು. ನಾಟಕದ ಉದ್ದೇಶವೇನು,

ಈ ನಾಟಕ ತುಳುವರ ಅಂದಿನ ಸಂದರ್ಭಕ್ಕೆ ಹೇಗೆ ಸೂಕ್ತವಾಗಿತ್ತು ಇತ್ಯಾದಿಯಾಗಿ ತಿಳಿಯಬಹುದು.

ಮದ್ರಾಸಿನಲ್ಲಿ ಪ್ರಕೃತಿ ಚಿಕಿತ್ಸಾ ವೈದ್ಯಕೀಯ ವಿದ್ಯಾಭ್ಯಾಸವನ್ನು ಅನಾರೋಗ್ಯ ನಿಮಿತ್ತ ಅರ್ಧಕ್ಕೆ ನಿಲ್ಲಿಸಿ ಊರಿಗೆ ಹಿಂತಿರುಗಿದ್ದ ಮಾಧವ ತಿಂಗಳಾಯರು, ಮಡಿವಂತಿಕೆಯ ಸಿದ್ದ ಚಿಂತನೆಗಳಿದ್ದ ಆ ಕಾಲದಲ್ಲಿ ವೈಚಾರಿಕ ದೃಷ್ಟಿಕೋನದ ನಾಟಕ ರಚಿಸಿದರು, ಪ್ರಯೋಗ ನಡೆಸಿದರು. ಕಾಲರಾ, ಪ್ಲೇಗಿನಂತಹ ರೋಗಗಳಿಂದಾಗಿ ಊರಲ್ಲಿ ನೂರಾರು ಜನ ಸಾಯುತ್ತಿರುವಾಗ 'ಇದು ಮಾರಮ್ಮನ ಮುನಿಸಿನ ಶಾಪ' ಎಂದು ಭಾವಿಸಿ ಕುರಿ, ಕೋಳಿ ಬಲಿಯಲ್ಲೇ ಮನ ನೆಟ್ಟ ಸಮಾಜವನ್ನು ವಿಡಂಬಿಸಿ ಬರೆದ ನಾಟಕ 'ಜನಮರ್ಲ್'.

'ಜಾಗೃತಿ' ನಾಟಕದ ಮುಕ್ತಾಬಾಯಿ ಪಾತ್ರದಲ್ಲಿ ಮಾಧವ ತಿಂಗಳಾಯರು ಮತ್ತು ಮಾವ ಕೃಷ್ಣಪ್ಪ ತಿಂಗಳಾಯರು (1934)

'ಬದಿ ರಕ್ಕಸೆ' ತಿಂಗಳಾಯರು ಬರೆದ ಪ್ರಥಮ ನಾಟಕ ಇದು ವರದಕ್ಷಿಣೆಯ ಭೂತದ ಬಗ್ಗೆ ಎಚ್ಚರಿಸುವದ್ದು. ಅನಂತರದ್ದು ಜನಮರ್ಲ್. ಇವುಗಳಷ್ಟೇ ಅಲ್ಲದೆ 'ಧರ್ಮದ ಉದಲ್', 'ಜನ ಮರುಳೋ ಜಾತ್ರೆ ಮರುಳೋ', 'ಪ್ರೇಮಪೂರ್ಣಿಮಾ', 'ಜಾಗೃತಿ' (ಪ್ರ.1934), ಆತ್ಮಸಮರ್ಪಣೆ ಮುಂತಾದವು ಇವರ ನಾಟಕಗಳು ಮಾಧವ ತಿಂಗಳಾಯರು ಹೆಚ್ಚಾಗಿ ಸ್ತ್ರೀ ಪಾತ್ರ ನಿರ್ವಹಣೆ ಮಾಡುತ್ತಿದ್ದು 'ಜಾಗೃತಿ' ನಾಟಕದ 'ಮುಕ್ತಾಬಾಯಿ' ಇವರ ಕೊನೆಯ ಪಾತ್ರ ನಿರ್ವಹಣೆಯಾಗಿತ್ತು. ಮಾಧವರು ಕೆಲವೇ ತಿಂಗಳಲ್ಲಿ ಕಾಯಿಲೆಗೀಡಾಗಿ ಸಪ್ಟೆಂಬರ್ 1934ರಲ್ಲಿ ತನ್ನ 21ನೇ ವಯಸ್ಸಿನಲ್ಲಿ ನಿಧನರಾದರು (ಯಜ್ಞಾವತಿ ಕೇಶವ ಕಂಗೆನ್, ಮೂವೆರ್ ತಿಂಗಳಾಯೆರ್, 1995).

## 'ವಿದ್ಯೆದ ತಾದಿ' ತೋರಿಸಿದ ಪಡುಬಿದ್ರಿ ಶಿವಣ್ಣ ಹೆಗ್ಡೆ (1914–1986)

ತಿಂಗಳಾಯರ ನಾಟಕವು ಪಣಿಯಾಡಿ ಸಾಹಿತ್ಯ ಮಾಲೆಯಲ್ಲಿ ಪ್ರಕಟವಾಗಿದ್ದರೆ ಅದರ ಕೆಲವೇ ವರ್ಷಗಳ ಅಂತರದಲ್ಲಿ ಬರೆದ ಎರಡನೆಯ ನಾಟಕಕಾರರು ಪಡುಬಿದ್ರಿ ಶಿವಣ್ಣ ಹೆಗ್ಡೆ. ಶಿಕ್ಷಕ ವಿದ್ಯಾರ್ಥಿಯಾಗಿ ಮಂಗಳೂರಿನ ಟ್ರೈನಿಂಗ್ ಶಾಲೆಯಲ್ಲಿದ್ದಾಗ ರಚಿಸಿದ ನಾಟಕವಿದು.

'ವಿದ್ಯೆದ ತಾದಿ'ಗೆ (1940ರಲ್ಲಿ ಪ್ರಕಟಿತ) ಮುನ್ನುಡಿ ಬರೆದವರು ತುಳುನಾಡಿನ ಹೆಸರಾಂತ ಕವಿ, ವಾಗ್ಮಿ

ಸ್ವಾತಂತ್ರ್ಯ ಹೋರಾಟಗಾರ ದಿ। ನಾರಾಯಣ ಕಿಲ್ಲೆಯವರು.

'ತುಳು ಭಾಷೆನ್ ಟ್ರೈನಿಂಗ್ ಶಾಲೆಡ್ 'ಸ್ಟೇಜಿಗ್' ಕನತ್ತಿನಾರ್ ಪಂಜೆ ಮಂಗೇಶರಾಯರ್. ಅವೆನ್ ನನಲಾ ಒಂತೆ ದುಂಬು ಕನತ್ತಿನಾರ್ ಉಳ್ಳಾಲ ಮಂಗೇಶರಾಯರ್. ಆಂಡ ಕೆ. ಗೋಪಾಲ ರಾಯೆರೆ ಕಾಲೊಡು ಆ ಕೆಲಸ ಬಾರಿ ದುಂಬು ಬೈದಿನೆಕ್ ಈ ಪುಸ್ತಕನೇ ಒಂಜಿ ಸಾಕ್ಷಿಂದ್‌ದ್ ಪಂಡ್‌ಂಡಲಾ ತಪ್ಪಾವಂದ್...'

'ವಿದ್ಯೆದ ತಾದಿ' ನಾಟಕ ಆ ಕಾಲಘಟ್ಟದ ಜಮೀನ್ದಾರಿ ಮತ್ತು ಊಳಿಗತನ ಒಣ ಪ್ರತಿಷ್ಠೆ, ನಗರದ ಶೋಕಿಗೆ ಮರುಳಾಗುವ ಯುವ ತಲೆಮಾರು, ಪ್ರೇಮ ಪ್ರಕರಣ, ಮದುವೆ, ಭ್ರಮನಿರಸನ, ಕೊನೆಯಲ್ಲಿ ಚರಕ, ವಿದ್ಯಾಪ್ರಸಾರದ ಗಾಂಧಿಪಥದತ್ತ ತಿರುಗುವ ಒಲವು– ಈ ಕಥಾವಸ್ತುವನ್ನು ಹೊಂದಿದ್ದು ಐದು ದೃಶ್ಯಗಳನ್ನು ಒಳಗೊಂಡಿದೆ. ತಿಂಗಳಾಯರ ನಾಟಕದಲ್ಲಿ 'ಅಂಕ'ಕ್ಕೆ ಸಂವಾದಿಯಾಗಿ 'Act' ಎಂಬ ತಲೆಬರಹವೂ 'ಗುರಿಕಾರನ ಇಲ್ಲ್', 'ಮಾರ್ಗ', 'ಶ್ರೀಧರನ ಇಲ್ಲ್' ಎಂಬ ಶೀರ್ಷಿಕೆಯ ದೃಶ್ಯ ಸೂಚನೆಗಳಿದ್ದರೆ ಶಿವಣ್ಣ ಹೆಗ್ಡೆಯವರು ದೃಶ್ಯಾಂತರಕ್ಕೆ '1ನೇ ಪ್ರವೇಶ', '2ನೇ ಪ್ರವೇಶ' – ಈ ರೀತಿಯ ತಲೆಬರಹ ನೀಡುತ್ತಾರೆ. ಆದರ್ಶ ಬದುಕನ್ನು ಪ್ರೇರೇಪಿಸುವ ನಾಟಕವಿದು. ಉಡುಪಿ ಪ್ರದೇಶದ, ತುಳು ಆಡುನುಡಿ, ಈ ಕೃತಿಯಲ್ಲಿ ಬಳಸಲಾಗಿದೆ. 'ವಿದ್ಯೆದ ತಾದಿ' ನಾಟಕವನ್ನಲ್ಲದೆ ಪಡುಬಿದ್ರಿ ಶಿವಣ್ಣ ಹೆಗ್ಡೆಯವರು ಇನ್ನು ಕೆಲವು ನಾಟಕಗಳನ್ನು ಬರೆದು ಅವು ಪ್ರದರ್ಶಿತವಾಗಿದೆ ಎನ್ನಲಾಗಿದ್ದರೂ ಅವುಗಳು ಮುದ್ರಣಗೊಂಡಿಲ್ಲ.

ಪಡುಬಿದ್ರಿ ಶಿವಣ್ಣ ಹೆಗ್ಡೆ ಮೂಲತಃ ಒಬ್ಬ ಜಮೀನ್ದಾರರಾಗಿದ್ದರೂ ಶಿಕ್ಷಕವೃತ್ತಿಯನ್ನು ಬಯಸಿ ಆರಿಸಿಕೊಂಡಿದ್ದರು. ಆ ಕಾಲ ಕನ್ನಡ ಮತ್ತು ಅನ್ಯಭಾಷೆಗಳ ಒಲವು, ಪ್ರಭಾವದ್ದಾಗಿದ್ದರೂ ಶಿವಣ್ಣ ಹೆಗ್ಡೆ 'ಹಲವು ಜನ ಹೋದ ದಾರಿಯಲ್ಲಿ ಹೋಗುವ ಹಂಬಲ ನನಗಿಲ್ಲ. ಅನಾಥ ಸ್ಥಿತಿಯಲ್ಲಿರುವ ನಮ್ಮ ಮಾತೃಭಾಷೆ ತುಳುವನ್ನು ಬಿಡುವುದು ನನಗಿಷ್ಟವಿಲ್ಲ' ಎನ್ನುತ್ತಿದ್ದರಂತೆ (ಅವರ ಪುತ್ರ ವಿನೋದ್ ಹೆಗ್ಡೆಯವರ ಬರೆಹದ ಉಲ್ಲೇಖ)

'ಆ ಕಾಲದ ಊರಿನ ಎಲ್ಲರೂ ಒಟ್ಟು ಸೇರುವುದು ಊರ ಶಾಲೆಯ ವಾರ್ಷಿಕೋತ್ಸವಕ್ಕೆ ಅದರಲ್ಲೂ ಶಾಲಾ ಮಕ್ಕಳಿಂದ ಅಥವಾ ಸ್ಥಳೀಯ ಆಸಕ್ತರಿಂದ ಆಡಲ್ಪಡುವ ನಾಟಕ ನೋಡಲು. ಶಾಲಾ ವಾರ್ಷಿಕೋತ್ಸವಗಳಿಗಾಗಿಯೇ ಹಲವಾರು ತುಳುನಾಟಕಗಳನ್ನು ಬರೆದರು. ಅವರು ಬರೆದ ನಾಟಕಗಳನ್ನು ಅವರೇ ನಿರ್ದೇಶಿಸುತ್ತಿದ್ದರು. ಮತ್ತು ಕೆಲವೊಮ್ಮೆ ತಾವೇ ಅದರಲ್ಲಿ ನಟಿಸುತ್ತಲೂ ಇದ್ದರು. ಹಾಗಾಗಿ ಅವರು ನಾಟಕಕರ್ತೃವಾಗಿ, ನಟನಾಗಿ ಜನಪ್ರಿಯರಾದರು. ಆಮಂತ್ರಣ ಪತ್ರಿಕೆಗಳಲ್ಲಿ 'ಶಿವಣ್ಣ ಹೆಗ್ಡೆ ಬರೆದ ಮತ್ತು ನಟಿಸುವ ನಾಟಕ' ಎಂದು ಮುದ್ರಿಸಲಾಗುತ್ತಿತ್ತು ಎಂದು ಪುತ್ರ ವಿನೋದ್ ಹೆಗ್ಡೆ ಬರೆಯುತ್ತಾರೆ. (ಲೇಖನ ಕೃಪೆ : ಡಾ ಸಾಯಿಗೀತಾ)

ಹೀಗಾಗಿ, ಒಂದೇ ಅಲ್ಲ, ಹಲವು ನಾಟಕಗಳನ್ನು ಶಿವಣ್ಣ ಹೆಗ್ಡೆಯವರು ಬರೆದಿರಬಹುದಾದರೂ ದೊರಕಿದುದು ಒಂದೇ 'ವಿದ್ಯೆದ ತಾದಿ' ಮಾತ್ರ.

ಮುಲ್ಕಿಯ ಸತ್ಯಮಿತ್ರ ಬಂಗೇರರೂ ಇದೇ ಕಾಲದಲ್ಲಿ ತುಳು ನಾಟಕವೊಂದನ್ನು

ರಚಿಸಿ ಪ್ರದರ್ಶಿಸಿದ್ದಾಗಿ ತಿಳಿದುಬಂದಿದೆ.

ಕನ್ನಡದ ಶ್ರೇಷ್ಠ ಪ್ರಗತಿಶೀಲ ಸಾಹಿತಿ ನಿರಂಜನರೂ (1925–1992) ಆರಂಭದಲ್ಲಿ ತುಳು ಸಾಹಿತ್ಯ ರಚಿಸಿದವರು. ತನ್ನ 13ರ ಎಳವೆಯಲ್ಲಿ ಅವರು ಬರೆದ 'ಮಾತಲಾ ಇಂಚೆನೇ' (ಅತ್ತ್ಂಡ 'ಮಡಿತ್ತ ಭಡಿ') ಎನ್ನುವ ಕಿರು ಪ್ರಹಸನವೊಂದು 'ನವಯುಗ' ಪತ್ರಿಕೆಯ 27–1–1937ರ 'ತುಳು ಪುರವಣಿ'ಯಲ್ಲಿ ಪ್ರಕಟವಾಗಿತ್ತು (ನೋಡಿ: ಅಮೃತ ಸೋಮೇಶ್ವರ–'ತುಳು ಬದುಕು'–1984).

ತುಳು ರಂಗಭೂಮಿಯ ಆರಂಭ ಕಾಲದ ನಾಟಕ ಕೃತಿದೊಂದು ಈಚೆಗೆ ಬೆಳಕಿಗೆ ಬಂದಿದೆ. 'ಅದುವೆ ತೌಳವ ಸ್ವಾತಂತ್ರ್ಯ' ಐತಿಹಾಸಿಕ ನಾಟಕ 1937. ಇದರ ಲೇಖಕರು, ಪ್ರಕಾಶಕರು ಬೇಕಲ ರಾಮನಾಯಕ, ಬಾಸೆಲ್ ಮಿಶನ್ ಪ್ರೆಸ್ ಮಂಗಳೂರು.

ಕಾಸರಗೋಡು ಬಾಸೆಲ್ ಮಿಶನ್ ಹೈಸ್ಕೂಲಿನಲ್ಲಿ ಶಿಕ್ಷಕರಾಗಿದ್ದ ಬೇಕಲ ರಾಮನಾಯಕರು ಶಾಲಾ ವಾರ್ಷಿಕೋತ್ಸವಕ್ಕಾಗಿ ಬರೆದು ಆಡಿಸಿದ ನಾಟಕ. ಇದು ಜಿಲ್ಲಾ ಶಿಕ್ಷಣ ಇಲಾಖೆಯ ಪ್ರದರ್ಶನದಲ್ಲೂ ಬಹುಮಾನ ಗಳಿಸಿತ್ತು. 55 ಪುಟಗಳುಳ್ಳ ಈ ಪುಸ್ತಕದಲ್ಲಿ ನಾಟಕ ಪ್ಲಾಟ್ ಮತ್ತು ಕೊನೆಯಲ್ಲಿ 28ರಷ್ಟು ಸಣ್ಣ ದೊಡ್ಡ ಹಾಡುಗಳಿವೆ.

ತುಳುನಾಡಿನ ಕೆಲವು ಐತಿಹ್ಯಗಳ ಆಧಾರದಿಂದ ರಚಿತ ಕೃತಿಯಿದು. ಮುನ್ನುಡಿ ಬರೆದ ಅಂದಿನ ಉಡುಪಿ ಸರಕಾರಿ ಶಾಲಾ ಕನ್ನಡ ಪಂಡಿತರಾಗಿದ್ದ ಸೀತಾರಾಮಾಚಾರ್ಯರು ಹೀಗೆ ಬರೆಯುತ್ತಾರೆ. "ಎಂಕಲ್ನ ಊರ್ದ ವೀರಪುರುಷೆರ್ನ ಪರಿಚಯ ನಂಕ್ ಬೋಡಾಯಿನಾತ್ ಆತ್‌ಜಿ. ಬಿ. ರಾಮ ನಾಯಕೆರ್ ಇತಿಹಾಸೊಡು ಪ್ರಸಿದ್ಧಿ ಪಡೆಯಿ ಲೋಕಾದಿತ್ಯ, ಜಯಸಿಂಹ ಇಂಚಿತ್ತಿ ವೀರಪುರುಷೆರ್ನ ಕೆಲವು ಕತೆತ್ತ ಬಾಗೊಲೆನ್ ಸ್ಥಳಪುರಾಣೊಲೆಡ್ದ್ ಅಜತ್ತ್‌ದ್, ಐಕ್ ತೌಳವ ಸ್ವಾತಂತ್ರ್ಯ ಪನ್ಪಿ ಪುದರ್‌ಡ್ ವೀರರಸ ಪ್ರಧಾನವಾಯಿ ದೃಶ್ಯಕಾವ್ಯೊದ ರೂಪೊನು ಕೊರ್ದು ಓದುಗನಗಲ್ನ ಕೈಕ್ ದೀತಿನವು ಎಡ್ಡೆ ಸಂಗತಿ..." (ಪುಸ್ತಕ ಕೃಪೆ : ಬೆನೆಟ್ ಅಮ್ಮನ್ನ, ಕೆಟಿಸಿ ಗ್ರಂಥಾಲಯ).

ಇಂದಿಗೆ ಎಂಟು ದಶಕಗಳ ಹಿಂದೆ ಪ್ರಕಟವಾದ ಈ ಕೃತಿ ತುಳುನಾಡಿನ ಚರಿತ್ರೆ ಅರಸುಗಳ ಆಡಳಿತ ಹಾಗೂ ಆ ಕಾಲದ ಜನಜೀವನ ಪರಿಚಯ ದೃಷ್ಟಿಯಿಂದ ಮಾತ್ರವಲ್ಲದೆ ತುಳುನಾಟಕ ಇತಿಹಾಸದಲ್ಲೂ ದಾಖಲಾರ್ಹವಾದ ನಾಟಕ.

ಅದೇ ಕಾಲದಲ್ಲಿ ಮಂಗಳೂರಿನಲ್ಲಿ ಬಿ. ದೂಮಪ್ಪ ಮಾಸ್ತರ್, ಸಹಕಾರಿ ಧುರೀಣರಾದ ಮೊಳಹಳ್ಳಿ ಶಿವರಾಯರು ಅಲ್ಲದೆ ಮುಲ್ಕಿ ಸಂಜೀವ ಭಟ್ ಎಂಬ ಅಧ್ಯಾಪಕರೂ ಹಲವು ಕಿರು ನಾಟಕ ರಚಿಸಿ ಹಳ್ಳಿಹಳ್ಳಿಗಳಲ್ಲಿ ಪ್ರದರ್ಶಿಸಿದರು. ಇವುಗಳು ಸಾಕ್ಷರತೆ, ಸ್ವದೇಶಿ ಭಾವ, ದುಶ್ಚಟ ದೂರೀಕರಣ–ಮುಂತಾದ ವಸ್ತುಗಳಿಂದ ಕೂಡಿದ್ದವು. 1950ರಲ್ಲಿ ಮಂಗಳೂರಿನ ಮಿಶನ್ (ಬಿ.ಇ.ಎಂ.) ಶಾಲೆಯ ಶ್ರೀ ಬಾಬು ಶೆಟ್ಟಿ ಹಾಗೂ ಮಾಧವ ಎಂಬಿಬ್ಬರು 'ಮಂಡೆಬೆಚ್ಚ'ಎಂಬ ಪ್ರಹಸನ ರಚಿಸಿ, ಆಡಿದ್ದನ್ನು ಕಂಡಿರುವುದಾಗಿ ಹಿರಿಯರಾದ ಎಂ.ಎಸ್. ಇಬ್ರಾಹಿಂ ಹಾಗೂ ಯು.ಆರ್. ಚಂದರ್ ಹೇಳಿರುತ್ತಾರೆ. ಬಿ. ದೂಮಪ್ಪ ಮಾಸ್ತರ್ (1908–1978) ಬರೆದ ಕಿರು ನಾಟಕಗಳು 'ಒರಿಮಗೆ

ಶಿವಣ್ಣೆ', 'ಸಾಲೆದ ಭೂತ', 'ಮಾತೆರ್ಲಾ ಬರವುಕಲ್ಲೊಡು' ಇತ್ಯಾದಿ.

ಹೀಗೆ ಶಾಲಾ ಅಧ್ಯಾಪಕರು, ಸಹಕಾರಿಗಳು, ಸ್ವಾತಂತ್ರ್ಯ ಚಳುವಳಿಗಾರರಿಂದ ತುಳು ನಾಟಕಗಳ ಪ್ರದರ್ಶನ, ಜನಪ್ರಿಯತೆ ಹೆಚ್ಚಿತು. ಕನ್ನಡದ ಹೊರತಾಗಿ, ತಮ್ಮದೇ ಭಾಷೆಯಾದ ತುಳುವಿನಲ್ಲಿ ನಾಟಕಗಳು ಕಾಣಿಸಿಕೊಂಡಾಗ ಸಹಜವಾಗಿ ತುಳುವರು ಅದರತ್ತ ಆಕರ್ಷಿತರಾಗತೊಡಗಿದರು. ಅದುವರೆಗೆ ಪ್ರಹಸನಗಳ ಮಾದರಿಯಲ್ಲೇ ಇದ್ದ ತುಳು ನಾಟಕಗಳಿಗೆ ಪೂರ್ಣ ಪ್ರಮಾಣದ ನಾಟಕಗಳ ಆಗಮನವಾದುದು 1945ರ ವೇಳೆಗೆ –ದಿವಂಗತ ಕೆಮ್ತೂರರಿಂದ.

# ಸ್ವಾತಂತ್ರ್ಯೋತ್ತರ ನಾಟಕಗಳು

## ಕೆಮ್ತೂರು ದೊಡ್ಡಣ್ಣ ಶೆಟ್ಟರ ಯುಗ

ತುಳು ನಾಟಕಗಳು ಮೂವತ್ತರ ದಶಕದಲ್ಲಿ ಶೈಶವದ ಅಂಬೆಗಾಲಿಕ್ಕಿದರೆ ಎರಡನೆಯ ಹಂತದಲ್ಲಿ, 1945ರ ವೇಳೆಗೆ ಕೆಮ್ತೂರು ದೊಡ್ಡಣ್ಣ ಶೆಟ್ಟರ ಮೂಲಕ ಪ್ರೌಢ ಹೆಜ್ಜೆಯಿರಿಸಿದವು. ಅವರು 1946ರ 'ಮುತ್ತುನ ಮದ್ಮೆ'ಯಿಂದ ತೊಡಗಿ 'ದಲಾಲಿ ತಬುರೆ', ಬೊಂಬಯಿದ ಕಂಡನೆ, ಕಣ್ಣೀರ್ದ ಕರಿಯಮಣಿ, ಕಲ್ದಿನಕಲೆ ಕಲ್ಪ, ದಲಾಲಿ ಎಂಕಣ್ಣೆ ಇತ್ಯಾದಿ ಸುಮಾರು 22 ನಾಟಕಗಳನ್ನು ಬರೆದು ಪ್ರಯೋಗ ಮಾಡಿದರು. ತನ್ನದೇ ಆದ 'ಕಸ್ತೂರಿ ಸಾಹಿತ್ಯ ಮಾಲೆ' ಎಂಬ ಪ್ರಕಾಶನದ ಮೂಲಕ ಕೆಲವು ನಾಟಕಗಳನ್ನು ಪ್ರಕಟಿಸಿದಂತೆ ಒಂದೆಡೆ ಉಲ್ಲೇಖವಿದ್ದರೂ ಪದ್ಯಗಳ ಹೊರತಾಗಿ ನಾಟಕಗಳು ಪ್ರಕಟವಾದ ದಾಖಲೆಗಳು ಲಭಿಸಿಲ್ಲ.

## ವೃತ್ತಿನಾಟಕ ತಂಡಗಳು

**ಕೆಮ್ತೂರು ದೊಡ್ಡಣ್ಣ ಶೆಟ್ಟಿ (1926–1985)**

'ತುಳುನಾಟಕಗಳ ದೊಡ್ಡಣ್ಣ' ಎಂಬ ಶಾಶ್ವತ ಅಭಿದಾನ ಇವರಿಗಿದೆ. ಆ ಕಾಲಕ್ಕೆ ವಿಶ್ವದಾಖಲೆಗೆ ಸರಿಸಾಟಿಯಾಗಿ ಅವರು ಏಕವ್ಯಕ್ತಿಯ ಅದ್ಭುತ, ಅಸಾಧಾರಣ ಸಾಧನೆ. 1946ರಲ್ಲಿ ಆರಂಭಗೊಂಡ ದೊಡ್ಡಣ್ಣ ಶೆಟ್ಟರ ನಾಟಕ ತಂಡ ಸುಮಾರು 38 ವರ್ಷ ಕರ್ನಾಟಕ, ಗೋವಾ, ಮುಂಬಯಿ ಪ್ರಾಂತಗಳಲ್ಲಿ 20ಕ್ಕೂ ಹೆಚ್ಚಿನ ಜನಪ್ರಿಯ ನಾಟಕಗಳನ್ನು ನಿರಂತರವಾಗಿ ಪ್ರದರ್ಶಿಸಿದ್ದು ಮುತ್ತುನ ಮದ್ಮೆ, ಮಾಮಿಗಾವಂದಿ ಮರ್ಮಲ್, ದಲಾಲಿ ಎಂಕೆ, ದೇವೆರೇ ಗತಿ, ಕಲ್ದಿನಕಲೆ ಕಲ್ಪ, ದಲಾಲಿ ತಬುರೆ, ಬದಿದಾಂತಿ ಮದ್ಮೆ



ಮುಂತಾದ ಅವರ ಜನಪ್ರಿಯ ನಾಟಕಗಳು ಅಂದು ತುಳುನಾಡಿನಲ್ಲಿ ಮನೆಮಾತಾಗಿದ್ದವು. ತುಳುವರ ಜನಜೀವನ, ಚಾಲಾಕಿತನ, ಕಲ್ಪ ಕೋಮಾಟಿಕೆ, ಸಂಸಾರ ದೊಳಗಿನ ಅನುರಾಗ – ವಿರಸ, ಕಳಂಕ, ದಗಲ್ಬಾಜಿತನ, ಫ್ಯಾಶನ್ ವ್ಯಾಮೋಹ ಇವೆಲ್ಲವುಗಳ ಮೇಲೆ ಸರ್ಚ್‌ಲೈಟ್ ಬೀರಿದ ಕಥಾವಸ್ತು, ಭಾಷಾ ಪ್ರಯೋಗದ ಅವರ ನಾಟಕಗಳು ಅಕ್ಷರಸ್ಥ–ಅನಕ್ಷರಸ್ಥರೆಲ್ಲರಿಗೂ ಏಕಪ್ರಕಾರವಾಗಿ ಸುಲಭ ಗ್ರಾಹ್ಯವಾಗಿದ್ದವು. 'ಮುತ್ತುನ ಮದ್ಮೆ' ನಾಟಕ ಒಂದೇ 6043 ಬಾರಿ ಪ್ರದರ್ಶನವಾಗಿ ಅಪೂರ್ವ ದಾಖಲೆ ನಿರ್ಮಿಸಿತ್ತು. ಅವರ ಪ್ರಥಮ ಒಲವು ಹಳ್ಳಿ ಪ್ರದೇಶದ ರಂಗಮಂಚವಾಗಿತ್ತು.

**ತುಳುನಾಡ್ ನಾಟಕ ಕಂಪೆನಿ – ಪ್ರಥಮ ನಾಟಕ ತಂಡ**

ತುಳುವಿಗೆ ಮೊದಲ ವೃತ್ತಿನಾಟಕ ತಂಡವನ್ನು ನೀಡಿದವರೂ ದೊಡ್ಡಣ್ಣ ಶೆಟ್ಟರೇ. ಅವರು 'ತುಳುನಾಡ್ ನಾಟಕ ಕಂಪೆನಿ'ಯನ್ನು ಕಟ್ಟಿ, ಹಲವು ವರ್ಷ ಪ್ರಯೋಗಶೀಲ ರಾದರು. ಕರೆಂಟಿಲ್ಲದ ಆ ಕಾಲದಲ್ಲಿ ಗ್ಯಾಸ್‌ಲೈಟಿಗೆ ತಗಡು ಇರಿಸಿ, ಸ್ಪಾಟ್‌ಲೈಟ್ ಬೆಳಕು ವಿನ್ಯಾಸಗೊಳಿಸುತ್ತಿದ್ದರು. ದಿನವೊಂದಕ್ಕೆ 2–3 ಪ್ರದರ್ಶನ ನೀಡುತ್ತಾ ಹಲವು ದಿನ ಒಂದೂರಲ್ಲಿದ್ದು, ಮತ್ತೆ ಮುಂದಿನ ಊರಿಗೆ ಅವರ ತಂಡ ಸಂಚರಿಸುತ್ತಿತ್ತು. ತಂಡದಲ್ಲಿ ಕುಕ್ಕಿಕಟ್ಟೆ ತಾರನಾಥ ನಾಯಕ್‌ರಂತಹ 10ರಿಂದ 15 ಜನ ಕಲಾವಿದರು, ಸಂಗೀತಗಾರರಿದ್ದರು. ಸ್ತ್ರೀ ಪಾತ್ರಗಳಿಗೆ ಕೆಲವೊಮ್ಮೆ ಸ್ತ್ರೀಯರೂ ಇರುತ್ತಿದ್ದರು. ಲಕ್ಷ್ಮೀ ದೇಶಪಾಂಡೆ, ಬೇಬಿ ಇವರಂತಹ ಸುಮಾರು 20ರಷ್ಟು ಹುಡುಗಿಯರು ಕೆಮ್ತೂರರ ನಾಟಕಗಳಲ್ಲಿ ಆಗೀಗ ಪಾತ್ರ ವಹಿಸಿದ್ದರು. ಹಳ್ಳಿಗಾಡಿನ ನೂರಾರು ಸುಪ್ತ ಪ್ರತಿಭೆಗಳನ್ನು ಕೆಮ್ತೂರರ ಪ್ರದರ್ಶನಗಳು ಪ್ರಚೋದಿಸಿದವು. ಅವರ ಹೆಚ್ಚಿನ ನಾಟಕಗಳು ಗ್ರಾಮೀಣ ಬದುಕನ್ನು ಕಲಾತ್ಮಕವಾಗಿ ಹಿಡಿದಿಟ್ಟಿದ್ದವು. ಪ್ರೇಕ್ಷಕರು ಈ ನಾಟಕಗಳಿಗೆ ಹುಚ್ಚೆದ್ದು ಧಾವಿಸುವುದಿತ್ತು. ಆರ್ಥಿಕ ಸವಲತ್ತು ತರತರದ ದೃಶ್ಯಾವಳಿ ಸೀನರಿ, ತಕ್ಕ ಸಂಗೀತ ಪರಿಕರಗಳಿಲ್ಲದೆಯೂ, ಜನಪದಕ್ಕೆ ಹತ್ತಿರದ ಕಥಾವಸ್ತು, ಆಡುಮಾತುಗಳ ಶ್ಲೇಷೆ, ಹಾಸ್ಯ; ಕಮಂಗಿತನ, ಮೌಢ್ಯಗಳ ವಿಡಂಬನೆಯ ಸಂಭಾಷಣೆ ಗಳೊಂದಿಗೆ ಅವರ ನಾಟಕಗಳು ಅತ್ಯಂತ ಜನಪ್ರಿಯವಾದವು. ದೊಡ್ಡಣ್ಣ ಶೆಟ್ಟರು ಸ್ವತಃ ನಾಟಕ ಕರ್ತೃ, ನಟ, ನಿರ್ದೇಶಕ, ಗೀತ ರಚನಕಾರ, ಗಾಯಕನೂ ಆಗಿದ್ದರು. ಅವರ ನಾಟಕದ ಜನಪ್ರಿಯ ಹಾಡುಗಳ ಉದಾಹರಣೆಯೆಂದರೆ 'ಮುತ್ತುನ ಮದ್ಮೆ' ನಾಟಕದ

**'ಬೆಚ್ಚ ಬೆಚ್ಚ ಗಂಜಿ ಉಂಡು, ಲತ್ತ್ ಮುಂಚಿ ಚಟ್ನಿ ಉಂಡು**
**ಬತ್ತ್‌ದೊಂತೆ ಉಂಡ್ರುಪೋಲೆ, ಬತ್ತ್‌ದೊಂತೆ ಉಂಡ್ರುಪೋಲೆ..'**
**ಕೋಡೆ ಈರ್ ಬರ್ಪರ್‌ಂದ್ ಯಾನ್ ಇರೆನ್ ಕಾತೆನೇ**
**ದಾಯೆಗೀರ್ ಬತ್ತ್‌ಜರ್, ದಾಯೆಗೀರ್ ಬತ್ತ್‌ಜರ್ ॥**

'(ಬಿಸಿ ಬಿಸಿಯ ಗಂಜಿವುಂಟು; ಎಳಮೆಣಸಿನ ಚಟ್ನಿಯುಂಟು
ಬನ್ನಿರಿಷ್ಟು ಉಂಡು ಹೋಗಿ, ಬನ್ನಿರಿಷ್ಟು ಉಂಡು ಹೋಗಿ
ನಿನ್ನೆ ನೀವು ಬರುವಿರೆಂದು ನಿಮ್ಮ ನಾನು ಕಾದೆನೆ
ಯಾಕೆ ನೀವು ಬರಲೇ ಇಲ್ಲ, ಯಾಕೆ ನೀವು ಬರಲೇ ಇಲ್ಲ?)'

ಇಂತಹ ಅಚ್ಚ ತುಳುವ ಸಂಸ್ಕೃತಿಯ ಹಾಡು, ಕತೆಗಳ ಮೂಲಕ ಸುಮಾರು ಮೂರು ದಶಕಗಳ ಕಾಲ ಕೆಮ್ತೂರರು ಪ್ರೇಕ್ಷಕರ ಮನ ಸೆಳೆದು ಹುಚ್ಚೆಬ್ಬಿಸಿದುದು ಸುಳ್ಳಲ್ಲ. ಅವಿಭಜಿತ ದ.ಕ. ಜಿಲ್ಲೆಯಾದ್ಯಂತ ಮಾತ್ರವಲ್ಲ ಬೆಂಗಳೂರು, ಮುಂಬಯಿ, ಪೂನಾ ಮತ್ತಿತರ ಹೊರನಾಡಿಗೂ ಅವರ ನಾಟಕ ಕಂಪೆನಿ ಸಂಚರಿಸಿ ಪ್ರದರ್ಶನ ನೀಡಿತು. ಅವರ 'ಮುತ್ತುನ ಮದ್ಮೆ' ಅಂದಿನ ಕಾಲದಲ್ಲಿ 6000ಕ್ಕೂ ಮಿಕ್ಕಿ ಪ್ರದರ್ಶನದ ದಾಖಲೆ ಮಾಡಿತು.

ಶಿಕ್ಷಕ ತರಬೇತಿ ಪಡೆದು ಪ್ರಾರಂಭದಲ್ಲಿ ಕೆಲಕಾಲ ಅಧ್ಯಾಪಕರಾಗಿ ಮತ್ತೊಂದು ಸ್ವಲ್ಪ ಸಮಯ ಕೆಮ್ತೂರು ಗ್ರಾಮದಲ್ಲಿಯೇ ಪಟೇಲರಾಗಿದ್ದರು. ಆದರೆ ಕಲೆಯ ಮೇಲಿನ ಮೋಹ ಅವರನ್ನು ಅಧ್ಯಾಪನ, ಪಟೇಲಿಕೆ ಎರಡರಿಂದಲೂ ಸೆಳೆದು ರಂಗಭೂಮಿಗೆ ಏರಿಸಿತು.

ಎಪ್ಪತ್ತರ ದಶಕದಲ್ಲಿ ತುಳು ಸಿನೆಮಾ ಕ್ಷೇತ್ರ ಆರಂಭಗೊಂಡಾಗ ಬಿ.ಎಸ್. ರಾವ್ ಅವರ ಜೊತೆ ಸೇರಿ ಕೆಮ್ತೂರರು 'ನ್ಯಾಯೊಗು ಜಿಂದಾಬಾದ್' ಎಂಬ ಚಿತ್ರವನ್ನು ನಿರ್ಮಿಸಿದರು. 1978ರಲ್ಲಿ ಅದು ಬಿಡುಗಡೆಗೊಂಡಿತು. ಅದರಲ್ಲಿ ಕೆಮ್ತೂರರು ಬರೆದ ಒಂದು ಹಾಡು 'ದಾನೆದೆ ಲಕ್ಷ್ಮೀ, ಪಾತೆರ್ಜ ದಾನೇ' ಇದು ತುಂಬ ಜನಪ್ರಿಯವಾಗಿತ್ತು.

ಈ ದಾಖಲೆ ವೀರನಿಗೆ ತುಳು ಭಾಷಾ ಚಕ್ರವರ್ತಿ, ತುಳು ಸಾಹಿತ್ಯದ ಭರತಮುನಿ, ತುಳು ರತ್ನಾಕರ ಭೂಷಣ, ತುಳುನಟ ಸಾರ್ವಭೌಮ ಇತ್ಯಾದಿ ಅನೇಕ ಬಿರುದು ಬಾವಲಿಗಳು ಊರು-ಪರವೂರ ಅಭಿಮಾನಿ ಸಂಘಗಳಿಂದ ಸಂದಿವೆ (1983ರಲ್ಲಿ ಈ ಲೇಖಕ ಕಾರ್ಯದರ್ಶಿಯಾಗಿದ್ದ ನಾರಾಯಣ ಗುರು ಕಲಾವೃಂದದಿಂದಲೂ ಗೌರವ ಸಮರ್ಪಣೆಯಾಗಿತ್ತು.) ಆದರೆ ಸರಕಾರ ಹೆಚ್ಚು ಗಮನಹರಿಸದೆ, ಕೊನೆಯವರೆಗೂ ಅವರನ್ನು ಅಲ್ಪ ಮಾಸಾಶನದಲ್ಲೇ ಉಳಿಸಿತು.

ಕೆಮ್ತೂರರ ಹೆಸರನ್ನು ಮತ್ತೊಮ್ಮೆ ಶಾಶ್ವತಗೊಳಿಸಿದ್ದೆಂದರೆ ಅದು ಉಡುಪಿ ತುಳುಕೂಟವು 2002ರಿಂದ ಕೆಮ್ತೂರರ ಹೆಸರಿನಲ್ಲಿ ತುಳುನಾಟಕ ಸ್ಪರ್ಧೆಯನ್ನು ನಡೆಸತೊಡಗಿ ವರ್ಷ ವರ್ಷ ತುಳು ರಂಗಭೂಮಿಯಲ್ಲಿ ಹೊಸ ಹೊಸ ನಾಟಕ ಪ್ರಯೋಗಗಳು ನಡೆಯಲು ಮುಖ್ಯ ವೇದಿಕೆಯಾಗಿರುವ ಜೊತೆಗೆ ಈ ತುಳುನಾಟಕ ಬ್ರಹ್ಮನ ಹೆಸರನ್ನು ಚಿರಸ್ಥಾಯಿಯಾಗಿಸಿದ್ದು.

ಕೆಮ್ತೂರರ ಬಳಿಕ ತುಳು ರಂಗಭೂಮಿ ಅವಿಭಜಿತ ದ.ಕ. ಜಿಲ್ಲೆಯ ದಕ್ಷಿಣ ಭಾಗದಲ್ಲಿ ಹೆಚ್ಚು ಕ್ರಿಯಾಶೀಲವಾಗತೊಡಗಿತು. ಕೆಲವು ನಾಟಕ ತಂಡಗಳೂ ಬೇರೆ

ಬೇರೆ ಕಡೆ ಹುಟ್ಟಿಕೊಳ್ಳತೊಡಗಿದವು. 1949ರಷ್ಟು ಹಿಂದೆಯೇ ನಾಟಕ ರಚನೆಗೆ ತೊಡಗಿದ್ದ ಬಿ. ರಾಮ ಕಿರೋಡಿಯನ್, ಮಚ್ಚೇಂದ್ರನಾಥ ಪಾಂಡೇಶ್ವರ, ಕೆ.ಎನ್. ಟೇಲರ್, ಕೆ.ಬಿ. ಭಂಡಾರಿ, ಎ೯. ವಿಶ್ವನಾಥ್, ಗಿರೀಶ್ ಪಿಲಾರ್, ಎಂ.ಎಸ್. ಇಬ್ರಾಹಿಂ, ಅತ್ತಾವರ ವಿಶ್ವನಾಥ್, ಬಿ. ಭೋಜ ಸುವರ್ಣ, ಬಿ. ಸಂಜೀವ ರಾವ್, ಗಣೇಶ್ ರೈ, ಪಿ.ಎಸ್. ರಾವ್, ಜೀವರತ್ನ ಸನಿಲ್, ಯು.ಆರ್. ಚಂದರ್, ಎಂ. ಪುರುಷೋತ್ತಮ, ವಿಶುಕುಮಾರ್, ಯು.ಎಂ. ಮೈದಿನಬ್ಬ, ಎನ್. ಗೋಪಾಲಕೃಷ್ಣ, ರತ್ನಾಕರ ರಾವ್ ಕಾವೂರು, ಯು. ಮಚ್ಚೇಂದ್ರನಾಥ್, ಎಂ.ಕೆ. ಸೀತಾರಾಮ್ ಕುಲಾಲ್, ಶಾಂತಾರಾಂ ಕಲ್ಲಡ್ಕ, ಸಂಜೀವ ದಂಡಕೇರಿ, ಉದ್ಯಾವರ ರಾಜು, ಸೀತಾನದಿ ಗಣಪಯ್ಯ ಶೆಟ್ಟಿ, ಕೆ.ವಿ.ಭಟ್, ಅಚ್ಯುತ ಕಲ್ಲಾಪು, ಬಿ.ವಿ. ಕಿರೋಡಿಯನ್, ಕೋಡು ಭೋಜ ಶೆಟ್ಟಿ, ಎ. ಗಂಗಾಧರ ಶೆಟ್ಟಿ–ಮುಂತಾದ ಅನೇಕಾನೇಕರು 50–60ರ ದಶಕದಿಂದಲೇ ಹತ್ತಾರು ನಾಟಕಗಳನ್ನು ರಚಿಸಿ ತುಳುರಂಗಭೂಮಿಯ ಸಂಪನ್ನತೆಗೆ ಅಡಿಪಾಯ ಹಾಕಿದರು. ಹಳೆಯ ತಲೆಮಾರಿನ ನಾಟಕಕಾರರೆಲ್ಲ ನಾಟಕ ರಚನೆ, ನಟನೆ, ನಿರ್ದೇಶನ, ರಂಗಸಜ್ಜಿಕೆ ಗಳಂತಹ ರಂಗಭೂಮಿಯ ಎಲ್ಲ ಆಯಾಮಗಳಲ್ಲೂ ಪರಿಶ್ರಮ ಹೊಂದಬೇಕಾದುದು ಅನಿವಾರ್ಯವಾಗಿತ್ತು.

ಈ ಸಂದರ್ಭದಲ್ಲಿ ಹಲವಾರು ನಾಟಕ ತಂಡಗಳು ಅಸ್ತಿತ್ವಕ್ಕೆ ಬಂದವು. ಬಹುಪಾಲು ನಾಟಕರಂಗ ಮಂಗಳೂರು ಪರಿಸರದಲ್ಲೇ ಆಗ ಪ್ರವರ್ಧಮಾನವಾಯಿತು. 1958ರಲ್ಲಿ ನಾಟಕ ರಚನೆಗೆ ತೊಡಗಿದ ಕೆ.ಎನ್. ಟೇಲರ್ 'ಗಣೇಶ ನಾಟಕ ಸಭಾ' ಎನ್ನುವ ತಂಡ ಕಟ್ಟಿ ನಾಟಕವಾಡಿದರು. 1949ರಲ್ಲೇ ನಾಟಕರಂಗ ಪ್ರವೇಶಿಸಿದ್ದ ಬಿ. ರಾಮ ಕಿರೋಡಿಯನ್‌ರು ಮಿತ್ರ ನಾರಾಯಣ ಶೆಟ್ಟರೊಂದಿಗೆ ಆರ್.ಎನ್. ಮಿತ್ರಮಂಡಳಿ (1972) ಕಟ್ಟಿದರು. ಈ ಎರಡು ಪ್ರಮುಖ ತಂಡಗಳಂತೆಯೇ ಕೆ.ಬಿ. ಭಂಡಾರಿಯವರ ಸ್ನೇಹರಂಗ ಬಳಗ, 'ಕಲಾರಂಗ' ಮಂಗಳೂರು, ಬೆಳ್ತಂಗಡಿ ಪರಿಸರದಲ್ಲಿ ರವಿರಾಜ್ ಜೈನ್ ಎಂಬವರ 'ರಾಯಲ್ ಫ್ರೆಂಡ್ಸ್ ಕ್ಲಬ್' ಕೆಲಕಾಲ ನಾಟಕವಾಡಿತು. ಉಳ್ಳಾಲ ಮಚ್ಚೇಂದ್ರನಾಥರ 'ಓಂ ಶಕ್ತಿ ನಾಟಕ ಸಭಾ', ಯು.ಆರ್. ಚಂದರ್ ನೇತೃತ್ವದ 'ನವತರುಣ ಕಲಾವೃಂದ', ಆರ್.ಜಿ. ಕಾಮತರ ನಾಟಕ ಮಂಡಳಿ, ಎಂ.ಎಸ್. ಇಬ್ರಾಹಿಂರ 'ಎಂ.ಎಸ್. ಆರ್ಟ್ಸ್', ಮಣ್ಣಗುಡ್ಡ, ಬಿ. ಬೋಜ ಸುವರ್ಣರ 'ನಟರಾಜ ನಾಟಕ ರಂಗ', ಪಿ.ಎಸ್. ರಾಯರ 'ಸಹೋದರ ಕಲಾವೃಂದ', ಎಂ.ಕೆ. ಸೀತಾರಾಮ್ ಕುಲಾಲರ 'ಕಡಲನಾಡು ಕಲಾವಿದರು', ವಿಶುಕುಮಾರರ 'ನವೋದಯ ಕಲಾವೃಂದ', ಎನ್. ಗೋಪಾಲಕೃಷ್ಣರ 'ಕರಾವಳಿ ಕಲಾವಿದರು' ಮುಂತಾದವು 60–70ರ ದಶಕಗಳ ಪ್ರಮುಖ ತುಳುನಾಟಕ ತಂಡಗಳು.

## ಹಿರಿಯ ತಲೆಮಾರಿನ ನಾಟಕಕಾರರು

### ಬಿ. ರಾಮ ಕಿರೋಡಿಯನ್ (1923–1997) – ಆರ್.ಎಸ್. ಮಿತ್ರಮಂಡಳಿ

ವೃತ್ತಿಯಲ್ಲಿ ಟೈಲರ್, ಪ್ರವೃತ್ತಿಯಲ್ಲಿ ರಂಗಕಲಾವಿದರಾಗಿ ನಾಟಕರಂಗದ ಭೀಷ್ಮನೆಂದೇ ಇಡಿಯ ಕರಾವಳಿ ವಲಯದಲ್ಲಿ ಗೌರವಾದರಗಳಿಗೆ ಪಾತ್ರವಾಗುವ ಸಾಧನೆಗಳನ್ನು ಮಾಡಿದ್ದ ಬಿ. ರಾಮ ಕಿರೋಡಿಯನ್ನರು ತನ್ನ ಭವಿಷ್ಯವನ್ನು ತಾನೇ ಕಡೆದ ಸಾರ್ಥಕ ಶಿಲ್ಪಿ. ಜಾನಪದ ಸೊಗಡಿನ ಶುದ್ದ ಪರಿಪುಷ್ಪ ತುಳುಭಾಷಾ ಪ್ರಯೋಗವನ್ನು ಬೇರೊಬ್ಬರು ಸಾಟಿಯಾಗ ಲಾರದಷ್ಟು ತನ್ನ ನಾಟಕಗಳಿಗಾಗಿ ಬಳಸಿಕೊಂಡ ಕಿರೋಡಿಯನ್ ತನ್ನ 75ರ ತುಂಬು ಹರೆಯದುದ್ದಕ್ಕೆ ಸದ್ದಿಲ್ಲದೆ ನಾಟಕ ರಚನೆ, ನಿರ್ದೇಶನ, ನಟನೆ, ಪದ್ಯರಚನೆ, ಸಂಗೀತ ಸಂಯೋಜನೆಯಲ್ಲಿ ಸಹಸ್ರಾರು ಕಲಾವಿದರಿಗೆ ಗುರುವೆನಿಸಿದ 'ಮಾಸ್ಟ್ರ'. ಕಾಂಪರನ ಕಟಿಪಿಟಿ, 'ಸರ್ಪಸಂಕಲೆ', 'ಬಿರ್ದ್‌ದ ಬೈರವೆರ್'ನಂತಹ 47 ತುಳು ನಾಟಕಗಳನ್ನು, 5 ಕನ್ನಡ ನಾಟಕಗಳನ್ನು ಬರೆದವರು.

ಅವರು ಜನಿಸಿದ್ದು ಮಂಗಳೂರು ತಾಲೂಕಿನ ಹಳೆಯಂಗಡಿಯ ಪಶ್ಚಿಮಭಾಗ ಕಡಲ ತೀರದ ಸಸಿಹಿತ್ತಿಲಿನಲ್ಲಿ ದಿನಾಂಕ 23–8–1923ರಂದು. ತಾಯಿ ಬಾಗಿ ಹೆಂಗ್ಸು, ತಂದೆ ನಕ್ಕುರ ಪೂಜಾರಿ. ಮೂವರು ತಮ್ಮಂದಿರು, ಓರ್ವ ತಂಗಿಯ ಹಿರಿಯಣ್ಣ ರಾಮ–ಮನೆಯ ಕಿತ್ತು ತಿನ್ನುವ ಬಡತನದ ಬಾಲ್ಯದಲ್ಲಿ ಊರಶಾಲೆಯಲ್ಲಿ 5ನೆಯ ತರಗತಿಯವರೆಗೆ ಶಾಲೆ ಕಲಿತುದೇ ವಿಶೇಷ. ಮುಂದೆ ಹೊಟ್ಟೆಪಾಡು ನೋಡಿಕೊಂಡು ಮುಲ್ಕಿಯಲ್ಲಿ ಕೆಲಕಾಲವಿದ್ದು ಬೇಗನೇ ಯಾರದೋ ಪ್ರೇರಣೆಯಿಂದ ಮಂಗಳೂರಿಗೆ ಬಂದು ಟೈಲರ್ ವೃತ್ತಿಗೆ ತೊಡಗಿದರು. ಅಶೋಕನಗರ ಶಾಲಾ ಪರಿಸರದಲ್ಲಿ ತಾಯಿಯ ಕುಟುಂಬದ ಸನಿಹವಿದ್ದು ವಾಸ್ತವ್ಯ. (ಅಶೋಕನಗರ ಶಾಲೆಯಿಂದ ದಂಬೆಲ್ ಕಡೆ ತೆರಳುವ ರಸ್ತೆಯ ಒಂದೆಡೆ 'ತುಳು ರಂಗರತ್ನಾಕರ' ಬಿ. ರಾಮ ಕಿರೋಡಿಯನ್ ಮಾರ್ಗದಲ್ಲಿ ದಕ್ಷಿಣಕ್ಕೆ ತುಸು ದೂರದಲ್ಲೇ ಬಿ. ರಾಮ ಕಿರೋಡಿಯನ್‌ರ ಮನೆಯಿದೆ).

### 'ತುಳು ನಾಟಕದ ರತ್ನ'

ಗ್ರಾಮೀಣ ಜನಪದ ಬದುಕಿನಲ್ಲೊಬ್ಬರಾಗಿ ಬಾಲ್ಯಕಳೆದ ರಾಮಣ್ಣ ಸಸಿಹಿತ್ಲಿನ ಭೋರ್ಗರೆವ ಕಡಲ ಅಲೆಗಳ ರುದ್ರರಮಣೀಯ ಪರಿಸರದಲ್ಲಿ ಕಲ್ಪನಾ ಶಕ್ತಿ ಕುಡಿಯೊಡೆದು, ಅದಾಗಲೇ ತುಳುನಾಟಕಗಳಿಂದ ಹೆಸರಾಗುತ್ತಿದ್ದ ಕೆಮ್ತೂರು ದೊಡ್ಡಣ್ಣ ಶೆಟ್ಟಿಯಂಥವರ ಬಗ್ಗೆ ಕೇಳಿದಾಗಿನಿಂದ ಮತ್ತು ಅಶೋಕನಗರದಲ್ಲಿ ಅದಾಗಲೇ ಕ್ರಿಯಾಶೀಲವಾಗಿದ್ದ ಬೋಳೂರು ನಾಟಕ ಸಭಾ ಸಾಂಗತ್ಯದಲ್ಲಿ, ಶಿಕ್ಷಕ ಕವಿ, ನಾಟಕಕಾರ

ರಾಗಿದ್ದ ಬಿ. ದೂಮ್ಮಪ್ಪ ಮಾಸ್ತರರ ಪ್ರೋತ್ಸಾಹದಿಂದ ಬಹುಶಃ ನಾಟಕದ ಒಲವು ಗಳಿಸಿಕೊಂಡಿರಬೇಕು. 1940ರಲ್ಲಿ ಅವರು ಬರೆದ ಪ್ರಥಮ ನಾಟಕ 'ಬೂಲ್ಯದ ಬಪ್ಪಂಗಾಯಿ'. ಮುಂದೆ ರಾಮಣ್ಣರು ಬರೆದ ಒಂದೊಂದು ನಾಟಕಗಳೂ ಕೂಡಾ ತುಳುನಾಡಿನ ಚರಿತ್ರೆ, ಸಂಸ್ಕೃತಿಸಾರವನ್ನೂ, ಕೌಟುಂಬಿಕ, ಸಾಮಾಜಿಕ ಬದುಕಿನ ಪರಿಶುದ್ಧತೆಯ ವಿವೇಕಪ್ರಜ್ಞೆಯನ್ನೂ ಎತ್ತಿ ತೋರಿಸುವವುಗಳಾಗಿವೆ. ತಂದೆ-ಮಕ್ಕಳು ಹೇಗಿರಬೇಕು, ಗಂಡ ಹೆಂಡತಿಯ ಸಂಸಾರಧರ್ಮವೇನು, ಅತ್ತೆ-ಸೊಸೆ, ಅಣ್ಣ-ತಂಗಿಯ ಕರುಳಬಳ್ಳಿಯ ಅಗಾಧತೆ ಎಷ್ಟು, ಸಾಮಾಜಿಕ ನ್ಯಾಯ ನೀತಿಯ ಅನಿವಾರ್ಯತೆ ಯಾಕೆ ಎಂಬುದನ್ನೆಲ್ಲ ಮೌಲ್ಯಪ್ರಜ್ಞೆಯೊಂದಿಗೆ ಸತ್ವಪೂರ್ಣವಾಗಿ ತಿಳಿಹೇಳುವವುಗಳಾದವು.

'ಬೂಲ್ಯದ ಬಪ್ಪಂಗಾಯಿ' ಬುದ್ಧಿಮಾಂದ್ಯ ಯುವಕನೋರ್ವ ಗೇಲಿಗೀಡಾಗುತ್ತ, ತಮಾಷೆಯೆನಿಸುತ್ತಲೇ ವಿದ್ಯೆ ಕಲಿಯಬೇಕಾದ ಅಗತ್ಯ ವಯಸ್ಕರಿಗೂ ಇದೆ ಎಂಬ ಸತ್ಯವನ್ನು ಕಾಣಿಸುವದ್ದಾಗಿತ್ತು. ಇಂದಿಗೆ ದಶಕಗಳ ಹಿಂದೆಯೇ ವಯಸ್ಕ ಶಿಕ್ಷಣದ ಮಹತ್ವದ ಕನಸು ಕಂಡ ನಾಟಕಕಾರ ರಾಮಣ್ಣ. ಅದೇ ನಾಟಕವನ್ನು ಪರಿಷ್ಕರಿಸಿ 'ಈ ಪಿರಯೊಡ್ಲಾ ಬರವಾ?' ಎಂಬ ನಾಟಕವನ್ನು ಅಶೋಕನಗರದ ಶಾಲಾ ಸಹಾಯಾರ್ಥವಾಗಿ ದಿಗ್ದರ್ಶಿಸಿ, ಪ್ರದರ್ಶಿಸಿದರು. ಮುಂಡಪ್ಪ ಬೋಳೂರು, ಬಿ. ಶಿವರಾಮ ರಾವ್, ಬಿ. ನಾರಾಯಣ ಶೆಟ್ಟಿ ಮುಂತಾದವರು ಆಗ ಕಿರೋಡಿಯನರ ಜತೆಗಾರರು. ಮುಂದೆ ನಾರಾಯಣ ಶೆಟ್ಟಿಯವರ ಜತೆಗೂಡಿ 1972ರಲ್ಲಿ ' ಆರ್.ಎನ್. ಮಿತ್ರಮಂಡಳಿ' ಎಂಬ

**ರಾಮ ಕಿರೋಡಿಯನ್‌ರ ನಾಟಕ 'ಕಾಂಪರನ ಕಟಿಪಿಟಿ' ಉಡುಪಿ ಪೂರ್ಣಪ್ರಜ್ಞ ಸಂಧ್ಯಾ ಕಾಲೇಜು ವಿದ್ಯಾರ್ಥಿಗಳಿಂದ ಅಭಿನಯ. ನಿರ್ದೇಶನ ಮತ್ತು ಮುಖ್ಯ ಪಾತ್ರ ಮುದ್ದು ಮೂಡುಬೆಳ್ಳೆ, ಸಹನಟರು : ದಿನೇಂದ್ರ ಮಿಂಜೂರು, ರಾಜು ಮಡಿವಾಳ ಮತ್ತಿತರರು (1978). ಮಾರ್ಗದರ್ಶನ : ಪ್ರೊ. ಮುರಳೀಧರ ಉಪಾಧ್ಯ**

ಹವ್ಯಾಸಿ ನಾಟಕ ತಂಡವನ್ನು ಕಟ್ಟಿ ನಾಟಕ ಪ್ರದರ್ಶಿಸತೊಡಗಿದರು. ಮುಂಬೈ, ಬೆಳಗಾಂ, ಬೆಂಗಳೂರು, ಚೆನ್ನೈವರೆಗೂ ಅವರು ತನ್ನ ನಾಟಕ ತಂಡವನ್ನೊಯ್ದರು.

ಮುತ್ತುಮಾನಿಕಾ, ಮೂವೆರೆ ಮುತ್ತೇಸಿ, ತುಳುನಾಡ ತುಡರ್ ರಾಣಿಅಬ್ಬಕ್ಕ, ಕೋಟಿಚೆನ್ನಯ, ಕಾಂತಬಾರೆ ಬೂದಬಾರೆ, ಸರ್ಪಸಂಕಲೆ, ಬಿರ್ದ್‌ದ ಬೈರವೆರ್, ಕಾಂಪರನ ಕಟಿಪಿಟಿ, ದಿಕ್ಕ್ ತತ್ತಿ ಬೊಕ್ಕ, ಉಡಲ್ದ ಪುಂಚ, ಬೇಲಿದ ಪೂ, ಕಲ್ಜಿಗದ ಸಾವಿತ್ರಿ, ತುಳಸಿ ಜಲಂಧರ, ಸತ್ಯದ ಬೊಲ್ಪು ನಿತ್ಯಲಾ ನಲಿಪು, ಕಾನೂನ್ದ ಕಣ್ಣ್, ಮಗೆ ಮಂಜಣೆ, ಪಿಟ್ಪಾಸ್ ದೂಮೆ, ತುರ್ತುಪಜೀತಿ, ಮಗಧ ಸಿರಿಕನ್ನಿಗೆ, ದಗೆ, ಪಿರ್ಕಿಪಡೇಲು, ಕಂಡುಲುಲ್ಲೆರ್ ಜೋಕೆ–ಮುಂತಾದ 47 ತುಳು ಚಾರಿತ್ರಿಕ, ಸಾಮಾಜಿಕ, ಹಾಸ್ಯನಾಟಕಗಳನ್ನು ಬರೆದರು. ಅಲ್ಲದೆ ಕನ್ನಡದಲ್ಲೂ ಅಬ್ಬಕ್ಕರಾಣಿ, ಧನೇಶ್ವರ, ಮಂಕು ಮುಸುಕಿದ ಮಾನವ, ಝಾನ್ಸಿರಾಣಿ –ಮತ್ತಿತರ 5 ನಾಟಕ ರಚಿಸಿ ಪ್ರದರ್ಶಿಸಿದರು. ಬೆಂಗಳೂರು ಮತ್ತು ಮಂಗಳೂರು ಆಕಾಶವಾಣಿ ನಿಲಯಗಳಿಂದ ಮೊದಲು ಪ್ರಸಾರಗೊಂಡ ತುಳು ನಾಟಕಗಳು ('ಮಗೆಮಂಜಣೆ', ತುಳುನಾಡ ತುಡರ್ ರಾಣಿ ಅಬ್ಬಕ್ಕ, ಬೂಳ್ಯದ ಬಪ್ಪಂಗಾಯಿ, ಕೋಟಿಚೆನ್ನಯ, ಬಿರ್ದ್‌ದ ಬೈರವೆರ್, ಕಾಂಪರನ ಕಟಿಪಿಟಿ ಇತ್ಯಾದಿ) ಬಿ.ರಾಮಕಿರೋಡಿಯನ್‌ರವು.

ರಾಮ ಕಿರೋಡಿಯನ್ನರ ಟೈಲರಂಗಡಿ 'ಆರ್.ಕೆ. ಟೈಲರ್ಸ್' ಎಂಬುದು ನಾಟಕಾಸಕ್ತ ಯುವಕರಿಗೊಂದು ಕೂಟದ ಕಟ್ಟೆಯಾಗಿತ್ತು. ಅನ್ಯಾನ್ಯ ಕ್ಷೇತ್ರಗಳ ಬಿ. ಮೋಹನ್‌ರಾವ್, ಎಲ್ಲೂರು ಉಮೇಶ್ ರಾವ್, ಎ.ಪಿ. ರಾವ್, ದಿ. ನಾರಾಯಣ ಶೆಟ್ಟಿ, ಎಸ್.ಎಸ್. ಐತಾಳ್ ಮುಂತಾದ ಹೆಸರಾಂತ ಕಲಾವಿದರ ಆತ್ಮೀಯ ವಲಯಕ್ಕೆ ಸೇರಿಕೊಂಡ ಕಿರೋಡಿಯನ್ ಅವರಂತೆಯೇ ಖ್ಯಾತರಾದರು; ಮುಂದಿನ ಪೀಳಿಗೆಯ ರಂಗಾಸಕ್ತರಿಗೆಲ್ಲ 'ಮಾಸ್ಟ್ರ' ಆದರು. ವಸಂತ ಕದ್ರಿ, ಚರಣ್ ಮುಂತಾದವರ ಸಂಗೀತ, ಬಾಲಕೃಷ್ಣ ಕದ್ರಿ, ರೋಹಿದಾಸ್ ಕದ್ರಿ, ಉಮೇಶ್ ಅಮೀನ್, ನಾರಾಯಣ ಅಚಾರ್, ಎಂ.ಎಸ್. ರಾವ್, ಶರತ್‌ಹೊಳ್ಳ, ಗೋಪಿನಾಥ ಗುಲ್ವಾಡಿ, ಜೆ.ರವೀಂದ್ರ, ವಿ.ಜಿ. ಪಾಲ್, ತಮ್ಮ ಲಕ್ಷ್ಮಣ, ಮುಂಡಪ್ಪ ಬೋಳೂರು (ಎಂಭತ್ತರ ದಶಕದ ಬಳಿಕ ಈ ಲೇಖಕ) – ಮುಂತಾದವರೆಲ್ಲ ಕಿರೋಡಿಯನ್ ಬಳಗದಲ್ಲಿ ಒಂದಲ್ಲೊಂದು ಬಗೆಯಲ್ಲಿ ಪಾಲ್ಗೊಂಡು ಗೆಳೆಯರ ಬಳಗ ಬಲಿತಿತ್ತು.

ತುಳುಭಾಷೆಯ ಬಗೆಗಾಗಲೀ, ತುಳುನಾಟಕಗಳ ಬಗೆಗಾಗಲೀ ಸಮಾಜದಲ್ಲಿ ತೀರಾ ಅನಾದರವಿದ್ದ ಆ ಕಾಲದಲ್ಲಿ ಈ ಭಾಷೆಗೂ ತುಳುನಾಟಕಕ್ಕೂ ಸಾಮಾಜಿಕವಾಗಿ ಗೌರವದ ನೆಲೆಗಟ್ಟು ಕೆಮ್ತೂರರಿಂದ ಪ್ರಾರಂಭವಾಗಿ ಕಿರೋಡಿಯನ್‌ರಲ್ಲಿ ಪರಿಪೂರ್ಣತೆ ಪಡೆದುಕೊಂಡಿತು. ಸ್ತ್ರೀಪಾತ್ರಗಳನ್ನು ಪುರುಷರೇ ಹೆಚ್ಚಾಗಿ ನಿರ್ವಹಿಸುತ್ತಿದ್ದ ಆ ಕಾಲದಲ್ಲಿ ಯಶೋಧರಾ, ಸರೋಜಿನಿ ಶೆಟ್ಟಿ, ರೂಪಾ – ಮುಂತಾದ ಕಲಾವಿದೆಯರು ಕಿರೋಡಿಯನ್‌ರ ನಾಟಕಗಳಲ್ಲಿ ಪಾತ್ರ ವಹಿಸಲು ಬಂದು ಸಂತೃಪ್ತರೂ, ಪ್ರಬುದ್ಧರೂ ಆದರು.

ವೃತ್ತಿಯಲ್ಲಿ 'ಮಾಸ್ಟರ್ ಟೈಲರ್' ಆಗಿದ್ದ ಕಿರೋಡಿಯನ್‌ರು ನೃತ್ಯದ ಉಡುಪಿನ 'ಸ್ಪೆಶಾಲಿಸ್ಟ್' ಎನಿಸಿದ್ದರು. ನಾಟಕದ ಸ್ಟೇಜ್‌ಸೆಟ್ಟಿಂಗ್, ಬ್ಯಾಕ್‌ಸ್ಟೇಜ್ ಕೆಲಸಗಳು ಮುಂತಾದ ವಿವಿಧ ಅಂಗಗಳು ಅವರಿಗೆ ಕರತಲಾಮಲಕ. ಹಾರ್ಮೋನಿಯಂ ವಾದನ, ತಬಲಾ ನುಡಿಸುವುದರಲ್ಲೂ ನಿಷ್ಣಾತರಾಗಿದ್ದರು.

ತುಳುನಾಡ ತುಡರ್ ರಾಣಿ ಅಬ್ಬಕ್ಕ, ಸರ್ಪಸಂಕಲೆ, ಬಿರ್ದ್‌ದ ಬೈರವೆರ್, ಕಾಂಪರನ ಕಟಿಪಿಟಿ- ಮುಂತಾದವು ಪ್ರತಿಷ್ಠಿತ ಪ್ರಶಸ್ತಿ ಪಡೆದ ನಾಟಕಗಳು. ತುಳುವಿನಲ್ಲಿ ಚಲನಚಿತ್ರ ನಿರ್ಮಾಣ ಆರಂಭಗೊಂಡ ಮೇಲೆ ಆ ಕಡೆ ಹೆಚ್ಚು ಒಲವಿಲ್ಲದಿದ್ದರೂ ತನ್ನ 'ಸರ್ಪಸಂಕಲೆ' ನಾಟಕ ಸಿನಿಮಾ ಆಗಲು ಒಪ್ಪಿದರು. ದುರದೃಷ್ಟವಶಾತ್ ಅದು ಬಿಡುಗಡೆ ಕಾಣಲಿಲ್ಲ. ಕಿರೋಡಿಯನ್‌ರು ಬಿಸತ್ತಿಬಾಬು, ಬೊಳ್ಳಿದೋಟ, ನ್ಯಾಯೊಗಾದ್ ಎನ್ನ ಬದ್ಕ್, ಸಪ್ಟೆಂಬರ್ 8, ಬಂಗಾರ್ ಪಟ್ಲೇರ್, ಸರ್ಪಸಂಕಲೆ ಚಿತ್ರಗಳಿಗೆ ಹಾಡುಗಳನ್ನು ಬರೆದರು. ರೇಡಿಯೋದಲ್ಲಿ ಆ ಹಾಡುಗಳು ಬರುವಾಗಲೆಲ್ಲ ಆಲಿಸಿದ ಜನತೆ ಆ ಭಾಷೆ, ಭಾವ ಮಾಧುರ್ಯಕ್ಕೆ ಮಾರುಹೋದವರೇ.

ತುಳು ಶಬ್ದಕೋಶ ಯೋಜನೆಗೆ ಓರ್ವಭಾಷಾ ತಜ್ಞರಾಗಿಯೂ ಸಹಕರಿಸಿದ ಕಿರೋಡಿಯನ್‌ರ ಹಿರಿದಾದ ಸೇವೆಗೆ ಸಂದ ಪಶಸ್ತಿ ಸಮ್ಮಾನಗಳೂ ನೂರಾರು. ಮಂಗಳೂರು ತುಳುಕೂಟ 1973ರಲ್ಲಿ ನೀಡಿದ ಸನ್ಮಾನದಿಂದ ತೊಡಗಿ ಮುಂಬಯಿ, ಬೆಹರಿನ್ ಸೇರಿದಂತೆ ಅಸಂಖ್ಯ ಸಂಘಟನೆಗಳಿಂದ ಸಮ್ಮಾನ; 1996ರಲ್ಲಿ ಕರ್ನಾಟಕ ತುಳು ಸಾಹಿತ್ಯ ಅಕಾಡಮಿಯ ಪ್ರಥಮ ಗೌರವ ಪ್ರಶಸ್ತಿ, 1995ರಲ್ಲಿ ಉಡುಪಿ ರಂಗಭೂಮಿಯ ತ್ರಿಂಶತಿ ಸಮಾರಂಭದಲ್ಲಿ 'ತುಳುರಂಗರತ್ನಾಕರ' ಎಂಬ ಬಿರುದು, ಅದೇ ವರ್ಷ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿಯೂ ಅವರದಾಯಿತ್ತು.

ಸ್ಥಳೀಯ ಸಾಮಾಜಿಕ ಸಂಘಟನೆಗಳ ಕಾರ್ಯಕರ್ತರಾಗಿಯೂ ದುಡಿದ ಬಿ. ರಾಮ ಕಿರೋಡಿಯನ್ ತನ್ನ ಸರಳ ಸಜ್ಜನಿಕೆಯ ಬದುಕಿನ ಸಾರ್ಥಕತೆಯೊಂದಿಗೆ ಸಪ್ಟೆಂಬರ್ 5, 1997ರಂದು ತನ್ನ 75ರ ವಯಸ್ಸಿನಲ್ಲಿ ಅಸ್ತಂಗತರಾದರು, ಅಶೋಕನಗರದ ರಸ್ತೆಯೊಂದಕ್ಕೆ ಅವರ ಹೆಸರನ್ನಿರಿಸಲಾಗಿದೆ,

ತಂದೆಯ ಸರಳ ಸಜ್ಜನಿಕೆ, ಕಲಾಭಿರುಚಿಯನ್ನು ಅನುಕರಿಸುತ್ತಲೇ ಬೆಳೆದ ಮಕ್ಕಳಲ್ಲಿ ಹಿರಿಯನಾದ ಜನಾರ್ದನ ಕಿರೋಡಿಯನ್ ಪದವೀಧರನಾಗಿ ಪಶುಸಂಗೋಪನಾ ಇಲಾಖಾ ಉದ್ಯೋಗಿಯಾದರೆ, ಎರಡನೇ ಮಗ ನರೇಂದ್ರರಿಗೆ ಹಳೆಯಂಗಡಿಯಲ್ಲಿ ತಂದೆಯಂತೇ ಟೈಲರ್ ಉದ್ಯೋಗ, ಮೂರನೆಯಾತ ನವೀನ್ ಕಾರ್ಪೋರೇಶನ್ ಬ್ಯಾಂಕ್ ಉದ್ಯೋಗಿ, ನಾಲ್ಕನೇ ಪುತ್ರ ಅಶೋಕ್ ಬೈಕಂಪಾಡಿಯಲ್ಲಿ ಖಾಸಗಿ ಕಂಪೆನಿ ನೌಕರ. ಜನಾರ್ದನ್, ನವೀನ್ ಜೋಡಿಯ 'ಅಶೋಕ್ ಮ್ಯೂಸಿಕ್' ಸಂಗೀತ ಕಾರ್ಯಕ್ರಮ ನೀಡಿ ಹೆಸರಾದವರು. ನರೇಂದ್ರ ಕಿರೋಡಿಯನ್‌ರ ಕಲೆಗಾರಿಕೆಯು, ರಂಗವಿನ್ಯಾಸ, ನೃತ್ಯ ವೇಷಭೂಷಣ ಇತ್ಯಾದಿಯಲ್ಲಿ ಮುಂದುವರಿದಿದೆ.

ಕಿರೋಡಿಯನ್‌ರ ಕೊನೆಯ ನಾಟಕ 'ದೈರೊಗೊಂಜಿ ದೇವೆರ್' ಎಂಬತ್ತರ

ದಶಕದಲ್ಲಿ ಮಂಗಳೂರು ಪುರಭವನದಲ್ಲಿ ಪ್ರದರ್ಶನಗೊಂಡಿತು. ಇದರಲ್ಲಿ ವಿವಿಧ ನಾಟಕ ತಂಡಗಳ ನಲವತ್ತು ಮಿಕ್ಕ ಪ್ರಸಿದ್ಧ ಕಲಾವಿದರು ಪಾತ್ರ ವಹಿಸಿದ್ದು ಆ ದಶಕದ ವಿಶೇಷವಾಗಿತ್ತು.

* * *

ಕಲಾಭವನ (ರಿ) ಮಂಗಳೂರು ಆಶ್ರಯದಲ್ಲಿ 'ಅಖಿಲ ಕರ್ನಾಟಕ ಕನ್ನಡ ನಾಟಕ ಸ್ಪರ್ಧೆಗಳು ಸುಮಾರು 1967ರಿಂದ ಅನೇಕ ವರ್ಷ ಮಂಗಳೂರಿನಲ್ಲಿ ಜರಗಿದವು. ಈ ಸಂಸ್ಥೆಯ ಅಧ್ಯಕ್ಷರಾಗಿದ್ದವರು ಮಧುಸೂದನ್ ಡಿ.ಕುಶೆ ಇದರ ಉತ್ಸಾಹೀ ರೂವಾರಿಗಳಾಗಿದ್ದ ಜತೆ ಕಾರ್ಯದರ್ಶಿಗಳಿಬ್ಬರು ಎಸ್.ಆರ್. ಬಾಲಗೋಪಾಲ್ (ಬಾಲ್ಕೋ ಸ್ಟುಡಿಯೋ ಮಾಲಕರು) ಮತ್ತು ಅವರ ಬಂಧು (ಭೀಷ್ಮ, ಮಹಾರಥಿ ಕರ್ಣ ಮುಂತಾದ ಪ್ರಸಿದ್ಧ ನಾಟಕಗಳ ಕರ್ತೃ) ಎಂ. ಕೃಷ್ಣಗೋಪಾಲ್. ಆ ವೇಳೆಗಾಗಲೇ ತುಳುನಾಟಕ ಕ್ಷೇತ್ರದ ಖ್ಯಾತನಾಮ ಹಿರಿಯರು ನಾಟಕ ತಂಡಗಳನ್ನು ಸೃಜಿಸಿಕೊಂಡು ನಾಟಕ ವಾಡುತ್ತಿದ್ದರು. ಈ ಸ್ಪರ್ಧೆಯ ಒಳಪ್ರವೇಶಿಸಬೇಕೆಂದು ಬಿ. ರಾಮ ಕಿರೋಡಿಯನ್‌ರಂಥ ನಾಟಕಕಾರರು ಪ್ರಯತ್ನಿಸಿದರೂ ತುಳುವಿಗೆ ಪ್ರವೇಶ ದೊರೆಯದಾಗ ಓರ್ವ ಸಂಘಟಕನ ನೆಲೆಯಲ್ಲಿ ಕೆ. ನಾರಾಯಣ ಶೆಟ್ಟರು ಕಿರೋಡಿಯನ್‌ರ ನೆರವಿಗೆ ಬಂದರಂತೆ ಹಾಗೆ ಸ್ಥಾಪನೆಯಾದುದೇ ಆರ್.ಎನ್. ಮಿತ್ರಮಂಡಳಿ.

ಮುಂದೆ ಕಿರೋಡಿಯನ್‌ರ ಈ ತಂಡ ಕನ್ನಡ ಮತ್ತು ತುಳುವಿನ ಹಲವಾರು



ರಾಮ ಕಿರೋಡಿಯನ್‌ರ 'ಧನೇಶ್ವರ' ನಾಟಕ ವಸಂತ ಕದ್ರಿ ಅವರ ಸಂಯೋಜನೆಯಲ್ಲಿ ಕದ್ರಿಯಲ್ಲಿ ಪ್ರದರ್ಶನಗೊಂಡಾಗ. ಗಣೇಶ್ ಕುಮಾರ್ (ಸ್ತ್ರೀಪಾತ್ರ), ಬಾಲಕೃಷ್ಣ ಕದ್ರಿ, ಎಂ.ಎಸ್. ರಾವ್ ಮತ್ತಿತರರು **(1980)**

ನಾಟಕಗಳನ್ನು ಆರ್.ಎನ್. ಮಿತ್ರಮಂಡಳಿ ಮೂಲಕ ನಾಡಿನಾದ್ಯಂತ ಪ್ರದರ್ಶಿಸಿ ಮನೆ ಮಾತಾಯಿತು.

* * *

ಅವರು 1972ರಲ್ಲಿ ಮಿತ್ರ ಆರ್. ನಾರಾಯಣ ಶೆಟ್ಟಿ (ಎಂಬತ್ತರ ದಶಕದ 'ಸತ್ಯ ಬತ್ತಲೆ' ನಾಟಕದ ಲೇಖಕರು; ಅದು ಮುಂದೆ 'ಬಂಗಾರ್ ಪಟ್ಲೇರ್' ಹೆಸರಲ್ಲಿ ಚಲನಚಿತ್ರವಾಯಿತು) ಇವರ ಜೊತೆಗೂಡಿ 'ಆರ್.ಎನ್. ಮಿತ್ರ ಮಂಡಳಿ' ಎನ್ನುವ ಹವ್ಯಾಸಿ ನಾಟಕ ತಂಡ ಕಟ್ಟಿ ಸ್ವತಃ ನಾಟಕಗಳನ್ನು ಪ್ರದರ್ಶಿಸಿದರು. 'ಸರ್ಪ ಸಂಕಲೆ' ಚಲನಚಿತ್ರವಾಗಿ ಚಿತ್ರಿಕರಣಗೊಂಡರೂ ಬಿಡುಗಡೆಯಾಗಲಿಲ್ಲ. ಹಲವು ಸಿನಿಮಾಗಳಿಗೂ ಚಿತ್ರಕತೆ, ಗೀತರಚನೆ ಮಾಡಿರುವ ಕಿರೋಡಿಯನ್ನರ 'ಮೂವೆರೆ ಮುತ್ತೇಸಿ'–ದಾಖಲೆ ಪ್ರದರ್ಶನದ ಪ್ರಖ್ಯಾತ ನಾಟಕ.

**ದಿ. ಕೆ. ನಾರಾಯಣ ಶೆಟ್ಟಿ – ಮೊದಲ ತುಳುರಂಗ ಪ್ರೋತ್ಸಾಹಕರು**

ಆರ್.ಎನ್. ಮಿತ್ರಮಂಡಳಿಯ 'ಎನ್' ಎಂದರೆ ನಾರಾಯಣ ಶೆಟ್ಟರು 'ಸತ್ಯ ಬತ್ತಲೆ' ನಾಟಕದ ಕರ್ತೃ. ಎಪ್ಪತ್ತು–ಎಂಬತ್ತರ ದಶಕದಲ್ಲಿ ಸದಾ ನಾಟಕ ಕೂಟಗಳಲ್ಲೇ ಸಕ್ರಿಯರಾಗಿದ್ದವರು. ಆರಂಭದಲ್ಲಿ ಹೆಚ್ಚಾಗಿ ಸ್ತ್ರೀಪಾತ್ರ ನಿರ್ವಹಿಸುತ್ತಿದ್ದರು. ಇವರ ನೇತೃತ್ವದಲ್ಲಿ ಕಿರೋಡಿಯವರ ಧನೇಶ್ವರ; (ಕನ್ನಡ/ತುಳು) ದಿಕ್ಕ್ ತತ್ತಿ ಬೊಕ್ಕ, 'ತುಳುನಾಡ ತುಡರ್' ಮುಂತಾದ ನಾಟಕಗಳು 70ರ ದಶಕದಲ್ಲಿ ಜಿಲ್ಲಾ ಮಟ್ಟದ ತುಳು ನಾಟಕ ಸ್ಪರ್ಧೆಗಳಲ್ಲಿ ಪ್ರಥಮ ಬಹುಮಾನಗಳಿಸಿದ್ದವು. ಕಿರೋಡಿಯನ್ನರ 'ಬಿರ್ದ್‌ದ ಬೈರವೆರ್' ನಾಟಕವನ್ನು ನಾರಾಯಣ ಶೆಟ್ಟರೇ ಮುತುವರ್ಜಿ ವಹಿಸಿ, ಶಿಮಂತೂರು ನಾರಾಯಣ ಶೆಟ್ಟರಿಂದ ಯಕ್ಷಗಾನ ಪ್ರಸಂಗ ಬರೆಯಿಸಿ ಕಲಾವಿದರನ್ನು ಸೇರಿಸಿ ಯಕ್ಷಗಾನ ಪ್ರದರ್ಶನವನ್ನೂ ಏರ್ಪಡಿಸಿ ಯಶಸ್ವಿಯಾದವರು. 'ಸತ್ಯಬತ್ತಲೆ' ನಾಟಕವೇ ಮುಂದೆ ಡಾ। ರಿಚಾರ್ಡ್ ಕ್ಯಾಸ್ಟಲಿನೊ ಅವರಿಂದ ನಿರ್ಮಾಣಗೊಂಡ ಚಲನಚಿತ್ರ 'ಬಂಗಾರ್ ಪಟ್ಲೆರ್'ನ ಮೂಲ.

* * *

ಆ ಕಡೆ ಕೆಮ್ತೂರರು ಈ ಕಡೆ ಕರಾವಳಿ ದಕ್ಷಿಣ ಭಾಗದಲ್ಲಿ ಕಿರೋಡಿಯನ್, ಟೇಲರ್, ಪಾಂಡೇಶ್ವರ್ ಮುಂತಾದವರ ನಾಟಕ ತಂಡಗಳು ಸಕ್ರಿಯರಾಗಿರುವಂತೆಯೇ ಆ ಪ್ರಭಾವದಿಂದ ಅವಿಭಜಿತ ಜಿಲ್ಲೆಯ ಅಲ್ಲಲ್ಲಿ ಕೆಲವರ ತಂಡಗಳು ವರ್ಷವರ್ಷ ವಾರ್ಷಿಕೋತ್ಸವದ ವೇಳೆ ತುಳುನಾಟಕವಾಡುವ ಹುರುಪಿಗೆದ್ದರು. ಕಲಾಕಿರಣ್ ಬೈಲೂರು (ಉಡುಪಿ), ಕೆ.ಎಸ್. ಭಂಡಾರಿ ನಿಟ್ಟೂರು ಬಳಗ, ರಾಯಲ್ ಫ್ರೆಂಡ್ಸ್ ಬೆಳ್ತಂಗಡಿ (ರವಿರಾಜ ಜೈನ್), ಕಾಸರಗೋಡು ಬೇಕಲ ರಾಮ ನಾಯಕ, ಮೂಡಬಿದಿರೆಯ

ಚದುರಂಗ, ಮೂಲ್ಕಿಯಲ್ಲಿ ರಾಮ್‌ಮಾಸ್ಟರ್, ಸುವರ್ಣ ಆರ್ಟ್ಸ್, ಕಟಪಾಡಿಯ ಕ್ಯಾಥರೀನ್ ರಾಡ್ರಿಗಸ್‌ರ ಕಲಾವಾಹಿನಿ (ರಿ), ಕಟಪಾಡಿ ಶಂಕರ ಪೂಜಾರಿಯವರ ನರ್ತಕಿ ಕಲಾರಂಗ ಮುಂತಾದ ಯುವ ಸಂಘಗಳು ಎಪ್ಪತ್ತರ ದಶಕಾರಂಭದಲ್ಲೇ ರಂಗ ಚಟುವಟಿಕೆ ನಾಟಕ ಪ್ರದರ್ಶನ, ಸ್ಪರ್ಧೆಗಳನ್ನು ನಡೆಸತೊಡಗಿದರು.

ಮಂಗಳೂರು ಭಾಗದಲ್ಲಿ ಅತ್ತಾವರ ಫ್ರೆಂಡ್ಸ್ ಸರ್ಕಲ್, ಕರ್ನಾಟಕ ಜೋಲಿ (ಕೆ.ಜೆ.) ಆರ್ಟ್ಸ್, ಕೊಡಿಯಾಲ್‌ಬೈಲ್, ಜನಶಕ್ತಿ ಕಲಾವೃಂದ ಉಳ್ಳಾಲ, ನಟೇಶ ಕಲಾವೃಂದ, ಮಾರಿಯಮ್ಮ ನಾಟಕ ಸಭಾ, ಗ್ರಾಮ ಸೇವಾ ಸಂಘ ಬಜ್ಪೆ ವೀಣಾ ಸಂಗೀತ ನಾಟಕ ಸಭಾ, ವಿದ್ಯೋದಯ ಗೇಮ್ಸ್‌ಕ್ಲಬ್ ಹ್ಯೊಗೆಬಜಾರ್, ಓಂ ಶಕ್ತಿ ನಾಟಕ ಸಭಾ, ತುಳುನಾಡ ನಾಟಕ ಸಭಾ, ಉರ್ವ ಬ್ರದರ್ಸ್, ನವೋದಯ ಕಲಾವೃಂದ, ಸಹೋದರ ಕಲಾವೃಂದ, ಜೈಭಾರತಿ ತರುಣವೃಂದ, ಜಪ್ಪಿನಮೊಗರು ಗ್ರಾಮ ಯುವಕ ಮಂಡಲ, ವಿದ್ಯಾವಿನಾಯಕ ಯುವಕ ಮಂಡಲ ಹಳೆಯಂಗಡಿ, ಭೋಜ ಸುವರ್ಣರ ನಟರಾಜ ನಾಟಕ ರಂಗ, ಬೆನಕ್ ಆರ್ಟ್ಸ್ – ಮುಂತಾದವುಗಳನ್ನು ಹೆಸರಿರಬಹುದು. ಜನಶಕ್ತಿ ಕಲಾವೃಂದ ಉಳ್ಳಾಲ ಇವರು ಮೊಸರುಕುಡಿಕೆ ಸಂದರ್ಭಕ್ಕೆ 8–9–1966ರಂದು 'ಮರ್ಲ್ ಮನಸ್' ಎಂಬ ನಾಟಕ ಪ್ರದರ್ಶಿಸಿದರೆ 1947ರಲ್ಲೇ ಮಂಗಳೂರಲ್ಲಿ ಮೊದಲು ರಂಗಸಜ್ಜಿಕೆ ಒದಗಿಸಲು ಆರಂಭಗೊಂಡಿದ್ದ ಕೆ.ಜೆ. ಆರ್ಟ್ಸ್ ಎಂ.ಆರ್. ಶೆಟ್ಟಿ ಜಮ್‌ಶೆಡ್‌ಪುರ ಇವರ 'ಮಾಮಿ ಮರ್ಮಲೆ ಮೇಲ' ಎನ್ನುವ ನಾಟಕ ಪ್ರಯೋಗಿಸಿದ್ದು 1965ರ ವೇಳೆಗೆ.

**ಎಂ. ವಿಶ್ವನಾಥ್ (1924)**

ಹಿರಿಯ ನಾಟಕಕಾರ, ನಿರ್ದೇಶಕ, ನಟರಾದ ಅತ್ತಾವರ ಕಾಡಬಿತ್ತಿಲ್‌ನ ಎಂ. ವಿಶ್ವನಾಥರು ಎಸ್.ಆರ್. ಹೆಗ್ಡೆಯವರ ಜತೆ ಸೇರಿ 1970ರಲ್ಲಿ ಮಂಗಳೂರಿನಲ್ಲಿ ತುಳುಕೂಟದ ಸ್ಥಾಪನೆಯ ಹಿನ್ನೆಲೆಯಲ್ಲಿ ದುಡಿದು ಸ್ಥಾಪಕ ಕಾರ್ಯದರ್ಶಿಯಾಗಿದ್ದರು. ಹೈಸ್ಕೂಲು ಶಿಕ್ಷಣಾವಧಿಯಲ್ಲೇ ನಾಟಕದಲ್ಲಿ ನಟನೆ ಆರಂಭಿಸಿದರು. ಸುಮಾರು 25 ತುಳು, ಕನ್ನಡ ನಾಟಕ ರಚಿಸಿರುವರು ನಟನೆ ಮತ್ತು ನಿರ್ದೇಶನದಲ್ಲೂ ಪರಿಶ್ರಮಿ.

ಪ್ರಥಮ ಕನ್ನಡ ನಾಟಕ 'ಬದುಕು ಬವಣೆ' ಬೆಂಗಳೂರು ಆಕಾಶವಾಣಿಯಿಂದ ಪ್ರಸಾರವಾದರೆ ನಂತರದ 'ಸಾದಿ ತತ್ತ್‌ಂಡಲಾ ಪಿರಬತ್ತೆರ್' ತುಳುನಾಟಕ ಮಂಗಳೂರು ಆಕಾಶವಾಣಿಯಿಂದ ಪ್ರಸಾರಗೊಂಡಿತು. ಡಾ. ಸಾವಿತ್ರಿ ಎಂ.ಬಿ.ಬಿ.ಎಸ್., 'ಅಜ್ಜೆರೆನ ಮದಿಮೆ', 'ಬಂಗ್ರಿ ಗೊಬ್ಬು', 'ಪೊಸ ಮದಿಮಯೆ', 'ನಂಜಿದ ನಾಲಾಯಿ', 'ಬಡವೆರೆ ಬಂಧು' ಮುಂತಾದ 25ಕ್ಕೂ ಮಿಕ್ಕ ನಾಟಕಗಳಲ್ಲಿ 'ಬಂಗ್ರಿ ಗೊಬ್ಬು' ನಾಟಕ ಆ ಕಾಲದಲ್ಲೇ 100ಕ್ಕೂ ಮಿಕ್ಕ ಪ್ರದರ್ಶನ

ಕಂಡಿತ್ತು. 'ಬೊಲ್ಪುದಾಂತಿ ಬದ್ಕ್' ರತ್ನವರ್ಮ ಹೆಗ್ಗಡೆ ಪ್ರಶಸ್ತಿ ಪಡೆದಿತ್ತು. ಆರೋಗ್ಯ ಇಲಾಖಾ ಸೇವೆಯಿಂದ 1982ರಲ್ಲಿ ನಿವೃತ್ತರಾಗಿ, ದ.ಕ. ಜಿಲ್ಲಾ ಗಾಣಿಗರ ಯಾನೆ ಸಫಲಿಗರ ಸಂಘದ ಅಧ್ಯಕ್ಷತೆಯಂತಹ ವಿವಿಧ ಸಂಘಟನೆಗಳಲ್ಲಿ ಸಕ್ರಿಯರಾಗಿ ದುಡಿದ ಹಿರಿಯರು.

**ಕೆ.ಬಿ. ಭಂಡಾರಿ (1927–1987) – 'ಸ್ನೇಹರಂಗ' ಬಳಗ**



ನಾಟಕ ರಚನೆ, ನಿರ್ದೇಶನ ಮಾತ್ರವಲ್ಲದೆ ಪರದೆ, ಸೆಟ್ಟಿಂಗ್, ವೇಷಭೂಷಣ ಮುಂತಾಗಿ ರಂಗಭೂಮಿಯ ಎಲ್ಲ ಅಂಗಗಳಲ್ಲೂ ಸವ್ಯಸಾಚಿಯಾಗಿದ್ದ ಪ್ರತಿಭಾಶಾಲಿ ಕೆ.ಬಿ. ಭಂಡಾರಿ. (ಕೋಟೆಕಾರ್‌ಗುತ್ತು ಬಾಲಕೃಷ್ಣ ಭಂಡಾರಿ) 1962ರಿಂದ ತೊಡಗಿ ರಾಣಿ ಅಬ್ಬಕ್ಕದೇವಿ, ಕೋಟಿಚೆನ್ನಯ್ಯ, ಪಂಥ, ಬೆಳವಡಿ ಮಲ್ಲಮ್ಮ, ರಾಣಾ ಪ್ರತಾಪ ಮುಂತಾಗಿ ಅವರು ಬರೆದ ನಾಟಕಗಳಲ್ಲಿ ಪ್ರೌಢವಾದ ಭಾಷೆ, ಸಶಕ್ತ ಸಂಭಾಷಣೆ, ಬಿಗುವಾದ ಕಥಾಹಂದರವಿದೆ. ದಳವಾಯಿ ದುಗ್ಗಣ್ಣ, ವಿಟ್ಲದ ವೀರವರ್ಮೆ, ಸ್ವಾಮಿಭಕ್ತಿ, ಕಲ್ಯಾಣಪ್ಪೆ–ಕಣ್ಣಿತ್ತಿ ಕುರುಡೆ, ಚೊಟ್ಟನ ಮದ್ಮೆ, ತೆರಿಯಂದಿ ತಪ್ಪು, ಬಿನ್ನೆರೆ ಗಡಿಬಿಡಿ, ಬದಿತ್ತ ಬಾಜೆಲ್, ಮುಗಲ್‌ರಾಜೆ, ಅನುರಾಧ, ರೌಡಿ ರಾಜಣ್ಣೆ, ಪರಬನ ಬೊಡೆದಿ, ಬಂಗಾರ್ ಬಾಲೆ, ಕಪ್ಪುಪೊಣ್ಣು – ಮುಂತಾದ ಸಾಮಾಜಿಕ ನಾಟಕಗಳು.

'ತೈಮೂರ್‌ಖಾನ್', 'ಭೂತಾಳ ಪಾಂಡ್ಯೆ', 'ಪಂಜದ ಪೂವನಪೂಂಜೆ', 'ಉಪಕಾರದ ನೆಂಪು' ಇತ್ಯಾದಿ. 'ದಳವಾಯಿ ದುಗ್ಗಣ್ಣ' ನಾಟಕವನ್ನು ಮುಂದೆ ಭಂಡಾರಿಯವರು ಕರ್ನಾಟಕ ಮೇಳದವರ ಟೆಂಟ್ ಆಟಕ್ಕಾಗಿ ನೀಡಿದರು. ಅಲ್ಲೂ ಅದು ಪ್ರಸಿದ್ಧವಾಯಿತು. ಇಷ್ಟಲ್ಲದೆ ಕನ್ನಡದಲ್ಲಿ – ಶಿವಭಕ್ತೆ ಚೆನ್ನಮ್ಮ, ಕನ್ನಗಿ, ರಾಣಿ ಅಬ್ಬಕ್ಕದೇವಿ, ಸರ್ಪಶಕ್ತಿ, ರಾಣಾಪ್ರತಾಪಸಿಂಹ, ಛತ್ರಪತಿ ಶಿವಾಜಿ, ಮಧುಮತಿ, ಸ್ವಾತಂತ್ರ್ಯವೀರ, ಕಲ್ಯಾಣಸ್ವಾಮಿ, ಬಾಜೀರಾಯ ದೇಶಪಾಂಡೆ ಮುಂತಾದ 21 ನಾಟಕಗಳನ್ನು ಬರೆದ ಕೆ.ಬಿ. ಭಂಡಾರಿ ಪ್ರಖರ ಪ್ರತಿಭೆ.

ಕೋಟೆಕಾರಿನಲ್ಲಿ 'ಗೆಳೆಯರ ಬಳಗ' (ಬಳಿಕ 'ಸ್ನೇಹರಂಗ') ಎನ್ನುವ ತನ್ನ ತಂಡ ದಿಂದ ಭಂಡಾರಿಯವರು ತನ್ನ ನಾಟಕಗಳನ್ನುಆಡಿಸುತ್ತಿದ್ದರು. ಆದರೆ ಅಷ್ಟೇ ಅಲ್ಲ, ಕೋಟೆಕಾರು ವಿಟ್ಲ, ಉಜಿರೆಯ ಬುನಾದಿ ಶಿಕ್ಷಣ ಶಾಲೆ (ಇಂದಿನ ಗುರುವನ), ಪುತ್ತೂರು, ಮಂಗಳೂರು, ಉಳ್ಳಾಲದ ಭಾರತ ಹೈಸ್ಕೂಲು, ಮೊಗವೀರ ವಿದ್ಯಾರ್ಥಿ ಸಂಘದ ಬೋಳೂರು – ಹೀಗೆ ಎಷ್ಟೊಂದು ಕಡೆ ಕೆ.ಬಿ. ಭಂಡಾರಿ ಸುತ್ತಾಡುತ್ತಾ ತನ್ನ ಹತ್ತಾರು ನಾಟಕಗಳನ್ನು ಆಡಲು ಅಲ್ಲಿನವರಿಗೆ ನಾಟಕ ತರಬೇತಿ ಕೊಟ್ಟರು, ಹೊಸ ಕಲಾವಿದರನ್ನು ರೂಪುಗೊಳಿಸಿದರು. ಅದರೊಂದಿಗೆ ಪರದೆಗಳು, ಸೆಟ್ಟಿಂಗ್ ಸಾಮಗ್ರಿ

ಬಾಡಿಗೆಗೆ ಕೊಡುತ್ತಿದ್ದರು. ಬ್ರಹ್ಮಚಾರಿಯಾಗಿದ್ದ ಅವರು ವ್ಯವಹಾರದಲ್ಲಿ ಶಿಸ್ತಿನ ಸಿಪಾಯಿ ಆದರೆ ವಿಶಿಷ್ಟ ಹಾಸ್ಯಪ್ರಜ್ಞೆ, ನಗೆಯುಕ್ಕಿಸುವ ರೂಪದಂತಹ ಭಾಷೆಯ ಮಾತುಗಳು, ಅರ್ಥಗರ್ಭಿತ ಹಾಡುಗಳು.

ಮೊದಲಿಗೆ ಶಾಲಾ ನಾಟಕಕ್ಕೊಂದು ಕಿರಿಯ ಸ್ವರೂಪದಲ್ಲಿದ್ದ ಭಂಡಾರಿಯವರ ನಾಟಕಗಳು ಅವರ ಬಳಗದ ರಾಘವ ಉಳ್ಳಾಲರ ನೆರವಿನಿಂದ 3 ಗಂಟೆಗಳ ಪೂರ್ಣ ಸ್ವರೂಪ ಪಡೆದವು. ಕೆ. ಬಿ. ಭಂಡಾರಿಯವರ ನಾಟಕಗಳಲ್ಲಿ ಪಾತ್ರ ಮಾಡಿದವರು ಎಂತೆಂಥ ಘಟಾನುಘಟಿಗಳೆಂದರೆ ದಿ| ಲೋಕಯ್ಯ ಶೆಟ್ಟಿ (ಮಾಜಿ ಸಚಿವರು) ರಾಣಾ ಪ್ರತಾಪನ ಪಾತ್ರ ಮಾಡುತ್ತಿದ್ದರು ಅಲ್ಲದೆ ಜೆ. ರವೀಂದ್ರ, ಯು. ಆರ್. ಚಂದರ್, ದೇವಾಡಿಗರು, ವಿ. ಜಿ. ಪಾಲ್, ಆರ್ಕೆ ಉಳ್ಳಾಲ್, ಗಣೇಶ್ ಕುಮಾರ್ (ಸ್ತ್ರೀಪಾತ್ರ) ಎ.ಸಿ. ಭಂಡಾರಿ (ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಈಗಿನ ಅಧ್ಯಕ್ಷರು– 'ದಳವಾಯಿ ದುಗ್ಗಣ್ಣ'ದಲ್ಲಿ ಕಂಪಣನ ಪಾತ್ರ ಮಾಡುತ್ತಿದ್ದರು) ಡಾ. ವಾಮನ ನಂದಾವರ, ರೋಹಿದಾಸ್ ಕದ್ರಿ, ಕುಮುದಾ ಬಾರ್ಕೂರು, ಕೃಷ್ಣಪ್ಪ ಕದ್ರಿ, ಚರಣ್ ಕುಮಾರ್ ಎಲ್ಲಕ್ಕೂ ಮಿಗಿಲಾಗಿ ಕೆ.ಬಿ. ಭಂಡಾರಿಯವರ 'ಬಂಗಾರ್ ಬಾಲೆ' ಮತ್ತು ಪ್ರಸಿದ್ಧ ನಾಟಕ 'ಪಂಥ'ದಲ್ಲಿ ಸರೋಜಿನಿ ಶೆಟ್ಟಿ ಪ್ರಮುಖ ಪಾತ್ರ ನಿರ್ವಹಿಸುತ್ತಿದ್ದರು. (ಆಕರ : ಮದಪ್ಪೆರಾವಂದಿ ತುಳುವೆರ್ – ಕೆ.ಬಿ. ಭಂಡಾರಿ. ಡಾ. ವಾಮನ ನಂದಾವರ, ಪ್ರಕಟಣೆ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ 2008) 'ಲಂಬುಕೊಡಿ ಬಚ್ಚಿರೆ', 'ಲಕ್ಕುವರೆಯೇ ಲಕ್ಕುಜರೆಯೇ ಮಾಳಿಗೆದಿಲ್ಲದ ಮಾರಾಯರೇ..' ಇಂತಹ ತುಳುವ ಗಂಧದ ಭಂಡಾರಿ ಯವರ ನಾಟಕದ ಹಾಡುಗಳು ಪ್ರಸಿದ್ಧಿಪಡೆದವು. ಇವರು ರಚಿಸಿದ ಬದಿತ ಬಯಕೆ, ಕನತ್ತ ಪೊಣ್ಣು, ನಾರದೆರೆನ ವಕಾಲತ್ತ್ ಈ 2–3 ಕೃತಿಗಳ ಹೊರತು ದಿ. ಕೆ.ಬಿ. ಭಂಡಾರಿ ಅವರ ಉಳಿದೆಲ್ಲ ನಾಟಕಗಳೂ ಹಸ್ತಪ್ರತಿ ರೂಪದಲ್ಲೇ ಇದ್ದವು.

**ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ 'ತುಳು ನಾಟಕ ಪರ್ಬ 2018'ದಲ್ಲಿ ಪುರಭವನದಲ್ಲಿ ಪ್ರದರ್ಶಿತ ಕೆ.ಬಿ. ಭಂಡಾರಿಯವರ ನಾಟಕ 'ನಾರದೆರೆನ ವಕಾಲತ್ತ್'. ಪ್ರಸ್ತುತಿ : ಅಮೃತ ಕಾಲೇಜು ಪಡೀಲು ಇಲ್ಲಿನ ವಿದ್ಯಾರ್ಥಿಗಳು. ನಿರ್ದೇಶನ : ಚಂದ್ರಹಾಸ ಜಿ. ಕಣ್ವತೀರ್ಥ. (ಚಿತ್ರಕೃಪೆ : ತುಳು ಅಕಾಡೆಮಿ).**

**ಶ್ರೀ ಪಿ.ಯಸ್. ರಾವ್ (1930–2007) – ಸಹೋದರ ಕಲಾವೃಂದ**

'ಎಂಕ್‌ಲಾ ಮದ್ಮೆ ಆವೊಡೇ', 'ನಿಲೆದಾಂತಿ ಪೊಣ್ಣು', 'ಬೊಲ್ಪುದಾಂತಿ ತುಡರ್'ನಂತಹ ಸರಳ, ಸಾಮಾಜಿಕ ನಾಟಕಗಳ ಕರ್ತೃ. ಬಹಳಷ್ಟನ್ನು ಪ್ರಕಟಿಸಿದ್ದಾರೆ. 'ಸಹೋದರ ಕಲಾವೃಂದ, ಮಣ್ಣಗುಡ್ಡೆ' ಎನ್ನುವ ಸಂಸ್ಥೆಯ ಮೂಲಕ 70ರ ದಶಕದಿಂದಲೇ ನಾಟಕಗಳ ಪ್ರಯೋಗ ನೀಡಿದ್ದಾರೆ. ಪ್ರಸಾಧನ, ರಂಗಸಜ್ಜಿಕೆಯಲ್ಲೂ ನುರಿತವರಾದರು. ಇವರು ಬರೆದು ದಿಗ್ದರ್ಶಿಸಿದ ಸುಮಾರು 96 ತುಳುನಾಟಕಗಳಲ್ಲಿ 32 ಅಚ್ಚಾಗಿವೆ. 'ಈ ಪ್ರೀತಿ ಬದ್ಕೊಡಾ' (1973) ಎಂಕ್‌ಲಾ ಮದ್ಮೆ ಆವೊಡು' (70)– ಇವು ಹೆಚ್ಚು ಜನಪ್ರಿಯ ನಾಟಕಗಳು. 1970–1988ರ ಅವಧಿಯಲ್ಲವರು ಪಗೆತ ಪುಗೆ, ಸೊರ್ಕುದ ಪೊಣ್ಣು, ಪನಂದೆ ಪದ್ರಾಡ್, ತಬುರನ ಪರಕೆ, ಬರ್ಪನಾ (1991), ಪದ್ದಕ್ಕನ ಕಂಡನಿ ಪಿರಬೈದೆ (1994) – ಮುಂತಾಗಿ 96ಕ್ಕೂ ಮಿಕ್ಕ ನಾಟಕಗಳನ್ನು ಬರೆದವರು. ಕನ್ನಡ, ತುಳುವಿನಲ್ಲಿ 100ಕ್ಕೂ ಮಿಕ್ಕ ನಾಟಕ ರಚಿಸಿ, ದಿಗ್ದರ್ಶಿಸಿ ಪ್ರಯೋಗಿಸಿದವರು.

ಇವರ ನಾಟಕಗಳು ಸರಳ, ಸಾಂಸಾರಿಕ ನಗರ ಬದುಕಿನ ಸಂಸಾರಗಳ ಸಿಹಿ–ಕಹಿ, ವ್ಯಂಗ್ಯ, ಕೋಪ–ತಾಪ, ಸರಸ–ವಿರಸಗಳೇ ಹೆಚ್ಚಿನ ನಾಟಕಗಳ ಕಥಾವಸ್ತು. 70–80ರ ದಶಕಗಳಲ್ಲಿ ಮಂಗಳೂರಿನ ಹೆಚ್ಚಿನ ಭಾಗಗಳಲ್ಲಿ ಇವರ ನಾಟಕಗಳು ಶಾಲಾಕಾಲೇಜು, ಸಂಘ 'ಸಂಸ್ಥೆಗಳ ವಾರ್ಷಿಕೋತ್ಸವಗಳ ಪ್ರದರ್ಶನಕ್ಕೆ ಸಿಗುತ್ತಿದ್ದವು. ಯಾಕೆಂದರೆ ಪಿ.ಎಸ್. ರಾವ್ ತಮ್ಮ ಬಹುಪಾಲು ನಾಟಕಗಳನ್ನು ಮುದ್ರಿಸುತ್ತಿದ್ದರು. ಅವು ನಿತ್ಯಾನಂದ ಗ್ರಂಥಾಲಯ ಮುಂತಾದೆಡೆ ಲಭ್ಯ ಇರುತ್ತಿದ್ದವು.

**ಯು. ಮಚ್ಚೇಂದ್ರನಾಥ್ (1931–1983) – 'ಓಂ ಶಕ್ತಿ ನಾಟಕ ಸಭಾ'**

ಅರ್ವತ್ತರ ದಶಕದಿಂದಲೂ ಹೆಸರಾದ ಹಿರಿಯ ತಲೆಮಾರಿನ ಪ್ರಸಿದ್ಧ ರಂಗನಟ, ನಾಟಕಕಾರ ಹಾಗೂ ನಿರ್ದೇಶಕ ಉಳ್ಳಾಲ ಮಚ್ಚೇಂದ್ರನಾಥ್. ಕಣ್ಣೀರ್ದ ಕರಿಮಣಿ,

ಕೈದಾರೆ, ಮಿಸ್ ಲತಾ, ಪೊಣ್ಣ ನಿಶ್ಚಯ, ಎನ್ನ ಮರ್ಮಲ್, ಭಯಂಕರ ಬೈರವ, ರಾಣಾ ಪ್ರತಾಪ, ಪೃಥ್ವೀರಾಜ್, ರಾಣಿ ಸಂಯುಕ್ತೆ, ಕಡಲರಾಣಿ, ಅಬ್ಬಕ್ಕ ಮುಂತಾದ ಚಾರಿತ್ರಿಕ, ಪೌರಾಣಿಕ, ಸಾಮಾಜಿಕ ನಾಟಕಗಳು ಅವರ ಕಲಾ ದೀವಿಗೆಗಳು. 'ಕಣ್ಣೀರ್ದ ಕರಿಮಣಿ' ರಂಗದಲ್ಲಿ ತುಂಬ ಪ್ರಸಿದ್ಧಿ ಪಡೆದ ನಾಟಕ. 'ಲಚ್ಚುನ ಕೊರಗೆ' ಅವರ ರಂಗ ನಿರ್ದೇಶನ, ಅಭಿನಯದಲ್ಲಿ ಜನಪ್ರಿಯವಾಗಿ ಸುಮಾರು 400 ಪ್ರದರ್ಶನ ಕಂಡ ನಾಟಕ. ಇದರ

ಮೂಲ ಲೇಖಕರು ಎನ್. ಗೋಪಾಲಕೃಷ್ಣ.

ಉಳ್ಳಾಲದ ಕೃಷಿ ಕುಟುಂಬದಲ್ಲಿ ಜನಿಸಿದ ಮಚ್ಚೇಂದ್ರರು ಮಂಗಳೂರು ಮಿಲಾಗ್ರಿಸ್ ಪ್ರೌಢಶಾಲಾ ದೈಹಿಕ ಶಿಕ್ಷಣ ಶಿಕ್ಷಕರಾಗಿದ್ದರು. ಆರಂಭದಲ್ಲಿ ಶಾಲಾ ವಾರ್ಷಿಕೋತ್ಸವಕ್ಕಾಗಿ ಕನ್ನಡ, ತುಳು ನಾಟಕಗಳನ್ನು ಬರೆದು ದಿಗ್ದರ್ಶನ ಮಾಡುತ್ತಿದ್ದರು. 1965ರಲ್ಲಿ ಉಳ್ಳಾಲದಲ್ಲಿ ವಿದ್ಯಾರಣ್ಯ ಕಲಾವೃಂದ ಸ್ಥಾಪನೆಯಾಯಿತು. ಅದರ ವಾರ್ಷಿಕೋತ್ಸವಕ್ಕೆ ಮಚ್ಚೇಂದ್ರರದೇ ತುಳುನಾಟಕಗಳು. ಉಳ್ಳಾಲ ಶಾರದೋತ್ಸವಕ್ಕೂ ಅವರ ನಾಟಕ ಪ್ರದರ್ಶನವಿರುತ್ತಿತ್ತು. ಮೊಗವೀರ ಯುವಕ ಸಂಘಗಳು, ಮೊಗವೀರ ಶಾಲೆಗಳ ಸಮಾರಂಭಗಳಿಗಾಗಿ ಹೆಚ್ಚಾಗಿ 'ಕಡಲರಾಣಿ ಅಬ್ಬಕ್ಕ', ಪೃಥ್ವಿರಾಜ್, ರಾಣಿ ಸಂಯುಕ್ತೆ ಮುಂತಾದ ಚಾರಿತ್ರಿಕ ನಾಟಕಗಳನ್ನು ಬರೆದು ಯುವಕರನ್ನು ತರಬೇತಿಗೊಳಿಸಿ ಆಡುತ್ತಿದ್ದರು.

'ಕಣ್ಣೀರ್ದ ಕರಿಯಮಣಿ' ನೂರಾರು ಪ್ರದರ್ಶನ ಕಂಡ ಅವರ ಪ್ರಸಿದ್ಧ ಸಾಮಾಜಿಕ ನಾಟಕ. 400 ಪ್ರದರ್ಶನ ಕಂಡ ಎನ್. ಗೋಪಾಲಕೃಷ್ಣರ 'ಲಚ್ಚುನ ಕೊರಗೆ' ನಾಟಕವು ಮಚ್ಚೇಂದ್ರನಾಥ್ ದಿಗದರ್ಶನದಲ್ಲಿ ಜನಪ್ರಿಯವಾದುದಲ್ಲದೆ ಅದರಲ್ಲಿ 'ಚನಿಯ' ಎಂಬ 'ಕಿವುಡ ಮೂಗ'ನ ಪಾತ್ರ ನಿರ್ವಹಿಸಿ ರಂಗನಟನಾಗಿ ಪ್ರೇಕ್ಷಕರ ಕಣ್ಮಣಿಯಾದವರೂ ಮಚ್ಚೇಂದ್ರರು.

ಹಂಪನಕಟ್ಟೆಯ ಸರಕಾರಿ ಕಾಲೇಜು (ಈಗಿನ ವಿಶ್ವವಿದ್ಯಾನಿಲಯ ಕಾಲೇಜು) ನಲ್ಲಿ ಕಚೇರಿ ಅಧೀಕ್ಷಕರಾಗಿದ್ದ ಎನ್. ಗೋಪಾಲಕೃಷ್ಣರೂ ಎಪ್ಪತ್ತರ ದಶಕದಿಂದ ತುಳು, ಕನ್ನಡ ನಾಟಕ ಬರೆಯುತ್ತಿದ್ದರು. ಇವರಿಬ್ಬರೂ ಆತ್ಮೀಯ ಸ್ನೇಹಿತರಾಗಿದ್ದು ಗೋಪಾಲಕೃಷ್ಣರ 'ಲಚ್ಚುನ ಕೊರಗೆ' ನಾಟಕದಲ್ಲಿ ಮಚ್ಚೇಂದ್ರರು ಸಂಭಾಷಣಾ ರಹಿತ ಮೈಮ್ ಪಾತ್ರವಾದ 'ಮೂಗ'ನ ಪಾತ್ರ ಮಾಡುತ್ತಿದ್ದರು. ಅದರ ಮೊದಲ ಹತ್ತು ಪ್ರದರ್ಶನಗಳಿಗೆ ಮಿಲಾಗ್ರೀಸ್ ಶಾಲಾ ಡ್ರಾಯಿಂಗ್ ಮಾಸ್ಟರ್ ಮೋಹನರಾವ್ ನಿರ್ದೇಶನ ಮಾಡಿ, ಮುಂದೆ ಯು. ಮಚ್ಚೇಂದ್ರನಾಥರೇ ನಿರ್ದೇಶಿಸತೊಡಗಿದರು. ನಾಟಕದ ಪ್ಲಾಟ್‌ನಲ್ಲಿ ತನ್ನದೇ ಕೆಲವೊಂದು ಮಾರ್ಪಾಟುಗಳನ್ನು ಮಾಡಿಕೊಂಡು ತನ್ನದೇ 'ಓಂ ಶಕ್ತಿ ನಾಟಕಸಭಾ' ಎಂಬ ತಂಡದ ಮೂಲಕ ಬಹಳಷ್ಟು ಪ್ರಯೋಗ ನಡೆಸಿದರು.

ಒಮ್ಮೆ ಬಾಳ (ಕಾಟಿಪಳ್ಳ ಬಳಿ)ದಲ್ಲಿ ತೆಂಗಿನ ಗರಿಗಳ 'ಸೂಟೆ ಬೆಳಕಲ್ಲೇ ನಾಟಕ ವಾಡಿದ್ದನ್ನು, ಮಡಲಿನ ಮೇಲೆ ಕುಳಿತೇ ಪ್ರೇಕ್ಷಕರು ಮಚ್ಚೇಂದ್ರರ ನಾಟಕ ನೋಡಿದ್ದನ್ನು ಇನ್ನೋರ್ವ ಹಿರಿಯ ನಾಟಕಕಾರ ರತ್ನಾಕರ ರಾವ್ ಕಾವೂರರು ನೆನಪಿಸುತ್ತಾರೆ.'

ಉಳ್ಳಾಲದ ರವೀಂದ್ರರಾಜ್ ಎಂಬವರು ಯು. ಮಚ್ಚೇಂದ್ರರ ನೂರಕ್ಕೂ ಮಿಕ್ಕ ನಾಟಕ ಪ್ರದರ್ಶನಗಳಿಗೆ 'ಪ್ರಾಂಪ್ಟರ್' ಆಗಿ ಪರದೆಯ ಹಿಂದೆ ನಿರ್ವಹಿಸಿದ ಅನುಭವಿಗಳು.

ನಾಟಕ ರಚನೆ, ನಿರ್ದೇಶನ, ಪಾತ್ರ ನಿರ್ವಹಣೆ ಮಾತ್ರವಲ್ಲದೆ ಯು. ಮಚ್ಚೇಂದ್ರರು ತನ್ನದೇ ಆದ ವೇಷಭೂಷಣ, ವಸ್ತ್ರಾಲಂಕಾರ ಪರದೆಗಳ ವ್ಯವಸ್ಥೆಯನ್ನು ಹೊಂದಿದ್ದರು. ತನ್ನ ಕೆಲವು ನಾಟಕಗಳಿಗೆ ತಾನೇ ಪದ್ಯ ರಚನೆಯನ್ನು ಮಾಡಿದ್ದರು.

ಮಚ್ಚೇಂದ್ರನಾಥರ 'ಓಂ ಶಕ್ತಿ ನಾಟಕ ಸಭಾ'ದಲ್ಲಿ ನಟರಾಗಿ ಅಂದಿನ ಘಟಾನುಘಟಿ

ಗಳಾದ ಪೈಲ್ವಾನ್ ಮೋತಿ ಪುತ್ರನ್, ರೋಹಿನಾಥ್ ಸಾಲ್ಯಾನ್, ಆನಂದ ಶೆಟ್ಟಿ ಅಶೋಕನಗರ, ಬಾಲಕೃಷ್ಣ ಕದ್ರಿ, ಶೇಖರ ಉಳ್ಳಾಲ್, ಸುಂದರ ಬೋಳಾರ್, ಡಿ.ಎಸ್. ಬೋಳೂರು, ಎಂ.ಎಸ್. ಗೋಪಾಲಕೃಷ್ಣ ಭಟ್, ದಿಲೀಪ್ ರೈ, ದೇವದಾಸ್ ಮುಂತಾದವರಿದ್ದರು. ಹಾಸ್ಯ ಪಾತ್ರಕ್ಕೆ ಮೊದಲ ಕೆಲವರ್ಷ ಮಹಾಬಲ ಶೆಟ್ಟಿಗಾರ್ ಇದ್ದರೆ ಮುಂದೆ ಶ್ರೀಧರ್ ಅನಂತರ ವಿ.ಜಿ.ಪಾಲ್. ಹೀಗೆ ಅನೇಕ ಕಲಾವಿದರಿದ್ದರು. 'ಲಚ್ಚುನ ಕೊರಗೆ' ನಾಟಕದಲ್ಲಿ ಕರಿಯನ ಪಾತ್ರ ಮಾಡಿದವರು ಆರ್.ಕೆ. ಉಳ್ಳಾಲ. ಆರ್ಕೆ ಮಂಗಳೂರು, ಗಣೇಶ್‌ಕುಮಾರ್, ಎ. ಪ್ರಭಾಕರ್, ಗಂಗಾಧರ ಶೆಟ್ಟಿ ಮುಂತಾದವರು ಮಚ್ಚೇಂದ್ರನಾಥ್‌ರ ನಾಟಕಗಳಲ್ಲಿ ಸ್ತ್ರೀ ಪಾತ್ರ ನಿರ್ವಹಣೆ ಮಾಡಿದ ಪ್ರಸಿದ್ಧರು.

ಮಚ್ಚೇಂದ್ರರ 'ಪೊಣ್ಣಡ್ದ್ ಮಣ್ಣ್' ನಾಟಕದಲ್ಲಿ ಎ. ಪ್ರಭಾಕರ್ ನಿರ್ವಹಿಸಿದ ಕುಷ್ಠರೋಗಿ ಕಥಾ ನಾಯಕಿಯ ಪಾತ್ರದ ಸಹಜತೆಗೆ ಬೆರಗಾಗಿ ಸ್ತ್ರೀ ಪಾತ್ರ ಮಾಡಿದ ಪುರುಷ ಎಂದು ಗೊತ್ತೇ ಆಗದೆ, ನಾಟಕ ಮುಗಿದಾಗ ಮಹಿಳೆಯರ ಗುಂಪೊಂದು ರೋಧಿಸುತ್ತಾ ಗ್ರೀನ್‌ರೂಮಿಗೆ ಬಂದು 'ಇನ್ನು ಇಂಥ ಪಾತ್ರ ಮಾಡಬೇಡಮ್ಮಾ' ಎಂದು ಬೇಡಿಕೊಂಡರಂತೆ

'ಓಂ ಶಕ್ತಿ ನಾಟಕ ಸಭಾ'ದ ನಾಟಕಗಳು ಉಳ್ಳಾಲ, ತೊಕ್ಕೊಟ್ಟು ಮೈದಾನದಲ್ಲಿ ಮಂಗಳೂರು ತಾಲೂಕಿನ ಅನೇಕ ಗ್ರಾಮಾಂತರ ಪ್ರದೇಶಗಳಲ್ಲೂ ಜನಪ್ರಿಯ ಜನಪ್ರಿಯ ವಾಗಿದ್ದವು. ಹಳ್ಳಿ ಹಳ್ಳಿಗಳ ಹಲವು ಹೊಸ ಯುವಕರನ್ನು ರಂಗ ತಾಲೀಮು ನೀಡಿ ತರಬೇತಿಗೊಳಿಸಿದ ವೈಶಿಷ್ಟ್ಯವೂ ಮಚ್ಚೇಂದ್ರರದು ಹೆಚ್ಚಾಗಿ ಶನಿವಾರ, ಆದಿತ್ಯವಾರ ಹಳ್ಳಿಗಳಲ್ಲಿ ಅವರ ನಾಟಕ ಪ್ರದರ್ಶನ. ಕೆಲವೊಮ್ಮೆ ಎರಡೋ ಮೂರೋ ಪ್ರಧಾನ ಪಾತ್ರಧಾರಿಗಳೊಂದಿಗೆ ಹೋಗುವುದು ಸ್ಥಳೀಯ ಯುವಕರನ್ನೇ ಒಟ್ಟು ಸೇರಿಸಿ, ಕ್ಷಿಪ್ರ ತರಬೇತಿ ನೀಡಿ ಅವರಿಂದಲೇ ಪಾತ್ರ ಮಾಡಿಸುವುದು–ಇಂತಹ 'ರಿಸ್ಕ'ನ್ನೂ ಯು. ಮಚ್ಚೇಂದ್ರನಾಥ್ ಕೈಗೆತ್ತಿಕೊಂಡು ಯಶಸ್ವಿಯಾಗುತ್ತಿದ್ದವು. ಅವರ ಮಕ್ಕಳು ನವೀನ್ ಪ್ರವೀಣ್ ಮತ್ತು ಅಮೃತಕಲಾ ಈ ಮಕ್ಕಳಿಗೆ ಬಾಲ್ಯದಲ್ಲೇ ಸಂಗೀತವಾದ್ಯ ಅಭ್ಯಾಸ ಮಾಡಿಸಿದ್ದರು. ಮುಂದೆ ಈ ಸಹೋದರರು. 'ನವೀನ್–ಪ್ರವೀಣ್' ಮ್ಯೂಸಿಕಲ್ ನೈಟ್ ನಡೆಸಿ ಹೆಸರಾದರು. ತನ್ನ ಇಡೀ ಬದುಕನ್ನೇ ರಂಗಭೂಮಿಗಾಗಿ ಮುಡುಪಾಗಿರಿಸಿ ಅವಿಶ್ರಾಂತವಾಗಿ ದುಡಿದ ಪ್ರತಿಭಾಶಾಲಿ ಮಚ್ಚೇಂದ್ರರು ಸುದೀರ್ಘ ಅನಾರೋಗ್ಯದಿಂದ 1983ರ ಫೆಬ್ರವರಿ 18ರಂದು ತನ್ನ 52ರ ವಯಸ್ಸಿನಲ್ಲಿ ನಿಧನ ಹೊಂದಿದರು.

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯು ಕಣ್ಮರೆಯಾದ ಹಿರಿಯ ನಾಟಕಕಾರರನ್ನು ನೆನಪಿಸುವ ನಿಟ್ಟಿನಲ್ಲಿ 2018ರ ಮಾರ್ಚ್ 24ರಿಂದ 31ರವರೆಗೆ ಮಂಗಳೂರು ಪುರಭವನ ದಲ್ಲಿ ನಾಟಕ ಸಪ್ತಾಹ ಏರ್ಪಡಿಸಿದ ಎಂಟು ಮಂದಿ ಹಿರಿಯ ನಾಟಕಕಾರರ ಆಯ್ದ ನಾಟಕಗಳನ್ನು ಹೊಸ ನಿರ್ದೇಶಕರು, ಕಲಾವಿದರ ಮೂಲಕ ಮತ್ತೊಮ್ಮೆ ನಾಟಕಾಸಕ್ತರಿಗೆ ಒದಗುವ ಸುಯೋಗ ಒದಗಿಸಿತು. ಇದರಲ್ಲಿ ಯು. ಮಚ್ಚೇಂದ್ರನಾಥರ ನಿರ್ದೇಶನದ 'ಲಚ್ಚು' ಪ್ರಯೋಗಗೊಂಡಿತು.

## ಯು.ಆರ್. ಚಂದರ್ (1934–2006) – ನವತರುಣ ಕಲಾವೃಂದ



ಉಳ್ಳಾಲದ ಸಂಜೀವಿ–ಅಪ್ಪಯ್ಯ ಶೆಟ್ಟಿಗಾರರ ಪುತ್ರ ರಾಮಚಂದ್ರರು ರಂಗಭೂಮಿಯಲ್ಲಿ ಯು.ಆರ್. ಚಂದರ್ ಎಂದೇ ಪ್ರಖ್ಯಾತರಾದರು. ಸ್ವಂತ ತಂಡ ಕಟ್ಟಿ, ತಿರುಗಾಟ ನಡೆಸಿ, ಟಿಕೆಟ್ ನಾಟಕಗಳನ್ನಾಡಿ, ಜನಪ್ರಿಯತೆಯ ಜತೆ ಜನಪದ, ವೈಚಾರಿಕ ತುಡಿತಗಳಿಗೂ ಸ್ಪಂದಿಸಿದ ಪ್ರಮುಖರಲ್ಲಿ ಉಳ್ಳಾಲದ ಯು.ಆರ್. ಚಂದರ್ ಒಬ್ಬರು. ಅವರ ಜನಪದ ನಾಟಕ 'ಕೋಡ್ದಬ್ಬು – ತನ್ನಿಮಾನಿಗ' (1969) – ರತ್ನವರ್ಮ ಹೆಗ್ಗಡೆ ಪ್ರಶಸ್ತಿ ಪಡೆಯಿತು. ಪುಣ್ಣಮೆದ ದಿನತಾನಿ, ವಂದೇ ಮಾತರಂ, ತಾಳೊಗು ತಕ್ಕ ಮೇಳ ಕೃತಿಗಳೂ ಇದೇ ಪ್ರಶಸ್ತಿ ಪಡೆದವು. 'ಕಲ್ಕುಡ–ಕಲ್ಲುರ್ಟಿ' ಕೂಡಾ ಎಪ್ಪತ್ತರ ದಶಕದ ಪ್ರಸಿದ್ಧ ನಾಟಕ. 1952ರಷ್ಟು ಹಿಂದೆಯೇ ಕನ್ನಡ ನಾಟಕ ರಚನೆಗೆ ತೊಡಗಿದ್ದ ಚಂದರ್, ಬಳಿಕ ಏರ್ ಬರೆಯಿನ ಕಾಕಜಿ (ಚೊಚ್ಚಲ ತುಳುಕೃತಿ), ಪೇರ್ಲಾ –ನೀರ್ಲಾ (ಕ್ವಿಟ್ ಇಂಡಿಯಾ ಚಳವಳದ ಕತೆ), ಮೆಗ್ಗೆ– ಪಲಯೆ, ಕಿತಾಪತಿ, ದೇವೆರ್ನಾಜ, ಪೊಣ್ಣ ಜೀವನ ಮಣ್ಣ್‌ದ ಬಾಜನ, ಚಿಕ್ಕಮ್ಮ, ಗಂಟೆಗೊಂಜಿ ಗೊಬ್ಬು – ಮುಂತಾದ ಸಾಮಾಜಿಕ ನಾಟಕಗಳನ್ನು 'ಸೂರ್ಯ ಪುತ್ರೆ' ಪಾದುಕಾ ಪಟ್ಟಾಭಿಷೇಕ – ಪೌರಾಣಿಕ ನಾಟಕಗಳನ್ನೂ ರಚಿಸಿದ್ದು. ಅವೆಲ್ಲವೂ ಕರಾವಳಿ ಜಿಲ್ಲೆಗಳಲ್ಲಿ ಯಶಸ್ವೀ ಪ್ರದರ್ಶನ ಕಂಡವುಗಳು (ಲಾಂಛನ: ನವತರುಣ ಕಲಾವೃಂದ, ಗೋಕುಲ್ ಥಿಯೇಟರ್ಸ್, ಮಂಗಳೂರು). 1959ರಿಂದ ಎಲ್‌ಐಸಿಯಲ್ಲಿ ನೌಕರಿಯಲ್ಲಿದ್ದು ಉಡುಪಿ, ಚಿಕ್ಕಮಗಳೂರು, ಶಿವಮೊಗ್ಗ, ಬಂಟ್ವಾಳಗಳಲ್ಲಿ ಸೇವೆ

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ 'ತುಳು ನಾಟಕ ಪರ್ಬ 2018'ದಲ್ಲಿ ಪುರಭವನದಲ್ಲಿ ಪ್ರದರ್ಶಿತ ಯು.ಆರ್. ಚಂದರ್ ಅವರ ನಾಟಕ 'ಕೋರ್ದಬ್ಬು–ತನ್ನಿಮಾನಿಗ'. ಪ್ರಸ್ತುತಿ : ರಂಗಚಲನ ಮಂಗಳೂರು ನಿರ್ದೇಶನ : ದಿನೇಶ್ ಅತ್ತಾವರ (ಚಿತ್ರಕೃಪೆ : ತುಳು ಅಕಾಡೆಮಿ).

ಸಲ್ಲಿಸಿ ಹಿರಿಯ ಶಾಖಾಧಿಕಾರಿಯಾಗಿ 1992ರಲ್ಲಿ ನಿವೃತ್ತರಾದರು. ಕೋಟೆಕಾರು, ಉಳ್ಳಾಲ ಸುತ್ತಮುತ್ತ ಪ್ರದೇಶಗಳಲ್ಲಿ ಹಾಗೂ ತುಳುನಾಡಿನ ಹಲವಾರು ಕಡೆ ಇವರ ನಾಟಕಗಳು ಅನೇಕ ವರ್ಷ ಸಹಸ್ರಾರು ಪ್ರದರ್ಶನ ಕಂಡವು. ಮುಂದೆ ಖ್ಯಾತನಾಮರಾದ ಜೆ. ರವೀಂದ್ರ, ಆರ್.ಕೆ. ಉಳ್ಳಾಲ್, ಕೆ.ವಿ. ಭಟ್ ಮುಂತಾದ ನಟ, ನಿರ್ದೇಶಕರು ಆರಂಭದಿಂದಲೇ ಚಂದರರ ನಾಟಕಗಳಲ್ಲಿದ್ದು ನಟ, ನಿರ್ದೇಶಕರಾಗಿ ಬೆಳೆದರು.

**ಮಚ್ಚೇಂದ್ರನಾಥ ಪಾಂಡೇಶ್ವರ (1935–2013)**



163ರಷ್ಟು ಅತ್ಯಧಿಕ ದಾಖಲೆ ಸಂಖ್ಯೆಯ ನಾಟಕ ರಚಿಸಿರುವ ಇನ್ನೋರ್ವ ಪ್ರಸಿದ್ಧ ನಾಟಕಕಾರ ಪಾಂಡೇಶ್ವರರು 1950ರಲ್ಲಿ 'ಮೋಕೆದ ಮಗಲೆಗ್ ಕುಸೆಲ್ದ ಕಂಡನಿ'ಯಿಂದ ಆರಂಭಿಸಿ, 'ಕೌನ್ಸಿಲರ್ ಕೊಗ್ಗಣ್ಣೆ, ಅಜ್ಜಿ ತಾಂಕಿನ ಪುಳ್ಳಿ, ಪೊರ್ತು ಕಂತ್ಂಡ್, 'ಬದಿತ್ತ ಕೊದಿ', 'ಅಜ್ಜಿನ ಗೌಜಿ', ಬೊಂಬೈದ ಪೊದು', 'ಸೆರಂಗ್', 'ತುಡರ್ ತೆಲ್ತ್ಂಡ್' (ರಾಜಕೀಯ ನಾಟಕ) 'ತೆಲ್ಪೆರೆ ಕಲ್ಪಿ', ಮೋಕೆದಕ್ಲೆ ಜೋಕೆ, ಸತ್ಯ ಸಯ್ಯಂದ್' (100ನೇ ನಾಟಕ) ಮುಂತಾದ ಹೆಸರಿನ ವಿಡಂಬನಾತ್ಮಕ ನಾಟಕಗಳನ್ನು ಸುಮಾರು ಐದು ದಶಕಗಳ ಕಾಲ ರಚಿಸಿ, ನಿರ್ದೇಶಿಸುತ್ತಲೇ ಬಂದವರು. 'ಪೊರ್ತು ಕಂತ್ಂಡ್'ನಾಟಕ 'ದಾರೆದ ಸೀರೆ'ಎಂಬ ಹೆಸರಲ್ಲಿ ಚಲನಚಿತ್ರವಾಗಿದೆ. 'ಬಿನ್ನೆದಿ ಕಲ್ಪೆದಿ' ಬಾನುಲಿಯಲ್ಲಿ ಶ್ರೋತೃಗಳನ್ನು ರಂಜಿಸಿದ ಪ್ರಸಿದ್ಧ ನಾಟಕ. 'ಅನೇಕ ತುಳು ಚಿತ್ರಗಳಿಗೂ ಚಿತ್ರ ಸಾಹಿತ್ಯ, ಗೀತೆ ರಚಿಸಿರುವ ಮಚ್ಚೇಂದ್ರನಾಥ ಪಾಂಡೇಶ್ವರ್ ನಟನೆಯಲ್ಲೂ ಹೆಸರು ಮಾಡಿದವರು. 'ಅಲೆಗ್ಸಾಂಡರ್'ಅವರ ಚಾರಿತ್ರಿಕ ನಾಟಕ. 'ಕೌನ್ಸಿಲರ್ ಕೊಗ್ಗಣ್ಣೆ' ಇವರ ಮೊದಲ ಪ್ರಕಟಿತ ನಾಟಕ; ಅದು 10,000ಕ್ಕೂ ಮಿಕ್ಕ ಪ್ರಯೋಗ ಕಂಡಿದೆಯೆನ್ನಲಾಗಿದೆ. 2004ರಲ್ಲಿ ಇವರ 'ಅಭಿನಂದನ ಸಂಭ್ರಮ' ಸಂದರ್ಭದಲ್ಲಿ 'ಅಜ್ಜಿ ತಾಂಕಿನ ಪುಳ್ಳಿ' ಮತ್ತು 'ನೆತ್ತೆರಾ–ನೀರಾ?' ನಾಟಕಗಳು ಪ್ರಕಟವಾಗಿವೆ. ನೂತನ ನಾಟಕ 'ಯೇಪಲಾ ಉಲ್ಲೆ' ಕೂಡಾ ಅಂದು ಪುರಭವನದಲ್ಲಿ ಪ್ರದರ್ಶನಗೊಂಡಿತು.

ಪಾಂಡೇಶ್ವರ್ 60–70 ದಶಕಗಳಲ್ಲಿ ತಮ್ಮ ಬಹು ಸಂಖ್ಯೆಯ ನಾಟಕಗಳನ್ನು ರಚಿಸಿದರು. ಹೆಚ್ಚಿನ ನಾಟಕಗಳಲ್ಲಿ ನಿಗೂಢತೆ, ತೆಳು ಹಾಸ್ಯ, ಸಾಮಾಜಿಕ ವಿಡಂಬನೆ, ಸ್ತ್ರೀಪರ ಚಿಂತನೆ, ಸಾಮರಸ್ಯ ಧೋರಣೆ, ಹಲವು ನಾಟಕಗಳಲ್ಲಿ ಅಜ್ಜಿಯೋರ್ವಳ ಪ್ರಮುಖ ಪಾತ್ರ, ಸರಳ ಸಂಭಾಷಣೆ ಇವು ಮಚ್ಚೇಂದ್ರನಾಥರ ವೈಶಿಷ್ಟ್ಯ. 'ನಾಟಕದುಲಯಿ ನಾಟಕ' ತುಳು ನಾಟಕ ರಂಗದಲ್ಲಿ ಪ್ರಪ್ರಥಮ ಕ್ಯಾಸೆಟ್ ರೂಪದಲ್ಲಿ ಬಂತು. ಮಂಗಳೂರು ಆಕಾಶವಾಣಿಯ ಆರಂಭಕಾಲದಲ್ಲೇ ಇದರ ಬಾನುಲಿ ಪ್ರಸಾರ ನಡೆದಿತ್ತು. 160ಕ್ಕೂ ಮಿಕ್ಕು ನಾಟಕ ರಚನೆ ದಾಖಲೆ ಇವರದು. ಹಲವು ತುಳು ಚಿತ್ರಗಳಿಗೆ ಚಿತ್ರಕಥೆ,

ಸಂಭಾಷಣೆ ರಚಿಸಿಕೊಟ್ಟಿರುವವರು.

ಮಂಗಳೂರು ನಗರ ದಕ್ಷಿಣ ಬದಿ ಪಾಂಡೇಶ್ವರ ಒಳಾವರಣದಲ್ಲಿ ಮನೆಯಿದ್ದ ಮಚ್ಚೇಂದ್ರನಾಥ ಪಾಂಡೇಶ್ವರರಿಗೆ ಗೆಳೆಯರ ಕೂಟಕಟ್ಟಿ ನಾಟಕವಾಡುವ ಹುಚ್ಚು ಬಾಲ್ಯದಲ್ಲೇ ಆರಂಭ. 1950ರ ವೇಳೆ 14ರ ಹರೆಯದಲ್ಲೇ ಪಾಂಡೇಶ್ವರ ಶಾಲಾ ವಾರ್ಷಿಕೋತ್ಸವಕ್ಕಾಗಿ 'ನಾ ಸಾಯಲಾರೆ' ಎಂಬ ಕನ್ನಡ ನಾಟಕ ಬರೆದು ಆಡಿದರು. ಅದರ ಬೆನ್ನಲ್ಲೇ ಬರೆದುದು 'ಮೋಕೆದ ಮಗಲೆಗ್ ಕುಸೆಲ್ದ ಕಂಡನಿ'. 'ಅಶೋಕ ಗೇಮ್ಸ್ ಕ್ಲಬ್' ಮೂಲಕ ಮುಂದೆ ಇವರ ಬಹಳಷ್ಟು ನಾಟಕಗಳನ್ನು ಆಡಿದ ಸಂಸ್ಥೆ ಈ ನಾಟಕ ಪ್ರದರ್ಶನಗೊಂಡಿತು. ಸ್ನೇಹಿತರು, ಹಿತಚಿಂತಕರೆಲ್ಲ ರೋಮಾಂಚಿತರಾಗಿ 'ಇನ್ನೂ ಬರಿ' ಎಂದು ಹುರಿದುಂಬಿಸಿದರಂತೆ ಮಚ್ಚೇಂದ್ರರು ನಾಟಕ ಬರೆಯುತ್ತಲೇ ಹೋದರು, ಲಯನ್ಸ್, ರೋಟರಿ, ಜೇಸಿ, ಯುವಕ ಸಂಘ, ಶಾಲೆ ಕಾಲೇಜಿನ ವಾರ್ಷಿಕೋತ್ಸವ ಎಂದು ಇವರ ನಾಟಕಗಳಿಗೆ, ನಿರ್ದೇಶನಕ್ಕೆ ಎಲ್ಲಿಲ್ಲದ ಬೇಡಿಕೆ. ಖಾಸಗಿ ಸಂಸ್ಥೆಯಲ್ಲಿ ಕಚೇರಿಯಲ್ಲಿ ಉದ್ಯೋಗದಲ್ಲಿದ್ದ ಮಚ್ಚೇಂದ್ರನಾಥರು ಸಂಜೆ/ ರಜಾದಿನ/ ಬಿಡುವಿನ ವೇಳೆಯನ್ನೆಲ್ಲ ತನ್ನ ನೂರಾರು ನಾಟಕಗಳ ರಚನೆಗೂ, ಅದನ್ನು ಆಡುವ ಊರೂರುಗಳಿಗೆ (ಹೆಚ್ಚಾಗಿ ಮಂಗಳೂರು ಸುತ್ತಮುತ್ತ) ಹೋಗಿ ನಿರ್ದೇಶಿಸುತ್ತಲೂ ಸುಮಾರು ಐದು ದಶಕ ನಾಟಕರಂಗದಲ್ಲಿ ಸಕ್ರಿಯರಾಗಿದ್ದರು. ಆಕಾಶವಾಣಿಗೂ ಅನೇಕ ನಾಟಕ ರಚಿಸಿಕೊಟ್ಟರು. (ಅವರ 3 ನಾಟಕಗಳನ್ನು ಈ ಲೇಖಕನೂ ಬಾನುಲಿಯಲ್ಲಿ ನಿರ್ಮಾಣ ನಿರ್ದೇಶನ ಮಾಡಿದ್ದಲ್ಲದೆ ದೂರದರ್ಶನಕ್ಕಾಗಿ ಅವರನ್ನು ಸಂದರ್ಶಿಸಿದ್ದೂ ನೆನಪಿದೆ.) ನಿರ್ದೇಶನದ ಮೂಲಕ ಸಾವಿರಾರು ಹೊಸ

**ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ 'ತುಳು ನಾಟಕ ಪರ್ಬ 2018'ದಲ್ಲಿ ಪುರಭವನದಲ್ಲಿ ಪ್ರದರ್ಶಿತ ಮಚ್ಚೇಂದ್ರನಾಥ ಪಾಂಡೇಶ್ವರ ಅವರ ನಾಟಕ 'ಪೊರ್ತು ಕಂತ್‌ಂಡ್'. ಪ್ರಸ್ತುತಿ : ವಿಧಾತ್ರಿ ಕಲಾವಿದೆರ್, ಮಂಗಳೂರು ನಿರ್ದೇಶನ : ರಮೇಶ್ ರೈ ಕುಕ್ಕುವಳ್ಳಿ**

ಪ್ರತಿಭೆಗಳನ್ನು ತುಳುರಂಗಭೂಮಿಗೆ ಪರಿಚಯಿಸುವಲ್ಲಿಯೂ ಮಚ್ಚೇಂದ್ರನಾಥ ಪಾಂಡೇಶ್ವರರ ರಂಗಸೇವೆ ಸಂದಿವೆ.

ಅತ್ತಾವರ ಫ್ರೆಂಡ್ಸ್ ಸರ್ಕಲ್ ಈ ಸಂಸ್ಥೆಯು ಮಚ್ಚೇಂದ್ರನಾಥರ ಪ್ರತೀ ನಾಟಕದ ಮೊದಲ ಪ್ರದರ್ಶನವನ್ನು ಸುಮಾರು 15 ವರ್ಷಗಳ ಕಾಲ ವ್ಯವಸ್ಥೆ ಮಾಡುತ್ತಿತ್ತು. ಆನಂದ ಬೋಳಾರ್, ಅಚ್ಯುತ ಕಲ್ಲಾಪು, ಮಾಧವ ಶಕ್ತಿನಗರ, ಸುರೇಂದ್ರನಾಥ ಪಾಂಡೇಶ್ವರ ವಿ.ಜಿ. ಪಾಲ್, ಆನಂದ ಶೆಟ್ಟಿ ಅಶೋಕನಗರ, ಲಕ್ಷ್ಮಣ ಕುಮಾರ್ ಮಲ್ಲೂರು, ಡಿ.ಎಸ್. ಬೋಳೂರು, ಭವಾನಿ ಶಂಕರ್, ಗಂಗಾಧರ ಅಳಪೆ, ಆರ್. ಕೆ., ಗಣೇಶ್ ಕುಮಾರ್, ರೋಹಿಣಿ ಜಗರಾಂ, ಸರೋಜಿನಿ, ವೀಣಾ, ಮೀರಾ, ಜಯಶೀಲಾ ಮುಂತಾಗಿ ನೂರಾರು ಕಲಾವಿದರು ಇವರ ನಾಟಕಗಳಲ್ಲಿ ನಟಿಸಿ ಹೆಸರಾದರು.

**ಕೆ.ಎನ್. ಟೇಲರ್ (1939–2015) – ಶ್ರೀ ಗಣೇಶ ನಾಟಕ ಸಭಾ**

ಉಡುಪಿ ಪ್ರದೇಶದಲ್ಲಿ ದೊಡ್ಡಣ್ಣ ಶೆಟ್ಟರ ಕಂಪೆನಿ ನಾಟಕ ತಂಡ ಪ್ರಸಿದ್ಧವಾಗುತ್ತಿದ್ದ ಬೆನ್ನು ಬೆನ್ನಿಗೆ ಮಂಗಳೂರಿನಲ್ಲಿ ಮತ್ತೋರ್ವರು ಅದೇ ಮಾದರಿಯಲ್ಲಿ ಉದಯಿಸಿದರು. ಅವರೇ ಕೆ.ಎನ್. ಟೇಲರ್ (ಕಡಂದಲೆ ನಾರಾಯಣ ಟೈಲರ್– 'ಟೇಲರ್' ಎನಿಸಿದರು.) ನಾಟಕ ರಚನೆ, ನಟನೆ, ನಿರ್ದೇಶನದಲ್ಲಿ ಜನಪ್ರಿಯರಾದ ಅವರು 1958ರಲ್ಲಿ ಪ್ರಥಮ ನಾಟಕ ರಚಿಸಿ 1959ರ ವೇಳೆಗೆ ಶ್ರೀ ಗಣೇಶ ನಾಟಕ ಸಭಾ (ರಿ.) ಮಂಗಳೂರು ಎನ್ನುವ ವೃತ್ತಿನಾಟಕ ತಂಡ ಕಟ್ಟಿ; ವ್ಯಾಪಕ ಪ್ರದರ್ಶನಕ್ಕೆ ತೊಡಗಿದರು.

ಕೆ.ಎನ್. ಟೇಲರರು–ಹಳ್ಳಿಯ ಜನಜೀವನ, ಭೂತಕೋಲ–ಮುಂತಾದವನ್ನು ಅಳವಡಿಸಿಕೊಂಡು 'ತಮ್ಮಲೆ ಅರ್ವತ್ತನ ಕೋಲ' ರಚಿಸಿ ದಿಗ್ದರ್ಶಿಸಿ, ಕಥಾನಾಯಕನಾಗಿ ಅಭಿನಯಿಸಿ, ಅದು ಹಲವು ಕಡೆ ಪ್ರದರ್ಶನದಲ್ಲಿ 'ಹಿಟ್'ಆಯಿತು. ಮುಂಬಯಿ, ಬೆಂಗಳೂರು, ಹೈದರಬಾದ್, ಮದ್ರಾಸ್ (ಬಳಿಕ ಕೊಲ್ಲಿರಾಷ್ಟ್ರ, ದೆಹಲಿ) – ಮುಂತಾದೆಡೆ ತಮ್ಮ ನಾಟಕ ತಂಡವನ್ನೊಯ್ದು ಪ್ರದರ್ಶನ ನೀಡಿದರು. ವರ್ಷಕ್ಕೊಂದು ಹೊಸನಾಟಕ ರಚಿಸಿ ಊರೂರುಗಳಲ್ಲಿ ಅದನ್ನು ಪ್ರಯೋಗಿಸಿದರು. ಅಶ್ಲೀಲವಲ್ಲದ ಹಾಸ್ಯ, ಚುರುಕಾದ ಸಂಭಾಷಣೆ, ದಟ್ಟವಾದ ಕಥಾಹಂದರ, ಸಿನಿಮೀಯತೆಯಿದ್ದರೂ ಸರಳವಾದ ಭಾಷೆ ಇವರ ನಾಟಕಗಳದು. ಸಮರ್ಥ ಕಲಾವಿದರ ಕೂಟದೊಂದಿಗೆ ನಾಲ್ಕು ದಶಕಗಳ ಉದ್ದಕ್ಕೂ ಟೇಲರ್ ರಂಗಭೂಮಿಯಲ್ಲಿ ಕ್ರಿಯಾಶೀಲತೆ ಉಳಿಸಿಕೊಂಡರು. ಮುಂದೆ ಚಲನಚಿತ್ರ ನಿರ್ಮಾಣಕ್ಕೆ ಕೈಯಿಕ್ಕಿದರು. ಆಗ ಅವರ ನಾಟಕ ಚಟುವಟಿಕೆ ಒಂದಿಷ್ಟು ಕಡಿಮೆಯಾಗಿತ್ತು. ಕಳೆದ ದಶಕದಿಂದ ಮತ್ತೊಮ್ಮೆ ನಾಟಕದಲ್ಲಿ ಸಕ್ರಿಯರಾಗಿ ಕೊಲ್ಲಿ ರಾಷ್ಟ್ರಗಳಿಗೆ, ದೆಹಲಿ ಮುಂತಾದೆಡೆ ಪ್ರದರ್ಶನ ನೀಡಿ ಬಂದಿದ್ದರು.

ನಾಟಕ ರಚನೆಯಂತೆಯೇ ದಿಗ್ದರ್ಶನ, ನಟನೆಯ ಸವ್ಯಸಾಚಿಯಾದ ಟೇಲರ್ ಸುಮಾರು 50 ವರ್ಷಗಳಿಂದ 2014ರವರೆಗೂ ನಿರಂತರವಾಗಿ ಪ್ರಯೋಗಶೀಲರಾಗಿ ಶಾಶ್ವತ ನೆನಪಾದವರು.

ಉಡುಪಿ ಪ್ರದೇಶದಲ್ಲಿ ದೊಡ್ಡಣ್ಣ ಶೆಟ್ಟರ ತುಳುನಾಟಕಗಳು ಪ್ರಸಿದ್ಧವಾಗುತ್ತಿದ್ದಂತೆಯೇ ಇತ್ತ ಮಂಗಳೂರಿನಲ್ಲಿ ರಮಾನಂದ ಚೂರ್ಯರ ಕನ್ನಡ ನಾಟಕಗಳು ನಡೆಯುತ್ತಿದ್ದವು. ಉಡುಪಿ, ಮಂಗಳೂರುಗಳ ನಡುಭಾಗದ ಪಡುಬಿದ್ರಿ ಸಮೀಪದ ಕಡಂದಲೆಯ ನಾರಾಯಣರು ಮಂಗಳೂರು ಕೆಳ ರಥಬೀದಿಯಲ್ಲಿ 'ಕೆ.ಎನ್.ಟೈಲರ್' ಎಂಬ ಟೈಲರಿಂಗ್ ಶಾಪ್ 1955ರಲ್ಲಿ ನಡೆಸತೊಡಗಿದಾಗ ಅವರ ವಯಸ್ಸು 17. ಮೆಟ್ರಿಕ್‌ವರೆಗೆ ಶಿಕ್ಷಣ ಪಡೆದಿದ್ದರು. ಚೂರ್ಯರ ನಾಟಕಗಳಿಗೆ 'ಪ್ರಾಂಪ್ಟರ್' ಆಗಿ ಕೆಲಸ ಮಾಡುತ್ತಿದ್ದರು. ನಾಟಕದ ತೀವ್ರ ಆಸಕ್ತಿಯಿಂದ 1958ರಲ್ಲಿ ಇವರು ಮೊದಲು ಬರೆದ ನಾಟಕ 'ತಮ್ಮಲೆ ಅರ್ವತ್ತನ ಕೋಲ' 1958ರ ಏಪ್ರಿಲ್ ಯುಗಾದಿಯಂದು ಶರವು ಮಹಾಗಣಪತಿ ದೇವಸ್ಥಾನದಲ್ಲಿ ಗೆಳೆಯರ ಗುಂಪು ಸೇರಿಸಿ ಶ್ರೀ ಗಣೇಶ ನಾಟಕ ಸಭಾ ಸ್ಥಾಪಿಸಿದರು. ಆಗ ಅವರ ಜತೆಗಿದ್ದವರು ಜೆ. ಸೀತಾರಾಮ ಶೆಟ್ಟಿ, ಎಡ್ವರ್ಡ್ ಕ್ವಾಡ್ರಸ್, ಬಿ.ಎನ್. ರಾವ್ ಮುಂತಾದವರು. 'ತಮ್ಮಲೆ ಅರ್ವತ್ತನ ಕೋಲ'ದಲ್ಲಿ ಮೊದಲ ಬಾರಿ 'ಭೂತಕೋಲ' ದೃಶ್ಯವನ್ನು ಅಳವಡಿಸಿದರು. ಈ ನಾಟಕ ಪಡೆದ ಅಪೂರ್ವ ಯಶಸ್ಸು ಟೇಲರ್‌ರ ಮುಂದಿನ ಸಾಲುಸಾಲು ನಾಟಕ ರಚನೆ, ನಟನೆ, ನಿರ್ದೇಶನಕ್ಕೆ, ಊರೂರಲ್ಲಿ ಪ್ರದರ್ಶನಕ್ಕೆ ಇಂಬು ನೀಡಿತು.

ತುಳು ನಾಟಕ ರಂಗದ ಆಗಿನ ಕಾಲದಲ್ಲಿ ಕೆಮ್ತೂರರ ಮೇಲ್ಪಂಕ್ತಿಯನ್ನು ಮುಂದುವರಿಸಿ ಟೇಲರರು ತನ್ನ ತಂಡದೊಂದಿಗೆ ಸಂಚಾರ ಮಾಡಿ, ಪೆಟ್ರೋಮ್ಯಾಕ್ಸ್ ಕಾರ್ ಬ್ಯಾಟರಿ, ಪರದೆಗಳನ್ನು ಹಿಡಿದುಕೊಂಡು ಎತ್ತಿನಗಾಡಿಗಳು, ನದಿದಾಟಲು ದೋಣಿಗಳ ಮೂಲಕ ಸಂಚರಿಸಿದರು. ಸದಸ್ಯರೊಂದಿಗೆ ಪೆಟ್ಟಿಗೆಗಳನ್ನು ಹೊತ್ತುಕೊಂಡು ಹಲವು ಊರುಗಳಲ್ಲಿ ನಾಟಕ ಪ್ರದರ್ಶನ ನೀಡಿದರು. ವಿದ್ಯುತ್ ಇಲ್ಲದ ಆ ಕಾಲದಲ್ಲಿ ಲಭ್ಯ ಬೆಳಕಿನ ವ್ಯವಸ್ಥೆಯೊಂದಿಗೆ ನಾಟಕ ಮಾಡಿಕೊಂಡು ಕಷ್ಟ ನಷ್ಟಗಳನ್ನು ಸಹಿಸಿಕೊಂಡು ಸಾಧನೆ ಮಾಡಿ ತುಳುನಾಡ ನಾಟಕ ರಂಗಭೂಮಿಯನ್ನು ಬೆಳೆಸಿದರು. ಚೂರ್ಯರ ನಿರ್ದೇಶನ, ರಿಹರ್ಸಲ್‌ನ ಕಟ್ಟುನಿಟ್ಟು ಬಿಗುವನ್ನು ಟೇಲರ್ ಕೂಡಾ ಪಾಲಿಸಿದರು. ಒಂದು ನಾಟಕದ ರಂಗತಾಲೀಮನ್ನು ಆರು ತಿಂಗಳ ಕಾಲ ನಡೆಸುತ್ತಿದ್ದರು. ಕಥಾಪ್ರಧಾನ ಎಲ್ಲ ನಾಟಕಗಳಲ್ಲೂ ಟೇಲರ್‌ರದು ಚುರುಕು ಹಾಸ್ಯ ಪಾತ್ರವಿತ್ತು.

ಆಗ ತಮಿಳು ಚಿತ್ರಗಳು ಮಂಗಳೂರಿನ ಚಿತ್ರಮಂದಿರಗಳಿಗೆ ಹೆಚ್ಚು ಬರುತ್ತಿದ್ದವು. ಕಟ್ಟಡ, ರಸ್ತೆ ಕಾರ್ಮಿಕರು ಹೆಚ್ಚಾಗಿ ತಮಿಳರಿದ್ದರು. ಅವರ ಸಂಪರ್ಕದಿಂದಾಗಿ ಟೇಲರ್ ತಮಿಳುಭಾಷೆಯನ್ನು ಕಲಿತರು. ಸಿನೆಮಾ ನಟನಾಗಬೇಕು ಎಂಬ ಹಂಬಲದಿಂದ 1962ರಲ್ಲಿ ಮದರಾಸಿಗೆ ಹೋದರು. ಚಿತ್ರರಂಗದ ಹಲವರ ಸ್ನೇಹ ಲಭಿಸಿತು. ಆದರೂ ಆಸೆ ಕೈಗೂಡದೆ ನಾಟಕವೇ ಒಳ್ಳೆಯದೆನಿಸಿ ಮತ್ತೆ ಮಂಗಳೂರಿಗೆ ಹಿಂತಿರುಗಿದರು.

ಕಂಡತ್ತಪಳ್ಳಿಯ ತನ್ನ ಟೈಲರಂಗಡಿಯಲ್ಲಿ ಪುನಃ ವೃತ್ತಿಯೊಂದಿಗೆ ನಾಟಕ ರಚನೆ, ಅಭಿನಯ, ತಂಡದೊಂದಿಗೆ ಪ್ರದರ್ಶನ ಮುಂದುವರಿಯಿತು.

1965ರಿಂದ ನಾಟಕ ತಂಡವನ್ನು ಮದ್ರಾಸ್, ಕೇರಳ, ಗೋವಾ, ಮುಂಬಯಿ – ಹೀಗೆ ವಿವಿಧ ರಾಜ್ಯಗಳಿಗೆ ಕೊಂಡೊಯ್ದರು. ಮುಂಬಯಿ, ಪೂನಾ, ಬೆಳಗಾಂ, ಮೀರಜ್, ನಾಸಿಕ, ಸಾಂಗ್ಲಿ, ಕೊಲ್ಲಾಪುರ, ಹುಬ್ಬಳ್ಳಿ, ಧಾರವಾಡ, ಗದಗ, ದಾವಣಗೆರೆ, ಬೆಂಗಳೂರು, ಮೈಸೂರು, ಬಳ್ಳಾರಿ – ಹೀಗೆ ರಾಜ್ಯ, ಜಿಲ್ಲೆ, ತಾಲೂಕು, ಗ್ರಾಮ ಎಲ್ಲೆಡೆ ತಿರುಗಾಟ ನಡೆಸಿ, ಹಳ್ಳಿಯಿಂದ ದಿಲ್ಲಿಯವರೆಗೂ ತುಳುನಾಟಕಗಳನ್ನು ಪರಿಚಯಿಸಿದ ವಿರಾಟ್ ಪ್ರತಿಭೆ ಟೇಲರ್‌ರದು. 1988ರಲ್ಲಿ ಪ್ರಥಮ ಬಾರಿಗೆ ಕೊಲ್ಲಿರಾಷ್ಟ್ರಕ್ಕೂ ಪ್ರವಾಸ ಬೆಳೆಸಿ ತುಳುನಾಟಕ ಪ್ರದರ್ಶಿಸುವಲ್ಲಿ ಮೊದಲಿಗರಾದರು. ತನ್ನ ತಂಡದಲ್ಲಿ ಸುಮಾರು 200ರಷ್ಟು ಕಲಾವಿದರು, ಹತ್ತಾರು ಸ್ತ್ರೀಕಲಾವಿದರು, ಮೂವತ್ತರಷ್ಟು ಸಂಗೀತ ಕಲಾವಿದರನ್ನು ವಿವಿಧ ಕಾಲಮಾನದಲ್ಲಿ ರಂಗಭೂಮಿಗೆ ಪರಿಚಯಿಸಿದ ಹಿರಿಮೆ ಕೆ.ಎನ್. ಟೇಲರ್‌ರದು.

**ಟೇಲರರ ನಾಟಕಗಳು**

ಬೊಂಬಾಯಿ ಕಂಡನೆ, ಯೇರ್‌ಮಲ್ತಿನ ತಪ್ಪು, ದೇವೆರ್ ಕೊರ್ಪೆರ್ (1958), ಕಲ್ಜಿಗದ ವಿಶ್ವಾಮಿತ್ರ ಮೇನಕೆ (1977), ಪುದರ್ ಕೇನಡೆ, ಇಂದ್ರನ ಆಸ್ತಿ, ಶಾಂತಿ (1977), ಬಾಡಯಿದ ಬಂಗಾರ್, ಡಾಕ್ಟರ್ ಶಂಕರ್, ಯಾನ್ ಸನ್ಯಾಸಿ ಆಪೆ, ಕಲ್ಲ್‌ದ ದೇವೆರ್, ಸೈನಗಾಂಡಲ ಸತ್ಯ ಪನ್ಲೆ, ತಮ್ಮಲೆ ಅರ್ವತ್ತನ ಕೋಲ, ಕಾಸ್‌ದಾಯೆ ಕಂಡನ್ಯೆ(1979), ಏರೆನ್ಲಾ ನಂಬೊಡ್ಚಿ, ಕಂಡನೆ ಬುಡೆದಿ (1983), ದಾಸುನ ಮದ್ಮೆ – ಮುಂತಾದವು. ಇವುಗಳಲ್ಲಿ 11 ನಾಟಕಗಳು ಅಚ್ಚಾಗಿವೆ.

ಕೆ.ಎನ್. ಟೇಲರರ ನಾಟಕ 'ಏರೆನ್ಲಾ ನಂಬೊಡ್ಚಿ' ಕಲಾವಿದರು : ಜೆ. ಸೀತಾರಾಮ ಶೆಟ್ಟಿ, ಶ್ರೀನಿವಾಸ ಕದ್ರಿ, ಫೆಲಿಕ್ಸ್ ಸಲ್ದಾನ, ವೀಣಾ ಮತ್ತು ಕೆ.ಎನ್. ಟೇಲರ್

1969ರಿಂದ ತುಳು ಚಿತ್ರ ನಿರ್ಮಾಣದತ್ತ ಹೊರಳಿದ ಟೇಲರ್ ತನ್ನ ಪ್ರಥಮ 'ದಾರೆದ ಬುಡೆದಿ' ಚಿತ್ರದ ಯಶಸ್ಸಿನೊಂದಿಗೆ ಒಟ್ಟು 10 ಸಿನೆಮಾ ನಿರ್ಮಿಸಿ 'ತುಳು



ಚಿತ್ರ ಬ್ರಹ್ಮ'ನೆನಿಸಿದರು. ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿಯಂತಹ ಹಲವು ಪ್ರತಿಷ್ಠಿತ ಪ್ರಶಸ್ತಿಗಳಿಗೆ ಭಾಜನರಾದರು. ಊರು ಹಾಗೂ ಪರವೂರಿನಲ್ಲಿ ವರ್ಷಂಪ್ರತಿ ತನ್ನ ಶ್ರೀ ಗಣೇಶ ನಾಟಕ ಸಭಾದ ದಿನಾಚರಣೆ, ನಾಟಕ ಪ್ರದರ್ಶನ ಮಾಡುತ್ತ ತನ್ನ 74 ವಯಸ್ಸಿನವರೆಗೂ ರಂಗದಲ್ಲಿ ಸಕ್ರಿಯರಾಗಿದ್ದು 2015ರಲ್ಲಿ ತನ್ನ 75ನೇ ವಯಸ್ಸಿನಲ್ಲಿ ಅಸ್ತಂಗತರಾದರು.

ಶ್ರೀ ಗಣೇಶ್ ನಾಟಕ ಸಭಾದ ಆರಂಭದಿಂದಲೂ ಕೆ.ಎನ್. ಟೇಲರ್‌ರ ಸಂಗಾತಿಯಾಗಿದ್ದು ಅವರ ನಾಟಕ ಸಿನಿಮಾಗಳೆಲ್ಲದರ ಸಾಕ್ಷಿಯ ಕೊಂಡಿಯಾಗಿರುವವರು ಹಿರಿಯ **ನಟ ಜೆ. ಸೀತಾರಾಮ್ ಶೆಟ್ಟಿ** (1939).

**ವಿಶುಕುಮಾರ್ : 1935–1986 – ನವೋದಯ ಕಲಾವೃಂದ ಕಂಬ್ಳ**

ಬಹುಮುಖ ಪ್ರತಿಭೆಗೆ ಹೆಸರಾಂತ ಸಾಹಿತಿ, ನಿರ್ದೇಶಕ, ನಾಟಕಕಾರ, ನಟ ವಿಶುಕುಮಾರ್ 'ಕೋಟಿ ಚೆನ್ನಯ'ರ ಕಥೆಯ ನಾಟಕ ಬರೆದ ಮೊದಲಿಗರು. ತಾ. 10–3–1963ರಂದು ಈ ನಾಟಕ ಮುಂಬಯಿಯ ಬಾಗ್ವಾಡಿ ಥಿಯೇಟರ್‌ನಲ್ಲಿ ದಿ. ಸೋಮಶೇಖರ ಪುತ್ರನ್‌ರ ನೇತೃತ್ವದಲ್ಲಿ 'ಪ್ರೀಮಿಯರ್ ಶೋ' ಕಂಡಿತು. ದಿ. ಸೋಮಶೇಖರ್, ಕೆ.ಬಿ. ವಾಮನ್, ನಾರಾಯಣ ರಾವ್, ಭೋಜರಾಜ್ ಮುಂತಾದವರು ಇದರಲ್ಲಿ ಪಾತ್ರ ವಹಿಸಿದರು. ಮುಂದೆ 1972ರಲ್ಲಿ 'ಕೋಟಿ ಚೆನ್ನಯ್ಯ' ವಿಶುಕುಮಾರರದೇ ನಿರ್ದೇಶನದಲ್ಲಿ ಚಲನಚಿತ್ರವಾಗಿ, ಪ್ರಶಸ್ತಿ ಗಳಿಸಿತು. ಕುರುಕ್ಷೇತ್ರ, ಗರ್ವದ ಎಣ್ಣೆ, ಮಿಸ್ಟರ್ ಬಾಂಬೆ – ಮುಂತಾದ ತುಳು ನಾಟಕಗಳನ್ನು ರಚಿಸಿದ ವಿಶುಕುಮಾರ್ ಮುಂದೆ ಕನ್ನಡ ಸಾಹಿತ್ಯ, ಚಲನಚಿತ್ರಗಳಲ್ಲಿ ತೊಡಗಿಕೊಂಡರು.

ಕಾದಂಬರಿಕಾರ, ಸಿನೆಮಾ ನಟ, ನಿರ್ದೇಶಕರಾಗಿ ಮುಂದೆ ಇತಿಹಾಸ ನಿರ್ಮಿಸಿದ ವಿಶುಕುಮಾರರು ಒಟ್ಟು 16 ನಾಟಕಗಳನ್ನು ಬರೆದರು. 'ನವೋದಯ ಕಲಾವೃಂದ, ಕಂಬ್ಳ ಎನ್ನುವ ನಾಟಕ ತಂಡವನ್ನು ಸೃಜಿಸಿ ಅದರ ಮೂಲಕ ಕನ್ನಡ, ತುಳು ನಾಟಕಗಳನ್ನು ಊರು ಪರವೂರಲ್ಲಿ ಪ್ರದರ್ಶಿಸಿದರು. ಇದರಲ್ಲಿ ಕನ್ನಡ 12 ಮತ್ತು ತುಳುವಿನಲ್ಲಿ ನಾಲ್ಕು 1. ಮಿಸ್ಟರ್ ಬಾಂಬೆ 2. ಕುರುಕ್ಷೇತ್ರ (ಕಲ್ಜಿಗದ ಕುರುಕ್ಷೇತ್ರ –1961 ಇದರಲ್ಲಿ ಇಂದಿನ ಹಿರಿಯ ನಟ ವಿ.ಜಿ. ಪಾಲ್ ತನ್ನ ಪ್ರಥಮ ರಂಗಪ್ರವೇಶವಾಗಿತ್ತೆಂದು

ನೆನಪಿಸಿಕೊಳ್ಳುತ್ತಾರೆ.) 3. ಗರ್ವದ ಎಣ್ಣೆ ಹಾಗೂ 4. ಕೋಟಿಚೆನ್ನಯ (ಪ್ರಥಮ ಪ್ರಕಟಣೆ 1967).

ಉರ್ವಾದ ಕೆನರಾ ಹೈಸ್ಕೂಲಿನಲ್ಲಿ ವಿಶುಕುಮಾರ್‌ಗೆ (ಅಂದಿನ ಹೆಸರು ವಿಶ್ವನಾಥ ಬೋಳೂರು) ಜನಾರ್ದನ ಪೂಜಾರಿ, ವಾಮನ ಕೋಟ್ಯಾನ್, ದಿ। ಸೋಮಶೇಖರ ಪುತ್ರನ್, ಏಕಾನಂದ ಮಾಸ್ಟರ್, ಬಿ.ಎನ್. ರಾವ್, ಆನಂದ ಪುತ್ರನ್ ಮುಂತಾದವರು ಸಹಪಾಠಿಗಳಾಗಿದ್ದರು. ಇವರೆಲ್ಲರ ಜೊತೆಗೆ ಎಂ. ವೀರಪ್ಪ ಮೊಯ್ಲಿ, ಮಾಧವ ಕುಲಾಲ್ ಈ ತಂಡದ ಕನ್ನಡ, ತುಳು ನಾಟಕಗಳಲ್ಲಿ ಅಭಿನಯಿಸುತ್ತಿದ್ದರು.

ವಿಶುಕುಮಾರ್ ತನ್ನ ನಾಟಕಗಳಲ್ಲಿ ಮುಖ್ಯ ಪಾತ್ರ ವಹಿಸಿದ್ದು ಮಾತ್ರವಲ್ಲ, ಇತರರ ನಾಟಕಗಳಲ್ಲೂ ಅಭಿನಯಿಸಿದ ಉತ್ತಮ ನಟರಾಗಿದ್ದರು. ಕಾರ್ನಾಡರ 'ತುಘಲಕ್' ಕನ್ನಡ ಐತಿಹಾಸಿಕ ನಾಟಕದಲ್ಲಿ ಅವರ 'ತುಘಲಕ್' ಪಾತ್ರವು ಉಡುಪಿ, ಪುತ್ತೂರು, ಮಂಗಳೂರು ಮುಂತಾದೆಡೆ ಪ್ರದರ್ಶನದಲ್ಲಿ ಕಲಾಭಿಮಾನಿಗಳ ವಿಶೇಷ ಗಮನ ಸೆಳೆದಿತ್ತು.

'ತುಳು ಪಾಡ್ದನ'ದ ಕತೆಯನ್ನು ಮತ್ತು ಪಂಜೆ ಮಂಗೇಶರಾಯರು ಬರೆದ 'ಕೋಟಿಚೆನ್ನಯ' ಕತೆಯನ್ನು ಆಧರಿಸಿ ವಿಶುಕುಮಾರ್ ಕೋಟಿಚೆನ್ನಯ ನಾಟಕ ರಚಿಸಿದರು. 'ಜನಬಲ, ಹಣಬಲವಿಲ್ಲದೆಯೂ ಎಂದಿಗೂ ಯಾರಿಗೂ ಹೆದರದೆ ಅನ್ಯಾಯವನ್ನು ಸಹಿಸದೆ ಛಲ, ಸ್ವಾಭಿಮಾನದಿಂದ ಹೋರಾಡಬೇಕು ಎಂಬಂತೆ ಈ ನಾಟಕದ ಸಂಭಾಷಣೆಗಳು ಪಾತ್ರಚಿತ್ರಣ, ರಂಗನಿರ್ಮಿತಿ ತಂತ್ರಗಳು ಪರಿಣಾಮಕಾರಿಯಾಗಿ ಬಂದಿವೆ' (ನರೇಂದ್ರ ರೈ ದೇರ್ಲ ಕೃತಿ – 'ವಿಶುಕುಮಾರ್' ಪು. 28).

**10–03–1963ರಂದು ಮುಂಬಯಿಯಲ್ಲಿ ಪ್ರಥಮ ಪ್ರಯೋಗ ಕಂಡ ವಿಶುಕುಮಾರರ 'ಕೋಟಿ ಚೆನ್ನಯ' ನಾಟಕದ ಒಂದು ದೃಶ್ಯ. ಸಂಯೋಜನೆ : ಬಿ. ಸೋಮಶೇಖರ ಪುತ್ರನ್. ಕಲಾವಿದರು : ಸೋಮಶೇಖರ, ಕೆ.ಬಿ. ವಾಮನ್, ನಾರಾಯಣ ರಾವ್, ಭೋಜರಾಜ್ ಮುಂತಾದವರು.**

ವಿಶುಕುಮಾರರ ಕೋಟಿ ಚೆನ್ನಯ ನಾಟಕ 24 ದೃಶ್ಯಗಳನ್ನೊಳಗೊಂಡಿದೆ. ಪ್ರದರ್ಶನಾವಧಿ ಮೂರು ತಾಸುಗಳು. ಸಮಕಾಲೀನ ಬುದ್ಧಿಜೀವಿ ಮನಸ್ಸಿನ ಚಿಂತನೆಯೊಂದು ಪ್ರಥಮ ಬಾರಿ ಇಲ್ಲಿ ಕಾಣಿಸಿಕೊಂಡಿದೆ. ನಾಟಕದ ಮೂಲಕ ಕಲೆಯ ಇತರ ಹಲವು ಕ್ಷೇತ್ರಗಳಿಗೆ ಆಧುನಿಕ ಚಿಂತನೆಗಳಿಗೆ, ಅಕಾಡೆಮಿಕ್ ವಲಯಗಳಿಗೆ ಪ್ರಖರ ಚಿಂತನೆಯ ವಿಶುಕುಮಾರ್‌ರಂತಹ ತೆರೆದ ಮನಸ್ಸೊಂದು ಇಲ್ಲಿ ಕ್ರಿಯಾಶೀಲವಾಯಿತೆಂಬುದು ಗಮನಾರ್ಹ ಸಂಗತಿ (ಈಶ್ವರ ಅಲೆವೂರು – ಕನ್ನಡ ವಾಙ್ಮಯಕ್ಕೆ ವಿಶುಕುಮಾರ್ ಕೊಡುಗೆ ಪು. 398).

**ಬಿ. ಭೋಜ ಸುವರ್ಣ (1940) – ನಟರಾಜ ನಾಟಕ ರಂಗ**

1956ರಲ್ಲಿ 'ದೋಸ್ತಿ ಮಲ್ತಿನ ದ್ರೋಹ' ಎನ್ನುವ ಕೃತಿಯೊಂದಿಗೆ ನಾಟಕ ರಚನೆಗೆ ತೊಡಗಿದ ಈ ಹಿರಿಯ ನಾಟಕಕಾರರು ಮುಂದೆ ಕೈಪತ್ತಿನ ಕಂಡನಿ, ಮನಸ್ಸೇ ಮೈದಾನ, ಪೊಸಜೀವನ, ದಾರೆದ ಸೀರೆ, ಕತ್ತಿ ಕಾಂತಣ್ಣೆ, ಮುಂತಾದ ಹಲವು ಸಾಮಾಜಿಕ, ತುಳು, ಕನ್ನಡ ನಾಟಕಗಳಿಗೆ ಹೆಸರಾಗಿ ಮುಂದೆ ಗೀತರಚನಾಕಾರ, ಚಿತ್ರ ಸಾಹಿತಿಯಾಗಿಯೂ ಪ್ರಸಿದ್ಧರಾದರು. ಬಾಲ್ಯದಿಂದಲೇ ಆಶುಗಾಯಕರಾಗಿದ್ದ ಇವರು ಹಿನ್ನೆಲೆ ಗಾಯಕರಾಗಿ, ಗೀತರಚನಕಾರರಾಗಿ, 1962ರ ಸುಮಾರಿಗೆ ನಟರಾಜ ನಾಟಕ ರಂಗ ಎನ್ನುವ ತಂಡ ಕಟ್ಟಿ ತನ್ನ ನಾಟಕಗಳನ್ನು ಪ್ರದರ್ಶಿಸಿದವರು. ಪ್ರಥಮ ತುಳುಚಿತ್ರ 'ಎನ್ನ ತಂಗಡಿ'ಗಾಗಿ ಇವರು ರಚಿಸಿದ ಜನಪ್ರಿಯ ಹಾಡು 'ಮನಸ್ ನಿರ್ಮಲ/ ದೀದ್ ಈ ಬಾಳ್‌ಂಡ/ ಅವ್ವೇ ಒಂಜಿ ಮಂದಿರ' ಇದು ಮೂಲತಃ ರಂಗಕ್ಕಾಗಿಯೂ ಬರೆದುದಾಗಿತ್ತು.

ಬಾಲ್ಯದಿಂದಲೇ ಸಾಹಿತ್ಯ, ಸಂಗೀತ, ಕುಣಿತ ಕಲೆಯ ಒಲವನ್ನು ಬೆಳೆಸಿಕೊಂಡವರು. 'ನಟರಾಜ ನಾಟಕ ರಂಗ' ಎನ್ನುವ ಸಮಾನ ಮನಸ್ಕ ಗೆಳೆಯರ ಇವರ ತಂಡದ ನಾಟಕಗಳು ಅಂದಿನ ಅವಿಭಜಿತ ದ.ಕ. ಜಿಲ್ಲೆಯ ಹಲವು ಕಡೆ ಮಾತ್ರವಲ್ಲದೆ ಕೇರಳದ ಗಡಿಭಾಗ ಮತ್ತು ಮುಂಬಯಿ ನಗರದಲ್ಲೂ ಪ್ರದರ್ಶಿತವಾಗಿ ಜನಪ್ರಿಯ. ಇವರ ನಿರ್ದೇಶನ ಮತ್ತು ತುಳುಭಾಷೆಯ ಸರಳ ಸುಂದರ ಪದಪುಂಜದ ಹಾಡುಗಳಿಂದಾಗಿ ಎಲ್ಲೆಲ್ಲೂ ಹೆಸರು ಪಡೆದರು. 1500ಕ್ಕೂ ಮಿಕ್ಕ ತುಳು, ಕನ್ನಡ ರಂಗಗೀತೆಗಳನ್ನು ಬರೆದಿರುವರು. ದಿ| ವಿಶುಕುಮಾರರ 'ಅಖಂಡ ಬ್ರಹ್ಮಚಾರಿಗಳು' ಎನ್ನುವ ಕನ್ನಡ ಚಲನಚಿತ್ರದಲ್ಲೂ ನಟಿಸಿರುವರು.

ವೃತ್ತಿಯಲ್ಲಿ ಮೀನು ಮಾರಾಟ ಫೆಡರೇಶನ್‌ನಲ್ಲಿ ಮೆಕ್ಯಾನಿಕ್ ಆಗಿದ್ದ ಭೋಜ ಸುವರ್ಣರು ನಾಟಕರಂಗದಲ್ಲಿ ಬಹಳಷ್ಟು ಕಿರಿಯ ಕಲಾವಿದರನ್ನು ತಮ್ಮ ಗರಡಿಯಲ್ಲಿ ಪಳಗಿಸಿದ್ದಾರೆ. ಪರಿಯಾಳ ಸಂಘದಿಂದ 'ಪರಿಯಾಳ ರತ್ನ' ಎನ್ನುವ ಬಿರುದನ್ನೂ

ಪಡೆದಿರುವ ಇವರು ತುಳು ಸಿನೆಮಾ ಹಾಡುಗಳಿಂದಾಗಿ ಆಕಾಶವಾಣಿಯ ಕೇಳುಗರಿಗೂ ಸುಪರಿಚಿತರು. ಗಮನಾರ್ಹ ತುಳು ನಾಟಕರಂಗ ಸೇವೆಗಾಗಿ 2009ನೆಯ ಸಾಲಿನ ಕರ್ನಾಟಕ ತುಳು ಅಕಾಡೆಮಿಯ ಗೌರವ ಪ್ರಶಸ್ತಿ ಭಾಜನರು. ಅಲ್ಲದೆ ಹಲವಾರು ಸಂಘಸಂಸ್ಥೆಗಳು ಶ್ರೀಯುತರ ಸೇವೆಯನ್ನು ಗುರುತಿಸಿ ಗೌರವಿಸಿವೆ.

**ಎಂ.ಎಸ್. ಇಬ್ರಾಹಿಂ (1940–2011) – ಎಂ.ಎಸ್. ಆರ್ಟ್ಸ್, ಮಣ್ಣಗುಡ್ಡ**



ಗುರು ದಿ| ಬಿ. ದೂಮಪ್ಪ ಮಾಸ್ತರರ ಪ್ರೇರಣೆಯಿಂದ ಅರ್ವತ್ತರ ದಶಕದಿಂದಲೇ ತುಳು ನಾಟಕ ರಚನೆಗೆ ತೊಡಗಿದವರು.

‘ಮೋಕೆದ ಪೊದು’ (1966) (ಐದು ಮುದ್ರಣ ಕಂಡಿದೆ), ‘ನಂಜಿದ ನಾಲಯಿ’, ‘ಪೊಣ್ಣೇ ಸಮಾಜದ ಕಣ್ಣ್’, ‘ಒಂಜಿ ಪೊಣ್ಣು ಆಜಿಕಣ್ಣ್’ – ಮುಂತಾಗಿ ನೂರರಷ್ಟು ತುಳು ನಾಟಕ, ಜತೆಗೆ ಕನ್ನಡ, ಉರ್ದು, ಇಂಗ್ಲಿಷ್, ಕೊಂಕಣಿ, ಬ್ಯಾರಿ ಭಾಷೆಗಳಲ್ಲೂ ಬರೆದವರು. ‘ಎಂ.ಎಸ್. ಆರ್ಟ್ಸ್’ ಲಾಂಛನದಲ್ಲಿ ನಾಟಕ ಪ್ರದರ್ಶಿಸಿದ ಇವರು ನಟ, ನಿರ್ದೇಶಕ, ವರ್ಣಾಲಂಕಾರ ಮತ್ತಿತರ ರಂಗಗಳಲ್ಲೂ ಪರಿಣತರು. ಮಂಗಳೂರಿನ ಐ.ಟಿ.ಐ.ಯಲ್ಲಿ ನೌಕರಿಯಲ್ಲಿದ್ದರು. ಸುದೀರ್ಘ ಅವಧಿಯ ವಿವಿಧ ಭಾಷಾರಂಗ ಸೇವೆಗೈದ ಎಂ.ಎಸ್. ಇಬ್ರಾಹಿಂರಿಗೆ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಗೌರವ ಪುರಸ್ಕಾರ ಲಭಿಸಿದೆ.

ಶಾಲಾದಿನಗಳಲ್ಲಿ ಗುರುಗಳಾದ ದೂಮಪ್ಪ ಮಾಸ್ತರ್, ಬಿ. ವೆಂಕಟರಮಣ ಆಚಾರ್ ಇವರ ಪ್ರೋತ್ಸಾಹದಿಂದ ಸಾಹಿತ್ಯ, ಕಲೆಗಳ ಅಭಿರುಚಿ, ಬೆಳೆಸಿಕೊಂಡು ನಾಟಕಕ್ಷೇತ್ರಕ್ಕೆ ಬಂದರು. ನಟನೆ, ನಾಟಕ ರಚನೆ, ನಿರ್ದೇಶನ, ವರ್ಣಾಲಂಕಾರ, ರಂಗಸಜ್ಜಿಕೆ ಮುಂತಾದ ಸಕಲ ವಿಭಾಗಗಳಲ್ಲಿ ಪರಿಣತಿ ಗಳಿಸಿದರು. ‘ಎಂ.ಎಸ್. ಆರ್ಟ್ಸ್’ ಎಂಬ ವರ್ಣಾಲಂಕಾರ, ವೇಷಭೂಷಣ ಸಂಸ್ಥೆಯನ್ನು ಹೊಂದಿದರು. ಉತ್ತಮ ಹಾಸ್ಯನಟರಾಗಿ ಹೆಸರಾಗುವುದ ರೊಂದಿಗೆ ತುಳು, ಕನ್ನಡ, ಬ್ಯಾರಿ, ಕೊಂಕಣಿ, ಇಂಗ್ಲಿಷ್ ಭಾಷೆಗಳಲ್ಲಿ ನಾಟಕ ರಚಿಸಿದರು. ಯಕ್ಷಗಾನ ಕ್ಷೇತ್ರದಲ್ಲೂ ಕೈಯ್ಯಾಡಿಸಿ, ಮಾಪಿಳ್ಳೆ ಮಲೆಯಾಳ ಭಾಷೆಯಲ್ಲಿ ಯಕ್ಷಗಾನ ಪ್ರಸಂಗರಚನೆ ಮಾಡಿ ಪ್ರದರ್ಶಿಸಿದರು. ‘ಶಮಾ ಕಲಾಮಂದಿರ’ ಎನ್ನುವ ಮತ್ತೊಂದು ಸಂಸ್ಥೆಯನ್ನೂ ಕಲಾಚಟುವಟಿಕೆಗಾಗಿ ಸೃಜಿಸಿದರು. ಸುಮಾರು ಅರುವತ್ತು ವರ್ಷ ತುಳು ನಾಟಕ ಚಟುವಟಿಕೆ ನಡೆಸಿದರು. ಮಂಗಳೂರಿನ ಐ.ಟಿ.ಐ.ಯಲ್ಲಿ ಸೇವೆಯಲ್ಲಿದ್ದ ಎಂ.ಎಸ್.ಇಬ್ರಾಹಿಂ ತುಳು ಸಾಹಿತ್ಯ ಅಕಾಡೆಮಿಯ ಗೌರವಪ್ರಶಸ್ತಿಯಂತಹ ಹಲವು ಪುರಸ್ಕಾರಗಳನ್ನು ಗಳಿಸಿದ್ದು, ತುಳುವರ ಸಂಸ್ಕೃತಿಯನ್ನೇ ತನ್ನ ತುಳುನಾಟಕಗಳಲ್ಲಿ ಬಿಂಬಿಸಿದರು.

## ಎಮ್.ಕೆ. ಸೀತಾರಾಮ್ ಕುಲಾಲ್ (1941) – ಕಡಲನಾಡ ಕಲಾವಿದರು



ಪ್ರಸಿದ್ಧ ನಾಟಕಕಾರ ಚಲನಚಿತ್ರ ಸಾಹಿತಿ, ನಿರ್ದೇಶಕ ಸೀತಾರಾಮ ಕುಲಾಲ್‌ರು ಕನ್ನಡ ಮತ್ತು ತುಳು ಭಾಷೆಗಳಲ್ಲಿ ಪೌರಾಣಿಕ, ಚಾರಿತ್ರಿಕ, ಸಾಮಾಜಿಕ ನಾಟಕಗಳು, ನೃತ್ಯರೂಪಕಗಳೆಂದು ಸುಮಾರು 66 ಕೃತಿಗಳನ್ನು ರಚಿಸಿದವರು. ತುಳುವಿನಲ್ಲಿ 'ಮಣ್ಣ್‌ದ ಮಗಲ್ ಅಬ್ಬಕ್ಕ', 'ಸತ್ಯೊನೇ ದೇವೆರ್' ('ಉಡಲ್ದ ತುದರ್' ಎನ್ನುವ ಹೆಸರಲ್ಲಿ ಚಲನಚಿತ್ರವಾಗಿದೆ.), 'ಕರ್ಲ್ಡ್ ಉರ್ಲು', ನಾಟಕದಾಯೆ (2000– ಪ್ರಕಟಿತ) ಮುಂತಾಗಿ ನಾಟಕ ರಚಿಸಿ, ತಮ್ಮದೇ ಆದ 'ಕಡಲ ನಾಡ ಕಲಾವಿದರು' ತಂಡದ ಮೂಲಕ ಪ್ರದರ್ಶಿಸಿದರು. 'ಪಗೆತ ಪುಗೆ' ಚಲನಚಿತ್ರವಾಗಿರುವ ಇವರ ಇನ್ನೊಂದು ಪ್ರಸಿದ್ಧ ನಾಟಕ. ಅವರ ನಾಟಕಗಳ ಸಂಖ್ಯೆ ಬೆರಳೆಣಿಕೆಯಾದರೂ ನಿರ್ದೇಶನ ಶಿಸ್ತು, ಆದರ್ಶಮಯ ಕಥೆ, ಕಾವ್ಯಾತ್ಮಕ ಗೀತೆಗಳ ರಚನೆಗೆ ಕುಲಾಲರು ಗಮನಾರ್ಹರೆನಿಸಿದವರು. ತುಳು ಹಾಗೂ ಕನ್ನಡ ನಾಟಕಗಳಿಗೆ ಸುಮಾರು 400ಕ್ಕೂ ಮಿಕ್ಕ ಹಾಡುಗಳನ್ನು ರಚಿಸಿದರು. 11 ತುಳು ಚಿತ್ರಗಳಿಗೆ 25ರಷ್ಟು ಹಾಡುಗಳನ್ನು ಬರೆದವರು.

ಅಭಿನಯ ಚತುರರೂ ಆಗಿದ್ದ ಕುಲಾಲರು ನಟಿಸಿದ ಸುಮಾರು 8 ನಾಟಕಗಳು ಜಿಲ್ಲಾ ಮತ್ತು ರಾಜ್ಯ ಮಟ್ಟದ ಸ್ಪರ್ಧೆಗಳಲ್ಲಿ ಬಹುಮಾನ ಗಳಿಸಿದವು. ತುಳು ಅಕಾಡೆಮಿಯ ಗೌರವ ಪ್ರಶಸ್ತಿ ಸೇರಿದಂತೆ ರಂಗಭೂಮಿ ಸೇವೆಗಾಗಿ ಹಲವು ಪ್ರಶಸ್ತಿ ಪಡೆದು 2005–



**ಎಂ.ಕೆ. ಸೀತಾರಾಮ ಕುಲಾಲ್ ಅವರ 'ಅಬ್ಬಕ್ಕ' ನಾಟಕ ಮುಂಬಯಿಯ ಷಣ್ಮುಖಾನಂದ ಸಭಾಭವನದಲ್ಲಿ 2006ರಲ್ಲಿ ಪ್ರದರ್ಶನಗೊಂಡಾಗ. ಕಲಾವಿದರು : (ಬಲದಿಂದ) ಎಂ.ಕೆ. ಸೀತಾರಾಮ ಕುಲಾಲ್, ಕೃಷ್ಣ ಬಪ್ಪಾಲ್, ಶೋಭಾ ಮತ್ತು (ಎಡದಿಂದ) ಎಂ.ಎಸ್. ರಾವ್, ದಿನೇಶ್ ಅತ್ತಾವರ ಮತ್ತಿತರರು. ಇದೇ ಸಂದರ್ಭದಲ್ಲಿ ಮುಂಬಯಿ, ನಾಸಿಕ್ ಹಾಗೂ ಪೂನಾದಲ್ಲಿ 'ಕಡಲನಾಡ ಕಲಾವಿದರು' ತಂಡದ ಈ ನಾಟಕ ಐದು ಪ್ರದರ್ಶನಗಳನ್ನು ಕಂಡಿತು.**

2008ರ ಅವಧಿಯಲ್ಲಿ ಸೀತಾರಾಮ ಕುಲಾಲರು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರು ಆಗಿದ್ದರು. ಇವರ ತುಳುವಿನ ಚಲನಚಿತ್ರಗೀತೆಗಳು ಅತ್ಯಂತ ಜನಪ್ರಿಯವಾಗಿವೆ.

**ಎಂ. ಪುರುಷೋತ್ತಮ (1941) – ತುಳುನಾಡ ನಾಟಕ ಸಭಾ (ರಿ)**

ಇವರ ಮೊದಲ ರಂಗಪ್ರವೇಶ ದಿನಾಂಕ 13.05.1962ರಂದು ಕರ್ನಾಟಕ ಸೇವಾ ಸಂಘ (ರಿ) ಕಂಬುಳ, ಮಂಗಳೂರು ಇದರ ವಾರ್ಷಿಕೋತ್ಸವ ಸಮಾರಂಭದ ಅಂಗವಾಗಿ ಅಭಿನಯಿಸಿದ ಶ್ರೀ ಪಿ. ಎಸ್. ರಾಯರ 'ಕಪ್ಪು ಹುಡುಗಿ' (ಕನ್ನಡ), ಎ. ವಿಶ್ವನಾಥರ 'ಪೊಸ ಮದಿಮಯೆ' (ತುಳು) ನಾಟಕಗಳ ಮೂಲಕ ಆಯಿತು. ನಂತರ ಸಹೋದರ ಕಲಾ ವೃಂದದ ನಾಟಕಗಳಲ್ಲಿ ಮತ್ತು ಜಿಲ್ಲೆಯ ಇತರ ಹಲವು ಸಂಘ ಸಂಸ್ಥೆಗಳ ನಾಟಕಗಳಲ್ಲಿ ಅಭಿನಯಿಸಿದ್ದರು.

ತುಳು ನಾಟಕಗಳನ್ನೇ ಪ್ರದರ್ಶಿಸಬೇಕೆಂಬ ಉದ್ದೇಶದಿಂದ 1964ರಲ್ಲಿ ಮಂಗಳೂರು ಅಳಕೆ ಸಂಕದ ಬಳಿ 'ತುಳು ನಾಟಕ ಸಭಾ' ಇದರ ಸ್ಥಾಪನೆ ಮಾಡಿದರು. ತುಳು ನಾಟಕಗಳ ಪ್ರದರ್ಶನ, ನಟನೆ, ನಿರ್ದೇಶನ, ರಂಗ ಮಂಟಪ ನಿರ್ಮಾಣ, ರಂಗವ್ಯವಸ್ಥೆ, ವರ್ಣಾಲಂಕಾರ ಮುಂತಾಗಿ ಸಮಗ್ರ ನಿಟ್ಟಿನಲ್ಲಿ ಪರಿಣತರಾದರು.

1966ರಲ್ಲಿ 'ಬೊಲ್ಪುದಾಂತಿ ತುಡರ್' ನಾಟಕ ರಚನೆ ಮಾಡಿದರು. ದಿನಾಂಕ 22.10.1967ರಂದು 'ರಸಿಕ ರಂಗ ಮಿತ್ರ ಮಂಡಳಿ'ಯ ಕಲಾವಿದರಿಂದ ಡಾನ್ ಬೋಸ್ಕೋ ರಂಗ ಮಂಟಪದಲ್ಲಿ ಪ್ರಥಮ ಪ್ರದರ್ಶನ ನಡೆಯಿತು. ತುಳು ನಾಟಕ ಸಭಾ ಮತ್ತು ಇತರ ಕಲಾ ಸಂಘಗಳಿಂದ ಜಿಲ್ಲೆಯಲ್ಲಿ ಹದಿಮೂರು ಪ್ರದರ್ಶನದ ಬಳಿಕ ಸಹೋದರ ಕಲಾವೃಂದದ ಸಾಹಿತ್ಯ ವಿಭಾಗದ ಮೂಲಕ ಈ ನಾಟಕ ಕೃತಿ ಪ್ರಕಟಗೊಂಡಿತು. ನೂರಾರು ಸಂಘ ಸಂಸ್ಥೆಗಳು ಅನುಮತಿ ಪಡೆಯದೆ ಹಲವು ಬಾರಿ ಈ ನಾಟಕವನ್ನು ಕೈಗೆತ್ತಿಕೊಂಡು ಆಡಿದ್ದರು ಎಂದು ಪುರುಷೋತ್ತಮರೆನ್ನುತ್ತಾರೆ.

1966ರಿಂದ 1980ರ ವರೆಗೆ– 'ಬೊಲ್ಪುದಾಂತಿ ತುಡರ್', 'ಪೊನ್ನ ಸಂಸಾರ', 'ನಿನನ್ ಬದ್ಕರೆ ಬುಡಯೆ', ಧರ್ಮ ಮುನಿನಗ, 'ವೀರಪಾಂಡ್ಯೆ ಕಟ್ಟಬೊಮ್ಮೆ', 'ನಂಬಿನ ದೇವೆರ್ ಇಂಬು ಕೊರಿಯೆರ್', 'ಈ ಬಲ್ಲ್ ನಿಕ್ಕಾಯಾವಾ?', 'ಕೈ ಪತ್ತುನು ಏರ್?', 'ಅಧ್ಯಕ್ಷೆರ್ ಓಲುಲ್ಲೆರ್?', (ತುಳು) ಮತ್ತು ಬದುಕಿಗಾಗಿ ಸಾವು (ಬಾಬ್ಬಿಲಿ ಬಾಂಗಿ ಕೊಂಕಣಿ ನಾಟಕದ ತರ್ಜುಮೆ) ಕನ್ನಡ ನಾಟಕಗಳನ್ನು ಬರೆದು, ನಟಿಸಿ, ನಿರ್ದೇಶಿಸಿ, ತುಳು ನಾಟಕ ಸಭಾದ ಕಲಾವಿದರ ಮೂಲಕ ತುಳು ನಾಟಕ ಸ್ಪರ್ಧೆಗಳಲ್ಲಿ ಭಾಗವಹಿಸಿ ಹಲವಾರು ಬಹುಮಾನಗಳನ್ನು ಪಡೆದುಕೊಂಡರು. ಬಳಿಕ ಜಿಲ್ಲೆಯ ಹಲವಾರು

ಸಂಘ–ಸಂಸ್ಥೆಗಳ ಇತರ ನಾಟಕಗಳಲ್ಲೂ ಅಭಿನಯಿಸಿ ಜನಮೆಚ್ಚುಗೆ ಗಳಿಸಿದರು.

ಎಂ. ಪುರುಷೋತ್ತಮರ 'ತುಳು ನಾಟಕ ಸಭಾ'ದ ಕಲಾವಿದರು ಜಿಲ್ಲಾಮಟ್ಟದ ತುಳು ನಾಟಕ ಸ್ಪರ್ಧೆಗಳಲ್ಲಿ ಭಾಗವಹಿಸಿ ಪಡೆದುಕೊಂಡಿರುವ ಬಹುಮಾನಗಳು ಹಲವು:

* 1970– ಬೊಲ್ಪುದಾಂತಿ ತುಡರ್– ಅಶೋಕ ನಗರ ಫ್ರೆಂಡ್ಸ್ ಸರ್ಕಲ್ *ವೀರೆ ಪಾಂಡ್ಯೆ ಕಟ್ಟ ಬೊಮ್ಮನ್– ನವಭಾರತ– ತುಳುಕೂಟ ನಾಟಕಸ್ಪರ್ಧೆ ನಾಟಕ: ದ್ವಿತೀಯ, ನಟಿ: ಪ್ರಥಮ, ಸಂಗೀತ: ಪ್ರಥಮ. ರಂಗ ಸಜ್ಜಿಕೆ: ಪ್ರಥಮ, ನಿರ್ದೇಶನ: ಪ್ರಥಮ

* 1976 'ನಂಬಿನ ದೇವೆರ್ ಇಂಬು ಕೊರಿಯೆರ್'– ನವಭಾರತ– ತುಳುಕೂಟ. ಸ್ಪರ್ಧೆಯಲ್ಲಿ ನಾಟಕ: ತೃತೀಯ, ಸಂಗೀತ: ಪ್ರಥಮ, ಹಾಸ್ಯನಟ: ದ್ವಿತೀಯ ಹಾಡುಗಾರಿಕೆ: ದ್ವಿತೀಯ, ರಂಗ ಸಜ್ಜಿಕೆ: ದ್ವಿತೀಯ

* ಅದೇ ವರ್ಷ ಇದೇ ನಾಟಕ ಪ್ರಯೋಗಕ್ಕೆ – ವಿದ್ಯಾದಾಯಿನಿ ಹಳೆ ವಿದ್ಯಾರ್ಥಿ ಸಂಘ, ಸುರತ್ಕಲ್ ಇಲ್ಲಿ ನಾಟಕ: ತೃತೀಯ, ಖಳನಾಯಕ: ಪ್ರಥಮ ಹಾಗೂ ದ್ವಿತೀಯ ನಿರ್ದೇಶನ: ದ್ವಿತೀಯ

* ಬೊಲ್ಪು ದಾಂತಿ ತುಡರ್– ಬೆಂಗರೆ ಯುವಕ ಸಂಘ, ಬೆಂಗರೆ– ಇವರ ಆಶಯದ ಸ್ಪರ್ಧೆಯಲ್ಲಿ ನಾಟಕ: ತೃತೀಯ ಬಹುಮಾನ ಗಳಿಸಿತು.

**ಮಂಗಳೂರು ಪುರಭವನದಲ್ಲಿ 6–12–1973ರಲ್ಲಿ ಪ್ರದರ್ಶನ 'ವೀರಪಾಂಡ್ಯೆ ಕಟ್ಟಬೊಮ್ಮೆ'. ಪಾತ್ರಧಾರಿಗಳು : ವಿವೇಕಾನಂದ ಪಾಟೀಲ್ (ಯೆಟ್ಟಪ್ಪ), ಕೆ. ನವೀನ್‌ಚಂದ್ರ (ಡೇವಿಡ್ ಸನ್), ಶ್ರೀನಿವಾಸ ನಾಯಕ್ (ಜೇಕ್ಸನ್), ಜೀವರತ್ನ ಚನಿಲೊ (ಕಟ್ಟಬೊಮ್ಮ) ಮತ್ತು ಎಂ. ಭಾಸ್ಕರ ಶೆಟ್ಟಿ (ಬೆನರ್‌ಮ್ಯಾನ್). ನಾಟಕ ರಚನೆ, ದಿಗ್ದರ್ಶನ: ಎಂ. ಪುರುಷೋತ್ತಮ, ಜೀವರತ್ನ ಸನಿಲ್**

* ಹೀಗೆ ಒಂದು ಕಾಲಾವಧಿಯಲ್ಲಿ ಮಂಗಳೂರು ತುಳುನಾಟಕ ರಂಗಕ್ಕೆ ಗಮನಾರ್ಹ ಕೊಡುಗೆ ಪುರುಷೋತ್ತಮರದ್ದಾಗಿದೆ. ಜೀವರತ್ನ ಚನಿಲೊ ಇವರ ಚಾರಿತ್ರಿಕ ನಾಟಕಗಳ ಕಥಾನಾಯಕ ಪಾತ್ರ ಮತ್ತು ನಿರ್ದೇಶನ ಮಾಡುತ್ತಿದ್ದರು.

**ರತ್ನಾಕರ ರಾವ್ ಕಾವೂರು (1942)**

ನಾಟಕಕಾರರಾಗಿ ಕಳೆದ 50 ವರ್ಷಗಳಿಂದಲೂ ಸಕ್ರಿಯರಾಗಿರುವ ಇನ್ನೋರ್ವರು 'ನಾಟಕ ಕಲಾರತ್ನ' ಬಿರುದಾಂಕಿತರಾದ ರತ್ನಾಕರರಾವ್ ಕಾವೂರು. 1962ರಲ್ಲಿ ರಾಮ ಕಿರೋಡಿಯನ್‌ರ ಸಲಹೆಯಂತೆ 'ಭೂತಾಳ ಪಾಂಡ್ಯೆ' ಚಾರಿತ್ರಿಕ ನಾಟಕ ರಚಿಸಿದ ಇವರು ಬಳಿಕ ಸತ್ಯಶೂರ ಹರಿಶ್ಚಂದ್ರ, ನಳದಮಯಂತಿ, ರಾಣಿ ಅಬ್ಬಕ್ಕ, ಸಾಮ್ರಾಟ್ ಸಂಕಣ್ಣೆ, ಮಿನಿಸ್ಟರ್ ಮುಂಡಪ್ಪೆರ್ (ಇದರಲ್ಲಿ ಕರ್ನಾಟಕದ ಖ್ಯಾತ ಮುಖ್ಯಮಂತ್ರಿ ಚಂದ್ರು - ಪಾತ್ರ ವಹಿಸಿದ್ದರು.) ಅಬ್ಬರದ ಆದಿಶಕ್ತಿ ಧರ್ಮಜ್ವಾಲೆ, ತಬುರನ ತೆಲಿಕೆ ಮುಂತಾದ ನೂರಕ್ಕೂ ಮಿಕ್ಕಿ ಚಾರಿತ್ರಿಕ, ಪೌರಾಣಿಕ, ಸಾಮಾಜಿಕ ಕೃತಿಗಳನ್ನು ರಚಿಸಿದ್ದಾರೆ. ಭೂತಾಳ ಪಾಂಡ್ಯೆ, 'ತಬುರನ ತೆಲಿಕೆ' ಸತ್ಯ ಶೂಗ ಹರಿಶ್ಚಂದ್ರೆ ಮುಂತಾದ ನಾಟಕಗಳು ಪ್ರಕಟವಾಗಿದೆ.

ರತ್ನಾಕರ ರಾವ್ ಅವರು 64 ತುಳು ನಾಟಕಗಳನ್ನೂ 39 ಕನ್ನಡ ನಾಟಕಗಳನ್ನೂ ರಚಿಸಿ. ನೂರರ ಸಂಖ್ಯೆಯನ್ನೂ ಮೀರಿಸಿದ್ದು ಮಾತ್ರ ವಲ್ಲದೆ ಇವರು ನಿವೃತ್ತ ಶಿಕ್ಷಕರಾದುದ ರಿಂದ ಇವೆಲ್ಲ ನಾಟಕಗಳಲ್ಲೂ ಆದರ್ಶ, ನೀತಿ ಮತ್ತು ವಾಸ್ತವಿಕತೆ, ಶಿಕ್ಷಿತ, ಶುದ್ಧ, ಸರಳ ಭಾಷೆಯನ್ನು ಬಳಸಿದ ನಾಟಕ ಕಲಾರತ್ನರೆನಿಸಿ ದ್ದಾರೆ. ಇವರ ನಾಟಕಗಳು ದ.ಕ. ಜಿಲ್ಲೆ, ಕಾಸರಗೋಡು, ಬೆಂಗಳೂರು, ಮುಂಬಯಿ ಮುಂತಾದೆಡೆ ಹೆಚ್ಚಾಗಿ ಉತ್ಸವ, ಜಾತ್ರೆಗಳ, ಧಾರ್ಮಿಕ ಹಬ್ಬಗಳ ಸಂದರ್ಭಗಳಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಪ್ರದರ್ಶನ ಕಂಡಿವೆ.

**ರತ್ನಾಕರ ರಾವ್ ಕಾವೂರರ 'ಮಹಿಷಮರ್ಧಿನಿ' ನಾಟಕದಲ್ಲಿ ರೋಹಿದಾಸ್ ಕದ್ರಿ ಮತ್ತು ಆರ್.ಕೆ. ಮಂಗಳೂರು (1975)**

ಕಾವೂರರ 'ಸಾಮ್ರಾಟ್ ಸಂಕಣ್ಣೆ' – ಇದು ಇಕ್ಕೇರಿ ನಾಯಕರ ಶೌರ್ಯ ಸಾಹಸದ ಕಥಾನಕ. ಇಕ್ಕೇರಿ ವಂಶದ ದೊಡ್ಡ ಸಂಕಣ್ಣ ನಾಯಕನು (1546–1559) ಇಕ್ಕೇರಿ ಸಂಸ್ಥಾನದ ಕೀರ್ತಿಯನ್ನು ಅಂದಿನ ಕಾಲದ ದೇಶ ವಿದೇಶಗಳಲ್ಲಿ ವಿಸ್ತರಿಸುವಂತೆ ಮಾಡಿದ ಅಸಾಮಾನ್ಯ ಸಾಹಸಿ, ದೇಶಭಕ್ತಿಯ ಪರಮ ವೀರ ಅರಸನಾಗಿದ್ದ. ಈಗಿನ ನೇಪಾಳ ಸಹಿತ ದೇಶಾದ್ಯಂತ ಸಂಚಾರಮಾಡಿ ವಿವಿಧ ಕಡೆ ಜಂಗಮಮಠಗಳನ್ನು ಸ್ಥಾಪಿಸಿದ ಕೀರ್ತಿಯೂ ಈತನಿಗೆ ಸಲ್ಲುತ್ತದೆ. ಇಂತಹ ಮಠಗಳ ಕುರುಹುಗಳು ಇಂದಿನ ಉಡುಪಿ, ಮಂಗಳೂರು (ಮಠದಕಣಿ) ಮುಂಡ್ಕೂರು ಮುಂತಾದೆಡೆಯೂ ಕಾಣಸಿಗುತ್ತದೆ.

ಇಂತಹ ಅನುಪಮ ಸಾಹಸಿ ಸಾಮ್ರಾಟ್ ಸಂಕಣ್ಣನ ಜೀವನಕಥನ, ಮಲ್ಲ ಸಂಕಣ್ಣ – ಎಲ್ಯ ಸಂಕಣ್ಣರ ನಡುವಣ ಧರ್ಮಯುದ್ಧ ಇತ್ಯಾದಿಗಳನ್ನು ಮನ ಮುಟ್ಟುವಂತೆ, ನೀತಿ ಬೋಧಕವೂ ಎನಿಸುವಂತೆ ಈ ನಾಟಕದಲ್ಲಿ ರತ್ನಾಕರ ರಾವ್ ಚಿತ್ರಿಸಿದ್ದಾರೆ.

'ಭೂತಾಳಪಾಂಡ್ಯೆ' ಇಂತಹ ಇನ್ನೊಂದು ಮಹತ್ವದ ರಂಗಕೃತಿ. ಇದನ್ನು ಅಪೂರ್ವ ಜಾನಪದ / ಐತಿಹಾಸಿಕ ತುಳುನಾಟಕ ಎಂಬುದಾಗಿ ನಾಟಕಕಾರ ಹೇಳಿಕೊಂಡಿದ್ದಾರೆ. ದೇವಪಾಂಡ್ಯನ ವಂಶಾವಳಿಯ ಜಯಪಾಂಡ್ಯ, ಸತ್ಯವತಿ – ಇವಳ ಪುತ್ರ ಭೂತಾಳಪಾಂಡ್ಯ, ಕುಂಡೋದರ ಭೂತರಾಜ ಇಂತಹ ಸುಮಾರು 18 ಪಾತ್ರಗಳ ಈ ನಾಟಕ ಹನ್ನೊಂದು ದೃಶ್ಯಗಳನ್ನೊಳಗೊಂಡು ಉತ್ತಮ ಸಂಭಾಷಣೆಗಳಿಂದ ಕೂಡಿ ರಂಜನೀಯವಾಗಿದೆ. 'ನಳದಮಯಂತಿ' ಕೂಡಾ ಇಷ್ಟೇ ಸಶಕ್ತವಾದ ಪೌರಾಣಿಕ ನಾಟಕ. ಕಾವೂರರ ಎಲ್ಲ ನಾಟಕಗಳೂ ವಿವಿಧ ಸಂದರ್ಭಗಳಿಗಾಗಿ ರಚನೆಗೊಂಡು ಬಹುಪ್ರದರ್ಶನಗಳನ್ನು ಕಂಡವುಗಳೇ.

**ಆರ್.ಕೆ. ಉಳ್ಳಾಲ್ (ರಾಘವ ಉಳ್ಳಾಲ್) (1944–2013)**



ನಿರ್ದೇಶಕ, ಗೀತರಚನಕಾರ, ಚಿತ್ರಸಾಹಿತಿ ಆರ್ಕೆ ಉಳ್ಳಾಲ್, ಹಲವು ಹವ್ಯಾಸಿ ನಾಟಕ ತಂಡಗಳಲ್ಲಿ ಕೆಲಸ ಮಾಡುತ್ತಾ, 1976ರಲ್ಲಿ ಬರೆದ 'ಮಿಲಿಟ್ರಿದಾಯೆ ಕಂಡನ್ಯೆ' ಮಂಗಳೂರು ಆಕಾಶವಾಣಿಯ ಆರಂಭಿಕ ಪ್ರಸಾರ ನಾಟಕಗಳಲ್ಲೊಂದಾಗಿದ್ದು, ಇವರು ಮುಂದೆ ಬ್ರಹ್ಮಶ್ರೀ ನಾರಾಯಣ ಗುರು, ಪೇಂಟೆದ ಪೊದು, ಜಮೀನ್ದಾರ್ ಜಾರಪ್ಪೆ, ಅತ್ಯಂತ ಜನಪ್ರಿಯವಾದ 'ಲಕ್ಷ್ಮಿ ಬರ್ಪೊಲು'– ಮತ್ತಿತರ ನಾಟಕ ರಚಿಸಿ ನಿರ್ದೇಶಿಸಿದ್ದಾರೆ.

(ಇನ್ನಷ್ಟು ವಿವರ 'ನಿರ್ದೇಶಕರು' ಅಧ್ಯಾಯದಲ್ಲಿದೆ.)

ಆರ್.ಕೆ. ಉಳ್ಳಾಲ್ ಅಭಿನಯದ ರಾಮಚಂದ್ರ ಉಳ್ಳಾಲ ರಚಿಸಿದ ನಾಟಕ 'ಮಸ್ಕಿರಿ ಮಲ್ಪೊಡ್ಚಿ' ಕಲಾವಿದರು : (ಎಡದಿಂದ) ಮಾಧವ ಶಕ್ತಿನಗರ, ಸುಮನ, ಪಾತ್ರಿಯ ವೇಷದಲ್ಲಿ ಕುಳಿತ ನವೀನ್ ಡಿ ಪಡೀಲ್, ಮಾಧವ ಜಪ್ಪುಪಟ್ನ, ವೀಣಾ ಶಕ್ತಿನಗರ, ಆರ್.ಕೆ. ಉಳ್ಳಾಲ್ ಮತ್ತು ಸುಧೀರ್ ರಾಜ್ ಉರ್ವ

### ಡಾ. ಪಿ.ಎಸ್. ದಂಡೆಕೇರಿ (1946)



ಸಾಂಸಾರಿಕ, ಸಾಮಾಜಿಕ ನಾಟಕಗಳಿಗೆ ಹೆಸರಾಗಿರುವ ಪಿ. ಸಂಜೀವ ದಂಡಕೇರಿ 1964ರಲ್ಲಿ ಬರೆದ ಪ್ರಥಮ ತುಳು ನಾಟಕ 'ಕಲ್ಪಂದಿ ತಿಮ್ಮೆ', 1974ರಲ್ಲಿ ಬರೆದ 'ಬಯ್ಯಮಲ್ಲಿಗೆ' ಅತ್ಯಂತ ಜನಪ್ರಿಯ 20,000 ಪ್ರದರ್ಶನ ಕಂಡು; ಇಂದಿಗೂ ಅಲ್ಲಲ್ಲಿ ಸಂಘ ಸಂಸ್ಥೆಗಳಿಂದ ಪ್ರದರ್ಶನಗೊಳ್ಳುತ್ತಿದೆ. ಪಾದಕಾನಿಗೆ, ಬೊಳ್ಳಿ ಮೂಡುಂಡು, ಗಂಗಾರಾಮ್ (ಇದು 'ಬೊಳ್ಳಿದೋಟ' ಹೆಸರಲ್ಲಿ ಚಲನಚಿತ್ರವಾಗಿದೆ.) ಪೂ–ಮುಳ್ಳು ಪೂ ಪನ್ನೀರ್, ಸರಸ್ವತಿ, ಪಾಪಪುಣ್ಯ ರಾಧಾಕೃಷ್ಣ–ಮುಂತಾದ 24 ತುಳು ನಾಟಕ, 3 ಕನ್ನಡ ನಾಟಕ ರಚಿಸಿದ್ದು, 'ಬಯ್ಯಮಲ್ಲಿಗೆ', 'ಬೊಳ್ಳಿದೋಟ', 'ಪಾದಕಾನಿಗೆ', 'ಸರಸ್ವತಿ', 'ರಾಧಾಕೃಷ್ಣ', 'ಗಂಗಾರಾಮ'– ಈ ಆರು ತುಳುನಾಟಕಗಳು ಅಚ್ಚಾಗಿವೆ. ಬಯ್ಯಮಲ್ಲಿಗೆ ಕನ್ನಡ, ಮರಾಠಿ, ಇಂಗ್ಲೀಷ್ ಭಾಷೆಗಳಿಗೆ ಅನುವಾದಗೊಂಡಿದೆ. ಚಲನಚಿತ್ರವಾಗಿಯೂ ಜನಮೆಚ್ಚಿಗೆ ಗಳಿಸಿದೆ.

'ಬಯ್ಯಮಲ್ಲಿಗೆ' ಮೊದಲು ರಚನೆಗೊಂಡು ಪ್ರದರ್ಶನವಾದ 1968ರ ಆ ಮೊದಲ ದಿನಗಳಿಂದ ಹಿಡಿದು ನಿರಂತರ ಪ್ರದರ್ಶನಗೊಳ್ಳುತ್ತಾ ಇಪ್ಪತ್ತನೇ ಶತಮಾನ ದಾಟಿದ ಈ (2018ರ) ದಿನಗಳವರೆಗೂ ಎಲ್ಲಾದರೊಂದು ಭಾಗದಲ್ಲಿ (ಉದಾ: ಕಿನ್ನಿಗೋಳಿ,

ಮುಂಬಯಿ ಇತ್ಯಾದಿ ಕಡೆ) ಪ್ರದರ್ಶನವಾಗುತ್ತಿರುವುದು ಅದರ ಪಾತ್ರಗಳ ಸಾಮಾಜಿಕ ಸಾಂಸಾರಿಕ ಭಾವುಕ ಅಂಶಗಳು ಎಲ್ಲಾ ಕಾಲಕ್ಕೂ ನಿರ್ದಿಷ್ಟ ಪ್ರೇಕ್ಷಕರಿಗೆ ಮನಮಿಡಿಸುವವು ಆಗಿರುವುದಕ್ಕೊ ಅಥವಾ ಸ್ವತಃ ಕಲಾವಿದರಿಗೆ ಸರಳವಾಗಿ ಈ ಪಾತ್ರಧ್ವನಿ ಅರ್ಥ ವಾಗುವುದಕ್ಕೋ ಇರಬಹುದು. ಈ ನಾಟಕಗಳು ಮುದ್ರಿತವಾಗಿ ಲಭ್ಯವಿರುವುದು ಒಂದು ಬಹುಮುಖ್ಯ ಕಾರಣವೆನ್ನಲೂಬಹುದು.

ತೀವ್ರ ದುಃಖ ಹಾಗೂ ಅತೀವ ದುರಂತ ಸನ್ನಿವೇಶಗಳು 'ಬಯ್ಯಮಲ್ಲಿಗೆ'ಯಂತೆಯೇ ದಂಡೆಕೇರಿಯವರ ಗಂಗಾರಾಮ್ 'ಸರಸ್ವತಿ' ಮುಂತಾದ ನಾಟಕಗಳಲ್ಲೂ ಕಾಣಸಿಗುತ್ತವೆ. 'ಬಯ್ಯಮಲ್ಲಿಗೆ' ಚಿಕ್ಕಮ್ಮನಿಂದ ಶೋಷಣೆಗೊಳಗಾಗುವ ಅಣ್ಣ, ತಂಗಿಯರ ದುರಂತ ಕತೆ.

**ಬಯ್ಯಮಲ್ಲಿಗೆ ನಾಟಕದ ಕಥಾಸಾರ :** ಮುಂಬಯಿಯಲ್ಲಿ ವ್ಯವಹಾರ ನಡೆಸುತ್ತಿದ್ದ ರಾಮಯ್ಯ ವಯಸ್ಸಾಗುತ್ತಿರುವಾಗ ಊರಿಗೆ ಬಂದು ಹೆಂಡತಿ ಲಕ್ಷ್ಮೀ ಮತ್ತು ಮಕ್ಕಳಾದ ರವಿ, ಶಾಂತಿಯರ ಜೊತೆ ನೆಲೆಸುತ್ತಾನೆ. ನೆರೆಮನೆಯ ಸೋಮುವನ್ನೂ ರಾಮಯ್ಯ ಲಕ್ಷ್ಮೀ ದಂಪತಿ ತಮ್ಮ ಮಕ್ಕಳಂತೆಯೇ ನೋಡಿಕೊಂಡಿರುತ್ತಾರೆ. ರಾಮಯ್ಯನ ಮುಂಬಯಿಯ 'ಹೊಂದಾಣಿಕೆ ಪತ್ನಿ' ಸುಮತಿ ಮತ್ತು ಅವಳ ಮಗ ಸುಂದರ, ಅವನನ್ನು ಹುಡುಕಿಕೊಂಡು ಈ ಮನೆಗೆ ಬರುತ್ತಾರೆ. ರಾಮಯ್ಯ ತನ್ನ ಗುಟ್ಟು ರಟ್ಟಾದೀತೆಂದು ಅವರಿಗೆ ಹಣ ನೀಡಿ ಸಾಗಹಾಕಲು ನೋಡುತ್ತಾನೆ. ಅವರು ಜಗ್ಗದೆ ಮನೆಯಲ್ಲೇ ಬೀಡುಬಿಡುತ್ತಾರೆ. ಆದರೆ ಲಕ್ಷ್ಮೀ ಔದಾರ್ಯ ತೋರಿ ಅವರನ್ನು ಉಳಿಸಿಕೊಳ್ಳುತ್ತಾಳೆ.

ರಂಗಕರ್ಮಿ ಗಣೇಶ್ ರಾವ್ ಎಲ್ಲೂರು ಅವರ ನೂತನ ತಾಂತ್ರಿಕತೆಯ ನಿರ್ದೇಶನದಲ್ಲಿ ಇತ್ತೀಚೆಗೆ ಶಂಕರಪುರದಲ್ಲಿ ಪ್ರಯೋಗವಾದ ದಂಡೆಕೇರಿಯವರ 'ಬಯ್ಯಮಲ್ಲಿಗೆ' ನಾಟಕದ ದೃಶ್ಯ. ಬಲ ಕೊನೆಯವರು ನಟ ರಾಜಗೋಪಾಲ್ ಶೇಟ್ (2018)

ಮುಂದೆ ಸುಮತಿ, ಸುಂದರರ ದ್ರೋಹದಿಂದಾಗಿ ಲಕ್ಷ್ಮೀ ಸಾಯುತ್ತಾಳೆ. ರಾಮಯ್ಯ ಹಾಸಿಗೆ ಹಿಡಿಯುತ್ತಾನೆ. ಸುಮತಿ ಆಸ್ತಿಯನ್ನು ತನ್ನ ಹೆಸರಿಗೆ ಮಾಡಿಕೊಂಡು ರವಿ ಮತ್ತು ಶಾಂತಿಗೆ ಇನ್ನಿಲ್ಲದ ಹಿಂಸೆ ನೀಡುತ್ತಾರೆ. ವಿರೋಧಿಸಿದ ರಾಮಯ್ಯ ಕೊಲೆಗೀಡಾಗುತ್ತಾನೆ. ಸುಂದರನ ಅತ್ಯಾಚಾರಕ್ಕೆ ಶಾಂತಿ ಬಲಿಯಾಗುತ್ತಾಳೆ. ರವಿಗೆ ಅಪಘಾತ ಮಾಡಿ ಎರಡೂ ಕಾಲು ಕಳೆದುಕೊಳ್ಳುವಂತಾಗುತ್ತದೆ. ಶಾಂತಿ ಕಡಲಿಗೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಕೊನೆಗೆ ಸೋಮುವಿನ ಸಹಾಯದಿಂದ ರವಿ ಸುಂದರನನ್ನು ಜೈಲಿಗಟ್ಟಲು ಯಶಸ್ವಿಯಾಗುತ್ತಾನೆ.

ಆಧುನಿಕ ಕಾಲಘಟ್ಟದಲ್ಲಿ ಸ್ವಲ್ಪ 'ಮೆಲೋಡ್ರಾಮಾ' ಎನಿಸಬಹುದಾಗಿದ್ದ ಅಂದಿನ ಸ್ಕ್ರಿಪ್ಟ್ ಮತ್ತು ತಾಂತ್ರಿಕತೆಯನ್ನು ಸೂಕ್ತವಾಗಿ ಪರಿವರ್ತಿಸಿಕೊಂಡು ಇಂದಿಗೂ ಕೆಲವು ಆಸಕ್ತ ರಂಗಕರ್ಮಿಗಳು ಪ್ರಯೋಗಿಸುತ್ತಿದ್ದಾರೆ. ಇತ್ತೀಚೆಗೆ 2018ರ ಅಕ್ಟೋಬರ್ ತಿಂಗಳಲ್ಲಿ ಶಂಕರಪುರದ ಜೇಸಿಸ್ ಸಪ್ತಾಹದ ಅಂಗವಾಗಿ ನುರಿತ ರಂಗಕರ್ಮಿ ಗಣೇಶ್ ರಾವ್ ಎಲ್ಲೂರು ಅವರ ನಿರ್ದೇಶನದಲ್ಲಿ ಸ್ನೇಹಜೀವಿ ಕಲಾವಿದರು ಉಡುಪಿ ತಂಡದಿಂದ ಹೊಸ ರೂಪದಲ್ಲಿ ನೂತನ ಸೆಟ್ಟಿಂಗ್, ಪ್ರಬುದ್ಧ ಕಲಾವಿದರ ಪಾಲ್ಗೊಳ್ಳುವಿಕೆಯಲ್ಲಿ ಹೊಸ ಕಾಲದ ಯಶಸ್ವಿ ಪ್ರಯೋಗ ಕಂಡಿದೆ. ಆ ಬಳಿಕ ಸುರತ್ಕಲ್‌ನಲ್ಲಿ 'ರಂಗಚಾವಡಿ' ಕಾರ್ಯಕ್ರಮದಲ್ಲಿ ಸ್ಥಳೀಯ ತಂಡವೂ ರಮೇಶ್ ರೈ ಕುಕ್ಕುವಳ್ಳಿ ನಿರ್ದೇಶನದಲ್ಲಿ ಈ ನಾಟಕವನ್ನು ನೂತನ ಆಯಾಮದೊಂದಿಗೆ ಪ್ರದರ್ಶಿಸಿತು.

### ಸಂಜೀವ ಎಸ್.ಕೆ. (1944) – ಕಲಾಶಿಲ್ಪ ತಂಡ



ಹಿರಿಯ ತಲೆಮಾರಿನ ಮಂಗಳೂರಿನ ರಂಗಕರ್ಮಿಗಳಲ್ಲಿ ಓರ್ವರು. ನಟ ಇಂದುಶೇಖರರಿಂದ ಪ್ರಭಾವಿತರಾಗಿ ಕೊಡಿಯಾಲ್‌ಬೈಲ್‌ನಲ್ಲಿ 1965ರಲ್ಲಿ ತನ್ನ 21ರ ಹರೆಯದಲ್ಲಿ ಗೆಳೆಯ ಸುರೇಂದ್ರರೊಡಗೂಡಿ ಕೊಡಿಯಾಲ್‌ಬೈಲ್ ಫ್ರೆಂಡ್ಸ್ ಕ್ಲಬ್ ಸ್ಥಾಪಿಸಿದರು. ಕಿರೋಡಿಯನ್‌ರ 'ಈ ಪಿರಯೊಡುಲಾ ಬರವಾ?' ನಾಟಕ ಆಡಿಸಿದರು. 1967ರಲ್ಲಿ ತಾನೇ ಬರೆದ 'ಮದಿಮೆದ ಸೋಕು' ನಾಟಕ ಪ್ರದರ್ಶಿಸಿ, ಮುಂದೆ ಹಲವು ಕೃತಿಗಳನ್ನು ರಂಗಕ್ಕೆ ತಂದರು. 1971ರಲ್ಲಿ ಕಲಾಶಿಲ್ಪ ಎನ್ನುವ ತನ್ನದೇ ರಂಗ ತಂಡ ಸ್ಥಾಪಿಸಿ ನಿರಂತರ ನಾಟಕ ಪ್ರದರ್ಶಿಸಿದರು.

ಇವರು ಬರೆದು ನಿರ್ದೇಶಿಸಿದ ತುಳು ನಾಟಕಗಳು : ಮದಿಮೆದ ಸೋಕು, ಜನ್ಮ ಸಾರ್ಥಕ, ಕಾಲಚಕ್ರ, ಬದಿನ್ ಬಂದ್ ಮಲ್ಪುಲೆ, ಧರ್ಮೊನು ದಂಟ್‌ನಗ, ಸೈತಿ ಬೊಕ್ಕ ಬರುವಳ್, ಉಂದು ವಾ ಸಮಾಜ?, ಯಾನ್ ನಕ್ಸಲೈಟಾ?, ನಿರೆಲ್ (ಚಲನಚಿತ್ರವಾಗಿದೆ), ಎಲ್ಲೆ ಯಾನ್ ಕಾಸ್‌ದಾಯೆ (ದುಬೈಯಲ್ಲೂ ಪ್ರದರ್ಶಿತ), ಈ ನಾಟಕ ದಾಯೆ?,

ನಿಶ್ಚಯ ಹಾಗೂ ಪೊರ್ಲುರ್ (2019 ಅಕಾಡೆಮಿ ನಾಟಕ ಪರ್ಬದಲ್ಲಿ ಪ್ರದರ್ಶಿತ). ಇವುಗಳಲ್ಲಿ ಕೆಲವು ನಾಟಕಗಳನ್ನು ಸೀತಾರಾಮ ಕುಲಾಲ್ ಮತ್ತು ದಾಮೋದರ ಬಂಗೇರರು ನಿರ್ದೇಶಿಸಿದ್ದರು. 1973ರ ವೇಳೆಗೆ ಮುಂಬಯಿ ಷಣ್ಮುಖಾನಂದ ಹಾಲ್ ಮತ್ತು ಚೆಂಬೂರು ತುಳು ಯುವಕ ಸಂಘದ ಮೂಲಕವೂ ಮೂರು ನಾಟಕ ಪ್ರದರ್ಶಿಸಿದ್ದಾರೆ. ಚಲನಚಿತ್ರ ನಟರೂ ಆಗಿರುವ ಸಂಜೀವ ಎಸ್.ಕೆ. 1998ರಲ್ಲಿ ಡಾನ್ ಬಾಸ್ಕೋದಲ್ಲಿ 'ತ್ರಿದಿನ ನಾಟಕೋತ್ಸವ' ನಡೆಸಿದವರು.

**ಎನ್. (ನೆಕ್ಕಿತಪುಣಿ) ಗೋಪಾಲಕೃಷ್ಣ (1947) – ಕರಾವಳಿ ಕಲಾವಿದರು**



60–70ರ ದಶಕಗಳ ವೇಳೆ ತುಳು ರಂಗಭೂಮಿ ಹುರುಪಿನಿಂದ ಸ್ಪರ್ಧಾತ್ಮಕವಾಗಿ ಹೆಚ್ಚುತ್ತಿದ್ದ ದಿನಗಳಲ್ಲಿ ಹೆಚ್ಚಾಗಿ ತಮಿಳು, ಹಿಂದಿ ಸಿನೆಮಾಗಳು ಕರಾವಳಿ ಜಿಲ್ಲೆಗಳಲ್ಲೂ ಕೆಲವು ಥಿಯೇಟರುಗಳಲ್ಲಿ ಕಾಣ ಸಿಗುತ್ತಿದ್ದುದರಿಂದ ಅವುಗಳ ಕತೆಗಳು, ಹಾಡುಗಳ ಪ್ರೇರಣೆ, ಅನುಕರಣೆಗಳೊಂದಿಗೆ ಹಲವು ತುಳುನಾಟಕಗಳು ಹುಟ್ಟಿಕೊಂಡವು. ಕನ್ನಡದ ಓದು, ರಂಗವೀಕ್ಷಣೆಗಳು, ಜೊತೆಗೆ ಸ್ಪರ್ಧಾತ್ಮಕ ಪ್ರಜ್ಞೆಯಿಂದ ನಾಟಕ ವಿಭಿನ್ನವಾಗಿರಬೇಕು ಎಂಬ ಎಚ್ಚರಿಕೆಯಿಂದ ಆಗ ಮಂಗಳೂರು ಸರಕಾರಿ ಕಾಲೇಜಿನ ಕಚೇರಿಯಲ್ಲಿ ದುಡಿಯುತ್ತಿದ್ದ ಎನ್. ಗೋಪಾಲಕೃಷ್ಣರು ಪ್ರಥಮವಾಗಿ ಬರೆದ ನಾಟಕ 'ಗುಟ್ಟುದ ಕರಿಯಮಣಿ' – ಇದು ಸರಕಾರಿ ಕಾಲೇಜಿನಲ್ಲೂ, ಕಂಕನಾಡಿ ಮೈದಾನದಲ್ಲೂ ಪ್ರದರ್ಶನವಾಯಿತು. ಬಳಿಕ ಕನ್ನಡದಲ್ಲಿ ರಚಿಸಿದ 'ಅಂಕುರಾರ್ಪಣ' ನಾಟಕ ಆ ಮಾದರಿಯದು. ಶಾಂ ಬೆನಗಲ್ಲರ ಕ್ರಾಂತಿಕಾರಿ ಹಿಂದಿ ಚಿತ್ರ 'ಅಂಕುರ್' ಗೋಪಾಲಕೃಷ್ಣರಿಗೆ 'ಅಂಕುರಾರ್ಪಣ'ಕ್ಕೆ ಪ್ರೇರಣೆಯಾಯಿತು.

ಆ ಕಾಲದಲ್ಲಿ ಮಣಿಪಾಲದಲ್ಲಿ ಅಂತರಕಾಲೇಜು ವಿದ್ಯಾರ್ಥಿಗಳಿಗಾಗಿ ಕೊಪ್ಪಿಕಾರ್ ಸ್ಮಾರಕ ನಾಟಕ ಸ್ಪರ್ಧೆ ನಡೆಯುತ್ತಿತ್ತು. 1976ರಲ್ಲಿ ಮಂಗಳೂರು ಸರಕಾರಿ ಕಾಲೇಜಿನ ತಂಡವು ಎನ್. ಗೋಪಾಲಕೃಷ್ಣರ ನಾಟಕ ಎಂ. ಜೆ. ರಾವ್ ಅವರ ದಿಗ್ದರ್ಶನದೊಂದಿಗೆ ಅಂಕುರಾರ್ಪಣೆ ಸ್ಪರ್ಧೆಗೆ ಹೋಗಿ ಹಲವು ಪ್ರಶಸ್ತಿಗಳನ್ನು ಪಡೆದುಕೊಂಡಿತು. ರಮಾನಾಥ ರೈ ಅತ್ಯುತ್ತಮ ಪೋಷಕನಟ, ಅತ್ಯುತ್ತಮ ಸ್ತ್ರೀ ಪಾತ್ರ ಗಂಗಾಧರ ಶೆಟ್ಟಿ, ಅತ್ಯುತ್ತಮ ಹಾಸ್ಯನಟ ಎಂ.ಎಸ್. ಗೋಪಾಲಕೃಷ್ಣ ಭಟ್, ಎಂ.ಜಿ. ರಾವ್ ಅವರ ನಿರ್ದೇಶನಕ್ಕೆ ಪ್ರಥಮ ಪ್ರಶಸ್ತಿ ಗಳಿಸಿತು.

ಗೋಪಾಲಕೃಷ್ಣರ 'ಗೊಮ್ಮಡ್ದೇವೆರ್' ನಾಟಕ ಹಸ್ತಪ್ರತಿಯು ತುಳುಕೂಟದ ಧರ್ಮಸ್ಥಳ ರತ್ನವರ್ಮ ಹೆಗ್ಗಡೆ ಪ್ರಪ್ರಥಮ ಪ್ರಶಸ್ತಿಯನ್ನು ಗಳಿಸಿತು. ಅಂಕುರಾರ್ಪಣದ ತುಳುರೂಪ 'ಲಚ್ಚುನ ಕೊರಗೆ' ಮಂಗಳೂರು ಪುರಭವನದಲ್ಲಿ ಜರಗಿದ ನವಭಾರತ

ತುಳುಕೂಟ ನಾಟಕ ಸ್ಪರ್ಧೆಯಲ್ಲೂ ಬಹುಮಾನಿತವಾಯಿತು.

'ಅಂಕುರಾರ್ಪಣ'ದ ತುಳು ಅನುವಾದ 'ಲಚ್ಚುನ ಕೊರಗೆ'ಯನ್ನು 1972ರ ವೇಳೆಗೆ ಗೋಪಾಲಕೃಷ್ಣರು ಬರೆದುದು ಮಂಗಳೂರು ಪುರಭವನದಲ್ಲಿ ನಡೆಯುತ್ತಿದ್ದ ನವಭಾರತ –ತುಳುಕೂಟ ನಾಟಕ ಸ್ಪರ್ಧೆಗಾಗಿ ಈ ನಾಟಕವು ಹಲವು ಬಹುಮಾನಗಳನ್ನು ಗಳಿಸಿತ್ತು. 'ಲಚ್ಚುನ ಕೊರಗೆ'ಯನ್ನು ಪ್ರಾರಂಭದ ಸುಮಾರು 10 ಪ್ರಯೋಗಗಳಿಗೆ ಎಂ.ಜಿ. ರಾವ್ ನಿರ್ದೇಶನ ಮಾಡಿದರು. ಇದರಲ್ಲಿ ಬಾಯಿ ಬಾರದ ಮೂಗ ಚನಿಯನ ಪಾತ್ರ ಮಾಡುತ್ತಿದ್ದವರು (ಕೆ. ರಮಾನಾಥ ರೈಯವರ ನಂತರ) ಯು. ಮಚ್ಚೇಂದ್ರನಾಥ್. ಮುಂದೆ ಅವರೇ 'ಲಚ್ಚುನ ಕೊರಗ' ನಿರ್ದೇಶನವನ್ನು ಕೈಗೆತ್ತಿಕೊಂಡರು. ಕರಾವಳಿ ಕಲಾವಿದರು, ಓಂ ಶಕ್ತಿ ನಾಟಕ ಸಭಾ ಮೂಲಕ ಈ ನಾಟಕ ಹಲವು ಊರುಗಳಲ್ಲಿ ಸುಮಾರು 400 ಪ್ರದರ್ಶನಗಳನ್ನು ಕಂಡು ಅಂದಿನ ಯಶಸ್ವಿ ನಾಟಕಗಳಲ್ಲಿ ಒಂದೆನಿಸಿತು.

2018ರ ತುಳು ಅಕಾಡೆಮಿಯ ನಾಟಕೋತ್ಸವದ ವೇಳೆ ಯು. ಮಚ್ಚೇಂದ್ರನಾಥರು ಪರಿಷ್ಕರಿಸಿ ನಿರ್ದೇಶಿಸಿದ್ದ ಕೊರಗೆಯ ಹೊಸರೂಪ 'ಲಚ್ಚು' – ಹೊಸ ಕಲಾವಿದರಿಂದ ಜಗನ್ ಪವಾರ್ ಬೇಕಲ್‌ರ ನಿರ್ದೇಶನದಲ್ಲಿ ಪ್ರದರ್ಶಿತವಾಯಿತು.

ಎಂ. ಗೋಪಾಲಕೃಷ್ಣರು ಈ ರಂಗನಾಟಕವನ್ನು 2010ರಲ್ಲಿ ಪ್ರಕಟಿಸಿರುವರು.

**ನೆಕ್ಕಿದಪುಣಿ ಗೋಪಾಲಕೃಷ್ಣರ ಸಾಮಾಜಿಕ ನಾಟಕಗಳು :** ಗುಟ್ಟುದ ಕರಿಯಮಣಿ, ಸಮಾಧಿ, ಅಜ್ಜಿನ ಸೋಲು, ನಾಟಕ ನಾರ್ಣಪ್ಪೆ, ಲಚ್ಚುನ ಕೊರಗೆ, ಇನ್‌ದ ಕೋರ್ಟ್ ಆಫ್ ಯಮ, ಸೀತಾ, ಕಲ್ಲುಡ ಕಲ್ಲುರ್ಟಿ, ವೆಂಕಟರಮಣ ವಿಜಯ, ಬರ್ಪಿ ತಿಂಗೊಲುಡು

**ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ 'ತುಳು ನಾಟಕ ಪರ್ಬ 2018'ದಲ್ಲಿ ಪುರಭವನದಲ್ಲಿ ಪ್ರದರ್ಶಿತ (ಯು. ಮಚ್ಚೇಂದ್ರನಾಥರಿಂದ ರಂಗಪರಿಷ್ಕಾರಗೊಂಡ) ನೆಕ್ಕಿತಪುಣಿ ಗೋಪಾಲಕೃಷ್ಣರ ನಾಟಕ 'ಲಚ್ಚು'. ಪ್ರಸ್ತುತಿ : ಸಂಕೇತ್ ಕಲಾವಿದರು, ಮಂಗಳೂರು. ನಿರ್ದೇಶನ : ಜಗನ್ ಪವಾರ್ ಬೇಕಲ್**

ಸಂದಾವೆ, ಪವಿತ್ರ ಪಾಪಿ, ಬಲಿದಾನ, ಬಡ್ಡಿದ ಮಾಲಿಂಗೆ, ಬ್ರಹ್ಮಶ್ರೀ ನಾರಾಯಣಗುರು, ವಿಧಿತಾಟ.

**ತುಳು ಚಾರಿತ್ರಿಕ** : ಗೊಮ್ಮಡ್ದೇವೆರ್, ಅಂಗುಲೀಮಾಲ, ನಾಟ್ಯರಾಣಿ ಶಾಂತಲಾ, ಆಮ್ರಪಾಲಿ, ಭರತ ಚಕ್ರೇಶ್ವರ, ಪರಶುರಾಮ ಸೃಷ್ಟಿ, ಸತ್ಯ ಹರಿಶ್ಚಂದ್ರ, ಅಲ್ಲದೆ ಪವಿತ್ರ ಪಾಪಿ, ಅಂಕುರಾರ್ಪಣೆ ಮುಂತಾದ ಕನ್ನಡ ನಾಟಕಗಳನ್ನೂ ಗೋಪಾಲಕೃಷ್ಣರು ರಚಿಸಿ ಪ್ರಯೋಗಿಸಿದ್ದರು.

ಆ ಕಾಲದಲ್ಲಿ ಇವರ ನಾಟಕಗಳಿಗೆ ವಸಂತ್, ಮನಮೋಹನ್, ಶಶಿಕಮಲ್ – ಮತ್ತಿತರರು ಹಿನ್ನೆಲೆ ಸಂಗೀತ ಒದಗಿಸುವುದಿತ್ತು. ಇವರ ನಾಟಕಗಳಲ್ಲಿ ದಯಾವತಿ, ಗೀತಾ ಸರೋಜಾ (ಉಡುಪಿ) ಮುಂತಾದ ಮಹಿಳಾ ನಟಿಯರು ಪಾತ್ರ ಮಾಡಿದ್ದರು.

**ಶಾಂತಾರಾಂ ಕಲ್ಲಡ್ಕ (1950–2013) – ತುಳುವಪ್ಪೆ ಜೋಕ್ಲು ಕಲ್ಲಡ್ಕ**



ಕಳೆದ ಶತಮಾನದ ಎಪ್ಪತ್ತರ ದಶಕದಿಂದಲೇ ನಾಟಕ ರಚನೆಗೆ ತೊಡಗಿ ಸುಮಾರು 54ರಷ್ಟು ತುಳು ನಾಟಕ ರಚನೆ, ನಟನೆ, ನಿರ್ದೇಶನ, ಸ್ಟೇಜ್ ಸೆಟ್ಟಿಂಗ್, ವರ್ಣಾಲಂಕಾರ, ರಂಗಪರಿಕರ ಅಲ್ಲದೆ ಗೀತರಚನೆ ಹಿನ್ನೆಲೆ ಗಾಯನಕ್ಕೂ ಹೆಸರಾದ ಬಹುಮುಖ ಪ್ರತಿಭೆ ಶಾಂತಾರಾಂ ಕಲ್ಲಡ್ಕ ಅವರು. ಇವರ ದಾರೆದ ಸೀರೆ, ಕುಂಕುಮ, ಸತ್ಯ ತೆರಿನಗ, ಮಸಣದ ಇಲ್ಲ್, ಬೇಡೆರೆ ಕಣ್ಣಪ್ಪೆ... ಮುಂತಾದ ಸಾಮಾಜಿಕ, ಪೌರಾಣಿಕ, ಚಾರಿತ್ರಿಕ

**ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ 'ತುಳು ನಾಟಕ ಪರ್ಬ 2018'ದಲ್ಲಿ ಪುರಭವನದಲ್ಲಿ ಪ್ರದರ್ಶಿತ ಶಾಂತಾರಾಮ ಕಲ್ಲಡ್ಕರ ನಾಟಕ 'ಕುಂಕುಮ'. ಪ್ರಸ್ತುತಿ : ತುಳುವಪ್ಪೆ ಜೋಕ್ಲು ಕಲಾಬಳಗ, ಕಲ್ಲಡ್ಕ. ನಿರ್ದೇಶನ : ಸವ್ಯರಾಜ್ ಕಲ್ಲಡ್ಕ**

ನಾಟಕಗಳು ಹಲವು ಪ್ರದರ್ಶನ ಕಂಡ ಯಶಸ್ವಿ ರಂಗಕೃತಿಗಳು, ಕಣ್ಣಪ್ಪ, ದಾರೆದ ಸೀರೆ ಮುನ್ನೂರಕ್ಕೂ ಮಿಕ್ಕ ಪ್ರದರ್ಶನ ಕಂಡ ನಾಟಕಗಳು. 'ಕುಂಕುಮ' ಇದು ತುಳುಕೂಟದ ರತ್ನವರ್ಮ ಹೆಗ್ಗಡೆ ಪ್ರಶಸ್ತಿ ಪಡೆದಿತ್ತು.

ಇವರು ಪ್ರಾರಂಭದಲ್ಲಿ ಚಿತ್ರಕಲಾವಿದರಾಗಿ, ಮಣ್ಣಿನ ಮೂರ್ತಿ ಶಿಲ್ಪ ರಚನೆಕಾರರಾಗಿದ್ದರು. ಬಾಲ್ಯದಲ್ಲೇ ನಾಟಕಕಲಾವಿದರಾಗಿ ಗುರುತಿಸಿಕೊಂಡರು. ತುಳು ರಂಗಭೂಮಿಯ ಸವ್ಯಸಾಚಿಯಾಗಿ ಹಳ್ಳಿಹಳ್ಳಿಗಳ ನೂರಾರು ತರುಣಕಲಾವಿದರಿಗೆ ಗುರುಗಳಾಗಿ ಗುರುತಿಸಿಕೊಂಡರು. 2010ನೇ ಸಾಲಿನ ತುಳು ಅಕಾಡೆಮಿ ಗೌರವ ಪ್ರಶಸ್ತಿಗೆ ಭಾಜನರಾದ ಇವರ 'ಕುಂಕುಮ' ನಾಟಕವನ್ನು ತುಳು ಅಕಾಡೆಮಿ 2017ರಲ್ಲಿ 'ತುಳು ರಂಗನಾಟಕೊಲು ಗೊಂಚಿಲ್'ನಲ್ಲಿ ಪ್ರಕಟಿಸಿದೆ.

### ಯು.ಎಂ. ಮ್ಯೊದಿನಬ್ಬ

ಹಳೆಯ ತಲೆಮಾರಿನ ಪ್ರಸಿದ್ಧರಲ್ಲಿ ಇನ್ನೋರ್ವರಾದ ದಿ। ಉಳ್ಳಾಲದ ಮ್ಯೊದಿನಬ್ಬ ಅವರು 'ಸಂಸಾರ', 'ಮಮತಾ', 'ಮಾಜಂದಿ ಬರವು', 'ಸಂಶಯದ ಪಲ', 'ಮದ್ರೆಂಗಿ ಮಾಜಂದಿ ಮದ್ಮಲ್', 'ನರಂಬುದ ಪೆಟ್ಟ್', 'ಸೂರ್ಯಕಾಂತಿ', 'ಬೊಲ್ದು ಸೀರೆ' ಇತ್ಯಾದಿ ಜನಪ್ರಿಯ ಸಾಮಾಜಿಕ ನಾಟಕಗಳ ಕರ್ತೃ. ಪ್ರತಿಭೆಯ ಮಟ್ಟಿಗೆ ಪ್ರಚಂಡರೆನಿಸಿದ್ದ ಇವರು ನಾಟಕ ರಚನೆಕಾರ, ನಟ, ಗಾಯಕ, ಗೀತರಚನೆಕಾರ, ಪ್ರಸಾದನ ತಜ್ಞ, ಹೀಗೆ ಸಕಲ ಕಲಾ ವಲ್ಲಭರಾಗಿದ್ದರು. ಇವರ ನಾಟಕಗಳಲ್ಲಿ 25–30ರಷ್ಟು ದೃಶ್ಯ ವೈವಿಧ್ಯಗಳಿರುತ್ತಿದ್ದವಂತೆ.

ಮ್ಯೊದಿನಬ್ಬರು ಪ್ರಸಿದ್ಧ ಹಾಸ್ಯ ಕಲಾವಿದರೂ ಆಗಿದ್ದು ಉಳ್ಳಾಲ, ತೊಕ್ಕೊಟ್ಟು, ಮಂಗಳೂರು, ಬಜಪೆ ಹಾಗೂ ಪರಿಸರದ ಬಹಳಷ್ಟು ನಾಟಕಕಾರರ ನಾಟಕಗಳಲ್ಲೂ ಪಾತ್ರವಹಿಸುತ್ತಿದ್ದರು. ಇವರ ನಾಟಕಗಳು ಹಳ್ಳಿಹಳ್ಳಿಗಳಲ್ಲಿ ಪ್ರದರ್ಶನವಾಗುತ್ತಿದ್ದವು. ಆ ಸಂದರ್ಭದಲ್ಲಿ ಸ್ಥಳೀಯ ಕಲಾವಿದರಿಗೆ ತರಬೇತಿ ನೀಡುತ್ತಾ ಮ್ಯೊದಿನಬ್ಬ ಅವರು ತಿಂಗಳಿಡೀ ಒಂದೇ ಹಳ್ಳಿಯಲ್ಲಿ ನೆಲೆಸುತ್ತಿದ್ದರು. ಇವರ ಜೀವಿತಾವಧಿಯಲ್ಲಿಯೇ ಇವರ ಪ್ರಸಿದ್ಧ ನಾಟಕ ಹಸ್ತಪ್ರತಿಗಳೆಲ್ಲವೂ ಅನಿರೀಕ್ಷಿತವಾಗಿ ಬೆಂಕಿಗೆ ಆಹುತಿಯಾಗಿ ಯಾವುದೇ ಪುಸ್ತಕಗಳು, ಮಾಹಿತಿಗಳು ಮುಂದೆ ಉಳಿಯಲಿಲ್ಲ ಎನ್ನಲಾಗಿದೆ.

ಈ ಕೃತಿಯ ಸೆಟ್ಟಿಂಗ್ ಬಳಿಕ ಚಂದ್ರಹಾಸ ಕಣಂತೂರು ಸಂಗ್ರಹದ 'ಮಮತಾ' ನಾಟಕದ ಹಸ್ತಪ್ರತಿ ಕಾಣಸಿಕ್ಕಿತು. ಕೈರಂಗಳ ಶಾಲಾ ವಠಾರದಲ್ಲಿ 1969ರಲ್ಲಿ ಉದಯ ಕಲಾವೃಂದದವರು ಪ್ರದರ್ಶಿಸಿದ್ದ ಈ ಸಾಮಾಜಿಕ ನಾಟಕದಲ್ಲಿ 31 ದೃಶ್ಯಗಳಿವೆ. ಕಥಾ ನಾಯಕಿ ಮಮತಾ ಸೇರಿದಂತೆ 12+5 ಪಾತ್ರಗಳಿವೆ ಚಿಕ್ಕಮ್ಮನಿಂದ ಶೋಷಣೆಗೊಳಗಾದ ಹೆಣ್ಣಿನ ಕಥೆ. ಚಂದ್ರಹಾಸರೆನ್ನುವಂತೆ ಮ್ಯೊದಿನಬ್ಬರು ನಿರ್ದೇಶಕ, ಹಾಸ್ಯನಟ, ಗಾಯಕ. ಸ್ಫುರದ್ರೂಪಿಯಾಗಿದ್ದು ಸುಮಾರು 1970ರ ವೇಳೆಗೆ ತೀರಿದ ಅವರಿಗೆ ಆಗ ಸುಮಾರು 60ರ ವಯಸ್ಸು.

ದೇರಳಕಟ್ಟೆಯ ಡಾ. ಬಾಲಕೃಷ್ಣ ಮುದ್ಯರು 'ಲಿಲ್ಲಿ', 'ಚೇರ್‌ಮೆನ್ ಕಿಟ್ಟಣ್ಣೆ', 'ಯಾನ್ ಬದ್‌ಕೊಡಾ?' ಮುಂತಾದ ನಾಟಕ ಬರೆದರು. ಇವುಗಳು ಪ್ರಕಟವಾಗಿವೆ.

ಇಬ್ರಾಹಿಂ ತಣ್ಣೀರುಬಾವಿ, ಹೆರ್ಮುಂಡೆ ಆನಂದ ಹೆಗ್ಡೆ, ಏಕಾನಂದ ಮಾಸ್ತರ್, ಉದ್ಯಾವರದ ಎಂ.ಸಿ. ರಾಜು, ಬಿ.ವಿ. ಕಿರೋಡಿಯನ್, ಎಂ.ಬಿ. ಸಾಲಿಯಾನ್, 'ಕುಂಟೆರಾಮೆ' ಖ್ಯಾತಿಯ ರವಿಕುಮಾರ್, 'ಇಲ್ಲ್ ದೆತ್ತಿನ ಮಗೆ' ನಾಟಕ ಬರೆದ ಕೊಂಚಾಡಿಯ ಕೆ.ಆರ್. ಶ್ರೀಯಾನ್ – ಮತ್ತಿತರ ಅನೇಕರು ಈ ಅವಧಿಯಲ್ಲಿ ನೂರಾರು ಸಾಮಾಜಿಕ ನಾಟಕ ರಚಿಸಿದರು.

### ಕೆ.ವಿ. ಶೆಟ್ಟಿ (1950)



ಮಂಗಳೂರು ಬಿಜೈಯ ಕೆ.ವಿ. ಶೆಟ್ಟರು ಕಳೆದ 60 ವರ್ಷಗಳಿಂದ ನಾಟಕ ರಂಗದಲ್ಲಿದ್ದು 80ಕ್ಕೂ ಮಿಕ್ಕ ನಾಟಕ ರಚಿಸಿದ್ದಾರೆ. 'ಜೋಡುಕಲ್ಲ್ ಕರಿಯ ಬಂಟೆ', 'ಬೊಳ್ಳಿಗೆಜ್ಜೆ', 'ಬಾಲೆಮಾನಿ', 'ಬೂಲ್ಯದ ಇರೆ', 'ಬೈಲಕೋಡಿಲ್ಲ್', 'ದೊಂಪದ ಬಲಿ', 'ಪಟ್ಟೆಸೀರೆ', 'ಬೈಲಪ್ಪೆ', 'ಸತ್ಯ ಮುನಿನಗ', 'ಬದ್‌ಕೊಂಜಿ ಮಸಣ', 'ಗಗ್ಗರ', 'ಧರ್ಮಸಂಕಲೆ' ಮುಂತಾದ ಜಾನಪದ ಹಾಗೂ ಕಾಲ್ಪನಿಕ ನಾಟಕಗಳಲ್ಲಿ 'ಜೋಡುಕಲ್ಲ್ ಕರಿಯ ಬಂಟೆ' ಬಹುಪ್ರಸಿದ್ಧ

ಕೆ.ವಿ. ಶೆಟ್ಟಿಯವರ 'ಜೋಡುಕಲ್ಲ್ ಕರಿಯ ಬಂಟೆ' ನಾಟಕದ ಕದ್ರಿಯ ಪ್ರಯೋಗದಲ್ಲಿ ಅಭಿಯನಯಿಸಿದವರು ಕೆ.ವಿ. ಶೆಟ್ಟಿ, ಶೋಭಾ, ಗಣೇಶ್ ಕುಮಾರ್, ಸುಂದರ ಹೆಗ್ಡೆ (1995)

ನಾಟಕ; ಹಾಗೆಯೇ 'ನಾಗಬನ' (ಸಾಮಾಜಿಕ) ನಾಟಕ 2000 ಪ್ರಯೋಗಗಳನ್ನು ಕಂಡಿದೆ. ಸ್ವತಃ ನಟರೂ, ನಿರ್ದೇಶಕ, ಪ್ರಸಾಧನಕಾರರಾಗಿರುವ ಇವರ ಎಲ್ಲ ನಾಟಕಗಳೂ ಹಸ್ತಪ್ರತಿಯಲ್ಲೇ ಉಳಿದಿದ್ದವು. 2013ರಲ್ಲಿ ತುಳು ಅಕಾಡೆಮಿ ಪ್ರಕಟಿಸಿದ 'ರಂಗದ ಗೊಂಚಿಲ್' ಇದರಲ್ಲಿ ಕೆ. ವಿ.ಶೆಟ್ಟರ 'ಬೈಲಪ್ಪೆ' ನಾಟಕ ಅಚ್ಚಾಯಿತು.

**ಬಿ.ಆರ್. ಕುಲಾಲ್, ಕಾಮಾಜೆ, ಬಂಟ್ವಾಳ (1950)**
**– ವಿನಾಯಕ ನಾಟಕ ಸಭಾ, ಬಿ.ಸಿ.ರೋಡ್**



ದಿ| ಆರ್. ಮುರುಗೇಶರ ಆ ದಿನಗಳ ಯಶಸ್ವಿ ನಾಟಕ 'ಕಾಸ್‌ದಾಯೆ ದೇವೆರ್' ಇದರ ಸ್ತ್ರೀಪಾತ್ರದ ಮೂಲಕ ರಂಗಪ್ರವೇಶ ಮಾಡಿದವರು ಬಿ.ಆರ್. ಕುಲಾಲ್. ಮುಂದಿನ ನಾಲ್ಕು ನಾಟಕಗಳಲ್ಲಿ ಸ್ತ್ರೀಪಾತ್ರವನ್ನೇ ಮಾಡಿದ ಕುಲಾಲ್‌ಗೆ ತಾನೇ ತನ್ನ ಕಲ್ಪನೆಯ ಅಭಿರುಚಿಯ ನಾಟಕ ಮಾಡಬೇಕು ಎಂಬ ಹಂಬಲ. ಆದರೆ ಹೆಚ್ಚು ಕಲಿತವರಲ್ಲ. ಇವರ ಕತೆ ಕೇಳಿ, ನಾಟಕ ಬರೆಯಬೇಕಲ್ಲ, ಆಗ ಅವರಿಗೆ ಲಿಪಿಕಾರರಾಗಿ ಮುಂದೆ ಬಂದವರು ಬ್ಯಾಂಕ್ ಉದ್ಯೋಗಿಯಾಗಿದ್ದ ಮಾಧವ ನ್ಯಾಕ್. ನಾಟಕ ಕೃತಿ ಸಿದ್ಧವಾಯಿತು. 1985ರಲ್ಲಿ ಬಿ.ಸಿ.ರೋಡ್‌ನಲ್ಲಿ ಆಸಕ್ತರನ್ನು ಸೇರಿಸಿ ಕುಲಾಲರು 'ವಿನಾಯಕ ನಾಟಕ ಸಭಾ' ಎಂಬ ತಂಡ ಕಟ್ಟಿದರು. ರಂಗಪ್ರಯೋಗಕ್ಕೆ ರಮಾ ಬಿ.ಸಿ.ರೋಡ್ (ರಮೇಶ್ ಮಾಸ್ಟರ್) ಎಂಬ ಸಮರ್ಥರು ನಿರ್ದೇಶಕರಾಗಿ ದೊರಕಿದ್ದು ಗಟ್ಟಿ ನೆಲೆಗಟ್ಟಾಯಿತು.

ಇವರ ಆರಂಭಿಕ ನಾಟಕಗಳು 'ರೂಪ ಕೊರಿನ ಶಾಪ', 'ತೊಟ್ಟಿಲ್ಲ ಬಾಲೆ', 'ಮಂಗಳ ಸೂತ್ರ', 'ಸತ್ಯಪನ್ಲೆ' ಇತ್ಯಾದಿ. 1985ರಲ್ಲೇ 'ವಿನಾಯಕ ನಾಟಕ ಸಭಾ' ತಂಡವು ಪ್ರದರ್ಶಿಸಿದ 'ಸತ್ಯಪನ್ಲೆ' ನಾಟಕವು ಅವಿಭಜಿತ ಜಿಲ್ಲಾ ನಾಟಕ ಸ್ಪರ್ಧೆಯಲ್ಲಿ ಪ್ರಥಮ ಪ್ರಶಸ್ತಿ ಗಳಿಸಿತು. ಅಂದಿನ ಈ ತಂಡದಲ್ಲಿ ಈಗಿನ ಶಾಸಕರು ಹಾಗೂ ತುಳು ಅಕಾಡೆಮಿ ಮಾಜಿ ಅಧ್ಯಕ್ಷರಾದ ಶ್ರೀ ಉಮಾನಾಥ ಕೋಟ್ಯಾನ್ ಅಭಿನಯಿಸಿದ್ದರು.

ಈ ತಂಡದಲ್ಲಿ ರಂಗಭೂಮಿಗೆ ಪ್ರಥಮ ಹೆಜ್ಜೆಯಿರಿಸಿದವರು ಮುಂದೆ ಖ್ಯಾತ ನಾಮರಾದ ನವೀನ್ ಡಿ. ಪಡೀಲ್, ದಿನೇಶ್ ಅತ್ತಾವರ, ಹರಿಶ್ಚಂದ್ರ ಮಂಜೇಶ್ವರ, ಕ್ಯಾಲಿ ಡಿ.ಎಸ್. ಅಲ್ಲದೆ ಮಾಧವ ಕೆ. ಶಕ್ತಿನಗರ, ವೀಣಾ, ಮೀರಾ, ಸರೋಜಿನಿ ಶೆಟ್ಟಿ ಮುಂತಾದವರು ಕೂಡಾ ಬಿ. ಆರ್. ಕುಲಾಲ್‌ರ ವಿನಾಯಕ ನಾಟಕ ಸಭಾ ತಂಡದಲ್ಲಿ ಅಭಿನಯಿಸಿದ್ದರು.

ಬಂಟ್ವಾಳ ಪ್ರದೇಶದಲ್ಲಿ ತುಳು ರಂಗಭೂಮಿಯನ್ನು ಕ್ರಿಯಾಶೀಲವಾಗಿ ಬೆಳೆಸಿದವರಲ್ಲಿ ಬಿ. ಆರ್ ಕುಲಾಲ್ ಕೂಡಾ ಮುಖ್ಯರು. 1991ರಲ್ಲಿ ಇವರು ಬರೆದ 'ಕರಿಯನ ಕರಿಮಣಿ' ವಿನಾಯಕ ನಾಟಕಸಭಾ ಬಿ.ಸಿ.ರೋಡ್ ಲಾಂಛನದಲ್ಲಿ ಪ್ರಯೋಗಕ್ಕೆ

ಬಂದಿತು. ರಮಾ ಬಿ.ಸಿ.ರೋಡ್ (ರಮೇಶ್ ಮಾಸ್ಟರ್) ಇವರ ನಿರ್ದೇಶನದಲ್ಲಿ ಸೆಟ್ಟೇರಿತು. ಈ ನಾಟಕ ತಂಡವನ್ನು ಕಟ್ಟಿದ ಬಿ.ಆರ್. ಕುಲಾಲ್ ಮುಂದೆ ಹಲವು ವರ್ಷಕಾಲ ನಾಟಕ ರಂಗದಲ್ಲಿ ದುಡಿದರು. ನೆನಪಾನಗ (93–94) ಸತ್ಯಪನ್ಲೆ, (1995), ಬಸ್ಸ್ ಪೋಂಡಾ (95–96), ಬನ್ನಗ ಕನ್ಯೆದನಾ (95–96) ಮುಂತಾಗಿ ಕುಲಾಲರ ಹಲವಾರು ನಾಟಕಗಳು ಅನೇಕ ವರ್ಷಕಾಲ ಪ್ರದರ್ಶಿತವಾಗಿ ಜನಪ್ರಿಯವಾದವು. ಎಲ್ಲಾ ನಾಟಕಗಳನ್ನು ದಿಗ್ದರ್ಶಿಸಿದವರು ರಮಾ ಬಿ.ಸಿ.ರೋಡ್.

**ತಮ್ಮ ಲಕ್ಷ್ಮಣ (1951)**



ಕಲಾ ನಿರ್ದೇಶಕ ತಮ್ಮ ಲಕ್ಷ್ಮಣ ಮೂಲತಃ ರಂಗನಟ, ನಾಟಕಕಾರರಾಗಿ ಎಪ್ಪತ್ತರ ದಶಕದಿಂದಲೇ ಕ್ರಿಯಾಶೀಲರು. 'ಅಮರ್ ಜೋಕುಲು', 'ಬ್ರಹ್ಮನ ಬರವು', 'ನಿರೆಲ್', 'ಪರಬನ ಬರವು', 'ಸತ್ಯ ಮುನೀಂಡಾ?' (ಪ್ರಕಟವಾಗಿದೆ –2015) ಮುಂತಾದ ನಾಟಕಗಳನ್ನು ರಚಿಸಿ ರಂಗಕ್ಕೆ ತಂದಿರುವರು. 1976ರಲ್ಲಿ, ಇವರು ರಚಿಸಿದ್ದ 'ಸತ್ಯ ಮುನೀಂಡಾ?' ನಾಟಕವನ್ನು ಡಾ. ರಿಚಾರ್ಡ್ ಕ್ಯಾಸ್ಟಲಿನೊ ಅವರು ತಮ್ಮ 'ಅರುಣ್–ಕಿರಣ್'

ಮಂಗಳೂರು ಪುರಭವನದಲ್ಲಿ ಅರುಣ್ ಕಿರಣ್ ಪ್ರೊಡಕ್ಷನ್ಸ್ ಅವರು ಏರ್ಪಡಿಸಿದ ತಮ್ಮ ಲಕ್ಷ್ಮಣ ಇವರ 'ಸತ್ಯ ಮುನೀಂಡಾ?' ನಾಟಕದ ಪ್ರಯೋಗ. ನಟರು : ರೋಹಿದಾಸ್ ಕದ್ರಿ, ಜೆ. ಬಾಬು ಭಟ್, ರೀನ್ ಸಿಂತಿ, ನವೀನ್ ಡಿ. ಪಡೀಲ್, ಜೀವರತ್ನ ಸನಿಲೊ ಮತ್ತಿತರರು. ನಿರ್ದೇಶನ : ಆರ್.ಕೆ. ಉಳ್ಳಾಲ್ (1976).

ಸಂಸ್ಥೆಯ ಬ್ಯಾನರ್‌ನಲ್ಲಿ ಮಂಗಳೂರು ಪುರಭವನದಲ್ಲಿ ಅದ್ದೂರಿಯಾಗಿ ರಂಗಪ್ರಯೋಗ ವ್ಯವಸ್ಥೆಗೊಳಿಸಿದ್ದರು. ಅಂದು ಇದರ ನಿರ್ದೇಶಕರಾಗಿದ್ದವರು ಆರ್. ಕೆ. ಉಳ್ಳಾಲ್. ಶಾಲಾದಿನಗಳಲ್ಲೇ ನಟನಾಗಿ ರಂಗಭೂಮಿಗೆ ಆಗಮಿಸಿದ್ದ ತಮ್ಮ ಲಕ್ಷ್ಮಣರು ಅಭಿನಯ, ನಾಟಕ ರಚನೆಯ ಜೊತೆ ಜೊತೆಗೆ ಹಲವಾರು ಕಲಾಸಂಘಟನೆಗಳೊಂದಿಗೆ ಬೆರೆತುಕೊಂಡು ಅನುಭವಿಯಾಗಿ ಬ್ಯಾಕ್‌ಸ್ಟೇಜ್‌ನಲ್ಲಿ ಅಪಾರ ಅನುಭವ ಗಳಿಸಿದರು. ನಾಟಕಗಳ ದೃಶ್ಯಜೋಡಣೆಯಲ್ಲಿ ಸಿದ್ಧಹಸ್ತರಾಗಿ, ರಂಗ ತಾಂತ್ರಿಕತೆಯ ನಿಸ್ಸೀಮವಾಗಿ ತುಳು ರಂಗಭೂಮಿಯ ಪ್ರಸಿದ್ಧ ಕಲಾನಿರ್ದೇಶಕರಾದರು. ಈಗ ರಂಗಭೂಮಿ ಹಾಗೂ ತುಳುಚಲನಚಿತ್ರ ರಂಗದ ಪ್ರಸಿದ್ಧ ಕಲಾನಿರ್ದೇಶಕರು. 2016ರಲ್ಲಿ ತುಳು ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ ಪಡೆದಿರುವರು.

**ಎ. ಶಿವಾನಂದ ಕರ್ಕೇರಾ (1952)**

ಬ್ಯಾಂಕರ್ ಆಗಿದ್ದ ಅತ್ತಾವರ ಶಿವಾನಂದ ಕರ್ಕೇರಾ ಬಾಲ್ಯದಿಂದಲೇ ರಂಗಭೂಮಿ ಆಸಕ್ತರಾಗಿದ್ದು ಹಲವಾರು ನಾಟಕಗಳಲ್ಲಿ ಪಾತ್ರ ವಹಿಸಿದರು. ಮುಂದೆ 1989ರಲ್ಲಿ 'ಎರುಮ್ಯೆಂದೆ' ನಾಟಕ ಬರೆದು (ಪ್ರಕಟ 1997) ಪ್ರದರ್ಶಿಸಿದರು. ಅದರ ವಿಶಿಷ್ಟ ಕಥಾವಸ್ತು ತುಳು ಸೊಬಗಿನ ಲವಲವಿಕೆಯ ಭಾಷೆ, ಸುಂದರ ಪದಪುಂಜ ಗಳ ಸಂಭಾಷಣೆ, ಹಾಡುಗಳಿಂದಾಗಿ ನಾಟಕ ಯಶಸ್ವಿ ಯಾಯಿತು. ಬಳಿಕ 'ಕಾಲಚಕ್ರ', ಭೂಭಾರ ಸಮಿತಿ (ದೆಹಲಿಯಲ್ಲಿ ಪ್ರಯೋಗ), 'ಕಂಡನಿ ಬೊಡ್ಚುಂದಿನ ಸಂಘ', 'ಆವಾ ಈ ಮದಿಮೆ', 'ಕಾರ್ನಿಕದ ದೈವ ವೈದ್ಯನಾಥ' ಮುಂತಾದ ನಾಟಕ ರಚಿಸಿದರು. ಮೂರು ನಾಟಕಗಳು ಅಚ್ಚಾಗಿವೆ ಈ ನಾಟಕಗಳು ಆಕಾಶವಾಣಿಯಲ್ಲೂ ಪ್ರಸಾರಗೊಂಡಿವೆ.

**ಕೆ.ಜೆ. ಕೊಕ್ರಾಡಿ (1953–2015)**



ಉಜಿರೆಯ ಶಾಲಾ ಶಿಕ್ಷಕರಾಗಿದ್ದ ಕೆ.ಜೆ. ಕೊಕ್ರಾಡಿ ಯವರು ಬರೆದ ಕಾವೇರಿ (ಪ್ರ: 1984) ನಾಟಕ, ರತ್ನವರ್ಮ ಹೆಗ್ಗಡೆ ಸ್ಮಾರಕ ಪ್ರಶಸ್ತಿ ಗಳಿಸಿತು. ಅದೇ ವರ್ಷದ 'ಬೈರನ ಬದ್ಕ್' ಅತ್ಯಂತ ಹೆಚ್ಚು ಪ್ರಯೋಗ ಕಂಡಿದೆ. 'ಹೊನ್ನೂರ್ದ ಕತೆ', ಭಾಗ್ಯಲಕ್ಷ್ಮಿ, ಪಶ್ಚಾತ್ತಾಪ (ರೇಡಿಯೋ ನಾಟಕ) ಇತ್ಯಾದಿ 9 ನಾಟಕ ರಚಿಸಿದವರು. ಇವರ 'ಕಾವೇರಿ' ಮುಂತಾದ ನಾಟಕಗಳನ್ನು ಕೆಲವಾರು ತಂಡಗಳು ಈಗಲೂ ಪ್ರಯೋಗಿಸುತ್ತಿವೆ. ಚಿತ್ರನಟ

ದಿ. ಸುಭಾಶ್ಚಂದ್ರ ಪಡಿವಾಳರು ರಂಗನಟರಾಗಿದ್ದ ವೇಳೆ ಮೂಡುಬಿದಿರೆ ಪ್ರದೇಶದಲ್ಲಿ ಕೊಕ್ರಾಡಿಯವರ ಕಾವೇರಿ, ಹೊನ್ನೂರ್ದ ಕತೆ ನಾಟಕಗಳ ಹಲವಾರು ಪ್ರದರ್ಶನಗಳಲ್ಲಿ ಕಥಾನಾಯಕನ ಪಾತ್ರ ವಹಿಸಿದ್ದರು.

**ಯಶವಂತ ಬೋಳೂರು (1954)**



ಎಂಬತ್ತು-ಎಂಬತ್ತರ ದಶಕದ ಮಂಗಳೂರು ತುಳು ರಂಗದ ಹೊಸ ಪ್ರತಿಭೆಗಳಲ್ಲಿ ಯಶವಂತ ಬೋಳೂರು ಗಮನ ಸೆಳೆದವರು. ಇವರ ಚೊಚ್ಚಲ ನಾಟಕ 'ಮಾಧವಿ' ದಿವಂಗತ ಸೋಮಶೇಖರ ಪುತ್ರನ್ ಅವರ ನಿರ್ದೇಶನ ದಲ್ಲಿ ಬೋಳೂರು ಯುನೈಟೆಡ್ ಸ್ಪೋರ್ಟ್ಸ್ ಕ್ಲಬ್ ಆಶ್ರಯದಲ್ಲಿ ಪ್ರಥಮ ಪ್ರಯೋಗವಾಯಿತು. ಮುಂದೆ 'ತೆಕ್ಕಂದಿ ತುಡರ್', 'ಬದುಕೊಡು ಎಂಚ?', 'ಪೊಪ್ಪಾ ಎಂಕ್ ಮದಿಮೆ ಬೊಡ್ಚಿ', 'ಕಾಸ್ ಪಾತೆರುಂಡು', 'ಮಾತೆರ್ಲಾ ಅಂಚೆನೆ', 'ಕುಲ್ದು ಪಾತೆರ್ಗ' ಮುಂತಾಗಿ ಹತ್ತರಷ್ಟು ನಾಟಕ ಬರೆದವರು.

'ಮಾತೆರ್ಲಾ ಅಂಚೆನೆ' ನಾಟಕವು ಮಂಗಳೂರು ಪುರಭವನದಲ್ಲಿ ನಡೆದ ತುಳುನಾಟಕ ಸ್ಪರ್ಧೆಯಲ್ಲಿ ದ್ವಿತೀಯ ಪ್ರಶಸ್ತಿ ಗಳಿಸಿತ್ತು. (ಅಂದು ಎಂ.ಕೆ. ಸೀತಾರಾಮ ಕುಲಾಲ್ ಅವರ ನಾಟಕಕ್ಕೆ ಪ್ರಥಮ ಪ್ರಶಸ್ತಿ ಲಭಿಸಿತ್ತು.)

**ಎ. ಗಂಗಾಧರ ಶೆಟ್ಟಿ (1956) – ಚಿತ್ರಕಲಾ ಆರ್ಟ್ಸ್**



ಎಂಬತ್ತರ ದಶಕದಿಂದಲೂ ಮುಖ್ಯ ಸ್ತ್ರೀ ಪಾತ್ರಧಾರಿ ಯಾಗಿ ನಾಲ್ಕು ದಶಕಗಳ ಕಾಲವೂ ಬೇಡಿಕೆಯಲ್ಲಿದ್ದ ನಟ, ನಾಟಕಕಾರ ಎ. ಗಂಗಾಧರ ಶೆಟ್ಟರು ಪ್ರಸಿದ್ಧ ಪೂಮಾಲೆ' (1974) ನಾಟಕದ ಕರ್ತೃ. ಅಲ್ಲದೆ 'ಪೊಣ್ಣ ರೂಪ', 'ತಿಂಗೊಲ್ದ ಬೊಲ್ದು', 'ಪೊಕ್ಕಡೆ ಪನಡೆ', 'ನೆಂಪು', 'ಈ ಜೀವ ಇರೆಗೇ', 'ಈ ಬದ್ಕ್ ಬೋಡಾ', 'ಗೆಜ್ಜೆದ ಸ್ವರ', 'ಮಾತೆರ್ಲಾ ಅಂಚೆನೇ', 'ಏರ್ ಎಡ್ಡೆಂತಿನಕುಲು', 'ಮದ್ಮೆದ ಮದ್ರಂಗಿ', 'ಬೆಮ್ಮೆರೆ ಪುರ್ಸಾದ', 'ಒರಿಯನ್ ತೂಂಡ ಒರಿಯಗಾಪುಜಿ', 'ಕಡ್ತಲೆ', 'ಮದಿಮಾಯೆ ಮನಿಪುಜೆ' – ಮುಂತಾದ ಸುಮಾರು 24 ಸಾಮಾಜಿಕ, ಜಾನಪದ ನಾಟಕ ರಚಿಸಿ, ಅವರದೇ ಆದ 'ಚಿತ್ರಕಲಾ ಆರ್ಟ್ಸ್' ತಂಡದಿಂದ ಪ್ರದರ್ಶನ ನೀಡಿದ್ದಾರೆ. 1976ನೇ ಇಸವಿಯಲ್ಲಿ ಬರೆದಿದ್ದ ಪೂಮಾಲೆ ನಾಟಕಕ್ಕೆ ನವಭಾರತ ತುಳುಕೂಟ ನಾಟಕ ಸ್ಪರ್ಧೆಯಲ್ಲಿ ಹಲವು ಪ್ರಶಸ್ತಿ ಬಂದವು, ಇದರಲ್ಲಿ ಉತ್ತಮ ಸ್ತ್ರೀಪಾತ್ರವೆಂದು ಗಂಗಾಧರ ಶೆಟ್ಟರಿಗೆ ಬಹುಮಾನ. ಈ ನಾಟಕವು

ಸುರತ್ಕಲ್ ವಿದ್ಯಾದಾಯಿನಿ ನಾಟಕ ಸ್ಪರ್ಧೆ ಸೇರಿದಂತೆ ಜಿಲ್ಲಾಮಟ್ಟದ ಹಲವು ಸ್ಪರ್ಧೆಗಳಲ್ಲಿ ಬಹುಮಾನಿತ, ಬಂಗಾರದ ಪದಕ ವಿಜೇತ. ಸ್ತ್ರೀಪಾತ್ರಧಾರಿಯಾಗಿ ಗಂಗಾಧರ ಶೆಟ್ಟರು ಸೀತಾರಾಮ ಕುಲಾಲರ 'ಉಡಲ್ದ ತುಡರ್', ಪಾಂಡೇಶ್ವರರ 'ಪೊರ್ತು ಕಂತ್‌ಂಡ್', ನೆಕ್ಕಿತಮಣಿ ಗೋಪಾಲಕೃಷ್ಣರ 'ಅಂಕುರಾರ್ಪಣ' ನಾಟಕ ಮಣಿಪಾಲದ ಕೊಪ್ಪಿಕಾಡ್ ನಾಟಕ ಸ್ಪರ್ಧೆಯಲ್ಲಿ –ಹೀಗೆ ಹಲವು ಬಾರಿ ಅತ್ಯುತ್ತಮ ಕಲಾವಿದ ಪ್ರಶಸ್ತಿ'ಗೆ ಪಾತ್ರರಾದವರು ಈ ಶೆಟ್ಟರು. ಒರಿಯನ್ ತೂಂಡ ಒರಿಯಗಾಪುಜಿ ನಾಟಕ ಇದೇ ಹೆಸರಿನಲ್ಲಿ ಚಲನಚಿತ್ರವಾಗಿ 2016ರಲ್ಲಿ ತೆರೆಕಂಡಿದೆ.

**ಅಚ್ಯುತ ಕಲ್ಲಾಪು (1948–2015)**



1958ರಲ್ಲಿ ತನ್ನ ಪ್ರಾಥಮಿಕ ಶಿಕ್ಷಣ ವೇಳೆ ಸ್ತ್ರೀಪಾತ್ರದೊಂದಿಗೆ ನಾಟಕ ಅಭಿನಯ ಆರಂಭಿಸಿ ಮುಂದೆ ದೀರ್ಘ ಕಾಲ ಸ್ತ್ರೀಪಾತ್ರದಲ್ಲೇ ಹೆಸರಾದರು. ಜೊತೆಗೆ ನಾಟಕ ರಚನೆ, ನಿರ್ದೇಶನ ಮಾತ್ರವಲ್ಲದೆ 'ಕ್ಯಾಸೆಟ್ ನಾಟಕ ಯುಗ'ದ ರೂವಾರಿಯಾದರು. 'ಬಿನ್ನೆರೆ ಗೌಜಿ' ಇವರು ರಚಿಸಿದ ಪ್ರಥಮ ನಾಟಕ, 'ಒಂತೆ ಉಂತುಲೆ', 'ವಾ ಗಮ್ಮತ್‌ಯೇ', 'ಒಯಿಕ್ಲಾ ಭಾಗ್ಯಬೋಡು' – ಮುಂತಾಗಿ 32 ರಂಗನಾಟಕಗಳಲ್ಲದೆ 30ಕ್ಕೂ ಮಿಕ್ಕ ಕ್ಯಾಸೆಟ್ ನಾಟಕಗಳನ್ನೂ ಹೊರತಂದಿದ್ದಾರೆ. ತುಳು ನಾಟಕ ಕಲಾವಿದರ ಒಕ್ಕೂಟದ ಸ್ಥಾಪನೆಯ ರೂವಾರಿಗಳಲ್ಲೂ ಇವರೊಬ್ಬರು.

**ಎ.ಕೆ.ವಿ. ಬೆಂಡೆಲ್ (1960)**



'ಉರಿಯಂದಿ ಉಡಲ್' 'ಏರ್ಲಾ ಇಜ್ಜೆರ್', ಕತೆನೇ ಬೇತೆ', ಪಾಪದ ಶಾಪ' 'ಪನ್ಪಿನಕ್ಲು ಪನಡ್', 'ಬಾಡಂದಿ ಬಳ್ಳಿ' – ಮುಂತಾದ 18 ತುಳು ನಾಟಕ ರಚಿಸಿ, ನಿರ್ದೇಶಿಸಿದವರು ವರ್ಕಾಡಿಯ ಶ್ರೀ ಬೆಂಡೆಲ್ (ಅಲ್ಫೋನ್ಸ್ ಡಿ'ಕುಟಿನ್ಹಾ ವರ್ಕಾಡಿ ಬೆಂಡಲ್) ಬಾಲ್ಯದಿಂದಲೇ ನಾಟಕಗಳಲ್ಲಿ ಅಭಿನಯಿಸುತ್ತ, ಇತರ ನಾಟಕಕಾರರ ನಾಟಕಗಳನ್ನು ನಿರ್ದೇಶಿಸುತ್ತ ಬಂದವರು. ಸುಮಾರು 750ರಷ್ಟು ಹಾಡುಗಳನ್ನು ರಚಿಸಿದವರೀತರು. ಮೀಸಲು ಸಶಸ್ತ್ರ ಪೋಲೀಸ್ ಪಡೆಯ ಉದ್ಯೋಗಿಯಾಗಿದ್ದ ಇವರು 1978ರಲ್ಲಿ ಮಂಗಳೂರಿನ ಪೋಲೀಸ್ ಲೇನ್‌ನಲ್ಲಿ ಗೆಳೆಯರೊಂದಿಗೆ ಶ್ರೀ 'ಮುನೀಶ್ವರ ಮಹಾಗಣಪತಿ ಕಲಾಮಂಡಳಿ' ಸ್ಥಾಪಿಸಿ, ಅದರ ಮೂಲಕ ನಾಟಕವಾಡುತ್ತಾ ಬಂದವರು. ಮಾರಿಬಲೆ,

ಬೊಗ್ಗಾಣೆ, ಹಲೋ ಯಮ ಮುಂತಾದ ತುಳು, ಕೊಂಕಣಿ, ಕನ್ನಡ ಚಿತ್ರಗಳಲ್ಲೂ ನಟಿಸಿದವರು.

ಹೀಗೆಯೇ ಮಂಗಳೂರಿನ ಹಿರಿಯ ತಲೆಮಾರಿನ ಅತ್ತಾವರ ಮಂಜುನಾಥರೂ ನಟ, ನಾಟಕಕಾರ ಹಲವು ಇವರ ನಾಟಕಗಳು 2–3 ಪ್ರದರ್ಶನ ಕಂಡಿವೆ. ಕಾರ್ಕಳದ ಬಾಬೋಜಿರಾವ್ ಅವರ ತುಡರ್ ತೆಕ್ಕೊಡ (1990), 'ತಿರ್ಗ್ಗಾ ಮುಂಡಾಸ್', ಶೇಖರ ಗುಜರನ್ ಕಲ್ಲೊಟ್ಟೆ ಅವರ 'ಬಂಗಾರ್ ಪೊಣ್ಣು', 'ಕಾಂತುನ ಕನ' ಜನಪ್ರಿಯ ಪ್ರದರ್ಶನ ಗಳನ್ನು ಕಂಡಿವೆ. ಕಾರ್ಕಳದ ಎ. ಗೋಪಾಲ್, ಮಾಧೋಜಿರಾವ್ ಮುಂಬಯಿಯಲ್ಲಿರುವ ಎಸ್.ಎಸ್. ಕಾರ್ಕಳ್, ತುಳು ನಾಟಕರಂಗದಲ್ಲಿ ಕೆಲಸ ಮಾಡಿದ್ದಾರೆ.

**ದಿನೇಶ್ ಕಂಕನಾಡಿ**

ಯುವಾವಸ್ಥೆಯಲ್ಲೇ ತೀರಿಹೋದ ಪ್ರತಿಭಾವಂತ ನಾಟಕಕಾರ ದಿನೇಶ್ ಕಂಕನಾಡಿ 'ಅಲೆಗಿನಿ ಸನಿಯಾರ', ಬಲಿಪು ವಿತಲ ಬಲಿಪು, ಕುಸೇಲ್ದ ಪರಬೆ, 'ಕಿಸೆಟುಂಡು ಕೈಟಿಜ್ಜಿ' ಮುಂತಾದ ಜನಪ್ರಿಯ ನಾಟಕಕೃತಿ ರಚಿಸಿದವರು. ಕ್ರೀಡಾಪಟುವೋರ್ವನ ಕತೆಯುಳ್ಳ ಪರಿಣಾಮಕಾರಿ ಗಂಭೀರ ನಾಟಕ 'ಬಲಿಪು ವಿತಲ ಬಲಿಪು'. ಗಣೇಶೋತ್ಸವ ಸಂದರ್ಭಗಳಲ್ಲಿ ಪಂಪ್‌ವೆಲ್‌ನ 'ಆಸರೆ ಕಲಾವಿದರು' ಎನ್ನುವ ತಂಡದ ಮೂಲಕ ದಿನೇಶ್ ಕಂಕನಾಡಿಯವರ ಹೆಚ್ಚಿನ ನಾಟಕಗಳು ಪ್ರಯೋಗವಾಗಿ ಪ್ರೇಕ್ಷಕರ ಅಪಾರ ಮೆಚ್ಚುಗೆ ಪಡೆದವು.

**ಮಂಗಳೂರು ಪುರಭವನದಲ್ಲಿ ಪ್ರದರ್ಶಿತ ದಿನೇಶ್ ಕಂಕನಾಡಿಯವರ ನಾಟಕ 'ಅಲೆಗಿನಿ ಶನಿವಾರ'. ಪಾತ್ರವರ್ಗ : ವಿ.ಜಿ. ಪಾಲ್, ದಿ. ಸುರೇಂದ್ರನಾಥ ಪಾಂಡೇಶ್ವರ ಮತ್ತಿತರರು. ಚಿತ್ರಕೃಪೆ : ಪಾಲ್ ಕಡಲ್**

'ಕುಸೇಲ್ದ ಪರಬೆ' ನಾಟಕವನ್ನು 90ರ ದಶಕದಲ್ಲಿ ಕಲಾಸಂಗಮದ ವಿಜಯಕುಮಾರ್ ಕೊಡಿಯಾಲ್‌ಬೈಲ್‌ರು ಹಕ್ಕುಗಳನ್ನು ಪಡೆದುಕೊಂಡು ಪರಿಣಾಮಕಾರಿಯಾಗಿ ರಂಗದಲ್ಲಿ ಪ್ರಯೋಗಿಸಿ ಯಶಸ್ಸು ತಂದುಕೊಟ್ಟರು. 'ಕುಸೇಲ್ದ ಕಲಾವಿದರ' ತಂಡಕ್ಕಾಗಿ 'ಕುಸೇಲ್ದ ಪರಬೆ' ಬರೆದ ನಾಟಕದ ಕರ್ತೃ. ಗೀತರಚನಾಕಾರರೂ ಆಗಿರುವ ಅವರ ಈ ನಾಟಕದ ಒಂದು ಹಾಡಿನ ಸ್ಯಾಂಪಲ್.

'ದೇವೆರ್ ಗೊಬ್ಬುವೆರ್, ನರಮಾನ್ಯಡಾ
ಕುಸೇಲ್ದ ಕುಸೆಲ್....
ಈ ದುಕ್ಕಪಿನ್ನಗಾ, ಸುಕೊನೂ ಎನ್ನ್‌ಲಾ,
ಈ ಸುಕ ಬನ್ನಗಾ, ಉಂದೇ ಎನ್ನ್‌ಲಾ, ದೇವೆರ್ ಗೊಬ್ಬಯಿನಾ ಕುಸೇಲ್ದ ಕುಸಲ್....'

**'ರಾಂ' ಎಲ್ಲಂಗಳ (ರಾಮರಾಯ ಶಾನುಭಾಗ್)**



'ಶಿವಾಜಿ ಕಲಾಸಂಘ, ಕೊಲ್ಯ, ಮಧೂರು' ಎನ್ನುವ ಸಂಘಟನೆಯ ಮೂಲಕ 'ರಾಂ' ಎಲ್ಲಂಗಳ ರಚಿಸಿದ ಸುಮಾರು 22 ನಾಟಕಗಳು ಪ್ರದರ್ಶಿತವಾಗಿವೆ. 'ದೀಪ', ಮುಗಲ್ದ ನಿರೆಲ್', 'ಪೂ ಮನಸ್ಸ್‌ದ ಪೊಣ್ಣು', 'ತುಂಡು ಭೂಮಿದ ಅರಸು', 'ದಮಯಂತೀ ಪುನರ್ ಸ್ವಯಂವರೊ', 'ಕಣ್ಣ್‌ದಾಂತಿ ಪೊಣ್ಣು', 'ಓಲು ಪೋಂಡಲಾ ಸೋಲು', 'ಭಕ್ತ ಕೇದಾರ', 'ಅಭಿಮನ್ಯು', 'ವಾರ್ತೆ', 'ಸೌಭಾಗ್ಯೆ ಸುನೀತೆ'– ಮುಂತಾದ ನಾಟಕಗಳಲ್ಲಿ ಎಲ್ಲಂಗಳರ ಚುರುಕಾದ ಹಾಸ್ಯ ಲೇಪಿತ ಭಾಷೆಯಿದೆ. ಎಲ್ಲವೂ ಅಪ್ರಕಟಿತ.

ತೊಂಬತ್ತರ ದಶಕದಲ್ಲಿ 'ಬಾಗಿನ ಕಂಡನಿ' (ಜಿಲ್ಲಾ ಮಟ್ಟದಲ್ಲಿ ಪ್ರಶಸ್ತಿ ವಿಜೇತ) ನಾಟಕ ರಚಿಸಿದ ಕಾಸರಗೋಡಿನ **ವಸಂತ ಕೋಟ್ಯಾನ್** 'ಮಗೆ ಮಲ್ತಿ ಧಗೆ' (ಪ್ರಥಮ ನಾಟಕ), ದನಿ ಒಕ್ಕೆಲ್, ಎರ್ತೆದ ಪೊರ್ತು, ಆಶಾ, ಸಿ.ಐ.ಡಿ. ಪಿಕ್ಕಾಸ್, (ರಿಪ್ಪರ್ ಚಂದ್ರನ ಕಥೆ) ಮುಂತಾದ ನಾಟಕ ರಚಿಸಿದವರು. ಕೆಲವು ರೇಡಿಯೋ ನಾಟಕಗಳನ್ನೂ ಬರೆದಿದ್ದಾರೆ.

**ಗಂಗಾಧರ ಕಿರೋಡಿಯನ್ – ಪೊರ್ಲು ಆರ್ಟ್ಸ್ ಕುಡ್ಲ**

ಗಂಗಾಧರ ಕಿರೋಡಿಯನ್ ಕಳೆದೊಂದು ದಶಕದಿಂದ ಜಾನಪದ ಕಥಾವಸ್ತುವನ್ನು ನಾಟಕಗಳಲ್ಲಿ ಪಡಿಮೂಡಿಸಿದವರು. ಅವರ ಕಾರ್ನಿಕದ 'ತಗೆ ತಂಗಡಿ', 'ನೇಮೊದ ಬೂಳ್ಯ', 'ಕಾರ್ನಿಕದ ಜುಮಾದಿ' ಮತ್ತಿತರ ನಾಟಕಗಳು ರಂಗಪ್ರಯೋಗದಲ್ಲಿ ಯಶಸ್ಸು ಕಂಡಿವೆ. ತನ್ನದೇ ಆದ ಪೊರ್ಲು ಆರ್ಟ್ಸ್ ತಂಡವನ್ನು ಸ್ಥಾಪಿಸಿ ನಾಟಕ ಪ್ರದರ್ಶಿಸುತ್ತ ಬಂದರು. ಮುಂದೆ ಇತರ ತಂಡಗಳಿಗಾಗಿಯೂ ಕೆಲಸ ಮಾಡುತ್ತಿರುವರು.

ತುಳು ಜಾನಪದ ವಸ್ತುಗಳನ್ನಾಯ್ದುಕೊಂಡು ಅದರದೇ ಸಾಂಪ್ರದಾಯಿಕ ಬಂಧದೊಂದಿಗೆ ಎರಡು ದಶಕಗಳಿಂದ ರಂಗದಲ್ಲಿ ಪ್ರಯೋಗಿಸಿದ ಸಕ್ರಿಯ ನಾಟಕಕಾರ, ನಿರ್ದೇಶಕರು. 'ಕಾರ್ನಿಕದ ತಗೆತಂಗಡಿ' (ಕೋರ್ದಬ್ಬು ತನ್ನಿಮಾನಿಗ ಕತೆ) 'ನೇಮೊದ ಬೂಳ್ಯ' ಕಾರ್ನಿಕದ ಜುಮಾದಿ ಮುಂತಾದವು ಇವರ ಹೆಸರು ಪಡೆದ ರಂಗಕೃತಿಗಳು. ಆ ಬಳಿಕ ಕಿರುತೆರೆ ಧಾರಾವಾಹಿಯಲ್ಲಿ ನಿರತರಾದರು. 2007ರಲ್ಲಿ 'ನೇಮೊದ ಬೂಳ್ಯ'ವನ್ನು ಅದೇ ಹೆಸರಿನಲ್ಲಿ ಸಿನೆಮಾ ಮಾಡಿರುವರು.

**ಸಂಜೀವ ಅಡ್ಯಾರ್ – ಸೌಹಾರ್ದ ಕಲಾಸಂಘ, ಅಡ್ಯಾರು**



ಹೈಸ್ಕೂಲಿನಲ್ಲಿ ಓದುತ್ತಿರುವಾಗಲೇ 'ವಿಧಿಲೀಲೆ' (1964) ತುಳುನಾಟಕ ರಚಿಸಿ ಶಾಲಾ ನಾಟಕವಾಗಿ ಪ್ರದರ್ಶಿಸಿದ ಬಳಿಕ, 1970ರಲ್ಲಿ ಮಂಗಳೂರು ಸರಕಾರಿ ಕಾಲೇಜಿನಲ್ಲಿ ಪದವಿ ಓದುತ್ತಿರುವಾಗ ಬರೆದುದು 'ನೆತ್ತೆರ್ದ ಕಾನಿಗೆ', ಅಡ್ಯಾರು, ಕಟೀಲು ಮತ್ತು ಡಾನ್ ಬಾಸ್ಕೋ ಹಾಲ್‌ನಲ್ಲಿ ಪ್ರದರ್ಶನಗೊಂಡು ಜನಮೆಚ್ಚಿಗೆ ಗಳಿಸಿದ ಈ ನಾಟಕ **ಸೌಹಾರ್ದ ಕಲಾ ಸಂಘ, ಅಡ್ಯಾರು** ಎನ್ನುವ ಸಂಸ್ಥೆಯ ಮೂಲಕ ಜಿಲ್ಲೆಯ ಎಲ್ಲೆಡೆ, 5000ಕ್ಕೂ ಮಿಕ್ಕಿ ಪ್ರದರ್ಶನ ಕಂಡಿದೆ. ಮರ್ಲೆದಿ (1971), ಎನ್ನ ಮಾಮಿ (72), ಜ್ಯೋತಿ (83), ಗಾಳಿಗ್ ತಿಕ್ಕಿನ ತುಡರ್ (74), ಗಂಗೆ ಗೌರಿ (75), ಮೂಡಿ ಪೊರ್ತು ಕಂತ್‌ನಗ (91) ಮುಂತಾದ ನಾಟಕಗಳನ್ನು ಸಂಜೀವರು ಬರೆದು ಪ್ರದರ್ಶಿಸಿದ್ದಾರೆ. ಇವರ ಆರು ನಾಟಕಗಳು (ನೆತ್ತೆರ್ದ ಕಾನಿಗೆ, ಮರ್ಲೆದಿ, ಗಾಳಿಗ್ ತಿಕ್ಕಿನ ತುಡರ್, ಎನ್ನ ಮಾಮಿ, ಗಂಗೆ ಗೌರಿ, ಮೂಡಿ ಪೊರ್ತು ಕಂತ್ನಗ) ಮುದ್ರಣಗೊಂಡಿವೆ. ವಿಜಯಾ ಬ್ಯಾಂಕ್‌ನಲ್ಲಿ ಹಿರಿಯ ವ್ಯವಸ್ಥಾಪಕರಾಗಿದ್ದು ನಿವೃತ್ತರು.

'ಮರ್ಲೆದಿ' ನಾಟಕವೂ 3000ದಷ್ಟು ಪ್ರದರ್ಶನವಾಗಿದೆ. ಇದರಲ್ಲಿ ಮುಂಬಯಿಯ ಚಿತ್ರನಟ ಸದಾಶಿವ ಸಾಲ್ಯಾನ್, ಚಂದ್ರಪ್ರಭಾ ಮತ್ತಿತರರ ತಂಡ ಮಂಗಳೂರಿಗೆ ಬಂದು ಈ ನಾಟಕದ ಪ್ರದರ್ಶನ ನೀಡಿರುವುದು ಉಲ್ಲೇಖಾರ್ಹ. ರತ್ನವರ್ಮ ಹೆಗ್ಗಡೆ ಪ್ರಶಸ್ತಿಯನ್ನೂ ಈ ಕೃತಿ ಗಳಿಸಿಕೊಂಡಿತು.

**ದಿ. ಎಂ.ಬಿ. ಸಾಲ್ಯಾನ್ ಸೂಟರ್‌ಪೇಟೆ**

ಇವರ ಬಂಗಾರ್ದ ಕುರಲ್ (1982) ಧರ್ಮಕೈಬುಡಂದ್ (84) ಸತ್ಯದ ತುಡರ್ (85) ಕತ್ತಲೆದ ಕಥೆ (89) ನಾಟಕಗಳು ಪ್ರಕಟವಾಗಿವೆ; ಪ್ರದರ್ಶನ ಕಂಡಿವೆ 'ಬೋಂಟೆ' ಹೆಚ್ಚು ಗಮನ ಸೆಳೆದ ನಾಟಕ.

## ಕಟಪಾಡಿ ಶಂಕರ ಪೂಜಾರಿ (1953)

ಇವರು ಹೆಚ್ಚಾಗಿ ಪಾಡ್ದನ ಕತೆಗಳನ್ನಾಧರಿಸಿ 80–90ರ ದಶಕಗಳಲ್ಲಿ ಸುಮಾರು 12 ನಾಟಕ ರಚಿಸಿದರು. ದೇವೆರ್ ಎನ್ನ ಉಲ್ಲಯೆ, ಆಚು, ಮಾಯದ ಪಂಜುರ್ಲಿ ಇತ್ಯಾದಿ ನಾಟಕಗಳಲ್ಲಿ 'ಮೈತಿದಿ' ಸಾಮಾಜಿಕ ನಾಟಕ ಹಲವು ಕಡೆ ಪ್ರದರ್ಶನ ಕಂಡಿದೆ. ತೊಂಬತ್ತರ ದಶಕದಲ್ಲಿ ಕಟಪಾಡಿಯಲ್ಲಿ 'ನರ್ತಕಿ ಕಲಾರಂಗ' ಸಂಸ್ಥೆಯನ್ನು ಸೃಜಿಸಿ ಅದರ ಮೂಲಕ ನಾಟಕ ಸಪ್ತಾಹ, ನಾಟಕಸ್ಪರ್ಧೆ, ಕಲಾವಿದರಿಗೆ ಪ್ರಶಸ್ತಿ ನೀಡುವುದು ಮುಂತಾದ ಗಮನಾರ್ಹ ಕೆಲಸ ಮಾಡಿದರು. ಮುಂದೆ ಒಂದು ಅವಧಿಯಲ್ಲಿ ತಾಲೂಕು ಪಂಚಾಯತ್ ಅಧ್ಯಕ್ಷರಾಗಿದ್ದರು.

## ಮುದ್ದು ಮೂಡುಬೆಳ್ಳೆ (1954)

ತನ್ನ ಹತ್ತನೆಯ ವಯಸ್ಸಿನಲ್ಲಿ (1964) ಕನ್ನಡ ನಾಟಕಾಭಿನಯ ಆರಂಭಿಸಿ, ಕೃಷ್ಣಾಷ್ಟಮಿ ಸಮಯ ಹಲವಾರು ವರ್ಷ ಛದ್ಮವೇಷಧಾರಣೆಯನ್ನೂ ಮಾಡುತ್ತಿದ್ದು 13ನೇ ವಯಸ್ಸಿನಲ್ಲಿ 'ಚಕ್ರವ್ಯೂಹ' ಪೌರಾಣಿಕ ನಾಟಕ ಬರೆದು ಅಭಿನಯಿಸಿದ ಮುದ್ದು ಮೂಡುಬೆಳ್ಳೆ 1967–72ರ ಅವಧಿಯಲ್ಲಿ ಸುಮಾರು 15 ತುಳು, ಕನ್ನಡ ಪ್ರಹಸನ, ಏಕಾಂಕ ನಾಟಕಗಳನ್ನು ರಚಿಸಿ ತನ್ನ ಗೆಳೆಯರ ಕೂಟವನ್ನು ಸಂಘಟಿಸಿಕೊಂಡು ಪ್ರಯೋಗಿಸಿದರು. ಉಡುಪಿ, ಮುಂಬಯಿ, ಕಟಪಾಡಿ, ಕಾರ್ಕಳ, ತುಮಕೂರು, ದೆಹಲಿ ಮುಂತಾದೆಡೆ ನಾಟಕಗಳಲ್ಲಿ ಅಭಿನಯಿಸಿರುವರು. ತನ್ನ ನಾಟಕಗಳಲ್ಲದೆ ಬಿ. ರಾಮ ಕಿರೋಡಿಯನ್, ಸಂಜೀವ ದಂಡೆಕೇರಿ, ಅಮೃತ ಸೋಮೇಶ್ವರ, ಪ್ರಕಾಶ್ ಶೆಟ್ಟಿ, ಕೆ.ಎನ್. ಟೇಲರ್ ('ಕಂಡನೆ–ಬುಡೆದಿ'), ವಿಜಯಕುಮಾರ್ ಕೊಡಿಯಾಲ್‌ಬೈಲ್ ('ವೀರಪ್ಪನ್'–ದೆಹಲಿ

**ಪ್ರಕಾಶ್ ಶೆಟ್ಟಿ ಮಣಿಪುರ ವಿರಚಿತ 'ಸತ್ಯೊಗು ಸಾವಿಜ್ಜಿ' ನಾಟಕದಲ್ಲಿ ಮಾಲಿನಿ ಪಾತ್ರದಲ್ಲಿ ಮುದ್ದು ಮೂಡುಬೆಳ್ಳೆ, ಸಿಐಡಿಯಾಗಿ ಹೈದರ್ (1973, ಕಟಪಾಡಿ)**

ಪ್ರಯೋಗ) ಮುಂತಾದವರ ನಾಟಕಗಳಲ್ಲೂ ಅಭಿನಯಿಸಿದ್ದಾರೆ. ಗೀತರಚನೆ, ಗಾಯನ ಮತ್ತು ತನ್ನ ಪಾತ್ರಕ್ಕೆ ತಾನೇ ವರ್ಣಾಲಂಕಾರ ಮಾಡಿಕೊಳ್ಳುವುದಿತ್ತು. 1980ರಲ್ಲಿ ಬರೆದ 'ನಮ ಎಡ್ಡೆನಾ ಊರ್ಯೆಡ್ಡೆ', 'ಸಂಸಾರ', 'ಮಿಲ್ಲೋರ್ಕದ ಕುರ್ಲೆ', 'ಚೆನ್ನೆಗೊಬ್ಬು' (ಅಬ್ಬರದಾರಗ) ಇವು 1991ರಲ್ಲಿ ಪ್ರಕಟಿತ. 'ಆಕಾಶವಾಣಿ ನಾಟಕ, ರೂಪಕೊಲು' (ತುಳು) (2018) 'ಚಕ್ರವ್ಯೂಹ ಮತ್ತು ಇತರ ನಾಟಕಗಳು' (ಕನ್ನಡ) (2018) ಪ್ರಕಟವಾಗಿವೆ. ಸ್ತ್ರೀ ಪಾತ್ರವೂ ಸೇರಿದಂತೆ ರಂಗನಟ, ಗಾಯಕ, ನಿರ್ದೇಶಕರಾಗಿ, ಶಾಲಾ ಮಕ್ಕಳಿಗೆ ರಂಗ ತರಬೇತಿದಾರರಾಗಿಯೂ ಕೆಲಸ ಮಾಡಿದ ಇವರು ಮುಂದೆ ಸುದೀರ್ಘ ಬಾನುಲಿ ಉದ್ಯೋಗದ ಅವಧಿಯಲ್ಲಿ ನೂರಾರು ಆಕಾಶವಾಣಿ, ತುಳು-ಕನ್ನಡ ಜಾನಪದ ನಾಟಕ, ರೂಪಕಗಳನ್ನು ರಚನೆ, ನಿರ್ಮಾಣ ಮಾಡಿದ್ದಾರೆ. ಅಮೃತ ಸೋಮೇಶ್ವರ, ಬಿ.ಆರ್. ನಾಗೇಶ್, ಸುಮತಿ ಪಾಂಗಾಳ, ಪಾಂಡೇಶ್ವರ್, ಶಿವಾನಂದ ಕರ್ಕೇರ, ವಾಣಿ ಎಸ್. ಭಂಡಾರಿ ಮುಂತಾಗಿ ಹತ್ತಾರು ನಾಟಕಕಾರರ ನಾಟಕ ಕೃತಿಗಳನ್ನು ಆಕಾಶವಾಣಿಯಲ್ಲಿ ಪ್ರಸಾರಕ್ಕೆ ನಿರ್ದೇಶಿಸಿ, ನಿರ್ಮಿಸಿರುವರು. ನಾಟಕ ನಿರ್ಮಾಣಕ್ಕಾಗಿ ಆಕಾಶವಾಣಿ ರಾಜ್ಯ ಮಟ್ಟದ ಪ್ರಶಸ್ತಿ (2010), ತುಳು ಜಾನಪದವನ್ನಾಧರಿಸಿದ ಸಾಕ್ಷ್ಯ ರೂಪಕದ ರಚನೆ, ನಿರ್ಮಾಣಕ್ಕಾಗಿ ಆಕಾಶವಾಣಿಯ ರಾಷ್ಟ್ರೀಯ ಪ್ರಶಸ್ತಿಯನ್ನು (2013) ಪಡೆದಿರುವರು.

**ಪಿ.ಕೆ. ಟೈಲರ್, ಅತ್ತಾಜೆ ಪುಂಜಾಲಕಟ್ಟೆ (1955)**

ಪುಂಜಾಲಕಟ್ಟೆ ಅತ್ತಾಜೆಯ ಪಿ. ಕೆ. ಟೈಲರ್ (ಪಿ. ಕಾಂತಪ್ಪ ಮೂಲ್ಯ) ವೃತ್ತಿಯಲ್ಲಿ ಟೈಲರ್ ಆಗಿದ್ದು ತುಳು ನಾಟಕಕ್ಷೇತ್ರದ ವಿವಿಧ ಅಂಗದಲ್ಲಿ ಮೂರು ದಶಕಗಳ ಅನುಭವಿ. ಇವರು ನಾಟಕ ರಚನಾಕಾರ, ನಟ ಅಲ್ಲದೆ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ. 1976ರಲ್ಲಿ ಬರೆದ 'ಸತ್ಯ ಕಾತ್‌ಂಡ್' (ಸುಮಾರು 15 ಪ್ರದರ್ಶನ ಕಂಡಿತು) 'ದಿಕ್ಕ್ ತತ್ತಿನ ಪೊಣ್ಣು' (ರಚನೆ 1977 ಪ್ರಯೋಗ 22) 'ತಿರಸ್ಕಾರದ ಫಲ' (1979 – ಪ್ರಯೋಗ 25), ಮದಿಮೆದ ಸಾಲ (1985 30ಕ್ಕಿಂತ ಹೆಚ್ಚು ಪ್ರಯೋಗ), ಬೆಂಗ್ (1987–4 ಪ್ರಯೋಗ) ಪರಡೆ ಜೋಕೆ (1987) ಕಣ್ಣಿತ್ತಿ ಕುರುಡೆ (1990) ಮುಂತಾದ ಇವರ ನಾಟಕಗಳು ಪ್ರದರ್ಶನದಲ್ಲಿ ಜನಪ್ರಿಯವಾಗಿವೆ. ಎರಡು ಕನ್ನಡ ನಾಟಕಗಳನ್ನು ರಚಿಸಿರುವರು. ಹಲವು ರಂಗಕರ್ಮಿಗಳನ್ನು ಸಜ್ಜುಗೊಳಿಸಿದವರು.

ಇವರ ನಾಟಕಗಳು ಪುಂಜಾಲಕಟ್ಟೆ ಬಂಟ್ವಾಳ ಅಲ್ಲದೆ ಧರ್ಮಸ್ಥಳದ ವಸಂತಮಹಲ್, ಕಡಬ, ಬೈಲೂರು (ಕಾರ್ಕಳ) ಮುಂಡಾಜೆ, ಸೋಮಂದಡ್ಕ – ಮುಂತಾಗಿ ವಿವಿಧೆಡೆ ಪ್ರದರ್ಶನಗೊಂಡಿವೆ. ಸ್ಥಳೀಯವಾಗಿ ತನ್ನ ಬಳಗದೊಂದಿಗೆ ಪ್ರಯೋಗಿಸುವಾಗ ಪಿ.ಕೆ. ಟೈಲರರೇ ತನ್ನ ನಾಟಕಗಳ ದಿಗ್ದರ್ಶಕರು, ಹೊರಗಡೆ ಬೇರೆಯವರು ತಮ್ಮದೇ ನಿರ್ದೇಶಕರ ನಿರ್ದೇಶನದಲ್ಲಿ ಪ್ರಯೋಗಿಸಿದ್ದಾರೆ. 'ಸುಳ್ಳು' ನಾಟಕ ಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿ ಪ್ರಶಸ್ತಿ ಗಳಿಸಿದೆ ನಾಟಕಗಳೆಲ್ಲವೂ ಅಪ್ರಕಟಿತ.

### ಕೆ.ವಿ. ಭಟ್ ('ಶ್ರೀಭವ್ಯಾ')

ಕೆ.ವಿ. ಭಟ್ ಅವರ ಸಂಗ್ರಹ ಚಿತ್ರ

ಕೋಟೆಕಾರು ವೇದವ್ಯಾಸ ಭಟ್ ನಟ, ನಿರ್ದೇಶಕ, ನಾಟಕಕಾರರಾಗಿದ್ದ ಪತ್ರಕರ್ತರು. 'ಆರತಿ', 'ತೂ–ತುಡರ್', 'ಝಾನ್ಸಿದ ರಾಣಿ ಲಕ್ಷ್ಮೀಬಾಯಿ', 'ಅಂಗಲಾಪು' ಮುಂತಾದ ನಾಟಕಗಳನ್ನು ರಚಿಸಿದರು. ಆರ್.ಕೆ. ಉಳ್ಳಾಲ್ ಮುಂತಾದ ಮಿತ್ರರನ್ನು ಸೇರಿಸಿಕೊಂಡು ಜ್ಯೋತಿಮಿತ್ರ ಕಲಾವೃಂದ ಎಂಬ ನಾಟಕ ತಂಡವನ್ನು ಕಟ್ಟಿ ಹಲವಾರು ಕಡೆಗಳಲ್ಲಿ ನಾಟಕ ಪ್ರದರ್ಶನದಲ್ಲಿ ಹೆಸರು ಗಳಿಸಿದರು. ದಿ. ಕೆ.ಬಿ. ಭಂಡಾರಿಯವರ ಪ್ರಸಿದ್ಧ 'ಬಂಗಾರ್ ಬಾಲೆ'ಯ ರಂಗ ನಿರ್ದೇಶಕ, ಅಲ್ಲದೆ ರಂಗದ ಹಿನ್ನೆಲೆಯ ವರ್ಣಾಲಂಕಾರ, ವಸ್ತ್ರಾಲಂಕಾರ ರಂಗಾಲಂಕಾರಗಳಲ್ಲೂ ಸಿದ್ಧಹಸ್ತರಾಗಿದ್ದರು. ಇವರು ರಚಿಸಿದ ಹಲವಾರು ಸಾಮಾಜಿಕ ಪೌರಾಣಿಕ ನಾಟಕಗಳಲ್ಲಿ 'ಆರತಿ' ಹಲವಾರು ಕಡೆ ಪ್ರದರ್ಶನಗಳಲ್ಲಿ ಜನ ಮೆಚ್ಚುಗೆ ಗಳಿಸಿದೆ, 'ಆರತೀ ಅಂಗಲಾಪು' ಪ್ರಕಟವಾಗಿವೆ. ಭಟ್ರು ಕಥಾನಾಯಕ ಮತ್ತು ಹಾಸ್ಯ ಪಾತ್ರವನ್ನೂ ಮಾಡುತ್ತಿದ್ದರು. ರಾಘವ ಉಳ್ಳಾಲ್, ಕೆ.ವಿ.ಭಟ್ ರಂಗದಲ್ಲೂ, ನಿಜ ಜೀವನದಲ್ಲೂ ಜೋಡಿಯಾಗಿದ್ದವರು.

### ಕದ್ರಿ ನವನೀತ ಶೆಟ್ಟಿ



ಸುಮಾರು 25ಕ್ಕೂ ಮಿಕ್ಕ ನಾಟಕಗಳ ಕರ್ತೃ, ಯಕ್ಷಗಾನ ತಾಳಮದ್ದಲೆ, ಪ್ರಸಂಗ ರಚನಾ ಹಿನ್ನೆಲೆಯ ಕಲಾವಿದ ಕದ್ರಿ ನವನೀತ ಶೆಟ್ಟರು ತನ್ನ ನಾಟಕಗಳಿಗೆ ತುಳುಕೂಟದ ತುಳು ನಾಟಕ ಕೃತಿ ರಚನಾ ಸ್ಪರ್ಧೆಯಲ್ಲಿ ಏಳು ಬಾರಿ ರತ್ನವರ್ಮ ಹೆಗ್ಗಡೆ ಪ್ರಶಸ್ತಿ ಗಳಿಸಿದ್ದು, ಅವರ ನಾಟಕಗಳಲ್ಲಿ 'ಬೀರೆ ದೇವುಪೂಂಜೆ' (ಪ್ರ. 2001) ಮೈಮೆದ ಮಚ್ಚೇಂದ್ರೆ, ಕಟೀಲ್ದಪ್ಪೆ ಉಳ್ಳಾಲ್ದಿ, ಇವು ಬಹು ಪ್ರದರ್ಶಿತ ನಾಟಕಗಳು. 'ಅಂಕ ಬೂಳ್ಯ' (1998), 'ತುಂಬೆದ ಪುರ್ಪ (1999), 'ಮಹಿಮೆ' (2006), 'ಕುಕ್ಕೆದ ಸುಬ್ರಾಯೆ' (2016) ಮುಂತಾದವು ಚಾರಿತ್ರಿಕ, ಪೌರಾಣಿಕ ನಾಟಕಗಳು. 'ಕಟೀಲ್ದಪ್ಪೆ ಉಳ್ಳಾಲ್ತಿ', ಈ ನಾಟಕ ಕಿಶೋರ್ ಡಿ. ಶೆಟ್ಟರ ಶ್ರೀಲಲಿತೆ ಕಲಾ ತಂಡದಲ್ಲಿ 260ಕ್ಕೂ ಹೆಚ್ಚು ಪ್ರದರ್ಶನ ಕಂಡಿವೆ. ಕಾರ್ನಿಕದ ಶನೀಶ್ವರೆ, ಕಾರ್ನಿಕದ ಶಿವಮಂತ್ರ, ಯಕ್ಷಮಣಿ, ಮಾಯಿದ ಪುಣ್ಣಮೆ, ಮದನ ಮಂಜರಿ, ಬಿದೆ, ತುಂಬೆದ ಪುರ್ಪ, ಕುಡರಿ ರಾಮೆ, ಸಿರಿ ಲಲಿತೆ ಪರಮೇಶ್ವರಿ, ಕುದುರುದ ಸಿರಿ, ಬಲೀಂದ್ರೆ, ಕೊಂಬುಮಾಣಿ, ಬಿರ್ದ್‌ದ ಬೀರೆರ್, ಕೋಟಿಚೆನ್ನಯೆರ್, ಮುಂಡೇರ್ದಪ್ಪೆ ಉಳ್ಳಾಲ್ತಿ ಇವು ಇತರ ನಾಟಕಗಳು.

**ನಾಟಕಕಾರ, ನಟ ಗಂಗಾಧರ ಕಿದಿಯೂರು (1958)**



ಉಡುಪಿ ಕಿದಿಯೂರಿನ ಗಂಗಾಧರ ಕಿದಿಯೂರ್ ಎಂಬತ್ತರ ದಶಕದಿಂದಲೇ ನಾಟಕ ಅಭಿನಯ, ನಾಟಕ ರಚನೆಗೆ ತೊಡಗಿದರು. ಪ್ರಥಮ ನಾಟಕ 'ವಿಜಯಲಕ್ಷ್ಮಿ' 1987ರಲ್ಲಿ ಪ್ರಕಟವಾಗಿದೆ. ಬದ್‌ಕೊಂಜಿ ಸರಿಗಮ, ಇಲ್ಲ್ ಒಕ್ಕೆಲ್, ಪಂತದ ಪಣವು, ವಿಧಿ ತೋಜಾಯಿನ ನಿಧಿ, ಬಗ್ಗನ ಭಾಗ್ಯೋ, ಎಣ್ಣೆದಾಂತಿ ತುಡರ್, ದೇವೆರ್ ಮಲ್ಲೆ, ಕಡಲಪೂಜೆ, ಸುಳ್ಳು ಒರಿಯಂದ್, ತೆಲಿಕೆನಲಿಕೆದ ಬದ್‌ಕ್, ಪೊಣ್ಣೊಂಜಿ ಕಲ್ಪವೃಕ್ಷ, ನಾಗನ್ ನಂಬುಂಡಾ? ಇಲ್ಲ್ ಗೊಂಜಿ ಯೋಧೆ, ಪಿಂಗಾರದ ಬಾಲೆಸಿರಿ (ರತ್ನವರ್ಮ ಹೆಗ್ಗಡೆ ಪ್ರಶಸ್ತಿ ವಿಜೇತ) ಮುಂತಾಗಿ ಇಪ್ಪತ್ತರಷ್ಟು ತುಳು, ಕನ್ನಡ ನಾಟಕಗಳನ್ನು ರಚಿಸಿದ್ದಾರೆ. ಸಂಘಸಂಸ್ಥೆಗಳು ತನ್ನ ನಾಟಕ ಪ್ರದರ್ಶಿಸುವಾಗ ಕೆಲವೆಡೆ ತಾನೇ ಹೋಗಿ ನಿರ್ದೇಶನ ಮಾಡಿದ್ದಾರೆ. 'ಮಧುಶ್ರೀ ಪ್ರಕಾಶನ' ಎನ್ನುವ ಸ್ವಂತ ಪ್ರಕಾಶನ ಸಂಸ್ಥೆ ಮೂಲಕ ಕೆಲವು ನಾಟಕಗಳನ್ನು ಪ್ರಕಟಿಸಿರುವುದಲ್ಲದೆ 2015ರಲ್ಲಿ ಸಂಸ್ಥೆಯ ಬೆಳ್ಳಿಹಬ್ಬ ಸಂದರ್ಭದಲ್ಲಿ ಜಯಂತಿ ಎಸ್. ಏರ್ಮಾಳ್ ಮುಂತಾದ ಹೊಸ ನಾಟಕಕಾರರ ಕೃತಿಗಳನ್ನೂ ಪ್ರಕಟಿಸಿ ಪ್ರೋತ್ಸಾಹಿಸಿದ್ದಾರೆ. ಉಡುಪಿ ತುಳುಕೂಟದ ಕಾರ್ಯದರ್ಶಿಯೂ ಆಗಿರುವರು.

**ದಿ। ಗಣೇಶ್ ರೈ**

ಜನಪ್ರಿಯ ಹಾಸ್ಯನಟರಾಗಿದ್ದ ಇವರು ಮೊದಲು ಪಾತ್ರ ವಹಿಸಿದ್ದು 'ವಿಷಘಳಿಗೆ' ಎಂಬ ತುಳು ನಾಟಕದಲ್ಲಿ. ಪ್ರಸಿದ್ಧವಾದ 'ಮದಯೇರಿ ಮಲ್ಲಾದಿಗೆ' ನಾಟಕದ ಕರ್ತೃ ಮಂಗಳೂರು ಪದವಿನಂಗಡಿಯ ಗಣೇಶ್ ರೈಯವರು 'ಗಟ್ಟಿದ ಪೊದು', 'ಆಯೆಲಾ ಎಂಕೊಂಜಿ ಅರುವೆತ್ತನಾ?' 'ಸೋಣದ ಮದಿಮಲ್', 'ದಳಾಲಿ ವಾಸು', 'ಅಪ್ಪೆನ ಶಾಪ', 'ರಡ್ಡಿಲ್ಲ್ ಕುಬಲೊಂಜಿ', 'ಕುಸುಮಾ', 'ಈರೆನ್ನ ಕೈಬುಡಡೆ', 'ತಾಂಕಣೆದ ಮಗಳ್', 'ಸಂಸಾರದ ಸಾದಿ' – ಇಂತಹ ಸುಮಾರು 12ಕ್ಕೂ ಮಿಕ್ಕ ನಾಟಕಗಳನ್ನು ಬರೆದು ಪ್ರದರ್ಶನ ನೀಡಿದವರು. 'ಮದಯೇರಿ ಮಲ್ಲಾದಿಗೆ' ಕೃತಿ ಶ್ರೀ ಗಣೇಶ ಪ್ರಕಾಶನದ ಹೆಸರಲ್ಲಿ ಪ್ರಕಟವಾಗಿದೆ.



### ಕೆ. ಅನಂತರಾಮ ಬಂಗಾಡಿ

ಹಿರಿಯ ಯಕ್ಷಗಾನ ಪ್ರಸಂಗಕರ್ತ ಅನಂತರಾಮ ಬಂಗಾಡಿಯವರು ಹಲವು ತುಳು ನಾಟಕಗಳನ್ನು ಬರೆದವರು. 1. ಸಿರಿಗಂಗೆ (ಪ್ರಕಟಿತ) 2. ಡ್ರೈವರ್ ದಾಮು.

3. ಮಣ್ಣ್‌ದ ಮಗಳ್ 4. ಕೊಲ್ಲಿದುರ್ಗೆ, 5. ದೇವು ಪೂಂಜೆ (ಪ್ರಕಟಿತ), 6. ಊರುದ ಮಾರಿ, 7. ಸಗ್ಮಾಲ್ ಸಂದಗೆ, 8. ಮದಿರ ಮುಖಿ (ಕನ್ನಡ) ಇವುಗಳ ಪ್ರಯೋಗ, ಪ್ರದರ್ಶನಗಳಾಗಿವೆ.

### ನಟ, ನಾಟಕಕಾರ ಕೆ.ಕೆ. ಗಟ್ಟಿ



ಕುತ್ಯಾಳ ಕಮಲಾಕ್ಷ ಗಟ್ಟಿ (ಕೆ.ಕೆ. ಗಟ್ಟಿ)ಯವರು ಕುಂಬ್ಳೆಯ ಶಾಲಾ ಶಿಕ್ಷಣದ ವೇಳೆ ಗುರುಗಳಾದ ಮಹಾಬಲ ರೈ ಮತ್ತು ಸುಬ್ಬಣ್ಣ ಆಳ್ವರಿಂದ ನಾಟಕದ ಪಾಠಗಳನ್ನು ಅರಿತು, ಉಪ್ಪಳ ಕೃಷ್ಣಮಾಸ್ಟರ್, ಚೆಂಡೆ ವಿದ್ವಾನ್ ದೇರಣ್ಣ ರೈ ಇವರಿಂದ ಯಕ್ಷಗಾನ ತರಬೇತಿ ಯನ್ನು ಕುಂಬ್ಳೆ ಗಿರಿಜಾ ಟೀಚರ್‌ರಿಂದ ಭರತನಾಟ್ಯ ಕಲಿಕೆ ಹೀಗೆ ಬಹುಮುಖ ಪ್ರತಿಭಾಸಂಪನ್ನರು. 1974ರಲ್ಲಿ ಪೋಲಿಸ್ ಇಲಾಖೆಯಲ್ಲಿ ಮಂಗಳೂರಿನಲ್ಲಿ ಉದ್ಯೋಗಕ್ಕೆ ಸೇರಿ, ಸಂತ ಅಲೋಶಿಯಸ್ ಸಂಧ್ಯಾಕಾಲೇಜಿನಲ್ಲಿ ಶಿಕ್ಷಣ ಮುಂದುವರಿಸಿದರು.

1975ರಲ್ಲಿ 'ತರುಣ ಕಲಾವೃಂದ'ದಲ್ಲಿ ಜೀವರತ್ನ ಚನಿಲೊ, ಜೆ. ರವೀಂದ್ರ ಇಂಥವರ ದಿಗ್ದರ್ಶನದ ಹಲವು ನಾಟಕಗಳಲ್ಲಿ ಪಾತ್ರ ಮಾಡಿದರು. 1977ರಲ್ಲಿ 'ಪೋಲಿಸ್ ಲೇನ್ ಮಕ್ಕಳ ವೃಂದ' ಸೃಜಿಸಿ ಮಕ್ಕಳಿಂದ ಕಿರುನಾಟಕಗಳನ್ನು ಆಡಿಸಿದರು. 'ಮಣ್ಣ್‌ಗ್ ಮಲ್ತಿ ಅನ್ಯಾಯ' ಎನ್ನುವ ಐತಿಹಾಸಿಕ ನಾಟಕ ಬರೆದು 1979ರಲ್ಲಿ 'ಶ್ರೀ ಸೋಮನಾಥ ಕಲಾಭೂಮಿ' ಎನ್ನುವ ಸಂಸ್ಥೆಯನ್ನು ಕಟ್ಟಿ, ಅದರ ಮೂಲಕ ತನ್ನ ಈ ನಾಟಕವನ್ನು ಹಲವಾರು ಕಡೆ ಯಶಸ್ವಿಯಾಗಿ ಪ್ರಯೋಗಿಸಿದರು.

ಸುಮಾರು 37 ಕನ್ನಡ, ತುಳು ನಾಟಕಗಳನ್ನು ರಚಿಸಿದ ಕೆ.ಕೆ. ಗಟ್ಟಿಯವರ ಎರಡು ನಾಟಕಗಳಿಗೆ ತುಳುಕೂಟದ ರತ್ನವರ್ಮ ಹೆಗ್ಗಡೆ ಪ್ರಶಸ್ತಿ ದೊರಕಿದೆ. 'ಭೈರವನ ಮಹಿಮೆ' ನಾಟಕಕ್ಕೆ ತುಳು ಅಕಾಡೆಮಿಯ ಬಹುಮಾನ ಲಭಿಸಿದೆ. ಕಳೆದ ಸುಮಾರು 37 ವರ್ಷಗಳಿಂದ ಶರವು ದೇವಸ್ಥಾನದಲ್ಲಿ ಅನೇಕ ಪೌರಾಣಿಕ, ಐತಿಹಾಸಿಕ ಜಾನಪದ ನಾಟಕಗಳ ಪ್ರದರ್ಶನ ನೀಡಿದ್ದಾರೆ.

## ನೀಲಯ್ಯ ಯಂ. ಅಗರಿ



12 ನಾಟಕಗಳನ್ನು ಬರೆದು ಪ್ರದರ್ಶಿಸಿ, ನಟಿಸಿರುವ ಅಗರಿಯವರದು ಹೆಚ್ಚಾಗಿ ಕುಪ್ಪೆಪದವಿನಲ್ಲಿ ನಡೆದ ನಾಟಕ ಚಟುವಟಿಕೆ. ಸಾಂಸಾರಿಕ, ಸಾಮಾಜಿಕ ನಾಟಕಗಳಾದ 'ಸಂಧ್ಯಾ', 'ಕೊಲೆನಾ ಆತ್ಮಹತ್ಯೆನಾ', 'ಮಧು-ಚಂದ್ರ', ಶಶಿಕಿರಣ್, 'ಅನ್ಯಾಯದ ಬದ್‌ಕ್', 'ಪತ್ತ್‌ಬಾಲೆಲೆ ಅಪ್ಪೆ', 'ಕಡಲ್ ಸೇರಂದಿ ಸುದೆ', 'ರಾತ್ರೆಪಗೆಲ್', 'ಧೂಮಕೇತು', 'ನಾಗಬೀದಿ', 'ಬಂಗಾರ್ ಬಾಲೆ ಬೊಳ್ಳಿದ ತೊಟ್ಟಿಲ್' ಮುಂತಾದವು. ಸ್ತ್ರೀ ಶೋಷಣೆ, ಜಾತಿ-ವರ್ಗ ತಾರತಮ್ಯದ ಶೋಷಣೆಗಳು ಸಮಾಜದ ಗೋಮುಖ ವ್ಯಾಘ್ರಗಳ ಕುರಿತಾದ ಕಥಾವಸ್ತುವುಳ್ಳ ಕೃತಿಗಳು. 'ಬಂಗಾರ್ ಬೂಡುದ ಬಿಂಗಿರಿ ರಾಜೆ' ಇನ್ನೊಂದು ಜಾನಪದ ಆಧಾರಿತ ನಾಟಕ.

'ಪೊಣ್ಣೇ ಆಣನ ಬದ್ಕ್' ಮುಂತಾದ ನಾಟಕ ಬರೆದ ಭಾಸ್ಕರ ಕುಲಾಲ್ ಬರ್ಕೆ, ತುಳು ನಾಟಕರಂಗದ ಬೇರೆ ಬೇರೆ ವಿಭಾಗಗಳಲ್ಲಿ ದುಡಿದ ಇನ್ನೋರ್ವರು.

## ವಿಶ್ವನಾಥ ಭಂಡಾರಿ, ಮೂಡಬಿದ್ರೆ (1963) – ತುಳುವೆರೆ ಬಳಗ



ಮೂಡುಬಿದಿರೆ ಪ್ರಾಂತ್ಯ ಗ್ರಾಮ ಲಾಡಿ ಎಂಬಲ್ಲಿ ಜನಿಸಿದ ವಿಶ್ವನಾಥ ಭಂಡಾರಿಯವರು ತನ್ನ 19ರ ಹರೆಯದಲ್ಲೇ ಬರೆದ ಮೊದಲ ತುಳುನಾಟಕ 'ಪವಿತ್ರ ಜನ್ಮ' ಪ್ರಯೋಗದಲದಲಿ ಈ ನಾಟಕ ಒಳ್ಳೆಯ ಹೆಸರನ್ನು ತಂದಿತ್ತಿತು. ಮುಂದೆ ಸುಮಂಗಲ, ಮಲ್ಲಾದಿಗೆದ ಮರ್ಲ್, 'ಬೈರನ ಬಲಿ', 'ವಂದನ', 'ಕಲ್ವ ನೋಟುದ ಗೊಬ್ಬು', 'ಶಾಪದ ಫಲ', 'ಮಾಜಂದಿ ಪಾಪ', 'ಅಪ್ಪೆನ ಶಾಪ', 'ಭಾಗ್ಯದ ಸಿರಿ', ಪ್ರೇಮದ ಸುಳಿ', 'ಮಸಣದ ಮಣ್ಣ್', 'ಪುಂಚ', 'ತಗೆ ತಂಗಡಿ', 'ಪಜ್ಜೆ ಕುರಲ್', 'ಪೂ ಪಿಂಗಾರ', 'ಬದ್ಕೊದು ಬದ್ಕರೆ ಕಲ್ಪೊಡು', 'ಮುಳ್ಳುದ ಕೇದಯಿ', 'ಒಲು... ಒಲ್ಪ... ಎಂಚ?', 'ಇನಿಯಾ-ಎಲ್ಲೆನಾ?', 'ಈ ತೆಲ್ಕೆದಾಯೆ...?, 'ಸಮಾಜನಾ, ಸಂಸಾರನಾ?', 'ನನ ಎಂಚನಾ...?' 'ಪೋನಗ ಕೊನೊಪನಾ?', 'ಒರಿಯುನೇರ್?' ಮುಂತಾಗಿ ಸುಮಾರು 29ರಷ್ಟು ಅಚ್ಚರಿ ಸಂಖ್ಯೆಯ ನಾಟಕಗಳನ್ನು ಬರೆದು ಪ್ರದರ್ಶನ ನೀಡಿರುವರು. 'ಆ ಪೊಣ್ಣೇರ್?' ಇದು ಇವರ ಜನಪ್ರಿಯ ನಾಟಕಗಳಲ್ಲೊಂದು.

1988ನೆಯ ಇಸವಿಯಲ್ಲಿ ಗೆಳೆಯರನ್ನು ಕೂಡಿಕೊಂಡು 'ತುಳುವೆರೆ ಬಳಗ' ಎನ್ನುವ ಸಂಘಟನೆಯನ್ನು ಹುಟ್ಟುಹಾಕಿದರು. ಇದರ ಮೂಲಕ ಭಾಷೆ, ಸಂಸ್ಕೃತಿಯ ಕಾರ್ಯಗಳ ಜೊತೆಗೆ ನಾಟಕಗಳ ಸುಮಾರು 100ರಷ್ಟು ಪ್ರದರ್ಶನಗಳನ್ನು ಅವಿಭಜಿತ

ದ.ಕ. ಜಿಲ್ಲೆಯಲ್ಲಿ ನಡೆಸಿರುವ ವಿಶ್ವನಾಥ ಭಂಡಾರಿಯವರು ಬೆಳುವಾಯಿ ಕೆಸರುಗದ್ದೆ ಎಂಬಲ್ಲಿ ಕುಲಕಸುಬು ವೃತ್ತಿನಿರತರು.

**ಪಾ.ಕೃ. ಆನಂದ**

1983ರಲ್ಲೇ 'ಬದಿತ್ತ ಭದಿ' ನಾಟಕ ರಚಿಸಿದ ಪುತ್ತೂರಿನ ಪಾ.ಕೃ. ಆನಂದರು ಹಲವು ತುಳುನಾಟಕ ರಚಿಸಿದವರು. ಎಲ್ಲವೂ ರಂಗಪ್ರದರ್ಶನಕ್ಕಾಗಿ 1986ರಲ್ಲಿ 'ಬ್ರಹ್ಮರ್ಕಟ್ಟ್' ಎನ್ನುವ ಸಂಕೀರ್ಣ ಜಾನಪದ ನಾಟಕದ ಕರ್ತೃ. ದೈವೊ ನಿರ್ಣಯೊ, ಬದಿತ್ತ ಭದಿ, ಗೂಡು ಸೇರಿನ ಪಕ್ಕಿ, ಒಂಜಿ ತಾಳಿ ರಡ್ಡ್ ಸಾದಿ, ಬ್ರಹ್ಮರ್ಕಟ್ಟ್, ಕಲ್ಯಾಣಿರಾಮೆ ಮುಂತಾದ 6 ನಾಟಕಗಳನ್ನು ಬರೆದವರು. ನಾಲ್ಕು ನಾಟಕಗಳು ಮುದ್ರಣಗೊಂಡಿವೆ.

'ದೈವ ನಿರ್ಣಯೊ'ದಲ್ಲಿ 11 ದೃಶ್ಯಗಳಿವೆ. ದೇವೆರೆ ನಡೆಟ್ ತಿಕ್ಕಂದಿ ಸಾಂತ್ವನೊ ದೈವನಡೆಟ್ ಅಪ್ಪೆ ಪೊಂಜೊವುಗು ತಿಕ್ಕೊಂಡೋಂದ್ ನಿಕ್ಲ್ ತೂದ್ ಪಣ್ಣೆ...' ಇದು ಕೃತಿಯ ಬೆನ್ನುಡಿಯಲ್ಲಿ ನಾಟಕಕರ್ತರ ಕರೆ.

**ಯಂ. ತಿಮ್ಮಪ್ಪ ಪುತ್ತೂರು** ಇನ್ನೋರ್ವ ಗಮನಾರ್ಹ ನಾಟಕಕಾರರು. ಸುಮಾರು 27 ನಾಟಕಗಳ ಕರ್ತೃ. 'ಧ್ರುವ ನಕ್ಷತ್ರ' ಸಾಮಾಜಿಕ ನಾಟಕ 100 ಪ್ರದರ್ಶನ ಕಂಡಿದೆ. 1994ರಲ್ಲಿ ಪ್ರಜ್ವಲ ಪ್ರಕಾಶನ, ಬೆಳ್ತಂಗಡಿ ಇವರಿಂದ ಪ್ರಕಟಗೊಂಡಿದೆ. 'ಗಗನ ಕುಸುಮ – 1997ರಲ್ಲಿ ಪ್ರಕಟಗೊಂಡಿದೆ.

**ಪಿ. ಅಶೋಕ್ ಕುಮಾರ್ ಬಿಕರ್ನಕಟ್ಟೆ** ಇವರ 1983ರಲ್ಲಿ ಕಂಡೆಟ್ಟು ಮೈದಾನದಲ್ಲಿ ಪ್ರದರ್ಶಿತ 'ಬದ್‌ಕ್‌ದ ಎತೆಕತೆ' – 1994ರಲ್ಲಿ ಪ್ರಕಟಗೊಂಡಿದೆ. ಮಾಮಿಗಾವಂದಿ ಮರ್ಮಲ್, ಮುಗಲ್ ಸೆಲಿಯಿಂಡ್, ಮಸಣದ ಇಲ್ಲ್, ಉಂದು ಸಮಾಜನಾ, ನಿಲೆದಾಂತಿ ಬದ್‌ಕ್, ಸುಳಿಕ್ ತಿಕ್ಕಿನ ಬದ್ಕ್ ಮುಂತಾದವು ಅಶೋಕ್ ಕುಮಾರರ ಪ್ರದರ್ಶಿತ ನಾಟಕಗಳು. 'ಬದಿತ ಮದ್ಮೆ' ಮಂಗಳೂರು ಆಕಾಶವಾಣಿಯಿಂದ ಪ್ರಸಾರಗೊಂಡ ನಾಟಕ.

**ಹೆಚ್.ಕೆ. ನಯನಾಡು**



'ಬೆಂಗ್', 'ಈರ್ ನನಲಾ ಉಲ್ಲರಾ?' ಮರ್ಲನ ತಿರ್ಲ್, ಮುಂತಾದ ನಾಟಕಗಳ ಕರ್ತೃ, ಬಂಟ್ವಾಳದ ಹೆಚ್.ಕೆ. ನಯನಾಡು 'ಮುಕ್ಕಾಲ್ ಮೂಜಿ ಗಳಿಗೆ' ನಾಟಕ ಹಸ್ತಪ್ರತಿಗೆ ತುಳುಕೂಟದ ರತ್ನವರ್ಮ ಹೆಗಡೆ ತುಳುನಾಟಕ ಸ್ಪರ್ಧೆಯಲ್ಲಿ ಬಹುಮಾನಿತರು. ನೂರಕ್ಕೂ ಹೆಚ್ಚು ಬಾರಿ ಪ್ರದರ್ಶಿತವಾದ 'ಕಂಬಳ' ನಾಟಕಕ್ಕೆ ಜಿಲ್ಲೆ ಮತ್ತು ತಾಲೂಕು ಮಟ್ಟದ ಸ್ಪರ್ಧೆಗಳಲ್ಲಿ ಪ್ರಶಸ್ತಿ, 'ಪೊಣ್ಣು ತೂತರಾ?' 'ಉಳ್ಳಾಲದ ರಾಣಿ ಅಬ್ಬಕ್ಕ', 'ಸಿಂಗಲ್ ನಂಬರ್', 'ದಾಲ ಬಲ್ಲಿ' – ಮುಂತಾದ ಸುಮಾರು 24 ಧ್ವನಿಸುರುಳಿಗಳಿಗೆ

ಸಾಹಿತ್ಯ ರಚನೆ, ಆಕಾಶವಾಣಿಯ ತುಳುನಾಟಕ ಅಂಗೀಕೃತ ಕಲಾವಿದರಾಗಿ ಹಲವು ರೇಡಿಯೋ ನಾಟಕಗಳಲ್ಲಿ ಪಾತ್ರ ವಹಿಸಿದ್ದಾರೆ. ಸಭೆ ಸಮಾರಂಭಗಳಲ್ಲಿ ಅಸ್ಖಲಿತ ತುಳು ನಿರೂಪಕ ಹೆಚ್.ಕೆ. ನಯನಾಡು ಬಿ.ಆರ್. ಕುಲಾಲರ ನಾಟಕಗಳ ಮೂಲಕ ರಂಗಪ್ರವೇಶ ಮಾಡಿ, ವಿಜಯಕುಮಾರ್ ಕೊಡಿಯಾಲ್‌ಬೈಲ್‌ರ ಕಲಾಸಂಗಮ ತಂಡದಲ್ಲಿ 15 ವರ್ಷ ನಟರಾಗಿ ಪ್ರಸ್ತುತ 'ಲಕುಮಿ' ತಂಡದ ಕಲಾವಿದರಾಗಿ ರಂಗಭೂಮಿಯನ್ನೇ ವೃತ್ತಿಯನ್ನಾಗಿಸಿಕೊಂಡಿದ್ದಾರೆ.

**ಸುಧೀರ್‌ರಾಜ್ ಉರ್ವಾ**

ಸುಧೀರ್‌ರಾಜ್ ಉರ್ವಾ ಅವರ 'ಪುರ್ಸೋತ್ತಿಜ್ಜಿ', 'ಮದಿಮಾಯತ್ತ್ ಮದಿಮಾಲ್', 'ನಂಕ್‌ದಾಯೆ' – ಇವೆಲ್ಲ ಹಲವು ಪ್ರದರ್ಶನ ಕಂಡವುಗಳೇ. ಉಮೇಶ್ ಅಳಕೆ ಅವರ 'ಇಲ್ಲ್ ಬುಡಡೆ' ಎನ್ನುವುದು 50 ಪ್ರದರ್ಶನ ಕಂಡ ನಾಟಕ. ಗಿರೀಶ್ ಪಿಲಾರ್, ಹರೀಶ್ ರಾಜ್ ಅತ್ತಾವರ ಕೂಡಾ ಕೆಲವು ನಾಟಕ ರಚಿಸಿದವರು.

**ಮಾಧವ ಜೆಪ್ಪುಪಟ್ನ (1954)**



9 ನಾಟಕ ರಚಿಸಿದ ಮಾಧವ ಜೆಪ್ಪುಪಟ್ನ 1990ರ ಪೆದ್ದಗುಂಡ, ಸಜ್ಜಿಗೆ ಬಜಿಲ್, ಬಂಗಾರ್ ಕಂಪೆನಿ, ಅಂಡೆ ಪಿರ್ಕಿಲು, ಈ ಬಲ್ಲ್‌ಡ್ ಸೈಕ, ಪೊರ್ಲುಗು ಮರ್ಲ್, ನಕಲಿ ಗಂಗಣ್ಣೆ – ಮತ್ತಿತರ ನಾಟಕಗಳ ಲೇಖಕ ಮಾತ್ರ ವಲ್ಲದೆ ನಟ, ನಿರ್ದೇಶಕ, ಗೀತರಚನಾಕಾರರೂ ಕೂಡಾ.

ಹೆಸರಾಂತ ಹಾಸ್ಯನಟ, ನಿರ್ದೇಶಕ ಮಾಧವ ಜೆಪ್ಪುಪಟ್ನ ಇವರು ತನ್ನ ಹನ್ನೆರಡರ ಬಾಲ್ಯದಲ್ಲೇ ತುಳು ನಾಟಕ ಅಭಿನಯಕ್ಕೆ ಬಹುಮಾನ ಗಳಿಸಿ ರಂಗದಲ್ಲಿ ತಳವೂರಿ ಬಹುಬೇಗ ಹಾಸ್ಯನಟರಾಗಿ ಹೆಸರಾದರು. ಮುಂದೆ ನಿರ್ದೇಶನವನ್ನು ಆರಂಭಿಸಿದರು. 'ಪೆದ್ದಗುಂಡೆ', ಈ ಬಲ್ಲ್ ಯಾವಾ, ಪೂರಾ ಘೋಂಗಿಲು, ಪೊರ್ಲುಗು ಮರ್ಲಾಂಡ, ಸಜ್ಜಿಗೆ ಬಜಿಲ್, ಅಂಡೆ ಪಿರ್ಕಿಲು, ಬಂಗಾರ್ ಕಂಡನೆ ಮುಂತಾದ ಎಂಟು ನಾಟಕಗಳನ್ನು ಬರೆದು ನಿರ್ದೇಶಿಸಿ ಪ್ರದರ್ಶಿಸಿದರು. 'ಈ ಬಲ್ಲ್ ಯಾವಾ?' ನಾಟಕ 324 ಪ್ರದರ್ಶನ ಕಂಡಿತು.

ಗಂಗಾರಾಮ್, ಕಾಲೊಗು ತಕ್ಕ ಕೋಲ, ಬಲೇ ಚಾಪರ್ಕ, ಗಂಟೇತಾಂಡ್, ನಿರೆಲ್, ಬಯ್ಯಮಲ್ಲಿಗೆ, ಕೋಟಿಚೆನ್ನಯ, ಎಚ್ಚಮನಾಯಕ, ಪಂಥ ಮುಂತಾಗಿ ಸಾಮಾಜಿಕ, ಚಾರಿತ್ರಿಕ ನಾಟಕಗಳಲ್ಲಿ ವಿಶಿಷ್ಟ ಅಭಿನಯ ನೀಡಿದ್ದಾರೆ. 35 ವರ್ಷಗಳ ಕಾಲ ತನ್ನ ನಿರ್ದೇಶನದ ಸಮಯ ಅನೇಕ ಹೊಸ ಕಲಾವಿದರನ್ನು ರಂಗಕ್ಕೆ ಪರಿಚಯಿಸಿದ್ದಾರೆ. ಕರಾವಳಿ ಅಲ್ಲದೆ ಮುಂಬಯಿ, ಮೈಸೂರು, ಬೆಂಗಳೂರು ಮುಂತಾಗಿ ಸುಮಾರು

**ಮುಖ್ಯಮಂತ್ರಿ ಚಂದ್ರು ಅವರು ಗೌರವನಟರಾಗಿ ಭಾಗವಹಿಸಿದ್ದ ರತ್ನಾಕರ ರಾವ್ ಕಾವೂರರ 'ಮಿನಿಸ್ಟರ್ ಮುಂಡಪ್ಪಣ್ಣೆ' ನಾಟಕ ಮಂಗಳೂರು ಪುರಭವನದಲ್ಲಿ ಪ್ರದರ್ಶನಗೊಂಡಾಗ. ಪಾತ್ರ ವಹಿಸಿದ ಮಾಧವ ಜಪ್ಪುಪಟ್ಣ (ಚಂದ್ರು ಪಕ್ಕ), ಚಂದ್ರಿಕಾ ಮುಂತಾದವರು (2000).**

2500ಕ್ಕೂ ಮಿಕ್ಕ ರಂಗನಾಟಕಗಳಲ್ಲಿ ಅಭಿನಯಿಸಿ ತನ್ನ ವಿಭಿನ್ನ ಹಾಸ್ಯಪಾತ್ರಗಳಿಗಾಗಿ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದಿದ್ದಾರೆ. ಮಹಾಕಾಳಿ ಪಡ್ಪುವಿನ ಪ್ಲೈವುಡ್ ಕಂಪೆನಿಯಲ್ಲಿ ಮೇಲ್ವಿಚಾರಕ ಹುದ್ದೆಯಿಂದ ನಿವೃತ್ತರಾದ ಮೇಲೆ ಕುದ್ರೋಳಿ ಶ್ರೀ ಭಗವತಿ ಕ್ಷೇತ್ರದಲ್ಲಿ ಮೊಕ್ತೇಸರರಾಗಿದ್ದು ಕಲಾಸೇವೆಯಲ್ಲಿ ಮುಂದುವರಿದಿದ್ದಾರೆ.

### ಯುವ ನಾಟಕಕಾರ ಅರುಣ್‌ಚಂದ್ರ ಬಿ.ಸಿ.ರೋಡ್



ಕಳೆದೊಂದು ದಶಕದಿಂದ ಬಂಟ್ವಾಳ ಪ್ರದೇಶದ ಪರಂಪರೆಯನ್ನು ರಮಾ ಬಿ.ಸಿ.ರೋಡ್ ಅವರ ಪುತ್ರ ಅರುಣ್‌ಚಂದ್ರ ಬಿ.ಸಿ. ರೋಡ್ ಎನ್ನುವ ಯುವ ತಲೆಮಾರಿನ ನಾಟಕಕಾರ ಮುಂದುವರಿಸುತ್ತಿದ್ದಾರೆ. ತಂದೆಗೆ ತಕ್ಕ ಮಗನೆಂಬಂತೆ ತುಳುನಾಟಕಗಳ ಯಶಸ್ವೀ ಸುರಿಮಳೆಗೆರೆದಿದ್ದಾರೆ. 'ನಿಕುಲ್ ಎನ್ನ್‌ದಿತ್ತರಾ'? 'ಡ್ಯಾಡಿ', 'ನನ ಒಂತೆದಿನ ಎನ್ನ ಪುಣ್ಯ', 'ರಮಣಿ ಬರ್ಪಲ್', 'ಅಣ್ಣು', 'ಸಾವಿತ್ರಿಗ್ ಮದ್ಮೆಗೆ', 'ಆಯಿಲೆಕಾಮುಂಡು', 'ಪನ್ಪುನಕುಲು ಪನ್ಪೆರ್', 'ಪೊಸ ಬದ್‌ಕ್' ಮುಂತಾದ ಸುಮಾರು ಇಪ್ಪತ್ತಕ್ಕೂ ಮಿಕ್ಕ ನಾಟಕಗಳನ್ನು ಬರೆದ ಪ್ರಚಂಡ ಪ್ರತಿಭೆ ಅರುಣ್‌ಚಂದ್ರ. ಎಲ್ಲಾ ನಾಟಕಗಳನ್ನು ದಿಗ್ದರ್ಶಿಸಿದವರು ರಮಾ ಬಿ.ಸಿ.ರೋಡ್.

**ದಿನಕರ ಭಂಡಾರಿ ಕಣಂಜಾರು**

ಉಡುಪಿ ಕಟ್ಟಿಂಗೇರಿ ಎಡ್ಮೇರು ನಾಲ್ಕು ಬೀದಿ ಎಂಬಲ್ಲಿ ವೃತ್ತಿ ನಿರತರಾಗಿರುವ ನಟ, ನಾಟಕಕಾರ, ತರುಣ ದಿನಕರ ಭಂಡಾರಿ, ಕಣಂಜಾರ್ – ಸುಮಾರು ಎರಡು ದಶಕಗಳ ಹಿಂದೆ 'ನಿಸರ್ಗ ಯುವಕ ಮಂಡಲ ಎಡ್ಮೇರು' ಈ ಬಳಗಕ್ಕಾಗಿ ನಾಟಕ ಬರೆಯತೊಡಗಿ 'ಪಿರಬನ್ನಗ' ನಾಟಕವನ್ನು ರಚಿಸಿ ರಂಗಪ್ರದರ್ಶನದಲ್ಲಿ ಗ್ರಾಮಾಂತರ ರಂಗಮಂಚದಲ್ಲಿ ಜನಮೆಚ್ಚುಗೆ ಪಡೆಯುವ ಮೂಲಕ ಸ್ಫೂರ್ತಿ ಪಡೆದು ನಿರಂತರ ನಾಟಕ ರಚನೆಯಲ್ಲಿ ನಿರತರಾದರು. 'ಪಿರಬನ್ನಗ' (2000 ಇಸವಿ), 'ತೆರಿಯಂದೆ ಪೋಂಡು', ನೆಟ್‌ವರ್ಕ್ ತಿಕ್ಕುಜಿ', 'ಅಂಚಿ ಇಂಚಿ ತೂವಡೆ', 'ಗುಂಪುಡೊರಿ ಗೋವಿಂದೆ' ('ಹಿಟ್' ನಾಟಕವಾಗಿ ಸುಮಾರು 300 ಪ್ರಯೋಗ), 'ತೂವರೆ ಬರ್ಪೆರ್', 'ಉಂದು ಎಂಚಿನ', 'ಪಿರ ತಿರ್ಗ್‌ದ್ ತೂವೊಡ್ಚಿ', 'ಪನಂದೆ ಪದ್ರಾಡ್', 'ದಾಮುನ ದೊಂಬರಾಟ', 'ಒಯಿಕ್ಲಾ ಕಾಸ್ ಬೋಡು', 'ದಾಯೆಗಿಂಚ ಮಲ್ತ' – ಮುಂತಾಗಿ ಇವರ ಹತ್ತಾರು ನಾಟಕಕೃತಿಗಳು ಊರು, ಪರವೂರಿನ ಹಲವು ನಾಟಕ ತಂಡಗಳ ಮೂಲಕ ನೂರಾರು ಪ್ರದರ್ಶನದಲ್ಲಿ ಜನಪ್ರಿಯತೆ ಗಳಿಸಿವೆ.

ವಿವಿಧ ತಂಡಗಳಿಗೆ ದಿನಕರ ಭಂಡಾರಿ ತನ್ನ ನಾಟಕಗಳನ್ನು ನಿರ್ದೇಶನ ಮಾಡಿದ್ದಾರೆ. 500ಕ್ಕೂ ಹೆಚ್ಚು ಪ್ರದರ್ಶನಗಳಲ್ಲಿ ನಟರಾಗಿ ಮಿಂಚಿದ್ದಾರೆ. 300ಕ್ಕೂ ಹೆಚ್ಚು ಪ್ರಯೋಗಗಳನ್ನು ದಿಗ್ದರ್ಶಿಸಿದ್ದಾರೆ. ಮುಂಬಯಿ, ಪುಣೆ, ದುಬಾಯಿ, ಶಾರ್ಜಾ, ಉಡುಪಿ, ದ.ಕ. ಜಿಲ್ಲೆಗಳಲ್ಲಿ ಇವರ ನಾಟಕಗಳು ಪ್ರದರ್ಶಿತವಾಗಿವೆ. ನೆಟ್‌ವರ್ಕ್ ತಿಕ್ಕುಜಿ, ಮಂಡೆಬೆಚ್ಚ – ನಾಟಕಗಳೂ ಮುನ್ನೂರಕ್ಕೂ ಮಿಕ್ಕ ಪ್ರದರ್ಶನ ಕಂಡಿವೆ. ಈ ಲೇಖನದ ವೇಳೆ ಸಿದ್ಧಗೊಳ್ಳುತ್ತಿರುವ (ರಂಗ ಯಶಸ್ಸಿಗೆ ಹಲವು ಬಿರುದುಗಳನ್ನು ಪಡೆದಿರುವ) ದಿನಕರ ಭಂಡಾರಿಯವರ ನೂತನ ನಾಟಕ 'ಅಮ್ಮೆರ್ ನೆರ್ಪೆರ್'.

* * *

ಕಳೆದ ದಶಕದಲ್ಲಿ ಶ್ರೀ ವಿಜಯನಾಥ ವಿಠಲ ಶೆಟ್ಟಿಯವರು ಶಾಸ್ತಾವು ಭೂತನಾಥೇಶ್ವರ ಕ್ಷೇತ್ರ ನೆಲೆಯಿಂದ ತುಳುವರ ಗ್ರಾಮೀಣ ಕ್ರೀಡೆ, ಸಂಸ್ಕೃತಿ ಪುನರುತ್ಥಾನಕ್ಕೆ ತನ್ನದೇ ರೀತಿಯಲ್ಲಿ ಹೆಜ್ಜೆಯಿರಿಸಿ ಸ್ಥಳೀಯ ದೃಶ್ಯಮಾಧ್ಯಮದ ವೇದಿಕೆ ಮೂಲಕ 'ಬಲೆ ತೆಲಿಪಾಲೆ' ಎಂಬ ನೂತನ ಪರಿಕಲ್ಪನೆಯ ರಂಗವಿನ್ಯಾಸಕ್ಕೆ ಕಾರಣರಾದರು. ತುಳುರಂಗ ಭೂಮಿಯ ದಿಕ್ಕನ್ನು ಈ ಪ್ರಕಾರವು ಒಂದಿಷ್ಟು ಸಂಚಲನಗೊಳಿಸಿತು. ಹಾಸ್ಯದ 'ಪಂಚ್'ಗಳ ಮೂಲಕ ಸ್ಪರ್ಧಾತ್ಮಕವಾಗಿ ನಡೆದ ಈ ಕಾರ್ಯಕ್ರಮಗಳಲ್ಲಿ ಗೆದ್ದ ಹಲವು ಹೊಸಬರು ಹಾಸ್ಯದ ಸ್ಟಾರ್‌ಗಳಾಗಿ ಹೊಮ್ಮಿದರು.

'ಬಲೆ ತೆಲಿಪಾಲೆ' ಖ್ಯಾತಿಯ ಪ್ರಸನ್ನ ಶೆಟ್ಟಿ ಬೈಲೂರು ಈಚೆಗೆ 'ನಿಸರ್ಗ ಕಲಾವಿದರು ಬೈಲೂರು' ಎನ್ನುವ ತನ್ನದೇ ನಾಟಕ ತಂಡವನ್ನು ಹುಟ್ಟುಹಾಕಿ ರಂಗಪ್ರದರ್ಶನವನ್ನು

ನೀಡತೊಡಗಿದ್ದಾರೆ. ಸಂದೀಪ್ ಮೊಣಿಬೆಟ್ಟು, ಮರ್ವಿನ್ ಪಿಂಟೋ ಶಿರ್ವ (ಸ್ತ್ರೀಪಾತ್ರ), ಉಮೇಶ್ ಮಿಜಾರ್ ಇವರೆಲ್ಲಾ 'ಬಲೆ ತೆಲಿಪಾಲೆ' ಟೀವಿ ಶೋ ಮೂಲಕ ಗಮನ ಸೆಳೆದ ಕಲಾವಿದರು.

**ನರೇಶ್‌ಕುಮಾರ್ ಸಸಿಹಿತ್ಲು**

ಇವರು ಕಿರಿಯ ವಯಸ್ಸಿನಲ್ಲೇ ನಾಟಕದ ಆಸಕ್ತಿ ಬೆಳೆಸಿಕೊಂಡವರು. ಮಾಯದ ಶಕ್ತಿಲ್, ಬೀರೆರೆ ಗರೊಡಿ, ದೈವ ಚಾವಡಿ, ಅಮ್ಮ-ಮುಂತಾದ ಜಾನಪದ, ಸಾಮಾಜಿಕ ನಾಟಕಗಳನ್ನು ಬರೆದು ಪ್ರದರ್ಶಿಸಿದ್ದಾರೆ. ಯುವ ಸಂಪನ್ಮೂಲ ತಜ್ಞರಾದ ಇವರು 2018ರಲ್ಲಿ ತುಳು ಅಕಾಡೆಮಿಯ 'ತುಳುನಾಟಕ ಪರ್ಬ' ಸಲುವಾಗಿ ವಿಶುಕುಮಾರರ 'ಕೋಟಿಚೆನ್ನಯ' ಚಾರಿತ್ರಿಕ ನಾಟಕವನ್ನು ಯುವವಾಹಿನಿಯ ಸುಮಾರು 50ಕ್ಕೂ ಮಿಕ್ಕ ಹೊಸ ಕಲಾವಿದರಿಗೆ ತರಬೇತಿ ನೀಡಿ ರಂಗಪ್ರಯೋಗಕ್ಕಿಳಿಸಿ ಯಶಸ್ವಿ ನಿರ್ದೇಶಕರೆನಿಸಿದ್ದಾರೆ. ತುಳುವೆರೆ ತುಡರ್ ಕಲಾತಂಡ, ಸುರತ್ಕಲ್ ಮುಂತಾದ ತಂಡಗಳ ನಟರಾಗಿಯೂ ಕ್ರಿಯಾಶೀಲರಾಗಿರುವ ಇವರ ನೂತನ ನಾಟಕ 'ಶಾಂತಿನಗರ 2nd ಕ್ರಾಸ್' ಕೂಡ ಪ್ರಯೋಗ ಕಂಡಿದೆ.

**ಯುವ ನಾಟಕಕಾರ ರವಿಕುಮಾರ್ ಕಡೆಕಾರು (1976)**



ಅಂಚೆ ಇಲಾಖಾ ಉದ್ಯೋಗಿ ಯುವಪ್ರತಿಭೆ ಉಡುಪಿ ಕಡೆಕಾರಿನ ರವಿಕುಮಾರ್ 40ರ ಹರೆಯದ ಒಳಗಡೆಯೇ 19 ತುಳು ನಾಟಕ ರಚಿಸಿದ ನಟ, ನಿರ್ದೇಶಕ, 'ಮಾಯೆದ ಬೊಲ್ಪು', 'ತೆರಿದ್‌ಲಾ ತೆರಿಯಂದಿನಕ್ಲು', 'ಯಾನ್ ಮಲ್ತಿನೆಂಚಿನ?', 'ಬೈರಾಪುರತ ಬೈರಪ್ಪೆ', ಮತ್ತು 'ಮರ್ಲ್ ಕಟ್ಟಾಯಿ ಪಟ್ಟೊ' ಈ ಐದು ನಾಟಕಗಳಿಗೆ ಹಸ್ತ ಪ್ರತಿರೂಪದಲ್ಲಿ ರತ್ನವರ್ಮ ಹೆಗ್ಗಡೆ ಪ್ರಶಸ್ತಿ ಗಳಿಸಿದವರು. ಸೂರ್ಯೆ ಕಂತಿಯೆ, ಕಡಲ್‌ಗ್ ಸೇರಂದಿ ಸುದೆ', ಮಾಯೆದ ಬೊಲ್ಪು ಕೃತಿಗಳು ಪ್ರಕಟವಾಗಿವೆ. ಏರೆನ್ ನಂಬೊಡು, ಈ ದಾಯೆ ಬತ್ತಾ?, ಎಂಚ ಪನ್ಪಿನಿ, ಎಂಕ್ ಗೊತ್ತುಜ್ಜಿ, ಅಮಸರ ಮಲ್ಪೊಡ್ಚಿ ಪಾನ್ ಬೀಡಾ ಪಾಂಡುರಂಗೆ, ಗೋಪಾಲೆ ಪಾತೆರುಜೆ, 'ರಾಮೆ-ದೂಮೆ-ತೋಮೆ' 'ಕಲ್ಪೆರೆ ಮಸ್ತುಂಡು' 'ಕಾಸ್‌ದಂಚಿ ತೂವಡೆ', 'ಪುರ್ಸೊತ್ತಿಜ್ಜಿ' – ಮುಂತಾದವು ಅವರ ಇನ್ನಿತರ ನಾಟಕಗಳು. ಇತ್ತೀಚೆಗೆ 'ಸನ್ನಿಧಿ ಕಲಾವಿದರು (ರಿ)' ಉಡುಪಿ ಎನ್ನುವ ತಂಡವನ್ನು

ನಿರ್ಮಿಸಿ ಅದರ ಮೂಲಕ ರಂಗ ಪ್ರದರ್ಶನ ನೀಡುತ್ತಿದ್ದಾರೆ. ಪರಿಸರದ ನೂರಾರು ಸಂಘ ಸಂಸ್ಥೆಗಳು ಇವರ ನಾಟಕಗಳ ರಂಗ ಪ್ರದರ್ಶನ ನೀಡಿವೆ. ರವಿಕುಮಾರ್ ಸ್ವತಃ ನಟರಾಗಿ, ನಿರ್ದೇಶಕರಾಗಿಯೂ ಪರಿಶ್ರಮವುಳ್ಳವರು. ಇವರ ಕಾಸ್‌ದಂಚಿ ತೂವಡೆ ನಾಟಕ ಉದ್ಯಾವರ ಗಣೇಶ ಕಲಾಮಂದಿರ (ರಿ) ಇವರ ಸುವರ್ಣ ಮಹೋತ್ಸವ ಪ್ರಯುಕ್ತ 2018ರಲ್ಲಿ ಜರಗಿದ ತುಳುನಾಟಕ ಸ್ಪರ್ಧೆಯಲ್ಲೂ ಸುಮನ ಕೊಡವೂರು ತಂಡದಿಂದ (ನಿ: ಪ್ರವೀಣ್ ಕೊಡವೂರು) ಪಾಲ್ಗೊಂಡು ಗಮನ ಸೆಳೆದಿದೆ.

* * *

ಮನೆಮಾತು ತುಳುವಲ್ಲದೆಯೂ ಕಲಿತು, ಬರೆದ ಬಿ. ಸಂಜೀವ ರಾವ್ ಅವರ 'ಸಂಶಯದ ಸಂಕಲೆ' (1960), ಅತ್ತಾವರ ವಿಶ್ವನಾಥರ 'ಪೊಸ ಮದಿಮಾಯೆ' (1962), ಗಣೇಶ್ ರೈ ಕದ್ರಿಕಂಬಳ ಅವರ 'ಈರೆನ್ನ ಕೈ ಬುಡಡೆ' (1967), ಎಂ. ಪುರುಷೋತ್ತಮರ 'ಬೊಲ್ಪು ದಾಂತಿ ತುಡರ್' (1969), ಮುಂತಾದ ಕೃತಿಗಳು ಪ್ರಕಟವಾಗಿ ಬಹುಜನಕ್ಕೆ ತಲುಪಿದವು. 'ಎನ್ನ ಮೈತಿದಿ' ಖ್ಯಾತಿಯ ಏಕಾನಂದ ಮಾಸ್ತರ್, 'ಕುಂಟೆ ರಾಮೆ', ಖ್ಯಾತಿಯ ರವಿಕುಮಾರ್, ಬಿ.ವಿ. ಕಿರೋಡಿಯನ್, ಕೆ. ಆರ್. ಶ್ರೀಯಾನ್ – ಮುಂತಾದವರ ನಾಟಕಗಳೂ ಹಳೆಯ ತಲೆಮಾರಿನಲ್ಲೇ ಬಂದಿದ್ದವು. ಕೆ.ವಿ. ಭಟ್ (ಶ್ರೀ ಭವ್ಯಾ), ಅವರ ಆರತಿ, ಅಂಗಲಾಪು, ಝಾನ್ಸಿದ ರಾಣಿ ಲಕ್ಷ್ಮೀಬಾಯಿ ಮತ್ತಿತರ ಹಲವು ಚಾರಿತ್ರಿಕ, ಪೌರಾಣಿಕ, ಸಾಮಾಜಿಕ ನಾಟಕಗಳೂ, 'ನೆತ್ತೆರ್ದ ಕಾನಿಗೆ' (1970) ಖ್ಯಾತಿಯ ಸಂಜೀವ ಅಡ್ಯಾರು–ಮತ್ತಿತರರ ನಾಟಕಗಳೂ ಸಂಕ್ರಮಣ ಕಾಲಘಟ್ಟದಲ್ಲಿ ಜನಪ್ರಿಯವಾದವುಗಳು.



ಎ. ಶಿವಾನಂದ ಕರ್ಕೇರರ ನಾಟಕ 'ಎರುಮೈಂದೆ'. ಪ್ರಸ್ತುತಿ : ಕೂಡ್ಡಿ ಕಲಾವಿದೆರ್, ಪೆರ್ಡೂರು ಮುಂಬೈ ಕರ್ನಾಟಕ ಸಂಘದಲ್ಲಿ ಪ್ರದರ್ಶನ, 26–1–2003. ನಿ : ಪಿ. ಪ್ರಭಾಕರ ಕಲ್ಯಾಣಿ



ಸಸಿಹಿತ್ಲಿನ **ಪರಮಾನಂದ ಸಾಲ್ಯಾನ್** (1962) ಅಬ್ಬರದ ಒಬ್ಬರ್ಯೆ, 'ಬಾರೆರ್ ಮೊಕುಲು ಬೀರೆರ್, ಪುರಲ್ ಇತ್ಯಾದಿ ನಾಟಕ ರಚಿಸಿ **'ರಂಗ ಸುದರ್ಶನ'** ತಂಡದ ಮೂಲಕ ಪ್ರದರ್ಶನ ನೀಡಿದ್ದಾರೆ. ಇವರ ನೂತನ ರಂಗಕೃತಿ 'ಬಾಲೆಗೊಲಿಯಿನ ಭ್ರಾಮರಿ' ಇದು **2018ರಲ್ಲಿ ಪಡುಪಣಂಬೂರಿನಲ್ಲಿ** ಪ್ರಯೋಗಕ್ಕೆ ಬಂದಿದೆ.

ದಯಾನಂದ ಕುಲಾಲ್‌ರ ಒಂತೆ ಉಂತುಲೆ, ಉಮೇಶ್ ಅಳಕೆಯ 'ಇಲ್ಲ್ ಬುಡಯೆ' ಮಾಧವ ಜೆಪ್ಪು ಪಟ್ನ, ಯಶವಂತ ಬೋಳೂರು, ಪರ್ಸಿ ಉರ್ವಾ ('ಜಾರು ಜಾಗ್ರತೆ), ಡಿ.ಎಂ. ಅಸ್ಲಂ, ಭಾಸ್ಕರ ಕುಲಾಲ್ ಬರ್ಕೆ, ಯುಪಿ. ಕುಂದರ್, ಕೆ.ವಿ. ಕುಮಾರ್, ಯಸ್.ಯು. ಪುತ್ತಿಗೆ, ಕೆ.ಆರ್. ರೈ (ಅಜ್ಜೆರ್ ಲಕ್ಯೆರ್), ಶೇಖರ್ ಉಳ್ಳಾಲ್ (ಒಂತೆ ಉಂತುಲೆ), ಈಶ್ವರ ಚಿಟ್ಪಾಡಿ– ಮೊದಲಾದವರು ಬಿಡಿಬಿಡಿಯಾದ ನಾಟಕಗಳನ್ನು ಬರೆದರು. ರಾಮಚಂದರ್ ಬೈಕಂಪಾಡಿಯವರ 'ನಿನ್ನ ಮೋಕೆದಾ', ಜಗನ್ ಪವಾರ್ ಬೇಕಲರ 'ಏರ್ ತೂಯಿನಿ?' (94), ಭಾಸ್ಕರ ರೈ ಕುಕ್ಕುವಳ್ಳಿಯವರ ತುಳುವೆರೆ ಬಲಿಯೇಂದ್ರೆ –2014 ಮುಂತಾದವು ಗಮನ ಸೆಳೆದವು.

ಆ ಕಾಲದಲ್ಲಿ ಬೆರಳೆಣಿಕೆಯ ಕೃತಿಗಳು ಮಾತ್ರ ಅಚ್ಚಾದವು. ನೋಟ್ ಪುಸ್ತಕ, ಲೆಜರ್ ಪುಸ್ತಕಗಳ ಸ್ವರೂಪದಲ್ಲಿದ್ದ ಸಾವಿರಾರು ನಾಟಕಕೃತಿಗಳು ಹಸ್ತಪ್ರತಿ ರೂಪದಲ್ಲೇ ಕೆಲಕಾಲ ಚಲಾವಣೆಯಲ್ಲಿರುತ್ತಾ ಕ್ರಮೇಣ ಹೆಚ್ಚಿನವು ನಶಿಸಿಹೋದವು.

**ಸಂಧಿಕಾಲ**

ಎಪ್ಪತ್ತರ ದಶಕದ ವೇಳೆಗೆ ತುಳು ರಂಗಭೂಮಿಯೇನೋ ಹೆಚ್ಚು ಕ್ರಿಯಾಶೀಲ ವಾದರೂ ಆ ವೇಳೆಗೆ ಚಲನಚಿತ್ರಗಳ ಆಕರ್ಷಣೆ ಹೆಚ್ಚಿ, ಪ್ರೇಕ್ಷಕರ ಕಲಾಭಿರುಚಿ ಕದಲು ವಂತಾದಾಗ, ಬಹುಪಾಲು ನಾಟಕಕಾರರು, ನಟರು ಸಿನಿಮಾ ಅನುಕರಣೆಗೆ ಶರಣಾದರು. ಆದರೂ ರಂಗಚಟುವಟಿಕೆ ಜಡ್ಡುಗಟ್ಟುವಂತಾಯಿತು. ಆ ಮುಂಚಿನ ಆರೋಗ್ಯಪೂರ್ಣ ಹಾಸ್ಯದ ಸ್ಥಾನವನ್ನು ವಿಪರೀತಾರ್ಥದ ಹಾಸ್ಯ ಆಕ್ರಮಿಸಿಕೊಂಡಿತು. ತುಳುನಾಡಿನ ವೈವಿಧ್ಯಮಯ ಸಾಮಾಜಿಕ, ಸಾಂಸ್ಕೃತಿಕ ಬದುಕಿನ ಒಳನೋಟವಾಗಲೀ, ಇಲ್ಲಿನ ಯಕ್ಷಗಾನದ ಮೌಲಿಕ ಶಿಸ್ತಾಗಲೀ ತುಳು ರಂಗ ಪ್ರಯೋಗಗಳಿಗೆ ಆ ಕಾಲ ಘಟ್ಟದಲ್ಲಿ ಹೆಚ್ಚು ಗ್ರಹೀತವಾಗಲಿಲ್ಲ.

1982ರಲ್ಲಿ (ಆಗಸ್ಟ್ 23ರಿಂದ 29ರ ವರೆಗೆ) 'ಅರುಣ್ ಕಿರಣ್' ಸಂಸ್ಥೆ ಮಂಗಳೂರು ಮೂಲಕ ನಡೆಸಿದ ನಾಟಕ ಸಪ್ತಾಹಗಳು ಉಲ್ಲೇಖನೀಯ. ಪಾಂಡೇಶ್ವರರ 'ಅಜ್ಜಿನ ಗೌಜಿ', 'ಪೊರ್ತುಕಂತ್‌ಂಡ್', ಕೌನ್ಸಿಲರ್ ಕೊಗ್ಗಣ್ಣೆ, ತುಡರ್ ತೆಲ್ತ್‌ಂಡ್, ಸೆರಂಗ್, ಅಜ್ಜಿ ಸಾಂಕಿನ ಪುಲ್ಲಿ, ಅಲೆಕ್ಸಾಂಡರ್ ಹೀಗೆ ಏಳು ನಾಟಕಗಳನ್ನು ಪ್ರದರ್ಶಿಸಲಾಯಿತು.

ಹೀಗೆಯೇ ಕೆ. ಬಿ. ಭಂಡಾರಿ, ಬಿ. ರಾಮ ಕಿರೋಡಿಯನ್, ಎಂ. ಕೆ. ಸೀತಾರಾಮ್ ಕುಲಾಲ್ – ಮುಂತಾದವರ ನಾಟಕ ಸಪ್ತಾಹಗಳು ನಡೆದವು.

**ಹೊಸ ನಾಟಕ ಕೃತಿ ರಚನೆಯ ಪ್ರೇರಣೆಗಳು**

ತುಳು ಭಾಷೆ, ಸಂಸ್ಕೃತಿಯ ಏಳಿಗೆಯ ಸಂಕಲ್ಪದಿಂದ 1970ರ ವೇಳೆಗೆ ಮಂಗಳೂರಿನಲ್ಲಿ ತುಳುಕೂಟ ಸ್ಥಾಪನೆಗೊಂಡಿತು. ಪುತ್ತೂರು ಮತ್ತಿತರ ಕಡೆಯೂ ತುಳುಕೂಟದ ಶಾಖೆಗಳು ಅಸ್ತಿತ್ವಕ್ಕೆ ಬಂದವು. 'ನವಭಾರತ' –ತುಳುಕೂಟ ಸಹಭಾಗಿತ್ವದಲ್ಲಿ ತುಳು ನಾಟಕ ಸಪ್ತಾಹ ಏರ್ಪಾಟಾಯಿತು. ಬಿ. ರಾಮ ಕಿರೋಡಿಯನ್, ಕೆ.ಬಿ. ಭಂಡಾರಿ ಮಚ್ಚೇಂದ್ರನಾಥ ಪಾಂಡೇಶ್ವರ – ಮುಂತಾದ ಹಿರಿಯ ನಾಟಕಕಾರರ ನಾಟಕಗಳನ್ನು ವಿವಿಧ ತಂಡಗಳು ಸಪ್ತಾಹ ಕಾಲದಲ್ಲಿ ಪ್ರದರ್ಶಿಸುವ ಸಂದರ್ಭ ಒದಗಿಸಲಾಯಿತು. ಅಲ್ಲದೆ ಇದೇ ಕಾಲಘಟ್ಟದಲ್ಲಿ ಮಂಗಳೂರು ಪುರಭವನದಲ್ಲಿ ತುಳುನಾಟಕ ಸ್ಪರ್ಧೆಗಳು ನಡೆದವು. ಮಂಗಳೂರಿನಲ್ಲಿ ದಾಮೋದರ ಆರ್. ಸುವರ್ಣರಂಥವರ ಮುಂದಾಳ್ತನದಲ್ಲಿ 90ರ ದಶಕದಲ್ಲಿ ದಕ್ಷಿಣ ಕನ್ನಡ ನಾಟಕ ಕಲಾವಿದರ ಸಂಘಟನೆಯ ಪ್ರಯತ್ನ ನಡೆಯಿತು.(ಇದು ಮುಂದೆ 2005ರ ವೇಳೆಗೆ ಮಂಗಳೂರಿನಲ್ಲಿ ಮಚ್ಚೇಂದ್ರನಾಥ ಪಾಂಡೇಶ್ವರರ ಅಧ್ಯಕ್ಷತೆಯಲ್ಲಿ ತುಳು ನಾಟಕ ಕಲಾವಿದರ ಒಕ್ಕೂಟ ರಚನೆಯ ಮೂಲಕ ಸಾಕಾರಗೊಂಡಿತ್ತು.)

1977ರ ಹೊತ್ತಿಗೆ ಮಂಗಳೂರು ತುಳುಕೂಟವು ಶ್ರೀ ಕ್ಷೇತ್ರ ಧರ್ಮಸ್ಥಳದ ದತ್ತಿನಿಧಿ ನೆರವಿನಿಂದ ಹೊಸ ತುಳುನಾಟಕ ಬರಹಗಾರರಿಗೆ ಪ್ರೋತ್ಸಾಹ ನೀಡಲೆಂದು ವರ್ಷಂಪ್ರತಿ 'ರತ್ನವರ್ಮ ಹೆಗ್ಗಡೆ ತುಳುನಾಟಕ ರಚನಾ ಸ್ಪರ್ಧೆ' ಏರ್ಪಡಿಸತೊಡಗಿತು. ಈ ಕೃತಿ ರಚನಾ ಸ್ಪರ್ಧೆಯ ಮೂಲಕ ಈ ನಾಲ್ಕು ದಶಕಗಳಲ್ಲಿ 250ಕ್ಕೂ ಮಿಕ್ಕ ಹೊಸ ನಾಟಕ ಕೃತಿಗಳು ಸೃಷ್ಟಿಯಾದವು. ಇನ್ನೊಂದೆಡೆ 1976ರಲ್ಲಿ ಪ್ರಾರಂಭಗೊಂಡ ಮಂಗಳೂರು ಆಕಾಶವಾಣಿ ಕೇಂದ್ರ ತುಳುವಿನ ನಾಟಕಗಳ ಪ್ರಸಾರಕ್ಕೂ ಅವಕಾಶ ನೀಡತೊಡಗಿತು. ಈ ಕಾಲದಲ್ಲಿ ಹತ್ತಾರು ಹೊಸ ನಾಟಕಕಾರರು ನಾಟಕ ರಚನೆ ಮಾಡತೊಡಗಿದರು.

# ತುಳು ರಂಗಭೂಮಿಯಲ್ಲಿ ಮಹಿಳೆಯರು

## ಮಹಿಳಾ ನಾಟಕಕಾರರು

ಕ್ಯಾಥರಿನ್ ರೊಡ್ರಿಗಸ್, ಹೆಚ್. ಶಕುಂತಳಾ ಭಟ್, ಶಾರದಾ ಆರ್. ರಾವ್, ಜಯಂತಿ ಎಸ್. ಬಂಗೇರ, ಆಶಾ ನಾಗುರಿ ಮುಂತಾದವರೆಲ್ಲ ತುಳು ನಾಟಕಕಾರ್ತಿಯರಾಗಿ ತುಂಬ ಬರೆದರು. ಯಶೋಧರಾ ದೇವಿ, ರೋಹಿಣಿ ಜಗರಾಂ, ಜಯಶೀಲ ಸಿನಿಮಾ ತಾರೆಯರಾದ ರತ್ನಮಾಲಾ, ಸುನಂದಾ, ಜಯಮಾಲಾ, ಸರೋಜಿನಿ ಶೆಟ್ಟಿ, ರೂಪಾ ಅತ್ತಾವರ, ಗೀತಾ ಸುರತ್ಕಲ್, ಲೂಸಿ ಪಿರೇರಾ, ಪ್ರಮೀಳಾ ಬೆಂಗ್ರೆ, ಜೂಲಿಯೆಟ್, ಲೀನಾ ಗೋವಿಯಸ್, ಶೋಭಾ ಶೆಟ್ಟಿ, ವೀಣಾ (ಶಕ್ತಿನಗರ) ಮಂಗಳೂರು, ಕುಮುದಾ ಬಾರ್ಕೂರು, ಶೋಭಾ ಶೆಟ್ಟಿ, ಶ್ವೇತಾ, ವಿನ್ನಿ ಫೆರ್ನಾಂಡೀಸ್, ನಿರ್ಮಲಾ ಎಸ್. ಶೆಟ್ಟಿ, ಸುಮನಾ, ಸಂಗೀತ, ಡಯಾನ, ಜಯಶ್ರೀ, ಸ್ಮಿತಾ, ಮೋಹಲತ, ಸುಜಾತಾ ಮಂಗಳೂರು, ನೀತು, ಚೈತ್ರ, ಆಶಾ ಮಾರ್ನಾಡ್ (ಮುಂಬಯಿ) ವಿದ್ಯಾ, ಪಲ್ಲವಿ, ನಯನ, ಅನಿಶಾ, ರೂಪಶ್ರೀ ವರ್ಕಾಡಿ, ಮಂಜುಳ, ಚಂದ್ರಕಲಾ ಪೆರ್ಡೂರು, ಸುಜಾತ ಮುದ್ರಾಡಿ, ಸುಜಾತ ಸುವರ್ಣ, ಸುನೀತ ನಾಯಕ್, ಮೋನಿಕಾ ಫ್ಲಾವಿಯಾ ಮುಂತಾದವರೆಲ್ಲಾ ತುಳು ನಾಟಕಗಳಲ್ಲಿ ಅಭಿನಯಿಸಿದರು. ಸುಹಾಸಿನಿ ಬೆಂಗ್ರೆ, ಮಹಾದೇವಿ, ರಂಜನಿ, ರತ್ನಮಾಲಾ, ಜೋಯ್ಸ್, ಮೀರಾ, ಶಾರದಾ ಬಾರ್ಕೂರು, ನಯನ, ವಿನಯ, ವಿನುತ, ವಿಜಯಲಕ್ಷ್ಮಿ, ಶೋಭಾ ರೈ ಮತ್ತಿತರರು ತುಳುನಾಟಕಗಳಿಗಾಗಿ ಹಾಡಿದರು.

ಮುಂದೆ ತಮಿಳುನಾಡಿಗೆ ಸ್ಥಳಾಂತರಗೊಂಡ ಮೇಲೆ ನಿಧನರಾದ ಶ್ರೀಮತಿ ಯಶೋಧರಾದೇವಿ 50-70ರ ದಶಕದಲ್ಲಿ ಮಂಗಳೂರಿನಲ್ಲಿ ಹಲವು ತುಳುನಾಟಕಗಳ ನೂರಾರು ಪ್ರಯೋಗಗಳಲ್ಲಿ ಪಾತ್ರವಹಿಸಿ ಹೋದವರು.

## ಕ್ಯಾಥರಿನ್ ರಾಡ್ರಿಗಸ್ ಕಟಪಾಡಿ – ಕಲಾವಾಹಿನಿ (ರಿ) ಕಟಪಾಡಿ

ಕ್ಯಾಥರಿನ್ ರಾಡ್ರಿಗಸ್ ಕಟಪಾಡಿ ಇವರ ಹೆಸರು ತುಳು

ನಾಟಕಕಾರರ ಮಧ್ಯೆ ವಿಶಿಷ್ಟವಾಗಿ ಎದ್ದು ತೋರುವದು. ತನ್ನ ಮಾತೃಭಾಷೆ ಕ್ರೈಸ್ತ ಕೊಂಕಣಿಯಾಗಿದ್ದೂ, ಬಾಲ್ಯದಿಂದ ತುಳು ಜನಪದ ಸಂಸ್ಕೃತಿಯ ಬಗ್ಗೆ ಒಲವಿರಿಸಿಕೊಂಡು, ಪಾಡ್ದನ, ಸಂಧಿಗಳಿಂದಲೇ ಪ್ರಮುಖವಾಗಿ ವಸ್ತುಗಳನ್ನಾಯ್ದುಕೊಂಡು, 80ರ ದಶಕದಿಂದಲೇ ನಾಟಕ ರಚನೆಗೆ ತೊಡಗಿ ಹತ್ತಾರು ನಾಟಕಗಳನ್ನು ರಚಿಸಿ ಜನಪ್ರಿಯರಾಗಿರುವವರು ಈಕೆ. ಸುಮಾರು 20 ಜಾನಪದ ನಾಟಕ, 40 ಸಾಮಾಜಿಕ ನಾಟಕಗಳನ್ನು ಬರೆದಿದ್ದಾರೆ. ಹಲವು ರೇಡಿಯೋ ನಾಟಕ ರಚಿಸಿದ್ದಾರೆ. ಕೇದಗ, ಬನ್ನಾಲ್, ಸತ್ಯೊದ ಬಾಲೆಲು, ಬಂಗಾರ್ದ ದೊಡ್ಡಿ (1983–1987ರ ನಡುವೆ ರತ್ನವರ್ಮ ಹೆಗ್ಗಡೆ ಸ್ಮಾರಕ ತುಳುನಾಟಕ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನಿತ), ನಾಗಸಿರಿ ಕನ್ನಿಕಾ, ಕಾಂತುಕಬೇದಿ, ಪಂಥ, ಕಾರ್ನಿಕದ ದೈವ, ಜೋಗಿ ಪುರ್ಸೆ, ಸೂತ್ರದಾರೆ ಕೃಷ್ಣೆ, ಸತ್ಯೊದ ಬಾಲೆಲು, ಕಾಂತಾಬಾರೆ ಬೂದಬಾರೆ, ಪೊಸದೈವ – ಮುಂತಾದವು ಜಾನಪದ ನಾಟಕ, ರೂಪಕಗಳಾದರೆ ಬೇಲಿ, ಕಣ್ಣೀರ್ದಾ ಬದ್‌ಕ್, ಅರಳಂದಿ ಪೂ ಮಸಣದ ಪೂ, ಉಡಲ್ದಾ ಶಾಪ, ತೆಕ್‌ಪೋತಿ ತುಡರ್, ಅಪರಾಧಿ ಯೇರ್? – ಮುಂತಾದವು ಸಾಮಾಜಿಕ ನಾಟಕಗಳು. 'ಜಯವಿಜಯ', 'ಕನ್ನಿಕಾ' – 84,85ರಲ್ಲಿ ಕಲ್ಪನಾ ಪ್ರಶಸ್ತಿ ಪಡೆದ ನಾಟಕಗಳು. 1995ರಲ್ಲಿ ಅವರ ನಾಟಕ, ರೂಪಕಗಳ ಸಂಕಲನ 'ಸಿರಿತುಪ್ಪೆ' ಪ್ರಕಟವಾಗಿದೆ. 80–90ರ ದಶಕದಲ್ಲಿ ಕಲಾವಾಹಿನಿ (ರಿ) ಎನ್ನುವ ಸಂಘಟನೆ ಮಾಡಿಕೊಂಡು ರಂಗಚಟುವಟಿಕೆ ನಾಟಕ ಸ್ಪರ್ಧೆ ನಡೆಸಿದರು. ಆಕಾಶವಾಣಿಯಲ್ಲೂ ಇವರ ಹಲವು ತುಳುನಾಟಕಗಳು ಪ್ರಸಾರವಾಗಿವೆ.

**ಆಶಾ ನಾಗೋರಿ – ಸಹೋದರಿ ಕಲಾವೃಂದ**

ಮಂಗಳೂರಿನ ಆಶಾ ನಾಗೋರಿ ಅವರು 90ರ ದಶಕದಲ್ಲಿ 4 ತುಳು ನಾಟಕ (ಒಂತೆ ತೆರಿಯೊನ್ಲೆ, ಬಲ ಪೋಯಿ, ಆಪಿನಿ ಪೂರಾ ಎಡ್ಡೆಗೇ, ಕರಿಮಣಿ (ಇದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲೂ ಪ್ರದರ್ಶಿತ)– ರಚಿಸಿದ್ದು ಮಾತ್ರವಲ್ಲ, 1995ರ ವೇಳೆಗೆ 'ಸಹೋದರಿ ಕಲಾವೃಂದ' ಎನ್ನುವ ಹವ್ಯಾಸಿ ನಾಟಕ ತಂಡವನ್ನು 95ರಲ್ಲಿ ಕಟ್ಟಿ, ಅದರ ಮೂಲಕ ಕೆಲವು ವರ್ಷ ನಾಟಕಗಳನ್ನು ಪ್ರದರ್ಶಿಸಿದರು.

**ಶಕುಂತಲಾ ಭಟ್ ಹಳೆಯಂಗಡಿ**

ಶ್ರೀಮತಿ ಶಕುಂತಲಾ ಭಟ್ ಹಳೆಯಂಗಡಿಯವರು ಎಳವೆಯಿಂದಲೇ ತೊಡಗಿ 'ಏಧಿತ ಮದಿಪು', 'ಸತ್ಯ ನೆತ್ತಿಡ್ ಅರ್ಲುಂಡು', 'ಗುತ್ತಿನಾಯೆ' ಇತ್ಯಾದಿ ಪೂರ್ಣಾವಧಿಯ ಹಲವಾರು ಏಕಾಂಕ ಹಾಗೂ ತುಳು ನಾಟಕಗಳನ್ನು ರಚಿಸಿದ ಮತ್ತೋರ್ವ ಪ್ರಮುಖ

ಮಹಿಳೆ. 90ರ ದಶಕದಿಂದ ತೊಡಗಿ ಹಲವಾರು ಬಾರಿ ರತ್ನವರ್ಮ ಹೆಗ್ಗಡೆ ಪ್ರಶಸ್ತಿ, 3 ನಾಟಕಗಳಿಗೆ 'ಕಲ್ಪನಾ' ಪ್ರಶಸ್ತಿ, 2 ಬಾರಿ ಕಟಪಾಡಿ ನರ್ತಕಿ ಕಲಾರಂಗ ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡ ಇವರು 2002ರಲ್ಲಿ 'ಪಂಚಾಕ್ಷರಿ' ಎನ್ನುವ ಮಕ್ಕಳ ಪೌರಾಣಿಕ ನಾಟಕ ಸಂಕಲನ ಪ್ರಕಟಿಸಿದ್ದಾರೆ. ಇದರಲ್ಲಿ 1)ಪಂಚಾಕ್ಷರಿ, 2) ಮಾತೃಭಕ್ತಿ, 3) ಭೂ ಕೈಲಾಸ – ಈ ಮೂರು ನಾಟಕಗಳಿವೆ. ಇವರ ಉಳಿದ ಹೆಚ್ಚಿನ ನಾಟಕಗಳು ಸಾಮಾಜಿಕ, ಸಾಂಸಾರಿಕ ಕಥಾವಸ್ತುವಿನವು.

**ಶಾರದಾ ರಮೇಶರಾವ್**

ಧರ್ಮಸ್ಥಳದ ದಿ। ಶ್ರೀಮತಿ ಶಾರದಾ ರಮೇಶರಾವ್ 1984ರಿಂದೀಚೆಗೆ ಹಲವು ನಾಟಕ ರಚಿಸಿದರು. 'ಬೆರ್ಮೆರೆ ಮೈಮೆ' (84), 'ಬದಿತ ಭ್ರಾಂತ್ (85), 'ಬೇನೆ ದಾಂತಿ ಬದ್‌ಕ್', 'ಅತ್ತಸದ ಮರ' (88), 'ಮೂಡಿ ಪೊರ್ತು ಕಂತ್‌ನಗ (89), 'ತಾರ್ಕಣೆ' (92), 'ಬಿದೆ'(94), 'ಬೂದಮ್ಮನ ಬಿರ್ಸಾತಿಕೆ (95) – ಇವುಗಳೆಲ್ಲ ಕಲ್ಪನಾ ಪ್ರಶಸ್ತಿ, ರತ್ನವರ್ಮ ಹೆಗ್ಗಡೆ ಪ್ರಶಸ್ತಿಯಂಥ ಒಂದಿಲ್ಲೊಂದು ಪುರಸ್ಕಾರಗಳನ್ನು ಪಡೆದ ಸಾಮಾಜಿಕ, ಸಾಂಸಾರಿಕ ನಾಟಕಗಳು. (ಕೊನೆಯ ಮೂರು ಅಚ್ಚಾಗಿವೆ.)

**ಜಯಂತಿ ಎಸ್. ಬಂಗೇರ**

'ಸತ್ಯ ನೆಗಪಪುನಗ' (1999) ಕೃತಿಯ ಶ್ರೀಮತಿ ಜಯಂತಿ ಎಸ್. ಬಂಗೇರ ಮೂಡಬಿದ್ರೆ ಈಗ 'ಉಡಲ್' ಪತ್ರಿಕಾ ಸಂಪಾದಕಿ – ಇವರು ತೊಂಭತ್ತರ ದಶಕದಿಂದಲೂ ನಾಟಕ ರಚನೆಯಲ್ಲಿ ಸಕ್ರಿಯರು – ಸವಿತನ ಮದ್ಮೆ, ರಾಮುನ ಪಾತೆ, ಎನ್ನಂದಿ ಭಾಗ್ಯ, ಮಾಯಿದ ಪುಣ್ಣಮೆ, ಬಿನ್ನೆರೆ ಗೌಜಿ, ಮಾಪು ಮಲ್ಪುಲೆ – ಮುಂತಾದ ಇವರ ನಾಟಕಗಳು ಸರಳ ಸಾಮಾಜಿಕ ನಾಟಕಗಳು, ಪ್ರದರ್ಶನ ಕಂಡಿವೆ. 3 ನಾಟಕ ಹಸ್ತಪ್ರತಿಗಳು ರತ್ನವರ್ಮ ಹೆಗ್ಗಡೆ ಪ್ರಶಸ್ತಿಯನ್ನೂ ಗಳಿಸಿವೆ. 'ಸತ್ಯ ನೆಗಪುನಗ' ಮತ್ತು 'ಪೂಜೆದ ಪೂ' (2017) ಇವು ಅವರದೇ ಆದ ಸುಜೀರು ಪ್ರಕಾಶನದಿಂದ ಪ್ರಕಟಗೊಂಡಿವೆ.

ಸುರತ್ಕಲ್ಲಿನ ಶಿಕ್ಷಕಿ **ಲೀಲಾ ಬಾಯಿ ಪಿ.** ಅವರ 'ವಂಶದ ಗೌರವ' ತುಳು ನಾಟಕ 1989ರಲ್ಲಿ ಪ್ರಕಟವಾಗಿದೆ. ಇದೇ ರೀತಿ ಜಿಲ್ಲೆಯ ಮೂಲೆಮೂಲೆಯ ಶಿಕ್ಷಣ ಸಂಸ್ಥೆಗಳು, ಮಹಿಳಾ ಮಂಡಲಗಳಲ್ಲಿ ವಾರ್ಷಿಕೋತ್ಸವ, ವಿಶೇಷ ಸಮಾರಂಭಗಳಿಗೆಂದು ಮಹಿಳೆಯರು ಎಷ್ಟೋ ನಾಟಕ ರಚಿಸಿರಬಹುದು. (ಆಕಾಶವಾಣಿಗೆ ನಾಟಕ ರಚಿಸಿಕೊಟ್ಟವರ ವಿವರ ಮುಂದೆ ಪ್ರತ್ಯೇಕವಾಗಿ ನೀಡಲಾಗಿದೆ.)

**ಜಯಂತಿ ಎಸ್. ಸುವರ್ಣ ಎರ್ಮಾಳು**

ಮೂಡಬಿದ್ರೆಯ ಶಿಕ್ಷಕಿ ಜಯಂತಿ ಎಸ್. ಸುವರ್ಣ ಎರ್ಮಾಳು ಇವರು ವಿದ್ಯಾರ್ಥಿಗಳ ಪ್ರದರ್ಶನಕ್ಕಾಗಿ ಹಲವು ಕನ್ನಡ ತುಳು ನಾಟಕಗಳನ್ನು ಬರೆದಿರುವರು. 'ಲೋಕೊದ ಬೊಲ್ಪು' ಐತಿಹಾಸಿಕ –2014, 'ಮನಸ್ಸ್ ಬದಲಾನಗ' –2015, 'ಗರ್ವಭಂಗ' (ತುಳು ಪೌರಾಣಿಕ –2015) ಮುಂತಾದ ನಾಟಕಗಳು ಪ್ರಕಟವಾಗಿವೆ.

**ಎಮ್. ಜಾನಕಿ ಬ್ರಹ್ಮಾವರ**

ಸಾಹಿತಿ, ತುಳು ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷೆ ಎಂ. ಜಾನಕಿ ಬ್ರಹ್ಮಾವರ ಇವರು ತುಳುವಿನಲ್ಲಿ ಗಟ್ಟಿ ನಾಟಕಗಳ ಕೊರತೆಯನ್ನು ನೀಗುವ ಪ್ರಯತ್ನವಾಗಿ ಈಚಿನ ವರ್ಷಗಳಲ್ಲಿ ಕೆಲವು ನಾಟಕಗಳನ್ನು ಕನ್ನಡದಿಂದ ತುಳುವಿಗೆ ಅನುವಾದಿಸಿದ್ದಾರೆ. 'ಏಕಲವ್ಯ' (2013) ಮೂಲಕನ್ನಡ ಡಾ. ಸಿದ್ಧಲಿಂಗಯ್ಯ, ಕುವೆಂಪು ಅವರ 'ರಕ್ತಾಕ್ಷಿ', (2015) ಶೂದ್ರ ತಪಸ್ವಿ (2014) ಸ್ಮಶಾನ ಕುರುಕ್ಷೇತ್ರ (2014) ಈ ಮೂರೂ ಕುವೆಂಪು ಅವರ ಕೆನೆಗಟ್ಟಿದ ಕಾವ್ಯಮಯ ಶೈಲಿ, ಪೌರಾಣಿಕ ಪಾತ್ರಗಳ ಸೊಗಸಾದ ಭಾಷೆಯ ಸಂಭಾಷಣೆಯುಳ್ಳ ಶ್ರೇಷ್ಠ ನಾಟಕಗಳು. ಅವನ್ನು ಕಿಂಚಿದೂನವಿಲ್ಲದಂತೆ ತುಳುಭಾಷಾ ಪಾರಮ್ಯದೊಂದಿಗೆ ಜಾನಕಿಯವರು ಸುಂದರವಾಗಿ ಅನುವಾದಿಸಿದ್ದಾರೆ. 'ಕೋರ್ಟ್ ಮಾರ್ಷಲ್' (ಹಿಂದಿ ಮೂಲ ಸ್ವದೇಶ್ ದೀಪಕ್, ಕನ್ನಡ : ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ) ಮತ್ತಿತರ ಹಲವು ನಾಟಕಗಳನ್ನು ಕನ್ನಡದಿಂದ ತುಳುವಿಗೆ ಅನುವಾದಿಸಿದ್ದಾರೆ. ತುಳುವಿನಲ್ಲಿ 'ಅಮರ್ ಬೈದ್ಯೆರ್' ನಾಟಕ ರಚಿಸಿದ್ದಾರೆ. ಅಪ್ರಕಟಿತ ಭಾಷಾಂತರಗಳು 'ಮಾಯೊದ ಮುರ್ಗ' ಮೂಲಕನ್ನಡ – ಕೆ.ಟಿ. ಗಟ್ಟಿ, 'ತುಕ್ರನ ಕನ' ಮೂಲಕನ್ನಡ – ಡಾ। ಚಂದ್ರಶೇಖರ ಕಂಬಾರ, ಪಂಚವಟಿ (ಜಟಾಯು, ಶಬರಿ), ತುಳುವ ಬೊಳ್ಳಿಲು (ಕಾಂತಾಬಾರೆ,

ಬೂದಬಾರೆ ಕಥನ). ಹವ್ಯಾಸಿ ತಂಡಗಳ ನುರಿತ ನಿರ್ದೇಶನದಲ್ಲಿ ಇವು ಕೆಮ್ತೂರು ನಾಟಕ ಸ್ಪರ್ಧೆಯಲ್ಲೂ ಇತರೆಡೆ ಪ್ರಯೋಗದಲ್ಲೂ ಸಹೃದಯಿ ಪ್ರೇಕ್ಷಕರಿಗೆ ಗಾಢ ಪರಿಣಾಮವನ್ನೇ ಬೀರಿವೆ.

**ಡಾ। ಕಾತ್ಯಾಯಿನಿ ಕುಂಜಿಬೆಟ್ಟು** ಇದೇ ಹಾದಿಯಲ್ಲಿ ಮುಂದುವರಿದಿದ್ದಾರೆ. ಸ್ಪರ್ಧಾ ನಾಟಕಗಳ ತೀರ್ಪುಗಾರರಾಗಿ, ನಾಟಕ, ಚಲನಚಿತ್ರಗಳ ಹಿನ್ನೆಲೆ ಗಾಯಕಿಯಾಗಿ, ನಾಟಕ ವಿಮರ್ಶೆ, ಅವಲೋಕನ ಕನ್ನಡ ನಾಟಕಗಳ ತುಳು ಅನುವಾದ ಮಾಡುತ್ತಿರುವ ಇವರ ಅನುವಾದಿತ, ಬಹುಮಾನಿತ ನಾಟಕ 'ನಾಗಮಂಡಲ' (ಮೂಲ ಕನ್ನಡ ಗಿರೀಶ್ ಕಾರ್ನಾಡ್) 2014ರಲ್ಲಿ ಉಡುಪಿ ರವೀಂದ್ರ ಕಲಾಮಂಟಪದಲ್ಲಿ ಯಶಸ್ವಿ ಪ್ರಯೋಗವಾಗಿದೆ. ಕೃತಿ ಪ್ರಕಟವಾಗಿದೆ. (ಹಿಂದೊಮ್ಮೆ 80ರ ದಶಕದಲ್ಲಿ ಮೈಮ್ ರಮೇಶರು ಕಾರ್ನಾಡರ ನಾಗಮಂಡಲದ ತುಳು ಪ್ರಯೋಗವನ್ನು ಮಾಡಿದ್ದರು.

**ಡಾ. ಕಾತ್ಯಾಯಿನಿ ಕುಂಜಿಬೆಟ್ಟು ಅವರ ಅನುವಾದಿತ ನಾಟಕ 'ನಾಗಮಂಡಲ' (ಮೂಲ ಕನ್ನಡ : ಗಿರೀಶ್ ಕಾರ್ನಾಡ್) ಉಡುಪಿಯ ಎಂ.ಜಿ.ಎಂ. ರವೀಂದ್ರ ಮಂಟಪದಲ್ಲಿ ಪ್ರಯೋಗ, 2014. ನಿರ್ದೇಶನ : ರವಿರಾಜ್ ಎಚ್.ಪಿ.**

**ಡಾ। ಪಾರ್ವತಿ ಜಿ. ಐತಾಳ್** ಆಂಗ್ಲ ಭಾಷೆಯಿಂದ 'ಆ ಇಲ್ಲ್ ದಾಯೆ', 'ಬಿನ್ನೆ' ಅನುವಾದಿಸಿ ಪ್ರಕಟಿಸಿದ್ದಾರೆ.

ವೀರರಾಣಿ ಅಬ್ಬಕ್ಕ ಪ್ರಶಸ್ತಿ ವಿಜೇತ ಸಾಹಿತಿ, ಸಾಮಾಜಿಕ ಕಾರ್ಯಕರ್ತೆ **ಶೀಲಾ ಕೆ. ಶೆಟ್ಟಿ ಎರ್ಮಾಳು** – ಮುಗಲ್ ತೆಲಿನಗ (2 ನಾಟಕಗಳು) – 2011, ನಳ ದಮಯಂತಿ – 2013 ಮುಂತಾದ ನಾಟಕಗಳನ್ನು ಬರೆದವರು. ಸ್ಥಳೀಯ ಮಹಿಳಾ ಸಂಘಟನೆಗಳ ವಾರ್ಷಿಕೋತ್ಸವ ವೇಳೆ ಇವುಗಳ ರಂಗಪ್ರಯೋಗ ನಡೆಸಿದ್ದಾರೆ.

# ರಂಗನಟಿಯರು

ತುಳು ರಂಗನಟಿಯರಲ್ಲಿ ಆದ್ಯ ಹೆಸರು ಯಶೋಧರಾ ದೇವಿಯವರದು. ಮೊದಲು ರಮಾನಂದ ಚೂರ್ಯ, ಕೆಮ್ತೂರರ, ಬಳಿಕ ಟೇಲರರ ನಾಟಕಗಳಲ್ಲಿ ಯಶೋದರಾದೇವಿ ಮತ್ತು ಯಶೋಧ ಇವರು 50ರ ದಶಕದಿಂದಲೇ ಸುಮಾರು ಇಪ್ಪತ್ತೈದು ವರ್ಷ ಕಾಲ ಕನ್ನಡ, ತುಳು ನಾಟಕಗಳಲ್ಲಿ ಅಭಿನಯಿಸಿದರು. ಲಕ್ಷ್ಮೀ ದೇಶಪಾಂಡೆ, ಬೇಬಿ ವಿನ್ನಿ ಫೆರ್ನಾಂಡಿಸ್ ಮುಂತಾದ ಮಹಿಳೆಯರು ಅಭಿನಯಕ್ಕಿಳಿದರು. ಸುಮಾರು ಎಂಬತ್ತರ ದಶಕದ ಹೊತ್ತಿಗೆ ತುಳುನಾಟಕಗಳಲ್ಲಿ ಸ್ತ್ರೀಪಾತ್ರ ವಹಿಸಲು ಮುಂದಾದವರು ಮಂಗಳೂರಿನ ಮಹಿಳೆಯರೇ. ಯಶೋಧ ಇವರು ಮುಂದೆ ತಮಿಳುನಾಡಿಗೆ ಹೋದರು. ರೂಪಾ ಅತ್ತಾವರ, ಜಯಶೀಲಾ, ರೋಹಿಣಿ ಜಗರಾಂ, ಶಶಿಕಲಾ, ಪಿ. ಸರೋಜಿನಿ ಶೆಟ್ಟಿ, ವೀಣಾ ಎಂ. ಶಕ್ತಿನಗರ, ಶಾಲಿನಿ, ಮೀರಾ ಕುಮುದಾ ಬಾರ್ಕೂರು, ಪ್ರಮೀಳಾ ಬೆಂಗ್ರೆ (ಇವರೀಗ ನೀನಾಸಂ ತಂಡದಲ್ಲಿದ್ದಾರೆ), ಶೋಭಾ ಶೆಟ್ಟಿ, ವಸಂತಿ ಪೂಜಾರ್ತಿ, ಅವರ ಪುತ್ರಿಯಾದ ಸುಮನಾ ಮಂಗಳೂರು, ಲೀನಾ ಗೋವಿಯಸ್, ಗೀತಾ ಸುರತ್ಕಲ್, ಶಾಲಿನಿ ಉಮೇಶ್, ಚಿತ್ರಾಂಜಲಿ (ವೇದಾ ಅಂಚನ್), ಲಕ್ಷ್ಮೀ ದೇವಿನಾರಾಯಣ್, ಮಂಜುಳಾ (ಈಗ ವಿವಿಧ ವೃತ್ತಿನಾಟಕ ತಂಡಗಳಲ್ಲಿದ್ದಾರೆ), ಮಂಜುಳಾ ಶೆಟ್ಟಿ, ಸುಜಾತಾ ಸುವರ್ಣ ಬೆಳ್ಳೆ, ಅನುರಾಧಾ, ದಯಾಮಣಿ, ದಿವ್ಯಾರಾಣಿ, (ಮುಂದೆ ದೂರದರ್ಶನ ಕಲಾವಿದೆಯಾದ) ಉಷಾ ಭಂಡಾರಿ, ಜಯಶ್ರೀ, ಶೈಲಜಾ, ಅನಿಶಾ ಕುಲಾಲ್, ಮರಾಠಿಗರಾಗಿಯೂ ತುಳು ನಟಿಯಾದ ದೀಪಾಲಿ ಕಂಬದ ಕೋಣೆ, ಫಿಲೋಮಿನಾ, ವೈಲೆಟ್ ಡಿಸೋಜ, ಸುಜಾತಾ ಕುಲಶೇಖರ್ ಮತ್ತು ಸ್ವತಃ ನಾಟಕ ತಂಡ ಕಟ್ಟಿದ ನಾಟಕಕರ್ತೆ, ನಟಿ ಆಶಾ ನಾಗೋರಿ – ಮತ್ತಿತರರು ಮೊದಮೊದಲ ಸಾಲುಗಳಲ್ಲಿ ಗುರುತಿಸಿಕೊಂಡ ಕಲಾಸೇವಕರು.

ತುಳು ರಂಗನಟಿಯರಲ್ಲಿ ಆದ್ಯ ಹೆಸರು ಯಶೋಧರಾ ದೇವಿಯವರದು. ಕೆಮ್ತೂರು ದೊಡ್ಡಣ್ಣ ಶೆಟ್ಟರ ಕೆಲವು ಪ್ರದರ್ಶನಗಳಲ್ಲಿ, ಕೆ.ಎನ್. ಟೇಲರರ ಬಹುಪಾಲು ನಾಟಕಗಳ ಸಹಸ್ರಾರು ಪ್ರದರ್ಶನಗಳಲ್ಲಿ ಮಾತ್ರವಲ್ಲದೆ ಸಮಕಾಲೀನ ಖ್ಯಾತ ನಾಯಕ ನಾಟಕಗಳಲ್ಲಿ ಪಾತ್ರವಹಿಸಿದವರು.

### ಯಶೋಧರಾದೇವಿ (1938)

ತುಳು ರಂಗನಟಿಯರಲ್ಲಿ ಆದ್ಯ ಹೆಸರಾಗಿ ತಿಳಿದು ಬರುವುದು ಯಶೋಧರಾ ಇವರ ಬಗ್ಗೆ. ಇವರು ಪ್ರಸಿದ್ಧರಾದುದು ಕೆ.ಎನ್. ಟೇಲರರ ಜತೆ ಪಾತ್ರ ನಿರ್ವಹಣೆ ಕಾಲದಿಂದ. ಆದರೆ ಅದಕ್ಕೂ ಬಹಳ ಮೊದಲು ಅವರು ರಮಾನಂದ ಚೂರ್ಯರ ಕನ್ನಡ ನಾಟಕಗಳಲ್ಲಿ ಪಾತ್ರ ಮಾಡುತ್ತಿದ್ದರು. 'ವನ್ ಬೈಟೂ', 'ನಗದೆ ತಗಾದೆ' ಈ ನಾಟಕಗಳಲ್ಲಿ ಯಶೋಧರಾ ಹೀರೋಯಿನ್ ಪಾತ್ರ. ಮುಂದೆ ಉಡುಪಿಯ ಕೆಮ್ತೂರು

ದೊಡ್ಡಣ್ಣ ಶೆಟ್ಟರ ಕೆಲವು ತುಳುನಾಟಕಗಳಲ್ಲೂ ಅತಿಥಿ ಕಲಾವಿದೆಯಾಗಿ ಅಭಿನಯಿಸಿದಂತೆ ಮಾಹಿತಿಯಿದೆ.

ಉರ್ವದ ಏಕಾನಂದ ಮಾಸ್ತರರ 'ಎನ್ನ ಮೈತಿದಿ' ನಾಟಕದಲ್ಲಿ ಕೆ.ಎನ್. ಟೇಲರ್, ಯಶೋಧರಾ ಗಂಡ-ಹೆಂಡತಿಯಾಗಿ ಅಭಿನಯಿಸಿದ್ದರು.

ಯಶೋಧರಾ ಅವರು ಟೇಲರರ ನಾಟಕ ಪಾತ್ರಕ್ಕೆ ಮೊದಲಾಗಿ ಬಂದುದು 'ತಮ್ಮಲೆ ಅರ್ವತ್ತನ ಕೋಲ'ಕ್ಕೆ. 'ಗಣೇಶ ನಾಟಕ ಸಭಾ'ದ ಜೆ. ಸೀತಾರಾಮ ಶೆಟ್ಟರೆನ್ನುವಂತೆ ಆಗ ಅವರಿಗೆ 25-27 ವಯಸ್ಸಿರಬಹುದು. ತುಂಬ ಸುಂದರ, ಘನತೆಯ ಮಹಿಳೆ. ಟೇಲರ್, ಕಿರೋಡಿಯನ್ ಮುಂತಾದ ಪ್ರಮುಖರ ಹಲವಾರು ನಾಟಕಗಳಲ್ಲಿ ಸುಮಾರು ಎರಡು ದಶಕ ಅಭಿನಯಿಸಿದರು. ಮುಂದೆ ಮಂಗಳೂರು ಕೆ.ಎಂ.ಸಿ.ಯ ವೈದ್ಯಕೀಯ ಕಲಿತ ತಮಿಳರೊಬ್ಬರನ್ನು ಮದುವೆಯಾಗಿ ತಮಿಳ್ನಾಡಿಗೆ ಸ್ಥಳಾಂತರಗೊಂಡರು. ಆ ಬಳಿಕವೂ ಎರಡು ಮಕ್ಕಳಾದ ಮೇಲೆ ಮಂಗಳೂರು ಭಾಗಕ್ಕೆ ಬರುವುದಿದ್ದರೆ ಫೋನ್ ಮಾಡಿ ಬಂದು 'ವುಡ್‌ಲ್ಯಾಂಡ್ಸ್' ಅಥವಾ 'ಗಣೇಶ ಮಹಲಿ'ನಲ್ಲಿ ನಮ್ಮ ತಂಡವನ್ನು ಭೇಟಿಯಾಗಿ ಕುಶಲ ವಿಚಾರಿಸಿ ಹೋಗುತ್ತಿದ್ದರು. ಮುಂದೆ ತೀರಿದರು. ಇದ್ದಿದ್ದರೆ ಈಗ 80ರ ಮೇಲಿನ 'ವಯಸ್ಸು' ಎನ್ನುತ್ತಾರೆ ಜೆ. ಸೀತಾರಾಮ ಶೆಟ್ಟರು. ಅತ್ಯಂತ ಪ್ರತಿಭಾವಂತ ಕಲಾವಿದೆಯಾಗಿದ್ದ ಇವರು ಸಾವಿರಾರು ತುಳುನಾಟಕ ಪ್ರದರ್ಶನಗಳಲ್ಲಿ ಅಲ್ಲದೆ ಮಲಯಾಳಂ, ಕನ್ನಡ ಮುಂತಾದ ಭಾಷೆಗಳಲ್ಲೂ ನಟಿಸಿದವರು ಎಂದು ನಟ ರೋಹಿದಾಸ್ ಕದ್ರಿ ತಮ್ಮ ನೆನಪುಗಳನ್ನು ತಿಳಿಸಿದ್ದಾರೆ.

60-70ರ ದಶಕದಲ್ಲಿ ಟೇಲರರ ನಾಟಕ ತಂಡದಲ್ಲಿ ಇಬ್ಬರು ಹೆಸರಾದ ಯಶೋದಾ ರಿದ್ದರು. ಓರ್ವರು ಯಶೋಧರಾ ದೇವಿ ಅವರು ಹೆಚ್ಚಾಗಿ ಕನ್ನಡ ನಾಟಕಗಳಲ್ಲಿ ಅಭಿನಯಿಸಿ ಬಳಿಕ ತುಳು ನಾಟಕಗಳಲ್ಲೂ ಅಭಿನಯಿಸಿದ್ದರು. ಇನ್ನೋರ್ವರು ಇದೇ ಯಶೋದಾ 'ದಿವ್ಯವಾಣಿ' ಸಂಪಾದಕ ('ಕುಂಟೆರಾಮೆ' ನಾಟಕ ಖ್ಯಾತಿ) ರವಿಕುಮಾರ್ ತಾಯಿ. ನಾಟಕರಂಗದಲ್ಲಿ ಒಂದೇ ಹೆಸರಿನ ಗೊಂದಲ ಬೇಡವೆಂದು ಕಡೆಗೆ ರವಿಕುಮಾರ್‌ರ ತಾಯಿಗೆ ಗಣೇಶ್ ನಾಟಕ ತಂಡದ ಅಭಿನಯದ ವೇಳೆಗೆ ಯಶೋದಾರಿಗೆ ಶಾರದ ಎಂಬುದಾಗಿ ಬದಲಿ ಹೆಸರಿಟ್ಟರಂತೆ. ಇವರು ಕೂಡ 50ರ ದಶಕದಿಂದ 90ರ ದಶಕದವರೆಗೂ ಸುದೀರ್ಘ ಕಾಲ ಸಾವಿರಾರು ಕನ್ನಡ, ತುಳು ನಾಟಕಗಳಲ್ಲಿ ಅಭಿನಯಿಸಿದ್ದ ಮಂಗಳೂರಿನ ಹಿರಿಯರು.

**ರೋಹಿಣಿ ಜಗರಾಂ (1948)**

ಬಾಲ್ಯದಿಂದಲೇ ಸಂಗೀತ, ನೃತ್ಯಗಳಲ್ಲಿ ಅಭಿರುಚಿ, ನೈಪುಣ್ಯವಿದ್ದ ಮಂಗಳೂರಿನ ರೋಹಿಣೀ ಜಗರಾಮ್ ಆರ್ಕೆಸ್ಟ್ರಾಗಳಲ್ಲಿ ಗಾಯನ, ಸಾಂಸ್ಕೃತಿಕ ಉತ್ಸವಗಳ ವೇಳೆ ಶಾಸ್ತ್ರೀಯ ನೃತ್ಯ ಮಾಡುತ್ತಿದ್ದವರು. ದಿ। ರಮಾನಂದ ಚೂರ್ಯರ 'ಹೌದಾದ್ರೆ ಹೌದೆನ್ನಿ' ಕನ್ನಡ ನಾಟಕದ ಮೂಲಕ ರಂಗನಟಿಯಾಗಿ ಪ್ರವೇಶ.

ಕೆ.ಎನ್. ಟೇಲರ್, ವಸಂತ ಕದ್ರಿ, ಪಾಂಡೇಶ್ವರರ ನಾಟಕಗಳಿಂದ ತೊಡಗಿ ದೇವದಾಸ್ ಕಾಪಿಕಾಡ್, ವಿಜಯಕುಮಾರ್ ಕೊಡಿಯಾಲ್‌ಬೈಲ್‌ರವರೆಗಿನ ದೊಡ್ಡ ಹರವಿನ ತಲೆಮಾರುಗಳ ನಾಟಕಗಳಲ್ಲಿ ವಿಶಿಷ್ಟ ಅಭಿನಯ ನೀಡಿದವರು. ಶ್ರೀಕೃಷ್ಣದೇವರಾಯ, (ಭೂಮಿಕಾದ) ಚಕ್ರವ್ಯೂಹ, ಹೌದಾದ್ರೆ ಹೌದೆನ್ನಿ, ಏರೆನ್ಲಾ ನಂಬೊಡ್ಚಿ, ಕಂಡನೆ ಬುಡೆದಿ, ಗಂಟೇತಾಂಡ್? ಈರ್ ದೂರ? ಮೋಲು ದಾನೆ ಮುಪ್ಪತ್ತಾಜಿ?, ಪನಿಯರೆ ಪೋಂಡ ಮಸ್ತುಂಡು, 'ಒರಿಯರ್ದೊರಿ ಅಸಲ್', ಒರಿಯೆ ಮಗೆ, 'ಅಸಲ್ ಏರ್?' ಮುಂತಾದ ನೂರಕ್ಕೂ ಮಿಕ್ಕ ಕನ್ನಡ, ತುಳು ನಾಟಕಗಳ ಒಳನಾಡು, ಹೊರನಾಡಿನ 1200ರಷ್ಟು ಪ್ರದರ್ಶನಗಳಲ್ಲಿ ಪಾತ್ರವಹಿಸಿದವರು. ಇತ್ತೀಚಿನ 'ಒಂದು ಮೊಟ್ಟೆಯ ಕತೆ'ಯಂತಹ ಹಲವು ಪ್ರಸಿದ್ಧ ಕನ್ನಡ ಚಿತ್ರಗಳ ನಟಿಯೂ ಆಗಿದ್ದಾರೆ. 2004ರಲ್ಲಿ ತುಮಕೂರು ಚಿಕ್ಕನಾಯ್ಕನ ಹಳ್ಳಿಯಲ್ಲಿ ಟೇಲರರ 'ಕಂಡನೆ ಬುಡೆದಿ' ನಾಟಕದ ಆಂಶಿಕ ಭಾಗ ಪ್ರದರ್ಶನ ವೇಳೆ (ಅಭಿನಯ : ವಿ.ಜಿ. ಪಾಲ್, ರೋಹಿಣಿ ಜಗರಾಮ್ ಹಾಗೂ ಈ ಲೇಖಕ) ಕನ್ನಡದ ಅಪಾರ ಪ್ರೇಕ್ಷಕರನ್ನು ನಡೆಗಡಲಲ್ಲಿ ತೇಲಿಸಿ ಚಪ್ಪಾಳೆ ಗಿಟ್ಟಿಸಿದವರು.

ರೋಹಿಣಿಯವರು ನಾಟಕ ರಂಗದ ಹಿನ್ನೆಲೆ ಗಾಯಕಿಯಾಗಿ ಹಾಗೂ ಸಂಗೀತ ರಸಮಂಜರಿಗಳಲ್ಲಿ ಹಾಡಿದ ಸುಮಾರು 50ರಷ್ಟು ಕ್ಯಾಸೆಟ್, ಸಿಡಿಗಳಾಗಿವೆ. ಸುಮಾರು 40 ವರ್ಷಗಳ ಇವರ ಕಲಾಸೇವೆಗೆ ಅಬ್ಬಕ್ಕ ಪ್ರಶಸ್ತಿಯಂತಹ ಹಲವು ಪುರಸ್ಕಾರಗಳು ಸಂದಿವೆ. ಇವರ ಇಡಿಯ ಪರಿವಾರವೇ ಸಂಗೀತ ಕ್ಷೇತ್ರದಲ್ಲಿದ್ದು ಮಕ್ಕಳಾದ, ವೀಣಾ, ವಿನುತಾ ಹಾಗೂ ನಯನಾ ಕೂಡಾ ಗಾಯಕಿಯರಾಗಿರುವರು.

**ಸರೋಜಿನಿ ಶೆಟ್ಟಿ**

ಪ್ರಸಿದ್ಧ ರಂಗನಟಿ ಹಾಗೂ ಚಲನಚಿತ್ರ ಕಲಾವಿದೆಯಾಗಿ ಎವರ್‌ಗ್ರೀನ್ ಎನಿಸಿರುವ ಮಂಗಳೂರಿನ ಸರೋಜಿನಿ ಶೆಟ್ಟಿ, ಕೆ. ಎನ್. ಟೇಲರರ 'ವಿಶ್ವಾಮಿತ್ರ ಮೇನಕ' ನಾಟಕದ 'ಮೇನಕ' ಪಾತ್ರದ ಮೂಲಕ ಸಾರ್ವಜನಿಕ ರಂಗವೇದಿಕೆಗೆ 1980ರ ವೇಳೆಗೆ ತುಳು ರಂಗಭೂಮಿಗೆ ಅಡಿಯಿಟ್ಟುದಾದರೂ ಮೊದಲು ಕನ್ನಡ ನಾಟಕಗಳು. ಬಿ.ವಿ. ಕಾರಂತರ 'ಚೋಮನ ದುಡಿ' ಚಲನಚಿತ್ರದಲ್ಲಿ ಪಾತ್ರ ವಹಿಸಿ ಮುಂದೆ ತುಳುನಾಟಕಕ್ಕೆ ಬಂದರು. ಮೂಲ ಹೆಸರು 'ಶರ್ವಾಣಿ'. ಕೊಂಚಾಡಿಯ ಶ್ರೀರಾಮಾಶ್ರಮ ಹಿ.ಪ್ರಾ. ಶಾಲೆಯಲ್ಲಿ 11ರ ಪ್ರಾಯದಲ್ಲಿ 'ಮಲ್ಲಿ ಮದುವೆ' ಕನ್ನಡ ನಾಟಕಕ್ಕಾಗಿ ಮೊದಲು ಬಣ್ಣ

ಹಚ್ಚಿದ್ದು. ಮುಂದೆ ಪ್ರತಿವರ್ಷ ಶಾರದೋತ್ಸವದ ನಾಟಕಗಳಲ್ಲಿ ಹೆಚ್ಚಾಗಿ ಮೈನ್‌ರೋಲ್. ಮೊದಮೊದಲು ಪುರುಷ ಪಾತ್ರ ಮಾಡಿದ್ದು. ಟೇಲರರ ವಿಶ್ವಾಮಿತ್ರ ಮೇನಕ, ಕಂಡನೆ–ಬುಡೆದಿ, ಕೆ. ಬಿ. ಭಂಡಾರಿಯವರ 'ಉಳ್ಳಾಲದ ರಾಣಿ ಅಬ್ಬಕ್ಕ', 'ಬಂಗಾರ್ ಬಾಲೆ', 'ಪಂಥ', ಮುಂತಾದ ನಾಟಕಗಳ ಕಥಾನಾಯಕಿ ಪಾತ್ರಗಳು ಸರೋಜಿನಿಯವರಿಗೆ ಅಪಾರ ಜನಪ್ರಿಯತೆಯನ್ನು ತಂದುಕೊಟ್ಟವು. 1988ರಲ್ಲಿ ಕೆ.ಎನ್. ಟೇಲರರ ತಂಡ ಅಬುಧಾಬಿಗೆ ಹೋಗಿ 'ಕಂಡನೆ ಬುಡೆದಿ' ನಾಟಕ ಪ್ರದರ್ಶಿಸಿದಾಗ ಅಭಿನಯಿಸಿದವರಲ್ಲಿ ಸರೋಜಿನಿ ಶೆಟ್ಟಿ ಓರ್ವರು. ಬೆಹರಿನ್, ಮಸ್ಕತ್, ದುಬ್ಯಾ ಹೀಗೆ ಅನೇಕ ಕೊಲ್ಲಿರಾಷ್ಟ್ರಗಳ ರಂಗಸಂಚಾರಗಳಲ್ಲೂ ಪ್ರೇಕ್ಷಕರ ಮನಸೂರೆಗೊಂಡರು.

ಮಚ್ಚೇಂದ್ರನಾಥ ಪಾಂಡೇಶ್ವರರ 'ಪೊರ್ತುಗ ಕಂತ್‌ಂಡ್', ಸೋಮಶೇಖರ ಪುತ್ರನ್ ನಿರ್ದೇಶನದ ನಾಟಕಗಳು, ಕುಲಾಲ್‌ರ ಐತಿಹಾಸಿಕ ನಾಟಕಗಳು, ಕೃಷ್ಣಪ್ಪ ಉಪ್ಪೂರರ 'ನಂಬುಲೆ–ನಂಬಾದ್ ಕೊರ್ಪೆ', ದೇವದಾಸ್ ಕಾಪಿಕಾಡ್‌ರ 'ಗಂಟೇತಾಂಡ್?', 'ಈರ್ ದೂರ?', ದಾಮೋದರ ಬಂಗೇರರ 'ಕರೆಂಟ್ ಪೋಂಡು' – ಮುಂತಾದ ನಾಟಕಗಳಲ್ಲಿ ಸರೋಜಿನಿ ಶೆಟ್ಟರದು ಅವಿಸ್ಮರಣೀಯ ಪಾತ್ರನಿರ್ವಹಣೆ. ಹಿಂದೆ ಆರ್. ಕೆ. ಉಳ್ಳಾಲ್, ಜೆ. ರವೀಂದ್ರ ಮತ್ತಿತರ ಹಿರಿಯ ನಿರ್ದೇಶಕರ ಅನೇಕ ನಾಟಕಗಳಲ್ಲೂ ಅಭಿನಯಿಸಿದ್ದರು. ಆಕಾಶವಾಣಿಯ ಉನ್ನತಶ್ರೇಣಿಯ ನಾಟಕ ಕಲಾವಿದೆಯಾಗಿ ಅಪಾರ ಶ್ರೋತೃಗಳಿಗೆ ಪರಿಚಿತೆ. ಕಿಶೋರ್ ಡಿ. ಶೆಟ್ಟರ ಶ್ರೀಲಲಿತೆ ತಂಡದ 'ಕಟೀಲ್ದಪ್ಪೆ ಉಳ್ಳಾಲ್ದಿ' 'ಕತೆಯ ಕುದುರುದ ಸಿರಿ'ಯ (ರಚನೆ: ಕದ್ರಿ ನವನೀತ ಶೆಟ್ಟಿ, ನಿರ್ದೇಶನ: ಜೀವನ್ ಉಳ್ಳಾಲ್) 'ಶ್ರೀದೇವಿ'ಯ ಪಾತ್ರದ ಅಭಿನಯವಂತೂ ಮನೋಜ್ಞ ಈ ನಾಟಕದ 300ಕ್ಕೂ ಮಿಕ್ಕ ಪ್ರದರ್ಶನಗಳಲ್ಲಿ ಪಾತ್ರ ಮಾಡಿದ ಸರೋಜಿನಿ ತುಳು ಚಿತ್ರರಂಗದ ಖ್ಯಾತ ಅಭಿನೇತ್ರಿ ಕೂಡಾ ಆಗಿರುವರು.

**ಜಯಶೀಲಾ (1956)**

ಹಿರಿಯ ತಲೆಮಾರಿನಿಂದ ಹಿಡಿದು ಇಂದಿನ ಹಾಸ್ಯ ನಾಟಕಗಳ ಉದ್ದಕ್ಕೂ ತಲೆಮಾರುಗಳ ಕೊಂಡಿಯಾಗಿ ಪ್ರಮುಖ ಪೋಷಕನಟಿಯಾಗಿ ನಿರಂತರ ರಂಗಸಾಧನೆ ಶ್ರೀಮತಿ ಜಯಶೀಲಾ ಮರೋಳಿ ಇವರದು. ಕಡು ಬಡತನದ ಹಿನ್ನೆಲೆಯಿಂದಾಗಿ ಕಲಾಸಕ್ತಿ ಇದ್ದುದರಿಂದ ತನ್ನ 17ರ ಹರೆಯದಲ್ಲಿ 1972ರಲ್ಲಿ ಹೊಟ್ಟೆಪಾಡಿಗಾಗಿ ಆರ್. ನಾಗರತ್ನಮ್ಮ ಅವರ ಸಂಚಾಲಕತ್ವದ 'ಸ್ತ್ರೀ ನಾಟಕ ಮಂಡಳಿ'ಯಲ್ಲಿ ಅಭಿನಯಿಸುತ್ತಾ ಮುಂದೆ ರಾಜು ಬಿ. ತೋನ್ಸೆ, ರಂಗತರಂಗ ಮುಂತಾದ ವೃತ್ತಿನಾಟಕ ತಂಡಗಳ ಸಾವಿರಾರು ಪ್ರದರ್ಶನಗಳಲ್ಲಿ ನಟಿಸಿ ಇಂದಿಗೂ ತನ್ನ ಸಹಜ ಪ್ರತಿಭೆಯೊಂದಿಗೆ ಕ್ರಿಯಾಶೀಲರಾಗಿರುವರು.

ಸ್ತ್ರೀ ನಾಟಕ ಮಂಡಳಿಯನ್ನು ಅದರ ಮಂಗಳೂರು ಕ್ಯಾಂಪ್‌ನ ವೇಳೆ 1974ರಲ್ಲಿ ತೊರೆದರು. ಆಗ ಕೆ. ಎನ್. ಟೇಲರ್‌ರ 'ಕಾಸ್‌ದಾಯೆ ಕಂಡನೆ' ಚಿತ್ರದಲ್ಲೊಂದು ಸಣ್ಣ ಪಾತ್ರ ದೊರೆಯಿತು. ಅನಂತರ ಟೇಲರ್ ತನ್ನ 'ವಿಶ್ವಾಮಿತ್ರ – ಮೇನಕಾ' ನಾಟಕದಲ್ಲಿ ಜಯಶೀಲಾರಿಗೆ ಮೇನಕೆಯ ಪಾತ್ರ ನೀಡಿದರು. ಅಂದಿನಿಂದ ಟೇಲರರ 'ಶ್ರೀ ಗಣೇಶ ನಾಟಕ ಸಭಾ'ದ ಖಾಯಂ ಕಲಾವಿದೆಯಾದರು. ತನ್ನ 10ನೇ ತರಗತಿ ಕಲಿಕೆಯ ವೇಳೆ 'ಧನೇಶ್ವರ' ಎಂಬ ಮೂಲ ಹಿಂದಿ ನಾಟಕದಲ್ಲಿ ಪಾತ್ರವಹಿಸಿದ ಇವರು ಟೇಲರರ 'ಏರೆನ್ಲಾ ನಂಬೊಡ್ಚಿ' ನಾಟಕದ ಪ್ರಥಮ ಪ್ರಯೋಗದಲ್ಲಿ ಕಥಾನಾಯಕಿ. ಅನಂತರ ಹೆಚ್ಚಾಗಿ ಮಾಡಿದ್ದು ಹಾಸ್ಯ ಪಾತ್ರ. 'ಗಣೇಶ ನಾಟಕ ಸಭಾ'ದಲ್ಲಿ 'ನಾನು ಜಯಮಾಲಾ, ರತ್ನಮಾಲಾ ಜೊತೆಯಲ್ಲೇ ಅಭಿನಯಿಸಿದ್ದೆವು. ಕನ್ನಡ ಚಿತ್ರದಲ್ಲಿ ಅವಕಾಶ ಸಿಕ್ಕಿದ್ದರಿಂದ ಜಯಮಾಲಾ, ರತ್ನಮಾಲಾ ಬೆಳಗಾಂ ಕ್ಯಾಂಪ್ ವೇಳೆ ನಮ್ಮ ಸಂಸ್ಥೆ ತೊರೆದರು. ನಾನು ಉಳಿದುಕೊಂಡೆ' ಎನ್ನುತ್ತಾರೆ ಜಯಶೀಲ.

ಟೇಲರ್‌ರು ಸಿನಿಮಾ ಚಿತ್ರೀಕರಣ ಮಾಡುತ್ತಿದ್ದಾಗ ದೊರೆತ ಬಿಡುವಿನಲ್ಲಿ ಜಯಶೀಲ ಬೇರೆ ಬೇರೆ ನಾಟಕ ತಂಡಗಳಲ್ಲಿ ಪಾತ್ರ ವಹಿಸಿದರು. ಮೂಡಬಿದ್ರೆ ಶ್ಯಾಮ್ ಅಂಚನ್‌ರ 'ಕೆಸರ್ದ ಒಸರ್' ಕೆ.ಜೆ. ಕೊಕ್ರಾಡಿಯವರ 'ಕಾವೇರಿ', ಪಾಂಡೇಶ್ವರರ ನಾಟಕಗಳು, ಹಾಗೆಯೇ ಪುತ್ತೂರು, ಉಪ್ಪಿನಂಗಡಿ, ಕುಂದಾಪುರ ಉಡುಪಿ, ಕಳಸ, ಬೈಂದೂರಿನ ವರೆಗಿನ ತಂಡಗಳಲ್ಲಿ. ಸ್ತ್ರೀನಾಟಕ ಮಂಡಳಿ ಮತ್ತು ಕೆ. ಎನ್. ಟೇಲರರ ನಾಟಕಗಳ ಮೂಲಕ ಇಡೀ ಕರ್ನಾಟಕದ ಮೂಲೆ ಮೂಲೆ ಅಲ್ಲದೆ ಆಂಧ್ರ, ಬೊಂಬಾಯಿ, ಚೆನ್ನೈ, ಗೋವೆ, ದೆಹಲಿ, ರಾಯಚೂರು, ಚಡಚಣ ಮುಂತಾದ ನಗರಗಳಲ್ಲಿ ರಂಗಭೂಮಿಯಲ್ಲಿ ಅಭಿನಯಿಸಿದ ಹಿರಿಮೆ ಇವರದು.

'ನಾಯಕಿ'ಯ ಪಾತ್ರದಿಂದ ಈಗ ಅಜ್ಜಿ ಪಾತ್ರಕ್ಕೆ ಮುಟ್ಟಿದ್ದೇನೆ' ಎಂದು ತಮಾಷೆಯಾಗಿ ಹೇಳುವ ಈಕೆ ವಿಜಯಕುಮಾರ್ ಮಂಜೇಶ್ವರ್ ಇವರ 'ಉಂದುವಾ ನಿನ್ನ ಸಮಾಜ?', ಕೆ.ಜೆ. ಕೊಕ್ರಾಡಿಯವರ 'ಕಾವೇರಿ' ಇವುಗಳಲ್ಲದೆ 'ಪೂಜೆಗಾವಂದಿ ಪೂ', 'ರಾಣಿ ಅಬ್ಬಕ್ಕ', 'ಪರಬನ ಬೊಡೆದಿ', ಕೆ. ಬಿ. ಭಂಡಾರಿಯವರ 'ರಾಜನಂದಿನಿ', ಟೇಲರರ 'ಏರೆನ್ಲಾ ನಂಬೊಡ್ಚಿ', ಕೊಡಿಯಾಲ್‌ಬೈಲ್‌ರ 'ಒರಿಯರ್ದೊರಿ ಅಸಲ್'ನ ಶಾಂತಕ್ಕ – ಇವೇ ಮುಂತಾದ ನಾಟಕದ ಪಾತ್ರಗಳು ಪ್ರೇಕ್ಷಕರ ಮನದಲ್ಲಿ ಹಸಿರಾಗಿರುವಂತೆ ಈ ಕಲಾವಿದೆಗೂ ತೃಪ್ತಿ ನೀಡಿದವುಗಳು. ಈಕೆ ಚಲನಚಿತ್ರ ಮತ್ತು ಆಕಾಶವಾಣಿ ಕಲಾವಿದೆಯೂ ಆಗಿರುವರು.

### ಲೀನಾ ಗೋವಿಯಸ್

ಸ್ಥಳೀಯವಾಗಿ ಹತ್ತಾರು ನಾಟಕಗಳಲ್ಲಿ ಅಭಿನಯಿಸಿದ ಉಜಿರೆ ಕಾಲೇಜಿನ ಹಳೆಯ ವಿದ್ಯಾರ್ಥಿನಿ ಲೀನಾ ಗೋವಿಯಸ್, ಕೆ.ಬಿ. ಭಂಡಾರಿಯವರ 'ಬಂಗಾರ್ ಬಾಲೆ' ನಾಟಕದ 'ರಾಧಾ–ಬಂಗಾರ್ ಬಾಲೆ'ಯಾಗಿ ಅಮೋಘವಾಗಿ ನಟಿಸಿ ತುಳು ನಾಟಕ

ರಂಗದಲ್ಲಿ ಪ್ರೇಕ್ಷಕರ ಅಪಾರ ಮೆಚ್ಚುಗೆಗೆ ಪಾತ್ರರಾದರು. ನೃತ್ಯದ ಹಿನ್ನೆಲೆಯೂ ಇದ್ದ ಈಕೆ ಕೋಟಿಚನ್ನಯ, ಉಡಲ್ದ ತುಡರ್, ಬಯ್ಯಮಲ್ಲಿಗೆ, ಯಾನ್ ಸನ್ಯಾಸಿ ಆಪೆ, ಚೋಮನ ದುಡಿ ಮುಂತಾದ ಚಲನಚಿತ್ರಗಳಲ್ಲೂ ಅಭಿನಯಿಸಿ 70–80ರ ದಶಕದಲ್ಲಿ ರಂಗಭೂಮಿಯಲ್ಲಿದ್ದು ನೂರಾರು ತುಳು, ಕನ್ನಡ ನಾಟಕಗಳಲ್ಲಿ ನಟಿಸಿ ಮುಂದೆ ಬೆಂಗಳೂರು ವಾಸಿಯಾದರು.

**ಚಿತ್ರಾಂಜಲಿ (ವೇದಾ ಜೆ. ಅಂಚನ್) (1954)**

ಬಾಲ್ಯದಲ್ಲಿ 6ನೇ ವಯಸ್ಸಿನಲ್ಲಿ ಮುಂಬೈಯಲ್ಲಿ (ತಂದೆ ಉದ್ಯೋಗದಲ್ಲಿದ್ದ) ಕಂಪನಿ ಜಾಹೀರಾತಿನಲ್ಲಿ ತಮ್ಮನೊಂದಿಗೆ ರೂಪದರ್ಶಿಯಾಗಿ ಪಾಲ್ಗೊಂಡವರು. ಮುಲ್ಕಿ ಮೆಡಲಿನ್ ಶಾಲೆಯ 6ನೆ ತರಗತಿಯಲ್ಲಿರುವಾಗ ನೃತ್ಯಗಾತಿಯಾಗಿ ರಂಗಪ್ರವೇಶ. 'ಮುಲ್ಕಿಯ ಅರುಣೋದಯ ಕಲಾವಿಹಾರ ಸಂಸ್ಥೆ'ಯಲ್ಲಿ ಎಸ್.ಆರ್. ಅಂಚನ್‌ರ ಮಾರ್ಗದರ್ಶನದಲ್ಲಿ ಬಾಲನಟಿಯಾಗಿ ರಂಗಭೂಮಿ ಪ್ರವೇಶ ಆ ಬಳಿಕ ಮಂಗಳೂರಿನ 'ಜ್ಯೋತಿಮಿತ್ರ ಕಲಾವೃಂದ'ದ ನಾಟಕಗಳಲ್ಲಿ ಅಭಿನಯ. 1971ರಲ್ಲಿ ಪುತ್ತೂರಲ್ಲಿ ಜರಗಿದ ಜಿಲ್ಲಾ ಮಟ್ಟದ ನಾಟಕಸ್ಪರ್ಧೆಯಲ್ಲಿ ಆರ್.ಕೆ. ಉಳ್ಳಾಲ್ ನಿರ್ದೇಶನದ 'ಬಯ್ಯಮಲ್ಲಿಗೆ'ಯ ನಾಯಕನಟಿ ಪಾತ್ರಕ್ಕೆ ಪ್ರಥಮ ಪ್ರಶಸ್ತಿ. ಮುಂದೆ ಮಂಗಳೂರು ಪುರಭವನದಲ್ಲಿ ಜರಗಿದ ನಾಟಕಸ್ಪರ್ಧೆಯಲ್ಲಿ ಕೆ.ಬಿ. ಭಂಡಾರಿಯವರ 'ರಾಣಿ ಅಬ್ಬಕ್ಕ' ನಾಟಕದ 'ಅಬ್ಬಕ್ಕ' ಪಾತ್ರಕ್ಕೆ ಪ್ರಥಮ ಪ್ರಶಸ್ತಿಯನ್ನು ಡಾ. ಶಿವರಾಮ ಕಾರಂತರ ಹಸ್ತದಿಂದ ಪಡೆದುದು. 'ಬಯ್ಯಮಲ್ಲಿಗೆ', 'ಆರತಿ', 'ಉಂದು ವಾ ಸಮಾಜ?' ಮುಂತಾದ ನಾಟಕಗಳ ಸುಮಾರು 200ಕ್ಕೂ ಮಿಕ್ಕ ಪ್ರದರ್ಶನಗಳಲ್ಲಿ ಅಭಿನಯಿಸಿದ್ದಾರೆ.

1973ರಲ್ಲಿ ಸೀತಾರಾಂ ಕುಲಾಲರ 'ಉಡಲ್ದ ತುಡರ್' ಚಿತ್ರ ಬಳಿಕ ಡಾ. ದಂಡೆಕೇರಿಯವರ 'ಬಯ್ಯ ಮಲ್ಲಿಗೆ' ಚಲನಚಿತ್ರಗಳಲ್ಲಿ ದುರಂತ ನಾಯಕಿ ಪಾತ್ರ ನಿರ್ವಹಣೆ. ಕನ್ನಡದ ಉದಯಕುಮಾರ್ ಜೊತೆ 'ಬೆಟ್ಟದ ಜೀವ' ಚಿತ್ರದ ಪೋಷಕ ನಟಿಯಾಗಿ ಅಭಿನಯಿಸಿದವರು ಮುಂದೆ ವಿವಾಹವಾಗಿ ರಂಗಕ್ಕೆ ವಿದಾಯ ಹೇಳಿದರು.

**ಶಾಲಿನಿ ಉಮೇಶ್ (1951)**

ಶಾಲಿನಿ ಉಮೇಶ್ ಕೂಡಾ 70ರ ದಶಕದಲ್ಲೇ ಕುಲಾಲರ 'ಅಬ್ಬಕ್ಕ' ನಾಟಕದಲ್ಲಿ ಅಭಿನಯಿಸಿ ಹಲವು ವರ್ಷ ರಂಗದಲ್ಲಿ ಸಕ್ರಿಯರಾಗಿದ್ದರು.

**ಡಾ. ಜಯಮಾಲ**

ಪ್ರಸ್ತುತ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವೆಯಾಗಿರುವ ಡಾ. ಜಯಮಾಲ ಅವರು ಪ್ರಸಿದ್ಧ ರಂಗನಟಿ ಮತ್ತು ಚಿತ್ರ ಕಲಾವಿದೆ. ತನ್ನ ಬಾಲ್ಯ ಮತ್ತು ಹದಿಹರೆಯದಲ್ಲಿ ಕೆ.ಎನ್. ಟೇಲರ್ ಮುಂತಾದ ತುಳು ನಾಟಕಕಾರರ ಹಲವು ನಾಟಕಗಳಲ್ಲಿ ಅಭಿನಯಿಸಿದವರು. ಇವರಲ್ಲದೆ ಇವರ ಹಿರಿಯ ಸಹೋದರಿಯರಾದ ಯಶೋದಾ, ರತ್ನಮಾಲಾ ಪುರಂದರ್ ಇವರೂ ಕೂಡ ತುಳು ರಂಗಭೂಮಿಯಲ್ಲಿ ವಿವಿಧ ನೆಲೆಯಲ್ಲಿ ಹೆಸರಾದವರು.

**ವಿನ್ನಿ ಫೆರ್ನಾಂಡೀಸ್**

ತನ್ನ 15ನೆ ವರ್ಷ ವಯಸ್ಸಿನಲ್ಲಿ ಕೆಮ್ತೂರು ದೊಡ್ಡಣ್ಣ ಶೆಟ್ಟರ ತುಳುನಾಟಕ ಮಂಡಳಿಯಲ್ಲಿ ನಾಟಕ ಕಲಾವಿದೆ ಯಾಗಿ ರಂಗ ಪ್ರವೇಶಗೈದಿರುವರು. 2 ವರ್ಷ ಅಲ್ಲಿ ದುಡಿದರು. ಬಳಿಕ ವಿವಿಧ ನಾಟಕತಂಡಗಳ 'ಬಲಿಮೆ', 'ಎನ್ನ ಮೋಕೆದ', 'ದಿಸೆಟುಂಡು ಕಿಸೆಟಿಜ್ಜಿ', 'ಲಿಂಕ್ ಲಿಂಗಪ್ಪೆ', 'ಒವುಲಾ ಬೊಡ್ಚಿ', 'ಲಕ್ಕ್‌ಲೆ ಪುಲ್ಯಾಂಡ್', 'ಲೈಫ್ ಲೋಕೇಶ' –ಮುಂತಾದ ತುಳುನಾಟಕಗಳಲ್ಲಿ ಪೋಷಕ ನಟಿಯಾಗಿ ಹೆಸರಾದರು. ಕಡಲಮಗೆ, ಗಗ್ಗರ, ದೇವೆರ್, ಬದಿ, ತೆಲಿಕೆದ ಬೊಳ್ಳಿ, ರಿಕ್ಷಾ ಡ್ರೈವರ್, ಮದಿಮೆ, ನಮ್ಮ ಕುಡ್ಲ, ಸೂಂಬೆ, ಚಂಡಿಕೋರಿ, ಅರ್ಜುನ್ ವೆಡ್ಸ್ ಅಮೃತಾ, ದಿಬ್ಬಣ, ಪೆಟ್ಟ್‌ಕಮ್ಮಿ, ನಮ್ಮ ಕುಸಾಲ್ದ ಜವಣೆರ್, ಪಮ್ಮಣ್ಣೆ ದಿ ಗ್ರೇಟ್, ಬಲಿಪೆ ಮುಂತಾದ ತುಳುಚಿತ್ರಗಳಲ್ಲಿ ಕೋಟಿಚೆನ್ನಯ, ಗೊತ್ತಾನಗ ಪೊರ್ತಾಂಡ್ ಮುಂತಾದ ಧಾರಾವಾಹಿಗಳು, ಜೋಕುಲಾಟಿಕೆ, ಸಹನ, ಸಾದಿ, ಮೋಕೆದ ಮಗಲ್ ಮತ್ತಿತರ ಟೆಲಿಫಿಲ್ಮ್‌ಗಳು ಕನ್ನಡ, ತುಳು, ಕೊಂಕಣಿ, ಬ್ಯಾರಿ ಮುಂತಾದ 9 ಭಾಷೆಗಳ 85ರಷ್ಟು ಚಿತ್ರಗಳಲ್ಲಿ ಪಾತ್ರನಿರ್ವಹಿಸಿದರು. 2015–16ನೇ ಸಾಲಿನ ವೀರರಾಣಿ ಅಬ್ಬಕ್ಕ ಪ್ರಶಸ್ತಿ, 'ಮಾಂಡ್ ಸೊಭಾಣ್' ಮುಂತಾದ ಪ್ರಶಸ್ತಿ ಗಳಿಸಿ ತುಳು ರಂಗಭೂಮಿ ಯಲ್ಲಿ ಅಭಿನಯ ಮುಂದುವರಿಸಿರುವರು.

**ಗೀತಾ ಸುರತ್ಕಲ್**

ಬ್ಯಾಂಕ್ ಉದ್ಯೋಗಿ ಹಾಗೂ ಹಿರಿಯ ರಂಗಭೂಮಿ ಮತ್ತು ಕಿರುತೆರೆ ನಟಿ ಶ್ರೀಮತಿ ಗೀತಾ ಸುರತ್ಕಲ್ 1987ರಲ್ಲಿ ರಚಿಸಿದ ನಾಟಕ ಹಸ್ತಪ್ರತಿಗೆ ರತ್ನವರ್ಮ

ಹೆಗ್ಗಡೆ ಪ್ರಶಸ್ತಿ ಲಭಿಸಿದೆ. ಕಳೆದ 25 ವರ್ಷಗಳಿಂದ ಕನ್ನಡ ರಂಗಭೂಮಿ ಹಾಗೂ ಚಲನಚಿತ್ರರಂಗದಲ್ಲಿ ಬೆಂಗಳೂರಿನಲ್ಲಿ ಸಕ್ರಿಯರಾಗಿರುವ ಗೀತಾ ಸುರತ್ಕಲ್ 30 ವರ್ಷಗಳ ಹಿಂದೆ ಮಂಗಳೂರಿನಲ್ಲಿ ತುಳು ರಂಗ ಕಲಾವಿದೆಯಾಗಿ ಆಕಾಶವಾಣಿ ನಾಟಕಗಳ ಧ್ವನಿಕಲಾವಿದೆಯಾಗಿದ್ದರು. 80ರ ದಶಕದಲ್ಲಿ ಮಚ್ಚೇಂದ್ರನಾಥ ಪಾಂಡೇಶ್ವರ 'ನಾಟಕದುಲಾಯಿ ನಾಟಕ' ಸಿಡಿಗೆ ಧ್ವನಿ ನೀಡಿದವರು. ಮಂಗಳೂರು ಆಕಾಶವಾಣಿಯ ನಾಟಕಗಳಲ್ಲಿ ಪಾತ್ರ ವಹಿಸಿದರು. ಕೃಷ್ಣಮೂರ್ತಿ ಕವತ್ತಾರು ನಿರ್ದೇಶನದ 'ಶ್ರಾದ್ಧ' ಶಿವಳ್ಳಿ ಬ್ರಾಹ್ಮಣ ತುಳುವಿನ ನಾಟಕದಲ್ಲಿ ಪಾತ್ರ ನಿರ್ವಹಣೆ, ಡಿ.ಕೆ. ಚೌಟರ ಹಲವು ಪ್ರಯೋಗಗಳಲ್ಲಿ, 'ಪಿಲಿಪತ್ತಿ ಗಡಸ್' ನಾಟಕದ (ಸುರೇಶ್ ಆನಗಳ್ಳಿ ನಿರ್ದೇಶನ) 'ತೂಟೆ' ಪಾತ್ರ ವಹಿಸಿ ಗಮನಸೆಳೆದವರು.

**ರೂಪಾ ಅತ್ತಾವರ**

ಮಹಿಳಾ ರಂಗನಟಿಯರ ಎರಡನೇ ತಲೆಮಾರಿನ ಹೆಸರಾಂತ ಕಲಾವಿದರೆಯರಲ್ಲಿ ರೂಪಾ ಅತ್ತಾವರ ಒಬ್ಬರು. ಹೆಚ್ಚಾಗಿ ಹಾಸ್ಯಪಾತ್ರಗಳಲ್ಲಿ ಮಿಂಚಿದ್ದ ಇವರು ಕೆ.ಬಿ. ಭಂಡಾರಿಯವರ 'ಅಬ್ಬಕ್ಕ', ಕಿರೋಡಿಯನ್ನರ ಹಲವು ನಾಟಕಗಳಲ್ಲಿ ಮತ್ತು ಮಚ್ಚೇಂದ್ರನಾಥ ಪಾಂಡೇಶ್ವರ, ಯು.ಆರ್. ಚಂದರ್, ಆರ್.ಕೆ. ಉಳ್ಳಾಲ್, ಕೆ.ಎನ್. ಟೇಲರ್ ಮುಂತಾದ ಖ್ಯಾತನಾಮರ ನಾಟಕಗಳಲ್ಲಿ ಹಾಸ್ಯ ನಟಿಯಾಗಿ ಮಿಂಚಿ ಸುಮಾರು 2 ದಶಕಗಳ ಕಾಲ ತುಳು ರಂಗಭೂಮಿಯಲ್ಲಿ ಸಕ್ರಿಯರಾಗಿದ್ದರು. ಆರ್.ಕೆ. ಉಳ್ಳಾಲ್–ರೂಪಾ ಅತ್ತಾವರ ಇವರ ಹಾಸ್ಯಪಾತ್ರದ ಜೋಡಿ ಮಂಗಳೂರು ದಕ್ಷಿಣಭಾಗದಲ್ಲಿ 70–80ರ ದಶಕಗಳಲ್ಲಿ ಜನಪ್ರಿಯವಾಗಿತ್ತು. ಆಕಾಶವಾಣಿಯಲ್ಲಿ ನಾಟಕ ಕಲಾವಿದೆಯಾಗಿದ್ದವರು.

**ಕುಮುದಾ ಬಾರ್ಕೂರು** ಇವರು 70–80ರ ದಶಕದಲ್ಲಿ ಹಲವು ತುಳು–ಕನ್ನಡ ನಾಟಕಗಳಲ್ಲಿ ಪಾತ್ರ ವಹಿಸಿ ಭೂಮಿಕಾದ ಪ್ರಸಿದ್ಧ ನಾಟಕ 'ಚಕ್ರವ್ಯೂಹ'ದಲ್ಲಿಯೂ ನಟಿಸಿ ಗಮನ ಸೆಳೆದವರು. ಇವರ ಸಹೋದರಿ ಶಾರದಾ ಬಾರ್ಕೂರು ಗಾಯಕಿಯಾಗಿ ಹೆಸರಾದವರು.

**ಲೀಲಾವತಿ ಪೊಸಲಾಯಿ (1970)**

ನಾಟಕ ತಂಡ ಕಟ್ಟಿರುವ ಮಹಿಳೆ ಸುಶೀಲಾ ದೇವಾಡಿಗ, ಕೂಸಪ್ಪ ಮೈಲಿ ಇವರ ಪುತ್ರಿ. ದಿ. ರಮೇಶ್ ದೇವಾಡಿಗರ ಪತ್ನಿ. ಟೈಲರಿಂಗ್ ವೃತ್ತಿ ನಡೆಸುತ್ತಿದ್ದ ಇವರು ಕಾರ್ಕಳದಲ್ಲಿ ಸ್ವಂತ ಅಂಗಡಿ ನಡೆಸುತ್ತ, ಹಲವಾರು ಹೆಣ್ಣುಮಕ್ಕಳಿಗೆ ಟೈಲರಿಂಗ್ ವಿದ್ಯೆ ಕಲಿಸುತ್ತಿರುವಂತೆಯೇ 2016ರಲ್ಲಿ 'ಸಿಂಧೂರ ಕಲಾವಿದೆರ್' ಎಂಬ ತಂಡವನ್ನು ಕಟ್ಟಿ ಮುನ್ನಡೆಸುತಲಿದ್ದಾರೆ. ರಂಗಭೂಮಿ ಕಲಾವಿದೆಯಾಗಿ ಇವರು 400ಕ್ಕೂ ಅಧಿಕ ತುಳು, ಕನ್ನಡ ನಾಟಕಗಳಲ್ಲಿ ಅಭಿನಯಿಸಿರುತ್ತಾರೆ. ಮುಂಬಯಿ, ನಾಸಿಕ್, ಪುಣೆ, ಕಾಸರಗೋಡುಗಳಲ್ಲಿ ಕೂಡ ಅಭಿನಯಿಸಿದವರು. ಕನ್ನಡ ಚಲನಚಿತ್ರ 'ಪ್ರಾಣ ಕೊಡುವೆ ಗೆಳತಿ', 'ಪಕ್ಕಿಲು ಮೂಜಿ', 'ಜೈ ತುಳುನಾಡು', 'ನಮ್ಮ ಕುಸಲ್ದ ಜವನೇರ್', 'ಮೈ ನೇಮ್ ಈಸ್ ಅಣ್ಣಪ್ಪೆ' ಹಾಗೂ 'ಗೋಲ್‌ಮಾಲ್' ಮುಂತಾದ ಚಲನಚಿತ್ರಗಳ ಅಭಿನೇತ್ರಿ.

* * *

ಕಳೆದ ದಶಕದಲ್ಲಿ ತೊಕ್ಕೊಟ್ಟಿನ ದಿವ್ಯಶಕ್ತಿ ಮಹಿಳಾ ಮಂಡಲದ ಸದಸ್ಯರು ಒಂದಿಷ್ಟು ನೂತನ ರಂಗಪ್ರಯೋಗದಲ್ಲಿ ಪಾಲ್ಗೊಂಡರು. ಸದಾನಂದ ಸುವರ್ಣ ಸಾಂಸ್ಕೃತಿಕ ಪ್ರತಿಷ್ಠಾನದ ಪ್ರಸಿದ್ಧ ನಟ, ಚಂದ್ರಹಾಸ ಉಳ್ಳಾಲರು 'ಕೆರೆಗೆ ಹಾರ' ಜಾನಪದ ಕಾವ್ಯವನ್ನು 'ಭಾಗೀರಥಿ' ಎಂಬುದಾಗಿ ತುಳುವಿಗೆ ಅನುವಾದಿಸಿ, ದಿವ್ಯಶಕ್ತಿ ತಂಡಕ್ಕೆ ನಿರ್ದೇಶನ ಮಾಡಿದರು. ಮುಂದೆ 'ಬ್ರೆಕ್ಟ್'ನ ಕಕೇಶಿಯನ್ ಚಾಕ್ ಸರ್ಕಲನ್ನು 'ಸುಣ್ಣದ ಕಲ' ಎಂಬುದಾಗಿ ರೂಪಾಂತರಿಸಿ ದಿವ್ಯಶಕ್ತಿ ಮತ್ತು ಉಳ್ಳಾಲ, ತೊಕ್ಕೊಟ್ಟು ಆಸುಪಾಸಿನ ಮಹಿಳೆಯರನ್ನು ಸೇರಿಸಿ ತರಬೇತಿ ನೀಡಿದರು. ಈ ನಾಟಕಕ್ಕೆ ಮೊದಲು ಹೊಲಗದ್ದೆಯೇ ಸ್ಟೇಜ್ ಆಗಿತ್ತು. ಮುಂದೆ ಮಂಗಳೂರು ಪುರಭವನದಲ್ಲೂ 'ಸುಣ್ಣದ ಕಲ' ನಾಟಕ ಪ್ರದರ್ಶನಗೊಂಡು ಪ್ರೇಕ್ಷಕರ ನೆನಪಲ್ಲಿ ಉಳಿದುಕೊಂಡಿದೆ.

ದಿನಾಂಕ 19–3–2015ರಂದು ತುಳು ಅಕಾಡೆಮಿಯ 'ಸಿರಿ ಚಾವಡಿ'ಯಲ್ಲಿ 'ನಾಟಕೊಡು ಪೊಂಜೊವ್ಲು' ಎನ್ನುವ ಸಮಾವೇಶಗೋಷ್ಠಿ ಏರ್ಪಟ್ಟಿತು. ಇದರಲ್ಲಿ ರಂಗಭೂಮಿಯಲ್ಲಿ ದುಡಿದ ದುಡಿಯುತ್ತಿರುವ ಮಹಿಳೆಯರ ಬಗ್ಗೆ ಅವಲೋಕನ ನಡೆಯಿತು. ತುಳು ರಂಗಭೂಮಿಯಲ್ಲಿ ದುಡಿದ ಹಿರಿಯ ಕಲಾವಿದೆಯರಾದ ರೋಹಿಣಿ ಜಗರಾಂ, ಚಿತ್ರಾಂಜಲಿ (ವೇದಾ ಜೆ. ಅಂಚನ್), ಶಾರದಾ ಬಾರ್ಕೂರ್ (ಗಾಯಕಿ), ಶಾಲಿನಿ ಉಮೇಶ್ ಮುಂತಾದವರನ್ನು ಸಮ್ಮಾನಿಸಲಾಯಿತು.

* * *

## ತುಳು ನಾಟಕಗಳಲ್ಲಿ ಪುರುಷರಿಂದ ಸ್ತ್ರೀಪಾತ್ರ ನಿರ್ವಹಣೆ

ಒಂದು ಕಾಲದಲ್ಲಿ ಸಾರ್ವಜನಿಕ ರಂಗಭೂಮಿಗೆ ಹೆಣ್ಣುಮಕ್ಕಳು ಬರಲು ಕಟ್ಟುಪಾಡುಗಳಿದ್ದಾಗ, ಸುಂದರ ಅಂಗಸೌಷ್ಠವದ ಪುರುಷ ಪಾತ್ರಧಾರಗಳೇ ಕಥಾನಾಯಕಿ, ತಾಯಿ, ಅಜ್ಜಿ, ಅತ್ತೆ ಇಂತಹ ಪಾತ್ರಗಳನ್ನು ತುಂಬಿಕೊಟ್ಟರು. ಅಂಥವರಲ್ಲಿ ಆರ್.ಕೆ. ಮಂಗಳೂರು, ಅನಿಲ್ ಕುಮಾರ್ ಬರ್ಕೆ, ಯು. ಗಣೇಶ್ ಕುಮಾರ್, ಎ. ಗಂಗಾಧರ ಶೆಟ್ಟಿ, ರಾಘವ ಅತ್ತಾವರ, ಇಂದುಶೇಖರ್, ದಿನೇಶ್ ಅತ್ತಾವರ, ಗಂಗಾಧರ ಗಟ್ಟಿ, ಯುವರಾಜ್ ಶೆಟ್ಟಿ, ಶೇಖರ ಕಾಪಿಕಾಡ್, ಕೃಷ್ಣಪ್ಪ ತುಂಬೆ, ತಮ್ಮ ಲಕ್ಷ್ಮಣ, ರಾಮಚಂದರ್ ಬೈಕಂಪಾಡಿ, ಅರುಣ್ ಕುಮಾರ್, ಧನಂಜಯ ಶೆಟ್ಟಿ (ಕಾರ್ಕಳ) ಮುಂತಾದವರ ಸ್ತ್ರೀಪಾತ್ರ ನಿರ್ವಹಣೆಗಳು ಆಯಾಪ್ರದೇಶಗಳಲ್ಲಿ ಮನೆಮಾತಾದವು.

ಆರಂಭದಿಂದಲೂ ತುಳು ನಾಟಕಗಳ ಸ್ತ್ರೀಪಾತ್ರಗಳನ್ನು ಪುರುಷರು ನಿರ್ವಹಿಸುವುದು ಅನಿವಾರ್ಯವಾಗಿತ್ತು. ಕಾರಣ ಇಲ್ಲಿನ ಸಂಪ್ರದಾಯಶರಣ ಸಮಾಜದ ಹೆಣ್ಣುಮಕ್ಕಳು ನಾಟಕದಲ್ಲಿ ಗಂಡಸರ ಜೊತೆ ಪಾತ್ರ ಮಾಡುವುದು ಸುಲಭಸಾಧ್ಯವಾಗಿರಲಿಲ್ಲ.

ಆದರೆ ಸ್ತ್ರೀಪಾತ್ರ ಮಾಡಲು ಅಂತಹ ಅಂಗಸೌಷ್ಠವ, ಧ್ವನಿ ಮತ್ತಿತರ ಅರ್ಹತೆಯೂ ಬೇಕಲ್ಲ. ಅಂತಹ ಕಾಲಘಟ್ಟದಲ್ಲಿ ಮಂಗಳೂರು ಪ್ರದೇಶದಲ್ಲಿ ತುಳುನಾಟಕಗಳ ಉಚ್ಛ್ರಾಯ ಕಾಲಕ್ಕೆ ತಕ್ಕ ಸ್ತ್ರೀಪಾತ್ರ ನಿರ್ವಹಣೆಗೆ ಹೆಸರಾದವರು ಆರ್.ಕೆ. ಮಂಗಳೂರು (ರಾಮದಾಸ್) ಇವರನ್ನು ಮಾದರಿಯಾಗಿಟ್ಟುಕೊಂಡು ಯು. ಗಣೇಶ್ ಕುಮಾರ್, ಗಂಗಾಧರ, ಎ. ಗಂಗಾಧರ ಶೆಟ್ಟಿ, ಶೇಖರ್ ಕಾಪಿಕಾಡ್, ಯುವರಾಜ್ ಶೆಟ್ಟಿ, ಕಾರ್ಕಳದ ಧನಂಜಯ ಶೆಟ್ಟಿ, ಉಡುಪಿಯ ವಾದಿರಾಜ ತಂತ್ರಿ, ಅನಿಲ್ ಕುಮಾರ್ ಬರ್ಕೆ ಮುಂತಾದವರು ಪೌರಾಣಿಕ ಚಾರಿತ್ರಿಕ, ಸಾಮಾಜಿಕ ನಾಟಕಗಳ ವಿಭಿನ್ನ ಸ್ತ್ರೀ ಪಾತ್ರಗಳನ್ನು ನಿರ್ವಹಿಸಿ ಜನಮನ ಸೂರೆಗೊಂಡರು.

### ಆರ್.ಕೆ. ಮಂಗಳೂರು (1938)

ತುಳು ನಾಟಕ ರಂಗದಲ್ಲಿ ಸ್ತ್ರೀಪಾತ್ರ ನಿರ್ವಹಣೆಯಲ್ಲಿ ಅತ್ಯುನ್ನತ ಸ್ಥಾನದಲ್ಲಿ ರಾರಾಜಿಸಿದ ಆರ್.ಕೆ. ಮಂಗಳೂರು (ಕೆ. ರಾಮದಾಸ್) ಇವರದು ಸುಮಾರು 56

ವರ್ಷಗಳಷ್ಟು ಸುದೀರ್ಘ ಕಾಲದ ಅಮೋಘ ಕಲಾ ಬದುಕು. ಅವರ ಹೆಸರು ಪ್ರೇಕ್ಷಕರ ಮನದಲ್ಲಿ ಸದಾ ಹಸಿರು.

ಶಾಲಾ ದಿನಗಳಲ್ಲೇ ಇವರ ಅಂಗಸೌಷ್ಠವ, ಸ್ವರ ಭಾರಗಳನ್ನು ಗಮನಿಸಿದ ಅಧ್ಯಾಪಕರು ಇವರಿಂದ ನಾಟಕ ಪಾತ್ರಗಳನ್ನು ಮಾಡಿಸುತ್ತಿದ್ದರು. ಆಗೆಲ್ಲ ಪುರುಷ ಪಾತ್ರಗಳೇ ಒಂದು ಆಕಸ್ಮಿಕ ಸನ್ನಿವೇಶದಿಂದಾಗಿ ಆರ್ಕೆ ಸ್ತ್ರೀ ಪಾತ್ರ

ಮಾಡಬೇಕಾಯಿತು. ಅದು 'ಲವ್ ಮ್ಯಾರೇಜ್' ಎನ್ನುವ ನಾಟಕದ ಕಥಾನಾಯಕಿ ಪಾತ್ರದವರು ರಿಹರ್ಸಲ್ ಎಲ್ಲಾ ಮುಗಿದು ಕೊನೆಯ ಕ್ಷಣದಲ್ಲಿ ಅಸೌಖ್ಯದಿಂದ ಆಸ್ಪತ್ರೆಯಲ್ಲಿ ಅಡ್ಮಿಟ್ ಆದರು. ಆಗ ಅನಿವಾರ್ಯವಾಗಿ ಆರ್.ಕೆ. ಆ ಪಾತ್ರ ಮಾಡಬೇಕಾಯಿತು. ಕಥಾನಾಯಕಿ 'ಸುಜಾತ'ಳ ಆ ಪಾತ್ರನಿರ್ವಹಣೆ ಅತ್ಯಂತ ಯಶಸ್ವಿಯಾಗಿ ಜನಮನದಲ್ಲಿ ಅಚ್ಚೊತ್ತಿತು. ಮುಂದೆ ಇವರ ಸ್ತ್ರೀಪಾತ್ರವನ್ನೇ ಪ್ರೇಕ್ಷಕರು ಬಯಸಿದರು. ಆರ್ಕೆಯೂ ತನ್ನನ್ನು ಸ್ತ್ರೀಪಾತ್ರಕ್ಕೆ ಅರ್ಪಿಸಿಕೊಂಡರು. ನಟನೆಯ ವೇಳೆ ಸ್ತ್ರೀಗಿಂತಲೂ ಮಿಗಿಲಾದ ಲಾಸ್ಯ, ಹಾವಭಾವ, ಅಲಂಕಾರ, ಕೇಶಾಲಂಕಾರವನ್ನಂತೂ ಸಿನಿಮಾ ತಾರೆಯರ ಮಾದರಿಯಲ್ಲಿ ತಾನೇ ಸ್ವತಃ ಮಾಡಿಕೊಳ್ಳುವಲ್ಲಿ ತಜ್ಞರಾದರು.

1965ರಲ್ಲಿ ಎಸ್.ಆರ್. ಬಾಲಗೋಪಾಲ್‌ರ 'ಕಲಾಭವನ' ಬ್ಯಾನರ್‌ನಲ್ಲಿ ರೂಪರಂಗ ಕುಂದಾಪುರದವರೂ ಸಹಯೋಗ ನೀಡಿ ಮಂಗಳೂರಿನಲ್ಲಿ ಜರಗಿದ ನಾಟಕಸ್ಪರ್ದೆಯಲ್ಲಿ ಯು.ಆರ್. ಚಂದರ್‌ರ 'ನವ ತರುಣ ಕಲಾವೃಂದ'ದ ನಾಟಕಕ್ಕೆ ಮೊದಲ ಬಹುಮಾನ ಬಂತು. ಅದರಲ್ಲಿ ಆರ್.ಕೆ. ನಿರ್ವಹಿಸಿದ ಕಥಾನಾಯಕಿ ಪಾತ್ರ ಸರ್ವತ್ರ ಪ್ರಶಂಸೆ ಗಿಟ್ಟಿಸಿತು.

ಹತ್ತಾರು ನಾಟಕಕಾರರ ಅಸಂಖ್ಯ ಪೌರಾಣಿಕ, ಜಾನಪದ, ಸಾಮಾಜಿಕ ತುಳು ಕನ್ನಡ ನಾಟಕಗಳಲ್ಲಿ ಆರ್.ಕೆ. ಪಾತ್ರ ಮಾಡಿದವರು. ವಿಶುಕುಮಾರ್, ಕೆ.ಎನ್. ಟೇಲರ್, ಮಚ್ಚೇಂದ್ರನಾಥ ಪಾಂಡೇಶ್ವರ, ಪಿ.ಎಸ್. ದಂಡೆಕೇರಿ, ಕೆ.ಬಿ. ಭಂಡಾರಿ, ಕಲಾತಪಸ್ವಿ

ಬಬ್ಬುಸ್ವಾಮಿಯ ತಾಯಿ ಕಚ್ಚೂರ ಮಾಲ್ದಿಯ ಪಾತ್ರದಲ್ಲಿ ಆರ್.ಕೆ.

ಆರ್.ಕೆ.ಯವರು ಬಯ್ಯಮಲ್ಲಿಗೆ ನಾಟಕದಲ್ಲಿ

ಬಾಲಕೃಷ್ಣ ರಾವ್, ಯು.ಎಂ. ಮೈದಿನಬ್ಬ, ಭೋಜ ಸುವರ್ಣ, ಸಂಜೀವ ಅಡ್ಯಾರ್, ಗಂಗಾಧರ ಶೆಟ್ಟಿ ಅಳಕೆ, ರತ್ನಾಕರ ಕಾವೂರ್ ಮುಂತಾದವರ ನಾಟಕ ಪಾತ್ರಗಳು ಸುಮಾರು 6000ಕ್ಕೂ ಮಿಕ್ಕ ಪ್ರದರ್ಶನಗಳಲ್ಲಿ ರಂಗದಲ್ಲಿ ಅಭಿನಯ 70–80ರ ದಶಕದ ಯಶೋಧರಾದೇವಿ, ರೂಪಾ ಅತ್ತಾವರ, ಯಶೋದಾ ಮುಂತಾದ ಪ್ರಸಿದ್ಧರು ಸ್ತ್ರೀಪಾತ್ರ ನಿರ್ವಹಣೆಗೆ ತೊಡಗಿದ ಕಾಲದಲ್ಲೂ ಆರ್.ಕೆ. ಯ ಪಾತ್ರವೇ ಒಂದು ಕೈ ಮಿಗಿಲೆನಿಸಿತ್ತು.

ಆರ್.ಕೆ.ಯವರಿಗೆ ತುಂಬಾ ಸಂತೃಪ್ತಿ ನೀಡಿದ್ದೆಂದರೆ ಕೆ.ಬಿ. ಭಂಡಾರಿಯವರ ಪಂಥ, ಯು.ಆರ್. ಚಂದರ್‌ರ ಕೋರ್ದಬ್ಬು–ತನ್ನಿಮಾನಿಗ, ಕಲ್ಕುಡ–ಕಲ್ಲುರ್ಟಿ, ದಂಡೆಕೇರಿಯವರ ಬಯ್ಯಮಲ್ಲಿಗೆ, ಸರಸ್ವತಿ, ಪಾದಕಾನಿಗೆ, ಸಂಜೀವ ಅಡ್ಯಾರರ ಮರ್ಲೆದಿ, ಗಂಗಾಧರ ಶೆಟ್ಟರ ಮದ್ಮೆದ ಮದ್ರೆಂಗಿ, ಗೆಜ್ಜೆದ ಸೂರ, ಒರಿಯನ್ ತೂಂಡ ಒರಿಯಗಾಪುಜಿ ಇತ್ಯಾದಿ ನಾಟಕದ ಪಾತ್ರಗಳು.

ಕೊಂಚಾಡಿ ನಿವಾಸಿಯಾದ ಆರ್ಕೆ ಮಂಗಳೂರರು 10 ವರ್ಷ ಖಾಸಗಿ ನೌಕರಿ ಬಳಿಕ ಮಂಗಳೂರಿನ ಐ.ಟಿ.ಐ.ಯಲ್ಲಿ ಸೇವೆಯಲ್ಲಿದ್ದು 1998ರಲ್ಲಿ ನಿವೃತ್ತಿ ಹೊಂದಿದವರು.

ನಾಟಕ ರಚನೆ, ನಿರ್ದೇಶನ ಮಾಡುವ ಎಲ್ಲಾ ಸಾಮರ್ಥ್ಯ ಹೊಂದಿದ್ದರೂ, ಅದಕ್ಕೆಲ್ಲ ಹೋಗದೆ ಕೇವಲ ಪಾತ್ರಾಭಿನಯದಲ್ಲೇ ತನ್ನ ವೈಶಿಷ್ಟ್ಯ ಮೆರೆದ ಆರ್ಕೆ ತಾನು ಪಾತ್ರವಹಿಸುವ ನಾಟಕಗಳ ಸಂಭಾಷಣೆಗಳನ್ನು ತಿದ್ದಿ ಸೂಕ್ತವಾಗಿಸಿಕೊಂಡು ನಿರ್ವಹಿಸುತ್ತಿದ್ದ ಸಮರ್ಥರು. 'ಒರಿಯನ್ ತೂಂಡ ಒರಿಯಗಾಪುಜಿ' ಇವರ ಅಭಿನಯದ ಕೊನೆಯ ನಾಟಕ, ಬಳಿಕ ರಂಗದಿಂದ ನಿವೃತ್ತರಾಗಿ ವಿಶ್ರಾಂತ ಜೀವನ.

### ಅನಿಲ್‌ಕುಮಾರ್ ಬರ್ಕೆ (1945–1999)



1957ರಿಂದ ನಾಲ್ಕು ದಶಕಗಳ ಕಾಲ ನಾಟಕಗಳ ಸ್ತ್ರೀಪಾತ್ರದಲ್ಲಿ ಮಿಂಚಿದ ಮತ್ತೋರ್ವ ಹೆಸರಾಂತ ಕಲಾವಿದ ಬರ್ಕೆಯ ಅನಿಲ್‌ಕುಮಾರ್. 'ಲೋಭಿ' ಎನ್ನುವ ಕನ್ನಡ ನಾಟಕದ ಕಥಾನಾಯಕಿ ಪಾತ್ರದೊಂದಿಗೆ ರಂಗಪ್ರವೇಶ ಮಾಡಿದ ಅನಿಲ್ ವಿಶುಕುಮಾರರ 'ಗರ್ವದ ಎಣ್ಣೆ' ನಾಟಕದಲ್ಲಿ ಬಿ.ಎಸ್. ರಾವ್ ಅವರ ಜೋಡಿಯಾಗಿ ಅಭಿನಯಿಸಿದರು. ಆ ಬಳಿಕ ಭಂಡಾರಿಯವರ ಬಂಗಾರ್ ಬಾಲೆ, ಮಾಜಂದಿ ಬರವು, ಅಡ್ಯಾರರ ಎನ್ನ ಮೈತಿದಿ, ಪಾಂಡೇಶ್ವರರ ಅಜ್ಜಿತಾಂಕಿನ ಪುಳ್ಳಿ, ತುಡರ್ ತೆಲ್ತುಂಡ್, ತೆಕ್ಕಂದಿ ತೂ, ಟೇಲರರ ತಮ್ಮಲೆ ಅರ್ವತ್ತನ ಕೋಲ, ಬದ್ಕರೆ ಬುಡ್ಲೆ, ಬೊಕ್ಕದಾಯೆ ಕಿಟಿಕಿಟಿ, ಮಾಮಿ ಮರ್ಮಾಲೆ ಮೇಲ, ಅಪ್ಪೆನ ಶಾಪ, ಸೋಣದ ಮದಿಮಾಲ್, ಜನ ಮರ್ಲಾ ಜಾತ್ರೆ ಮರ್ಲಾ (ತಿಂಗಳಾಯರ ಮರುಪ್ರದರ್ಶಿತ ನಾಟಕ), ಪಗೆ, ಶೋಕುಗಾದ್, ಚಂಡಿಕೋರಿಲು,

ಬಯ್ಯಮಲ್ಲಿಗೆ, ನಂಜಿದ ನಾಲಾಯಿ, ಪೊಸ ಜೀವನ, ತಿಂಗೊಲ್ದಬೊಲ್ಪು, ಗೆಜ್ಜೆದಸೊರ, ಮನಸ್ ಕೇನುಜಿ, ಏರ್ ಪಂಡಿನಿ, ಬೊಳ್ಳಿ ಮೂಡ್‌ಂಡ್, ನಂಜಿ ನೇತ್ತೆರ್, ಮುಗಲ್ ನಲಿತ್‌ಂಡ್, ಎರ್ತೆಜಪ್ಪಲ್, ಬೀದಿಭಿಕಾರಿ, ದಲಾಲಿದಾಸು, ಗಣೇಶ್ ರೈಯವರ ಗಟ್ಟಿದ ಪೊದು, ರಡ್ಡಿಲ್ಲ್ ಕುಬಲೊಂಜಿ ಹೀಗೆ ವಿಭಿನ್ನ ನಾಟಕಕಾರರ ನೂರಾರು ನಾಟಕಗಳಲ್ಲಿ ಕಥಾನಾಯಕಿಯಾಗಿ ಮೆರೆದವರು ಅಂದಿನ ಕಾಲದ ಎಂ.ಕೆ. ನಾಟಕಸಭಾ, ಕಲಾಭವನ ಮುಂತಾದ ಸಂಸ್ಥೆಗಳಿಂದ 'ಸೌಂದರ್ಯರಾಣಿ' ಮುಂತಾಗಿ ಬಿರುದುಗಳನ್ನು ಗಳಿಸಿದರು.

1997ರಲ್ಲಿ ವೃದ್ಧಾಪ್ಯದ ನೆಪದಿಂದ ಅಭಿನಯಕ್ಕೆ ಮಂಗಳ ಹಾಡಿದ ಅನಿಲ್‌ಕುಮಾರ್ ಒಂದು ಕಾಲದಲ್ಲಿ ರಾಜಕೀಯ, ಚಲನಚಿತ್ರ ಮುಂತಾದ ವಿವಿಧ ರಂಗಗಳಲ್ಲಿ ಪ್ರಖ್ಯಾತರಾದ ವ್ಯಕ್ತಿಗಳ ಜೊತೆ ಅಭಿನಯಿಸಿದವರು. 1961ರಲ್ಲಿ ವಿಶುಕುಮಾರರ ಕನ್ನಡ ನಾಟಕದಲ್ಲಿ ಜನಾರ್ದನ ಪೂಜಾರಿಯವರು ಅನಿಲ್ ಜೊತೆಯಾಗಿ ಅಭಿನಯಿಸಿದ್ದರು. 'ಮನೆಯಿಂದ ಮಸಣಕ್ಕೆ' ನಾಟಕದಲ್ಲಿ ಅನಿಲ್ ಎಂ, ವೀರಪ್ಪ ಮೊಯ್ಲಿ ಜತೆಯಾಗಿ ಅಭಿನಯ. ಲೋಕಯ್ಯ ಶೆಟ್ಟಿ ಅನಿಲ್ ಜೋಡಿಯಾಗಿದ್ದ ಕನ್ನಡ ನಾಟಕ 'ಅಲೆಗ್ಸಾಂಡರ್' ರಾಮಣ್ಣ ರೈ ಪುತ್ತೂರು ಇವರ 'ಮೋಕೆದ ಬಿಲೆ' ನಾಟಕದಲ್ಲಿ ಪ್ರಕಾಶ್ ರೈ ಮತ್ತು ಅನಿಲ್ ಜೋಡಿಯ ನಟನೆ, ವಿವಿಧ ತಂಡಗಳ ಸುಮಾರು 700 ಕಲಾವಿದರೊಂದಿಗೆ ಸುಮಾರು 2000 ಪ್ರದರ್ಶನಗಳಲ್ಲಿ ರಂಗದಲ್ಲಿ ಪಾತ್ರ ನಿರ್ವಹಣೆಯ ಹೆಗ್ಗಳಿಕೆ, ಪಾಂಡೇಶ್ವರರ 'ಅಜ್ಜಿತಾಂಕಿನ ಪುಳ್ಳಿ'ಯ 'ರಮಾ' ಇವರ ನೆನಪಿನಲ್ಲಿ ಉಳಿದುದು, 1999ರಲ್ಲಿ ನಿಧನರಾದರು.

ಕೇಶಾಲಂಕಾರದಲ್ಲೂ ನಿಪುಣರಾಗಿದ್ದ ಅನಿಲ್ ಬರ್ಕೆ ದಾರೆದ ಸೀರೆ, ಬದ್ಕರೆ ಬುಡ್ಲೆ ಚಿತ್ರಗಳಿಗೂ ಕೇಶಾಲಂಕಾರ ನಿರ್ವಹಿಸಿದ್ದರು. 8ನೇ ತರಗತಿಯವರೆಗೆ ಶಿಕ್ಷಣ ಪಡೆದ ಅನಿಲ್ ಪ್ರಿಂಟಿಂಗ್ ಪ್ರೆಸ್ ನೌಕರರಾಗಿದ್ದರು 'ಕುರುಕ್ಷೇತ್ರ' ಕನ್ನಡ ನಾಟಕದಲ್ಲಿ, ಚರಣ್‌ರಾಜ್‌ರ ಕನ್ನಡ ಚಿತ್ರದಲ್ಲೂ ಅಭಿನಯಿಸಿದ್ದರು.

**ಗಣೇಶ್ ಕುಮಾರ್**



70–90ರ ದಶಕಗಳುದ್ದಕ್ಕೂ ಕರಾವಳಿ ಜಿಲ್ಲೆಯ ಪ್ರಸಿದ್ಧ ಸ್ತ್ರೀಪಾತ್ರಧಾರಿ ಪುರುಷರಲ್ಲಿ ಮೇರುಕಲಾವಿದ ರೊಬ್ಬರು. ಆರ್ಕೆ (ರಾಮದಾಸ್) ಮಂಗಳೂರು ಮೊದಲಿಗರಾದರೆ ಎರಡನೆಯವರೇ ಗಣೇಶ್ ಕುಮಾರ್ ಚೆಲ್ಲು ಹುಡುಗಿಯಾಗಿ, ಗಂಭೀರ ಸ್ತ್ರೀಯಾಗಿ, ದುಃಖಿತ ಹೆಣ್ಣಾಗಿ, ಹುಚ್ಚಿಯಾಗಿ ಹೇಗೆ ಬೇಕಾದರೂ ಲೀಲಾಜಾಲ ವಾಗಿ ನೈಜವಾಗಿ ಅಭಿನಯಿಸಬಲ್ಲ ಸಮರ್ಥರು. ಕೆ.ಬಿ. ಭಂಡಾರಿ, ಕಿರೋಡಿಯನ್, ಪಾಂಡೇಶ್ವರ್, ದಂಡೆಕೇರಿ ಮುಂತಾದ ಹಿರಿಯ ನಾಟಕಕಾರರ ಪ್ರಸಿದ್ಧ ಪೌರಾಣಿಕ, ಚಾರಿತ್ರಿಕ, ಸಾಮಾಜಿಕ ತುಳು ಕನ್ನಡ ನಾಟಕಗಳಲ್ಲಿ ಮನಮಿಡಿಯುವ ಅಭಿನಯ ನೀಡಿ, ಜಿಲ್ಲಾ ಮಟ್ಟದ ಅನೇಕ

ಕಿನ್ನಿಗೋಳಿಯಲ್ಲಿ ವಿಜಯ ಕಲಾವಿದರು ಮತ್ತು ಯುಗಪುರುಷ ಸಹಯೋಗದಲ್ಲಿ ದಿನಾಂಕ 17–7–2005ರಲ್ಲಿ ಜರಗಿದ 'ತುಳುನಾಟಕೊಲೆಡ್ ಸ್ತ್ರೀಪಾತ್ರ ನಿರ್ವಹಣೆ' ವಿಚಾರಗೋಷ್ಠಿಯಲ್ಲಿ ಮಾತನಾಡುತ್ತಿರುವ ದಿನೇಶ್ ಅತ್ತಾವರ. ಜೊತೆಗೆ ದ.ಕ. ಹಾಗೂ ಉಡುಪಿ ಜಿಲ್ಲೆಗಳ ವಿವಿಧ ಸ್ತ್ರೀಪಾತ್ರ ಕಲಾವಿದರು

ನಾಟಕ ಸ್ಪರ್ಧೆಗಳಲ್ಲಿ ಬಹುಮಾನ ಪಡೆದವರು. ಗಣೇಶ್ ಕುಮಾರ್ ಅಭಿನಯವಿಲ್ಲದೆ ನಾಟಕದ ಕೇಶಾಲಂಕಾರ, ವಸ್ತ್ರಾಲಂಕಾರ, ವರ್ಣಾಲಂಕಾರಗಳಲ್ಲೂ ಪರಿಣತರಾಗಿದ್ದವರು.

## ದಿನೇಶ್ ಅತ್ತಾವರ



ಬಿ.ಆರ್. ಕುಲಾಲರ ನಾಟಕಗಳಲ್ಲಿ ಪಾತ್ರ ವಹಿಸತೊಡಗಿ 'ಒರಿಯದ್ದೊರಿ ಅಸಲ್' ತಂಡದ ಅಜ್ಜಿ 'ಲಿಂಗಮಕ್ಕ' ಪಾತ್ರದಿಂದ ಒಂದೇ ನೆಗೆತಕ್ಕೆ ಜನಪ್ರಿಯತೆಯ ತುತ್ತತುದಿಗೇರಿದ ಪ್ರತಿಭಾವಂತ ನಟ ದಿನೇಶ್ ಅತ್ತಾವರ ಸಹಜ ಪ್ರತಿಭೆಯ ನಟ. ನಾಟಕಕರ್ತ, ಗೀತ ರಚನೆಗಾರ. ಡಾನ್ಸರ್ ಕೂಡಾ ಆಗಿರುವ ಇವರದು ಕೊಡಿಯಾಲ್ ಬೈಲ್‌ರ 'ಶಬರಿಮಲೆ ಅಯ್ಯಪ್ಪ' ನಾಟಕದಲ್ಲಿ ಅಯ್ಯಪ್ಪ ಮತ್ತು ಮೋಹಿನಿಯ ಪಾತ್ರ.

'ರಂಗಸ್ಪಂದನ' ಎಂಬ ತಂಡ ಕಟ್ಟಿರುವ ದಿನೇಶ್ ಅತ್ತಾವರ ದಿ। ಯು. ಆರ್. ಚಂದರ್ ಅವರ 'ಕೋರ್ದಬ್ಬು ತನ್ನಿಮಾನಿಗ' ನಾಟಕ (2018) ಸೇರಿದಂತೆ ಅವಿಭಜಿತ ಜಿಲ್ಲೆ ಹಾಗೂ ಹೊರನಾಡಿನಲ್ಲೂ ಹಲವು ನಾಟಕಗಳ ನಿರ್ದೇಶಕರಾಗಿ, ಮಕ್ಕಳ ರಂಗಭೂಮಿಗಾಗಿಯೂ ಕ್ರಿಯಾಶೀಲರಾಗಿದ್ದಾರೆ. ಇವರು ರಚಿಸಿ ನಿರ್ದೇಶಿಸಿದ ಇತ್ತೀಚಿನ ಯಶಸ್ವಿ ನಾಟಕ 'ಒಂಚಿ ತೂಪಿನಿ'. ದೃಶ್ಯವಾಹಿನಿಯಲ್ಲೂ ಇವರು ತನ್ನ 'ಲಿಂಗಮಕ್ಕ' ಪಾತ್ರವೇಷದಲ್ಲಿ ನಿರೂಪಕರಾಗಿ ಜನಪ್ರಿಯರು. ಇವರು ನಿರ್ದೇಶನದಲ್ಲಿ 'ಬರಂದೆ ಕುಲ್ಲಯೆ' ನಾಟಕವನ್ನು 'ಅಭಿನಯ ಕಲಾವಿದೆರ್, ಉಡುಪಿ' ತಂಡವು 80ಕ್ಕೂ ಹೆಚ್ಚು ಪ್ರದರ್ಶನ ನೀಡಿದೆ.

**ಇಂದು ಎಸ್. ಮಂಗಳೂರು (1953)**

ಪ್ರಸಿದ್ಧ ಸ್ತ್ರೀ ಪಾತ್ರಧಾರಿ 'ಇಂದು ಎಸ್.' (ಇಂದುಶೇಖರ ಶೆಟ್ಟಿ) ಇವರು ಪೂವಣಿ ಶೆಟ್ಟಿ ಪಾರ್ವತಿ ಶೆಟ್ಟಿ ದಂಪತಿಯ ಮಗ. ತನ್ನ 13ರ ಪ್ರಾಯದಲ್ಲಿ ಸೀತಾರಾಮ್ ಕುಲಾಲರ 'ರುದ್ರವೀಣೆ' ನಾಟಕದಲ್ಲಿ ನಟನೆ. ಬಳಿಕ ಕಿರೋಡಿಯನ್ನರ ಆರ್.ಎನ್. ಮಿತ್ರಮಂಡಳಿಯಲ್ಲಿ ಪಳಗಿ ಅವರನ್ನೇ ತನ್ನ ಗುರುವಾಗಿ ಸ್ವೀಕರಿಸಿದರು. ಹಿರಿಯರಾದ ಆರ್.ಕೆ. ಮಂಗಳೂರು, ಗಣೇಶ್ ಕುಮಾರ್ ಇವರು ಇಂದುಶೇಖರ್ ಎಂಬ ಹೆಸರನ್ನು 'ಇಂದು ಎಸ್. ಮಂಗಳೂರು' ಎಂಬಂತೆ ಕರೆದರು. ಮುಂದೆ ಅದೇ ಹೆಸರಾಯಿತು. ಪ್ರೀತಿದ ಕಾಣಿಕೆ, ದೇವೆರ್ ಕೊರಿನ ತಂಗಡಿ, ವಿಷತ್ತ ಸರ್ಪೆ, ಈರ್ ಪನ್ಪರಾ, ಬಿರ್ಸೆರೆಡೊರಿ ಬಿರ್ಸೆ-ಮತ್ತಿತರ ಸುಮಾರ್ 27 ನಾಟಕಗಳನ್ನು ಬರೆದು, ಪಾತ್ರ ವಹಿಸಿ, ನಿರ್ದೇಶನದಲ್ಲೂ ಕೈಯ್ಯಾಡಿಸಿ, ಸುಮಾರು 52 ವರ್ಷಕಾಲ ಲೆಕ್ಕವಿಲ್ಲದಷ್ಟು ಸಂಖ್ಯೆಯ ತುಳು, ಕನ್ನಡ ನಾಟಕಗಳಲ್ಲಿ ಪಾತ್ರವಹಿಸಿದರು. ಸ್ತ್ರೀಪಾತ್ರದ ವೈಶಿಷ್ಟ್ಯಕ್ಕಾಗಿ 1980ರಲ್ಲಿ ಧರ್ಮಸ್ಥಳ ಹೆಗ್ಗಡೆಯವರ ಹಸ್ತದಿಂದ 'ಕನಸಿನ ಕನ್ಯೆ' ಎಂಬ ಬಿರುದು, 2009ರಲ್ಲಿ ಪೊರ್ಲು ಆರ್ಟ್ಸ್ ಕುಡ್ಲದವರಿಂದ 'ಕಲಾಕೇದಗೆ' ಬಿರುದು, 2006ರಲ್ಲಿ 'ರಂಗಮಾಣಿಕ್ಯ' ಬಿರುದು ಮುಂತಾದವುಗಳಿಂದ ಅಲಂಕೃತರಾಗಿ, ರಂಗಶಿಕ್ಷರೆನಿಸಿ ರಂಗದಿಂದ ನಿವೃತ್ತಿ ಪಡೆದುಕೊಂಡಿದ್ದಾರೆ.

**ಯುವರಾಜ ಶೆಟ್ಟಿ (1958-2009)**

ಹೊಸ ತಲೆಮಾರಿನ ಮತ್ತೋರ್ವ ಹೆಸರಾಂತ ಸ್ತ್ರೀಪಾತ್ರ ಕಲಾವಿದರಾಗಿದ್ದ ಯುವರಾಜ್ ಇವರು 'ಇಂದು ಎಸ್. ಮಂಗಳೂರು'ರ ತಮ್ಮ. ಈರ್ವರೂ ರಂಗಭೂಮಿಯಲ್ಲಿ 'ಅಕ್ಕ-ತಂಗಿ'ಯಂತೆ ನಟನೆಯಲ್ಲಿ ಜನಪ್ರಿಯರಾಗಿದ್ದರು. 'ಪೊರ್ಲು ಆರ್ಟ್ಸ್' ತಂಡದ ಶಾಶ್ವತ ಕಲಾವಿದರಾಗಿದ್ದ ಯುವರಾಜ್ ಬಾಲ್ಯದಿಂದಲೇ ಸ್ತ್ರೀಪಾತ್ರ, ಜತೆಗೆ ಗಾಯನ ಮಾಡುತ್ತ ಬಂದರು. 'ಪುಂಡಿ ಪಣವು', 'ನೇಮದ ಬೂಳ್ಯ', 'ಕಾರ್ನಿಕದ ಬಬ್ಬುಸ್ವಾಮಿ'-ನಾಟಕಗಳ ಕಥಾನಾಯಕಿಯಾಗಿ, ದಂಡೆಕೇರಿಯವರ 'ಬಯ್ಯಮಲ್ಲಿಗೆ'ಯ ಸುಮತಿ ಪಾತ್ರವಲ್ಲದೆ ಶಾಂತಾರಾಂ ಕಲ್ಲಡ್ಕರ ಹೆಚ್ಚಿನ ನಾಟಕಗಳಲ್ಲಿ ಪಾತ್ರ ವಹಿಸಿ, ಟ್ಯಾಬ್ಲೋ ನೃತ್ಯಗಳಲ್ಲೂ ಮಿಂಚಿ, ಕಲಾಸೇವಾ ನಿರತರಾಗಿರುವಾಗಲೇ 2009ರಲ್ಲಿ ಹೃದಯಾಘಾತದಿಂದ ನಿಧನರಾದರು.

**ಶ್ರೀಧರ ಪ್ರಭು ಕಿನ್ನಿಗೋಳಿ**

ಮಂಗಳೂರು ಕೆನರಾ ಕಾಲೇಜಿನಲ್ಲಿ ಉದ್ಯೋಗಿಯಾಗಿರುವ ಕಿನ್ನಿಗೋಳಿಯ ಶ್ರೀಧರ ಪ್ರಭು ಕಳೆದ ಮೂರು ದಶಕಗಳಿಂದಲೂ ಕಿನ್ನಿಗೋಳಿಯಲ್ಲಿ ನಾಟಕದಲ್ಲಿ

ಅಭಿನಯಿಸುತ್ತಿದ್ದು ಹೆಚ್ಚಾಗಿ ಸ್ತ್ರೀಪಾತ್ರದಲ್ಲಿ ಹೆಸರಾದವರು. ಎರಡು ದಶಕಗಳ ಹಿಂದೆ ಹುಟ್ಟಿಕೊಂಡ ವಿಜಯ ಕಲಾವಿದರು ತಂಡದಲ್ಲಿ 'ಬಯ್ಯಮಲ್ಲಿಗೆ' ನಾಟಕದ ಕಥಾ ನಾಯಕಿಯಾಗಿ ಹಲವು ಪ್ರದರ್ಶನಗಳಲ್ಲಿ ಪಾಲ್ಗೊಂಡರು. ಈ ತಂಡದ ವಿಭಿನ್ನ ನಾಟಕಗಳಲ್ಲಿ ಈಗಲೂ ಅಭಿನಯಿಸುತ್ತಿದ್ದಾರೆ.

ಇಂತಹ ಇನ್ನು ಹಲವರೆಂದರೆ ಕಾರ್ಕಳದ ಚಂದ್ರಹಾಸ ಸುವರ್ಣ, ಉದಯಶಂಕರ ಕಲ್ಲೊಟ್ಟೆ, ರಂಗಪ್ಪಯ್ಯ ಹೊಳ್ಳ ಮತ್ತು ಮಂಗಳೂರಿನ ಶಶಿಧರ ಕೋಟ್ಯಾನ್, ಮತ್ತು ಹಲವು ಸ್ತ್ರೀಪಾತ್ರಗಳನ್ನು ನಾಟಕಗಳಲ್ಲಿ ನಿರ್ವಹಿಸಿದ್ದಲ್ಲದೆ 'ಬಂಗಾರ್ ಪಟ್ಲೇರ್' ಚಿತ್ರದಲ್ಲೂ ಸ್ತ್ರೀಪಾತ್ರವನ್ನೇ ಮಾಡಿದ ಅನಿಲ್ ಕುಮಾರ್ ಬರ್ಕೆ, ಯುವರಾಜ್ ಶೆಟ್ಟಿ, ಹರಿಶ್ಚಂದ್ರ ಕದ್ರಿ, ನಾಯಕಿ, ವಿದೂಷಕಿ ಮುಂತಾದ ಪಾತ್ರಗಳಲ್ಲಿ ಮಿಂಚಿದ ಜಯಾನಂದ್ – ಮತ್ತು ಎಂಬತ್ತರ ದಶಕದ ಬಳಿಕ ನಗೆನಾಟಕಗಳಲ್ಲಿ ಮುದುಕಿಯ ಪಾತ್ರದಲ್ಲಿ ಅತ್ಯಂತ ಜನಪ್ರಿಯರಾಗಿರುವ ಶ್ರೀ ದಿನೇಶ್ ಅತ್ತಾವರ ಮುಂತಾದವರ ಕಲಾಸೇವೆ ಉಲ್ಲೇಖನೀಯ.

ಎಂಬತ್ತರ ದಶಕದ ಒಂದು ಕಾಲಾವಧಿಯಲ್ಲಿ ಮಂಗಳೂರು ಪುರಭವನ ಸೇರಿದಂತೆ ಜಿಲ್ಲೆಯ ಮುಲ್ಕಿ, ಸುರತ್ಕಲ್, ಹಳೆಯಂಗಡಿ, ಬಂಟವಾಳ ಮುಂತಾದೆಡೆ ತುಳುನಾಟಕ ಸ್ಪರ್ಧೆಗಳು ನಡೆದವು. ಈ ಮೂಲಕ ಅನೇಕ ಹಳೆಯ ಹೊಸ ನಾಟಕಗಳೂ, ಅನೇಕ



ಕಲಾವಿದರೂ ರಂಗ ಭೂಮಿಯಲ್ಲಿ ಕಾಣಿಸಿಕೊಂಡರು. ಸ್ತ್ರೀಪಾತ್ರದಲ್ಲಿ ರೋಹಿಣಿ ಜಗರಾಂ, ಜಯಮಾಲಾ, ಜಯಶೀಲ, ಸರೋಜಿನಿ ಶೆಟ್ಟಿ, ಉಡುಪಿ ರಂಗಭೂಮಿಯ ಸರೋಜ ಮುಂತಾದವರು ಗಮನ ಸೆಳೆದರೆ ತನ್ನ ಚಕ್ರವ್ಯೂಹ, (ಮುಂದೆ 'ನಿನ್ನ ಮೋಕೆದಾ' ಎಂಬುದಾಗಿ ಬದಲಾಯಿತು) ನಾಟಕದಲ್ಲಿ ಸ್ತ್ರೀಪಾತ್ರಧಾರಿಯಾಗಿ ಗಮನಸೆಳೆದ **ರಾಮಚಂದರ್ ಬೈಕಂಪಾಡಿ** – ಹಳೆಯಂಗಡಿ ಮುಂತಾದೆಡೆಯ ನಾಟಕ ಸ್ಪರ್ಧೆಯಲ್ಲಿ ನಟನೆಗೆ ಪ್ರಥಮ ಪುರಸ್ಕಾರ ಪಡೆದರು. ಈ ನಾಟಕ ನವಭಾರತ ತುಳುಕೂಟ ನಾಟಕ ಸ್ಪರ್ಧೆಯ ಪುರಭವನದ ಪ್ರದರ್ಶನದಲ್ಲಿ ಗಮನ ಸೆಳೆಯಿತು. ಪ್ರಸಿದ್ಧ ರಂಗಕರ್ಮಿ ಮ್ಯೊದಿನಬ್ಬ ಈ ತಂಡದ ಬೇಡಿಕೆಯ ಹಾಸ್ಯ ನಟರಾಗಿಯೂ ನಟಿಸಿದರು.

# ಹಾಸ್ಯನಾಟಕಗಳ ಜಯಭೇರಿ

ವೇಗವಾಗಿ ಬದಲಾಗುತ್ತಿದ್ದ ಜೀವನಶೈಲಿ, ಟಿ.ವಿ. ಮಾಧ್ಯಮದ ಪ್ರವೇಶ, ನಾಟಕ ಮಾಧ್ಯಮದಲ್ಲಿ ಗಂಭೀರವಾಗಿ ತೊಡಗಿಕೊಂಡು ಹೊಸತನ್ನು ನೀಡಬಲ್ಲವರು ಬಹಳವಿಲ್ಲದ ಕೊರತೆ – ಇದರಿಂದಾಗಿ ಅತಂತ್ರ ಸ್ಥಿತಿಯಲ್ಲೇ ಇದ್ದಂತಹ ತುಳುನಾಟಕ ರಂಗಕ್ಕೆ ತೊಂಭತ್ತರ ದಶಕದಲ್ಲಿ ಶ್ರೀ ಪಾಂಡೇಶ್ವರರ 'ತೆಲ್ಪರೆ ಕಲ್ಪಿ', ನಗೆ ನಾಟಕದ ಪ್ರೇರಣೆಯೋ ಎಂಬಂತೆ, ಓಟದ ಕುದುರೆಗಳೆರಡು ಧಾವಿಸಿ ಬಂದವು. ಅವರೇ 'ಬಲೇ ಚಾ ಪರ್ಕ'ದ ದೇವದಾಸ್ ಕಾಪಿಕಾಡ್ ಹಾಗೂ 'ಒಂಜಿ ನಿಮಿಷ'ದ ವಿಜಯಕುಮಾರ್ ಕೊಡಿಯಾಲ್‌ಬೈಲ್.

**ದೇವದಾಸ್ ಕಾಪಿಕಾಡ್‌ರ 'ಚಾಪರ್ಕ' ತಂಡ**

ಜನಸಾಮಾನ್ಯರ ನಿತ್ಯಜೀವನದ ಅಧ್ವಾನಗಳ ಹಾಸ್ಯ ಪ್ರಸಂಗಗಳನ್ನೇ ಸಂಭಾಷಣೆಯಾಗಿ ಪೋಣಿಸಿ ನಾಟಕರೂಪ ನೀಡುವ ತಂತ್ರಕ್ಕೆ ಮೊದಲು ಕೈಯಿಕ್ಕಿದವರು ಕಾಪಿಕಾಡ್. ಅವರ 'ಬಲೇ ಚಾ ಪರ್ಕ', (ಮಂಗಳೂರು ಶಕ್ತಿನಗರದಲ್ಲಿ 1986ರಲ್ಲಿ ಪ್ರಥಮ ಪ್ರದರ್ಶನ). ಗಂಟೇತಾಂಡ್?' ಮತ್ತಿತರ ಪ್ರಹಸನ ಸ್ವರೂಪದ ನಾಟಕಗಳು ಪ್ರೇಕ್ಷಕರನ್ನು ಆಕರ್ಷಿಸಿ ನಿಮಿಷಕ್ಕೊಮ್ಮೆ ನಕ್ಕು ನಗಿಸಿದವು.

ಸತ್ಯ ಕಥೆಯಾಧಾರಿತ 'ಪಂಡ ನಂಬಯರ್', 'ಕುಡಿತದ ದುಷ್ಪರಿಣಾಮದ ಸಂದೇಶವಿರುವ 'ದೇವೆರ್ ದೀಲೆಕ್ಕಾಪುಂಡು', ಕಲಾವಿದನ ಖಾಸಗಿ ಬದುಕನ್ನು ಬಿಂಬಿಸುವ 'ಮಾಮು', ವರದಕ್ಷಿಣೆ ಪಿಡುಗಿನ 'ಬಲೇ ತೆಲಿಪುಗ', ಬಡ ಮಕ್ಕಳ ದಾರುಣ ಬದುಕಿನ ಚಿತ್ರಣದ 'ಆದುಪ್ಪೆರ್ಲಾ ಯಾವು' – ಮೊದಲಾದ ನಾಟಕಗಳಲ್ಲಿ ಹಾಸ್ಯದ ಮೂಲಕವೇ ಸಂದೇಶ. 'ಈರ್ ದೂರ?', 'ಪುದರ್ ದೀತಿಜಿ', 'ಅಕ್ಕ', 'ಕಾಸ್ ಓಲ್ದೀಪರ್?', 'ನಿಕುಲು ಮಾತೆರ್ಲಾ ಉಲ್ಲರತ್ತಾ?', 'ಯಾನೊರಿ ಬರೊಲಿಯಾ', 'ಎನ್ನ ಕಂಡನಿ ಬನ್ನಗ', 'ಪಾರ್ವತಿ', 'ಅಪ್ಪು', 'ಬೊಳ್ಳಿ', 'ತೆಲಿಪಂದಿನಕ್ಲು ತೆಲಿಪೆರ್', 'ನರ್ವಸ್ ನಾರಾಯಣೆ', 'ದೇವೆರ್' – ಮುಂತಾದ 50ಕ್ಕೂ ಮೇಲ್ಪಟ್ಟ ನಾಟಕಗಳನ್ನು ದೇವದಾಸ್ ಕಾಪಿಕಾಡ್

ಸತತವಾಗಿ ಪ್ರದರ್ಶಿಸುತ್ತಲೇ ಇದ್ದಾರೆ. ಈಚೆಗೆ ತುಳು ಸಿನೆಮಾಗಳಲ್ಲಿ ಸಕ್ರಿಯರು 1985ರಲ್ಲಿ ಉದಿಸಿ 2010ರ ಬೆಳ್ಳಿಹಬ್ಬದಲ್ಲಿ ಸಂಭ್ರಮಿಸಿದ ದೇವದಾಸ ಕಾಪಿಕಾಡ್‌ರ 'ಚಾ ಪರ್ಕ' ತಂಡಕ್ಕೆ ಉಡುಪಿ ಹಾಗೂ ಮುಂಬೈಯಲ್ಲಿ ಅಭಿಮಾನಿ ಬಳಗಗಳು ಉದಯಿಸಿವೆ. ತಂಡದ 30ನೆಯ ನಾಟಕ 'ಬಾಲಕೃಷ್ಣ ಬಿ.ಎ.'ಯೊಂದಿಗೆ ಕಳೆದೊಂದು ದಶಕದಲ್ಲಿ ಮುಂಬಯಿಯಲ್ಲೇ 700ಕ್ಕೂ ಮಿಕ್ಕಿ ಪ್ರದರ್ಶನಗಳನ್ನು ನೀಡಿ ಅಲ್ಲಿನ ಪ್ರೇಕ್ಷಕರನ್ನು ಸೆಳೆದುಕೊಂಡಿದ್ದು 2003, 2004ರಲ್ಲಿ ಬಹರೈನ್, ದುಬೈ, ಮಸ್ಕತ್‌ಗಳಿಗೆ ಆಹ್ವಾನಿಸಲ್ಪಟ್ಟು ಅಲ್ಲೂ ತುಳು ನಾಟಕಗಳಿಗೆ ನಿರಂತರ ಬೇಡಿಕೆಯ ಗಟ್ಟಿ ಸ್ಥಾನವನ್ನು ಗಳಿಸಿಕೊಂಡಿದೆ. ಇವರ 50ನೆಯ ನಾಟಕವೂ ರಂಗಕ್ಕೇರಿದೆ. ಕರ್ನೂರು ಮೋಹನ ರೈ ಈ ತಂಡದ ಮುಂಬೈ ಹಾಗೂ ಕೊಲ್ಲಿ ರಾಷ್ಟ್ರಗಳ ಸಂಚಾಲಕರು.

**ಕಾಪಿಕಾಡ್‌ರ 50ಕ್ಕೂ ಮಿಕ್ಕ ನಾಟಕಗಳು** ಬಲೇ ಚಾ ಪರ್ಕ, ಗಂಟೇತಾಂಡ್, ಈರ್ ದೂರ, ಮಾಮು, ಪಂಡ ನಂಬಯರ್, ಪುದರ್ ದೀತಿಜಿ, ಅಕ್ಕ, ದೇವೆರ್ ದೀಲೆಕ್ಕಾಪುಂಡು, ಕಾಸ್ ಓಲ್ದೀಪರ್, ನಿಕುಲು ಮಾತೆರ್ಲಾ ಉಲ್ಲರತ್ತ, ಆದುಪ್ಪೆರ್ಲ ಯಾವು, ಬಲೇ ತೆಲಿಪುಗ, ಪುದರ್ ಪನೊಡ್ಚಿ, ಯಾಸೊರಿ ಬರೋಲಿಯ, ಬಾಬು, ಕತೆ ನನ ಬರೆವೊಡು, ಎನ್ನ



'ಬಲೇ ಚಾಪರ್ಕ' ನಾಟಕದಲ್ಲಿ ನವೀನ್ ಡಿ ಪಡೀಲ್ ಮತ್ತು ಮಾಧವ ಶಕ್ತಿನಗರ (1987)

ಕಂಡನಿ ಬನ್ನಗ, ಫ್ರೆಂಡ್ಸ್ (ಬಿತ್ತಿಲ್ದ ಉಲಯಿ ಉಲ್ಲ ಕೆಲವು ಸೊತ್ತುಲು), ಇಲ್ಲ್ ಇಲ್ಲದ ಕತೆ, ಪಾರ್ವತಿ, ಅಪ್ಪು, ಪನಿಯರೆ ಪೋಂಡ ಮಸ್ತುಂಡು, ನಂಕ್ ದೇವೆರುಲ್ಲೆರ್, ಪಾಂಡು, ಬೊಳ್ಳಿ, ನರ್ವಸ್ ನಾರಾಯಣೆ, ಪ್ರೈವಾಟ್ ವಸಂತೆ, ನಮ್ಮ ಕಾವೇರಿ, ತೆಲಿಕೆದ ಬರ್ಸೊಲು, ಬಾಲಕೃಷ್ಣ ಬಿ.ಎ., ತೆಲಿಪಂದಿನಕ್ಲು ತೆಲಿಪೆರ್, ಭಜನೆ ಭೋಜಣ್ಣೆ, ಪಿರ ತೂವೊಡ್ಚಿ ದುಂಬು ಪೋಲೆ, ಮೊಬೈಲ್ ಮಾಧವೆ, ಬೊರಿ ಬಸವೆ, ಅಂಗಡಿ ಬಾಬುನ ತಂಗಡಿ ಮಗೆ, ಸುದ್ದಿ ಮಲ್ಪೊಡ್ಚಿ, ದೇವೆರ್ ನಡಪಾವೆರ್, ಕೆಬಿ ಪಿತ್ತಲೆ, ಈರ್ ಉಂಡರ, ಮೋನೆಗ್ ತಕ್ಕ ಪಾತೆರೊಡ್ಚಿ, ಬರ್ಕ್ಕದ್ ಒರಿಂಡ, ಪೊರ್ತು ಪೊರ್ತುದಲೆಕ್ಕ ಉಪ್ಪಂದ್, ಗೋಪಾಲ ಈ ಪಾರ್‌ಬಲ... 50ನೆಯದಾದ 'ದೇವೆರ್' ಹಾಗೂ 'ಮಷ್ಪಕ್ಕನ ಇಮಾನ' ಮುಂತಾದ ಇನ್ನೂ ಹಲವು ಹೊಸ ನಾಟಕಗಳು ಪ್ರದರ್ಶನವಾಗುತ್ತಲೇ ಇವೆ.

### ವಿಜಯಕುಮಾರ್ ಕೊಡಿಯಾಲ್‌ಬೈಲ್‌ರ 'ಕಲಾಸಂಗಮ'



ಇದೇ ಮಾದರಿಯಲ್ಲಿ ಇನ್ನೋರ್ವ ಪ್ರತಿಭಾವಂತ ತರುಣ 'ಕಲಾಸಂಗಮ'ದ ವಿಜಯಕುಮಾರ್ ಕೊಡಿಯಾಲ್‌ಬೈಲ್ 1990ರ ವೇಳೆಗೆ ಜಯಭೇರಿ ಹೊಡೆದ 'ಒರಿಯದೊರಿ ಅಸಲ್' ಮೂಲಕ 'ಸ್ಟಾರ್ ವ್ಯಾಲ್ಯೂ' ಗಳಿಸಿಕೊಂಡರು. ಇದರ ಜೀವಾಳವೂ ಹಾಸ್ಯವೇ. ಕಾರ್ಪೊರೇಟರ್ ಕಾಂತಪ್ಪಣ್ಣ, ಭಜನೆ ಬಸಪ್ಪ, ವಠಾರದ ಗಯ್ಯಾಳಿ ಮುದುಕಿ ಲಿಂಗಮಕ್ಕ, ಸೂಟ್‌ಕೇಸ್, ವಿಸಿಟಿಂಗ್ ಕಾರ್ಡ್‌ನ ತೆಂಗಿನಮರ ಹತ್ತುವ ನಾಥು, ನಾಯಕಿ ಚಿತ್ತು, ಕಂಗೆಡಿಸುವ 'ನುಡಿ'ಯ ದರ್ಶನ ಪಾತ್ರಿ, ಮಿಲಿಟ್ರಿ ಕೇಶವ – ಇವರ ಸುತ್ತ ಆವರಿಸುವ ವೇಗದ ಶೈಲಿಯ 'ಒರಿಯದೊರಿ ಅಸಲ್' (ನಿರ್ದೇಶನ : ವಸಂತ ವಿ. ಅಮೀನ್) – ದಾಖಲೆ ಪ್ರದರ್ಶನ ಕಂಡಿತು.

### ವಿಜಯಕುಮಾರ್ ಕೊಡಿಯಾಲ್‌ಬೈಲ್ ನಾಟಕಗಳು

'ಒಂಜಿನಿಮಿಷ', ಒರಿಯೆಮಗೆ, ಅಕ್ಲೆಲೆಕ್ಕ ಎಂಕುಲತ್ತ್, ಮಂಡೆ ಬಲಿಪುಜಿ, ಮಾಮುಗೊಂಜಿ ಮಾಮಿ, ಒರಿಯದೊರಿ ಅಸಲ್, ಒಯಿಕ್ಲಾ ಆವಂದಿನಕ್ಲು, ಕೋಡೆ ಇನಿ ಎಲ್ಲೆ? ಅಸಲ್ ಏರ್, ಮದಿಮೆ –2006, ಸಂಸಾರದ ಸರಿಗಮ, ಅಸಲ್ ಮೂರ್ತಿಲು, ದೇವು, ಮಣಿಕಂಠ ಮಹಿಮೆ, ಕಡಲಮಗೆ ಇತ್ಯಾದಿ

ಕೊಡಿಯಾಲ್‌ಬೈಲ್ ವಿಮರ್ಶಕರ, ಪ್ರೇಕ್ಷಕರ ಎರಡೂ ನೆಲೆಗಳನ್ನು ಸಂಭಾಳಿಸುತ್ತಾ ಒಮ್ಮೆ ಕಾಮಿಡಿ, ಇನ್ನೊಮ್ಮೆ 'ಗಂಭೀರ' ನಾಟಕ ಕೊಡುತ್ತಾ ಬಂದವರು. 1984ರ 'ಒರಿಯೆ ಮಗೆ'ಯ ಬಳಿಕ ಅಪಾರ ಯಶಸ್ಸು ಗಳಿಸಿದ 'ಒರಿಯದೊರಿ ಅಸಲ್'

ಭಾಗ 1 ಮತು ಭಾಗ 2, ಮಣಿಕಂಠ ಮಹಿಮೆ (ಪೌರಾಣಿಕ), 'ಒಯಿಕ್ಕಲಾ ಆವಂದಿನಕ್ಲು' (99 ಪ್ರಯೋಗ), ಮಾಮುಗೊಂಜಿ ಮಾಮಿ (500ಕ್ಕೂ ಹೆಚ್ಚು ಪ್ರದರ್ಶನ) ಮಂಡೆ ಬಲಿಪುಜಿ (ಕಾರ್ಗಿಲ್ ಕತೆ), ಅಸಲ್ ಮೂರ್ತಿಲು (ಮೂಲ ಮರಾಠಿಯ ಆಲ್ ದಿ ಬೆಸ್ಟ್, ಸಂಸಾರದ ಸರ್ಕಸ್, ಮುಂದೆ ಮರಾಠಿಯಲ್ಲಿ ದಾಖಲೆ ಬರೆದ 'ಸೈರಿಸೈ' ನಾಟಕದ ತುಳುರೂಪ 'ಅಸಲ್ ಏರ್?' ಇದರಲ್ಲಿ ರಾಜೇಶ್ ಬಂಟ್ವಾಳರ ನಾಲ್ಕು ಯಶಸ್ವಿ ಪಾತ್ರ ನಿರ್ವಹಣೆಗೆ ಪ್ರೇಕ್ಷಕರ ತುಂಬು ಪ್ರೋತ್ಸಾಹ, ಬಳಿಕ ಎನ್‌ಕೌಂಟರ್ ಸ್ಪೆಷಲಿಸ್ಟ್ ದಯಾನಾಯಕ್ ಜೀವನ ಕತೆಯ 'ಏದ್ದು' ಹಿಟ್ ಆಯಿತು. ಮುಂದಿನದು 'ಭೋಜೆ ಬುಡಿಯರೆಗೆ', ವರದಕ್ಷಿಣೆ ಸಮಸ್ಯೆಯ ಕಥಾವಸ್ತುವಿನ ನವಿರು ಹಾಸ್ಯ, ಗಟ್ಟಕತೆಯ 'ಮದಿಮೆ' ಉತ್ತಮ ಸಂದೇಶವಿದ್ದು 'ಒರಿಯದೋರಿ ಅಸಲ್'ನಂತೆಯೇ ಭರ್ಜರಿ ಯಶಸ್ಸು ಗಳಿಸಿ ಈಗಲೂ ಪ್ರಯೋಗವಾಗುತ್ತದೆ. 'ಕೋಡೆ ಇನಿ ಎಲ್ಲೆ', 'ಸೀತಾ ಟೀಚರ್' , 'ಕಡಲ ಮಗೆ' ಹೀಗೆ ನಾಟಕದಿಂದ ನಾಟಕಕ್ಕೆ ವಿಜಯ ಕುಮಾರ್ ವಸ್ತು ಮತ್ತು ನಿರ್ವಹಣೆಯಲ್ಲಿ ನೂತನ ಆವಿಷ್ಕಾರಗಳೊಂದಿಗೆ ಸಾಗಿ ಬಂದಿದ್ದಾರೆ. ತನ್ನ ಸಿನಿಮಾಗಳ ಯಶಸ್ಸಿನ ಬಳಿಕವೂ ಸುತ್ತಣ ಸಮಕಾಲೀನ ಧೋರಣೆಗಳನ್ನು ಒಳ ಗೊಳ್ಳುತ್ತಲೇ ಸಂಭಾಷಣಾ ಪಥ್ಯ ಮತ್ತು ತೂಕದ ರಂಗಪ್ರಯೋಗದಲ್ಲಿ ನಿರತರಾಗಿದ್ದಾರೆ.

ಕೊಡಿಯಾಲ್‌ಬೈಲ್‌ರ ಹಲವು ನಾಟಕಗಳು ಸಿಡಿರೂಪದಲ್ಲಿ ಪ್ರಸಾರದಲ್ಲಿವೆ. ಕೊಡಿಯಾಲ್‌ಬೈಲ್ ಸದಾ ಹೊಸತನ, ಹೊಸ ಪ್ರಯೋಗ ಮಾಡುತ್ತಾ ಬಂದವರು. ತನ್ನ ನಾಟಕಗಳಲ್ಲಿ ನಾಡಿನ ಜೀವಂತ ಸಮಸ್ಯೆಗಳ ಸುತ್ತ ಬೆಳಕು ಚೆಲ್ಲಿ ಎಲ್ಲ ವರ್ಗದ ಪ್ರೇಕ್ಷಕರನ್ನೂ ತಟ್ಟಿದವರು.



**ಕಲಾಸಂಗಮದ 'ಒರಿಯದೋರಿ ಅಸಲ್' ನಾಟಕದ ದೃಶ್ಯ. ದಿನೇಶ್ ಅತ್ತಾವರ (ಎಡ ತುದಿ), ವಿ.ಜಿ. ಪಾಲ್ (ಬಲ ತುದಿ) ಮತ್ತಿತರರು**

ಸಮಾಜದ ಘಟನಾವಳಿಗಳತ್ತ ಸೂಕ್ಷ್ಮ ನೋಟ ಇರಿಸುತ್ತಾ, ನಾಟಕಗಳ ನಡುವೆಯೇ ಕೋಸ್ಟಲ್ ವುಡ್ ಕರಾವಳಿ ತುಳು ಚಿತ್ರರಂಗದಲ್ಲಿ ಏನಾದರೂ ಬದಲಾವಣೆ ತರುವ ತುಡಿತದೊಂದಿಗೆ ತನ್ನ ಒರಿಯರ್ದೊರಿ ಅಸಲ್ ನಾಟಕವನ್ನು ಅದೇ ಹೆಸರಿನಲ್ಲಿ ಸಿನೆಮಾ ಮಾಡಿ ಅದರಲ್ಲೂ ಭರ್ಜರಿ ಯಶಸ್ಸು ಗಳಿಸಿದರು.

ನಿತ್ಯದ ಜಂಜಾಟಗಳಿಂದ ಹೊರಬಂದು, ಮೂರು ಗಂಟೆಳ ಕಾಲ ಎಡೆಬಿಡದೆ ಹೊಟ್ಟೆ ಹುಣ್ಣಾಗುವಂತೆ ನಗಿಸಬಲ್ಲ 'ಅಸಲ್' ಮತ್ತು 'ಚಾಪರ್ಕ' ತಂಡಗಳ ಹಾಸ್ಯನಾಟಕ ಪ್ರದರ್ಶನಗಳಿಗೆ ಪ್ರೇಕ್ಷಕರು ಮುಗಿಬಿದ್ದರು. 'ಕ್ಯೂ'ನಲ್ಲಿ ಕಾದು 'ಹೌಸ್‌ಫುಲ್' ಶೋ ಕಂಡರು.

'ಕಲಾಸಂಗಮ'ದ ವಿಜಯಕುಮಾರ್ ಕೊಡಿಯಾಲ್‌ಬೈಲ್ ಅತ್ಯಾಧುನಿಕ ರಂಗ ವಿನ್ಯಾಸ, ತಾಂತ್ರಿಕತೆ ಮತ್ತು ವೇಗದ ಪ್ರಾಯೋಗಿಕತೆಯತ್ತ ದೃಷ್ಟಿ ನೆಟ್ಟಿದ್ದು ಅಸಲ್ ಮೂರ್ತಿಲು, ದೇವು, ಮಣಿಕಂಠ ಮಹಿಮೆಯಂಥ ಪ್ರಯೋಗ ಪ್ರದರ್ಶನಗಳಲ್ಲಿ ವೈವಿಧ್ಯತೆ ತೋರಿಸಿದ್ದಾರೆ. ಇವರ ನಾಟಕ 'ಅಸಲ್ ಏರ್' (ಮೂಲ ಮರಾಠಿಯ ಕೇದಾರ್ ಪಾಂಡೆಯವರ ಕೃತಿ) ಪ್ರಯೋಗಶೀಲತೆಯಲ್ಲಿ ಹತ್ತು ಹೆಜ್ಜೆ ಮುಂದಾಗಿದೆ. ಕರಾವಳಿಯ ಆಧುನಿಕ ವಾಸ್ತವಿಕ ಬದುಕಿಗೆ ಹತ್ತಿರವಾದವು. ಮೋನಪ್ಪ ಭಂಡಾರಿ ಎಂಬ ಎಸ್ಟೇಟ್ ಮಾಲಕ ಮತ್ತು ಅವನ ಹೋಲಿಕೆಯ ಇತರ ಮೂವರು – ಹೀಗೆ ಒಟ್ಟು ನಾಲ್ಕು ಪಾತ್ರಗಳಲ್ಲಿ ರಂಗದಲ್ಲಿ ಯಶಸ್ವಿಯಾಗಿರುವ ಕಲಾವಿದ ರಾಜೇಶ್ ಬಂಟ್ವಾಳ ಪ್ರಚಂಡ ಪ್ರತಿಭೆಯ ಭೋಜರಾಜ್ ವಾಮಂಜೂರು ಮುಂತಾದವರುಗಳು ಈ ನಾಟಕದ ವಿಶಿಷ್ಟ ಕೊಡುಗೆ.

* * *

ನಾಡಿನಾದ್ಯಂತ, ಹೊರನಾಡು, ಕೊಲ್ಲಿ ರಾಷ್ಟ್ರಗಳಲ್ಲೂ ಈ ಹಾಸ್ಯ ನಾಟಕಗಳು ಜನಪ್ರಿಯಗೊಂಡದ್ದು ಸುಳ್ಳಲ್ಲ. ಇವು ನಾಟಕಗಳೇ, ಇವುಗಳಲ್ಲಿ ಹಾಸ್ಯ ಬಿಟ್ಟರೆ ಬೇರೇನಿದೆ, ಇವುಗಳಿಂದ ಸಮಾಜಕ್ಕೆ ಸಂದೇಶವೇನು' ಮುಂತಾಗಿ ಕೆಲವರ ಪ್ರಶ್ನೆ. ಆದರೆ ತೊಂಭತ್ತರ ದಶಕದಲ್ಲಿ 'ತುಳುನಾಟಕ ರಂಗದತ್ತ ಸಮಸ್ತರೂ ಬೆರಗಾಗಿ ನೋಡುವಂತೆ ಆಕರ್ಷಿಸಿದ್ದು ಈ ಹಾಸ್ಯ ನಾಟಕಗಳು ಎಂಬುದು ಸುಳ್ಳಲ್ಲ. ಇವುಗಳ ಶೀರ್ಷಿಕೆಯೂ ಒಂದಕ್ಕಿಂತ ಇನ್ನೊಂದು ಆಕರ್ಷಕ. ಆನಂದ ಬೋಳಾರ್, ವಿ.ಜಿ.ಪಾಲ್, ದಿ. ಸುರೇಂದ್ರನಾಥ್, ನವೀನ್ ಡಿ. ಪಡೀಲ್, ಮಾಧವ ಶಕ್ತಿನಗರ, ಆನಂದ ಶೆಟ್ಟಿ, ರಾಜೇಶ್ ಬಂಟ್ವಾಳ, ಅರವಿಂದ ಬೋಳಾರ್, ಭೋಜರಾಜ್ ವಾಮಂಜೂರು – ಮುಂತಾಗಿ ಸಹಜ ಪ್ರತಿಭೆಯ ನಟನಟಿಯರು, ಸಂಗೀತ ನಿರ್ದೇಶಕರೂ ಯಶಸ್ಸಿಗೆ ಕಾರಣರಾಗಿ, ವೃತ್ತಿ ನಾಟಕ ತಂಡಗಳ ಮಾದರಿಯಲ್ಲೇ ಈ ನಾಟಕಗಳು ನಿರಂತರ ಬೇಡಿಕೆಯಲ್ಲಿ ಮುಂದುವರಿದಿವೆ.

**ಕಿಶೋರ್ ಡಿ. ಶೆಟ್ಟರ ಕುಸೆಲ್ದ ಕಲಾವಿದರು**
**ಲಕುಮಿ, ಶ್ರೀ ಲಲಿತೆ ತಂಡಗಳು**



ಕೊಡಿಯಾಲ್‌ಬೈಲ್ ಸಮೀಪದ ಸ್ಮಾರ್ಟ್ ಫ್ರೆಂಡ್ಸ್ ಕ್ಲಬ್‌ನಲ್ಲಿ ಸಕ್ರಿಯರಾಗಿದ್ದು ಆದಾಗಲೇ ಸೀತಾರಾಮ್ ಕುಲಾಲ್, ಸಂಜೀವ ಎಸ್.ಕೆ. ಮುಂತಾದ ಪ್ರಸಿದ್ಧ ನಾಟಕಕಾರರ ನಾಟಕಗಳಲ್ಲಿ ಅಭಿನಯಿಸುತ್ತಿದ್ದ, ಹವ್ಯಾಸಿ ಯಕ್ಷಗಾನ ಕಲಾವಿದರೂ ಆಗಿದ್ದ ಕಿಶೋರ್ ಡಿ. ಶೆಟ್ಟರು 'ಲಕುಮಿ' ಮತ್ತು 'ಶ್ರೀಲಲಿತೆ' ಈ ಎರಡು ಹೆಸರಾಂತ ನಾಟಕ ತಂಡಗಳ ಸಂಚಾಲಕರು. ಸಮಾನ ಮನಸ್ಕ ಗೆಳೆಯರನ್ನು ಸೇರಿಸಿಕೊಂಡು ಮೊದಲು ಇವರು ಆರ್ಥಿಕ ಬೆನ್ನೆಲುಬಾಗಿ ನಿಂತು ವಿಜಯಕುಮಾರ್ ಕೊಡಿಯಾಲ ಬೈಲ್‌ರು ಸ್ಥಾಪಿಸಿದ 'ಕಲಾಸಂಗಮ' ತಂಡ 1980–90ರ ದಶಕದಲ್ಲಿ 'ಒರಿಯರ್ದೊರಿ ಅಸಲ್' ನಾಟಕದ ಮೂಲಕ ನಾಟಕರಂಗದಲ್ಲಿ ಸಂಚಲನವನ್ನುಂಟು ಮಾಡಿ ಅಭೂತ ಪೂರ್ವ ಯಶಸ್ಸು ಗಳಿಸಿದ್ದು ಇತಿಹಾಸ. ರಂಗಭೂಮಿಯಲ್ಲಿ ಏನಾದರೂ ಹೊಸತನಕ್ಕಾಗಿ ತುಡಿಯುತ್ತಿದ್ದ ಕಿಶೋರ್ ಡಿ. ಶೆಟ್ಟಿಯವರು ಹಾಗೂ ವಿಜಯಕುಮಾರ್ ಸೇರಿ ದೃಶ್ಯದಿಂದ ದೃಶ್ಯಕ್ಕೆ ಅತ್ತಿತ್ತ ಸರಿಯುವ ಪರದೆಗಳ ಬದಲಾಗಿ ಕಲಾಸಂಗಮದ ನಾಟಕದ ಮೂಲಕ ಸಿಂಗಲ್ ಸೆಟ್ಟಿಂಗ್‌ನ ವಿನೂತನ ದೃಶ್ಯವಿನ್ಯಾಸ ಪ್ರಯೋಗಿಸಿದರು. ಕಲಾಭಿಮಾನಿಗಳು ಮುಕ್ತಕಂಠದಿಂದ ಈ ಬದಲಾವಣೆಯನ್ನು ಸ್ವಾಗತಿಸಿದರು. ದಿ। ಆನಂದ ಬೋಳಾರ್, ದಿ। ಮಾಧವ ಶಕ್ತಿನಗರರಂತಹ ಹಿರಿಯರು, ನವೀನ್ ಡಿ. ಪಡೀಲ್, ದಿನೇಶ್ ಅತ್ತಾವರ

'ಲಕುಮಿ' ತಂಡದ 2018–19ರಲ್ಲಿ ಪ್ರದರ್ಶಿತವಾಗುತ್ತಿರುವ ನೂತನ ನಾಟಕ

ಇವರಂತಹ ಹೊಸ ತಲೆಮಾರಿನ ಪ್ರತಿಭೆಗಳಿದ್ದ ಈ ತಂಡ ಅಗ್ರಪಂಕ್ತಿಗೆ ಬಂದು ಪ್ರಸಿದ್ಧವಾಯಿತು.

ಪ್ರತಿಭಾವಂತ ಕಲಾವಿದರಿಗೆ ವಿಸ್ತೃತ ಅವಕಾಶ ನೀಡುವ ನಿಟ್ಟಿನಲ್ಲಿ ಕಿಶೋರ್ ಡಿ. ಶೆಟ್ಟರು 2003ರಲ್ಲಿ ಕುಸೆಲ್ದ ಕಲಾವಿದರ 'ಲಕುಮಿ' ತಂಡವನ್ನು ಸ್ಥಾಪಿಸಿದರು. ವಿಭಿನ್ನ ಕಥಾ ಹಂದರದ ಸುಮಾರು 21 ಹಾಸ್ಯ ನಾಟಕಗಳನ್ನು ಈ ತಂಡ ಈವರೆಗೆ ಪ್ರದರ್ಶಿಸಿದೆ. 19 ಬಾರಿ ಕೊಲ್ಲಿರಾಷ್ಟ್ರಗಳಿಗೆ ಪ್ರವಾಸ ಮಾಡಿದ ಹೆಗ್ಗಳಿಕೆಯೂ ಇವರದು.

**ಶ್ರೀಲಲಿತೆ ತಂಡ :** ಮೂಲತಃ ಯಕ್ಷಗಾನ ಹವ್ಯಾಸಿ ಕಲಾವಿದರಾಗಿದ್ದ ಕಾರಣದಿಂದ ಕಿಶೋರ್ ಡಿ. ಶೆಟ್ಟರು ಪೌರಾಣಿಕ ನಾಟಕಗಳನ್ನು ಪ್ರದರ್ಶಿಸುವ ಅಪೇಕ್ಷೆಯಿಂದ 2009ರಲ್ಲಿ 'ಶ್ರೀಲಲಿತೆ' ಎನ್ನುವ ಎರಡನೆಯ ನಾಟಕ ತಂಡ ಕಟ್ಟಿದರು. ಇದರ ಮೂಲಕ ಪ್ರದರ್ಶಿಸಿದ ಅನೇಕ ಪೌರಾಣಿಕ ನಾಟಕಗಳ ಸಾಲಿನಲ್ಲಿ 'ಕಟೀಲ್ದಪ್ಪೆ ಉಳ್ಳಾಲ್ದಿ' ನಾಟಕ 275ಕ್ಕೂ ಮಿಕ್ಕ ಪ್ರದರ್ಶಿತವಾಗಿ ದಾಖಲೆ ನಿರ್ಮಿಸಿದೆ.

ಕಿಶೋರ್ ಡಿ. ಶೆಟ್ಟರು 'ಎಕ್ಕಸಕ' ಎನ್ನುವ ತುಳು ಚಿತ್ರವನ್ನು 'ಲಕುಮಿ ಬ್ಯಾನರ್'ನಲ್ಲಿ ನಿರ್ಮಿಸಿ ಶತದಿನ ಪ್ರದರ್ಶನದ ಯಶಸ್ಸು ಕಂಡರು. ಆ ಬಳಿಕದ 'ಪಿಲಿಬೈಲ್ ಯಮುನಕ್ಕ', 'ಅಮ್ಮೆರ್ ಪೋಲಿಸಾ', 'ಮೈ ನೇಮ್ ಈಸ್ ಅಣ್ಣಪ್ಪ'ದಂತಹ ತುಳು ಚಿತ್ರಗಳೆಲ್ಲ ಹೆಸರು ಗಳಿಸಿವೆ. ಇವರು ತುಳುನಾಟಕ ಕಲಾವಿದರ ಒಕ್ಕೂಟದ ಈಗಿನ ಅಧ್ಯಕ್ಷರು ಆಗಿದ್ದಾರೆ.

90ರ ದಶಕದಲ್ಲಿ 'ಗಂಗುನ ಗಮ್ಮತ್ತ್' ನಾಟಕದ ಪ್ರಚಂಡ ಯಶಸ್ಸಿನ ಬಳಿಕ ಈಚೆಗೆ ಬೆಂಗಳೂರಿನಲ್ಲಿ ಬಿಲ್ಲವ ಎಸೋಶಿಯೇಶನ್ ಪ್ರಾಯೋಜಕತ್ವದಲ್ಲಿ ಈವರೆಗೆ 98ನೇ ಪ್ರಯೋಗ ಮುಗಿಸಿರುವ 'ಒವುಲ ಒಂತೆ ದಿನನೆ'ಯೊಂದಿಗೆ ಪ್ರದರ್ಶನ ನೀಡಿ



**2018ರಲ್ಲಿ ಶರವು ದೇವಸ್ಥಾನದಲ್ಲಿ ಕಿಶೋರ್ ಡಿ ಶೆಟ್ಟರ 'ಲಕುಮಿ' ಮತ್ತು 'ಶ್ರೀಲಲಿತೆ' ಎರಡೂ ತಂಡಗಳ ನಾಲ್ಕು ಪೌರಾಣಿಕ ಮತ್ತು ಸಾಮಾಜಿಕ ನಾಟಕಗಳ ಮುಹೂರ್ತ ಸಂದರ್ಭದ ಕಲಾವಿದರ ಸಮಾವೇಶ. ಮಾತನಾಡುತ್ತಿರುವ ಹಿರಿಯ ನಾಟಕಕಾರ ಶ್ರೀ ಯಂ.ಕೆ. ಸೀತಾರಾಮ ಕುಲಾಲ್. ಜೊತೆಗೆ ಕದ್ರಿ ನವನೀತ ಶೆಟ್ಟಿ, ಪ್ರಕಾಶ್ ಪಾಂಡೇಶ್ವರ್, ಮುದ್ದು ಮೂಡುಬೆಳ್ಳೆ, ವಸಂತ ವಿ. ಅಮೀನ್, ಅರವಿಂದ ಬೋಳಾರ, ಸುರೇಶ್ ಮಂಜೇಶ್ವರ, ಕಿಶೋರ್ ಡಿ. ಶೆಟ್ಟಿ ಮುಂತಾದವರಿದ್ದಾರೆ.**

ಮುಂದುವರಿಸಿದ್ದಾರೆ. ಇತ್ತೀಚೆಗೆ ಲಕುಮಿ, ಶ್ರೀಲಲಿತೆ ಎರಡೂ ತಂಡಗಳ ತಲಾ ಎರಡೆರಡು ನೂತನ ನಾಟಕಗಳ ಮುಹೂರ್ತವು ಮಂಗಳೂರು ಶರವು ದೇವಸ್ಥಾನದಲ್ಲಿ ನಡೆದಿದೆ. ಶಶಿರಾಜ್ ಕಾವೂರರ 'ಮಿತ್ತ್ ತಿರ್ತ್', ವಸಂತ ವಿ. ಅಮೀನರ ಹೊಸಕೃತಿ 'ತಿರುಪತಿ ತಿಮ್ಮಪ್ಪೆ' ಪೌರಾಣಿಕ ಕೃತಿ ಹೊಸಸೃಷ್ಟಿಯಾಗುವುದರೊಂದಿಗೆ ತುಳು ರಂಗಭೂಮಿಯ ನೂತನ ದಾಖಲೆ ನಿರ್ಮಿಸಿದೆ. ನವೀನ್ ಶೆಟ್ಟಿ ಅಳಕೆ, ಸುರೇಶ್ ಮಂಜೇಶ್ವರ್ ಮುಂತಾದ ನಾಟಕಕಾರರು ಈ ತಂಡಗಳಿಗೆ ಆಧಾರಸ್ತಂಭಗಳಂತೆ ಕಿಶೋರ್ ಶೆಟ್ಟರ ಬೆಂಬಲಕ್ಕಿದ್ದಾರೆ.

ಇವರ ನಾಟಕಗಳಿಗೆ ರಾಜೇಶ್ ಮುಗುಳಿ ವರ್ಕಾಡಿ, ದಿನೇಶ್ ನ್ಯಾಕ್ ಮಿತ್ತನಡ್ಕ, ಮುಂತಾದವರ ಗೀತಸಾಹಿತ್ಯ, ನಿತಿನ್ ಶಿರ್ಲಾಲು, ಸೋಮನಾಥ ಶೆಟ್ಟಿ ಮಂಗಲ್ಪಾಡಿ ಯವರು ಹಿನ್ನೆಲೆ ಸಂಗೀತ ಒದಗಿಸುತ್ತಿರುವವರು.

**ತುಳು ನಾಟಕಗಳನ್ನು ಆಧರಿಸಿಯೇ ತುಳುವಿನಲ್ಲಿ ಹಲವು ಚಲನಚಿತ್ರಗಳು ಬಂದವು.** ಹೊರರಾಜ್ಯಕ್ಕೆ ಮಾತ್ರವಲ್ಲ ದೂರದ ಕೊಲ್ಲಿರಾಷ್ಟ್ರಗಳಿಗೂ ತುಳುನಾಟಕಗಳ (ಹೆಚ್ಚಾಗಿ ವೃತ್ತಿಪರರ) ತಂಡಗಳು ಸೀಮೋಲ್ಲಂಘನಗೈದ ಸಾಧನೆ ಮಾಡಿವೆ.

ತೊಂಬತ್ತರ ದಶಕದಿಂದೀಚೆಗೆ ತುಳುವಿನಲ್ಲಿ ನಾಟಕರಚನೆ ಮತ್ತು ಪ್ರಯೋಗ ಭರಾಟೆಯಿಂದ ಸಾಗಿದೆ. ಆದರೆ ಗಂಭೀರವಾದ ಕಥಾ ಪ್ರಧಾನ ನಾಟಕಗಳಿಗಿಂತಲೂ, ಹಾಸ್ಯ ನಾಟಕಗಳೇ, ನಗೆ ನಾಟಕಗಳೇ ಈ ಕಾಲದಲ್ಲಿ ಜನಪ್ರಿಯವೆನಿಸಿದ್ದೂ ಸುಳ್ಳಲ್ಲ. ಬಲೇ ಚಾ ಪರ್ಕ, ಒಂಜಿ ನಿಮಿಷ, ಈರ್ ದೂರ?, ಮೋಲು ದಾನಿ ಮುಪ್ಪತ್ತಾಜಿ? ಒರಿಯರ್ದ್ ಒರಿ ಅಸಲ್, ಅಕ್ಲೆಲೆಕ್ಕ ಎಂಕುಲತ್ತ್....' ಇತ್ಯಾದಿಯಾಗಿ ನಾಟಕಗಳ ಶೀರ್ಷಿಕೆಗಳೇ ನಗು, ಕುತೂಹಲಗಳತ್ತ ಸೆಳೆಯುವಂತೆ ಈ ಕಾಲದ ನಾಟಕಗಳ ಸ್ವರೂಪ. ಲಘುವಾದ ವಿಷಯ, ದಿನನಿತ್ಯದ ವಿಡಂಬನಾತ್ಮಕ ಜೋಕುಗಳ ಯಶಸ್ವೀ ನಿರ್ವಹಣೆಯಿಂದಾಗಿಯೇ ಈ ನಾಟಕಗಳು ಹೆಚ್ಚು ಜನಪ್ರಿಯತೆಯನ್ನು ಗಳಿಸಿದವು.

* * *

ಇಂತಹ ನಾಟಕಗಳು ನೂರಾರು ಪ್ರದರ್ಶನಗಳನ್ನು ಕಂಡವು. ದಿನಪತ್ರಿಕೆಗಳಲ್ಲಿ ನಿತ್ಯ ಇವುಗಳ ಜಾಹೀರಾತುಗಳು; ಬೇರೆ ಬೇರೆ ಪ್ರದೇಶಗಳ ಪ್ರದರ್ಶನದ ಮುಂಗಡ ಕಾದಿರಿಸುವಿಕೆಯ ವಿವರಗಳು ಕಾಣುತ್ತವೆ. ಆದರೆ ಇಂಥವು ಮುದ್ರಿತವಾಗಿ ಸಾಹಿತ್ಯಕ್ಷೇತ್ರವನ್ನು ಪ್ರವೇಶಿಸಿಲ್ಲ. ಸಾಹಿತ್ಯ ದೃಷ್ಟಿಯಿಂದ, ಹೇಳಿಕೊಳ್ಳುವ ಪರಿಣಾಮಕಾರಿ ವಸ್ತುವಿಲ್ಲದೆ ಆ ಕ್ಷಣದ ತತ್ಕಾಲೀನ ವಿಷಯಗಳನ್ನು ಕೈಗೆತ್ತಿಕೊಂಡು ನಗಿಸುವುದೇ ಇವುಗಳ ಗುರಿಯಾದುದ ರಿಂದ ಇವುಗಳನ್ನು ಮುದ್ರಿಸುವ ಪ್ರಯತ್ನಗಳು ಅಥವಾ ಅನಿವಾರ್ಯತೆ ಬಂದಿಲ್ಲ ಎನ್ನಬಹುದು. ಆದರೂ ಇವರೊಳಗಿನ ವೃತ್ತಿಪರರ ಹೊರತಾಗಿ ಸಾಹಿತ್ಯಿಕ ಧೋರಣೆ ಯುಳ್ಳ ಕೆಲವರು ಅಲ್ಲೊಬ್ಬರು ಇಲ್ಲೊಬ್ಬರು ತಮ್ಮ ನಾಟಕಗಳನ್ನು ಪ್ರಕಟಿಸಿದ್ದೂ ಇದೆ.

ಉಮೇಶ್ ಬಂಗೇರ ಕುಡ್ಲ ಅವರ 'ಕನ್ಯೊ ಸಂಕ್ರಾಂದಿ' (90 – ರತ್ನವರ್ಮ

ಹೆಗ್ಗಡೆ ಪ್ರಶಸ್ತಿ ವಿಜೇತ – ಅಪ್ರಕಟಿತ), ಮಾಧವ ಕಾಡ್ಬೆಟ್ಟು ಅವರ ಸತ್ಯೊದ ಬೊಲ್ಪು (ಪ್ರ. 95), ನವೀನ್ ಕುಮಾರ್ ತೋನ್ಸೆ ಅವರ ಮಾಲೆ ತತ್ತಿ ಪೂ, ಬದ್‌ಕೊಂಜಿ ಕನ ಆಂಡ್, ನಿಕ್ಲೆಗ್ ಗೊತ್ತಿತ್ತಂಡಾ? – ಇತ್ಯಾದಿ ಆರು ನಾಟಕಗಳು, ಪಿ. ಚೆನ್ನಪ್ಪ ಅಳಿಕೆಯವರ ಸಾಲ ಸಂದ್‌ಂಡ್, ಮಾಂಕಾಳಿ ಜೇವು, ಮಗಳ್ ಪರೆಂಚ್ಯಳ್, ಸಾಂಕಿನ ಸೆಕೆ (89 ಪ್ರ.), ಮರಣದ ಪಿರವು (91 ಪ್ರ.) ಹಾಗೂ ಕೃತ್ತಿಕಾ ಬ್ರಹ್ಮ ಮತ್ತಿತರ ಇತ್ತೀಚಿನ ನಾಟಕಗಳು ತುಳುನಾಟಕ ಕಣಜವನ್ನು ಅಲ್ಲಲ್ಲಿ ತುಂಬುತ್ತಲೇ ಇವೆ. 'ಕಾಲಚಕ್ರ' ನಾಟಕ ರಚಿಸಿದ ಎ. ಶಿವಾನಂದ ಕರ್ಕೇರಾ 90ರ ದಶಕದಲ್ಲಿ ಜಾನಪದ ಕಥಾವಸ್ತುವಿನ 'ಎರುಮೈಂದೆ' ಬರೆದು ಪ್ರದರ್ಶಿಸಿದರು. ಈ ನಾಟಕವನ್ನು ಪೆರ್ಡೂರಿನ ಕೂಡ್ದಿ ಕಲಾವಿದೆರ್ ತಂಡ 2003ರಲ್ಲಿ ಮುಂಬಯಿ ಕರ್ನಾಟಕ ಸಂಘದಲ್ಲಿ ಪ್ರದರ್ಶಿಸಿದ್ದಲ್ಲದೆ ಕನ್ನಡ ಅನುವಾದದೊಂದಿಗೆ (ಕೋಣ ಕೋದಂಡ) ದೂರದರ್ಶನದಲ್ಲೂ, 2005ರಲ್ಲಿ ಧಾರವಾಡದ ರಾಷ್ಟ್ರೀಯ ನಾಟಕೋತ್ಸವದಲ್ಲೂ ಪ್ರದರ್ಶಿಸಿದೆ.

## ಕ್ಯಾಸೆಟ್, ಸಿಡಿ ನಾಟಕಗಳು

ಕ್ಯಾಸೆಟ್ ರೂಪದಲ್ಲಿ ಪ್ರಪ್ರಥಮವಾಗಿ ಬಂದ ನಾಟಕವೆಂದರೆ ಮಚ್ಚೇಂದ್ರನಾಥ ಪಾಂಡೇಶ್ವರರ ರೇಡಿಯೋ ನಾಟಕ 'ನಾಟಕದ ಉಲಯಿ ನಾಟಕ' ಅಚ್ಚುತ ಕಲ್ಲಾಪು, ಕೊಡಿಯಾಲ್ ಬೈಲ್, ಕಾಪಿಕಾಡರ ಹತ್ತಾರು ನಾಟಕಗಳು ಮೊದಲು ಕ್ಯಾಸೆಟ್, ಬಳಿಕ ಸಿ.ಡಿ. ರೂಪದಲ್ಲಿ ಬಂದಿರುವಂತೆಯೇ, ಕದ್ರಿ ನವನೀತ ಶೆಟ್ಟರ 'ಬೀರೆ ದೇವಪೂಂಜೆ' ಕೂಡಾ ಸಿ.ಡಿ. ರೂಪದಲ್ಲಿ ಬಂದಿದೆ. (2004) ಕಿನ್ನಿಗೋಳಿಯ ಹರೀಶ್ ಪಡುಬಿದ್ರಿಯವರ 'ಕಡೀರ ಮಗೆ', ಚಂದ್ರಶೇಖರ ಬಿ.ಸಿ.ರೋಡ್ ಅವರ 'ಆಪಿನಿ ಪೂರಾ ಎಡ್ಡೆಗೇ' ನಾಟಕಗಳೂ ಸಿ.ಡಿ.ಯಲ್ಲಿ ಧ್ವನಿಮುದ್ರಣಗೊಂಡಿವೆ. ಈ ಹಿಂದೆಯೇ ರಂಗನಟ, ನಾಟಕಕಾರ ದಿ। ಅಚ್ಯುತಕಲ್ಲಾಪು ಸುಮಾರು 32ರಷ್ಟು ಕ್ಯಾಸೆಟ್ ನಾಟಕಗಳನ್ನು ಹೊರತಂದವರು.

## ಕುಮಾರ್ ಪಾಲೇಮಾರ್ ಅವರ ಪೌರಾಣಿಕ ಸಿಡಿ ನಾಟಕ

ಕುಮಾರ್ ಮಾಲೆಮಾರ್ ಎನ್ನುವ ಯುವ ನಾಟಕಕಾರ ಚಿತ್ರಕತೆ, ಸಂಭಾಷಣೆ ರಚಿಸಿರುವ 'ಶಿರಡಿ ಸಾಯಿಬಾಬಾ' ತುಳು ನಾಟಕದ ಸಿಡಿ ಇತ್ತೀಚೆಗೆ 2018ರಲ್ಲಿ ಬಿಡುಗಡೆಗೊಂಡಿದೆ. ಬೋಳಾರದ ರಂಗಪ್ರದರ್ಶನದ ವೇಳೆ ಧ್ವನಿಮುದ್ರಣಗೊಂಡು ಶಂಭೂರು ಬೈಪಾಡಿಯಲ್ಲಿ ಶಿರಡಿ ಸಾಯಿಬಾಬಾ ಮಂದಿರ ಶಿಲಾನ್ಯಾಸದ ಸಮಾರಂಭದಲ್ಲಿ ಬಿಡುಗಡೆಗೊಂಡ ಈ ನಾಟಕ ಕಥಾವಸ್ತು. ಸಾಯಿಬಾಬಾ ಶಿವನ ಅಂಶವಾಗಿ ಜನಿಸಿದರು ಎನ್ನುವ ನಂಬಿಕೆಯನ್ನು ಆಧರಿಸಿದೆ. ಸೂರಜ್‌ಶೆಟ್ಟಿ ನಿರ್ಮಾಣ ಮಾಡಿರುವ ಈ ನಾಟಕ 1 ಗಂಟೆ 40 ನಿಮಿಷ ಅವಧಿಯದು.

# ಮುಂಬಯಿಯ ತುಳು ನಾಟಕರಂಗ

ಮುಂಬಯಿಯಲ್ಲಿ ತುಳು ನಾಟಕಗಳಿಗೆ ಸಂಬಂಧಿಸಿದಂತೆ ಸ್ವಾತಂತ್ರ್ಯ ಪೂರ್ವದಲ್ಲೇ ಒಂದೆರಡು ಉಲ್ಲೇಖಗಳಿದ್ದು, ಇತ್ತೀಚಿನ ಸುಮಾರು ಮೂರು ದಶಕಗಳಲ್ಲಿ ವ್ಯಾಪಕವೂ, ಪ್ರತ್ಯೇಕ ಅಧ್ಯಯನಕ್ಕೆ ಅರ್ಹವೂ ಆದಷ್ಟು ಅಲ್ಲಿನ ರಂಗಭೂಮಿ ಕ್ರಿಯಾಶೀಲವಾಗಿದೆ. ತುಳುನಾಡಿನಿಂದ, ಬಾಲ್ಯದಲ್ಲೇ ಜೀವನೋಪಾಯಕ್ಕಾಗಿ ಇಲ್ಲಿಗೆ ಬಂದು ನೆಲಸತೊಡಗಿದ ಹಲವರು – ಒಂದೆಡೆ ನೌಕರಿ, ಇನ್ನೊಂದೆಡೆ ಶಿಕ್ಷಣ ಮುಂದರಿಕೆ, ಇದರ ಬೆನ್ನಲ್ಲಿ ನಾಟಕದ ಹವ್ಯಾಸ ಬೆಳೆಸಿಕೊಂಡರು. ರಾತ್ರಿಶಾಲೆಗಳ ವಾರ್ಷಿಕೋತ್ಸವ ಸಂದರ್ಭಗಳಲ್ಲಿ ಕನ್ನಡದ ಜೊತೆ ಚಿಕ್ಕ ಪುಟ್ಟ ತುಳು ಪ್ರಹಸನಗಳ ಪ್ರದರ್ಶನ – ತಾಯ್ನಾಡಿನ ಮಾದರಿಯಲ್ಲಿ ಮುಂಬಯಿಯಲ್ಲೂ ಅನೇಕ ವರ್ಷಗಳ ಹಿಂದೆ ಪ್ರಾರಂಭಗೊಂಡಿತ್ತು.

1948–49ರ ವೇಳೆಗೆ 'ಫೋರ್ಟ್' ಪ್ರದೇಶದಲ್ಲಿ ಮೊಗವೀರ ಯುವಕ ಸಂಘಕ್ಕಾಗಿ ಶ್ರೀನಿವಾಸ ಕೋಟ್ಯಾನ್ ಎಂಬವರು – ಬೆರ್ಮೆ ಬರವು, ಮುಳ್ಳು, ರಾತ್ರೆ ಪಗೆಲ್ – ಮುಂತಾದ ಕಿರುಪ್ರಹಸನಗಳನ್ನು ಬರೆದು ಆಡಿಸಿದ್ದಾಗಿ ತಿಳಿದುಬಂದಿದೆ. ಹಿಂದಿ ಚಲನಚಿತ್ರಗಳ ಪ್ರಭಾವದ ಒಂದೆರಡು ತುಳು ನಾಟಕಗಳೂ ಪ್ರದರ್ಶನಗೊಂಡಿದ್ದವು. ಸೋಮಶೇಖರ ಪುತ್ರನ್‌ರ ಮುತುವರ್ಜಿಯಿಂದ ದಿ. ವಿಶುಕುಮಾರರ ಪ್ರಥಮ ತುಳು ಜಾನಪದ ನಾಟಕ 'ಕೋಟಿ ಚೆನ್ನಯ' ಪ್ರೀಮಿಯರ್ ಶೋ ನಡೆಸಿದುದು ಮುಂಬಯಿಯಲ್ಲಿ ತಾ. 10–3–1963ರಂದು. ಅಂದಿನ ಪ್ರಯೋಗದ ನಿರ್ದೇಶಕರು ಭಾಸ್ಕರ ಕೋಟ್ಯಾನ್.

**ಕೋಡು ಭೋಜ ಶೆಟ್ಟರ ನಾಟಕಗಳು**

1959ರಲ್ಲಿ ಮುಂಬಯಿ ಬಂಟರ ಸಂಘದ ವಾರ್ಷಿಕೋತ್ಸವ ಸಂದರ್ಭ ಹೆಚ್ಚಾಗಿ ಮಹಿಳಾ ವಿಭಾಗದ ಪ್ರಯೋಗ ಕ್ಕೆಂದು ಕೋಡು ಭೋಜ ಶೆಟ್ಟರು ತುಳು ನಾಟಕ ರಚಿಸಿ ನಿರ್ದೇಶಿಸತೊಡಗಿದರು. ಅವರು 'ನಿರ್ಸನಿಗ್ ನೀರ್', 'ಬೊಂಬೆ', 'ಬೊಲ್ದು ಬಾಟ್ಲೆ ಕೆಂಪು ಗೋಲಿಲು', 'ಕಪ್ಪುನೆತ್ತೆರ್', 'ಐನ್ ಕತ್ತೆ ಒಂಜಿಕುದುರೆ', 'ಮುಳ್ಳುನು



ಮುಳ್ಳುಡೇ ದೆಪ್ಪೊಡು', 'ತಲಮಲಕ್ಕ', ನೆತ್ತೆರ್ದ ಬಿಸತ್ತಿ, ಬೇಸ್ ಬೇರಾ ಮುಂತಾದ ಹಲವುನಾಟಕಗಳನ್ನು ರಚಿಸಿದರು. ಮುಂಬಯಿ ತುಳುವರ ಬದುಕನ್ನು ಬಿಂಬಿಸುವ 'ಬೊಂಬೆ', 'ಪೊಸಬಿನ್ನೆರ್' – ಜನಪ್ರಿಯ ವಿಡಂಬನಾ ಕೃತಿಗಳು.



**ಸದಾನಂದ ಸುವರ್ಣ (1931)**

ಮರಾಠಿ, ಬಂಗಾಳಿ ಮತ್ತಿತರ ಭಾರತೀಯ ಅನ್ಯ ಭಾಷೆಗಳ ನಾಟಕಗಳನ್ನು ವೀಕ್ಷಿಸುವ ಅವಕಾಶವಿದ್ದ ಪರಿಸರ ದಲ್ಲಿ ಐವತ್ತರ ದಶಕದಲ್ಲೇ ಖ್ಯಾತನಾಮರಾದ ನಿರ್ದೇಶಕ ಶ್ರೀ ಸದಾನಂದ ಸುವರ್ಣರು 'ಉದಯ ಕಲಾನಿಕೇತನ' ಕ್ಕಾಗಿ ಕನ್ನಡ ನಾಟಕಗಳನ್ನು ನಿರ್ದೇಶಿಸಿ, ನಟಿಸುತ್ತಿದ್ದರು. ಎಪ್ಪತ್ತರ ದಶಕದಲ್ಲಿ ಅವರು ರಚಿಸಿದ ತುಳು ನಾಟಕ 'ಗುಡ್ಡೆದ ಭೂತ' ಸಮಗ್ರ ತುಳು ರಂಗಭೂಮಿಗೆ ಹೊಸ ವೈಚಾರಿಕ ಲೋಕವೊಂದನ್ನು ತೋರಿಸಿತು.

**ಹೊಸತನಕ್ಕೆ ನಾಂದಿಯಾದ 'ಗುಡ್ಡೆದ ಭೂತ'**

ಹಳ್ಳಿಯ ಅಂಧಾನುಕರಣೆಯ ಮುಗ್ಧ ಬಡ ಜನತೆಗೆ 'ಭೂತ'ದ ಭಯ ಹುಟ್ಟಿಸಿ ಸ್ವಾರ್ಥಕ್ಕಾಗಿ ಸುಲಿದು ಶೋಷಿಸುವ ಕುತಂತ್ರಿಗಳನ್ನು ಬಯಲಿಗೆಳೆವ ಕಥಾವಸ್ತುವಿನ

**ಸದಾನಂದ ಸುವರ್ಣ ರಚನೆ, ನಿರ್ದೇಶನದ 'ಗುಡ್ಡೆದ ಭೂತ' ಮುಂಬಯಿಯಲ್ಲಿ ಪ್ರಯೋಗವಾದಾಗ. ನಟರು : ರಾಮಚಂದ್ರ ರಾವ್ (ಇನ್ಸ್‌ಪೆಕ್ಟರ್), ಶಿಮುಂಜೆ ಪರಾರಿ (ಶಾಲು ಹೊದೆದವರು), ವಿಟ್ಟಲ ಅಮೀನ್ ಮತ್ತಿತರರು – 1974**

'ಗುಡ್ಡೆದ ಭೂತ' ತುಳು ಮಣ್ಣಿನ ದಟ್ಟ ಛಾಯೆ, ನೈಜ ಪಾತ್ರಗಳು ಪರಿಸರ, ಪಾಡ್ದನ ಸಂಗೀತ, ಸಂಸ್ಕೃತಿಯನ್ನು ಬಿಂಬಿಸಿ, ಒಂದು ಪ್ರಬುದ್ಧ ಪರಿಣಾಮಕಾರಿ ರಂಗಕೃತಿಯಾಗಿ ಯಶಸ್ಸು ಗಳಿಸಿ ಇನ್ನಿತರ ಹೊಸಬರಿಗೂ ಸ್ಫೂರ್ತಿ ನೀಡಿತೆನ್ನಬಹುದು. 'ಗುಡ್ಡೆದ ಭೂತ' ಮುಂದೆ ಕನ್ನಡದಲ್ಲಿ ದೂರದರ್ಶನ ಧಾರಾವಾಹಿಯಾಗಿ ಅತ್ಯಂತ ಜನಪ್ರಿಯ ವಾಯಿತು. ಆ ಬಳಿಕ ಹತ್ತಾರು ನಾಟಕಕಾರರು ಕಲಾವಿದರು ಮುಂಬಯಿಯಲ್ಲಿ ನಾಟಕರಂಗದಲ್ಲಿ ಬೆಳೆಯತೊಡಗಿದರು.

**ತೋನ್ಸೆ ವಿಜಯಕುಮಾರ್ ಶೆಟ್ಟಿ ಅವರ ಕಲಾಜಗತ್ತು (ರಿ)**



ಎಂಬತ್ತರ ದಶಕಾರಂಭದಲ್ಲಿ ನಾಟಕ ರಚಿಸಿ ಪ್ರದರ್ಶಿಸಲು ತೊಡಗಿದ ಪ್ರತಿಭಾವಂತ ರಂಗನಟ, ನಿರ್ದೇಶಕ, ನಾಟಕಕಾರ ವಿಜಯಕುಮಾರ ಶೆಟ್ಟಿ ಕೆಮ್ಮಣ್ಣು ಅವರು 'ವಸುಂಧರಾ', 'ಭೂತದ ಇಲ್ಲ್', 'ಈ ನಲ್ಕೆದಾಯೆ?', 'ಒರಿಯೆ ಮಗೆ ಒರಿಯೆ', 'ಬೊಲ್ಲ', 'ಬರ್ಸ', 'ಬಾಂಬ್‌ಯೇ ಬಾಂಬ್', 'ಎನಾಡ್ದ್ ಆವಂದ್', 'ಈರಪ್ಪೆ', 'ಊರ್ದ ಮಾರಿ', 'ಒವುಲಾವು', 'ಪತ್ತಾದ್ ಪದ್ರಾಡ್', 'ಬದಿ' – ಮುಂತಾದ ಹಲವು ಪ್ರಬುದ್ಧ ಕೃತಿ ಗಳನ್ನು ರಚಿಸಿದವರು. 1979ರಲ್ಲಿ ಗೆಳೆಯರೊಂದಿಗೆ 'ಕಲಾಜಗತ್ತು (ರಿ) ಎನ್ನುವ ಹವ್ಯಾಸಿ ತಂಡ ಕಟ್ಟಿ, ಮುಂದಿನ ಒಂದೂವರೆ ದಶಕ ಕಾಲ ಮುಂಬಯಿಯಲ್ಲೂ, ತಾಯ್ನಾಡ ಪ್ರವಾಸದಲ್ಲೂ ನಾಟಕ ಪ್ರದರ್ಶಿಸಿ, ಅಪಾರ ಯಶಸ್ಸು ಗಳಿಸಿದರು. ವಿಜಯಕುಮಾರ ಶೆಟ್ಟರ ನಾಟಕಗಳು, ಜಾನಪದವಿರಲಿ, ಸಾಂಸಾರಿಕ, ಸಾಮಾಜಿಕ ವಸ್ತುವಿನದೇ ಆಗಿರಲಿ, ಅವುಗಳ ಗಟ್ಟಿಸತ್ವದಿಂದಾಗಿ, ಸುಶಿಕ್ಷಿತರ ತಂಡ ಕಲಾಜಗತ್ತು ಪ್ರದರ್ಶಿಸಿದ ನಾಟಕಗಳೆಲ್ಲದಕ್ಕೂ ಗಣನೀಯ ಸಂಖ್ಯೆಯ ಪ್ರೇಕ್ಷಕರೂ ಸಿದ್ಧಗೊಂಡರು. 'ಭೂತದ ಇಲ್ಲ್', 'ಈ ನಲ್ಕೆದಾಯೆ?' – ಈ ಹಿಂದೆಯೇ ಅಚ್ಚಾಗಿದ್ದು 1999ರಲ್ಲಿ 'ಬದಿ' ನಾಟಕ ಪ್ರಕಟವಾಗಿದೆ; ಅಕಾಡೆಮಿ ಬಹುಮಾನಕ್ಕೂ ಪಾತ್ರವಾಗಿದೆ. ತುಳುಮಣ್ಣಿನ ಸತ್ವ, ಪ್ರಾಚೀನ – ಅರ್ವಾಚೀನ ಜನಪದ ಬದುಕಿನ ಯಥಾರ್ಥ ಚಿತ್ರಣ ಇವರ ನಾಟಕಗಳ ವೈಶಿಷ್ಟ್ಯ. ತನ್ನ ಸುದೀರ್ಘ ರಂಗ ಚಟುವಟಿಕೆಯ ಅವಧಿಯಲ್ಲಿ ನಾಟಕ ರಚನೆ, ನಿರ್ದೇಶನದೊಂದಿಗೆ 30ಕ್ಕೂ ಮಿಕ್ಕ ಬಗೆಯ ಪಾತ್ರ ನಿರ್ವಹಣೆ ಮಾಡಿದ ವಿಜಯ ಕುಮಾರ್ ಶೆಟ್ಟರು 2017ರಲ್ಲಿ ಜಾಗತಿಕ ಲಿಮ್ಕಾ ಬುಕ್ ಆಫ್ ರೆಕಾರ್ಡ್‌ಗೆ ಸೇರಿದ್ದಾರೆ. ತನ್ನದೇ ವಿಶಿಷ್ಟತೆ ಮೆರೆದಿರುವವರು. 'ಪತ್ತನಾಜೆ' ಚಿತ್ರ ನಿರ್ಮಾಣದ ಮೂಲಕ ತುಳು ಚಿತ್ರ ರಂಗದಲ್ಲೂ ತನ್ನ ವಿಶಿಷ್ಟತೆ ದಾಖಲಿಸಿದ್ದಾರೆ.

## 'ಕಲಾ ಜಗತ್ತು (ರಿ.)' ತಂಡದ ಕೆಲವು ಕಲಾವಿದರು


ವಾಮನ್‌ರಾಜ್

ಭವಾನಿಶಂಕರ ಶೆಟ್ಟಿ

ಲಕ್ಷ್ಮಣ್ ಜಿ. ಕಾಂಚನ್

ಚಂದ್ರಾವತಿ ವಸಂತ್

ಸುರೇಂದ್ರ ಕುಮಾರ್ ಹೆಗ್ಡೆ

ಪ್ರಭಾಕರ ಶೆಟ್ಟಿ


ರಮೇಶ್ ಕರ್ಕೇರ

ಮಧುಸೂದನ್ ಶೆಟ್ಟಿ

ಜೂಲಿಯೆಟ್

ಸುರೇಶ್ ಎಂ.

ಕೃಷ್ಣರಾಜ್ ಶೆಟ್ಟಿ

ಅರವಿಂದ್ ಶೆಟ್ಟಿ

ಮೋಹನ್ ಸಾಲ್ಯಾನ್


ರಘುವೀರ್ ಭಟ್

### ಶಿಮಂತೂರು ಚಂದ್ರಹಾಸ ಸುವರ್ಣ (1955)

ಶಿಮಂತೂರು ಚಂದ್ರಹಾಸ ಸುವರ್ಣರು ತನ್ನ ಏಳನೆಯ ತರಗತಿ ವಿದ್ಯಾರ್ಥಿ ದೆಸೆಯಲ್ಲೇ ನಾಟಕ ಅಭಿನಯಕ್ಕೆ ತೊಡಗಿದವರು. ಕೋಟಿ ಚೆನ್ನಯದ ಬುದ್ಯಂತ,

ಬೂಡು ಬೊಮ್ಮಯ, 'ಅನ್ಯಾಯದ ಫಲ'ದಲ್ಲಿ ಅಬ್ದುಲ್ಲ ಮುಂತಾದ ಪಾತ್ರಗಳಲ್ಲಿ ಸ್ಮರಣೀಯ ಅಭಿನಯ. ತನ್ನದೇ 'ಬ್ರಹ್ಮನ ಬರವು' ನಾಟಕದ 'ಸೀತಾರಾಮ್ ಭಟ್' ಪಾತ್ರ –ಹೀಗೆ ಹಾಸ್ಯ ಪಾತ್ರಗಳಲ್ಲಿ ಮೆರೆದವರು. 'ಉಂದು ವಾ ನ್ಯಾಯ' ನಾಟಕದಲ್ಲಿ ಸ್ವತಃ ದೈವದ ಕೋಲಕಟ್ಟಿದ ಪಾತ್ರ ಮಾಡಿ ಅಮೋಘ ಅಭಿನಯ ಅವರದು. ಮೂಲ್ಕಿ ಬಿಲ್ಲವ ಸಂಘವು ಪ್ರತಿವರ್ಷ ನವರಾತ್ರಿ ಸಂದರ್ಭ ನಡೆಸುತ್ತಿದ್ದ ನಾಟಕ ಪ್ರದರ್ಶನದ ವೇಳೆ ಚಂದ್ರಹಾಸರ

ನಾಟಕಗಳೂ ಪ್ರಯೋಗಕ್ಕೆ ಬಂದಿದ್ದವು.

ಮುಂದೆ ಉದ್ಯೋಗ ಅರಸಿ ಮುಂಬಯಿಗೆ ಹೋಗಿ ನೆಲೆಸಿದಲ್ಲಿಯೂ ನಾಟಕ ಹವ್ಯಾಸ ಮುಂದುವರಿಸಿ ಹಲವು ನಾಟಕಗಳನ್ನು ಬರೆದರು. 'ಗಾಲ', 'ಸಯ್ಯರಾಂಡಲಾ ಬುಡ್ಲೆ', 'ಕಲಾಗಾರನ ಕೊಲೆಗಾರೆ ಏರ್?' ಮುಂತಾಗಿ ಹಲವು ಗಟ್ಟಿ ನಾಟಕ ರಚಿಸಿದವರು. ನಾಟಕರಚನೆ, ದಿಗ್ದರ್ಶನ, ನಟನೆ, ಗೀತರಚನೆ ಹೀಗೆ ತನ್ನ ನಾಟಕಗಳ ಸರ್ವಾಂಗಗಳಿಗೆ ಶಕ್ತಿ ತುಂಬಿ ಮುಂಬಯಿ ತುಳುರಂಗ ಭೂಮಿಯಲ್ಲಿ ತನ್ನದೇ ಛಾಪು ಮೂಡಿಸಿದವರು. ಇತ್ತೀಚೆಗೆ ಸಾಹಿತ್ಯದ ಇತರ ಪ್ರಕಾರಗಳಲ್ಲಿ ಗಮನೀಯ ಸಾಧನೆ ಮಾಡಿದ್ದಾರೆ.

**ಸಂಜೀವ ಕುಂಬ್ದಾಜೆ** 1973ರಲ್ಲೇ 'ಧೂಮಕೇತು' ನಾಟಕ ರಚಿಸಿದ್ದು ಭೂತೊಗು ಬಲಿ (82), ಗಾಳಿಸುದ್ದಿ (84), ಅಗ್ನಿಪರೀಕ್ಷೆ (85), ಪುಂಚದ ಪೂ' – ಮುಂತಾದ ನಾಟಕಗಳನ್ನು ಬರೆದಿದ್ದಾರೆ. ಕಾಜೂಪಾಡಾ ಪ್ರದೇಶದಲ್ಲಿ, ವಿಠಲ್ ಸಿ. ಸಾಲ್ಯಾನರು 1975ರ ವೇಳೆಗೆ 'ನಿರ್ಗತಿಯಾಯಿನ ಸಂಸಾರ' 'ಭಾಗ್ಯದ ಕರಿಯಮಣಿ' – ನಾಟಕಗಳನ್ನು ರಚಿಸಿ ಪ್ರದರ್ಶಿಸಿದ್ದರು. ಮುಂದೆ ತುಳುನಾಟಕ ಚಟುವಟಿಕೆ ನಿರಂತರವಾಗಿ ಬೆಳೆಯಿತೆನ್ನಬಹುದು.

ಕೋಡು ಭೋಜ ಶೆಟ್ಟಿಯವರ 'ಕಪ್ಪು ನೆತ್ತೆರ್', 'ಬೊಂಬೆ', 'ನೆತ್ತೆರ್ದ ಬಿಸತ್ತಿ', ನಾಟಕಗಳು ಪ್ರದರ್ಶನಗೊಂಡು ಮುದ್ರಣವೂ ಆದವು. ಸುಂದರ ಮೂಡಬಿದ್ರೆಯವರ

ಮುಂಬಯಿಯಲ್ಲಿ ಅಭಿನಯ ಸಾಮ್ರಾಜ್ಯ (ರಿ.) ಮೂಲಕ ಪ್ರದರ್ಶನಗೊಂಡ ಶಿಮಂತೂರು ಚಂದ್ರಹಾಸ ಸುವರ್ಣರ 'ಸೈಯ್ಯರಾಂಡಲ ಬುಡ್ಲೆ' ನಾಟಕದ ದೃಶ್ಯ

‘ದಲಾಲಿ ರಂಗಣ್ಣೆ’, ‘ಸಾಹುಕಾರ್ ಸಂಕಪ್ಪೆರ್’, ಇನ್ನೋರ್ವ ಪ್ರತಿಭಾವಂತ ನಟ ನಿರ್ದೇಶಕ ಶ್ರೀನಾಥ್ ಮುಲ್ಕಿ ಅವರ ‘ಪಿಂದಿನಾಯೆನೆ ಪಿಂಬೆ’, ‘ಶಿಲ್ಪ’, ‘ಮಿನಿಸ್ಟರ್ ಮುದ್ದಣ್ಣೆ’, ‘ಊರೇ ಗತಿ’ (ಗಮನಾರ್ಹ ರಂಗಕೃತಿ), ಯಾನ್ ನನದಾಯೆ ಮೂಲು, ಚೌಡಿ ಕುದುರು, ಸತ್ಯ ಒರಿಪಾಂಡ, ಕಲ್ವೆರೆ ಗುರು, ನಾರದೆ ಆಯೆ ನಾರಾಯಣೆ ಮುಂತಾದವು ಪ್ರದರ್ಶನದಲ್ಲಿ ಯಶಸ್ವಿಯಾದವು.

**ನಂದಳಿಕೆ ನಾರಾಯಣ ಶೆಟ್ಟಿಯವರ ಪಲ್ಲವಿ ಆರ್ಟ್ಸ್**



1983ರಲ್ಲಿ ನಂದಳಿಕೆ ನಾರಾಯಣ ಶೆಟ್ಟಿ ಹಾಗೂ ಜಗದೀಶ್ ಶೆಟ್ಟಿ ಸೇರಿ ‘ಪಲ್ಲವಿ ಆರ್ಟ್ಸ್’ ನಾಟಕ ತಂಡ ವನ್ನು ಸೃಜಿಸಿದರು. ಇದರ ಮೂಲಕ ಪ್ರಯೋಗವಾದ ನಾರಾಯಣ ಶೆಟ್ಟಿ ನಂದಳಿಕೆ ಅವರ ‘ಮಮತನ ಮದ್ಮೆ’, ‘ಅಯ್ಯಯ್ಯ ಎಂಚ ಪೊರ್ಲಾಂಡ್’, ‘ಪಾಂಜರ’, ‘ಸಂಸಾರ’, ‘ಬುಡಿ ಪಗರಿ ಬುಡಯೆ’, ‘ಸಂಬಂಧ’ ‘ಮಗಲಾಲ್ ಮರ್ಮಲತ್ತ್’ ಹಾಗೂ ‘ಬೊಜ್ಜ (ಪ್ರಕಟ ವಾಗಿದೆ) ಮುಂಬಯಿ ರಂಗಭೂಮಿಗೆ ತುಳು ಸಮಾಜ ವನ್ನು ಪರಿಚಯಿಸಿದವು. ‘ಬೊಜ್ಜ’ ನಾಟಕವನ್ನು ಮೋಹನ್ ಮಾರ್ನಾಡರು 2004ರಲ್ಲಿ ‘ಸುದ್ದ’ ಹೆಸರಿನ ಚಲನಚಿತ್ರವಾಗಿ ನಿರ್ಮಿಸಿ ಪಿ.ಎನ್. ರಾಮಚಂದ್ರ ಅವರ ನಿರ್ದೇಶನದಲ್ಲಿ ಅದು ಅಂತಾರಾಷ್ಟ್ರೀಯ ಪ್ರಶಸ್ತಿಗೆ ಪಾತ್ರವಾಯಿತು.

ಬಿ.ಆರ್. ಅಡಪ ಅವರ ‘ಕರುಣೆ ದಾಂತಿ ಕಣ್ಣ್’, ‘ಉಂದೆನಾ ನಮ್ಮ ಸಮಾಜ?’, ‘ಬಡವು ಬಡವು ಬಡವು’, ‘ಕಲ್ಜಿಗದ ರಾಮಾಯಣ’, ‘ತುಳಸಿ’, ‘ಮುಳ್ಳುದ ಬಲ್ಲೆ’, ಈ ಬಂಧನ ರೇಷ್ಮೆದ’, ಬರೊಂದುಲ್ಲೆರ್’, ‘ಸಂಸ್ಕಾರ’, ‘ಗುಡ್ ಬೈ ಕುಡ್ಲ’.

ಸೋಮನಾಥ್ ಕರ್ಕೇರರ ‘ಪರದೆದ ಪಿರಾವುದ ನಾಟಕ’ (ಅಚ್ಚಾಗಿದೆ, 1991). ರಜನಿ, ಮದ್ಮೆದ ಮಾರ್ಕೆಟ್, ಬಂಗಾರ್ದ ಬೊಲ್ಲು, ಬೇಲಿದ ಪೂ, ದೇವೆರುಲ್ಲೆರ್, ಅಂಚಿ–ಇಂಚಿ, ಭರತ್ ಕುಮಾರ್ ಪೊಲಿಪು ಇವರ ‘ಅರುಂಧತಿ’, ‘ಊರು ಪೂರಾ ಕತ್ತಲೆ’, ನೀಲಾಧರ ಕರ್ಕೇರ ಬೈಕಂಪಾಡಿಯವರ ‘ಚಿಕ್ಕಮ್ಮ’, ‘ಒಂಜೇ ನೆತ್ತೆರ್’ (ಅಚ್ಚಾಗಿವೆ), ‘ತಮೇರಿ ಮೀರಿ ಪೊಣ್ಣು’, ‘ಸತ್ಯದ ಸಾದಿ’, ‘ಪೊಣ್ಣ ಕಣ್ಣೀರ್ ಕಂತ್‌ಂಡಾ?’ ಉಮೇಶ್ ಎನ್. ಶೆಟ್ಟರ ‘ಬದಿಕ್ಕ್ ಬಲಿ’, ‘ಆ ರಾತ್ರೆದ ರಹಸ್ಯ’, ‘ಚಟ್ಟ’, ‘ಈರೆ ಮಗೆ ಈರೇ’, ‘ಸಿಪಾಯಿ ಶ್ಯಾಮಣ್ಣೆ’ – ಮುಂತಾದ ನಾಟಕಗಳೂ ರಂಗಕ್ಕೆ ಬಂದವು.

ಎಸ್. ಎಸ್. ಕಾರ್ಕಳರ ‘ಮರಿಯಾದಿ ಒರಿಪುಲೆ’ (ಪಂಡ ಆವಂದ್), ‘ನೀತಿದಾಂತಿ ಜಾತಿ’ ‘ಸದಾಶಿವ ನಂದಳಿಕೆಯವರ ‘ಪಗೆತ ಪುಗೆ’, ಆ ಪೊಣ್ಣು ಯೇರ್?’ ಕೂಡಾ ಹೆಸರಾಗಿವೆ.

ಡಿ.ಎಸ್. ಪಯ್ಯಾರರ ‘ಮಡೆ ಇರೆ’, ಬಿ.ಎಸ್. ರಾವ್ ಅವರ ‘ಬೆರಿ ಬುಡಂದಿ

ಬೂತ್', ಕರುಣಾಕರ ಕಾಪು ಅವರ 'ಬಸಂತಿ', 'ಸಂಶಯ', ನಟ, ನಿರ್ದೇಶಕ, ನಾಟಕಕಾರ ರಾಜು ಬಿ. ತೋನ್ಸೆ ಅವರ 'ಜಲಜ ಮಗಳೆಗ್ ಜಪಾನ್ದ ಕಂಡನೆ' (1971), 'ಬೀಡಿದ ಬ್ರೆಂಚ್‌ಡ್', 'ಬೊಗ್ಗು ಬೊಂಬಾಯಿಗ್ ಪೋಯೆ' (1975), ತೋನ್ಸೆ ಕಾಪು ಹುಬ್ಬಳ್ಳಿ, ಮುಂಬಯಿ ಮುಂತಾದೆಡೆ ಪ್ರದರ್ಶಿತ 'ಲೇಡಿಸ್ ಬಾರ್' ಭಾಸ್ಕರ ಪಡುಬಿದ್ರಿ ಅವರ 'ನಿಶ್ಚಯ ಆತ್‌ಜಿ', ಸಾ. ದಯಾ ಇವರ 'ಬಾನದ ಬೊಳ್ಳಿಲು', 'ಉಬರ್, ಒಸರ್' (ಉಡುಪಿಯ ಕೆಮ್ತೂರು ನಾಟಕ ಸ್ಪರ್ಧೆಯಲ್ಲೂ ಭಾಗವಹಿಸಿದೆ) ಮುಂತಾದ ನಾಟಕಗಳು ಒಂದಿಲ್ಲೊಂದು ಕಡೆ ಪ್ರದರ್ಶನ ಕಂಡವು.

ನಾಗರಾಜ ಗುರುಪುರ ಇವರ 'ಸ್ವರ್ಗದ ಪೊಣ್ಣು', 'ತೆಡಿಲ್', 'ಸಂಶಯ', ಶೇಖರ ಗುಜರನ್‌ನರ 'ಕಾಂತುನ ಕನ', 'ಕಾಡಕೋಗಿಲೆ', ವಿ.ಕೆ. ಶೆಟ್ಟರ 'ಕರಿಯೆ ಕಟ್ಟಿ ಕರಿಮಣಿ', ವಿ.ಕೆ. ಸುವರ್ಣರ 'ಕಣ್ಣಿತ್ತ್‌ದ್ ಕುರುಡೆರ್, ಮೋಹನ್ ಮಾರ್ನಾಡರ 'ಕಕು ಮಾಮ', ಮೋಹನ್‌ದಾಸ್ ಕೊಟ್ಟಾರಿ ಅವರ 'ಮೋಕೆಡ್ ಒಂತೆ ಜೋಕೆ, ಅರುಣ್ ಅರಾಟೆ ಅವರ 'ಬನ್ನಗ ತಡ ಆಂಡ್', ಕೊಜಕೊಳ್ಳಿ ಅರವಿಂದ ಶೆಟ್ಟರ 'ಒಲ್ತು ಒಟ್ಟಾತರಾ?' ಇವೇ ಮುಂತಾದ ನಾಟಕಗಳೂ ಪ್ರದರ್ಶನಕ್ಕೆ ಬಂದಿವೆ. ಮುಂಬಯಿ ಯೊಳಗಷ್ಟೇ ಅಲ್ಲದೆ ಪುಣೆಯಲ್ಲಿ ನಾಟಕ ಚಟುವಟಿಕೆ ನಡೆಸುತ್ತಿರುವ ಶ್ಯಾಮ್ ಆಳ್ವ ಮಧೂರು 'ಎನ್ನ ಇಲ್ಲ್' ನಾಟಕದ ಕರ್ತೃ; ದಿನೇಶ್ ಶೆಟ್ಟಿ ಸಾಂತೂರು 'ದರ್ಮೊಗು ತಿಕ್ಕಂದ್' ನಾಟಕ ಬರೆದವರು.



ಮುಂಬಯಿಯಲ್ಲಿ ರಂಗಧ್ವನಿ ತಂಡ ಪ್ರಯೋಗಿಸಿದ 'ಜೋಕುಲು ಬಾಲೆಲು' ನಾಟಕದ ದೃಶ್ಯ. ಅಶೋಕ್ ಪಾಟೋಳೆ ಅವರ ಮೂಲ ಮರಾಟಿ ನಾಟಕದ ಕನ್ನಡ ರೂಪಾಂತರ ಶಿಮುಂಜೆ ಪರಾರಿ. ನಿರ್ದೇಶನ : ಜಗದೀಶ್ ಶೆಟ್ಟಿ ಕೆಂಚನಕೆರೆ. ಭುಜಂಗ ಚೌಟನಾಗಿ ವಾಮನ್‌ರಾಜ್, ಸಾಯಿ ಬಲ್ಲಾಳ್, ಸತ್ಯಭಾಮಾ, ಸುಧಾ ಶೆಟ್ಟಿ ಮತ್ತು ಸಹಕಲಾವಿದರು



ಯತೀಶ್ ಕುಮಾರ್ ಆಳ್ವರ 'ರೈಟ್ ಪೋಯಿ' ಚಂದನ ವಾಹಿನಿಯಲ್ಲಿ ತುಳು ಧಾರಾವಾಹಿಯಾಗಿ ಗಮನ ಸೆಳೆದಿದೆ. ಮುಂಬಯಿಯ ಹಲವು ಸಮರ್ಥರು ಅನ್ಯಭಾಷೆಗಳಿಂದ ನಾಟಕ ಕೃತಿಗಳನ್ನು ತುಳುವಿಗೆ ಅನುವಾದಿಸಿದ್ದಾರೆ. ಸದಾನಂದ ಸುವರ್ಣರು ಬಂಗಾಳಿ ಯಿಂದ ಅನುವಾದಿಸಿದ ನಾಟಕ 'ಬಂಗಾರ್ ಬಾಲೆ', **ಶಿಮುಂಜೆ ಪರಾರಿ (ಎಸ್.ಎಂ. ಶೆಟ್ಟಿ)** –ಕನ್ನಡದಿಂದ ಸುಳಿ, ಸೂತ್ರ, ಮರಾಠಿಯಿಂದ ಅವುಲೊರ್ತಿ, ಎಲ್ಲೆಡೆ ಪ್ರೇಕ್ಷಕರ ಮನ ಮೀಟಿದ 'ಜೋಕುಲು ಬಾಲೆಲು' (ಮೂಲ ಮರಾಠಿ: ಅಶೋಕ್ ಪಾಟೋಳೆ – ಪ್ರ. 2000) ಭಾಷಾಂತರಿಸಿದ್ದಾರೆ. ಜಯರಾಮ ಆಳ್ವರು ಹಿಂದಿಯಿಂದ 'ಗೊಬ್ಬೊಂದು ಗೊಬ್ಬೊಂದು' ಭಾಷಾಂತರಿಸಿದ್ದಾರೆ.



ರಮೇಶ್ ಶಿವಪುರರ – ತಾಳಮದ್ದಳೆ, ತೀರ್ಮಾನ, ಗುಂಡೊಡ್ದು ಪದ್ರಾಡ್, ಪುಂಡಿ ಪಾಂಡವೆರ್, ತಾಲೀಮು, ಉರ್ಲು – ಎಲ್ಲವೂ ಕನ್ನಡದಿಂದ ತುಳುವಿಗೆ ಅನುವಾದಿತ. ಹಿರಿಯ ನಾಟಕಕಾರ, ಮರಾಠಿಯಿಂದ ತುಳುವಿಗೆ ನಾಟಕ ಅನುವಾದಕ, ಪತ್ರಕರ್ತ **ಎಚ್ಕೆ ಕರ್ಕೇರಾ** ಅವರು ಜಯವಂತ ದಳ್ವಿಯವರ ಮರಾಠಿ ಮೂಲದ ಕೃತಿಗಳನ್ನು 'ಪುರುಷೆ', 'ಕಾಲಚಕ್ರ'ವಾಗಿ ಅನುವಾದಿಸಿ, ಪ್ರಕಟಿಸಿದ್ದಾರೆ. ತಮ್ಮದೇ ಆದ 'ಪ್ರೇರಣಾ' ನಾಟ್ಯವೃಂದದ ಮೂಲಕ ಮುಂಬಯಿಯ ಪಾಟ್ಕರ್ ಹಾಲ್‌ನಲ್ಲಿ 1996ರಲ್ಲಿ ಈ ನಾಟಕಗಳ ಪ್ರಯೋಗ ನೀಡಿದ್ದಾರೆ.

80ರ ದಶಕದಲ್ಲಿ ಮುಂಬಯಿ ಸೇರಿದ ಭರತ್‌ಕುಮಾರ್ ಪೊಲಿಪು ಕನ್ನಡ ಮತ್ತು ತುಳು ರಂಗನಿರ್ದೇಶಕರಾಗಿ ಬೆಳೆದರು. ಹೀಗೆ, ಕಳೆದ ಸುಮಾರು ನಾಲ್ಕು ಐದು ದಶಕಗಳಲ್ಲಿ ಮುಂಬಯಿಯಲ್ಲಿ ಸುಮಾರು ಮೂವತ್ತೈದಕ್ಕೂ ಮಿಕ್ಕ ನಾಟಕಕಾರರು ಇನ್ನೂರಕ್ಕೆ ಮೇಲ್ಪಟ್ಟು ನಾಟಕಗಳನ್ನು ರಚಿಸಿದ್ದಾರೆ, ಅನುವಾದಿಸಿದ್ದಾರೆ. ಪ್ರಯೋಗಗೊಂಡ ರಂಗಕೃತಿಗಳಲ್ಲಿ ಹಲವು ತಾಯ್ನಾಡಿನ ನಾಟಕಕಾರ ಕೃತಿಗಳು. ಈ ಮಹಾನಗರಿಯ ವಿವಿಧ ಉಪನಗರಗಳಲ್ಲಿ ಹಲವು ಹವ್ಯಾಸೀ ನಾಟಕ ತಂಡಗಳಿವೆ. (1) ಕನ್ನಡ ಕಲಾ ಕೇಂದ್ರ (2) ವೀರ ಕೇಸರಿ ಕಲಾವೃಂದ (3) ಕಲಾಜಗತ್ತು (ರಿ) (4) ಉಮಾಮಹೇಶ್ವರಿ ಕಲಾವೃಂದ ಕಾಜುಪಾಡ, ಕುರ್ಲಾ 5) ನಾಟ್ಯರಂಗ (6) ಪ್ರಯೋಗ ರಂಗ (7) ಸಾರ್ವಜನಿಕ ಕರ್ನಾಟಕ ಸಂಘ (ರಿ); ಗ್ರಾಂಟ್ ರೋಡ್ (8) ಅಭಿನಯ ಸಾಮ್ರಾಜ್ಯ (ರಿ) ಮಾಹಿಮ್ (9) ಜೋಲಿ ಫ್ರೆಂಡ್ಸ್ ಸರ್ಕಲ್ (10) ಪಲ್ಲವಿ ಆರ್ಟ್ಸ್, (11) ಅಭಿನಯ ಮಂಟಪ (12) ಜಗಜ್ಯೋತಿ ಕಲಾವೃಂದ (13) ರಂಗಧ್ವನಿ (14) ಉದಯರಂಗ (15) ನವೋದಯ ಕಲಾರಂಗ (16) ವಿಶ್ವಕಲಾ ಮುಂಬಯಿ (17)

ಏಸ್ಕರ್ ಗ್ರೂಪ್ (18) ಯುನೈಟೆಡ್ ಕ್ರಿಯೇಟಿವ್ ಪೀಪಲ್ಸ್ (19) ತುಳು ಕಲಾರಂಗ ಪುಣೆ (20) ಕಾಂಜೂರು ಕಲಾಕೇಂದ್ರ (21) ಸುವರ್ಣಜ್ಯೋತಿ (22) ಸಾಯಿನಾಥ್ ನಾಟ್ಯ ಕಲಾವೃಂದ (23) ಪ್ರೇರಣಾ ನಾಟ್ಯ ವೃಂದ (24) ಚಂದ್ರಪ್ರಕಾಶ್ ಥಿಯೇಟರ್ಸ್ – ಮುಂತಾದವು.

ಕೋಟೆಯ ಮೊಗವೀರ ಯುವಕ ಸಂಘ 50ರ ದಶಕದಲ್ಲಿ ತುಳು ನಾಟಕ ಚಟುವಟಿಕೆಗಳ ಆದ್ಯ ಪ್ರವರ್ತಕರಾದರೆ, 'ಜರಿಮರಿ ಕರ್ನಾಟಕ ಕಲಾಕೇಂದ್ರ' ಎಂಬ ಸಂಸ್ಥೆ ಎಪ್ಪತ್ತು –ಎಂಬತ್ತರ ದಶಕದ ಕೆಲವರ್ಷ. (ಈ ಲೇಖಕನೂ ಕಲಾವಿದನಾಗಿದ್ದು) ತುಳು ನಾಟಕಗಳನ್ನು ಪ್ರದರ್ಶಿಸಿತ್ತು. (ಈಗ ಈ ಸಂಸ್ಥೆ ಕಾಜೂಪಾಡಾಗೆ ಸ್ಥಳಾಂತರಗೊಂಡಿದೆ.)



ಶ್ರೀನಾಥ್ ಮುಲ್ಕಿ,

ಇಲ್ಲಿಯ ತುಳು ರಂಗಭೂಮಿಗಾಗಿ ಹಲವಾರು ಮಂದಿ ನಾಟಕ ನಿರ್ದೇಶಕರು ದುಡಿದಿದ್ದಾರೆ. ಆರ್.ಎಮ್. ಕೋಟ್ಯಾನ್, ಶ್ರೀನಿವಾಸ ಕೋಟ್ಯಾನ್, ಸದಾನಂದ ಸುವರ್ಣ, ವಿಜಯಕುಮಾರ್ ಶೆಟ್ಟಿ ಕೆಮ್ಮಣ್ಣು, ಜಗದೀಶ್ ಶೆಟ್ಟಿ ಕೆಂಚನಕೆರೆ, ಶ್ರೀನಾಥ್ ಮುಲ್ಕಿ, ಜಗನ್ನಾಥ ಕರ್ಕೇರ, ಕೋಡು ಭೋಜ ಶೆಟ್ಟಿ, ಸುಂದರ ಮೂಡಬಿದ್ರೆ, ಕೆ.ಕೆ. ಸುವರ್ಣ, ಬಿ.ಎಸ್. ರಾವ್, ಉಮೇಶ್ ಎನ್. ಶೆಟ್ಟಿ,

ಶ್ರೀನಾಥ್ ಮುಲ್ಕಿ ಬರೆದು ದಿಗ್ದರ್ಶಿಸಿದ 'ಊರೇ ಗತಿ' ಪ್ರಥಮ ಪ್ರಯೋಗ **1996** (ನವೋದಯ ಕಲಾವೃಂದ)

ಸಂಜೀವ ಎಸ್. ಶೆಟ್ಟಿ, ಸೀತಾರಾಮ್ ಆಳ್ವ, ರಮೇಶ್ ಶಿವಪುರ, ಬಿ.ಆರ್. ಅಂಚನ್, ಎ.ಕೆ. ಸುವರ್ಣ, ವಿಠಲ್ ಸಿ. ಸಾಲ್ಯಾನ್, ನಾರಾಯಣ ಶೆಟ್ಟಿ ನಂದಳಿಕೆ, ಶಿಮಂತೂರು ಚಂದ್ರಹಾಸ ಸುವರ್ಣ, ಎಸ್.ಎಸ್. ಕಾರ್ಕಳ್, ಕರುಣಾಕರ ಕಾಪು, ರಾಜು ಬಿ. ತೋನ್ಸೆ, ರಾಜು ಪುತ್ರನ್, ಸಂಜೀವ ಕುಂಬ್ಳಾಜೆ, ಸಾ. ದಯಾ, ಮೋಹನ್ ಮಾರ್ನಾಡ್, ಪ್ರಕಾಶ್ ಡಿ. ಶೆಟ್ಟಿ, ಪ್ರಕಾಶ್ ಪಯ್ಯಾರ್, ದಿ. ಶೇಖರ ಗುಜರನ್, ಗುಣಪಾಲ್ ಉಡುಪಿ ಹಾಗೂ ಬಿ.ಎಂ. ವಸಂತ – ಹೀಗೆ ಮೂವತ್ತಕ್ಕೂ ಮಿಕ್ಕ ಪ್ರಬುದ್ಧ ನಿರ್ದೇಶಕರು ತಾಯ್ನಾಡಿನ ನಾಟಕ ಕೃತಿಗಳನ್ನು ಅಂತೆಯೇ ಮುಂಬಯಿಯ ನಾಟಕ ಲೇಖಕರ (ಹಲವರು ಸ್ವತಃ ನಾಟಕ ಲೇಖಕರು, ನಿರ್ದೇಶಕರು) ಕೃತಿಗಳನ್ನು ಯಶಸ್ವಿಯಾಗಿ ರಂಗಪ್ರಯೋಗ ಮಾಡಿದ್ದಾರೆ. ನೂರಾರು ಕಲಾವಿದರನ್ನು ಬೆಳಕಿಗೆ ತಂದಿದ್ದಾರೆ.

**ರಂಗ ನಿರ್ದೇಶಕ ಡಾ. ಭರತ್ ಕುಮಾರ್ ಪೊಲಿಪು**



90ರ ದಶಕದಲ್ಲಿ ಮುಂಬಯಿ ಸೇರಿದ ಡಾ। ಭರತ್ ಕುಮಾರ್ ಪೊಲಿಪು ಕನ್ನಡ ಮತ್ತು ತುಳುವಿನ ಪ್ರಬುದ್ಧ ರಂಗನಿರ್ದೇಶಕ, ನಾಟಕಕಾರರಾಗಿ ಬೆಳೆದಿದ್ದಾರೆ. ಮುಂಬಯಿ ರಂಗಭೂಮಿಗೆ 'ರಾವಿ ನದಿಯ ದಂಡೆಯಲ್ಲಿ', 'ಗುಮ್ಮನೆಲ್ಲಿಹ ತೋರಮ್ಮ', 'ಅಂಬೆ', 'ಆಷಾಢದ ಒಂದು ದಿನ', 'ಮೃಗತೃಷ್ಣೆ', 'ಇನ್ನೊಬ್ಬ ದ್ರೋಣಾಚಾರ್ಯ' ಮುಂತಾದ ಮೌಲಿಕ ನಾಟಕಗಳನ್ನು ನೀಡಿದ ಹಿನ್ನೆಲೆಯ ನಿರ್ದೇಶಕ ಭರತ್ ಕುಮಾರ್ ತುಳು ರಂಗಭೂಮಿಗೆ ನೀಡಿದ ಮಹತ್ವದ ಕಾಣಿಕೆಗಳಲ್ಲೊಂದು 2014ರಲ್ಲಿ ಅವರ ನಿರ್ದೇಶನದ 'ಕೋಮಲ ಗಾಂಧಾರ', ಮಾಟುಂಗಾ ವಿಶ್ವೇಶ್ವರಯ್ಯ ಸಭಾಗೃಹದಲ್ಲಿ ನಡೆದ ಇದರ ಪ್ರಥಮ ಪ್ರಯೋಗ ಪ್ರೇಕ್ಷಕರ ಹೃದಯ ತಟ್ಟಿತು. ಅದೇ ವರ್ಷ ಈ ನಾಟಕ ಉಡುಪಿ ಕೆಮ್ತೂರು ನಾಟಕ ಸ್ಪರ್ಧೆಯಲ್ಲಿ ಸ್ಪರ್ಧಿಸಿ ಉತ್ತಮ ನಾಟಕ, ಉತ್ತಮ ನಿರ್ದೇಶನ ಮುಂತಾದ ಹಲವು ಬಹುಮಾನಗಳನ್ನು ಪಡೆಯಿತು.

ಮಹಾಭಾರತದ 'ಗಾಂಧಾರಿ'ಯ ಕಥನದ ಮುಖ್ಯ ಸಂಘರ್ಷ ಈ ನಾಟಕದ ವಸ್ತು. ಶಂಕರ್‌ಶೇಷ್ ಅವರ ಮೂಲ ಹಿಂದಿ ರಚನೆಯ ತುಳು ಅನುವಾದ: ಡಾ. ಜಿ.ಪಿ. ಕುಸುಮ. ಧೃತರಾಷ್ಟ್ರನಾಗಿ ಮೋಹನ್ ಮಾರ್ನಾಡ್, ಗಾಂಧಾರಿಯಾಗಿ ಕೃಪಾ ಪೂಜಾರಿ ಅದ್ಭುತವಾಗಿ ನಟಿಸಿದರು (ಮಾಹಿತಿ: ಮನೋಹರ್ ತೋನ್ಸೆ).

1969–70ರಲ್ಲಿ ಅವರು ರಚಿಸಿದ 'ಗುಡ್ಡೆದ ಭೂತ' ಈ ಹಿಂದಿನ ತುಳು ನಾಟಕಗಳ ಪರಂಪರಾಗತ ಶೈಲಿಯನ್ನು ಬದಿಗೆ ಸರಿಸಿತು. ಮುಂಬಯಿಯ ಅನ್ಯಭಾಷಾ ರಂಗಭೂಮಿ ಪರಿಚಯ, ಪ್ರಭಾವದಿಂದಾಗಿ ಅವರ ಈ ನಾಟಕದ ಪ್ರಯೋಗ ತುಳು ರಂಗಭೂಮಿಗೆ ಹೊಸ ದಿಕ್ಕನ್ನು ಪರಿಚಯಿಸಿತು. ಅನಂತರ ಸುವರ್ಣರು ಮರಾಠಿಯಿಂದ ಅನುವಾದಿತ

'ಯಾನ್ ಪಿನಾಯೆ' (ತುಳುವಿಗೆ ಅನು: ಶಿಮುಂಜೆ ಪರಾರಿ) ಪೂರ್ಣ ಪ್ರಮಾಣದ ನಾಟಕವನ್ನು ನಿರ್ದೇಶಿಸಿದರು. ಇದು ತಿರುಗುಮಂಚ ತಂತ್ರವನ್ನು ತುಳುರಂಗಭೂಮಿಗೆ ಪರಿಚಯಿಸಿದ ಪ್ರಥಮ ನಾಟಕವಿದು ಎಂಬುದಾಗಿ ಹೆಗ್ಗಳಿಕೆ ಪಡೆಯಿತು.

1980ರ ದಶಕದಲ್ಲಿ ಎಂ. ಜಯರಾಮ ಆಳ್ವರ ನೇತೃತ್ವದಲ್ಲಿ ಹುಟ್ಟಿಕೊಂಡ ರಂಗಸಂಸ್ಥೆ 'ಅಭಿನಯ ಸಾಮ್ರಾಜ್ಯ' ಇದರ ಮೂಲಕ ಪ್ರಯೋಗವಾದ ಶಿಮಂತೂರು ಚಂದ್ರಹಾಸ ಸುವರ್ಣರ 'ಉಂದು ವಾ ನ್ಯಾಯ' ಗಮನ ಸೆಳೆಯಿತು ಅವರ 'ಅನ್ಯಾಯದ ಫಲ', 'ಬದಿ', ಕಲಾಗಾರನ ಕೊಲೆಗಾರೆ ಏರ್?, 'ಗಾಲ' ಮುಂತಾದ ನಾಟಕಗಳಲ್ಲಿ ಸಹಜ ತುಳುವಿನ ಭಾಷಾ ಬನಿ ಇದೆ. ಇವರ ನಾಟಕಗಳು ರತ್ನವರ್ಮ ಹೆಗ್ಗಡೆ ಕೃತಿರಚನಾ ಸ್ಪರ್ಧೆಯಲ್ಲೂ ಬಹುಮಾನ ಗಳಿಸಿದೆ.

**ರಂಗನಟ ದಿ. ವಾಮನ್‌ರಾಜ್**

'ಗುಡ್ಡೆದ ಭೂತ', 'ಕೋಟಿ ಚೆನ್ನಯ' ಖ್ಯಾತಿಯ **ಕೆ.ಬಿ. ವಾಮನ್‌ರಾಜ್** (ಇವರು ಮರಾಠಿ ರಂಗಭೂಮಿಯಲ್ಲೂ ಪ್ರಸಿದ್ಧರು; ಪುರಸ್ಕೃತರು), ಕಲಾಜಗತ್ತು (ರಿ) ತಂಡದ ವಿಜಯ ಕುಮಾರ್ ಶೆಟ್ಟಿ, ಭವಾನಿಶಂಕರ ಶೆಟ್ಟಿ – ಮುಂತಾದ ಅಭಿಜಾತ – ಪ್ರಬುದ್ಧ ಕಲಾವಿದರು ಮುಂಬಯಿಯ ತುಳು ರಂಗಭೂಮಿ ಜನಾಕರ್ಷಣೆ ಗಳಿಸಿಕೊಳ್ಳುವಲ್ಲಿ ಗಮನಾರ್ಹ ಯೋಗದಾನ ನೀಡಿದ್ದಾರೆ. ಈಚಿನ ವರ್ಷಗಳಲ್ಲಿ ಪ್ರತಿಷ್ಠಿತ ಕರ್ನಾಟಕ ಸಂಘ ಮಾಟುಂಗಾ ಮತ್ತು ಗೋರೆಗಾಂವ್ ಕರ್ನಾಟಕ ಸಂಘ

**ಭರತ್‌ಕುಮಾರ್ ಪೊಲಿಪು ನಿರ್ದೇಶನದ 'ಕೋಮಲ ಗಾಂಧಾರ' ನಾಟಕದ ಮುಂಬಯಿ ಪ್ರದರ್ಶನ – 2014**

ಇವೆರಡೂ ಕೂಡಾ ಹವ್ಯಾಸೀ ತಂಡಗಳಿಗೆ ಸಹಯೋಗ ನೀಡುತ್ತಲಿವೆ. ಸದಾನಂದ ಸುವರ್ಣ ಸಾಂಸ್ಕೃತಿಕ ಪ್ರತಿಷ್ಠಾನದಂತಹ ಸಂಸ್ಥೆಗಳ ಮೂಲಕ ವ್ಯವಸ್ಥಿತ ರಂಗ ತರಬೇತಿ, ನಾಟಕ ಸ್ಪರ್ಧೆ ನಾಟಕೋತ್ಸವ, ರಂಗ ಕಲಾವಿದರ ಸಮಾವೇಶಗಳು ಜರಗುತ್ತಲಿವೆ.

ಊರು ಬಿಟ್ಟು ಮುಂಬಯಿ ಸೇರಿ ಬದುಕು ನಡೆಸುವವರ ಹಪಹಪೆ, ಅತಂತ್ರ ಸ್ಥಿತಿ, ನೋವು, ಕಾವು, ಊರಿನ ಸೆಳೆತ – ಇವನ್ನು ಬಿಂಬಿಸುವ 'ಊರೇ ಗತಿ', 'ಬೊಜ್ಜ'ದಂತಹ ನಾಟಕಗಳು; ಆಧುನಿಕ ವಿಕ್ಷಿಪ್ತ ಸಮಾಜದ ಸಂಸಾರವೊಂದರ ಯಜಮಾನ ಭುಜಂಗ ಚೌಟ – ಅವನ ಹೆಂಡತಿ, ಮಕ್ಕಳ ಭಾವನಾತ್ಮಕ ವಿಘಟನೆ, ಸಂಘರ್ಷ, ಒಳತೋಟಿಯ ಮನ ಕಲಕುವ ಚಿತ್ರಣ ನೀಡಿದ 'ಜೋಕುಲು ಬಾಲೆಲು' (ಅನುವಾದಿತ ಕೃತಿ)–ಮುಂತಾದ ನಾಟಕಗಳು ಜಯಭೇರಿ ಹೊಡೆಯುತ್ತಾ, ಮುಂಬಯಿಯಲ್ಲಿ ತುಳು ರಂಗಭೂಮಿ ಕ್ರಿಯಾಶೀಲವೂ ಪ್ರಬುದ್ಧವೂ ಆಗಿರುವುದಕ್ಕೆ ಸಾಕ್ಷಿಯಾಗಿದೆ.

**ಸದಾಶಿವ ಪಿ. ಸಾಲ್ಯಾನ್ (1950–2018)**

ಹೊಸಬೆಟ್ಟು ಮೊಗವೀರ ಸಮಾಜ ಮೂಲದ ಮುಂಬಯಿಗ ಸದಾಶಿವ ಸಾಲಿಯಾನ್ ಬಾಲ್ಯದಿಂದಲೇ ನಾಟಕ ಅಭಿನಯದಲ್ಲಿ ಹೆಸರಾಗಿ ಅಂತರ್ಶಾಲಾ ನಾಟಕ ಸ್ಪರ್ಧೆಗಳಲ್ಲಿ ಬಹುಮಾನಿತರಾಗುತ್ತಾ ಯಶಸ್ಸಿನ ಮೆಟ್ಟಲೇರಿ ಮುಂಬಯಿ ಕಲಾಕ್ಷೇತ್ರದ ಸಾಮಾಜಿಕ, ಚಾರಿತ್ರಿಕ ವಿಭಿನ್ನ ಪಾತ್ರಗಳಲ್ಲಿ ಜನಪ್ರಿಯತೆ ಗಳಿಸಿಕೊಂಡಿದ್ದರು. ಕಾಲೇಜು ಶಿಕ್ಷಣ ಮುಗಿಸಿ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಉದ್ಯೋಗ ಪಡೆದಿದ್ದರೂ, ನಾಟಕ ರಂಗದ ಬಿಡುವಿಲ್ಲದ ಚಟುವಟಿಕೆಗಳಿಗಾಗಿ ಬ್ಯಾಂಕ್ ಉದ್ಯೋಗಕ್ಕೆ ಸ್ವಯಂ ನಿವೃತ್ತಿ ಪಡೆದರು. ಕನ್ನಡ, ತುಳು, ಹಿಂದಿ, ಮರಾಠಿ ಮೊದಲಾದ ಭಾಷೆಗಳ ಸುಮಾರು 500ಕ್ಕೂ ಮಿಕ್ಕ ನಾಟಕಗಳಲ್ಲಿ ನಟಿಸಿದ ಬೇಡಿಕೆಯ ನಟರಾಗಿದ್ದರು. ಎಂಬತ್ತರ ದಶಕದಲ್ಲಿ ಮುಂಬಯಿಯ ಕಲಾಜಗತ್ತು ತಂಡದ ತುಳು ಕನ್ನಡ ನಾಟಕಗಳಲ್ಲಿ ಖಳನಾಯಕರಾಗಿ ಹೆಸರಾದರು. ಪ್ರವಾಸಿ ತಂಡಗಳಾದ ವಿಜಯಕುಮಾರ್ ಕೊಡಿಯಾಲ್‌ಬೈಲ್‌ರ ಕಲಾಸಂಗಮದ 'ಒರಿಯರ್ದೊರಿ ಅಸಲ್' ಹಾಗೂ ದೇವದಾಸ್ ಕಾಪಿಕಾಡ್‌ರ 'ಚಾ ಪರ್ಕ' ತಂಡದ 'ಬಲೇ ಚಾಪರ್ಕ'ದಂತಹ ನಾಟಕಗಳಲ್ಲೂ ಸದಾಶಿವ ಸಾಲಿಯಾನ್ ಅಭಿನಯಿಸಿದವರು. ಸಿನಿಮಾ ನಟನಾಗಿಯೂ ಅವರದು ಅಮೋಘ ಅಭಿನಯ. 1979ರಲ್ಲಿ ನಿರ್ಮಾಣವಾದ ಕೆ. ಎನ್. ಟೇಲರ್‌ರ 'ಭಾಗ್ಯವಂತೆದಿ' ಮೂಲಕ ಚಿತ್ರರಂಗಕ್ಕೆ ಪಾದಾರ್ಪಣೆಗೈದ ಸಾಲಿಯಾನ್ 'ಬದ್ಕೆರೆ ಬುಡ್ಲೆ', 'ಪೆಟ್ಟಾಯಿ ಪಿಲಿ', 'ಸತ್ಯ ಓಲುಂಡು', 'ದಾರೆದ ಸೀರೆ', 'ಒಂತೆ ಅಡ್ಜಸ್ಟ್ ಮಲ್ಪಿ' ಮುಂತಾದ ತುಳು ಮತ್ತು ಕನ್ನಡ ಚಿತ್ರಗಳಲ್ಲಿ ಅಭಿನಯಿಸಿದ್ದಲ್ಲದೆ ನಿರ್ಮಾಪಕ, ನಿರ್ದೇಶಕರಾಗಿಯೂ ಹೆಸರು ಮಾಡಿದ್ದರು. 2018ರಲ್ಲಿ ತೀರಿಕೊಂಡರು.

**ರಂಗನಟ ಮೋಹನ್ ಮಾರ್ನಾಡ್ (1964)**



ತೋನ್ಸೆ ವಿಜಯಕುಮಾರ್ ಶೆಟ್ಟರ ಕಲಾಜಗತ್ತು (ರಿ) ತಂಡದಲ್ಲಿ ಪ್ರಧಾನ ನಟರಾಗಿದ್ದ ಮೂಡುಬಿದರೆ ಮೂಡು ಮಾರ್ನಾಡಿನ ಮೋಹನ್ ಮಾರ್ನಾಡ್ ಮುಂಬಯಿಯ ಪ್ರಸಿದ್ಧ ಕನ್ನಡ, ತುಳು ರಂಗನಟ 'ಯಮಲೋಕೊಡ್ ಪೊಲಿಟಿಕ್ಸ್', 'ಕಲ್ವರೆ ಕುಂಟು ಮಡಿ ಮಲ್ಪುನಾಯೆ' ಮತ್ತಿತರ ತುಳು ನಾಟಕಗಳನ್ನು ಬರೆದವರು. 377ಕ್ಕೂ ಅಧಿಕ ಕನ್ನಡ, ತುಳು ರಂಗನಾಟಕ ಪ್ರದರ್ಶನಗಳಲ್ಲಿ ನಟಿಸಿದವರು. 2006ರಲ್ಲಿ ನಿರ್ಮಾಣ ಗೊಂಡು ಅಂತರಾಷ್ಟ್ರೀಯ ಪ್ರಶಸ್ತಿ ಪಡೆದ 'ಸುದ್ದ' ತುಳು ಚಿತ್ರದ ನಿರ್ಮಾಪಕರಾದ ಮೋಹನ್ ಮಾರ್ನಾಡ್ 2018ನೆ ಸಾಲಿನ ಕರ್ನಾಟಕ ನಾಟಕ ಅಕಾಡೆಮಿಯ ಪ್ರಶಸ್ತಿ ಪುರಸ್ಕೃತರು.

**ರಾಜು ಬಿ. ತೋನ್ಸೆ**



ಹಿರಿಯ ತಲೆಮಾರಿನ ನಟ, ನಾಟಕಕಾರ, ನಿರ್ದೇಶಕ ರಾಜು ಬಿ. ತೋನ್ಸೆಯುವರು ಬಾಲ್ಯದಲ್ಲಿಯೇ ಜೀವನೋಪಾಯಕ್ಕಾಗಿ ಮುಂಬಯಿಗೆ ಹೋಗಿ ಹಗಲು ಕೆಲಸ ಮಾಡುತ್ತಾ ರಾತ್ರಿಶಾಲೆಯಲ್ಲಿ ಕಲಿಯುತ್ತಾ ಸದಾನಂದ ಸುವರ್ಣ ಮುಂತಾದವರ ರಂಗಚಟುವಟಿಕೆಗಳಿಂದ ಪ್ರಭಾವಿತರಾಗಿ ಚೆಂಬೂರಿನಲ್ಲಿ ತುಳು ನಾಟಕ ಸಂಘವನ್ನು ಕಟ್ಟಿ 1971ರಲ್ಲಿ 'ಜಲಜ ಮಗಳೆಗ್ ಜಪಾನ್ದ ಕಂಡನೆ', 'ಬೊಗ್ಗು ಬೊಂಬಾಯಿಗ್ ಪೋಯೆ' (1975) ಮುಂತಾದ ತುಳುನಾಟಕಗಳನ್ನು ಬರೆದು ನಿರ್ದೇಶಿಸಿ ಪ್ರದರ್ಶಿಸಿದರು. 1975ರಲ್ಲಿ ಹುಟ್ಟೂರಿಗೆ ಹಿಂತಿರುಗಿದ ಮೇಲೆಯೂ ತನ್ನ ನಾಟಕಗಳನ್ನು ಪೊಲಿಪು ಲಕ್ಷ್ಮೀನಾರಾಯಣ ಕಲಾವೃಂದ ಮುಂತಾದ ತಂಡಗಳ ಮೂಲಕ ತಾಯ್ನಾಡು, ಬೆಂಗಳೂರು, ಮುಂಬಯಿ ಮುಂತಾದೆಡೆ ಪ್ರದರ್ಶನ ನೀಡಿದರು. 'ಬೊಗ್ಗು ಬೊಂಬಾಯಿಗ್ ಪೋಯೆ' ನಾಟಕವು ಸುಮಾರು ಮುನ್ನೂರಕ್ಕೂ ಮಿಕ್ಕಿ ಪ್ರದರ್ಶನಗಳನ್ನು ಕಂಡಿದೆ.

## ಮುಂಬಯಿಯಲ್ಲಿ ನಾಟಕೋತ್ಸವಗಳು, ನಾಟಕ ಸ್ಪರ್ಧೆಗಳು

ಮುಂಬಯಿಯಲ್ಲಿ ಸದಾನಂದ ಸುವರ್ಣರ 'ಕನ್ನಡ ಕಲಾಕೇಂದ್ರ'ದ ಮೂಲಕ ರಂಗ ಚಟುವಟಿಕೆಗಳು, ತೋನ್ಸೆ ವಿಜಯಕುಮಾರ್ ಶೆಟ್ಟರ 'ಕಲಾಜಗತ್ತು' ಮತ್ತಿತರ ತಂಡಗಳ ಹಲವು ರಂಗೋತ್ಸವಗಳ ಬಳಿಕ ಮುಂಬಯಿ ಬಿಲ್ಲವ ಅಸೋಸಿಯೇಶನಿನ

ಸಾಂಸ್ಕೃತಿಕ ಉಪಸಮಿತಿಯು ಕಳೆದ ಮೂರು ವರ್ಷಗಳಿಂದ ಸಾಂತಾಕ್ರೂಜ್ ಬಿಲ್ಲವ ಭವನದಲ್ಲಿ ತುಳುನಾಟಕ ಸ್ಪರ್ಧೆಗಳನ್ನು 2016, 2017 ಹಾಗೂ 2018ರಲ್ಲಿ ಸತತವಾಗಿ ಜರಗಿಸುವ ಮೂಲಕ ಮುಂಬಯಿ ತುಳುರಂಗಭೂಮಿಗೆ ಪುನಶ್ಚೇತನ ನೀಡುವಲ್ಲಿ ಗಮನಾರ್ಹ ಕೊಡುಗೆ ನೀಡುತ್ತಲಿದೆ.


॥ ಶ್ರೀ ಗಣಪತಿ ಪ್ರಸನ್ನ ॥

ಬನ್ನಿರಿ ! ನೋಡಿರಿ !! ಆನಂದಿಸಿರಿ !!!

ಕರ್ನಾಟಕ ಕಲಾ ಕೇಂದ್ರ

ಜರಿಮರಿ, ಸಫೇದ್ ಪೂಲ್, ಮುಂಬಯಿ.

ಇವರ ತೃತೀಯ ಕಲಾಕಾಣಿಕೆ

ಪ್ರಿಯ ಕಲಾಭಿಮಾನಿಗಳೇ,

ಇದೇ ಬರುವ ತಾರೀಕು 15-3-1975ನೇ ಶನಿವಾರ ರಾತ್ರಿ ಘಂಟೆ 8-30ಕ್ಕೆ ಸರಿಯಾಗಿ ಜರಿಮರಿ, ಶಿವಾಜಿ ನಗರ್, ಅಂಧೇರಿ-ಕುರ್ಲಾ ರೋಡು ಇಲ್ಲಿ ಹಾಕಿರುವ ಝಗಝಗಿಸುವ ಭವ್ಯ ರಂಗಮಂಟಪದಲ್ಲಿ

ಡಾ। ಸಂಜೀವ ದಂಡೆಕೇರಿ ವಿರಚಿತ

"ಸರಸ್ವತಿ"

ಎಂಬ ಸಾಮಾಜಿಕ ತುಳು ನಾಟಕವನ್ನು ಆಡಿತೋರಿಸಲಿರುವರು.

ಆ ಪ್ರಯುಕ್ತ ಕಲಾಭಿಮಾನಿಗಳಾದ ತಾವೆಲ್ಲರೂ ಬಂದು ಪ್ರೋತ್ಸಾಹಿಸಬೇಕಾಗಿ ವಿನಂತಿ.

ದಿಗ್ದರ್ಶನ : ಆರ್. ಯಮ್. ಕೋಟ್ಯಾನ್. ಸಂಗೀತ : ಅವಿನಾಶ್ ಮತ್ತು ಪಾರ್ಟಿ.

ರಂಗಭೂಮಿ ನಿರ್ದೇಶನ : ಸದಾನಂದ ಯಚ್. ಶೆಟ್ಟಿ. ಹಿನ್ನೆಲೆ ಗಾಯಕರು : ಕೋರಗಪ್ಪ ಮತ್ತು ಅವಿನಾಶ್.

ವರ್ಣಾಲಂಕಾರ : ರಾಮಕೃಷ್ಣ ಶೆಟ್ಟಿ, ಜಯರಾಮ ಶೆಟ್ಟಿ ಮತ್ತು ಪಿ. ಯಮ್. ಪೈ.

ತೆರೆಯ ಮರೆಯಲ್ಲಿ : ಜಯ ಶೆಟ್ಟಿ ಮತ್ತು ಮುದ್ದು ಮೂಡುಬೆಳ್ಳೆ.

ಪಾತ್ರ ಪರಿಚಯ :-

| | | | |
|---|---|---|---|
| ರಾಜಣ್ಣ | ಆರ್. ಯಸ್. ಕಣಂಜಾರು | ಸರಸ್ವತಿ | ವಿಠಲ ಶೆಟ್ಟಿ ಕೆ. |
| ತಾರನಾಥ | ಆರ್. ಯಸ್. ಕಳತ್ತೂರು | ಲಕ್ಷ್ಮಿ | ಆರ್. ಜಿ. ದೇವಾಡಿಗ |
| ತಿರುಪತಿರಾಯ | ವಿಶ್ವನಾಥ ಯಮ್. ಶೆಟ್ಟಿ | ಮಾಲ | ಎ. ಎಮ್. ಪೈ |
| ಶಂಕರರಾಯರು | ಪಿ. ಯಚ್. ಕಣಂಜಾರು | ಕ್ಲಬ್ ಡಾನ್ಸರ್ | ರಾಮಕೃಷ್ಣ ಶೆಟ್ಟಿ |
| ಮಿಲ್ ಮಾಲಕ | ಜಯರಾಮ ಶೆಟ್ಟಿ | ರಂಗರಾಯರು | ಆರ್. ಯಚ್. ಶೆಟ್ಟಿ |
| ಡಾಕ್ಟರ್ | ಮುದ್ದು ಮೂಡುಬೆಳ್ಳೆ | ಕಿಲಾಡಿ | ಸದಾಶಿವ ಮತ್ತು ಪಿ. ಯಮ್. ಪೈ |

ವ್ಯಕ್ತಿಗಳು : ವೈ. ಯಮ್. ಪುತ್ರನ್ ಮತ್ತು ಸದಾನಂದ ಶೆಟ್ಟಿ.

ವ್ಯವಸ್ಥಾಪಕರು : ಕಿಟ್ಟಣ್ಣ ಅವಿನಾಶ್ ಮರೋಲ್, ಶೀನ ಜಿ. ಪೂಜಾರಿ ಜರಿಮರಿ, ಮುದ್ದು ಯನ್. ಪೂಜಾರಿ, ಪಿ. ಆರ್. ಶಾಸ್ತ್ರಿ, ಮುರಾರಿ ಚವಾಣ್ ಮತ್ತು ಶಿವರಾಮ್ ಆರ್. ಲಿಂಗಾಯತ್.

ಕರ್ನಾಟಕ ಕಲಾ ಕೇಂದ್ರದ ಪರವಾಗಿ,

ಜಯರಾಮ ಶೆಟ್ಟಿ, ಅಧ್ಯಕ್ಷರು. ವಿಠಲ ಶೆಟ್ಟಿ ಕೆ., ಕಾರ್ಯದರ್ಶಿ.

ಉಷಾ ಪ್ರಿಂಟರ್ಸ್, ಮುಂಬಯಿ-11.

1975ರಲ್ಲಿ ಈ ಲೇಖಕನು ಸದಸ್ಯನಾಗಿದ್ದ ಮುಂಬಯಿ ಜರಿಮರಿ ಕರ್ನಾಟಕ ಕಲಾಕೇಂದ್ರ ಇವರು ನಡೆಸಿದ ತುಳು ರಂಗಚಟುವಟಿಕೆಗಳ ಒಂದು ಮಾದರಿ ಕರಪತ್ರ

2016ರಲ್ಲಿ ಹೀಗೆ ನಡೆದ ಸ್ಪರ್ಧೆಯಲ್ಲಿ ಎಸೋಸಿಯೇಶನಿನ 18 ಉಪಸಮಿತಿಗಳು 3 ದಿವಸಗಳಲ್ಲಿ 18 ಏಕಾಂಕ ನಾಟಕಗಳೊಂದಿಗೆ ಸ್ಪರ್ಧಿಸಿದವು. ನಟರು, ತಂತ್ರಜ್ಞರು, ಹಿನ್ನೆಲೆಯೆಂದು ಒಟ್ಟು ಸುಮಾರು 300 ಕಲಾವಿದರು ಪಾಲ್ಗೊಂಡ ಅಪೂರ್ವ ಸಂದರ್ಭ ಇದಾಗಿತ್ತು. ಗೋರೆಗಾಂವ್ ಸ್ಥಳೀಯ ಸಮಿತಿಯ ನಾಟಕ 'ಮುನ್ನಿ' ಪ್ರಥಮ, ವಸಾಯಿ ಸಮಿತಿಯ 'ತೆಡಿಲ್ದ ಕಿಡಿ' ದ್ವಿತೀಯ, ಭಿವಂಡಿ ಸಮಿತಿ 'ಮಾಯಕದ ಮಾಣಿ' ತೃತೀಯ ಸ್ಥಾನ ಗಳಿಸಿತ್ತು. 'ಮಸ್ಕಿ' –ಕಟ್ಟಡ ನಿರ್ಮಾಣದ ಸೈಟ್‌ನಲ್ಲಿ ದುಡಿಯುವ ಬಡ ಅಮಾಯಕ ಮಹಿಳೆಯ ಹೃದಯಂಗಮ ಕಥೆ. 'ತೆಡಿಲ್ದ ಕಿಡಿ' ಸ್ವಾತಂತ್ರ್ಯ ಯೋಧ ಚಂದ್ರಶೇಖರ ಆಜಾದ್‌ರ ವ್ಯಕ್ತಿ ಚಿತ್ರ. ಬಲಿ ಚಕ್ರವರ್ತಿ ಪಾತಾಳ ಸೇರುವ ಕತೆಯ ನಾಟಕ 'ಮಾಯಕದ ಮಾಣಿ'.





**2016ರ ಗುರುನಾರಾಯಣ ನಾಟಕ ಸ್ಪರ್ಧೆಯಲ್ಲಿ ಬಹುಮಾನಿತ ನಾಟಕಗಳು**

ಈ ನಾಟಕ ಪ್ರಯೋಗದ ಕುರಿತು 'ಅಕ್ಷಯ' ಸಂಪಾದಕೀಯದಲ್ಲಿ ಡಾ. ಈಶ್ವರ ಅಲೆವೂರರು ಬರೆದ ಸಾಲುಗಳು ಗಮನಾರ್ಹ. 'ಹೆಚ್ಚಿನ ನಾಟಕಗಳು ಪ್ರೇಕ್ಷಕರ ಮನವನ್ನು ಗೆಲ್ಲುತ್ತಾ, ಆಧುನಿಕ ಬದುಕು, ಮೊಬೈಲ್ ವಾಟ್ಸಾಪ್‌ಗಳಿಂದ ಕೌಟುಂಬಿಕ ತಂತು ಕಳೆದುಕೊಳ್ಳುವ ಪರಿ, ಒಂಟಿತನ, ಹೆಣ್ಣು ಗಂಡಿನ ಸಂಬಂಧ, ಅಲ್ಲಿನ ತುಡಿತ, ತುಳಿತವೆಲ್ಲವೂ ಮೂರು ದಿನಗಳ ನಾಟಕಾವಧಿಯಲ್ಲಿ ಅನಾವರಣಗೊಂಡವು. ಮುಂಬಯಿಯಲ್ಲಿ ತುಳುವರ ರಂಗಭೂಮಿ ಕ್ರಿಯಾತ್ಮಕಗೊಂಡ ಕುರುಹುಗಳು ಲಭ್ಯವಾದವು. ಮೂರು ದಿನಗಳ ಉದ್ದಕ್ಕೂ ಕಿಕ್ಕಿರಿದು ನೆರೆದ ಪ್ರೇಕ್ಷಕರು. ನವ ವಿದ್ಯಾವಂತ ಆಂಗ್ಲ ಮಾಧ್ಯಮದ ಯುವಕರು ತುಳು ಸಂಭಾಷಣೆಯನ್ನು ಇಂಗ್ಲಿಷಿನಲ್ಲಿ ಬರೆದು (ದೇಸಿಯತೆ ಕಾದುಕೊಂಡು) ಅಭಿನಯದಲ್ಲಿ ಸಾದರಪಡಿಸಿದುದು ಹೆಚ್ಚುಗಾರಿಕೆ'.

ಜಾತಿಮತ ಭೇದವಿಲ್ಲದೆ ಪ್ರೇಕ್ಷಕರು ಮುದಗೊಂಡಿರುವುದಂತೂ ಸತ್ಯ. ಭಾಷೆ, ಸಂಸ್ಕೃತಿ, ಸಾಹಿತ್ಯ, ರಂಗಭೂಮಿಯಿಂದ ಮಾನವ ಪ್ರೀತಿ ಬೆಳೆದಂತೆ ಅದು ಜನರನ್ನು ಕೂಡಾ ಸುಸಂಸ್ಕೃತರನ್ನಾಗಿಸುತ್ತದೆ. ಈ ನೆಲೆಯಲ್ಲಿ ಬಿಲ್ಲವರ ಎಸೋಸಿಯೇಶನ್ ಆಯೋಜಿಸಿದ ನಾಟಕ ಸ್ಪರ್ಧೆ ನಿಜಕ್ಕೂ ಅಭಿನಂದನಾರ್ಹ.

ಈ ಮಾತುಗಳು ಮುಂಬಯಿ ತುಳುರಂಗಭೂಮಿಯು ವರ್ತಮಾನದಲ್ಲೂ ಕಾದುಕೊಂಡು ಸಾಧಿಸಿರುವ ಆಶಾದಾಯಕ ಬೆಳವಣಿಗೆಯನ್ನು ಪ್ರತಿಫಲಿಸುತ್ತವೆ.

2016ರ ನಾಟಕ ಪ್ರಯೋಗದ ಈ ಯಶಸ್ವಿನಿಂದ ಹುರುಪುಗೊಂಡು ಮುಂಬಯಿ ಬಿಲ್ಲವ ಎಸೋಸಿಯೇಶನ್ ಮುಂದಿನ 2017 ಹಾಗೂ 2018ರಲ್ಲೂ ಇದೇ ರೀತಿ ನಾಟಕ ಸ್ಪರ್ಧೆ ಏರ್ಪಡಿಸಿ, ರಂಗಕರ್ಮಿಗಳಿಂದ ಅಷ್ಟೇ ಉತ್ಸಾಹದ ಪ್ರತಿಕ್ರಿಯೆಯೊಂದಿಗೆ ಯಶಸ್ಸು ಕಂಡಿದೆ.

2018ರಲ್ಲಿ 'ಗುರುನಾರಾಯಣ ನಾಟಕ ಸ್ಪರ್ಧೆ' ಎನ್ನುವ ಹೆಸರಲ್ಲಿ ಮೂರು ದಿನಗಳ ಕಾಲ ಏರ್ಪಟ್ಟ ತುಳುನಾಟಕ ಸ್ಪರ್ಧೆಯಲ್ಲಿ 15 ತಂಡಗಳು, 300ಕ್ಕೂ ಹೆಚ್ಚಿನ ರಂಗಕಲಾವಿದರು, ನೂರಾರು ನೇಪಥ್ಯ ಕಲಾವಿದರು ಪಾಲ್ಗೊಂಡ ಸಂಭ್ರಮವಿತ್ತು. ಸ್ಪರ್ಧೆಯಲ್ಲಿ ಬಹುಮಾನಿತವಾದ 'ಈದಿ', 'ನಾಗಸಂಪಿಗೆ' (ಮೂಲ : ಚಂದ್ರಶೇಖರ ಕಂಬಾರ), 'ಯಾನ್ ಏರ್?' ಸೇರಿದಂತೆ ಬಹುತೇಕ ನಾಟಕಗಳು ಹೊಚ್ಚ ಹೊಸ ಸಮಕಾಲೀನತೆ, ಮನುಷ್ಯತ್ವದ ಹುಡುಕಾಟ, ಸವಾಲುಗಳಿಗೆ ಸ್ಪಂದಿಸಿದ್ದವು (ಅಕ್ಷಯ ಮಾಸಿಕ).

* * *

ತಾಂತ್ರಿಕ ಹಾಗೂ ಕಲಾತ್ಮಕವಾಗಿ ಮುಂಬಯಿಯ ತುಳುನಾಟಕ ರಂಗ ಬಹಳಷ್ಟು ಬೆಳೆದಿದೆ. ಇಲ್ಲಿ ಮರಾಠಿ ರಂಗದ ಪ್ರಭಾವ ಹೆಚ್ಚಿನ ನಾಟಕಕಾರರಲ್ಲಿ ಇದೆ.

*** ಈ ಅಧ್ಯಾಯ ಲೇಖನ ಸಂದರ್ಭಕ್ಕೆ 2003ರಲ್ಲಿ ಮುಂಬೈಯ ಶ್ರೀ ಸದಾನಂದ ಸುವರ್ಣ, ಶಿಮುಂಜೆ ಪರಾರಿ ಹಾಗೂ ಪ್ರಸಕ್ತ 2018ರ ವೇಳೆಗೆ ಡಾ. ಈಶ್ವರ ಅಲೆವೂರು ಇವರು ನೀಡಿದ ಮಾಹಿತಿಗಾಗಿ ಲೇಖಕ ಕೃತಜ್ಞ.**

2018ರ ಗುರುನಾರಾಯಣ ನಾಟಕ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ಗೋರೆಗಾಂವ್ ಸ್ಥಳೀಯ ಸಮಿತಿಯ ನಾಟಕ 'ಈದಿ'



2018ರ ಗುರುನಾರಾಯಣ ನಾಟಕ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ ಪಡೆದ ಅಂಧೇರಿ ಸ್ಥಳೀಯ ಸಮಿತಿಯ ನಾಟಕ 'ನಾಗಸಂಪಿಗೆ'

2018ರ ಗುರುನಾರಾಯಣ ನಾಟಕ ಸ್ಪರ್ಧೆಯಲ್ಲಿ ತೃತೀಯ ಬಹುಮಾನ ಪಡೆದ ನಾಲಾಸೋಪಾರ–ವಿರಾರ್ ಸ್ಥಳೀಯ ಸಮಿತಿಯ ನಾಟಕ 'ಯಾನ್ ಏರ್' (ಚಿತ್ರಕೃಪೆ : ಅಕ್ಷಯ ಮುಂಬಯಿ)

# ತುಳುನಾಟಕಗಳ ಸೀಮೋಲ್ಲಂಘನ

ಸಾವಿರದೊಂಭೈನೂರ ಎಂಬತ್ತೆಂಟರ ಏಪ್ರಿಲ್ 15ರಂದು ಪ್ರಪ್ರಥಮ ಬಾರಿಗೆ ತುಳುನಾಟಕಗಳು ಭಾರತದ ಗಡಿದಾಟಿ ಕೊಲ್ಲಿ ರಾಷ್ಟ್ರಗಳಲ್ಲಿ ಪ್ರವಾಸ ಹೋಗಿ ಕೆ.ಎನ್. ಟೇಲರರ 'ಕಂಡನೆ ಬುಡೆದಿ' ನಾಟಕದ ರಂಗಪ್ರಯೋಗ ನೀಡುವ ಮೂಲಕ ಇನ್ನೊಂದು ಐತಿಹಾಸಿಕ ದಾಖಲೆ ಮಾಡಿದವು. ಕಲಾವಿದ ಶ್ರೀ ವಿ.ಜಿ. ಪಾಲ್ ಅವರ ನೇತೃತ್ವದಲ್ಲಿ ಅಬುಧಾಬಿಗೆ ಹೋದ ಈ ತಂಡದಲ್ಲಿದ್ದ ಕಲಾವಿದರು ನಾಟಕಕರ್ತ, ನಿರ್ದೇಶಕ ನಟ ಕೆ.ಎನ್. ಟೇಲರ್, ವಿ.ಜಿ. ಪಾಲ್, ಸೀತಾರಾಮ ಬಂಗೇರ, ಸರೋಜಿನಿ ಶೆಟ್ಟಿ ಹಾಗೂ ಕುಮುದಾ ಬಾರ್ಕೂರ್, ಅಬುಧಾಬಿ ನ್ಯೂ ಮೆಡಿಕಲ್ ಸೆಂಟರ್‌ನ ಬಾವಗುತ್ತು ಬಿ.ಆರ್. ಶೆಟ್ಟರ ಪ್ರಾಯೋಜಕತ್ವದಲ್ಲಿ ಅಲ್ಲಿನ ತುಳುನಾಡ ಕಲಾಸಮಾಜದವರು ಈ ಕಲಾಪ್ರದರ್ಶನ ನಡೆಸಿದರು. ಈ ಪ್ರವಾಸೀತಂಡ ಒಂದು ತಿಂಗಳ ಕಾಲ ಅಬುಧಾಬಿಯಲ್ಲಿತ್ತು.

ಮುಂದೆ ಅಕ್ಟೋಬರ್ 1989ರಲ್ಲಿ ದೇವದಾಸ್ ಕಾಪಿಕಾಡ್‌ರ 'ಗಂಟೇತಾಂಡ್', ಬಲೇ ಚಾ ಪರ್ಕ' ನಾಟಕಗಳನ್ನು ಬೆಹರಿನ್‌ಗೆ ಆಹ್ವಾನಿಸಿ ಪ್ರದರ್ಶನಾವಕಾಶ ಜಂಟಿಯಾಗಿ ಒದಗಿಸಿದವರು ಬೆಹರಿನ್ ಕರ್ನಾಟಕ ಸಂಘ ಮತ್ತು ತುಳುಕೂಟ ಬೆಹರಿನ್.

1992ರಲ್ಲಿ ವಿಜಯಕುಮಾರ್ ಕೊಡಿಯಾಲ್‌ಬೈಲ್ ಅವರ ತಂಡ 'ದುಬಾಯಿಗೆ ಹೋಗಿ 'ಒರಿಯದ್ರೋರಿ ಅಸಲ್' ಪ್ರದರ್ಶನ ನೀಡಿತು. ಅದೇ ವೇಳೆಗೆ ಉಡುಪಿಯ ಕೆ. ಆನಂದ ಗಾಣಿಗರ ನೇತೃತ್ವದಲ್ಲಿ ಅವರದೇ ನಾಟಕ 'ಗುವೆಲ್ ಕಳವಾತ್‌ಂಡ್' – ಬೆಹರಿನ್‌ನಲ್ಲಿ ಪ್ರಯೋಗ ಗೊಂಡಿತು. 1999ರಲ್ಲಿ ದೋಹಾ ಕಟಾರ್‌ನಲ್ಲಿ ಅಲ್ಲಿನ ಮಂಗಳೂರು ಕ್ರಿಕೆಟ್ ಕ್ಲಬ್ ಆಶ್ರಯದಲ್ಲಿ ಕೊಡಿಯಾಲ್‌ಬೈಲ್‌ರ 'ಅಕ್ಲಲೆಕ ಎಂಕುಲತ್ತ್' ಪ್ರದರ್ಶನಗೊಂಡಿತು. 2002ರಲ್ಲಿ ದೇವದಾಸ್ ಕಾಪಿಕಾರ ತಂಡ 'ಪಾರ್ವತಿ' ನಾಟಕವನ್ನು ದುಬಾಯಿ ಮತ್ತು ಅಬುಧಾಬಿಗಳಲ್ಲಿ ಪ್ರದರ್ಶಿಸಿತು. ಹೀಗೆಯೇ ಅಲ್ಲಿನ ಸಂಘಸಂಸ್ಥೆಗಳ ವಾರ್ಷಿಕೋತ್ಸವ ಸಂದರ್ಭಗಳಲ್ಲಿ ಇಲ್ಲಿನ ವಿವಿಧ ನಾಟಕಕಾರರ ನಾಟಕಗಳು ಪ್ರಯೋಗ ವಾಗುತ್ತಿವೆ. ವಿಜಯಕುಮಾರ್ ಕೊಡಿಯಾಲ್‌ಬೈಲ್, ದೇವದಾಸ್

ಕಾಪಿಕಾಡ್ ತಮ್ಮ ತಮ್ಮ ತಂಡದೊಂದಿಗೆ ಕೊಲ್ಲಿ ರಾಷ್ಟ್ರಗಳಲ್ಲಿ ಸರದಿಯಂತೆ ನಾಟಕ ಪ್ರದರ್ಶನ ನೀಡಿ ಬಂದಿದ್ದಾರೆ.

ಮುಂಬಯಿ ಕಲಾಜಗತ್ತು ತಂಡದ ವಿಜಯಕುಮಾರ್ ಶೆಟ್ಟರ ತುಳುನಾಟಕಗಳು ಅಬುಧಾಬಿ, ದುಬೈ, ಬೆಹರಿನ್‌ಗಳ ಪ್ರವಾಸಿ ಪ್ರದರ್ಶನಗಳಲ್ಲಿ ಮಿಂಚಿದವು. ಈಗ ಕೊಲ್ಲಿ ಬಾಂಧವ್ಯ ಮತ್ತಷ್ಟು ಸನಿಹ. ವರ್ಷಕ್ಕೆ ಮೂರು-ನಾಲ್ಕು ತಂಡಗಳು ದುಬೈ, ಮಸ್ಕತ್, ಬೆಹರಿನ್ ಮುಂತಾದೆಡೆ ನಿರಂತರವಾಗಿ ಹೋಗಿ ಪ್ರದರ್ಶನ ನೀಡಿ ಬರುತ್ತಿವೆ. ಈಗೆರಡು ದಶಕಗಳ ಹಿಂದೆ ಮತ್ಸ್ಯಗಂಧಾ ರೈಲು ಸಂಚಾರ ಆರಂಭದೊಂದಿಗೆ ತಾಯ್ನಾಡಿನ ಹತ್ತಾರು ನಾಟಕ ತಂಡಗಳು ಮುಂಬಯಿಗೆ ಹೋಗಿ ಪ್ರದರ್ಶನ ನೀಡುವುದು ನಿರಂತರವಾಗಿದೆ.

* * *



**1989** – ಬಹರೈನ್‌ನಲ್ಲಿ ದೇವದಾಸ್ ಕಾಪಿಕಾಡ್‌ರ 'ಗಂಟೇತಾಂಡ್?' ಪ್ರದರ್ಶನ. ಕಲಾವಿದರು : ವಿ.ಜಿ. ಪಾಲ್, ಯತೀಶ್ ಆಳ್ವ, ಬಾಲಕೃಷ್ಣ ಕದ್ರಿ ಮತ್ತು ಸರೋಜಿನಿ ಶೆಟ್ಟಿ

# ಆಕಾಶವಾಣಿ ಪ್ರಸಾರಿತ ತುಳು ನಾಟಕಗಳು

1976ರ ದಶಂಬರ 16ರಂದು ಮಂಗಳೂರು ಆಕಾಶವಾಣಿ ವಿಧ್ಯುಕ್ತವಾಗಿ ಪ್ರಸಾರವನ್ನು ಆರಂಭಿಸಿತು. ಅದಕ್ಕೂ ಹಲವು ತಿಂಗಳ ಮುನ್ನವೇ ಸಂಗೀತ, ನಾಟಕಾದಿ ಕೆಲವು ಕಾರ್ಯಕ್ರಮಗಳ ಪ್ರಾಯೋಗಿಕ ಪ್ರಸಾರ ನಡೆದಿತ್ತು. ಕನ್ನಡ ನಾಟಕಗಳಿಗಿಂತ ಮೊದಲೇ ಒಂದು ಹೆಜ್ಜೆ ಮುಂದಾಗಿ ತುಳುನಾಟಕಗಳ ಪ್ರಸಾರ ಕೇಳಿಬರತೊಡಗಿತ್ತು.

ತುಳು ನಾಟಕಗಳ ಭರಾಟೆಯಿದ್ದ ಸಮಯವದು. ಮಂಗಳೂರು ಪರಿಸರದಲ್ಲಿ ಹತ್ತಾರು ಉತ್ಸಾಹೀ ನಾಟಕಕಾರರು ಆಗ ಪೈಪೋಟಿಯಲ್ಲಿದ್ದರು. ವಿವಿಧ ಪ್ರದೇಶಗಳಿಗೆ ಹೋಗಿ ರಂಗಪ್ರದರ್ಶನ ನೀಡುವುದಕ್ಕಿಂತ ಭಿನ್ನವಾಗಿ, ಒಂದೆಡೆ ಧ್ವನಿಮುದ್ರಿಸಿ, ನಾಡಿನ ಮೂಲೆ ಮೂಲೆಯ ಮನೆ ಮನೆಗಳಿಗೂ ತಮ್ಮ ನಾಟಕಗಳು ಮುಟ್ಟುವ ವಿನೂತನ ಅವಕಾಶದ ಆಕಾಶವಾಣಿ – ನಾಟಕ ಕಲಾವಿದರಿಗೆ, ನಾಟಕಕಾರರಿಗೆ ಅಂದು ರೋಮಾಂಚನ ಹುಟ್ಟಿಸಿದ್ದರಲ್ಲಿ ಅಚ್ಚರಿಯಿಲ್ಲ.

'ಬಹುಜನ ಹಿತಾಯ; ಬಹುಜನ ಸುಖಾಯ' ಎನ್ನುವುದು ಆಕಾಶವಾಣಿಯ ಸೂತ್ರ. ಬಹುಭಾಷಾ ಸೂತ್ರದೊಂದಿಗೆ ತುಳು ನೆಲದಿಂದ ಪ್ರಸಾರಕ್ಕೆ ತೊಡಗಿದಾಗ ತುಳುವಿನ ಪಾಡ್ದನ, ಸಂದಿ, ಕಬಿತಗಳಂತಹ ಜನಪದ ಸಾಹಿತ್ಯದೊಂದಿಗೆ, ತುಳು ನಾಟಕಗಳು ಎಲ್ಲ ವರ್ಗದ ಶ್ರೋತೃಗಳನ್ನು ಆಕರ್ಷಿಸಿದವು. ಆಕಾಶವಾಣಿಯಲ್ಲಿ ಧ್ವನಿ, ಸದ್ದುಗಳ ಸಂಯಮಿತ ಬಳಕೆಯೇ ಪ್ರಧಾನ.

ಸುಸಜ್ಜಿತ ಧ್ವನಿಮುದ್ರಣ ಸ್ಟುಡಿಯೋ ಒಂದಿಷ್ಟು ವಿಳಂಬವಾಗಿ ನಿರ್ಮಾಣಗೊಂಡರೂ, ಇಲ್ಲಿ ಬಾನುಲಿ ಪ್ರಸಾರಕ್ಕೇನೂ ತೊಡಕಿರಲಿಲ್ಲ. ವಿವಿಧ ನಾಟಕಕಾರರು (ಅಧಿಕಾರಿಗಳಿಗೆ ಹಸ್ತಪ್ರತಿಯನ್ನು ಪರಿಶೀಲನೆಗೆ ಮುಂದಾಗಿ ನೀಡಿ) ಧ್ವನಿ ಪರಿಣಾಮಗಳನ್ನು ಕ್ಯಾಸೆಟ್‌ನಲ್ಲಿ ಧ್ವನಿಮುದ್ರಿಸಿ, ತಮ್ಮ ತಂಡದ ಸದಸ್ಯರೊಂದಿಗೆ ಸ್ಟುಡಿಯೋಗೆ ಬಂದು ನಾಟಕ ಪ್ರಸ್ತುತಪಡಿಸುತ್ತಿದ್ದರು. ಇಂತಹ ಆರಂಭಿಕ ನಾಟಕಕಾರರೆಂದರೆ ಬಿ. ರಾಮ ಕಿರೋಡಿಯನ್, ಮಚ್ಚೇಂದ್ರನಾಥ ಪಾಂಡೇಶ್ವರ, ರತ್ನಾಕರ ರಾವ್ ಕಾವೂರು ಮುಂತಾದವರು.

ದಿ. ರಾಮ ಕಿರೋಡಿಯನ್ ಅವರ 'ಮಗೆ ಮಂಜಣೆ' ಆಕಾಶವಾಣಿಯಿಂದ ಪ್ರಸಾರಿತ ಪ್ರಥಮ ನಾಟಕ. ಅವರ ಇನ್ನಿತರ ಪ್ರಸಿದ್ಧ ನಾಟಕಗಳಾದ 'ತುಳುನಾಡ ತುಡರ್', 'ರಾಣಿ ಅಬ್ಬಕ್ಕ', 'ಬೂಳ್ಯದ ಬಪ್ಪಂಗಾಯಿ', 'ಕಾಂಪರನ ಕಟಿಪಿಟಿ', 'ಕೋಟಿ ಚೆನ್ನಯ', 'ಶಿವಲೀಲೆ' – ಮುಂತಾದವು ಬಾನುಲಿಯಲ್ಲಿ 70–80ರ ದಶಕದಲ್ಲಿ ಪ್ರಸಾರವಾಗಿ ಜನಪ್ರಿಯಗೊಂಡವು.

ಮಂಗಳೂರು ಆಕಾಶವಾಣಿಯ ಪ್ರಾಯೋಗಿಕ ಪ್ರಸಾರ ಕಾಲದಿಂದಲೇ ಬಹಳಷ್ಟು ನಾಟಕಗಳನ್ನು ನೀಡಿದ ಇನ್ನೋರ್ವ ಪ್ರಮುಖರು ಮಚ್ಚೇಂದ್ರನಾಥ ಪಾಂಡೇಶ್ವರ. ಅವರ 'ನಾಟಕದುಲಾಯಿ ನಾಟಕ', 'ಇಂಚಲಾ ಉಂಡಾ', ಲಾಟ್ರಿ ಲಕ್ಂಡ್', 'ಬಿನ್ನೆದಿ–ಕಲ್ವೆದಿ', ಮಂಡೆ ಅರ್ವತ್ತನ, ಮುಂಡಾಸ್ ತಮ್ಮಲೆನ', 'ದುಬಾಯಿದ ಪೊದು', 'ನಮ ಮಾತಾ ಒಂಜೇ', 'ಚಂಡಿ ಕೋರಿಲು', 'ಸುಭಗೆರ್ನಕುಲು', 'ಗುಡ್ಡೆಗ್ ಗುಡ್ಡೆ ಅಡ್ಡ' – ಮುಂತಾದ ಹತ್ತಾರು ನಾಟಕಗಳು 1976–84ರವರೆಗಿನ ಸುಮಾರು ಒಂದು ದಶಕದುದ್ದಕ್ಕೆ ಹಾಗೂ ಮುಂದೆ 2000–2014ರ ಅವಧಿಯಲ್ಲೂ 'ಅಜ್ಜಿ ಸಾಂಕಿನ ಪುಳ್ಳಿ' ಮುಂತಾದ ನಾಟಕಗಳು ಪ್ರಸಾರವಾದವು.

ಆರಂಭಿಕ ವರ್ಷಗಳಲ್ಲಿ ಧ್ವನಿಪರೀಕ್ಷೆ, ಧ್ವನಿಮುದ್ರಣಗಳ ಸರಳೀಕೃತ ನಿಯಮಗಳಿಂದಾಗಿ, ಆಕಾಶವಾಣಿಯ ನೀತಿಗಳಿಗನುಸಾರವಾಗಿಯೇ ಮಚ್ಚೇಂದ್ರನಾಥ ಪಾಂಡೇಶ್ವರ, ಆರ್.ಕೆ. ಉಳ್ಳಾಲ್, ರತ್ನಾಕರ ಕಾವೂರು – ಮುಂತಾದ ನಾಟಕಕಾರರು ತಮ್ಮದೇ ತಂಡದ ಕಲಾವಿದರೊಂದಿಗೆ ನಿಲಯಕ್ಕೆ ಹೋಗಿ ನಾಟಕವನ್ನು ಪ್ರಸ್ತುತಪಡಿಸುತ್ತಿದ್ದರು. 'ಅಬ್ಬಕ್ಕ ರಾಣಿ' (ಹಲವು ನಾಟಕಕಾರರು ಈ ವಸ್ತುವಿನ ಮೇಲೆ ನಾಟಕ ರಚಿಸಿದ್ದಾರೆ), 'ಭೂತಾಳ ಪಾಂಡ್ಯೆ', 'ಸಾಮ್ರಾಟ್ ಸಂಕಣ್ಣೆ', 'ಅಬ್ಬರದ ಆದಿಶಕ್ತಿ' (ಮಹಿಷಾಸುರ ಮರ್ದಿನಿ ಕಥೆ), 'ಕಂಡನ್ಯೇನೇ ದೇವೆರ್', 'ಅಮ್ಮೆರ್ನ ಅಂಗಲಾಪು', 'ಕನಕನ ಕೃಷ್ಣೆ', 'ಧರ್ಮಜ್ವಾಲೆ' (ಕುಮಾರರಾಮನ ಕತೆ), 'ಕತ್ತಿಪತ್ತಿ ಕಲ್ಯಾಣಪ್ಪೆ', 'ಮದ್ದೊಳಿ ಮಂಜಣ್ಣೆ' (ಪ್ರಹಸನ) –ಇತ್ಯಾದಿ ಸುಮಾರು ಇಪ್ಪತ್ತಕ್ಕೂ ಮಿಕ್ಕ ನಾಟಕಗಳು ಪ್ರಸಾರವಾಗಿದೆ.

ಉಳ್ಳಾಲ ಮಚ್ಚೇಂದ್ರನಾಥರ 'ಕಣ್ಣೀರ್ದ ಕರಿಯಣಿ', 'ದಾನಶೂರ ಕರ್ಣೆ', ನಾಟಕಗಳು ಎನ್. ಗೋಪಾಲಕೃಷ್ಣರ 'ಅಂಕುರಾರ್ಪಣ' – ಮುಂತಾದವು ಎಂಬತ್ತರ ದಶಕಾರಂಭದಲ್ಲಿ ಪ್ರಸಾರವಾದವು.

ಅಮೃತ ಸೋಮೇಶ್ವರರ 'ತುಳುನಾಡ ಕಲ್ಕುಡೆ' (ಫೆ.79) ಮಿತ್ರವೃಂದ, ಪುತ್ತೂರು ತಂಡದಿಂದ ಕುದ್ಕಾಡಿ ವಿಶ್ವನಾಥ ರೈಯವರ ನಿರ್ದೇಶನದಲ್ಲಿ ಗೀತ ನಾಟಕವಾಗಿ ಪ್ರಸಾರಗೊಂಡಿತು. ಗುರುರಾಜ ಮಾರ್ಪಳ್ಳಿಯವರು ಅನೇಕ ಜನಪದ ಕತೆಗಳನ್ನು ಸಂಗೀತ ನಾಟಕಗಳಾಗಿ ರಚಿಸಿ ಶಾಲಾವಿದ್ಯಾರ್ಥಿಗಳ ತಂಡಗಳ ಮೂಲಕ ನಿರ್ದೇಶಿಸಿ ಪ್ರಸ್ತುತಪಡಿಸಿದರು. 'ಸತ್ಯನಾಪುರತ ಸಿರಿ' (ಡಿ.81), 'ಪೆದ್ದಗುಂಡನ ಕತೆ' (83), 'ತಿರೋಶಚ್ಕ (98), (ರಷ್ಯನ್ ಜಾನಪದ ಕತೆ) – ಇವು ಮಾರ್ಪಳ್ಳಿಯವರ ಯಶಸ್ವಿ ಪ್ರಯೋಗಗಳು.

1979–80ರ ವೇಳೆಗೆ ಮಂಗಳೂರು ಆಕಾಶವಾಣಿ ನಾಟಕ ಕಲಾವಿದರನ್ನು

ಧ್ವನಿಪರೀಕ್ಷೆ ಮೂಲಕ ಆಯ್ಕೆ ಮಾಡತೊಡಗಿತು. ವಾರವೊಂದಕ್ಕೆ ಸುಮಾರು 90 ನಿಮಿಷಗಳಂತೆ ತಿಂಗಳಿಗೆ ಒಟ್ಟು ಸುಮಾರು ಆರು ತಾಸಿನ ಅವಧಿಯ ತುಳು ಕಾರ್ಯಕ್ರಮ ದಲ್ಲಿ ಕೆಲವೊಮ್ಮೆ ನಿಯಮಿತವಾಗಿ ತಿಂಗಳಿಗೊಂದು ನಾಟಕ ಪ್ರಸಾರಕ್ಕೆ ಅವಕಾಶ ಒದಗಿತು. ಕಾಲಮಿತಿಗನುಗುಣವಾಗಿ ತುಳುನಾಟಕ ಪ್ರಸಾರಕ್ಕೆ 20–23 ನಿಮಿಷಗಳ ಕಾಲಾವಧಿ. ಆರಂಭದಲ್ಲಿ ರಾಮಚಂದ್ರ ಮೆನನ್ ಬಳಿಕ ಶ್ರೀಮತಿ ಜಯಶ್ರೀಯವರೂ ತುಳುವಿಭಾಗಗಳ ಅಧಿಕಾರಿಗಳಾಗಿ ಸ್ಥಳೀಯ ಕಲಾವಿದರಿಗೆ ಸೂಕ್ತ ಅವಕಾಶಗಳನ್ನು ಒದಗಿಸಿದರು. ಅಮೃತ ಸೋಮೇಶ್ವರ, ಪಾಂಡೇಶ್ವರ, ಮೂಡುಬೆಳ್ಳೆ ಕ್ಯಾಥರೀನ್, ಬಾಲಕೃಷ್ಣ ಮುದ್ಯ, ಅಚ್ಯುತ ಕಲ್ಲಾಪು, ಕೆದಂಬಾಡಿ ಜತ್ತಪ್ಪ ರೈ–(ಅನುವಾದಿತ ಕೃತಿಗಳು), ಕೆ.ಜೆ. ಕೊಕ್ರಾಡಿ, ಶಿಮಂತೂರು ಚಂದ್ರಹಾಸ ಸುವರ್ಣ, ಶರತ್ ಕುಮಾರ್ ಮುಂತಾದ ನಾಟಕಕಾರರಿಂದ ಹಸ್ತಪ್ರತಿ ಆಹ್ವಾನಿಸಿ, ಅಂಗೀಕೃತ ನಾಟಕ ಕಲಾವಿದರ ಮೂಲಕ ಬಾನುಲಿ ನಾಟಕ ಪ್ರಸಾರದ ವ್ಯವಸ್ಥೆ – ತುಳುವಿಗೂ ಒದಗಿ ಬಂದದ್ದು 1980ರ ವೇಳೆಗೆ (ಬಾನುಲಿಯ ಕಾರ್ಯಕ್ರಮ ವಿಭಾಗದಲ್ಲಿ ಹೆಚ್ಚಾಗಿ ತುಳುವೇತರರೇ ಇದ್ದಾಗ ಹಸ್ತಪ್ರತಿಗಳ ಆಯ್ಕೆಗೆ ಅಮೃತ ಸೋಮೇಶ್ವರ, ಕೆ. ಲೀಲಾವತಿ, ಬಿಜೈ ಕೃಷ್ಣಪ್ಪ – ಮುಂತಾದವರ ನೆರವು ಪಡೆಯಲಾಗುತ್ತಿತ್ತು. ಮುಂದೆ ತುಳು ಬಲ್ಲ ಕೆಲವರೂ ನೇಮಕವಾಗಿ ಬಂದರು. ಜಯಶ್ರೀ, ಬೇಕಲ್, ಕೆ.ಆರ್.ರೈ, ಸಿ.ಎನ್. ರಾಮಚಂದ್ರ, ಮುದ್ದು ಮೂಡುಬೆಳ್ಳೆ, ವಸಂತ ಕುಮಾರ್ ಪೆರ್ಲ, ಕೆ. ಶ್ಯಾಂ ಭಟ್, ಶಾರದ – ಮುಂತಾದವರ ಮುತುವರ್ಜಿಯ ಫಲವಾಗಿ ತುಳು ಕಾರ್ಯಕ್ರಮ ಮುಖ್ಯವಾಗಿ ನಾಟಕ ನಿರ್ಮಾಣ ಹೆಚ್ಚಿತು.)



ಮಂಗಳೂರು ಆಕಾಶವಾಣಿಯ ಅತ್ಯಂತ ಪ್ರಸಿದ್ಧ ಹಾಸ್ಯ ಪ್ರಹಸನ 'ಕೆಂಚನ ಕುರ್ಲರಿ' ಸುಮಾರು ಹದಿನೈದು ವರ್ಷ ಕಾಲ ಪ್ರಸಾರವಾಗಿದ್ದು ಕೇಳುಗರ ಮನದಲ್ಲಿ ಹಚ್ಚ ಹಸುರಾಗಿದೆ. ಅದರ ಕರ್ತೃ ಹಾಗೂ ನಾಟಕಕಾರ **ಮಂಗಳೂರು ಆಕಾಶವಾಣಿಯಲ್ಲಿ ಅಳಿಯದ ತುಳುಧ್ವನಿಯಾಗಿ ದಾಖಲೆ ನಿರ್ಮಿಸಿ, 'ಕಾಡ ಬದ್ಕ್', 'ಚಂಪಾ' ಮುಂತಾದ ನಾಟಕ ರೂಪಕಗಳನ್ನೂ ನಿರ್ಮಾಣ ಮಾಡಿದ ಕೆ.ಆರ್. ರೈ (1953–2011)**

ಅಮೃತ ಸೋಮೇಶ್ವರ ವಿರಚಿತ 'ಮದನಗ', 'ಕಲ್ಕುಡ ಕಲ್ಲುರ್ಟಿ', 'ಗೋಂದೋಳು', 'ಪೆರಿಂಜಗುತ್ತು ದೇವು ಪೂಂಜೆ', 'ಪುತ್ತೂರ್ದ ಪುತ್ತೊಳಿ', ಕ್ಯಾಥರೀನ್ ರೊಡ್ರಿಗಸ್ ಅವರ ಕೇದಗ, ಬನ್ನಾಲ್, ಕಾಂತಾಬಾರೆ ಬೂದಬಾರೆ, ಮುದ್ದು ಮೂಡುಬೆಳ್ಳೆಯವರ 'ನಮ ಎಡ್ಡೆನಾ ಊರ್ದೈಡ್ಡೆ', ಮಿರ್ಲೋಕದ ಕುರ್ಲೆ', 'ಚೆನ್ನೆಗೊಬ್ಬು', 'ಸಂಸಾರ', 'ಪೊಣ್ಣಗೊಂಜಿ ಮದ್ಮೆ', 'ತಿರ್ಮಂತ್ರ', ಕೆ.ಜೆ. ಕೊಕ್ರಾಡಿಯವರ 'ಪಶ್ಚಾತ್ತಾಪ', ಕುದ್ಕಾಡಿ ವಿಶ್ವನಾಥ ರೈಯವರ 'ಸತ್ಯೊಮ್ಮ ದೆಯ್ಯಾರ್, ಅಚ್ಯುತ ಕಲ್ಲಾಪು ಅವರ 'ಬೋಡ ಈ ನಾಟಕ?' ಶಿವಾನಂದ ಕರ್ಕೇರರ 'ಎರುಮೈಂದೆ ಇತ್ಯಾದಿ 80–90ರ ನಡುವೆ ಪ್ರಸಾರವಾದ ನಾಟಕಗಳು.

1984ರಿಂದಲೂ ವಿಡಂಬನಾತ್ಮಕ ಹಾಸ್ಯ ಪ್ರಹಸನಗಳನ್ನು ರೇಡಿಯೋಗಾಗಿ ಬರೆದವರಲ್ಲಿ ಪ್ರಮುಖರಾದ ರಾಂ ಎಲ್ಲಂಗಳ ಅವರ 'ಕತೆಯಾಯಲ್ ಕಾವೇರಿ', 'ತಮ್ಮನ', 'ಜಾತ್ರೆ', 'ಬಿನ್ನೆರ್', 'ಒಂಜಿ ಪೊಣ್ಣನ ಮದ್ಮೆ', 'ವಾರ್ತೆ', 'ಮೀನಾ ಕಕ್ಕಿಯಲ್' –ಮುಂತಾದ ಸುಮಾರು 11 ಪ್ರಹಸನ, ಕಿರುನಾಟಕಗಳು ಪ್ರಸಾರಗೊಂಡಿವೆ. ಅವರ 'ಪರಬಗ್ ದಂಟೆದ ಬಲ' ಹಾಸ್ಯನಾಟಕ 2000ನ ಇಸವಿಯಲ್ಲಿ ಧಾರಾವಾಹಿಯಾಗಿ ಆರು ಕಂತುಗಳಲ್ಲಿ ಪ್ರಸಾರವಾಗಿ ಜನಮೆಚ್ಚಿಕೆ ಪಡೆದಿದೆ.

ವಿಜಯಕುಮಾರ್ ಕೊಡಿಯಾಲ್‌ಬೈಲ್‌ರ 'ತಿನಿಯರ್ಲಾ ಭಾಗ್ಯ ಬೋಡು', ಶಿವಾನಂದ ಕರ್ಕೇರಾರ 'ಕಾಲಚಕ್ರ', ಸುಮತಿ ಪಾಂಗಾಳರ 'ಮೋಕೆ', 'ತುಡರ್', 'ಕ್ಯಾಥರೀನ್ ರೊಡ್ರಿಗಸ್ ಅವರ 'ಪಂಥ', 'ತುಂಬೆ', ಕೃಷ್ಣಪ್ಪ ಉಪ್ಪೂರರ 'ಬಾಲೆಮಾನಿ', ವೇಣು ಮಿತ್ರ ಕಾಸರಗೋಡು ಅವರ 'ಗುತ್ತು', 'ನಂಬುಲೆ', ವಾಣಿ ಎಸ್. ಭಂಡಾರಿ ಅವರ 'ಕಲ್ಯಾಣಕ್ಕನ ಕಿತಾಪತಿ', ಕೆ.ಆರ್. ರೈಯವರ 'ಚಂಪಾ', 'ಅಮರೆರಾಯಿನ ಅಮರ್ ಬೊಳ್ಳಿಲು', ಅತ್ರಾಡಿ ಅಮೃತಾ ಶೆಟ್ಟಿಯವರ 'ಕೊಂಬುದ ಮದಿಮಾಯೆ' (ಕಥಾಸಂಗ್ರಹ : ಪ್ರಮೋದ ಕೆ. ಸುವರ್ಣ), 'ಕೋರಿ ತುಯಿ' ಮುಂತಾದ ನಾಟಕಗಳು ಪ್ರಸಾರದಲ್ಲಿ ಮಿಂಚಿವೆ.

ಈ ನಡುವೆ ಕೆದಂಬಾಡಿ ಜತ್ತಪ್ಪ ರೈಯವರ ಅನುವಾದಿತ ನಾಟಕ ರೂಪಗಳಾದ ಕಾಬೂಲಿವಾಲಾ, ಅಸೆನಿಯಾಗೊ ಕಾಂತಗೊ ಜೋಗಿ, ಐ.ಕೆ. ಬೊಳುವಾರರ 'ಚಂದಿರೆ



ಎಂಬತ್ತರ ದಶಕದಲ್ಲಿ ಮಂಗಳೂರು ಆಕಾಶವಾಣಿ ಏರ್ಪಡಿಸಿದ ಒಂದು ಹೊರಾಂಗಣ ನಾಟಕ ಪ್ರದರ್ಶನದಲ್ಲಿ ಪಾಲ್ಗೊಂಡ ನಟಿಯರು ವಿನಯಾ ಪ್ರಸಾದ್ ಮತ್ತು ಸರೋಜಿನಿ ಶೆಟ್ಟಿ

ಬೊಕ್ಕ ಮುಯ್ಯೆರ್ (87) – ಇವು ಮಕ್ಕಳ ಗೀತನಾಟಕಗಳಾಗಿ ಮೆಚ್ಚುಗೆ ಗಳಿಸಿದವು. ಕನರಾಡಿ ವಾದಿರಾಜ ಭಟ್ಟರ 'ಚೆನ್ನಕ್ಕ' ಮತ್ತಿತರ ಮಕ್ಕಳ ಕಿರುನಾಟಕಗಳೂ ಪ್ರಸಾರವಾಗಿವೆ.

'ದಾಮಾರ್ ಮಾರ್ಗೊಡು ಪಜೆ ಪಾಡಿ' – ಕೆ. ಮಹಾಲಿಂಗರ ಅಸಂಗತ ನಾಟಕ. (ನಿರ್ಮಾಣ ಎಂ.ಎಂ.) ಕರ್ಫ್ಯೂ ಹಿನ್ನೆಲೆಯ ನಿರ್ಜನ ನಗರದ ಬೀದಿಯಲ್ಲಿ ಸಾಮ್ರಾಜ್ಯ ಹೂಡಿದ ವಿಭಿನ್ನ ಹೆಸರಿನ ನಾಯಿಗಳ ಹಿಂಡೇ ಇಲ್ಲಿನ ಪಾತ್ರಧಾರಿಗಳು. ದೃಶ್ಯ ಮಾಧ್ಯಮದಲ್ಲಿ ರಂಜಿಸಬಹುದಾದ ಈ ಕೃತಿ ಶ್ರವ್ಯ ಮಾಧ್ಯಮಕ್ಕೆ ಒಂದು ನೂತನ ಪ್ರಯೋಗ. ಹೊಸ ಶತಮಾನದ ವೇಳೆಗೆ ಮುದ್ರಾಡಿಯ 'ನಮ ತುಳುವೆರ್' ತಂಡ, ತಾವು ರಂಗದಲ್ಲಿ ಅಭಿನಯಿಸಿ ಪ್ರಶಸ್ತಿ ಗಿಟ್ಟಿಸಿಕೊಂಡ 'ಅಸುದ್ದೊ' (ರಚನೆ : ಜನಾರ್ದನ ಕಣಕ್ಕೂರು, ನಿ: ಶೀನಾ ನಾಡೋಳಿ) ನಾಟಕವನ್ನು ಒಂದು ತಾಸಿನ ಅವಧಿಗಿಳಿಸಿ ಬಾನುಲಿಯಲ್ಲಿ ಪರಿಣಾಮಕಾರಿಯಾಗಿ ಪ್ರಸ್ತುತಪಡಿಸಿದರು (ಬಾನುಲಿ ಸಂಯೋಜನೆ : ಮುದ್ದು ಮೂಡುಬೆಳ್ಳೆ). ವಿಶೇಷ ಸಂದರ್ಭವೊಂದರಲ್ಲಿ ದೊರೆತ 60 ನಿಮಿಷ ಅವಧಿ ಪ್ರಸಾರಾವಕಾಶವೂ ಬಾನುಲಿಯಲ್ಲಿ ತುಳುನಾಟಕಗಳ ಮಟ್ಟಿಗೆ ಅಪರೂಪದ್ದೇ.

**2009ರ ಅಖಿಲ ಭಾರತ ಬಾನುಲಿ ಪ್ರಸಾರ ನಾಟಕ ನಿರ್ಮಾಣ ಸ್ಪರ್ಧೆಯಲ್ಲಿ 'ಮಂಗಳೂರುದ ಕ್ರಾಂತಿ' ನಾಟಕ ಪ್ರಥಮ ಬಹುಮಾನ ಗಳಿಸಿದ ಸಂದರ್ಭದಲ್ಲಿ ಸ್ಥಳೀಯ ಮಂಗಳೂರು ಆಕಾಶವಾಣಿಯಲ್ಲಿ ಜರಗಿದ ಸಮಾರಂಭದಲ್ಲಿ ನಾಟಕ ನಿರ್ದೇಶಕ ಮುದ್ದು ಮೂಡುಬೆಳ್ಳೆ ಹಾಗೂ ನಾಟಕದ ಮೂಲ ರಚನೆಕಾರ ಶ್ರೀ ಪ್ರಭಾಕರ ನೀರುಮಾರ್ಗ ಹಾಗೂ ಕಲಾವಿದರನ್ನು ಅಭಿನಂದಿಸಿದ ಸಂದರ್ಭ**

ಚಿತ್ರದಲ್ಲಿ (ಬಲದಿಂದ) : ಮಾಧವ ಸುವರ್ಣ, ರೋಹಿದಾಸ್ ಕದ್ರಿ, ಅಂದಿನ ಸಹಾಯಕ ನಿರ್ದೇಶಕರು ಆಂಜನಪ್ಪ, ತಾಂತ್ರಿಕ ವಿಭಾಗ ಮುಖ್ಯಸ್ಥರು, ಶಾರದಾ, ಕನ್ಸೆಪ್ಟಾ ಫೆರ್ನಾಂಡಿಸ್, ಪ್ರಭಾಕರ ನೀರುಮಾರ್ಗ, ಪಿ.ಎಸ್. ಸೂರ್ಯನಾರಾಯಣ ಭಟ್ ಮತ್ತು ಮುದ್ದು ಮೂಡುಬೆಳ್ಳೆ

1995ರ ವೇಳೆಗೆ ಮಂಗಳೂರು ಆಕಾಶವಾಣಿ ತುಳು ಸಾಹಿತ್ಯ ಅಕಾಡೆಮಿ ಸಹಯೋಗದಲ್ಲಿ ತುಳುನಾಟಕ ರಚನಾ ಕಮ್ಮಟವೊಂದನ್ನು ಏರ್ಪಡಿಸಿತು. ಅದರ ಫಲಶ್ರುತಿಯಾಗಿ – ಕ್ಯಾಥರೀನ್ ರೊಡ್ರಿಗಸ್‌ರ – 'ಕಾಂತಬಾರೆ ಬೂದಬಾರೆ', ಅದೇ ವಸ್ತುಗಳನ್ನೊಳಗೊಂಡ ಕಟಪಾಡಿ ಶಂಕರ ಪೂಜಾರಿಯವರ 'ಆಚು ಬಿಜಲಿನ ಅಮರ್ ಬಂಟೆರ್, ಸುಮತಿ ಪಾಂಗಾಳರ 'ತುಡರ್', ಕೆ. ಮಹಾಲಿಂಗರ 'ದಾಮಾರ್ ಮಾರ್ಗೊಡು ಪಜೆಪಾಡಿ' ಸಿದ್ದಕಟ್ಟೆ ಮಲ್ಲಿಕಾ ಶೆಟ್ಟಿಯವರ 'ಕನಪಗ', ಅತ್ರಾಡಿ ಅಮೃತಾ ಅವರ 'ಕೋರಿ ತುಯಿ' ಪ್ರಸಾರವಾಗಿ ಶ್ರೋತೃಗಳ ಮೆಚ್ಚುಗೆ ಪಡೆದವು. ಕ್ಯಾಥರಿನ್ ರೊಡ್ರಿಗಸ್ ಅವರು ತಮ್ಮ ಕಲಾವಾಹಿನಿ; ಪ್ರೀತಿ ಟ್ಯುಟೋರಿಯಲ್ಸ್ ಬಳಗದ ಕಾರ್ಯಕ್ರಮ ನೀಡುವಾಗಲೂ ಪ್ರತಿ ಬಾರಿ ಜಾನಪದ ಹಾಗೂ ಸಾಮಾಜಿಕ ಕಥಾವಸ್ತುವಿನ ತಲಾ ಸುಮಾರು 10–15 ನಿಮಿಷ ಅವಧಿಯ ಅವರ ಕಿರುನಾಟಕಗಳನ್ನೂ ಬಾನುಲಿಯಲ್ಲಿ ಪ್ರಸ್ತುತಪಡಿಸಿದ್ದಾರೆ. ಶಿವಾನಂದ ಕರ್ಕೇರರ 'ಗಾಂಧೆರ್ ಬತ್ತೆರ್', ಪ್ರಭಾಕರ ನೀರುಮಾರ್ಗರ 'ಮಂಗಳೂರ್ದ ಕ್ರಾಂತಿ' (ನಿರ್ಮಾಣ ಮುದ್ದು ಮೂಡುಬೆಳ್ಳೆ) ಇವೆಲ್ಲ ಮನ ಸೆಳೆದಿವೆ. ಹಾಗೆಯೇ 'ಕುರಲ್ ಇಷ್ಟೆರ್' ಕುಡ್ಲ, ಮತ್ತಿತರ ಹಲವು ಯುವ ಸಂಘಟನೆಗಳೂ, ರೂಪಕಗಳನ್ನು ಪ್ರಸ್ತುತಪಡಿಸಿದ್ದಾರೆ.

**1974ರಿಂದ ಮುಂಬಯಿ, ಬೆಂಗಳೂರು ಬಾನುಲಿ ಕೇಂದ್ರಗಳಿಂದ ಕಾರ್ಯಕ್ರಮ ನೀಡಿ ಬಳಿಕ ಮಂಗಳೂರು ಆಕಾಶವಾಣಿ ಪ್ರಾರಂಭವಾಗಿ 1977ರಿಂದ ನಾಟಕ, ರೂಪಕ ಇತ್ಯಾದಿ ಕಾರ್ಯಕ್ರಮ; 1985ರಿಂದ ಪ್ರಸಾರಕನ ಇತರ ಹೊಣೆಗಳ ಜೊತೆಗೆ 25 ವರ್ಷ ಕಾಲ ತುಳು ವಿಭಾಗದಲ್ಲಿ ಕೆಲಸ ಮಾಡಿ ನಾಟಕ ನಿರ್ದೇಶನ, ರೂಪಕ ನಿರ್ಮಾಣಗಳಿಗೆ ರಾಜ್ಯ, ರಾಷ್ಟ್ರ ಪ್ರಶಸ್ತಿ ಗಳಿಸಿದ ಶ್ರೀ ಮುದ್ದು ಮೂಡುಬೆಳ್ಳೆ ಪ್ರಶಸ್ತಿ ಫಲಕದೊಂದಿಗೆ**

ಅಮೃತ ಸೋಮೇಶ್ವರರ 'ಗೋಂದೋಳು' (2 ಭಾಗಗಳಲ್ಲಿ ಪ್ರಸಾರ ಮತ್ತು ಇದರ ಕನ್ನಡ ಅನುವಾದವೂ ಪ್ರಸಾರ ಗೊಂಡಿದೆ.) ಬಾಮಕುಮಾರೆ, ದೇವುಪೂಂಜೆ, ಮುದ್ದು ಮೂಡುಬೆಳ್ಳೆಯವರ 'ಪಣ್‌ಪದ, ಪಾಡುರಲ್', ಮುಲ್ಕೆದ ಅಮರ್ ಬೀರೆರ್, ಪದಪಾರ್ದನ ಪಣ್ಪಿನಾ, ತುಳುವ ಮಣ್ಣ್‌ದ ತೇರ್, ವಸಂತ ವಿ. ಅಮೀನರ 'ಬೀರ ಸಿರಿತ ಬಲಿಪ ಕಿನ್ನಿ', ಅಶೋಕ್ ಆಳ್ವರ 'ಬೀರು ಕಲ್ಕುಡೆ, ಸತ್ಯದೇವತೆ ವಾಮನ ನಂದಾವರರ 'ಬೈದೆರ್ಲೆ

ಗರಡಿ ಕೋಲ', ರೇವತಿ ನೀರ್ಕಜೆ ಯವರ ಕನ್ಯೊದ ಕಾರ್ನಿಗೆ' ಮುಂತಾದ ಜಾನಪದ ಕಥಾವಸ್ತುವುಳ್ಳ ರೂಪಕಗಳೂ ಬಾನುಲಿಯಲ್ಲಿ ಪ್ರಸಾರಗೊಂಡಿವೆ.

2009ರಲ್ಲಿ ಮಂಗಳೂರು ಆಕಾಶವಾಣಿ ಪ್ರಸಾರ ಮಾಡಿದ ನಾಟಕ 'ಮಂಗಳೂರ್ದ ಕ್ರಾಂತಿ' ಅತ್ಯುತ್ತಮ ನಿರ್ಮಾಣ ನಿರ್ದೇಶನಕ್ಕಾಗಿ ರಾಜ್ಯಮಟ್ಟದ ಬಾನುಲಿ ಸ್ಪರ್ಧೆಯಲ್ಲಿ ಪ್ರಶಸ್ತಿ ಗಳಿಸಿದೆ. ಇದರ ಮೂಲ ರಚನೆ ಪ್ರಭಾಕರ ನೀರುಮಾರ್ಗ. ಬಾನುಲಿ ರೂಪಾಂತರ, 3 ಪಾತ್ರಗಳ ನಿರ್ವಹಣೆ ಹಾಗೂ ನಿರ್ಮಾಣ ಮುದ್ದು ಮೂಡುಬೆಳ್ಳೆ. 2013ರಲ್ಲಿ ಮುದ್ದು ಮೂಡುಬೆಳ್ಳೆ ರಚಿಸಿ ನಿರೂಪಿಸಿ, ನಿರ್ಮಾಣ ಮಾಡಿದ ತುಳು, ಕನ್ನಡ, ಇಂಗ್ಲಿಷ್, ಹಿಂದಿ ಭಾಷಾ ವಿವರಣೆಯ ಸಾಕ್ಷ್ಯರೂಪಕ 'ಪದಪಾರ್ದನ ಪಣ್ಪನಾ' ದೆಹಲಿಗೆ ಕಳುಹಿಸಲ್ಪಟ್ಟು ಆಕಾಶವಾಣಿ ರಾಷ್ಟ್ರೀಯ ಪ್ರಶಸ್ತಿ ಪಡೆಯಿತು (2013).

ರೇಡಿಯೋದಲ್ಲಿ ಸುಮಾರಾಗಿ 20–23 ನಿಮಿಷಗಳ ಅವಧಿಯ ಪುಟ್ಟ ಕೃತಿಗಳಿಗೆ ಪ್ರಸಾರಾವಕಾಶ. ಧ್ವನಿ ಮಾಧ್ಯಮದಲ್ಲಿ ಸತ್ವಯುತ ಪರಿಣಾಮಕಾರಿ ನಾಟಕಗಳಿಗೆ ಅವಕಾಶಗಳನ್ನು ತುಳುವರು ಹೆಚ್ಚಿಸಿಕೊಳ್ಳಬೇಕಿದೆ. ಇಲ್ಲಿ ಸಂವಹನ ಯೋಗ್ಯ ಶುದ್ಧವಾದ ಭಾಷೆ, ಸರಳ ಸಂಭಾಷಣೆ, 4–5 ಪಾತ್ರಗಳ ಕಿರುನಾಟಕಗಳಿಗೆ ಅವಕಾಶ. ಪ್ರಧಾನವಾಗಿ ನಾಟಕ ನಿರ್ಮಾಪಕ / ನಿರ್ದೇಶಕರ ಶಬ್ದ ಮತ್ತು ಮೌನ, ಸೂಕ್ತ ಶಬ್ದ ಪರಿಣಾಮ (ಸೌಂಡ್ ಇಫೆಕ್ಟ್) ಮತ್ತು ಮುಖ್ಯವಾಗಿ ಕಲಾವಿದರ ಕಂಠ – ಈ ಮಾಧ್ಯಮದಲ್ಲಿ ಪ್ರಧಾನವಾಗುತ್ತದೆ. ದೃಶ್ಯ ಮಾಧ್ಯಮಕ್ಕೆಂದೇ ಹೆಚ್ಚಾಗಿ ಬರೆದ ನಾಟಕಗಳಾದರೆ ಬಾನುಲಿಯ ಶ್ರವ್ಯ ಮಾಧ್ಯಮಕ್ಕಾಗುವಾಗ ಸಾಕಷ್ಟು ಬದಲಾವಣೆ ಅನಿವಾರ್ಯ. ಇಲ್ಲಿ ರೇಡಿಯೋ

**ಪ್ರಸಾರ ಭಾರತಿಯ ಮಂಗಳೂರು ಆಕಾಶವಾಣಿ ಏರ್ಪಡಿಸಿದ ತುಳು ಜಾನಪದ ನೃತ್ಯರೂಪಕ. ರಂಗಪ್ರಯೋಗದಲ್ಲಿ ಬಂಗ್ಲೆಗುಡ್ಡೆ ಸಣ್ಣಕ್ಕ ಮತ್ತು ಇತರ ಕಲಾವಿದರೆಯರು ಹಾಗೂ ಆಕಾಶವಾಣಿಯ ದೇವು ಹನೇಹಳ್ಳಿ ಮತ್ತು ಮುದ್ದು ಮೂಡುಬೆಳ್ಳೆ – 2010**

ನಾಟಕ ನಿರ್ಮಾಪಕನ ಹೊಣೆಯೂ ಮುಖ್ಯವಾಗುತ್ತದೆ.

ರೇಡಿಯೋ ನಾಟಕವೆಂಬುದು ದೃಶ್ಯಮಾಧ್ಯಮಕ್ಕಿಂತ ಭಿನ್ನವಾದ ನುಡಿಚಿತ್ರ. ಭೌತಿಕ ಹಾವಭಾವ ರೂಪುರೇಷೆಗಳು ಇಲ್ಲಿಗೆ ಅಪ್ರಸ್ತುತ. ರಂಗನಾಟಕಕ್ಕಿಂತ ಆಕಾಶವಾಣಿ ನಾಟಕಕ್ಕೆ ಕುಸುರಿ ಕೆಲಸ ಹೆಚ್ಚಿರುತ್ತದೆ. ಅದನ್ನು ಗಮನದಲ್ಲಿಟ್ಟುಕೊಂಡೇ, ಹೆಸರಾಂತ ರೇಡಿಯೋ ನಾಟಕ ನಿರ್ದೇಶಕರಾದ ಡಾ. ಹೆಚ್.ಕೆ. ರಂಗನಾಥರು, 'ರಂಗನಾಟಕ ಗೊಮ್ಮಟ ವಿಗ್ರಹವಾದರೆ ಪ್ರಸಾರ ನಾಟಕ ಬೇಲೂರು ಶಿಲಾಬಾಲಿಕೆಯಂತೆ' ಎಂದಿದ್ದಾರೆ.

ರೇಡಿಯೋ ನಾಟಕ ರಚನಾಕಾರರಿಗೆ ಶಬ್ದ ವಿಶೇಷಗಳ ಕುರಿತು ಹಾಗೂ ತಾವು ಬಳಸುವ ಭಾಷೆ ಮತ್ತು ವಾಕ್ಯ ರಚನೆಯ ಬಗ್ಗೆ, ದೇಶ ಕಾಲ (ಸಮಯ ಸಂದರ್ಭ)ಗಳ ಬಗ್ಗೆ ವಿಶೇಷ ಗಮನ, ತಿಳುವಳಿಕೆ ಇರಬೇಕಾಗುತ್ತದೆ.

ಕೇವಲ ಧ್ವನಿ ಮಾಧ್ಯಮವಾದ ರೇಡಿಯೋ ನಾಟಕದಲ್ಲಿ ಸ್ಥಿತಿ, ಕ್ರಿಯೆಯನ್ನು ತೋರಿಸುವ ಅವಕಾಶ ಕಡಿಮೆ. ಕಲಾವಿದರ ಕಂಠ ಮುಖ್ಯ. ಮಾತು, ಮೌನ (ಪಾಸ್–Pause)ಗಳ ನಿರ್ದಿಷ್ಟತೆಯನ್ನು ಲಕ್ಷಿಸುವ ನಿರ್ಮಾಪಕ – ನಿರ್ದೇಶಕನಿಗೆ (ನಿಲಯದವರು) ನಾಟಕ ರಚನಾಕಾರನಷ್ಟೇ ಬಾನುಲಿಯಲ್ಲಿ ಜವಾಬ್ದಾರಿ. ಆಕರ್ಷಕ ಸಂಭಾಷಣೆ, ಸನ್ನಿವೇಶ ನಿರ್ಮಾಣ, ತಾತ್ವಿಕ ಚಿಂತನೆ, ಜವಾಬ್ದಾರಿಯುತ ವೈಚಾರಿಕ ನಿಲುಮೆಯಿಂದ ರೇಡಿಯೋ ನಾಟಕ ರಚನೆಗೊಳ್ಳಬೇಕಾಗುತ್ತದೆ. ಹಾಸ್ಯ ಪ್ರಹಸನವಾದರೆ ಪರಿಶುದ್ಧವಾದ ಹಾಸ್ಯ, ವಿಡಂಬನೆ ಅಪೇಕ್ಷಣೀಯ. ಇಷ್ಟಿದ್ದಲ್ಲಿ ಧ್ವನಿಮಾಧ್ಯಮದಲ್ಲೇ ರೇಡಿಯೋ ನಾಟಕಗಳು ಬೀರುವ ಪರಿಣಾಮ ಅಷ್ಟಿಷ್ಟಲ್ಲ. ಯಾವುದೇ ಭಾಷೆಗೂ ಅನ್ವಯಿಸುವ ಈ ಮಾತೇ ರೇಡಿಯೋದ ತುಳುನಾಟಕಗಳಿಗೂ ಅನ್ವಯಿಸುತ್ತದೆ. ಇಂಥ ಎಲ್ಲ ಲಕ್ಷಣಗಳಿಂದ ಕೂಡಿದ ಹಲವು ತುಳು ನಾಟಕಗಳು ರೇಡಿಯೋ ಕೇಂದ್ರದಿಂದ ಪ್ರಸಾರವಾಗಿ ಅಪಾರ ಸಂಖ್ಯೆಯ ಶ್ರೋತೃಗಳ ಮೆಚ್ಚುಗೆಗೆ ಪಾತ್ರವಾಗಿರುವುದೂ ಹೆಮ್ಮೆಯ ವಿಷಯ.

ನಿಲಯದ ಈಗಿನ (2017ರಿಂದ) ಸಹಾಯಕ ನಿರ್ದೇಶಕಿ ಉಷಾಲತಾ ಸರಪಾಡಿ ಅವರ ಮೇಲ್ವಿಚಾರಣೆಯಲ್ಲಿ ಇತ್ತೀಚೆಗೆ ತುಳು ವಿಭಾಗವನ್ನು ನಡೆಸುತ್ತಿರುವ ಕಾರ್ಯಕ್ರಮ ನಿರ್ವಾಹಕ ಡಾ. ಸದಾನಂದ ಪೆರ್ಲ ಅವರ 'ಗಾಂಪಣ್ಣನ ತಿರ್ಗಾಟೊ' ಎಂಬ ಕೌಟುಂಬಿಕ ಸರಣಿಯಲ್ಲಿ ಹಾಸ್ಯ ಪ್ರಹಸನಗಳನ್ನು ಪ್ರತೀ ತಿಂಗಳೂ ನಡೆಸುತ್ತಿದ್ದು ಇದು ನೂರರ ಕಂತನ್ನು ಕ್ರಮಿಸಿದೆ. ಇದಕ್ಕೆ ಡಾ. ಗಣೇಶ್ ಅಮೀನ್ ಸಂಕಮಾರ್, ಶ್ರೀ ಭಾಸ್ಕರ ರೈ ಕುಕ್ಕುವಳ್ಳಿ, ಶ್ರೀ ದಯಾನಂದ ಕತ್ತಲ್‌ಸಾರ್ ಮುಂತಾದವರು ಸ್ಕ್ರಿಪ್ಟ್ ಬರೆದು ಕೊಡುತ್ತಿದ್ದಾರೆ. ಅಲ್ಲದೆ ಪ್ರತೀ ತಿಂಗಳ 'ಚಾವಡಿ ಮದಿಪು', 'ಸ್ವರ ಮಂಟಮೆ' ಮುಂತಾದ ಕಾರ್ಯಕ್ರಮಗಳಲ್ಲಿ ಕೆಲವೊಮ್ಮೆ ತುಳು ರಂಗಭೂಮಿಯ ರಂಗಕರ್ಮಿಗಳ ಅನುಭವಕಥನ, ಸಾಧನೆಗಳನ್ನು ಪರಿಚಯಿಸಲಾಗುತ್ತಿದೆ.

* * *

# ತುಳುನಾಟಕ ರಂಗಕ್ಕೆ ಅನ್ಯ ಮಾತೃಭಾಷಿಯರ ಕೊಡುಗೆ

## ಅನ್ಯ ಭಾಷಾ ನಾಟಕಕಾರರು

ಯು.ಎಂ. ಮ್ಯೊದಿನಬ್ಬ, ಬಿ.ಎಸ್. ರಾವ್, ಪಿ.ಎಸ್. ರಾವ್, ಚೆನ್ನಾ ಕಾಸರಗೋಡು, ರಿಚರ್ಡ್ ಕ್ಯಾಸ್ತಲಿನ್, ಎ.ಕೆ.ವಿ. ಬೆಂಡೆಲ್, ಎಡ್ವರ್ಡ್ ಕ್ವಾಡ್ರಸ್, ಪರ್ಸಿ ಉರ್ವ, ಐ.ಕೆ. ಬೊಳುವಾರು, ಪ್ರದೀಪ್ ಕಾಸರಗೋಡು, ಸುಕುಮಾರ ಕಣ್ಣನ್, ವಾಸು ಬಾಯಾರ್ ಮುಂತಾದ ಅನೇಕರು ತುಳುನಾಡಿನ ತುಳುವರಾಗಿ ತುಳುನಾಟಕ ಕ್ಷೇತ್ರಕ್ಕೆ ವಿವಿಧ ರೀತಿಯಲ್ಲಿ ಮಹತ್ವದ ಕೊಡುಗೆ ನೀಡಿದ್ದಾರೆ.

ತುಳು ಸಾಹಿತಿ ಅಮೃತ ಸೋಮೇಶ್ವರರ ಹೆಸರನ್ನು ಈ ಪಟ್ಟಿಯಲ್ಲಿರುವಾಗ ಹಲವರಿಗೆ ಅಚ್ಚರಿಯಾದೀತು. ಶ್ರೀ ಅಮೃತರ ಮನೆಮಾತು ಮೋಯ ಮಲೆಯಾಳ. ಹಾಗಿದ್ದೂ ಅವರು ಹಿರಿದಾದ ಕೊಡುಗೆ ನೀಡಿದ್ದು ತುಳು, ಕನ್ನಡಕ್ಕೆ. ಅವರು ಗೋಂದೊಳು (80), ರಾಯ ರಾವುತೆ (82), ಪುತ್ತೂರ್ದ ಪುತ್ತೊಳಿ (94), ತುಳುನಾಡ ಕಲ್ಕುಡೆ (89), ಮುಂತಾದ ನಾಟಕಗಳನ್ನು ಅಲ್ಲದೆ ಜೋಕುಮಾರಸ್ವಾಮಿ (ಅನುವಾದ), ಮದನಗ, ಪೆರಿಂಜಗುತ್ತು ದೇವಪೂಜೆ, ಕೋಟಿಚೆನ್ನಯ (ರೇಡಿಯೋ ರೂಪಕಗಳು). ಎಳುವೆರ್ ದೈಯ್ಯಾರ್ (89), ತುಳುವಾಲ ಬಲಿಯೇಂದ್ರೆ (90), 'ಸತ್ಯನಾಪುರತ ಸಿರಿ' (2000) – ನೃತ್ಯರೂಪಕ ಇತ್ಯಾದಿಗಳನ್ನು ರಚಿಸಿದವರು.

ಮಂಗಳೂರಿನ ಎಂ.ಎಸ್. ಇಬ್ರಾಹಿಂ (1932) ರಂಗನಟನಾಗಿದ್ದ ಅಜ್ಜ ಅಕ್ಬರ್ ಬಾಷಾ ಸಾಹೇಬ್ ಹಾಗೂ ಗುರು ದೂಮಪ್ಪ ಮಾಸ್ತರರ ಪ್ರೋತ್ಸಾಹದಿಂದ, ಹಾಸ್ಯನಟನಾಗಿ ತುಳು ರಂಗಭೂಮಿಗೆ ಕಾಲಿಟ್ಟರು. 'ಗ್ಲಾಸ್ ಇನ್ಸ್‌ಪೆಕ್ಟರ್' ಇವರ ಪ್ರಥಮ ತುಳುನಾಟಕ. ಪೊಣ್ಣೇ ಸಮಾಜದ ಕಣ್ಣ್, ಮೋಕೆದ ಪೊದು, ನಂಜಿದ ನಾಲಾಯಿ, ಒಂಜಿ ಪೊಣ್ಣು ಆಜಿ ಕಣ್ಣ್ – ಹೀಗೆ ಮೂರು ನಾಲ್ಕು ಮುದ್ರಣ ಕಂಡ ನಾಟಕಗಳು ಸೇರಿದಂತೆ ನೂರಕ್ಕೂ ಮಿಕ್ಕ ತುಳುನಾಟಕ ರಚಿಸಿ, ನಿರ್ದೇಶಿಸಿ ರಂಗ ಪ್ರಯೋಗ ನೀಡಿದ ಎಂ.ಎಸ್. ಇಬ್ರಾಹಿಂ ಬಹುಭಾಷಾ ನಾಟಕಕಾರರು.

## ಡಾ। ರಿಚಾರ್ಡ್ ಕಾಸ್ತಲಿನೊ



ಪ್ರಥಮ ರಾಷ್ಟ್ರಪ್ರಶಸ್ತಿ ಪುರಸ್ಕೃತ 'ಬಂಗಾರ್ ಪಟ್ಲೇರ್' (1993) ಸಿನೇಮಾ ಖ್ಯಾತಿಯ ನಿರ್ಮಾಪಕ ನಿರ್ದೇಶಕ ಡಾ. ರಿಚರ್ಡ್ ಕ್ಯಾಸ್ಟಲಿನೋ – ನಾಟಕಕಾರರಾಗಿ, ನಟ, ನಿರ್ದೇಶಕರಾಗಿ ಕಲಾವಿದರ ಸಂಘಟಕರಾಗಿ ತನ್ನ 'ಅರುಣ್–ಕಿರಣ್ ಪ್ರೊಡಕ್ಷನ್ಸ್ ಎಂಬ ಸಂಘಟನೆಯ ಮೂಲಕ ಪುರಭವನದಲ್ಲಿ ತುಳುನಾಟಕ ಸ್ಪರ್ಧೆ, ಸಪ್ತಾಹ ಏರ್ಪಡಿಸುತ್ತಿದ್ದರು. ತುಳು ರಂಗಭೂಮಿಗೆ ತಮ್ಮದೇ ವಿಶಿಷ್ಟ ಸೇವೆ ಸಲ್ಲಿಸಿದವರು.

ಮಂಗಳೂರಿನಲ್ಲಿ 1976ರಲ್ಲಿ 'ಅರುಣ್ ಕಿರಣ್' ನಾಟಕ ಸಂಸ್ಥೆಯನ್ನು ಸ್ಥಾಪಿಸಿದರು. ಅದರ ಮೂಲಕ ತಮ್ಮ ಲಕ್ಷ್ಮಣರ 'ಸತ್ಯ ಮುನೀಂಡಾ?' ನಾಟಕದ ಅದ್ದೂರಿ ಪ್ರದರ್ಶನವನ್ನು ಮಂಗಳೂರು ಪುರಭವನದಲ್ಲಿ ಏರ್ಪಡಿಸಿ ಗಮನ ಸೆಳೆದರು. ಮುಂದೆ ಅವಿಭಜಿತ ಜಿಲ್ಲೆಯ ಅನೇಕ ಕಡೆ ವಿವಿಧ ನಾಟಕಕಾರರ ಯಶಸ್ವಿ ನಾಟಕ ಪ್ರದರ್ಶನ, ನಾಟಕ ಸಪ್ತಾಹ, ಸಂಗೀತ ಸಂಜೆಗಳನ್ನು ಏರ್ಪಡಿಸಿದರು.

1980ರಲ್ಲಿ 'ದಕ್ಷಿಣ ಕನ್ನಡ ಕಲಾವಿದರ ಸಂಘ'ವನ್ನು ಆರಂಭಿಸಿದರು. ನಾಟಕ ಕಲಾವಿದರ ಶ್ರೇಯೋಭಿವೃದ್ಧಿ ಯೋಜನೆಗಳನ್ನು ಕೈಗೊಂಡರು. ಮೂರು ದಿನಗಳ ದಕ್ಷಿಣ ಭಾರತ ಮಟ್ಟದ ಕಲೋತ್ಸವದಲ್ಲಿ ಸಾಹಿತಿ ಕಲಾವಿದರ ಸಮಾವೇಶ, ರಂಗಭೂಮಿ ವಿಚಾರ ಸಂಕಿರಣ ನಡೆಸಿ ಅವಿಸ್ಮರಣೀಯ ಸಾಧನೆ ಮಾಡಿದರು. ಮುಂದೆ ಹಾಲ್‌ವುಡ್ ಫಿಲ್ಮ್ಸ್ (1978) ಹಾಗೂ 'ರಾಜಲಕ್ಷ್ಮಿ ಫಿಲಂಸ್' (1990) ಲಾಂಛನಗಳಲ್ಲಿ ತುಳು ಕೊಂಕಣಿ ಸಿನಿಮಾಗಳನ್ನು ನಿರ್ಮಾಣಮಾಡಿದರು. 2013ರಲ್ಲಿ ಇವರು ತುಳು ಅಕಾಡೆಮಿಯ ಗೌರವ ಪ್ರಶಸ್ತಿಗೆ ಭಾಜನರಾದರು.

## ಚಿನ್ನಾ ಕಾಸರಗೋಡು

ಪ್ರಸಿದ್ಧ ರಂಗನಟ, ಚಲನಚಿತ್ರ ಕಲಾವಿದ ಚಿನ್ನಾ ಕಾಸರಗೋಡು ಕೊಂಕಣಿಗರು ರಾಮಚಂದರ್ ಬೈಕಂಪಾಡಿಯವರ 'ನಿನ್ನ ಮೋಕೆದಾ?' ಸ್ಮರಣೀಯ ರಂಗಪ್ರದರ್ಶನದ ನಿರ್ದೇಶಕರಲ್ಲದೆ ತುಳು ರಂಗಭೂಮಿಯೊಂದಿಗೂ ಅವಿನಾಭಾವ ಸಂಬಂಧ ಹೊಂದಿರುವವರು.



ಮಾತೃಭಾಷೆ ಕೊಂಕಣಿಯಾದರೂ ತುಳುವಿನ ಅಪ್ಪಟ ಅಭಿಮಾನಿ. ತೊಂಭತ್ತರ ದಶಕದಲ್ಲಿ ರಾಮಚಂದರ್ ಬೈಕಂಪಾಡಿಯವರ 'ನಿನ್ನ ಮೋಕೆದಾ' ನಾಟಕದ (ಪುರಭವನ) ನಿರ್ದೇಶಕರು. ಕನ್ನಡ, ತುಳು ಹಾಗೂ

**ಮಂಗಳೂರು ಪುರಭವನದಲ್ಲಿ ಪ್ರದರ್ಶನಗೊಂಡ ನಾಟಕ 'ನಿನ್ನ ಮೋಕೆದಾ'. ರಚನೆ : ರಾಮಚಂದರ್ ಬೈಕಂಪಾಡಿ ನಿರ್ದೇಶನ : ಚಿನ್ನಾ ಕಾಸರಗೋಡು. ಈ ನಾಟಕ ಸುಮಾರು ಮೂರು ದಶಕಗಳ ಬಳಿಕ ಈ ಬಾರಿ 2019ರಲ್ಲಿ ಬೈಕಂಪಾಡಿಯಲ್ಲಿ ಮತ್ತೆ ಪ್ರದರ್ಶನಗೊಂಡಿತು.**

ಕೊಂಕಣಿ ರಂಗಭೂಮಿ ಮತ್ತು ಚಲನಚಿತ್ರರಂಗದ ಪ್ರತಿಭಾಶಾಲಿ ನಟ, ನಿರ್ದೇಶಕ, ಸಂಘಟಕರು. 'ಯಕ್ಷತೇರು', 'ಲಾರಿ ನಾಟಕ ತಂಡ' ಮುಂತಾಗಿ ವಿನೂತನ ದಾಖಲೆಗಳನ್ನು ಮಾಡಿದವರು. ಮಾತ್ರವಲ್ಲ ಕರ್ನಾಟಕ ನಾಟಕ ಅಕಾಡೆಮಿಯಲ್ಲಿ ಅವರಿದ್ದು, ಬೆಂಗಳೂರಿನಲ್ಲಿ ಅವರ ದಟ್ಟ ಪ್ರಭಾವಗಳಿಂದಾಗಿ ತುಳು ನಾಟಕ ರಂಗದ ಹಿರಿಯ ತಲೆಮಾರಿನ ಮಚ್ಚೇಂದ್ರನಾಥ ಪಾಂಡೇಶ್ವರ, ಡಾ. ಪಿ.ಎಸ್. ದಂಡೆಕೇರಿ, ವಿ.ಜಿ. ಪಾಲ್ ಮುಂತಾದವರಿಗೆ ರಾಜ್ಯ ನಾಟಕ ಅಕಾಡೆಮಿ ಗೌರವ ಪ್ರಶಸ್ತಿ ದೊರೆಯುವಂತಾಯಿತು.

**ಜಗನ್ ಪವಾರ್**



ಎಂಬತ್ತರ ದಶಕದಲ್ಲಿ ಸಮುದಾಯ ರಂಗ ಚಳುವಳಿಯು ಕ್ರಿಯಾಶೀಲವಾದಾಗ ಕರಾವಳಿ ಭಾಗದ ಅಂದಿನ ಹೊಸ ತಲೆಮಾರಿನ ಹಲವರು ಜನಜಾಗೃತಿಗಾಗಿ ತೊಡಗಿಕೊಂಡರು. ಅಂಥವರಲ್ಲೊಬ್ಬ ಮೋಹನಚಂದ್ರ. ಈ ಮೋಹನಚಂದ್ರರ ಓರ್ವ ಶಿಷ್ಯ ಮರಾಠಿ ಮನೆ ಮಾತಿನ ಜಗನ್ ಪವಾರ್ ಬೇಕಲ್. ನಟ, ನಿರ್ದೇಶಕ, ರಂಗಸಂಗೀತ, ನೃತ್ಯ ಪರಿಣತಿ ಗಳಿಸಿಕೊಂಡ ಜಗನ್ ಪವಾರ್ – ತೊಂಭತ್ತರ ದಶಕದಲ್ಲಿ 'ಸಂಕೇತ' ತಂಡವನ್ನು ರೂಪಿಸಿದರು. ಮಾತೃಭಾಷೆ ಮರಾಠಿ ಆಗಿದ್ದೂ ತನ್ನ 'ಸಂಕೇತ ಕಲಾವಿದರು' ತಂಡದ ಮೂಲಕ ತುಳು ನಾಟಕವನ್ನೂ ಆಡಿದವರು. 'ಅಣ್ಣು ಬೈದೆನಾ?', 'ಏರ್ ತೂಯಿನಿ?', 'ದನಿ ಇಜ್ಜೆರಾ' – ಇವು ಪವಾರರ ಪವರ್‌ಫುಲ್ ತುಳು ನಾಟಕಗಳು. ವಿಶೇಷವಾಗಿ

ಬೀದಿನಾಟಕಗಳಲ್ಲಿ ತೊಡಗಿ, ಶಾಲಾ ಕಾಲೇಜುಗಳಿಗೆ ರಂಗತರಬೇತಿ ನೀಡುವುದರ ಮೂಲಕ ಯುವಪೀಳಿಗೆಗೆ ಸ್ಫೂರ್ತಿ ತುಂಬುತ್ತಿರುವರು. ಕನ್ನಡದಂತೆಯೇ ತುಳು ರಂಗಭೂಮಿಯನ್ನೂ ಪ್ರಭಾವಿಸಿದರು. ಇತ್ತೀಚೆಗೆ (2018) ತುಳು ಅಕಾಡೆಮಿಯು ಮಂಗಳೂರು ಪುರಭವನದಲ್ಲಿ ಏರ್ಪಡಿಸಿದ್ದ ತುಳು ನಾಟಕೋತ್ಸವದಲ್ಲಿ ಹಳೆ ತಲೆಮಾರಿನಲ್ಲಿ ದಿ। ಯು. ಮಚ್ಚೇಂದ್ರನಾಥ್ ನಿರ್ದೇಶಿಸಿದ್ದ ಗೋಪಾಲಕೃಷ್ಣರ 'ಲಚ್ಚು' (ಲಚ್ಚುನ ಕೊರಗೆ) ನಾಟಕವನ್ನು ನಿರ್ದೇಶಿಸಿ 'ಸಂಕೇತ ಕಲಾವಿದರು' ತಂಡದ ಮೂಲಕ ಪ್ರಯೋಗಿಸಿದ್ದಾರೆ.

ಕಟಪಾಡಿಯ ಕ್ಯಾಥರಿನ್ ರೊಡ್ರಿಗಸ್ ಕೊಂಕಣಿ ಮಾತೃಭಾಷೆಯ ನಾಟಕಕರ್ತೆ. ಕನ್ನಡ ಮಾತೃಭಾಷೆಯವರಾದ ಕೆ. ಮಹಾಲಿಂಗ, ತನ್ನ ತುಳು ಕಾದಂಬರಿಗೆ ಹೆಸರಾದಂತೆ 'ಕೊಂಬುದ ಮಾನಿಲು', (ತನ್ನದೇ ಕನ್ನಡ ನಾಟಕ 'ಕೊಂಬಿನವರು'–ಅನುವಾದ) ತುಳು ರಂಗನಾಟಕ ರಚಿಸಿ ಹೊಸ ತಲೆಮಾರಿನ ರಂಗಪ್ರತಿಭೆ ಪ್ರದರ್ಶಿಸಿದವರು. 'ದಾಮಾರ್ ಮಾರ್ಗೊಡು ಪಜೆಪಾಡಿ' ಇವರ ರೇಡಿಯೋ ಪ್ರಸಾರಿತ ಗಮನಾರ್ಹ ಅಸಂಗತ ನಾಟಕ. 'ಅಭಿವ್ಯಕ್ತ' ತಂಡದ ಕಾಲದಿಂದಲೂ ತುಳು ರಂಗಭೂಮಿ ಕಲಾವಿದರಾಗಿ ಬೆಳೆದ ಗೋಪಿನಾಥ ಭಟ್ ಅಲ್ಲದೆ ಮುರಳೀಧರ ಕಾಮತ್ ಮುಂತಾದವರ ಕಲಾಸೇವೆ ಸ್ಮರಣೀಯ.

ಎ.ಕೆ.ವಿ. ಬೆಂಡೆಲ್ (ಅಲ್ಫೋನ್ಸ್ ಕುಟಿನ್ಹಾ, ವರ್ಕಾಡಿ) ಕ್ರೈಸ್ತ ಮತಸ್ಥರಾಗಿದ್ದೂ ತುಳುನಾಟಕ ರಂಗದ ಖ್ಯಾತ ಹೆಸರಿನಲ್ಲೊಬ್ಬರು, ಪಾಪದ ಶಾಪ, ಪ್ರೀತಿದ ಪರಿಣಾಮ, ಕಣ್ಣೀರ್ದ ಕರಿಯಮಣಿ' (ಈ ಹೆಸರಿನ ನಾಟಕವನ್ನೇ ಅನೇಕರು ಬರೆದರು) – ಮುಂತಾದವು ಬೆಂಡೆಲ್‌ರ ಜನಪ್ರಿಯ ನಾಟಕಗಳು.

ಮಂಗಳೂರಿನ ಫೆಲಿಕ್ಸ್ ಎಫ್. ಸಲ್ಡಾನ್ನ, ಬೆಳ್ಳೆಯ ವಿಲ್ಯಂ ಡೇಸಾ, ಸಿಕ್ವೇರಾ ಮಾಸ್ತರ್, ಯು.ಎಂ. ಮ್ಯೊದಿನಬ್ಬ, ಖಾಲಿದ್ ತಣ್ಣೀರುಬಾವಿ, ಮಿಕ್‌ಮ್ಯಾಕ್ಸ್, ಡಾಲ್ಫಿ ಕಾಸಿಯಾ, ರೆಜಿನಾಲ್ಡ್ ಪುರ್ಟಾಡೋ ಇವರೆಲ್ಲ ತುಳುರಂಗಭೂಮಿಯಲ್ಲೂ ದುಡಿದರು.

ಹಮೀದ್ ಕಂದಕ್ ಅವರು 'ಡಾಕ್ಟರ್ ರಮೇಶ್, 'ಎನನ್ ನಂಬುಲ', 'ಎನ್ನ ಭೂಮಿ' – ಮುಂತಾದ ತುಳುನಾಟಕ ರಚಿಸಿದ್ದಲ್ಲದೆ ಪಿ.ಎಸ್. ರಾಯರೊಂದಿಗೆ 'ಸಹೋದರ ಕಲಾವೃಂದ'ದ ಸದಸ್ಯರಾಗಿ ಕೆಲವು ನಾಟಕಗಳಲ್ಲಿ ನಟಿಸಿದರು.

ನೂರ್ ಮಹಮ್ಮದ್ ಮಂಜೀರ್ 'ತನ್ನ' ಉಡಲೊಂಜಿ ಕಡಲೊಂಜಿ' ತುಳು ನಾಟಕಕ್ಕೆ ರತ್ನವರ್ಮ ಹೆಗ್ಗಡೆ ಸ್ಮಾರಕ ಬಹುಮಾನ ಪಡೆದವರು. ಮಲ್ಪೆ ವಡಭಾಂಡೇಶ್ವರದ ಕೆ. ಅಬೂಬಕ್ಕರ್ 'ಭಕ್ತೆರ್ನ ಓಲೆ ಸ್ವಾಮಿ ಅಯ್ಯಪ್ಪೆ' ಮುಂತಾದ ಹಲವು ತುಳು ನಾಟಕಗಳನ್ನು, ರಂಗಗೀತೆಗಳನ್ನು ಬರೆದವರು.

ಇಬ್ರಾಹಿಂ ತಣ್ಣೀರುಬಾವಿ ತುಳುನಾಟಕ ನಿರ್ದೇಶಕರಾಗಿ, ಗಾಯಕರಾಗಿ, ಪದ್ಯ ರಚನೆಯಲ್ಲೂ ಹೆಸರಾದವರು. ಐದು ತುಳುನಾಟಕಗಳನ್ನು ಬರೆದ ಕಾರ್ಕಳದ ಇಕ್ಬಾಲ್ ಹುಸೇನ ಪುಲ್ಕೇರಿ, ಅಶ್ರಫ್ ವಾಲ್ಪಾಡಿ ಮುಂತಾದ ನಾಟಕಕಾರರೂ ಗಮನಾರ್ಹ

ಕೆಲಸ ಮಾಡಿದರು.

ಉಡುಪಿ ಕೆಮ್ಮಣ್ಣಿನ ರೆಜಿನಾಲ್ಡ್ ಪುರ್ಟಾಡೋ ತನ್ನ ಪರಿಸರದ ಬಹಳಷ್ಟು ತುಳುನಾಟಕಗಳಲ್ಲಿ ಪಾತ್ರವಹಿಸುತ್ತಾ, ಹಲವು ನಾಟಕ ಪ್ರದರ್ಶನಗಳ ಸಂಘಟನೆಯ ಹಿಂದೆಯೂ ಅಪಾರ ಶ್ರಮವಹಿಸಿದವರು.

ತುಳುವರೆಂದೇ ಎಲ್ಲರೂ ಭಾವಿಸುತ್ತಾ ತುಳು ಸೇವೆಯಲ್ಲೇ ದಶಕಗಳನ್ನು ಕಳೆದವರು. **ಪಿ.ಎಸ್. ರಾವ್** (ಪಣಂಬೂರು ಶ್ರೀಧರ ರಾವ್, 1930–2007) ಮಂಗಳೂರಿನ ನವಭಾರತ ರಾತ್ರಿಶಾಲಾ ವಿದ್ಯಾರ್ಥಿಯಾಗಿದ್ದಾಗಿನಿಂದ ನಾಟಕಾಭಿನಯ – ನಾಟಕ ರಚಿಸಲು ತೊಡಗಿದ ರಾವ್ ವ್ಯಾಪಕವಾಗಿ ಬರೆದರು, ತನ್ನ ದುರ್ಗಾ ಪ್ರಕಾಶನದ ಮೂಲಕ ಪ್ರಕಟಿಸಿದರು, ನಿರ್ದೇಶಿಸಿದರು, ಸಹೋದರ ಕಲಾವೃಂದ (1954) ಸ್ಥಾಪಿಸಿ ನಾಟಕ ವಾಡಿದರು. 'ತುಳುಬೊಳ್ಳಿ' ಎನ್ನುವ ಪತ್ರಿಕೆಯನ್ನು ಹಲವು ವರ್ಷ ನಡೆಸಿದ್ದರು. ಈ ಎಲ್ಲ ನಾಟಕಕಾರರು ಮಾತೃಭಾಷಾ ದೃಷ್ಟಿಯಿಂದ ಮಾತ್ರ ತುಳುವೇತರರು. ಆದರೆ ಉಳಿದೆಲ್ಲ ದೃಷ್ಟಿಗಳಿಂದಲೂ ತುಳುವರೇ.

* * *

# ಆಧುನಿಕ ತುಳುರಂಗಭೂಮಿ ಪ್ರಾಯೋಗಿಕ ನೆಲೆ

ಎಪ್ಪತ್ತರ ದಶಕದಲ್ಲಿ ಕರ್ನಾಟಕದ ಒಟ್ಟೂ ರಂಗಭೂಮಿಯಲ್ಲಿ ಉಂಟಾದ ಆಧುನಿಕ ತಿರುವುಗಳು ತುಳು ರಂಗಭೂಮಿಯ ಆತ್ಮಾವಲೋಕನಕ್ಕೆ ಒಂದಿಷ್ಟು ನೆರವಾದವು. ಭಾರತೀಯ ಹಾಗೂ ಪಾಶ್ಚಾತ್ಯ ರಂಗಭೂಮಿಯನ್ನು ಅಭ್ಯಸಿಸಿದ ಬಿ.ವಿ. ಕಾರಂತ, ಪ್ರಸನ್ನರ ರಂಗಚಟುವಟಿಕೆಗಳು, ಉಡುಪಿಯಲ್ಲಿ ಜನ್ಮತಳೆದ ರಂಗಭೂಮಿ ಸಂಸ್ಥೆ (1965), ಮಂಗಳೂರಿನಲ್ಲಿ ಭೂಮಿಕಾ, ಅಭಿವ್ಯಕ್ತ, ಆಯನ, ಸುಳ್ಯದ ನಿರತ ನಿರಂತ ಮತ್ತಿತರ ಹವ್ಯಾಸಿ ಸಂಘಟನೆಗಳ ಹುಟ್ಟು – ಇವೆಲ್ಲ ಬೆಳವಣಿಗೆಗಳು ಹೊಸ ತಲೆಮಾರಿನ ಶಿಕ್ಷಿತ ತರುಣರು, ಕಾಲೇಜು ಅಧ್ಯಾಪಕರನ್ನು ತುಳು ರಂಗಭೂಮಿಯಲ್ಲಿ ನೂತನ ಪ್ರಯೋಗಕ್ಕೆ ಪ್ರೇರೇಪಿಸಿದವು.

ಅದೇ ವೇಳೆಗೆ ಮುಂಬಯಿಯಲ್ಲಿ ಐವತ್ತರ ದಶಕದಿಂದಲೇ ರಂಗ ಚಟುವಟಿಕೆಯಲ್ಲಿದ್ದು, ಮರಾಠೀ, ಬಂಗಾಳೀ ಮತ್ತಿತರ ಮುಂದುವರಿದ ರಂಗಭೂಮಿಯನ್ನು ಅವಲೋಕಿಸುತ್ತಿದ್ದ ಶ್ರೀ ಸದಾನಂದ ಸುವರ್ಣರು (1972ರಲ್ಲಿ ಪ್ರಥಮ ಪ್ರಯೋಗ) 'ಗುಡ್ಡೆದ ಭೂತ' ನಾಟಕವನ್ನು ಆಧುನಿಕ ಪರಿಕಲ್ಪನೆಯಲ್ಲಿ ರಚಿಸಿ ಪ್ರಯೋಗ ನಡೆಸಿದರು. ಉಡುಪಿ ಮತ್ತಿತರ ಕಡೆಗೂ ತನ್ನ ತಂಡವನ್ನು ತಂದು ಪ್ರದರ್ಶನ ನೀಡಿದರು. ಕಥಾವಸ್ತು, ಸಂವಿಧಾನ, ರಂಗ ವಿನ್ಯಾಸ, ಸಂಗೀತ, ಬೆಳಕು – ಎಲ್ಲದರಲ್ಲೂ ನಾವೀನ್ಯದೊಂದಿಗೆ ಗುಡ್ಡೆದ ಭೂತ ಅತ್ಯಂತ ಪರಿಣಾಮಕಾರಿಯೆನಿಸಿತು.

ವಿಜಯಕುಮಾರ್ ಕೆಮ್ಮಣ್ಣು (ಕಲಾಜಗತ್ತು) ಅವರ ಭೂತೊದ ಇಲ್ಲ್, ಈ ನಲ್ಕೆದಾಯೆ, ಬರ್ಸ, ಅಮೃತ ಸೋಮೇಶ್ವರರ ಗೋಂದೊಳು, ಕುದ್ಕಾಡಿ ವಿಶ್ವನಾಥ ರೈಯವರ 'ಅಬ್ಬಕ್ಕಬ್ಬೆ', 'ಸಂಕ್ರಾನ್ತಿ', 'ಮಂಜತ ಕಾಪಡೆ', ಕೆದಂಬಾಡಿಯವರು ಅನುವಾದಿಸಿದ 'ಚೋಮನ ದುಡಿ', 'ಸೂದ್ರೆ ಏಕಲವ್ಯ' ಇವೆಲ್ಲವು ತರಬೇತಾದ ನಿರ್ದೇಶಕರ ಕೈಯ್ಯಲ್ಲಿ ಪ್ರಯೋಗವಾದವು. 'ಗೋಂದೋಳು' ಅಲ್ಲದೆ ಅಮೃತ ಸೋಮೇಶ್ವರರ 'ರಾಯರಾವುತೆ', 'ಆಟೊ ಮುಗಿಂಡ್', 'ಪೆರಿಂಜಗುತ್ತು ದೇವು ಪೂಂಜೆ'




**ಬೆಂಗಳೂರಿನ 'ತೌಳವ ಕಲಾವಿದರು ಕೂಟ'ದ ಆಶ್ರಯದಲ್ಲಿ ಪ್ರದರ್ಶನವಾದ 'ಭೂಮಿಕಾ'ದ ಮೊದಲ ನಾಟಕ 'ಚಕ್ರವ್ಯೂಹ'ದ ಕರಪತ್ರ (1986)**

ಮುಂತಾದ ನಾಟಕಗಳು ಜಾನಪದ ಜಗತ್ತಿನ ಕಥೆಯನ್ನು ಪ್ರಖರ ವೈಚಾರಿಕತೆಯಲ್ಲಿ ಕಟ್ಟಿಕೊಟ್ಟವು. ಆಕಾಶವಾಣಿ ಪ್ರಸಾರದಲ್ಲೂ ಯಶಸ್ವಿಗೊಂಡ ಈ ನಾಟಕಗಳ ಸಂಕಲನ 2005ರಲ್ಲಿ ಪ್ರಕಟವಾಗಿದೆ. ಸುರತ್ಕಲ್‌ನ ಮನು ಇಡ್ಯರ 'ಬಲಿ' ತಿರ್ಸಂಕು ಮುಂತಾದ ನವ್ಯನಾಟಕಗಳು, ಗಣೇಶ್ ಅಮೀನ್ ಸಂಕಮಾರ್‌ರ ಮಾಯದ ಕಾಯಿ (2002) ಮುಂತಾದವು ತುಳು ರಂಗ ಚಿಂತನಾ ಪರಿಧಿಯನ್ನು ವಿಸ್ತರಿಸಿದವು.

ಮಂಗಳೂರಿನಲ್ಲಿ ನವಭಾರತ – ತುಳುಕೂಟ ಜಂಟಿಯಾಗಿ ಪ್ರಾರಂಭಿಸಿದ 'ತುಳುನಾಟಕ ಸ್ಪರ್ಧೆ', ಮುಂದೆ ಕಾರ್ಕಳ, ಉಡುಪಿ, ಕಾಪು, ಕಟಪಾಡಿ, ಮೂಡುಬಿದಿರೆ, ಬಂಟ್ವಾಳ, ಮುಂಬಯಿ ಮುಂತಾದೆಡೆ ಸ್ಥಳೀಯ ರಂಗ ಸಂಸ್ಥೆಗಳಿಂದ ಉತ್ಸಾಹದಿಂದ ಮುಂದುವರಿಯಿತು. ರಂಗಕೃತಿ ಚೌಕಟ್ಟು, ರಂಗಾಭಿನಯ, ಸ್ಟೇಜ್ ಸೆಟ್ಟಿಂಗ್, ಸಂಗೀತ ನಿರ್ದೇಶಕರ ಪರಿಶ್ರಮದ ಮೇಲಿಂದ ಫಲಿತಾಂಶ ಕಂಡವು. ಇಷ್ಟಾದರೂ ವರ್ಷಕ್ಕೊಂದೋ ಎರಡೋ ಹೊಸ ನಾಟಕ ತಯಾರಿ, ಒಂದು ಇಲ್ಲವೇ ಎರಡು ಪ್ರದರ್ಶನ ಎನಿಸುವ ಚೌಕಟ್ಟಿನಲ್ಲಿ ಎಂಬತ್ತರ ದಶಕವಿತ್ತು.

### ಹವ್ಯಾಸಿ ನೆಲೆ

ನಾಟಕವೊಂದು ಮನೋರಂಜನೆ ಮಾತ್ರವಲ್ಲ, ಮನೋವಿಕಾಸದ ವೇದಿಕೆಯಾಗ

# ಆಧುನಿಕ ನಾಟಕಕಾರರು, ನಿರ್ದೇಶಕರು



ಸದಾನಂದ ಸುವರ್ಣ



ಅಮೃತ ಸೋಮೇಶ್ವರ



ಕುದ್ಕಾಡಿ ವಿಶ್ವನಾಥ ರೈ



ಮನು ಇಡ್ಯಾ



ಡಾ. ಡಿ.ಕೆ. ಚೌಟ



ಕೆ. ಆನಂದ ಗಾಣಿಗ



ರಾಧಾಕೃಷ್ಣ



ಐ.ಕೆ. ಬೊಳುವಾರು



ಮೋಹನಚಂದ್ರ



ಬಾಸುಮ ಕೊಡಗು

ಜೀವನ್‌ರಾಂ ಸುಳ್ಯ



ಗೋಪಾಡ್ಕರ್

ಭೂಮಿಕಾ ಪ್ರಯೋಗದ 'ಚಕ್ರವ್ಯೂಹ'ದ ಬೆಳ್ಳಿಹಬ್ಬ ಸಂದರ್ಭ
ಮಂಗಳೂರು ಪುರಭವನದಲ್ಲಿ ಪ್ರದರ್ಶನ, 25-2-1988. ಚಿತ್ರದಲ್ಲಿ ಎವ್ಲಿನ್ ಲೋಬೋ, ಲಕ್ಷ್ಮಣಕುಮಾರ್ ಮಲ್ಲೂರು ಮತ್ತು ರಾಧಾಕೃಷ್ಣ, ಅನುವಾದ ಮತ್ತು ನಿರ್ದೇಶನ : ರಾಧಾಕೃಷ್ಣ, 1980 ಚಿತ್ರಕೃಪೆ : ಮಲ್ಲೂರು



'ಚಕ್ರವ್ಯೂಹ'ದ ಕಲಾವಿದರು
ಲಕ್ಷ್ಮಣಕುಮಾರ್ ಮಲ್ಲೂರು, ರಿಪ್ಸನ್ ಎಡ್ವರ್ಡ್, ರಾಧಾಕೃಷ್ಣ (ನಿರ್ದೇಶಕ ಹಾಗೂ ನಟ), ಎಸ್.ಕೆ. ಸಾಲಿಯಾನ್, ರೋಹಿಣಿ ಜಗರಾಮ್, ಬಿ.ಎನ್.ಜಿ.ಕೆ. ರಾವ್, ಕೆ. ಸದಾಶಿವ ಅಮೀನ್, ಕುಮುದಾ ಬಾರ್ಕೂರು, ಹರೀಶ್ ರಾಜ್ ಅತ್ತಾವರ್
ಚಿತ್ರಕೃಪೆ : ಸದಾಶಿವ ಅಮೀನ್

ಬೇಕು. ಸಮಾಜಕ್ಕೆ ಮೌಲ್ಯ ತೋರಿಸಬೇಕು, ಶಿಕ್ಷಣ ನೀಡಬೇಕು, ಸೃಜನಶೀಲತೆಯನ್ನು ಉದ್ದೀಪಿಸುವ ಕಲೆಯೆನಿಸಬೇಕು; ಕೇವಲ ಹಾಸ್ಯ-ಮನ ರಂಜನೆಯ ಸರಳೀಕೃತ ಕ್ರಿಯೆಯಾಗುವುದಿಲ್ಲ ಎಂಬ ಕಾಳಜಿಯ ವಿಚಾರವಂತ ಪ್ರಯೋಗಶೀಲರಿಂದಾಗಿ ಆಧುನಿಕ ಹವ್ಯಾಸಿರಂಗ ಬೆಳೆಯಲು ಕಾರಣವಾಯಿತು. ಪರಿಣತಿ ಹೊಂದಿದ ಹಲವಾರು ರಂಗತಜ್ಞರು, ನಿರ್ದೇಶಕರು, ಸಾಹಿತಿ, ನಟನಟಿಯರು, ತಂತ್ರಜ್ಞರು, ಕಲಾಪೋಷಕರು – ಹವ್ಯಾಸಿ ರಂಗಭೂಮಿಯ ಬೆಳವಣಿಗೆಗಾಗಿ ಶ್ರಮಿಸಲು ಮುಂದಾದರು.

1979ರಲ್ಲಿ ಮಂಗಳೂರಿನಲ್ಲಿ 'ಭೂಮಿಕಾ' ಹುಟ್ಟಿಕೊಂಡಿತು. ಗೌರವಾಧ್ಯಕ್ಷ ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವ ಹಾಗೂ ಡಾ. ನಾ. ದಾಮೋದರ ಶೆಟ್ಟಿಯವರು ಇದರ ಆಧಾರಸ್ತಂಭಗಳು. 'ತುಘಲಕ್'ನ ನಂತರ ತುಳುನಾಟಕ 'ಚಕ್ರವ್ಯೂಹ' (ಮೂಲ ಮಲಯಾಳ: ಸಿ.ಎಲ್. ಜೋಸ್; ಅನು: ರಾಧಾಕೃಷ್ಣ) ಹಲವು ಪ್ರದರ್ಶನ ಕಂಡು ಹವ್ಯಾಸಿ ರಂಗಭೂಮಿಯ ಮೊದಲ ತುಳು ನಾಟಕವೆನಿಸಿತು.

'ಅಭಿವ್ಯಕ್ತ' ನಾಟಕೋತ್ಸವ ಮೊದಲಾಯಿತು. ಇದರ ಮೂಲಪುರುಷ ದಿ. ಕೆ. ಶ್ರೀಧರ್. ನವೀನ ಚಿಂತನೆಯ ರಂಗಕರ್ಮಿಗಳನೇಕರು ಕಲೆತು ರಂಗಸಾಧ್ಯತೆಯ ಪಥ್ಯದ ಚರ್ಚೆ ನಡೆಸಿದರು. 1998ರಲ್ಲಿ 'ಪೆದಂಬು' ಎಂಬ ಹೊಸ ನಾಟಕ ಪ್ರಯೋಗ ವಾಯಿತು. ಕಲಾವಿದರ ರಾಜಕೀಯವನ್ನು ವಿಡಂಬಿಸಿದ ನಾಟಕವಿದು.

80ರ ದಶಕದ ಪ್ರಮುಖ ತಂಡವಾಗಿ 'ಆಯನ' ಮಂಗಳೂರಲ್ಲಿ ಕಾಣಿಸಿಕೊಂಡಿತು. 'ಬಸ್ತಿ' ಇವರ ಗಮನಾರ್ಹ ಕೊಡುಗೆ. ಕನ್ನಡ ಮತ್ತು ತುಳುವಿನಲ್ಲಿ ಇದು ಪ್ರಯೋಗ

ಗೊಂಡಿತು. (ನಿ: ಮೋಹನಚಂದ್ರ) ರಂಗವಿನ್ಯಾಸ, ಬೆಳಕು, ವೇದಿಕೆಯ ಬಳಕೆ ಎಲ್ಲದರಲ್ಲೂ 'ಬಸ್ತಿ' ಗಮನಾರ್ಹವೆನಿಸಿತು.

ಉಡುಪಿ ತುಳುಕೂಟದ ಆಶ್ರಯದಲ್ಲಿ 2002ರಿಂದ ಆರಂಭವಾದ ಕೆಮ್ತೂರು (ದೊಡ್ಡಣ್ಣ ಶೆಟ್ಟಿ) ಸ್ಮಾರಕ ತುಳುನಾಟಕ ಸ್ಪರ್ಧೆ, ಇದೇ ಮಾದರಿಯ ಇನ್ನೂ ಹಲವೆಡೆಯ ರಂಗಚಟುವಟಿಕೆಗಳು 'ಅಸುದ್ದೊ', 'ಪೆದಂಬು', 'ಪಿಲಿಪತ್ತಿ ಗಡಸ್', 'ಪಿಂಗಾರ', 'ಗುವೆಲ್ ಕಳವಾತ್‌ಂಡ್'. 'ಸಮ್ಗಾರನ ಸಂಸಾರೊ', 'ಕತ್ತಲೆಗ್ ಪತ್ತ್ ತರೆ', 'ಜೋಕುಲು ಬಾಲೆಲು' (ಅನು) ಧರ್ಮೆತ್ತಿ ಮಾಯೆ, 'ಉಬರ್' 'ಒಸರ್' ನಂಬುಲೆ', 'ನಂಬಾದ್ ಕೊರ್ಪೆ' – ಮುಂತಾದ ರಂಗಕೃತಿಗಳು ತುಳು ಪ್ರೇಕ್ಷಕರ ಬೌದ್ಧಿಕ ಸ್ತರದ ತೃಪ್ತಿಗೆ ಕಾರಣವಾದವು. ಮುದ್ರಾಡಿಯ ನಮ ತುಳುವೆರ್ ಕಲಾಸಂಘಟನೆ, ಕಿನ್ನಿಗೋಳಿ, ಮುಂಬಯಿ, ಕಾಸರಗೋಡಿನ ಪ್ರತಿಭಾವಂತ ನಟ, ನಿರ್ದೇಶಕರು ಸೇರಿದಂತೆ ಅಲ್ಲಲ್ಲಿ ತುಳು ರಂಗಭೂಮಿ ಭರವಸೆಯ ಮಿಂಚುಗಳನ್ನು ಹೊಳೆಯಿಸಿತು. ಚದುರಂಗ, ಪರಿವಾರ ರಂಗ ಸುಳ್ಯ, ಮಕ್ಕಳಧ್ವನಿ – ಮುಂತಾದ ತಂಡಗಳ ಮೂಲಕ ಹಲವಾರು ಸೃಜನಶೀಲ ಶಿಕ್ಷಕರು, ರಂಗಕರ್ಮಿಗಳು ಮಕ್ಕಳ ರಂಗ ತರಬೇತಿಗಾಗಿ ತುಳುವಿನಲ್ಲಿ ದುಡಿದರು. ಕಾಸರಗೋಡು ಚಿನ್ನಾರ 'ಲಾರಿ' ನಾಟಕ ಪ್ರಯೋಗದಲ್ಲೂ ತುಳುನಾಟಕಗಳು ಬಳಕೆಯಾದವು. ಧ್ವನಿ ಮಾಧ್ಯಮವಾದ ಆಕಾಶವಾಣಿಯಲ್ಲಿ ಕಳೆದ ನಾಲ್ಕು ದಶಕಗಳಿಂದ ಪ್ರಸಾರಗೊಂಡ ತುಳುನಾಟಕಗಳು ರಂಗಭೂಮಿಗೆ ಪರೋಕ್ಷ ನೆಲೆಯಲ್ಲಿ ನಿಂತಿವೆ. ನೂರಾರು ತುಳುನಾಟಕ ಕ್ಯಾಸೆಟ್‌ಗಳು, ನಮ್ಮ ಕುಡ್ಲ, ನಮ್ಮ ಟಿ.ವಿ.ಯಂತಹ ಸ್ಥಳೀಯ

ಅಭಿವ್ಯಕ್ತದಿಂದ ಮಂಗಳೂರಿನಲ್ಲಿ 'ಪೆದಂಬು' ಚೊಚ್ಚಲ ಪ್ರಯೋಗ
ನಿ.: ಮೋಹನಚಂದ್ರ, 1997

**ಪರಿವಾರ ರಂಗ ಸುಳ್ಯ ಇವರ ತಾಲೀಮಿನಲ್ಲಿ ಸೃಷ್ಟಿಯಾದ 'ಅಸುದ್ದೊ'. ಮೂಲಕತೆ : ಪ್ರಭಾಕರ ಶಿಶಿಲರ 'ಬಾರಣೆ'. ನಾಟಕ ರೂಪಾಂತರ : ಜನಾರ್ದನ ಕಣಕ್ಕೂರು, ನಿ.: ಜೀವನ್‌ರಾಂ ಸುಳ್ಯ, ಬಾಸುಮ ಕೊಡಗು, 1997**

ದೃಶ್ಯವಾಹಿನಿಗಳಲ್ಲೂ ತುಳುನಾಟಕಗಳು ಬಂದಿವೆ. ತುಳುವಿನ ಹಲವು ರಂಗಕರ್ಮಿಗಳು ರಾಜ್ಯನಾಟಕ ಅಕಾಡೆಮಿಯ ಮನ್ನಣೆಯನ್ನೂ ಗಳಿಸಿದ್ದಾರೆ. ಸಂಖ್ಯೆಯಲ್ಲಿ ಕಡಿಮೆಯಾದರೂ ಹಲವಾರು ಮಹಿಳೆಯರು ನಟಿಯರಾಗಿ, ನಾಟಕಕಾರರಾಗಿ ಗಾಯಕಿಯರಾಗಿ ತುಳುರಂಗಭೂಮಿಗೆ ಕೊಡುಗೆ ನೀಡಿದ್ದಾರೆ, ನೀಡುತ್ತಿದ್ದಾರೆ. ತುಳು ಸಿನಿಮಾಗಳಿಗೆ ಮೂಲವಾದ ತುಳುನಾಟಕಗಳು ಕೆ.ಎನ್. ಟೇಲರ್‌ರಿಂದ ಆರಂಭಗೊಂಡು ದಾಖಲೆ ನಿರ್ಮಿತ 'ಒರಿಯದರ್ೊರಿ ಅಸಲ್'ವರೆಗೆ ಬೆಳೆದುದೂ ಅದರ ಮಿತಿಯೂ ವ್ಯಾಪ್ತಿಯೂ ನಿಜ. ಲಕುಮಿ ತಂಡದ ಪೌರಾಣಿಕ ನಾಟಕ 'ಕಟೀಲಪ್ಪೆ ಉಳ್ಳಾಲ್ತಿ' (ರಚನೆ : ನವನೀತ ಶೆಟ್ಟಿ ಕದ್ರಿ) – ಇತ್ತೀಚೆಗೆ ಬಹುಸಂಖ್ಯೆಯಲ್ಲಿ (280ಕ್ಕೂ ಮಿಕ್ಕಿ) ಪ್ರದರ್ಶಿಸಿ ಯಶಸ್ವಿಯಾದ ಮತ್ತೊಂದು ನಾಟಕ.

### ವೈಚಾರಿಕ ಅಲೆ

ಕಳೆದ ಶತಮಾನದ 70ರ ದಶಕಾರಂಭ ಎನ್ನುವುದು ಇಡಿಯ ಕರ್ನಾಟಕ ರಂಗಭೂಮಿಯಲ್ಲಿ ಕ್ರಾಂತಿಕಾರಕ ಯುಗಾರಂಭ ಎನ್ನಬಹುದು. ಭೋಪಾಲದ ರಾಷ್ಟ್ರೀಯ ನಾಟಕ ಶಾಲೆ ಆರಂಭ, ಬಂಗಾಲಿ, ಮರಾಠಿ ರಂಗಭೂಮಿಯಲ್ಲಿ ಉಂಟಾದ ಅನೇಕ ಆವಿಷ್ಕಾರಗಳು, ಚಳುವಳಿಗಳು ಜನಪರ ಚಿಂತನೆಗಳನ್ನು ತುಳುನಾಡಿನ ಕನ್ನಡದ ಮೋಹನ ಸೋನ, ಎಂ.ಸಿ.ರಾಮು, ವಾಲ್ಟರ್ ಡಿಸೋಜ, ಜಗದೀಶ ಅಮ್ಮುಂಜೆ, ಜಗನ್ ಪವಾರ್ ಬೇಕಲ್ ಮುಂತಾದ ಕೆಲವು ಪ್ರಗತಿಪರ ರಂಗಕರ್ಮಿಗಳು ತೀವ್ರವಾಗಿ

ಗಮನಿಸಿದರು, ಪಾಲ್ಗೊಂಡರು. ಕನ್ನಡ ನಾಟಕ ರಂಗದಲ್ಲಿ ಪ್ರಯೋಗಕ್ಕೆ ತೊಡಗಿದರು.

ಶಿಕ್ಷಿತ ಯುವ ತಲೆಮಾರಿನವರಲ್ಲಿ ನಿಧಾನಕ್ಕೆ ರಾಜಕೀಯ ಪ್ರಜ್ಞೆಯೂ ಬಲಿಯುತ್ತಿತ್ತು. ಆಡಳಿತ ಶಾಹಿಯು ಜನಪರವಾಗಿಲ್ಲ, ಜನರ ಅಹವಾಲು ಕಷ್ಟ ಸುಖವನ್ನು ಲಕ್ಷಿಸುತ್ತಿಲ್ಲ ಎಂಬ ರಾಜಕೀಯ ವಾತಾವರಣವಿರುವ ಸಂದರ್ಭದಲ್ಲಿ ಪ್ರಸನ್ನರಂತಹ ಜನವಾದಿ ರಂಗಕರ್ಮಿಗಳು 'ಸಮುದಾಯ' ಎನ್ನುವ ಸಂಘಟನೆ ಕಟ್ಟಿ ಅದರ ಮೂಲಕ ಜನ ಚಿಂತನಾಕ್ರಮವನ್ನು ವಿಸ್ತರಿಸಲು ರಂಗಭೂಮಿಯನ್ನು ಬಳಸಿಕೊಂಡರು. ಮಂಗಳೂರಿಗೆ ಬಂದರು. ಇಲ್ಲಿ ಹಲವರು ಅವರ ಬಳಗವಾದರು. ಪ್ರಸನ್ನರು ಬಂಗಾಳಿ ಮೂಲಕ (ಅರುಣ್ ಮಹೋಪಾಧ್ಯಾಯರ) ನಾಟಕ 'ಮಾರೀಚನ ಬಂಧುಗಳು' ಎನ್ನುವ ಕ್ರಾಂತಿಕಾರಕ ಹೊಸ ನಾಟಕವನ್ನಾಡಿದರು. ಮೊದಲ ಪ್ರಯೋಗ ಪ್ರೇಕ್ಷಕರ ಕೋಪ ಕ್ಕೀಡಾಯಿತು. ಮುಂದೆ ಬದಲಾವಣೆಯನ್ನು ಜನ ಕ್ರಮೇಣ ಒಪ್ಪಿದರು. ಮಂಗಳೂರಿನಲ್ಲಿ ಸಮುದಾಯದ ನಾಟಕ ಅಷ್ಟು ಯಶಸ್ವಿಯಾಗದಿದ್ದರೂ ಬೇರೆಡೆ ಬೆಳೆಯಿತು. 'ಮಾರೀಚನ ಬಂಧುಗಳು' ನಾಟಕ ನಾದಾ ಶೆಟ್ಟರ ಬಳಗದಿಂದ ಉಡುಪಿ, ಮಣಿಪಾಲ, ಕುಂದಾಪುರ ಮುಂತಾದೆಡೆ ಪ್ರದರ್ಶಿತಗೊಂಡು ಹೊಸ ಚಿಂತನ ಕ್ರಮ ಪಸರಿಸಿತು.

ಅತ್ತ 70ರ ದಶಕಾರಂಭದಲ್ಲಿ ಎಂ.ಜಿ.ಎಂ. ಕಾಲೇಜಿನಲ್ಲಿ, ಬಿ.ವಿ.ಕಾರಂತರು ಸಾರ್ವಜನಿಕ ಆಸಕ್ತರಿಗೆ ರಂಗತರಬೇತಿ ಶಿಬಿರ ನಡೆಸಿಕೊಟ್ಟರು. 'ತುಘಲಕ್' ನಾಟಕ ಪ್ರಯೋಗಗೊಂಡಿತು. ಕಡಿಯಾಳಿ ಶಾಲೆಯಲ್ಲಿ ಮಕ್ಕಳಿಗೆ 'ಹೆಡ್ಡಾಯಣ' ನಾಟಕ ಸಿದ್ಧಗೊಂಡಿತು. ಈ ಎರಡು ನಾಟಕಗಳು ದ.ಕ. ಜಿಲ್ಲೆಯ ಹವ್ಯಾಸಿ ರಂಗಭೂಮಿಯ ಮೊದಲ ಮೊಳಕೆಗಳೆನಿಸಿದವು. 1965ರಲ್ಲಿ ಉಡುಪಿಯಲ್ಲಿ ರಂಗಭೂಮಿ ಸಂಸ್ಥೆ ಹುಟ್ಟಿಕೊಂಡು ಇನ್ನೊಂದೆಡೆ ಮಂಗಳೂರಿನಲ್ಲಿ ಕೃಷ್ಣಗೋಪಾಲ್ ಎಸ್.ಆರ್. ಬಾಲಗೋಪಾಲ್ 'ಕಲಾಭವನ' ಎಂಬ ಲಾಂಛನದಲ್ಲಿ ಕನ್ನಡ ಕಂಪೆನಿ ಸ್ವರೂಪದ ನಾಟಕ ಸ್ಪರ್ಧೆ ಏರ್ಪಡಿಸತೊಡಗಿದರು. ಹೀಗೆ ಒಂದೆಡೆ ಸಾಂಪ್ರದಾಯಿಕ ಇನ್ನೊಂದೆಡೆ ಆಧುನಿಕ ಚಿಂತನಾಸಂಚಾರ ಜಿಲ್ಲೆಯ ಕನ್ನಡ ರಂಗಭೂಮಿಯಲ್ಲಿ ಚಲನಶೀಲತೆಯ ಹೊಳಹು ತೋರಿದಾಗ – ಅದಾಗಲೇ ತುಳುರಂಗಭೂಮಿ ಒಂದು ಹಂತಕ್ಕೆ ಬಂದು ನಿಂತಿತು. ಮುಂದೇನು ಎನಿಸುವಾಗ ನಾರಾಯಣ ಶರ್ಮ, ನಾ.ದಾ. ಶೆಟ್ಟಿ ಮುಂತಾದ ಪ್ರಾಧ್ಯಾಪಕ ರಂಗಕರ್ಮಿಗಳೊಂದಿಗೆ ನಾಲ್ಕೈದು ಮಂದಿ ಹೊಸತಲೆಮಾರಿನ ರಂಗಕರ್ಮಿಗಳು 'ಪಾಸಾಡಿ'ಗಳಾಗಿ ಮೋಹನ ಚಂದ್ರ, ಸುದೇಶ್ ಮಹಾನ, ಎಂ.ಸಿ. ರಾಮು, ಸುರೇಶ್ ಶೆಟ್ಟಿ, ಚಂದ್ರಹಾಸ್ ಉಳ್ಳಾಲ್, ಶ್ರೀನಿವಾಸ ಕಾರ್ಕಳ, ಮುಂತಾದವರು ಹೊಸ ಅಲೆಯ ನಾಟಕ ತಂಡಗಳ ಬಗ್ಗೆ ಚಿಂತಿಸಿದರು.

ಎಪ್ಪತ್ತರ ದಶಕದಲ್ಲಿ ಬಂದ ತುಘಲಕ್, 'ಹೆಡ್ಡಾಯಣ', 'ಮಾರೀಚನ ಬಂಧುಗಳು' ಇಂತಹ ನವ್ಯನಾಟಕಗಳು ಕರಾವಳಿಯುದ್ದಕ್ಕೆ ಪ್ರೇಕ್ಷಕರಲ್ಲಿ ರಂಗಸಂಚಲನ ಉಂಟು ಮಾಡಿದವು.

ಹೊಸ ಅಲೆಗೆ ಪ್ರಾರಂಭದಲ್ಲಿ ಪ್ರತಿಭಟನೆ ಬಂದರೂ ಬಿ.ವಿ. ವೈಕುಂಠರಾಜು

ಅವರ 'ಉದ್ಭವ', ಸಂಸರ 'ಗೋಡೆ', 'ತೋರಣ' ಇತ್ಯಾದಿ. ಅಸಂಗತ ನಾಟಕಗಳೂ ಉಡುಪಿಯಲ್ಲಿ ಪ್ರದರ್ಶಿತವಾದವು. ಪ್ರೇಕ್ಷಕರೂ ಹದಗೊಂಡರು.

ಎಪ್ಪತ್ತರ ದಶಕದಲ್ಲಿ ಸಿನಿಮಾಗಳ ಪ್ರವೇಶ ಹೆಚ್ಚಾಗತೊಡಗಿತು. ನಾಟಕ ಪ್ರೇಕ್ಷಕರ ಅಭಿರುಚಿ ಎಲ್ಲ ವರ್ಗದ ಪ್ರೇಕ್ಷಕರು ಮೆಚ್ಚುವ ಸದಭಿರುಚಿಯ ನಾಟಕಗಳ ಯುಗ ಮುಗಿಯುತ್ತಿರುವಂತೆ, ತುಳು ನಾಟಕರಂಗದಲ್ಲಿ ಒಂದು ರೀತಿಯ ನಿರ್ವಾತ ಕಾಣಿಸಿ ಕೊಂಡಂತಾದಾಗ ವೃತ್ತಿಪರ ನಾಟಕ ಕೂಟಗಳು ತಮ್ಮ ಪ್ರೇಕ್ಷಕರನ್ನು ಹಿಡಿದುಕೊಳ್ಳುವ ಬಗ್ಗೆ ಯೋಚಿಸಿದರು. ಬಹಳಷ್ಟು ತಂಡಗಳ ರಾಜಿ ಮಾಡಿಕೊಳ್ಳತೊಡಗಿದವು. ಸಿನೆಮಾಗಳ ಮಸಾಲೆಯನ್ನು ಸೇರಿಸಿ ರಂಗಭೂಮಿಯ ದೊಡ್ಡ ವರ್ಗ ಮುಂದೆ ಸಾಗಿತು. ಆದರೆ ಇನ್ನೊಂದು ವರ್ಗ ಇದೆಲ್ಲದರ ವಿರುದ್ಧ ಸಿಡಿದೆದ್ದಿತು. ನಾಟಕ ನೆಲೆಯಲ್ಲಿ ಅಧ್ಯಯನ, ವೈಚಾರಿಕತೆಗಳನ್ನು ಬೆಳೆಸಿಕೊಂಡು ಮುಂದುವರಿಯಿತು. ಆದರೆ ಸಾಮಾನ್ಯ ವರ್ಗದ ಬಹುದೊಡ್ಡ ಪ್ರೇಕ್ಷಕ ವರ್ಗದಿಂದ ಇವರು ದೂರಾದರೆಂದೇ ಹೇಳಬೇಕು. ಇದರ ವಿಚಾರ ಮಂಥನ, ಗೆಲ್ಲುವ ದಾರಿಯಾವುದೆಂಬ ಹುಡುಕಾಟದಿಂದ ಮತ್ತೆ ಕೆಲವರು ಜನರಿಗೆ ಹತ್ತಿರವಾಗುವ ದಾರಿ ಹೇಗೆಂದು ಯೋಚಿಸಿದರು. ಆಗ ಹುಟ್ಟಿಕೊಂಡದ್ದೇ ಹವ್ಯಾಸಿಗಳ ತಂಡ 'ಭೂಮಿಕಾ'. ಅತ್ತ ಕಮರ್ಶಿಯಲ್ ಅಂಶಗಳನ್ನೂ ಎತ್ತಿಕೊಂಡು, ಹೊಸ ಕ್ರಾಂತಿಕಾರಕ ಚಿಂತನೆಗಳನ್ನು ಜೋಡಿಸಿಕೊಳ್ಳುವ ರಂಗಕೃತಿಗಳನ್ನು ಹುಡುಕಿದರು. ಅತ್ತ ಕನ್ನಡ, ಮರಾಠಿ, ಇತ್ತ ದಕ್ಷಿಣದ ಮಲಯಾಳಂ ನಾಟಕರಂಗದಲ್ಲಿ ಅಂತಹ ಪ್ರಯೋಗಗಳಾಗುತ್ತಿರುವುದನ್ನು ಗಮನಿಸಿಕೊಂಡು ಭೂಮಿಕಾ ಸಿದ್ಧಗೊಳಿಸಿದ ಅನುವಾದ ಕೃತಿಯೇ 'ಚಕ್ರವ್ಯೂಹ'. ಹಳತು–ಹೊಸತರ ಧ್ರುವೀಕರಣಕ್ಕೊಳಗಾದ ತುಳುರಂಗಭೂಮಿ ಯಲ್ಲಿ ಚಕ್ರವ್ಯೂಹದ 'ಹೊಸತನ' ಗಮನಾರ್ಹವಾಯಿತು. ಚಕ್ರವ್ಯೂಹ ಸಂಕೀರ್ಣ ಕತೆಯೊಂದರ ಸರಳ ನಿರೂಪಣೆಯಾಗಿ ನಿರ್ದೇಶಕ (ರಾಧಾಕೃಷ್ಣ)ರ ಕೈಯ್ಯಲ್ಲಿ ಯಶಸ್ವೀ ರಂಗಕೃತಿಯಾಗಿ ಹಲವು ಪ್ರದರ್ಶನಗಳನ್ನು ಕಂಡು ಬೆಳ್ಳಿಹಬ್ಬ ಆಚರಿಸಿತು.

### 'ಭೂಮಿಕಾ' ಜನ್ಮ ತಾಳುವುದರೊಂದಿಗೆ...

1979ರಲ್ಲಿ ಮಂಗಳೂರಿನಲ್ಲಿ ಹವ್ಯಾಸಿ ನಾಟಕ ತಂಡ 'ಭೂಮಿಕಾ' ಹುಟ್ಟಿಕೊಂಡಿತು. ಇದರ ಬಳಗವು 'ಚಕ್ರವ್ಯೂಹ' ಎನ್ನುವ ತುಳು ಅನುವಾದ ನಾಟಕವನ್ನೆತ್ತಿಕೊಂಡು ರಂಗತಾಲೀಮು ನಡೆಸಿ ಮಂಗಳೂರು ಪುರಭವನದಲ್ಲಿ 1980ರಲ್ಲಿ ಮೊದಲ ಪ್ರಯೋಗ ನಡೆಸಿ ಅದ್ಭುತ ಯಶಸ್ಸು ಕಂಡಿತು. ಚಕ್ರವ್ಯೂಹ ಮಲಯಾಳಂನ 'ಜ್ವಲನಂ' ನಾಟಕದ ಅನುವಾದ. ಮೂಲ ಲೇಖಕ ಸಿ.ಎಲ್. ಜೋಸ್ (1977ರಲ್ಲಿ ಕೇರಳ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದವರು) ತುಳು ಅನುವಾದ ಮತ್ತು ನಿರ್ದೇಶನ :ರಾಧಾಕೃಷ್ಣ (ಸಂತ ಅಲೋಶಿಯಸ್ ಕಾಲೇಜಿನಲ್ಲಿ ಕಲಿತವರು)

'ಚಕ್ರವ್ಯೂಹ' ನಾಟಕವು ಒಂದಲ್ಲ, 25ಕ್ಕೂ ಮಿಕ್ಕ ಪ್ರದರ್ಶನ ಕಂಡಿತು. ಹವ್ಯಾಸಿ ಕಲಾವಿದರ ತಂಡವೊಂದು ನಾಟಕದ ಇಷ್ಟು ಸಂಖ್ಯೆಯ ಪ್ರದರ್ಶನ ಪೂರ್ಣಗೊಳಿಸಿದ

ಅಪರೂಪ ದಾಖಲೆಯನ್ನು ಭೂಮಿಕಾ ಬಳಗ ಸಾಧಿಸಿತು. ಆ ದಿನಗಳ ಮಾಮೂಲಿ ಸ್ವರೂಪದ ಮಸಾಲೆಗಳಿಲ್ಲದ ತುಳುನಾಟಕ ಎಂಬ ವೈಶಿಷ್ಟ್ಯದ ಮೆರುಗನ್ನು ಈ ನಾಟಕ ನೀಡಿತು.

ಸಿನಿಮೀಯ ಸಂಭಾಷಣೆ, ಅನುಕರಣೆಯ ಹಾಡುಗಳು, ಸಂಬಂಧವಿಲ್ಲದ ಪಾತ್ರಗಳೇ ಪ್ರಧಾನವಾಗಿದ್ದ ಸ್ಥಳೀಯ ರಂಗಭೂಮಿಗೆ ಚಕ್ರವ್ಯೂಹ ಹೊಸ ಆಯಾಮ ನೀಡಿತು. ಮಾನವೀಯತೆ, ಪ್ರೇಮ, ಪಾಪಪ್ರಜ್ಞೆಗಳ ಸುಳಿಯ ಕಥಾವಸ್ತು – ಇತಿಹಾಸ ಮರುಕಳಿಸುತ್ತದೆ ಎಂಬ ಜಿಜ್ಞಾಸೆಯತ್ತ ಸಾಗುತ್ತದೆ. ಪರಸಂಗದ ಪತ್ನಿಯನ್ನು ಕುಟುಂಬ ಹಿತಾಸಕ್ತಿಯಿಂದ, ಕೊಲ್ಲದೆ ಆಕೆಯ ಪ್ರೇಮಿಯನ್ನು ಕೊಂದು ಜೈಲುಸೇರುವ ಗಂಡ, ಬಿಡುಗಡೆಯಾಗಿ ಬಂದಾಗ ಪತ್ನಿ ಮಕ್ಕಳ ತಿರಸ್ಕಾರಕ್ಕೆ ಗುರಿಯಾಗುವ ಪ್ರಸಂಗ, ಮತ್ತೆ ಮರಣಕ್ಕೆ ಶರಣಾಗುವ ವಿಕ್ಷಿಪ್ತ ಮನಸ್ಥಿತಿ. ಆತನ ಮಗಳು ಕೂಡಾ ಇದೇ ದಾರಿಯಲ್ಲಿ ಸಾಗುವ ದುರಂತ.

ಚುರುಕು ಸಂಭಾಷಣೆ, ಸರಳ ನಿರೂಪಣೆ ಈ ನಾಟಕದ ಯಶಸ್ಸಿಗೆ ಕಾರಣವಾಯಿತು. ಸಂಬಂಧಗಳನ್ನು ನಿಗೂಢತೆಯನ್ನು ಅರಸುತ್ತಾ ಸಾಗುವ ವಿಕ್ಷಿಪ್ತತೆ ಪ್ರೇಕ್ಷಕರನ್ನು ಉಸಿರುಬಿಗಿ ಹಿಡಿಯುವಂತೆ ಮಾಡಿತು.

'ಚಕ್ರವ್ಯೂಹ'ವು ಕರಾವಳಿ ಜಿಲ್ಲೆಯಾದ್ಯಂತ 23 ಪ್ರದರ್ಶನ, ಬೆಂಗಳೂರು ಮಂಜೇಶ್ವರ ಗಳಲ್ಲಿ ಒಂದೊಂದು ಪ್ರದರ್ಶನದ ಬಳಿಕ ಮುಂಬಯಿಯಲ್ಲೂ ಪ್ರಯೋಗವಾಯಿತು.

ಈ ನಾಟಕದಲ್ಲಿ ಶಂಕರರಾವ್ ಪಾತ್ರದಲ್ಲಿ ಮಿಂಚಿದ ಲಕ್ಷ್ಮಣಕುಮಾರ್ ಮಲ್ಲೂರ ರಂತೆಯೇ ರಿಪ್ಸನ್ ಎಡ್ವರ್ಡ್, ರಾಧಾಕೃಷ್ಣ (ನಟ, ನಿರ್ದೇಶಕ, ಅನುವಾದಕ), ಎಸ್. ಕೆ. ಸಾಲಿಯಾನ್, ರೋಹಿಣಿ ಜಗರಾಂ, ಬಿ.ಎನ್.ಜಿ.ಕೆ. ರಾವ್, ಕೆ. ಸದಾಶಿವ ಅಮೀನ್, ಕುಮುದಾ ಬಾರ್ಕೂರ್ ಮತ್ತು ಹರೀಶ್‌ರಾಜ್ ಅತ್ತಾವರ (ದಿ। ಯು. ಮಚ್ಚೇಂದ್ರನಾಥರ ಸೋದರಳಿಯ) ನಟಿಸಿದರು.

80ರ ದಶಕದ ಪ್ರಮುಖ ತಂಡವಾಗಿ 'ಆಯನ' ಮಂಗಳೂರಲ್ಲಿ ಕಾಣಿಸಿಕೊಂಡಿತು. 'ಬಸ್ತಿ' ಇವರ ಗಮನಾರ್ಹ ಕೊಡುಗೆ. ಕನ್ನಡ ಮತ್ತು ತುಳುವಲ್ಲಿ ಇದು ಪ್ರಯೋಗ ಗೊಂಡಿತು. (ನಿ: ಮೋಹನಚಂದ್ರ) ರಂಗವಿನ್ಯಾಸ, ಬೆಳಕು, ವೇದಿಕೆಯ ಬಳಕೆ ಎಲ್ಲದರಲ್ಲೂ 'ಬಸ್ತಿ' ಒಂದು ವಿಶೇಷ ಪ್ರಯೋಗವೆನಿಸಿತು. ನೀನಾಸಂ ತರಬೇತಿ ಪಡೆದ ಎಂ.ಸಿ. ರಾಮು, ಮೋಹನಚಂದ್ರ 'ಆಯನ'ದ ಮೂಲಕ ಕರಾವಳಿ ಹವ್ಯಾಸಿ ರಂಗಭೂಮಿಗೆ ಹೊಸ ಕೊಡುಗೆಗಳಾಗಿ ಬಂದರು.

1979ರಿಂದ 81ರ ತನಕದ ಅವಧಿಯಲ್ಲಿ ಕಾಸರಗೋಡು ಸೇರಿದಂತೆ ದ.ಕ. ಜಿಲ್ಲೆಯಲ್ಲಿ ನಾಟಕ ತಂಡಗಳ ಸುಗ್ಗಿಯೇ ಆಯಿತು. ಭೂಮಿಕಾ, ಆಯನ, ಅಭಿವ್ಯಕ್ತ ದಂತೆಯೇ ಕಾಸರಗೋಡಿನ ಯವನಿಕಾ, ಉಡುಪಿಯ ಸಮೂಹ, ರಥಬೀದಿ ಗೆಳೆಯರು, ಪೂರ್ಣಪ್ರಜ್ಞ ಕಲಾವಿದರು ಕುಂದಾಪುರದ ರೂಪರಂಗ, ಬಂಟ್ವಾಳದ ಅಭಿರುಚಿ, ಪುತ್ತೂರಿನ ದೃಶ್ಯ, ಸುಳ್ಯದ 'ಅಭಿನಯ' ಹುಟ್ಟಿಕೊಂಡವು.[1]

80ರ ದಶಕದಲ್ಲಿ ಸಿಂಗಾರ ಸುರತ್ಕಲ್ (1984) ಮನು ಇಡ್ಯರ ತಿರ್ಸಂಕು, ಬಲಿ, ಪೊರ್ತುರ್ ಕಂತ್‌ಂಡ್, 'ಅಮಾಸೆ' – ಮುಂತಾಗಿ ನವ್ಯ ನಾಟಕಗಳನ್ನು ಪ್ರದರ್ಶಿಸಿ ವೃತ್ತಿಪರ ತುಳುನಾಟಕ ತಂಡಗಳಿಗಿಂತ ಭಿನ್ನವಾಗಿ ನಿಂತಿತು.

'ನಿರತ ನಿರಂತ' ಸಂಪಾಜೆ ಕಡೆಯಿಂದ – ತೊಂಬತ್ತರ ದಶಕದಲ್ಲಿ ಹೊರಟ ರಂಗಚಳುವಳಿಯೆನಿಸಿತು. ಈ ಕೂಟದಲ್ಲಿ ಐ.ಕೆ. ಬೊಳುವಾರು, ಸುರೇಶ್, ಮೋಹನ ಸೋನಾ, ಗೋಪಾಡ್ಕರ್ ಇತ್ಯಾದಿಯವರಿದ್ದರು. ತೊಂಭತ್ತರ ದಶಕದ ಆದಿಯಿಂದ ಕರಾವಳಿ ಜಿಲ್ಲೆಯ ತುಳು ನಾಟಕ ರಂಗಕ್ಕೆ ವಿಶೇಷ ಬದಲಾವಣೆಗಳೂ ಆಕರ್ಷಣೆಗಳೂ ಬಂದವು.

ಎಪ್ಪತ್ತರ ದಶಕಾಂತ್ಯದ ವೇಳೆಗೆ ದ.ಕ. ಜಿಲ್ಲೆಯಲ್ಲಿ ಕನ್ನಡದ ರಂಗಭೂಮಿ ಅನೇಕ ಹೊಸ ಪ್ರಯೋಗಗಳಿಗೆ ತೆರೆದುಕೊಂಡಿತು. ಶೇಕ್ಸ್‌ಪಿಯರ್, ಬ್ರೆಕ್ಟ್, ಚೆಕಾವ್, ಮೊಲಿಯರ್, ಕಾಫ್ಕಾನಂತಹ ಐರೋಪ್ಯ ನಾಟಕಕಾರರ ಅನುವಾದಗಳೂ, ಕನ್ನಡದ ಪ್ರಗತಿಗಾಮಿ ನಾಟಕಕಾರರ ನಾಟಕಗಳೂ, ರಂಗತಾಲೀಮಿನೊಂದಿಗೆ ಪ್ರಯೋಗಕ್ಕೆ ಬಂದವು. ಬಿ. ವಿ. ಕಾರಂತ, ಪ್ರಸನ್ನ, ವಸಂತ ಬನ್ನಾಡಿ ಮುಂತಾದ ಶ್ರೇಷ್ಠ ನಿರ್ದೇಶಕರ ಪ್ರಯೋಗಗಳನ್ನೂ ಇಲ್ಲಿಯ ಪ್ರೇಕ್ಷಕರು ಕಂಡರು. ಪರಿಣಾಮವಾಗಿ ತುಳುವಿಗೆ ಹೊಸತನ ಅನಿವಾರ್ಯ ವೆನಿಸಿತು.

**ಸದಾನಂದ ಸುವರ್ಣರ 'ಗುಡ್ಡೆದ ಭೂತ'**
**ಅಮೃತ ಸೋಮೇಶ್ವರ (1935)**
**ವಿನೂತನ ಸ್ಪರ್ಶ ನೀಡಿದ ನಾಟಕಗಳು**

ಎಂಭತ್ತರ ದಶಕಾರಂಭದಲ್ಲಿ ಬಹುಮುಖ ಪ್ರತಿಭಾಶಾಲಿ ಹಿರಿಯ ಸಾಹಿತಿ ಅಮೃತ ಸೋಮೇಶ್ವರರು ತುಳುವಿನಲ್ಲಿ ಒಳ್ಳೆಯ ನಾಟಕ ಹೇಗೆ ಬರೆಯಬಹುದು ಎಂಬುದನ್ನು ತೋರಿಸಿಕೊಟ್ಟರು. ಮೊದಲು ಉಡುಪಿ ರಂಗಭೂಮಿಯವರ ಪ್ರದರ್ಶನಕ್ಕಾಗಿ ಡಾ. ಕಂಬಾರರ 'ಜೋಕುಮಾರ ಸ್ವಾಮಿ'ಯನ್ನು ತುಳುವಿಗೆ ಅನುವಾದಿಸಿಕೊಟ್ಟರು. ಬಳಿಕ ಅಪ್ಪಟ ತುಳು ಸಂಸ್ಕೃತಿಯ ಹೂರಣವಾದ 'ಗೋಂದೊಳು' ಜಾನಪದ ನಾಟಕ ರಚಿಸಿದರು. (ಪ್ರ. 1980). ಊಳಿಗಮಾನ್ಯ ವ್ಯವಸ್ಥೆಯಲ್ಲಿ ಹೆಣ್ಣಿನ ಶೋಷಣೆಯ, ದಟ್ಟ ಜಾನಪದೀಯ ಸ್ವರೂಪದೊಂದಿಗೆ, ರಂಗಭೂಮಿಯ ಎಲ್ಲ ಆಯಾಮಗಳನ್ನೂ ಒಳಗೊಂಡ ಈ ಗಂಭೀರ ನಾಟಕ, ಕೆಲವು ಸವಾಲುಗಳನ್ನೂ ಮುಂದಿರಿಸಿ, ಕಳೆದ ಸುಮಾರು ಮೂರು ದಶಕದುದ್ದ ವಿವಿಧೆಡೆ ಹಲವು ಸ್ಪರ್ಧೆಗಳಲ್ಲಿ ಪ್ರದರ್ಶನಗೊಂಡಿದೆ. ಸೂತ್ರಧಾರ ಹಾಗೂ ನಟಿಯ ಮೂಲಕ ಕಥೆಯನ್ನು ನಿರ್ವಹಿಸುವ ಈ ನಾಟಕದ ತಂತ್ರವನ್ನು ಮುಂದೆ ಹಲವರು ಬಳಸಿಕೊಂಡರು.

'ಗೋಂದೊಳು' ನಾಟಕವನ್ನು ತೊಂಭತ್ತರ ದಶಕದಲ್ಲಿ ಸದಾನಂದ ಸುವರ್ಣರು ಮುಂಬಯಿಯಲ್ಲಿ ಹೊಸ ನೋಟದೊಂದಿಗೆ ಪ್ರಯೋಗಿಸಿದರು. ಅಮೃತರಿಂದ ಹೊಸ

ಪಾಡ್ದನ ಸಾಲುಗಳನ್ನು ಬರೆಯಿಸಿ, ಇಡಿಯ ನಾಟಕವನ್ನು ಪಾಡ್ದನದ ಚೌಕಟ್ಟಿನಲ್ಲಿ ನಡೆಸಿದ ಪ್ರಯೋಗ ಪ್ರೇಕ್ಷಕರ ಮೆಚ್ಚುಗೆ ಗಳಿಸಿತು. ಇದು ಹಳೆಯ ಕಥೆಯನ್ನು ಸಮಕಾಲೀನ ದೃಷ್ಟಿಯಿಂದ ನೋಡುವ ಆಧುನಿಕ ಆಕರ್ಷಕ ಪ್ರಯೋಗವೆನಿಸಿ, ಸದಾನಂದ ಸುವರ್ಣ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಮುಂದೆಯೂ ಇದು ಆರು ಪ್ರದರ್ಶನಗಳಲ್ಲಿ ಜನಮನ್ನಣೆ ಗಳಿಸಿತು.

ಶ್ರೀ ಚಂದ್ರಹಾಸ ಸುವರ್ಣರಂಥ ಇನ್ನಿತರರ ನಿರ್ದೇಶನದಲ್ಲಿ ಮುಂಬಯಿಯಲ್ಲೂ, ಅಂತೆಯೇ ತುಳುನಾಡಿನಲ್ಲೂ ಮೊದಲು ಪುತ್ತೂರಿನಲ್ಲಿ ತೊಡಗಿ ಬಳಿಕ ರಂಗಭೂಮಿ (ರಿ). ಉಡುಪಿ, ಡಾ. ಮೋಹನ ಆಳ್ವ ಮುಂತಾದವರಿಂದ ಮುಂದುವರಿದು 'ಗೋಂದೋಳು' ಪ್ರದರ್ಶನಕ್ಕೆ ಬರುತ್ತಲೇ ಇದೆ. ಅಮೃತರು ಅನಂತರ ರಾಯರಾವುತೆ (82), ಪುತ್ತೂರ್ದ ಪುತ್ತೂಳಿ(84), ತುಳುನಾಡ ಕಲ್ಕುಡೆ, ಮಾಯೊಗು ಸಂದಿನ ಮದನಗ, ಬೀರ ಸಿರಿತ ದೇವು ಪೂಂಜೆ, ಪ್ರೇಮಪ್ರಸಾದ, ಕಲಾವಿದನ ಉತ್ತರಾಯಣೊ (1990, 'ಗೋಂದೊಳು' ಸೇರಿದಂತೆ ಇವಿಷ್ಟು ಪ್ರಕಟಿತ); 2000ನೇ ಇಸವಿಯಲ್ಲಿ ಬಿ.ವಿ.ಕಾರಂತರು ನಿರ್ದೇಶಿಸಿದ 'ಕೊಡಿಮರ' ('ಅಭಿವ್ಯಕ್ತ' ತಂಡ) ಹಾಗೂ 'ಏಳ್ವೆರ್ ದೆಯ್ಯಾರ್' ಸತ್ಯನಾಪುರತ ಸಿರಿ ಮುಂತಾಗಿ ಹಲವು ನಾಟಕ, ರೂಪಕಗಳನ್ನು ರಚಿಸಿದ್ದಾರೆ. (ಈ ವೇಳೆಗೆ ಅಮೃತರ ಏಳು ನಾಟಕಗಳ 'ತುಳು ನಾಟಕ ಸಂಪುಟ' ಪ್ರಕಟವಾಗಿದೆ.

1994ರಲ್ಲಿ ಮಂಗಳೂರಿನಲ್ಲಿ ವಿಶ್ವತುಳು ಸಮ್ಮೇಳನಕ್ಕೆ ಪೂರ್ವಭಾವೀ ಸಾಂಸ್ಕೃತಿಕ ಕಾರ್ಯಕ್ರಮವಾಗಿ ಪುರಭವನದಲ್ಲಿ ನಾಟಕ ಸಪ್ತಾಹ ನಡೆಯಿತು. ತುಳುನಾಡ ಸಂಸ್ಕೃತಿಯನ್ನು ಬಿಂಬಿಸುವ ಕೆಲವು ನಾಟಕಗಳ ಜೊತೆಗೆ, ಆ ದಿನಗಳಲ್ಲಿ ಜನರಂಜನೆ ಗಳಿಸಿದ ಕೆಲವು ನಾಟಕಗಳೂ ಪ್ರದರ್ಶಿತವಾದವು.

'ಪ್ರಸಾಧನ ಮಂಗಳೂರು' ತಂಡದಿಂದ ರಾಮಚಂದರ್ ಬೈಕಂಪಾಡಿಯವರ 'ನಿನ್ನ ಮೋಕೆದಾ' (ನಿರ್ದೇಶನ : ಕಾಸರಗೋಡು ಚಿನ್ನಾ), ಮಧೂರಿನ ತರುಣ



ಮುಂಬಯಿಯಲ್ಲಿ ನೂತನ ಪರಿಕಲ್ಪನೆಯಲ್ಲಿ 'ಗೋಂದೋಳು' ಪ್ರಯೋಗ. ರಚನೆ : ಅಮೃತ ಸೋಮೇಶ್ವರ, ನಿರ್ದೇಶನ, ಸಂಗೀತ ಮತ್ತು ಬೆಳಕು ಸಂಯೋಜನೆ : ಸದಾನಂದ ಸುವರ್ಣ ಚಿತ್ರದಲ್ಲಿ ಸಾಯಿ ಬಲ್ಲಾಳ್ (ಕಾಂತು), ಚಂದ್ರಾವತಿ (ದೇಬೆ) ಸೈಡ್‌ವಿಂಗ್‌ನಲ್ಲಿ ಹಿನ್ನೆಲೆ ಸಂಗೀತ (ಪಾಡ್ದನ ಗಾಯನ) ಸದಾನಂದ ಸುವರ್ಣ – 2002

ಕಲಾವೃಂದದವರ 'ಹುಭಾಶಿಕ' (ರಚನೆ : ವಿಠಲ ಗಟ್ಟಿ ಉಳಿಯ; ನಿ: ನೀನಾಸಂ ಪದವೀಧರ ಮುರಹರಿ), ಕಾಸರಗೋಡು ಗಡಿನಾಡ ಕಲಾವಿದರ 'ಏರ್ ತೂಯಿನಿ?' (ರಚನೆ : ಜಗನ್ ಪವಾರ್ ಬೇಕಲ್, ನಿ: ಸುಕುಮಾರ ಕಣ್ಣನ್) ಉಡುಪಿ ರಂಗಭೂಮಿ ಕಲಾವಿದರ 'ಗುವೆಲ್ ಕಳವಾತ್‌ಂಡ್ (ರಚನೆ : ಕೆ. ಆನಂದ ಗಾಣಿಗ), ತೋನ್ಸೆ ಟ್ಯೂನ್ಸ್ ಕೆಮ್ಮಣ್ಣು ಅವರ 'ಊರ್ದ ಮಾರಿ' (ರಚನೆ : ವಿಜಯಕುಮಾರ್ ಶೆಟ್ಟಿ, ಕೆಮ್ಮಣ್ಣು, ನಿ : ಭಾಸ್ಕರ ಕಾಂಚನ್) ಮಂಗಳೂರಿನ ಕಾಳಿಕಾ ಕಲಾವಿದರು ಪ್ರದರ್ಶಿಸಿದ 'ತುಳುನಾಡ ಕಲ್ಕುಡೆ' (ರಚನೆ : ಅಮೃತ ಸೋಮೇಶ್ವರ), ಮಲ್ಲಿಕಾ ಕಲಾವೃಂದ ಕದ್ರಿ ಇವರ 'ಗೊಂದೋಳು' (ರಚನೆ : ಅಮೃತ ಸೋಮೇಶ್ವರ) ಇತ್ಯಾದಿ ನಾಟಕಗಳನ್ನು ಆ ಸಪ್ತಾಹದಲ್ಲಿ ಪ್ರದರ್ಶಿಸಲಾಗಿತ್ತು. ಹಲವು ಕೊರತೆಗಳನ್ನು ಎತ್ತಿ ತೋರಿಸುವಲ್ಲಿ ಎಂತೋ, ಹಲವು ನೂತನ ಸಾಧ್ಯತೆಗಳನ್ನು ತೋರ್ಪಡಿಸುವಲ್ಲಿ ಈ ಸಪ್ತಾಹ ಪರಿಣಾಮ ಬೀರಿತು. ಕೆಲವು ಹೊಸ ನಟರು – ಮುಖ್ಯವಾಗಿ 'ಊರ್ದ ಮಾರಿ'ಯಂತಹ ನಾಟಕದ ಮೂಲಕ ಬೆಳಕಿಗೆ ಬಂದರು. ರಂಗವಿನ್ಯಾಸ, ಬೆಳಕು, ಮತ್ತಿತರ ಹಲವು ಹೊಸ ಆಯಾಮಗಳನ್ನು ಇಲ್ಲಿ ಪ್ರೇಕ್ಷಕರು ಗಮನಿಸಿದರು.

**ನವ್ಯ ಕ್ರಾಂತಿಯ ಮನು ಇಡ್ಯಾ (1948)**

ತುಳುವಿಗೆ ಕ್ರಾಂತಿಕಾರಕ ನವ್ಯ ನಾಟಕಗಳನ್ನು ನೀಡಿ, ಮತ್ತಿಷ್ಟು ಹೊಸ ರೂಪ ನೀಡಿದ್ದು ಮನು ಇಡ್ಯ (ಜನಾರ್ದನ ಸಾಲ್ಯಾನ್, ಸುರತ್ಕಲ್)ರ ನಾಟಕಗಳು 'ಪಲ್ಲೆಂಕಿ',



ಮಂಗಳೂರಿನಲ್ಲಿ ರಥಬೀದಿಯ ಕಾಳಿಕಾಂಬಾ ಕಲಾವಿದರು ಪ್ರದರ್ಶಿಸಿದ ಗೋಂದೋಳು ನಾಟಕದ ದೃಶ್ಯ. ಜನಾರ್ದನ ಬೈಕಾಡಿ (ಕಾಂತು), ರತ್ನಾವತಿ ಬೈಕಾಡಿ (ದೇಬೆ), 1991
ರಚನೆ : ಅಮೃತ ಸೋಮೇಶ್ವರ, ನಿರ್ದೇಶನ : ಜನಾರ್ದನ ಬೈಕಾಡಿ

‘ಅಮಾಸೆ’, ‘ನನ ಉಚ್ಚಯ’, ‘ಬಲಿ’, ‘ಮಾರಿ ಗಿಡಲುಪೆ’, ‘ತಿರ್ಸಂಕು’ – ಈ ಆರೂ ನಾಟಕಗಳಲ್ಲಿ ಹರಿತ ಭಾಷೆಯ ಸಂಭಾಷಣೆ, ಪರಂಪರೆಗೆ ಸಡ್ಡು ಹೊಡೆಯುವ ತೀಕ್ಷ್ಣಕಥಾಹಂದರವಿದೆ. ಕಾವ್ಯಮಯ ಭಾಷೆ, ಚುರುಕಾದ ಸಂಭಾಷಣೆ, ಬಂಡಾಯಧ್ವನಿ – ಮನು ಅರ ನಾಟಕಗಳ ವೈಶಿಷ್ಟ್ಯ. 1975ರಲ್ಲೇ ಬರೆದಿದ್ದ ‘ತಿರ್ಸಂಕು’ ಮತ್ತು ‘ಬಲಿ’ ನಾಟಕಗಳೆರಡು 1992ರಲ್ಲಿ ಪ್ರಕಟವಾಗಿದೆ. ಅವರದೇ ಆದ ‘ಸಿಂಗಾರ’ ಸುರತ್ಕಲ್ ತಂಡ, ಸ್ಪರ್ಧೆಗಳಲ್ಲಿ ಪಾಲ್ಗೊಂಡು ಪುರಸ್ಕೃತವಾಗಿವೆ.

ಇಡ್ಯಾ ವಿದ್ಯಾದಾಯಿನಿ ಪ್ರೌಢಶಾಲೆಯಲ್ಲಿ 11ನೇ ತರಗತಿ ಓದಿದ ಜನಾರ್ದನ ಪಿ. ಸಾಲಿಯಾನ್ ಆರಂಭದಲ್ಲಿ ಇಡ್ಯಾ ಶ್ರೀ ನಾರಾಯಣ ಗುರು ಕಲಾಮಂಡಳಿಯಲ್ಲಿ ಸಕ್ರಿಯರಾಗಿದ್ದು ಯಕ್ಷಗಾನ ಅರ್ಥಧಾರಿ, ವೇಷಧಾರಿಯಾಗಿ ಋತುಪರ್ಣನಂತಹ ಪಾತ್ರ ಮಾಡಿದವರು.

1971ರಲ್ಲಿ ಸಂಜೀವ ದಂಡೆಕೇರಿಯವರ ‘ಬೊಳ್ಳಿ ಮೂಡುಂಡು’ ಮೂಲಕ ನಾಯಕನಟನಾಗಿ ನಾಟಕ ರಂಗಕ್ಕೆ ರಂಗಪ್ರವೇಶ ಮಾಡಿದರು. ಆಗಲೇ ತುಳುನಾಟಕಗಳಿಗೆ ಗೀತರಚನೆಗೂ ತೊಡಗಿದರು. 1973ರಲ್ಲಿ ಡಾ. ಬಾಲಕೃಷ್ಣ ಮುದ್ಯರ ‘ಬದ್ಕೊಡಾ ಸಯ್ಯೊಡಾ’ ನಾಟಕದಲ್ಲಿ ನಟನೆಯೊಂದಿಗೆ ನಿರ್ದೇಶನವನ್ನೂ ಆರಂಭಿಸಿದರು. ಗೋವಿಂದದಾಸ ಕಾಲೇಜಿನ ಶ್ರೀ ಜಿ.ಕೆ. ರಾವ್ ತನ್ನನ್ನು ತುಂಬ ಪ್ರೋತ್ಸಾಹಿಸಿದವರು ಎನ್ನುತ್ತಾರೆ ಮನು ಇಡ್ಯಾ.

1973ರಲ್ಲಿ ರಚಿಸಿದ ಪ್ರಥಮ ನಾಟಕ ‘ಏರ್ನ ಬೊಡೆದಿ’. ಇದರ ಸಾಹಿತ್ಯ, ದಿಗ್ದರ್ಶನ ಮತ್ತು ಪ್ರಧಾನ ಪಾತ್ರವನ್ನೂ, ನಿರ್ವಹಿಸಿದರು. ಈ ನಾಟಕ ಮೂಲ್ಕಿಯ ಬಿಲ್ಲವ ಸಂಘದಲ್ಲಿ ಅಭೂತಪೂರ್ವ ಯಶಸ್ಸು ಕಂಡು, ವಿನೂತನ ಪ್ರಯೋಗ ಎಂಬ ಪ್ರಶಂಸೆಗೆ

**ಮನು ಇಡ್ಯಾ ರಚಿಸಿ ನಿರ್ದೇಶಿಸಿದ ತುಳು ನಾಟಕ ‘ಬಲಿ’. ತಂಡ : ಸಿಂಗಾರ ಸುರತ್ಕಲ್. ಬಲಿಯ ಪಾತ್ರದಲ್ಲಿ ಮನು ಇಡ್ಯಾ. ಪ್ರದರ್ಶನ : ಮಂಗಳೂರು, 1985**

ಪಾತ್ರವಾದ ಮೇಲೆ ಮನು ಇಡ್ಯರು ಹೊರಳಿದ್ದು ನವೀನ ಕಥಾವಸ್ತುಗಳತ್ತ, ಹಾಗೆ ಅವರಿಂದ ಸೃಷ್ಟಿಗೊಂಡದ್ದೇ 1974ರ 'ತಿರ್ಸಂಕು'. ಹಳೆಯಂಗಡಿಯಲ್ಲಿ 1979ರ ಜಿಲ್ಲಾ ಮಟ್ಟದ ನಾಟಕ ಸ್ಪರ್ಧೆಯಲ್ಲಿ ನಿರ್ದೇಶನ, ನಟನೆಗೆ ದ್ವಿತೀಯ ಬಹುಮಾನ, ಮಂಗಳೂರು ತುಳುಕೂಟ 1985ರಲ್ಲಿ ಏರ್ಪಡಿಸಿದ ಜಿಲ್ಲಾಮಟ್ಟದ ತುಳುನಾಟಕ ಸ್ಪರ್ಧೆಯಲ್ಲಿ 'ತಿರ್ಸಂಕು' ಪ್ರಮುಖ ಒಂಭತ್ತು ಪ್ರಶಸ್ತಿಗಳನ್ನು ಗೆದ್ದುಕೊಂಡಿತು.

1975ರಲ್ಲಿ ಶಿಮುಂಜೆ ಪರಾರಿಯವರ 'ಯಾರು ನನ್ನವರು' (ಮೂಲ ಮರಾಠಿ) ನಾಟಕವನ್ನು 'ಸೊರಗೆ ಸೆಂಪಯಿ' ಎಂಬುದಾಗಿ ತುಳುವಿಗೆ ಅನುವಾದಿಸಿದರು. ಈ ಪ್ರಯೋಗದ ದಿಗ್ದರ್ಶಕ, ನಾಯಕನಟ, ಗೀತರಚನಾಕಾರ ಇಡ್ಯರೇ. 1976ರಲ್ಲಿ ಮಂಗಳಾ ಸತ್ಯನ್‌ರ 'ಮುಗ್ಧ ಮಾನವ' ಕನ್ನಡ ಕಾದಂಬರಿಯನ್ನು 'ತಾಂಗ್‌ನಕ್‌ಲ್' ತುಳುನಾಟಕವಾಗಿ, ನಟನೆ, ದಿಗ್ದರ್ಶನ, ಗೀತರಚನೆ, 1977ರಲ್ಲಿ 'ಗಂಧದ ಕೊದಡ್' ನಾಟಕ ರಚನೆ, ನಾಯಕನಟ, ದಿಗ್ದರ್ಶನ, ಗೀತರಚನೆ. 1978ರಲ್ಲಿ ಕೆ.ಎನ್. ಟೇಲರ್‌ರ 'ಕಲ್ಲ್‌ದ ದೇವೆರ್' ನಾಟಕದ ನಿರ್ದೇಶನ, ನಾಯಕ ನಟ ಮತ್ತು ಹಾಸ್ಯಪಾತ್ರಗಳೆರಡರಲ್ಲಿ ಯಶಸ್ವಿಯಾದುದು. ಮಂಗಳೂರು ಆಕಾಶವಾಣಿಯಲ್ಲಿ 'ಮಣ್ಣಿ ಮದೆ' ಎಂಬ ನಾಟಕ ಪ್ರಸ್ತುತಪಡಿಸಿ ಶ್ರೋತೃಗಳ ಮೆಚ್ಚುಗೆ ಗಳಿಸಿದ್ದರು.

1980ರಲ್ಲಿ ತುಳುಕೂಟದ ರತ್ನವರ್ಮ ಹೆಗ್ಗಡೆ ಸ್ಮಾರಕ ತುಳುನಾಟಕ ಕೃತಿ ರಚನಾ ಸ್ಪರ್ಧೆಯಲ್ಲಿ ಇವರ 'ಪಲ್ಲೆಂಕಿ' ನಾಟಕಕ್ಕೆ ಪ್ರಥಮ ಪ್ರಶಸ್ತಿ ಒಲಿಯಿತು.

### ಕುದ್ಕಾಡಿ ವಿಶ್ವನಾಥ ರೈ (1930–2018)

ಎಂಬತ್ತರ ದಶಕದಲ್ಲಿ ಬೆಂಗಳೂರು ತುಳುಕೂಟವು ಕುದ್ಕಾಡಿ ವಿಶ್ವನಾಥ ರೈಯವರ 'ಸಂಕ್ರಾಂತಿ'ಯನ್ನು ಬಹುಮಾನ ನೀಡಿ ಪ್ರಕಟಿಸಿತು (1981). ಇವರ ಇತರ ಜನಪದ ನಾಟಕಗಳು ಮಂಜತ ಕಾಪಡೆ – ಸತ್ಯೊಮ್ಮ ದೈಯ್ಯಾರ್ (83), 'ಅಬ್ಬಕ್ಕಬ್ಬೆ' (87). ಕೆಲವು ಗೀತನಾಟಕಗಳನ್ನು ರಚಿಸಿ ಪ್ರದರ್ಶಿಸಿದ್ದಾರೆ. ಅಮೃತರಂತೆಯೇ ಕುದ್ಕಾಡಿಯವರ ನಾಟಕಗಳ ಭಾಷೆ ಪ್ರೌಢ, ಕಾವ್ಯಮಯ; ಮುಂಡಾಸಿನವರೂ ಮುಟ್ಟಾಳೆಯವರೂ ಸಹಬಾಳ್ವೆ ನಡೆಸಬೇಕೆಂಬ ಆಶಯದ ಕಥಾವಸ್ತು. 'ಮಂಜತ ಕಾಪಡೆ' ತೊಂಭತ್ತರ ದಶಕದಲ್ಲಿ ಉಡುಪಿ ಎಂ.ಜಿ.ಎಂ. ಕಾಲೇಜಿನಲ್ಲಿ ಪ್ರಯೋಗವಾದಾಗ ಕುದ್ಕಾಡಿ ವಿಶ್ವನಾಥ ರೈ, ಡಾ. ಯು.ಪಿ. ಉಪಾಧ್ಯಾಯ, ಡಾ. ಸುಶೀಲಾ ಉಪಾಧ್ಯಾಯ ನಟರಾಗಿ ಅಭಿನಯಿಸಿದ್ದರು.

ತುಳುವಲ್ಲಿ ಪ್ರಬುದ್ಧ ನಾಟಕಗಳ ಪ್ರದರ್ಶನಕ್ಕೆ ವಿಪುಲ ಅವಕಾಶಗಳಿವೆ, ಪ್ರೇಕ್ಷಕರು ಒಂದಿಷ್ಟು ಮುಂಗಾಣ್ಕೆಯ ಕೃತಿಗಳನ್ನು ನಿರೀಕ್ಷಿಸುತ್ತಾರೆ ಎಂಬುದನ್ನು ಗಮನಿಸಿದ ನಾಟಕಕಾರರು, ನಿರ್ದೇಶಕರೂ ಈ ದಿಸೆಯಲ್ಲಿ ಪ್ರಯತ್ನಶೀಲರಾದರು. ಒಂದು ಬದಿಯಲ್ಲಿ ನಗೆನಾಟಕಗಳು ಭರಾಟೆಯಿಂದ ಚಲಾವಣೆಯಲ್ಲಿದ್ದರೆ ಇನ್ನೊಂದೆಡೆ ನಾಟಕವನ್ನು ಕಲೆಯಾಗಿ, ಶಿಕ್ಷಣವಾಗಿ, ಸಮಾಜದ ಕನ್ನಡಿಯಾಗಿ ತೋರಿಸಬೇಕೆಂಬ ಪ್ರಯೋಗ ಹೆಚ್ಚತೊಡಗಿತು.

ಉಡುಪಿ ರಂಗಭೂಮಿಯ ಶ್ರೀ ಕೆ. ಆನಂದ ಗಾಣಿಗರ 'ಗುವೆಲ್ ಕಳವಾತ್'ಂಡ್ (15 ಪ್ರದರ್ಶನ) 'ಮಾರಿ ದೇರೂಂಡು', ಪ್ರಕಾಶ್ ನ್ಯಾಕ್ ಅವರ 'ಕರಿಯನ ಕೋಲ', 'ಬಾಡಾಯಿದ ಇಲ್ಲ್', ಈಶ್ವರ ಚಿಟ್ಪಾಡಿಯವರ 'ದೊಂಬನ ಪರಕೆ', ಕ್ಯಾಥರಿನ್ ರೊಡ್ರಿಗಸ್‌ರ 'ಕೇದಗ', ಸುದೇಶ್‌ರಾವ್ ಮಣಿಪಾಲರ 'ಅಂಗಾರೆ', ತೋನ್ಸೆ ವಿಜಯಕುಮಾರ್ ಶೆಟ್ಟರ, 'ಊರ್ದಮಾರಿ', ನಾರಾಯಣ ಶೆಟ್ಟಿ ನಂದಳಿಕೆಯವರ 'ಬೊಜ್ಜ', ಗಣೇಶ ಅಮೀನ್ ಸಂಕಮಾರ್ 'ಮಾಯದ ಕಾಯಿ' ಮುಂತಾದ ನಾಟಕಗಳು ಸಿದ್ಧವಾಗಿ ಅಲ್ಲಿ ಇಲ್ಲಿ ಪ್ರಯೋಗಕ್ಕೆ ಬಂದವು. ಎ. ಶಿವಾನಂದ ಕರ್ಕೇರರ ಕಾಲಚಕ್ರ, 'ಎರುಮೈಂದೆ', ಕಟಪಾಡಿ ಶಂಕರ ಪೂಜಾರಿಯವರ 'ದೇವೆರ್ ಎನ್ನ ಉಲ್ಲಾಯೆ', ಉದ್ಯಾವರ ನಾಗೇಶ್ ಕುಮಾರರ 'ಬೋಂಟೆ'– ಟಿ.ಎ.ಎನ್. ಖಂಡಿಗೆ ಅವರ 'ತಿರ್ಗಾಸ್', ವಿಠಲ ಗಟ್ಟಿಯವರ 'ಹುಬಾಶಿಕಾ' – ಮುಂತಾದವು ತೊಂಭತ್ತರ ದಶಕದಲ್ಲಿ ಬರತೊಡಗಿ ಪ್ರೇಕ್ಷಕರನ್ನು ಸೆಳೆದ ನಾಟಕಗಳು (ಮುಂಬಯಿಯ ನಾಟಕಗಳ ವಿವರ ಪ್ರತ್ಯೇಕವಾಗಿ ನೀಡಲಾಗಿದೆ).

ಮಂಗಳೂರಿನಲ್ಲಿ ಮೊದಲು ಅಸ್ತಿತ್ವಕ್ಕೆ ಬಂದ 'ಭೂಮಿಕಾ', 'ಆಯನ', 'ಅನಂತರ ಅಭಿವ್ಯಕ್ತ' – ಮತ್ತಿತರ ಹವ್ಯಾಸಿ ತಂಡಗಳು, ಉಡುಪಿಯ ರಂಗಭೂಮಿ, ವಿಟ್ಲ, ಪುತ್ತೂರು, ಸುಳ್ಯ, ಮುಂಬಯಿ – ಮೊದಲಾದೆಡೆ ಹಲವು ಪ್ರತಿಭಾವಂತರು ತುಳು ನಾಟಕಗಳ ಆಧುನಿಕ ಪ್ರಯೋಗಶೀಲತೆಯಲ್ಲಿ ಪಾಲ್ಗೊಂಡರು.

ಮನು ಇಡ್ಯರು ಹಾಕಿಕೊಟ್ಟ ಮಾದರಿ ಫಲಿಸಿತು. **ಕೃಷ್ಣಪ್ಪ ಉಪ್ಪೂರರು** ಮೊದಲು 'ಗುಂಪುಡೊರಿ ಗೋವಿಂದೆ' ರಚಿಸಿ, ರಂಗಕ್ಕೆ ತಂದರು. ಅವರದೇ ರಚನೆ, ನಿರ್ದೇಶನದ 'ನಂಬುಲೆ, ನಂಬಾದ್ ಕೊರ್ಪೆ' ಸಂಕೀರ್ಣ ಜನಪದ ನಾಟಕ 89ರಲ್ಲಿ ಪ್ರಯೋಗವಾದ ಉತ್ತಮ ನಾಟಕವೆಂಬ ಶ್ಲಾಘನೆಗೆ ಪಾತ್ರವಾಯಿತು. ಮುಂದೆ ಅವರು ಮೀನುಗಾರರ ಬದುಕಿನ ಚಿತ್ರಣವಿರುವ 'ಹೌಂದ್ರಾಯನ ವಾಲಗ' ನಾಟಕ ಬರೆದರು. ತುಳುವಿನಲ್ಲಿ ಅದನ್ನು 'ಮಾರಿ ಬಲೆ' ಎಂಬುದಾಗಿ ಸಿನಿಮಾ ಮಾಡಿದರು. ಈಚೆಗೆ 'ಗುರ್ಬಿ'ಯಂತಹ ಕಲಾತ್ಮಕ ಚಿತ್ರ ಪ್ರಯೋಗವನ್ನೂ ಮಾಡಿದರು.

### ಮನು ಇಡ್ಯರ ನಾಟಕ 'ಬಲಿ'

ಈ ನಾಟಕದಲ್ಲಿ ನಾಟಕಕಾರರು ಬಲಿಯ ಪುರಾಣದ ಕತೆಯನ್ನು ಸಾಂಕೇತಿಕವಾಗಿ ಸ್ವಲ್ಪಾಂಶ ಬಳಸಿಕೊಂಡು ಉಳಿದಂತೆ ಅದಕ್ಕೆ ಅನ್ವಯಿಸುವಂತೆ ಯತಾರ್ಥದ ವರ್ತಮಾನ ಬದುಕನ್ನು ನಾಟಕದಲ್ಲಿ ತಂದಿದ್ದಾರೆ. ಸಮಾಜದಲ್ಲಿರುವ 'ಮಿತ್ತ ಪಂತೆ–ತಿರ್ತ ಪಂತೆ' (ಜಾತೀಯ ಶ್ರೇಣೀಕರಣದ) ಮತ್ತು ಹಗೆ ಸಾಧನೆ – ಈ ಧೋರಣೆಯ ಪ್ರತಿಭಟಣೆ

ಪ್ರತಿಕ್ರಿಯೆಯೊಂದಿಗೆ ಸಶಕ್ತ ಭಾಷಾ ಸೌಂದರ್ಯದ ಸಂಭಾಷಣೆ, ದೃಶ್ಯ ಸಂಯೋಜನೆಗಳು, ವಾಸ್ತವಿಕ ಅಂತ್ಯ ಈ ನಾಟಕವು ಪರಿಣಾಮಕಾರಿ ಸಾಂಕೇತಿಕ ನಾಟಕವಾಗಿ ನವ್ಯ ಚಿಂತನೆಯನ್ನು ಬಿತ್ತಿ ಕಾಡುವ ಕಥಾಹಂದರದಿಂದ ಬಿಗುವಾಗಿ ಸಾಗುತ್ತದೆ.

ಮೋಹನಚಂದ್ರರ 'ಪೆದಂಬು' (97) ಸಮಕಾಲೀನ ತುಳು ರಂಗಭೂಮಿಯನ್ನು ಮತ್ತಷ್ಟು ಗಾಂಭೀರ್ಯದತ್ತ ಏರಿಸಿದ ನಾಟಕ. ನಾಟಕಕಾರ ತನ್ನ ಕಲ್ಪನೆಯ ವಸ್ತುವನ್ನು ರಂಗಕರ್ಮಿಗಳ ಜತೆ ಕೂತು ಚರ್ಚಿಸಿ ಒಂದು ಕಥಾಹಂದರ ಹೊಂದಿಸಿ, ಪ್ರದರ್ಶಿಸಿದರು. ಮತ್ತೆ ಪರಿಷ್ಕರಿಸಿ ಸಿದ್ಧಪಡಿಸಿದ ಈ ಅಸಂಗತ ನಾಟಕ, 'ಅಭಿವ್ಯಕ್ತ' ತಂಡದಿಂದ ಮಂಗಳೂರಿನಲ್ಲಿ ಪ್ರದರ್ಶನಗೊಂಡು, ನಾಟಕಾಸಕ್ತರಿಗೆ ಕುತೂಹಲ ಹುಟ್ಟಿಸಿತು.

ಅದೇ ವರ್ಷ ಸುಳ್ಯದ 'ಪರಿವಾರ ರಂಗ'ದ ತಾಲೀಮಿನಲ್ಲಿ ಸೃಷ್ಟಿಯಾದ ಅಸುದ್ದೊ' (ಮೂಲಕಥೆ : ಪ್ರಭಾಕರ ಶಿಶಿಲರ 'ಬಾರಣೆ' : ನಾಟಕ ರೂಪಾಂತರ : ಜನಾರ್ದನ ಕಣಕ್ಕೂರು; ನಿ : ಜೀವನ್‌ರಾಂ ಸುಳ್ಯ, ಬಾಸುಮ ಕೊಡಗು) ಉತ್ಕೃಷ್ಟ ಪರಿಣಾಮ ಬೀರಿತು. ಸಾಂಸ್ಕೃತಿಕ ದಾಳಿಯಿಂದಾಗಿ (ಭೂತ ಕಟ್ಟುವ ಕಾಯಕದ) ದಲಿತರ ಬದುಕಿಗಾಗುವವ ಶೋಷಣೆ, 'ಅಸುದ್ದೊ' (ಅಶುದ್ಧ) ಎನ್ನುವ ಪರಿಕಲ್ಪನೆಯನ್ನೇ ಹೇಗೆ ಅವರ ಬಾಳಿಗೆ ಅಸ್ತ್ರವಾಗಿ ಪ್ರಯೋಗಿಸಲಾಗುತ್ತದೆ ಎಂಬುದನ್ನು ಪರಿಣಾಮಕಾರಿಯಾಗಿ ತೋರಿಸಿದ ರಂಗಕೃತಿಯಿದು.

ಪರಿವಾರರಂಗ ಸುಳ್ಯ, ಮಕ್ಕಳ ಧ್ವನಿ ಮುಂತಾದ ತಂಡಗಳ ಮೂಲಕ ಮೈಮ್ ರಮೇಶ್, ಗೋಪಾಡ್ಕರ್, ಶೀನಾ ನಾಡೋಳಿ ಮುಂತಾದ ಹಲವು ಪ್ರತಿಭಾಶಾಲಿ ಶಿಕ್ಷಕರು, ರಂಗಕರ್ಮಿಗಳು, ಮಕ್ಕಳ ರಂಗ ತರಬೇತಿಗಾಗಿ ತುಳುವಿನಲ್ಲೂ ದುಡಿದಿದ್ದಾರೆ. ಕಾಸರಗೋಡು ಚಿನ್ನಾ ಅವರ 'ಲಾರಿನಾಟಕ' ಪ್ರಯೋಗದಲ್ಲಿ ತುಳುನಾಟಕಗಳೂ ಒಳಗೊಂಡವು. ಬೆಂಗಳೂರು, ಧಾರವಾಡ, ಕೇರಳ ರಾಷ್ಟ್ರೀಯ ನಾಟಕೋತ್ಸವಗಳಲ್ಲಿ ತುಳುವಿನ 'ಪಿಲಿಪತ್ತಿ ಗಡಸ್'ನಂತಹ ನಾಟಕಗಳು ಪ್ರದರ್ಶಿಸಲ್ಪಟ್ಟು, ತುಳುವಿನ ಹಲವು ರಂಗಕರ್ಮಿಗಳು ರಾಜ್ಯನಾಟಕ ಅಕಾಡೆಮಿಯ ಮನ್ನಣೆಯನ್ನು ಗಳಿಸಿದ್ದಾರೆ.

ತುಳುವಿನ ಪ್ರಾದೇಶಿಕ ವೈಶಿಷ್ಟ್ಯವನ್ನು, ಜಾಗತೀಕರಣ, ಉದಾರೀಕರಣದಿಂದಾಗಿ ಪರಿಣಮಿಸಿದ ಸಾಂಸ್ಕೃತಿಕ ಆಕ್ರಮಣವನ್ನು, ಜಾತೀಯ ವ್ಯವಸ್ಥೆಯ ಕ್ರೌರ್ಯವನ್ನು ಅನಾವರಣಗೊಳಿಸುವ ಹಲವು ಗಂಭೀರ ನಾಟಕಗಳು ವಿವಿಧ ಸಂದರ್ಭಗಳಲ್ಲಿ ಪ್ರಯೋಗಕ್ಕೆ ಬಂದವು. ಗುಡ್ಡೆದ ಭೂತ, ಗೋಂದೋಳು, ಬಲಿ, ತಿರ್ಸಂಕು, ಮಾರಿ ಗಿಡಪುಲೆ, ಪಿಲಿಪತ್ತಿ ಗಡಸ್‌ನಂತಹ ನಾಟಕಗಳು ನಾಟಕಕಾರರಲ್ಲೂ, ನಿರ್ದೇಶಕ, ನಟ, ಪ್ರೇಕ್ಷಕರಲ್ಲೂ ಹೊಸ ಕ್ಷಿತಿಜಗಳನ್ನು, ವೈಚಾರಿಕ ತುಡಿತಗಳನ್ನು ತೋರಿಸಿಕೊಟ್ಟ ಮೇಲೆ ತುಳುರಂಗಭೂಮಿ ನೂತನ ಆಯಾಮಗಳೊಂದಿಗೆ ಕಾಣಿಸಿಕೊಳ್ಳುವ ಗಟ್ಟಿ ಪ್ರಯತ್ನ ಕೆಲವರಿಂದಾದರೂ ನಡೆಯಿತು. ಮೋಹನ ಸೋನ, ಮೋಹನಚಂದ್ರ, ಎಂ.ಸಿ. ರಾಮು, ಐ.ಕೆ. ಬೊಳುವಾರು, ಕೃಷ್ಣಪ್ಪ ಉಪ್ಪೂರು, ಚಿನ್ನಾ ಕಾಸರಗೋಡು, ಸುರೇಶ್ ಆನಗಳ್ಳಿ, ಜೀವನ್‌ರಾಂ ಸುಳ್ಯ, ಕೃಷ್ಣಮೂರ್ತಿ ಕವತ್ತಾರು, ಜಗನ್ ಪವಾರ್,

ಶೀನಾ ನಾಡೊಳಿ, ಬಾಸುಮ ಕೊಡಗು ಮುಂತಾದ ಪ್ರತಿಭಾವಂತ ರಂಗ ನಿರ್ದೇಶಕರ ಕೈಯಲ್ಲಿ ತುಳುನಾಟಕಗಳು ಆಧುನಿಕ ರಂಗಕೃತಿಗಳಾದವು. ಬಸ್ತಿ ಮುಂತಾದ ಅನುವಾದ ನಾಟಕಗಳ ಬಳಿಕ ಬಲಿ ತಿರ್ಸಂಕು, ನಂಬುಲೆ ನಂಬಾದ್ ಕೊರ್ಪೆ, ಅಸುದ್ದೊ, ಒಯ್ಲ್‌ಗ್ ತಿಕ್ಕಿನಕ್ಲು ಗುವೆಲ್ ಕಳವಾತ್‌ಂಡ್, ಬೊಜ್ಜ, ಊರೇ ಗತಿ, ಗಾಲ, ಕತ್ತಲೆದ ತಾದಿ, ಪಿಲಿಪತ್ತಿ ಗಡಸ್ ಮುಂತಾದ ನಾಟಕಗಳು ಪರಿಣಾಮಕಾರಿ ಪ್ರಯೋಗಗಳಾಗಿ ಸ್ಪರ್ಧೆಗಳ ಪ್ರದರ್ಶನಗಳಲ್ಲಿ ಪ್ರೇಕ್ಷಕರ ಸಮುದಾಯವನ್ನು ತಟ್ಟಿದವು. ಹವ್ಯಾಸಿ ನೆಲೆಯಲ್ಲಿ ಗಮನೀಯ ಪ್ರಗತಿಯಾಯಿತು. ಸ್ಪರ್ಧೆಗಳಷ್ಟೇ ಅಲ್ಲದೆ ಬಂಟ್ವಾಳ, ಉದ್ಯಾವರ ಮುಂತಾದೆಡೆಯ ನಾಟಕೋತ್ಸವಗಳು ಇತ್ತೀಚೆಗೆ (2018) ತುಳು ಅಕಾಡೆಮಿ ಮಂಗಳೂರಿನಲ್ಲಿ ಏರ್ಪಡಿಸಿದ ತುಳುನಾಟಕೋತ್ಸವ ಇವೆಲ್ಲ ತುಳುರಂಗಭೂಮಿಗೆ ಚೇತರಿಕೆ ನೀಡಿವೆ. ಆದರೆ ವೇಗವಾಗಿ ಬದಲಾಗುತ್ತಿರುವ ಜೀವನಶೈಲಿ, ಹೊಸ ಕಲಾವಿದರು ರಂಗದಲ್ಲಿ ತೋರದಿರುವುದು, ಮೂಲ ಹೊಸ ನಾಟಕಗಳು ಹೆಚ್ಚು ಬಾರದಿರುವುದು ಪ್ರಶ್ನಾರ್ಥಕವಾಗಿಯೇ ಉಳಿದುಕೊಂಡಿದೆ.

ಆದರೆ ಹೊರನಾಡು ಮುಖ್ಯವಾಗಿ ಮುಂಬಯಿಯಲ್ಲಿ ಈಚಿನ ವರ್ಷಗಳಲ್ಲಿ ಜರಗುತ್ತಿರುವ ತುಳು ನಾಟಕ ಸ್ಪರ್ಧೆಗಳ ನಾಟಕ ಕೃತಿಗಳು, ಹೊಸ ಹೊಸ ಕಲಾವಿದರು, ನಿರ್ದೇಶಕರು ಮತ್ತು ರಂಗಪ್ರಸ್ತುತಿಯ ಆಧುನಿಕ, ತಾಂತ್ರಿಕ ಆಯಾಮಗಳು ತುಳು ರಂಗಕ್ಕೆ ಹೊಸ ಬೆಳಕು ಬೀರುತ್ತಿವೆ.

ಇನ್ನೊಂದೆಡೆ ಹೊಟ್ಟೆಪಾಡು ಅಥವಾ ವಿಕೇಂದ್ರಿಕರಣಗಳಿಂದಾಗಿ ಅವಿಭಜಿತ ಜಿಲ್ಲೆಯಾದ್ಯಂತ ಕಳೆದೊಂದೆರಡು ದಶಕಗಳಿಂದೀಚೆಗೆ ಹುಟ್ಟಿಕೊಂಡು ನಾಟಕವಾಡುತ್ತಿರುವ ಹತ್ತಾರು ವೃತ್ತಿಪರ ಹಾಸ್ಯನಾಟಕ ತಂಡಗಳು ತುಳು ನಾಟಕ ರಂಗವನ್ನು ಜೀವಂತವಾಗಿ ಇರಿಸಿವೆ.

**ಆನಂದಕೃಷ್ಣ (ಡಾ. ಡಿ.ಕೆ. ಚೌಟ) (1939)**

ಪ್ರಯೋಗ ರಂಗಭೂಮಿಯ ಸವಾಲು ಗಳನ್ನು ಗಮನಿಸಿಕೊಂಡು ಚೌಟರು ಬರೆದ 'ಪಿಲಿಪತ್ತ್ ಗಡಸ್' 1997ರಲ್ಲಿ ಪ್ರಕಟವಾಯಿತು. ಬೆಂಗಳೂರಿನ 'ನಲಿಕೆ ತಂಡ' ಹಾಗೂ ಮುದ್ರಾಡಿಯ ನಮ ತುಳುವೆರ್ ತಂಡದ ಮೂಲಕ ಈ ನಾಟಕ ಸುಮಾರು 300 ಪ್ರದರ್ಶನಗಳನ್ನು ಈವರೆಗೆ ಕಂಡಿದೆ. 2003ರಲ್ಲಿ 'ಪಿಲಿಪತ್ತಿ ಗಡಸ್' 'ಹುಲಿ ಹಿಡಿದ ಕಡಸು' ಎಂಬುದಾಗಿ ಕನ್ನಡಕ್ಕೂ ಅನುವಾದಗೊಂಡು ಪ್ರಯೋಗವಾಗಿದೆ. ಬೆಂಗಳೂರಿನಲ್ಲಿ ಮೂರು ಪ್ರಯೋಗ ಕಂಡ 'ಪಿಲಿಪತ್ತಿ ಗಡಸ್' 8 ಭಾಷೆಗಳ 16 ನಾಟಕ ಪ್ರದರ್ಶನಗಳಲ್ಲಿ ತೃತೀಯ ಪ್ರಶಸ್ತಿ ಪಡೆದುಕೊಂಡಿದ್ದುದು ತುಳುವಿನ ಹೆಚ್ಚುಗಾರಿಕೆ.

ಡಿ.ಕೆ. ಚೌಟರು 'ಉರಿ ಉಷ್ಣದ ಮಾಯೆ' (2008) ಮೊದಲು ತುಳುವಲ್ಲಿ ಬಳಿಕ ಅದೇ ಹೆಸರಲ್ಲಿ ಕೇಶವ ಕುಡ್ಲರಿಂದ ಕನ್ನಡಕ್ಕೆ ಅನುವಾದಗೊಂಡು ಪ್ರಕಟವಾಗಿದೆ. ಬೆಂಗಳೂರಿನಲ್ಲಿ ಈ ನಾಟಕ ಪ್ರದರ್ಶನಗೊಂಡಿತು.

ಹೀಗೆಯೇ 'ಧರ್ಮೆತ್ತಿ ಮಾಯೆ' (2008) ಕೂಡಾ ತುಳುವಲ್ಲಿ ಬಂದು ಬಳಿಕ 2010ರಲ್ಲಿ ಕನ್ನಡಕ್ಕೆ ಅನುವಾದಗೊಂಡು ಎರಡೂ ಭಾಷೆಗಳಲ್ಲಿ ರಂಗಪ್ರದರ್ಶನ ಕಂಡಿದೆ. 1996ರ 'ಕರಿಯವಚ್ಚೆರೆ ಕತೆಕುಲು' ಕತೆಗಳು ದಶಕದ ಬಳಿಕ ರಂಗರೂಪಕ್ಕಿಳಿದು ಬೆಂಗಳೂರಿನಲ್ಲಿ ಪ್ರಯೋಗಗೊಂಡವು. ಚೌಟರ ತುಳು ಕಾದಂಬರಿ ಮಿತ್ತಬೈಲ್ ಯಮುನಕ್ಕೆ (2007) ಇದರ ರಂಗರೂಪ ಕೃಷ್ಣಮೂರ್ತಿ ಕವತ್ತಾರರ ನಿರ್ದೇಶನದಲ್ಲಿ ಯಶಸ್ವಿಯಾಗಿ ಬೆಂಗಳೂರು ಸೇರಿದಂತೆ ವಿವಿಧ ಪ್ರದೇಶಗಳಲ್ಲಿ 70ಕ್ಕೆ ಮಿಕ್ಕಿ ಪ್ರದರ್ಶಿತ ವಾಗಿದೆ.

'ಮೂಜಿ ಮುಟ್ಟು ಮೂಜಿ ಲೋಕ' (2011) ಚೌಟರ ಮತ್ತೊಂದು ಸಂಕೀರ್ಣ ತುಳು ಜಾನಪದ ನಾಟಕ. ಇದರಲ್ಲಿ 11 ದೃಶ್ಯಗಳಿವೆ. ಬಲಿ–ಮಹಾಬಲಿ, ಕೋಶರರು–ನಣ್ಣಿಯನ್–ನಾರಾವಿ ಅಮ್ಮ ಪೆರ್ಗಡ್ತಿ ಇಂತಹ ಪಾತ್ರಗಳು ಓದುಗರನ್ನೂ, ಪ್ರೇಕ್ಷಕರನ್ನೂ ಸೆಳೆಯುತ್ತದೆ. ಪ್ರಾಚೀನ ತುಳುನಾಡ ಇತಿಹಾಸ, ಪೌರಾಣಿಕ ಐತಿಹ್ಯಗಳು ಮತ್ತು ಹಲವು ಜಾನಪದೀಯ ಮಿಶ್ರಣಗಳು. ಆಧುನಿಕ ಮಾನಸಿಕ ಒಳತೋಟಿ, ತೊಳಲಾಟ ಗಳನ್ನು ಮುಖಾಮುಖಿಯಾಗಿಸಿರುವ ರಸಾದ್ಭುತ ಕೃತಿಯಾಗಿ ಸೊಗಸಾದ ಭಾಷಾ

ಉಡುಪಿ ತುಳುಕೂಟದ ಕೆಮ್ತೂರು ತುಳುನಾಟಕ ಸ್ಪರ್ಧೆಯಲ್ಲಿ ಪ್ರಯೋಗವಾದ 'ಧರ್ಮೆತ್ತಿಮಾಯೆ' ನಾಟಕ. ರಚನೆ : ಆನಂದಕೃಷ್ಣ, ತಂಡ : ನಮ ತುಳುವೆರ್ ಕಲಾವಿದರು, ಮುದ್ರಾಡಿ

ಪ್ರಯೋಗದೊಂದಿಗೆ ಅಂತರಂಗವನ್ನು ಕೆದಕುವ ಈ ನಾಟಕವೂ ತುಳುವಲ್ಲಿ ಪ್ರದರ್ಶನ ಕಂಡಿದೆ. ಡಾ. ನಾ.ದಾ. ಶೆಟ್ಟಿಯವರಿಂದ ಅನುವಾದಗೊಂಡು ಕನ್ನಡದಲ್ಲೂ ಪ್ರಯೋಗವಾಗಿ ತುಳುರಂಗಭೂಮಿಗೆ ಚೌಟರಿಂದ ಎಂದಿನ ಹೊಸ ಸಾಧ್ಯತೆಗಳನ್ನು ಕಾಣಿಸಿದೆ. ಹೊಸ ಪ್ರಯೋಗಶೀಲ ನಾಟಕಕಾರರಿಗೆ ಸ್ಫೂರ್ತಿಯಾಗಿ ನಿಂತಿದೆ. ಸಮರ್ಥ ನಿರ್ದೇಶಕರು ಕೈಗೆತ್ತಿಕೊಳ್ಳುವ ತುಳು ನಾಟಕಗಳು ಅಮೋಘರಂಗಕೃತಿಗಳಾಗುತ್ತವೆ.

ಹೀಗೆಯೇ ಕುದ್ಕಾಡಿ ವಿಶ್ವನಾಥ ರೈ, ತೋನ್ಸೆ ವಿಜಯಕುಮಾರ್ ಶೆಟ್ಟಿ, ಶಿಮಂತೂರು ಚಂದ್ರಹಾಸ ಸುವರ್ಣ, ಶಿಮುಂಜೆ ಪರಾರಿ, ಕೃಷ್ಣಪ್ಪ ಉಪ್ಪೂರು ಮುಂತಾದವರ ನಾಟಕ ಕೃತಿಗಳು, ಎಂ. ಜಾನಕಿ ಬ್ರಹ್ಮಾವರ, ಕಾತ್ಯಾಯಿನಿ ಕುಂಜಿಬೆಟ್ಟು, ನಾಗೇಶ್ ಕುಮಾರ್ ಉದ್ಯಾವರ, ಶಶಿರಾಜ್ ಕಾವೂರು, ರಘು ಇಡ್ಕಿದು ಮತ್ತಿತರರ ಅನುವಾದ ನಾಟಕಗಳು ಹೊಸ ಕಾಣ್ಕೆಗಳೊಂದಿಗೆ ಬಂದಿವೆ.

* * *

## ತುಳುವಿನಲ್ಲಿ ಪ್ರಯೋಗವಾದ ಅನುವಾದ ನಾಟಕಗಳು

1954 ಸುಮಾರಿಗೆ ಉಡುಪಿಯಲ್ಲಿ ಶಿಕ್ಷಕರಾಗಿದ್ದ (ಮುಂದೆ ಮುಂಬೈವಾಸಿ) ಬಿ.ಎಸ್. ಕುರ್ಕಾಲರು ರಾಂ ಗಣೇಶ್ ಗಡ್ಕರಿಯವರ ಪ್ರಸಿದ್ಧ ಮರಾಠಿ ನಾಟಕ 'ಏಕ್‌ಚ್ ಪ್ಯಾಲಾ'ವನ್ನು 'ಸಮಾಜದ ವೈರಿ' ಎಂಬುದಾಗಿ ತುಳುವಿಗೆ ಅನುವಾದಿಸಿದಂತೆ ತಿಳಿದುಬರುತ್ತದೆ. ಅದೇ ವೇಳೆಗೆ ಮುಂಬಯಿಯಲ್ಲಿ ದಿ। ಕೆ.ಕೆ. ಸುವರ್ಣರು ಶಿವರಾಮ ಕಾರಂತರ 'ಹಣೆಬರಹ' ನಾಟಕವನ್ನು 'ಗಿರ್ಬದಲಿ ತ್ಯಾಂಪೆ' ಎಂಬುದಾಗಿ ತುಳುವಿಗೆ ರೂಪಾಂತರಿಸಿ ಪ್ರಯೋಗಿಸಿದ್ದಾಗಿ ಉಲ್ಲೇಖವಿದೆ (ಡಾ। ಈಶ್ವರ ಅಲೆವೂರು – ಮುಂಬೈ ತುಳು ನಾಟಕರಂಗ – ಪುಟ 222–235, ಅವಲೋಕನ 2004 ಪ್ರ. ಸಾಹಿತ್ಯ ಬಳಗ, ಮುಂಬೈ). ಎಪ್ಪತ್ತರ ದಶಕದಲ್ಲಿ ಸದಾನಂದ ಸುವರ್ಣರು ಶಂಭುಮಿತ್ರ ಅವರ ಬಂಗಾಲಿ ನಾಟಕವನ್ನು 'ಬಾಲೆ ಬಂಗಾರ್' ಎಂದು ಭಾಷಾಂತರಿಸಿ ಪ್ರಯೋಗಿಸಿರುವರು. ಅದೇ ಕಾಲದಲ್ಲಿ ದಿ. ಸೋಮಶೇಖರ ಪುತ್ರನ್‌ರು ರಮಾನಂದ ಚೂರ್ಯರ 'ಊರೆಲ್ಲಾ ಹೇಳ್ಬೇಡಿ' ಕನ್ನಡ ನಾಟಕವನ್ನು (ಮೂಲ ಮರಾಠಿ) 'ತೆಲಿಪುವಲ್ ಜಾಗ್ರತೆ' ಎಂಬುದಾಗಿ ತುಳುವಿಗೆ ಭಾಷಾಂತರಿಸಿ

ಆಯನ ತಂಡದ ತುಳುನಾಟಕ 'ಬಸ್ತಿ' – ಮೂಲ: ಅಕಿರಾ ಕುರೊಸವನ ರಶೋಮನ್ (ಜಪಾನಿ ನಾಟಕ); ಅಭಿನಯ : ಶ್ರೀನಿವಾಸ ಕಾರ್ಕಳ ಮತ್ತು ಉಮಾಶಂಕರ ಪೆರಿಯೋಡಿ ನಿ: : ಎಂ.ಸಿ. ರಾಮು., ಮಂಗಳೂರು 1984 (ಚಿತ್ರ : ಮೋಹನ ಸೋನ)

ಪ್ರಯೋಗಿಸಿದರು. ಮುಂದೆ ವಸಂತ ಕದ್ರಿಯವರು 'ಮೋಲು ದಾನೆ ಮುಪ್ಪತ್ತಾಜಿ' ಎಂಬುದಾಗಿ ಚೂರ್ಯರ ನಾಟಕದ ಅನುವಾದವನ್ನು ಕದ್ರಿಯಲ್ಲಿ ಪ್ರದರ್ಶಿಸಿದ್ದರು.

ಎಂಬತ್ತರ ದಶಕದಲ್ಲೇ ವೃತ್ತಿಪರರಾದ ಸೋಮಶೇಖರ ಪುತ್ರನ್, ವಸಂತ ಕದ್ರಿ, ಬಳಿಕ ವಿಜಯಕುಮಾರ್ ಕೊಡಿಯಾಲ್‌ಬೈಲ್ ('ತೈಮೂರ್ ಲಂಗ್') ಮುಂತಾದವರಿಂದ ಕೆಲವು ನಾಟಕಗಳು ಅನುವಾದವಾಗಿ ಪ್ರಯೋಗಗೊಂಡಿವೆ. ಬೆಂಗಳೂರಿನಲ್ಲಿ ತುಳುಕೂಟಕ್ಕಾಗಿ ಮಂ. ಆನಂದ ಶೆಟ್ಟರು 1980ರಲ್ಲಿ 'ಕುರಂದಿಕಳಂ' ಮಲಯಾಳಂ ನಾಟಕವನ್ನು 'ಒಂಜಿ ಪಾತೆರ ಕೇಂಡಿಜತ್ತಾ?' ಎಂದು ತಾನು ತುಳುವಿಗೆ ಅನುವಾದಿಸಿದ್ದಾಗಿ ಹೇಳಿದ್ದಾರೆ. ವೈಚಾರಿಕ ಅಲೆಯೊಂದಿಗೆ ತಾನು ತುಳುವಿನ ಆಧುನಿಕ ರಂಗಭೂಮಿ ಪ್ರವರ್ಧನವಾಗುತ್ತಿರುವಾಗ ಪರಭಾಷೆಯಿಂದ ಅನುವಾದವಾಗಿ ಬಂದ ಕೆಲವು ನಾಟಕಗಳೂ ತಮ್ಮದೇ ಕೊಡುಗೆ ನೀಡಿದವು. ಎಂಬತ್ತರ ದಶಕದಲ್ಲಿ ಕೆ. ರಾಧಾಕೃಷ್ಣರು ಮಲಯಾಳಂನಿಂದ ಅನುವಾದಿಸಿದ 'ಚಕ್ರವ್ಯೂಹ' ಭೂಮಿಕಾ ತಂಡದಿಂದ ಮಂಗಳೂರಿನಲ್ಲಿ ಪ್ರದರ್ಶನಕ್ಕೆ ಬಂತು. ಸಾಂಪ್ರದಾಯಿಕತೆ, ನವ್ಯ ಎರಡರ ಮಿಶ್ರಣವಾದ ಈ ನಾಟಕ ಯಶಸ್ವಿಯಾಗಿ ಹಲವೆಡೆ ಪ್ರಯೋಗವಾಯಿತು.

ಇತರ ಭಾರತೀಯ ಭಾಷೆಗಳ ಒಳ್ಳೆಯ ನಾಟಕ ಕೃತಿಗಳನ್ನು ತುಳುವಿಗೆ ಅನುವಾದಿಸುವ ಕೆಲಸವು ಸದಾನಂದ ಸುವರ್ಣ, ಅಮೃತ ಸೋಮೇಶ್ವರ, ಶಿಮುಂಜೆ ಪರಾರಿ ಮುಂತಾದವರಿಂದ ಹಿಂದೆಯೇ ಆರಂಭವಾಗಿದ್ದು, ತುಳು ಸಾಹಿತ್ಯ ದಿಗ್ಗಜ ಕೆದಂಬಾಡಿ ಜತ್ತಪ್ಪ ರೈಯವರು ಅದನ್ನು ಮುಂದುವರಿಸಿ 'ಕಾಬೂಲಿವಾಲೆ' (86) (ಮೂಲ : ರವೀಂದ್ರನಾಥ ಠಾಗೋರ್), 'ಸೂದ್ರೆ ಏಕಲವ್ಯೆ (86), 'ಯಮನ

**ತುಳುಕೂಟ ಉಡುಪಿಯ ಕೆಮ್ತೂರು ನಾಟಕ ಸ್ಪರ್ಧೆಯಲ್ಲಿ 2018ರಲ್ಲಿ ಬಹುಮಾನಿತ ನಾಟಕ 'ಟ್ರೈನ್ ಟು ಪಾಕಿಸ್ತಾನ್' (ಮೂಲ : ಖುಷ್ವಂತ್ ಸಿಂಗ್, ಅನು : ನಾಗೇಶ್ ಉದ್ಯಾವರ). ಪ್ರಸ್ತುತಿ : ಭೂಮಿಗೀತ ಸಾಂಸ್ಕೃತಿಕ ವೇದಿಕೆ, ಪಟ್ಲ. ನಿರ್ದೇಶನ : ಸಂತೋಷ್ ನಾಯಕ್ ಪಟ್ಲ.**

## ಕೆಲವು ಆಧುನಿಕ ಅನುವಾದ ನಾಟಕಕಾರರು / ಭಾಷಾಂತರಕಾರರು

ಕೆದಂಬಾಡಿ ಜತ್ತಪ್ಪ ರೈ



ಮಂದಾರ ಕೇಶವ ಭಟ್



ಬಿ.ವಿ. ಕಾರಂತ



ಗುರುರಾಜ ಮಾರ್ಪಳ್ಳಿ



ನಾಗೇಶ್ ಉದ್ಯಾವರ

ಬಾಲಕೃಷ್ಣ ಕೊಡವೂರು



ಪ್ರದೀಪ್‌ಚಂದ್ರ ಕುದ್ಪಾಡಿ

ರವಿರಾಜ್ ಹೆಚ್.ಪಿ.

ಜಾನಕಿ ಬ್ರಹ್ಮಾವರ

ಕಾತ್ಯಾಯಿನಿ ಕುಂಜಿಬೆಟ್ಟು

ಜೆ.ಪಿ. ಕುಸುಮ

ಸೋಲು' (83) (ಮೂಲ : ಕುವೆಂಪು), 'ಚೋಮನ ದುಡಿ' (83) (ಮೂಲ : ಡಾ. ಶಿವರಾಮ ಕಾರಂತ) – ಮುಂತಾದವನ್ನು ಅಚ್ಚ ತುಳುವಿನದೆಂಬಂತೆ ಅನುವಾದಿಸಿ ಪ್ರಕಟಿಸಿದರು. ('ಚೋಮನ ದುಡಿ'ಗೆ ರಂಗರೂಪ : ಮೋಹನ ಸೋನಾ). ಹಾಗೆಯೇ ಮಂದಾರ ಕೇಶವ ಭಟ್ಟರು ಭಾಸನ ಸಂಸ್ಕೃತ 'ವಾಸವದತ್ತೆ'ವನ್ನು 'ಕನತ್ತ ಪೊಣ್ಣು' ಆಗಿ ಭಾಷಾಂತರಿಸಿದರು.

'ಬಸ್ತಿ' ಆಯನ ತಂಡದಿಂದ ಪ್ರದರ್ಶಿಸಲ್ಪಟ್ಟ ಎಂ. ಸಿ. ರಾಮು ಅವರ ನವ್ಯ ನಾಟಕ (ಮೂಲ ಜಪಾನಿ : ರಶೋಮನ್). ಪ್ರೇಮಾನಂದ ಕಿಶೋರ್ ಕಾರ್ನಾಡರ 'ಯಯಾತಿ'ಯನ್ನು (ಪ್ರಕಟವಾಗಿದೆ, ಇಸವಿ ನಮೂದಿಸಿಲ್ಲ) ಕೆ. ಮಹಾಲಿಂಗ ಭಟ್ ತನ್ನದೇ ಯಶಸ್ವೀ ಕನ್ನಡ ನಾಟಕ 'ಕೊಂಬಿನವರು' ಇದನ್ನು 'ಕೊಂಬುದ ಮಾನಿಲು' ಎಂದು ಅನುವಾದಿಸಿ ಪ್ರಯೋಗಿಸಿದ್ದಾರೆ.

ಶ್ರೀರಂಗರ 'ಕತ್ತಲೆ ದಾರಿ ದೂರ' (ಮೂಲ ಏಂಟನ್ ಚೆಕಾವ್‌ನ 'ವಾರ್ಡ್ ನಂಬರ್ 6') – ವಾರ್ಡ್ ನಂಬರ್ ಆಜಿ' ಎಂಬುದಾಗಿ ತುಳುವಿನಲ್ಲಿ ಪ್ರದರ್ಶನ ಗೊಂಡಿತು. ಶೇಕ್ಸ್‌ಪಿಯರ್‌ನ ಮ್ಯಾಕ್‌ಬೆತ್ 'ಬಂಟಮಲೆ ಬೀರೆ', ತೊಂಭತ್ತರ ದಶಕದಲ್ಲಿ ಮನೋಹರ ಪ್ರಸಾದರು ಅನುವಾದಿಸಿದ – 'ಹಲೋ ಮಿ. ದೂಮಣ್ಣ' (ಮೋಲಿಯರ್‌ನ ಫ್ರೆಂಚ್ ನಾಟಕ. ಬೂರ್ಶ್ವಾದ ಜಂಟಲ್‌ಮನ್), 'ರೈಲ್(ಕನ್ನಡ ಮೂಲ : ಕುದುರೆ ಬಂತು ಕುದುರೆ – ರಾಮಚಂದ್ರದೇವ); ಬೇಲಿಬೈಲ್ (ಕನ್ನಡ ಮೂಲ : 'ಬೇಲಿ ಮತ್ತು ಹೊಲ' – ಕುಂ. ವೀರಭದ್ರಪ್ಪ) – ಅಭಿವ್ಯಕ್ತದಿಂದ ಪ್ರಯೋಗಗೊಂಡವು. ಲಂಕೇಶರ 'ಸಂಕ್ರಾಂತಿ' ('ಊರುಗೊಂಜಿ ಸಂಗೆ') ಕಾರ್ನಾಡರ 'ನಾಗಮಂಡಲ', (ಅದೇ ಹೆಸರಲ್ಲಿ) – ಇತ್ಯಾದಿ ನಾಟಕಗಳು ಪ್ರದರ್ಶನಕ್ಕೆಂದೇ ಭಾಷಾಂತರವಾಗಿ ಬಂದವು. 'ಚೋಮೆ' (ಕನ್ನಡ ಮೂಲ : ಆರ್. ನಾಗೇಶ್, ತುಳುವಿಗೆ : ವಾಮನ ನಂದಾವರ) 'ಅಭಿವ್ಯಕ್ತ' ಬಳಗದಿಂದ ಪ್ರಯೋಗಿಸಲ್ಪಟ್ಟಿತು. ಪುರುಷೆ, ಕಾಲಚಕ್ರ, ಗುಂಡೊಡ್ಡು ಪದ್ರಾಡ್, 'ಜೋಕುಲು–ಬಾಲೆಲು', 'ಒಯ್ಲ್‌ಗ್ ತಿಕಿನಕ್ಲು', (ಕನ್ನಡ ಮೂಲ

**ಉದ್ಯಾವರ ನಾಗೇಶ್ ಕುಮಾರ್ ತುಳುವಿಗೆ ರೂಪಾಂತರಿಸಿದ 'ಒಟ್ಟುಡುಲ್ಲೆ ಚಂದಿರೆ' ನಾಟಕ. ಪ್ರಥಮ ಪ್ರಯೋಗ ಎಂ.ಜಿ.ಎಂ. ಕಾಲೇಜಿನ ಮುದ್ದಣ ಮಂಟಪ, ತಂಡ : ಭೂಮಿಗೀತ ಸಾಂಸ್ಕೃತಿಕ ಸಂಘಟನೆ, ಪಟ್ಲ ನಿರ್ದೇಶನ : ಸಂತೋಷ್ ನಾಯಕ್, ಪಟ್ಲ, 2017**

ಮನೋಹರ ಪ್ರಸಾದ್



ವಾಮನ ನಂದಾವರ



ರಘು ಇಡ್ಕಿದು

: ಸುಳಿಗೆ ಸಿಕ್ಕವರು; ಅನು; ಪುನರ್ವಸು) – ಹೀಗೆ ಹಲವು ಅನ್ಯಭಾಷಾ ನಾಟಕಗಳು ತುಳುವಿಗೆ ಭಾಷಾಂತರಗೊಂಡು, ನುರಿತ ನಿರ್ದೇಶಕರ, ಕಲಾವಿದರ ನಿರ್ವಹಣೆಯಲ್ಲಿ ಪ್ರೇಕ್ಷಕರ ಹೃದಯ ಗೆದ್ದವು.

* * *

**ಉಡುಪಿ ತುಳುಕೂಟ ಕೆಮ್ತೂರು ತುಳು ನಾಟಕಸ್ಪರ್ಧೆ**

2002ರಲ್ಲಿ ರಂಗಭೀಷ್ಮ ದಿ. ಕೆಮ್ತೂರು ದೊಡ್ಡಣ್ಣ ಶೆಟ್ಟಿಯವರ ಹೆಸರಿನಲ್ಲಿ ಉಡುಪಿ ತುಳುಕೂಟವು ಆರಂಭಿಸಿದ 'ಕೆಮ್ತೂರು ತುಳು ನಾಟಕಸ್ಪರ್ಧೆ'ಯು ಆಧುನಿಕ ತುಳುರಂಗಭೂಮಿ ಚಳುವಳಿ ರೂಪದಲ್ಲಿ ನಿರಂತರವಾಗಿ ನಡೆಯಲು ಬಹುಮುಖ್ಯ ವೇದಿಕೆಯಾಯಿತು. ಕೆಲವು ಹೊಸ ತುಳುನಾಟಕಗಳೊಂದಿಗೆ ಇದರಲ್ಲಿ ಅನ್ಯ ಭಾಷೆಯ ಅನೇಕ ನಾಟಕಗಳು ಅನುವಾದಗೊಂಡು ಪ್ರಯೋಗವಾದವು.

ಉಡುಪಿ ಕೆಮ್ತೂರು ಸ್ಮಾರಕ ತುಳು ನಾಟಕ ಸ್ಪರ್ಧೆಯಲ್ಲಿ ಪ್ರಯೋಗವಾದ ನಾಟಕ 'ಕತ್ತಲೆಗ್ ಪತ್ತ್ ತರೆ'. ಪ್ರಸ್ತುತಿ : ನಮ ತುಳುವೆರ್ ಕಲಾಸಂಘಟನೆ, ಮುದ್ರಾಡಿ

### ಉದ್ಯಾವರ ನಾಗೇಶ್ ಕುಮಾರ್ (1960)

ಕಳೆದ ಸುಮಾರು ಮೂರು ದಶಕಗಳಿಂದ ಕರಾವಳಿ ಕರ್ನಾಟಕದ ಹವ್ಯಾಸಿ ರಂಗಭೂಮಿಯಲ್ಲಿ ಸಕ್ರಿಯರಾಗಿರುವ ಉದ್ಯಾವರ ನಾಗೇಶ್‌ಕುಮಾರ್ ನಟ, ನಿರ್ದೇಶಕ, ರಂಗತಜ್ಞ, ನಾಟಕಕಾರ. ಉಡುಪಿಯ ಬಿ.ಆರ್. ನಾಗೇಶ್ ಅಲ್ಲದೆ ಪ್ರಸನ್ನ ಮತ್ತಿತರ ದೈತ್ಯಪ್ರತಿಭೆಗಳ ನೆರಳಿನಲ್ಲಿ ಅರಳಿ ನಿಂತವರು. ಕನ್ನಡ ಮತ್ತು ರಾಷ್ಟ್ರೀಯ ರಂಗಭೂಮಿಯ ವೀಕ್ಷಣೆ-ಪರಿಚಯದ ಹಿನ್ನೆಲೆಯಲ್ಲಿ ಕನ್ನಡದ, ಇತರ ಭಾಷೆಗಳ ಗಮನಾರ್ಹ ನಾಟಕ ಕೃತಿಗಳನ್ನು ತುಳುವಿಗೆ ರೂಪಾಂತರಿಸಿಕೊಂಡು, ತುಳುತನವನ್ನು ಆವಾಹನೆಗೊಳಿಸಿ ಕೊಂಡು ಪ್ರಯೋಗಕ್ಕಿಳಿಸುತ್ತ ಬಂದವರು 2002ರಲ್ಲಿ ಉಡುಪಿ ತುಳುಕೂಟದ ಅಧ್ಯಕ್ಷ ಡಾ. ಭಾಸ್ಕರಾನಂದ ಕುಮಾರರ ಪ್ರೋತ್ಸಾಹದಿಂದ 'ಕೆಮ್ತೂರರ ಹೆಸರಿನಲ್ಲಿ ತುಳುನಾಟಕ ಸ್ಪರ್ಧೆ' ಪ್ರಾರಂಭವಾದ ಪ್ರಧಾನ ಸೂತ್ರಧಾರಿಕೆ ನಾಗೇಶರದೇ. ತುಳುರಂಗಭೂಮಿಗೆ ಈವರೆಗೆ ಸುಮಾರು ಇಪ್ಪತ್ತರಷ್ಟು ಅನುವಾದ ನಾಟಕಗಳನ್ನವರು ನೀಡಿದ್ದಾರೆ ಇತ್ತೀಚಿನ ಇವರ ಹೊಸ ಯಶಸ್ವಿ ನಾಟಕಗಳೆಂದರೆ 2015ರಲ್ಲಿ ಕೆಮ್ತೂರು ನಾಟಕ ಸ್ಪರ್ಧೆಯಲ್ಲಿ ಭೂಮಿಗೀತಾ ಸಾಂಸ್ಕೃತಿಕ ಸಂಘಟನೆ ಪ್ರಸ್ತುತ ಪಡಿಸಿದ 'ಒಟ್ಟುಡುಲ್ಲೆ ಚಂದಿರೆ' (ಕನ್ನಡ ಮೂಲ: 'ಜತೆಗಿರುವನು ಚಂದಿರ'-ಜಯಂತ ಕಾಯ್ಕಿಣಿ) ನಿರ್ದೇಶನ: ಸಂತೋಷ್ ನಾಯಕ್ ಪಟ್ಲ. ಕಾರ್ನಾಡರ 'ಈಡಿಪಸ್' ಕನ್ನಡ ನಾಟಕದ ರೂಪಾಂತರ: 'ಕತ್ತಲೆಗ್ ಪತ್ತ್ ತರೆ' ಪ್ರಯೋಗ: ಎಂ.ಜಿ.ಎಂ. ಕಾಲೇಜಿನ ಮುದ್ದಣ ಮಂಟಪ, ಪ್ರಸ್ತುತಿ: ನಮ ತುಳುವೆರ್ ಕಲಾಸಂಘಟನೆ ಮುದ್ರಾಡಿ, ನಿರ್ದೇಶನ: ಸುಕುಮಾರ್ ಮುದ್ರಾಡಿ.

ಈ ಹಿಂದೆ ಬೋಂಟೆ (ಮೂಲ ಕನ್ನಡ, ಕುಂ.ವೀ), 'ಬಂಟಮಲೆ ಬೀರೆ' (ಮೂಲ: ಶೇಕ್ಸ್‌ಪಿಯರ್‌ನ ಮ್ಯಾಕ್‌ಬೆತ್) ಊರುಗೊಂಜಿ ಸಂಗೆ, ಸಂಕ್ರಾಂತಿ (ಮೂಲ ಕನ್ನಡ ಡಾ. ಚಂದ್ರಶೇಖರ ಕಂಬಾರ) ಒಯ್ಲ್‌ಗ್ ತಿಕಿನಕ್ಲ್ (ಮೂಲ ಕನ್ನಡ ಸುಳಿಗೆ ಸಿಕ್ಕವರು- ಎಸ್.ಜೆ. ಶಿವಶಂಕರ), ಸೋಮಿನ ಸೌಭಾಗ್ಯೊ (ಮೂಲ ಕನ್ನಡ ಡಾ. ಶಿವರಾಮ ಕಾರಂತ), ಇತ್ಯಾದಿ. ಈ ಎಲ್ಲಾ ರೂಪಾಂತರ, ಪ್ರಯೋಗಗಳ ಬಳಿಕ, ಈಚಿನ ಹೊಸ 'ರಕ್ಕಸ-ತಂಗಡಿ'ಯ (ಮೂಲ : ಗಿರೀಶ್ ಕಾರ್ನಾಡ್ ಕನ್ನಡ ನಾಟಕದ ತುಳುರೂಪ. ಸಂಗಮ ಕಲಾವಿದರು ಮಣಿಪಾಲ ಇವರಿಂದ ಪ್ರಯೋಗಗೊಂಡು ಇದು 2018ರ ಕೆಮ್ತೂರು ನಾಟಕ ಸ್ಪರ್ಧೆಯಲ್ಲಿ ಪ್ರಥಮ ಪ್ರಶಸ್ತಿ ಗಳಿಸಿತು. ನಿರ್ದೇಶಕರು : ಪ್ರಶಾಂತ್ ಉದ್ಯಾವರ), 'ಒಂಜಿ ಸಿರೆ ಅಸರ್' ತಂಡ ನವಸುಮ ರಂಗಮಂಚ ಕೊಡವೂರು ನಿರ್ದೇಶನ : ಬಾಲಕೃಷ್ಣ ಕೊಡವೂರು (ದ್ವಿತೀಯ ಪ್ರಶಸ್ತಿ ವಿಜೇತ), ಖುಶವಂತ್‌ಸಿಂಗರ 'ಟ್ರೈನ್ ಟು ಪಾಕಿಸ್ತಾನ್' ಇದನ್ನು ನಾಗೇಶರು ತುಳುವಿಗೆ ರೂಪಾಂತರಿಸಿ 2018ರ ಕೆಮ್ತೂರು ನಾಟಕ ಸ್ಪರ್ಧೆಯಲ್ಲಿ ಭೂಮಿಗೀತ ಸಾಂಸ್ಕೃತಿಕ ವೇದಿಕೆ ಪಟ್ಲ ಇವರಿಂದ ಪ್ರಯೋಗವಾಗಿ ಸ್ಪರ್ಧೆಯಲ್ಲಿ ತೃತೀಯ ಪ್ರಶಸ್ತಿ ಗಳಿಸಿತು. ನಿರ್ದೇಶನ : ಸಂತೋಷ್ ನಾಯಕ್ ಪಟ್ಲ. ಈ ನಾಟಕಗಳಲ್ಲಿ ನಿರ್ದೇಶಕರು ಸ್ವತಃ ಶ್ರೇಷ್ಠ ನಟರೂ ಆಗಿದ್ದುದಲ್ಲದೆ ವಾಣಿ ಸುಕುಮಾರ್, ಸುಗಂಧಿ, ಅನ್ವಿತಾ ಭಟ್ ಮುಂತಾದ ಶ್ರೇಷ್ಠ ನಟಿಯರು

ಹೊರಹೊಮ್ಮಿದರು. ನಾಗೇಶ್‌ಕುಮಾರ್ ಉದ್ಯಾವರ ಅವರ ಮೇಲ್ಪಂಕ್ತಿಯನ್ನು ಅನಂತರದವರು ಮುಂದುವರಿಸಲು ಪ್ರಯತ್ನ ನಡೆಸಿದ್ದಾರೆ.

ಪ್ರಕಾಶ್ ಜಿ. ಕೊಡವೂರು ಮತ್ತು ಬಾಲಕೃಷ್ಣ ಕೊಡವೂರು ಇವರೀರ್ವರೂ ಉಡುಪಿಯ ಕೊಡವೂರಿನವರಾಗಿದ್ದು ಸುಮನಸಾ ಕೊಡವೂರು, ನವಸುಮ ರಂಗಮಂಚ ರಿ. ಕೊಡವೂರು ತಂಡಗಳ ಸ್ಥಾಪನಾ ಕಾಲದಿಂದಲೂ ಹವ್ಯಾಸಿ ನಟ, ನಿರ್ದೇಶಕ, ಸಂಘಟಕರಾಗಿ ಕ್ರಿಯಾಶೀಲರಾದವರು.

2002ರಲ್ಲಿ ಆರಂಭಗೊಂಡ ಕೆಮ್ತೂರು ನಾಟಕಸ್ಪರ್ಧೆ ಹೊಸಹೊಸ ರಂಗಸೂಕ್ಷ್ಮತೆಗಳನ್ನು ಬಿಚ್ಚಿಡುತ್ತಾ ಹೋದುದರ ಪರಿಣಾಮ ತಕ್ಕಮಟ್ಟಿಗಾದರೂ ಕರಾವಳಿ ರಂಗಭೂಮಿಗೆ ಪರಿಣಾಮ ಬೀರುವಂತಾಯಿತು. 2002ರಲ್ಲಿಯೇ ಮಣಿಪಾಲದಲ್ಲಿ ಸುದೇಶ್‌ರಾವ್ ನೇತೃತ್ವದಲ್ಲಿ ಜನ್ಮತಾಳಿದ 'ಸಂಗಮ ಕಲಾವಿದೆರ್' ಹೊಸ ಪ್ರಯೋಗಗಳನ್ನು ಕೈಗೆತ್ತಿಕೊಂಡವರಲ್ಲಿ ಮೊದಲ ತಂಡ. ಇವರ ಭಾಸನ 'ಕರ್ಣಭಾರ' ಕೃತಿಯ ತುಳು ರೂಪಾಂತರವು ಭೋಪಾಲದ ಎನ್.ಎಸ್.ಡಿ.ಯ 2015-16ರ 'ಭಾರತ್ ರಂಗ್ ಮಹೋತ್ಸವ'ದಲ್ಲಿ ಪ್ರವೇಶ ಪಡೆದು ರಾಷ್ಟ್ರೀಯ ನೆಲೆಯಲ್ಲಿ ತುಳು ನಾಟಕ ಗಮನ ಸೆಳೆಯುವಂತಾದುದು ಒಂದು ಮಹತ್ವದ ಸಾಧನೆ.

ಕೆಮ್ತೂರು ನಾಟಕಸ್ಪರ್ಧೆಯಲ್ಲಿ (ಉಡುಪಿ) ಪ್ರಯೋಗವಾದ 'ಚಂದ್ರಪ್ಪನ ಚಟ್ಟೊದ ಯಾತ್ರೆ' (ರಚನೆ : ಸುದೇಶ್‌ರಾವ್ ಮಣಿಪಾಲ). ಒಂದು ಗಮನಾರ್ಹ ರಂಗಕೃತಿ. 2005ರಲ್ಲಿ ಉಡುಪಿ ರಂಗಭೂಮಿ ರಜತೋತ್ಸವ ಸಮಾರಂಭ ವೇಳೆ ರಂಗಭೂಮಿ



**2016ರಲ್ಲಿ ಉಡುಪಿಯ ಎಂ.ಜಿ.ಎಂ. ರವೀಂದ್ರ ಮಂಟಪದಲ್ಲಿ ಅನ್ವೇಷಣಾ ರಿ. ಸಂಘಟನೆ ಪ್ರದರ್ಶಿಸಿದ 'ತುಳು ಅಂತಿಗೊನೆ'ಯ ದೃಶ್ಯ.**

ಕಲಾವಿದರು, 'ಕತ್ತಲೆದ ತಾದಿ' (ಅನು: ಅಂಬಾತನಯ ಮುದ್ರಾಡಿ) ರಂಗಕ್ಕೆ ತಂದರು. ಮಂಗಳೂರಿನಲ್ಲಿ 2004ರಲ್ಲಿ ಸದಾನಂದ ಸುವರ್ಣರ ನಿರ್ದೇಶನದಲ್ಲಿ ಪ್ರೊ. ಪಾರ್ವತಿ ಜಿ. ಐತಾಳರ ಅನುವಾದಿತ 'ಬಿನ್ನೆ' ನಾಟಕ ವಾಚನವೂ ಪ್ರೇಕ್ಷಕರ ಶ್ಲಾಘನೆಗೆ ಪಾತ್ರವಾಯಿತು.

2014ರಲ್ಲಿ ಡಾ. ಭರತ್ ಕುಮಾರ್ ಪೊಲಿಪು ನಿರ್ದೇಶನದ 'ಕೋಮಲ ಗಾಂಧಾರ' ಮುಂಬಯಿಯ ವಿಶ್ವೇಶ್ವರಯ್ಯ ಸಭಾಗೃಹದಲ್ಲಿ ಪ್ರದರ್ಶನಗೊಂಡಿತು. (ಮೂಲ ಹಿಂದಿ : ಶಂಕರ್ ಶೇಷ್ ತುಳು ಅನುವಾದ : ಜಿ.ಪಿ. ಕುಸುಮ) ಮಹಾಭಾರತದ ಗಾಂಧಾರಿಯ ದುರಂತ ಬದುಕು ಇದರ ಕಥಾವಸ್ತು ಇದು ಕೆಮ್ತೂರು ನಾಟಕ ಸ್ಪರ್ಧೆಯಲ್ಲಿ ಉತ್ತಮ ನಾಟಕ, ಉತ್ತಮ ನಿರ್ದೇಶನ ಸಹಿತ ಹಲವು ಬಹುಮಾನಗಳನ್ನು ಪಡೆದುಕೊಂಡಿತು. ಈಚೆಗೆ 2018ರಲ್ಲಿ ಅಂಬಾತನಯ ಮುದ್ರಾಡಿಯವರು 'ದಶಾನನ ಸಿದ್ಧಿ' (ಮೂಲ : ರಂಗಕೃತಿ ಮಂಜುನಾಥ್ ಬಡಿಗೇರ್)ಯನ್ನು ಅನುವಾದಿಸಿ ನಮ್ಮ ತುಳುವೆರ್ ಮುದ್ರಾಡಿ ತಂಡವು ಪ್ರದರ್ಶಿಸಿದೆ. ಮತ್ತೊಂದು ನಾಟಕ 'ಕಾತ್ಯಾಯಿನಿ' ಕೂಡಾ 2018ರ ಕೆಮ್ತೂರು ನಾಟಕ ಸ್ಪರ್ಧೆಯ ಪ್ರಯೋಗಕ್ಕೆ ಈ ಬರಹದ ವೇಳೆ ಸಿದ್ಧಗೊಂಡಿದೆ.

2016ರಲ್ಲಿ ಉಡುಪಿಯ ಅನ್ವೇಷಣಾ (ರಿ) ಸಂಘಟನೆ ಎಂ.ಜಿ.ಎಂ.ನ ರವೀಂದ್ರ ಮಂಟಪದಲ್ಲಿ ಪ್ರದರ್ಶಿಸಿದ ತುಳು 'ಅಂತಿಗೊನೆ' ನಾಟಕ ಹಲವು ದೃಷ್ಟಿಗಳಿಂದ ಗಮನಾರ್ಹವಾಗಿತ್ತು. ಮೂಲತಃ ಗ್ರೀಕ್ ಪರಂಪರೆಯ ಮಹತ್ವದ ಈ ನಾಟಕವನ್ನು ತುಳು ಭಾಷೆಯಲ್ಲಿ ಹೊಸ ಆಶಯದೊಂದಿಗೆ ಅನುವಾದಿಸಿ ಯಶಸ್ವಿಯಾದವರು ಸತ್ಯ ಉಡುಪಿ. ನಿರ್ದೇಶನ ಯಶ್ ಶೆಟ್ಟಿ, ಇದರ ರಂಗವಿನ್ಯಾಸ, ವೇಷಭೂಷಣ, ಬೆಳಕು, ಸಂಗೀತ ಹಿತಮಿತ ಬಳಕೆ, ನಟರ ಅಭಿನಯ – ಎಲ್ಲದರಲ್ಲೂ ಹೊಸ ಪರಿಣಾಮಗಳನ್ನು ಈ ನಾಟಕ ನೀಡಿತು (ಪ್ರಭಾಕರ ತುಮರಿ ಅವರ ವಿಶ್ಲೇಷಣೆ).

**2018ರ ಕೆಮ್ತೂರು ನಾಟಕ ಸ್ಪರ್ಧೆಯಲ್ಲಿ ಪ್ರಥಮ ಪ್ರಶಸ್ತಿ ಗೆದ್ದ ನಾಟಕ 'ರಕ್ಕಸತಂಗಡಿ'. ತಂಡ : ಸಂಗಮ ಕಲಾವಿದೆರ್ ಮಣಿಪಾಲ. ಮೂಲ : ಗಿರೀಶ್ ಕಾರ್ನಾಡ್, ತುಳುವಿಗೆ : ನಾಗೇಶ್ ಉದ್ಯಾವರ. ನಿರ್ದೇಶನ: ಪ್ರಶಾಂತ್ ಉದ್ಯಾವರ (ತಾಳಿಕೋಟೆ ಯುದ್ಧದ ಐತಿಹಾಸಿಕ ಕಥನ)**

## ತುಳುವಿನಲ್ಲಿ ಪ್ರಯೋಗವಾದ ಅನುವಾದ ನಾಟಕಗಳು

| | |
|---|---|
| ಬಾಲೆ ಬಂಗಾರ್ | ಸದಾನಂದ ಸುವರ್ಣ (ಮೂಲ ಬಂಗಾಳಿ–ಶಂಭುಮಿತ್ರ) |
| ಸಮಾಜದ ವೈರಿ: | 1955. ಅನು:ಬಿ.ಎಸ್. ಕುರ್ಕಾಲ್ (ಮೂಲ ಮರಾಠಿ : ಎಕ್‌ಚ್ ಪ್ಯಾಲಾ ಗಡ್ಕರಿ) |
| ಚಕ್ರವ್ಯೂಹ | ಕೆ. ರಾಧಾಕೃಷ್ಣ (ಮೂಲ: ಮಲಯಾಳಂ 'ಜ್ವಲನಂ' – ಸಿ.ಎಲ್. ಜೋಸ್) |
| ಜೋಕುಮಾರ ಸ್ವಾಮಿ | 1980. ಅಮೃತ ಸೋಮೇಶ್ವರ (ಮೂಲ ಕನ್ನಡ: ಡಾ. ಚಂದ್ರಶೇಖರ ಕಂಬಾರ) |
| ಚೋಮನ ದುಡಿ | ಕೆದಂಬಾಡಿ ಜತ್ತಪ್ಪ ರೈ (ಮೂಲ ಕನ್ನಡ: ಡಾ. ಕೆ. ಶಿವರಾಮ ಕಾರಂತ, ರಂಗರೂಪ: ಮೋಹನ ಸೋನಾ) |
| ಕಾಬೂಲಿವಾಲೆ | ಕೆದಂಬಾಡಿ ಜತ್ತಪ್ಪ ರೈ (ಮೂಲ: ರಬೀಂದ್ರನಾಥ್ ಠಾಗೋರ್) |
| ಸೂದ್ರೆ ಏಕಲವ್ಯೆ | ಕೆದಂಬಾಡಿ ಜತ್ತಪ್ಪ ರೈ (ಮೂಲ ಕನ್ನಡ: ಕುವೆಂಪು) |
| ಒಂಜಿ ಪಾತೆರ ಕೇಂಡಿಜತ್ತಾ? | ಮಂ. ಆನಂದಶೆಟ್ಟಿ (ಮೂಲ ಮಲಯಾಳಿ: ಕುರಂದಿಕಳಂ) |
| ತೆಲಿಪುವಲ್ ಜಾಗ್ರತೆ | ದಿ. ಸೋಮಶೇಖರ ಪುತ್ರನ್ (ಊರೆಲ್ಲಾ ಹೇಳ್ಬೇಡಿ– ರಮಾನಂದ ಚೂರ್ಯ ಮರಾಠಿ ಮೂಲದ ನಾಟಕ) |
| ಮೋಲುದಾನಿ ಮುಪ್ಪತ್ತಾಜಿ | ವಸಂತ ಕದ್ರಿ (ಮೂಲ : ರಮಾನಂದ ಚೂರ್ಯ) |
| ಬಸ್ತಿ | ಮೋಹನಚಂದ್ರ (ಮೂಲ ಜಪಾನಿ: ಆಕಿರಾ ಕುರೋಸವನ ರಶೋಮನ್) |
| ವಾರ್ಡ್ ನಂಬರ್ ಆಜಿ | ಮೋಹನಚಂದ್ರ (ಮೂಲ: ಏಂಟನ್ ಚೆಕಾವ್‌ನ ward no.6) |
| ಯಯಾತಿ | ಪ್ರೇಮಾನಂದ ಕಿಶೋರ್ (ಮೂಲ: ಗಿರೀಶ್ ಕಾರ್ನಾಡ್) |
| ಕೊಂಬುದ ಮಾನಿಲು | ಕೆ. ಮಹಾಲಿಂಗ ಭಟ್ (ಕನ್ನಡ ಮೂಲದ ಅವರದೇ ಕೃತಿ, ಕೊಂಬಿನವರು) |
| ಕನತ್ತ ಪೊಣ್ಣು | ಮಂದಾರ ಕೇಶವ ಭಟ್ಟ (ಮೂಲ ಸಂಸ್ಕೃತ ಭಾಸನ ಸ್ವಪ್ನವಾಸವದತ್ತ) |
| ಕಾಲಚಕ್ರ | ಎಚ್ಕೆ ಕರ್ಕೇರ (ಮೂಲ ಮರಾಠಿ: ಜಯವಂತ ದಳವಿ) |
| ಪುರುಷೆ | ಎಚ್ಕೆ ಕರ್ಕೇರ (ಮೂಲ ಮರಾಠಿ: ಜಯವಂತ ದಳವಿ) |
| ಗೊಬ್ಬೊಂದು ಗೊಬ್ಬೊಂದು | ಎಚ್ಕೆ ಕರ್ಕೇರ (ಮೂಲ ಮರಾಠಿ: ಜಯವಂತ ದಳವಿ) |
| ಚೋಮೆ | ವಾಮನ ನಂದಾವರ (ಕನ್ನಡ ಮೂಲ: ಆರ್. ನಾಗೇಶ್) |
| ಬೇಲಿ–ಬೈಲ್ | ಮನೋಹರ ಪ್ರಸಾದ್ (ಮೂಲ ಕನ್ನಡ: ಬೇಲಿ ಮತ್ತು ಹೊಲ–ಕುಂ.ವೀ.) |

| | |
|---|---|
| ಹಲೋ ಮಿಸ್ಟರ್ ದೂಮಣ್ಣ | ಮನೋಹರ ಪ್ರಸಾದ್ (ಮೂಲ ಫ್ರೆಂಚ್: ಬೂರ್ಶ್ವಾದ ಜಂಟಲ್‌ಮೆನ್– ಮೋಲಿಯರ್) |
| ರೈಲ್ | ಮನೋಹರ ಪ್ರಸಾದ್ (ಮೂಲ ಕನ್ನಡ–ಕುದುರೆ ಬಂತು ಕುದುರೆ– ರಾಮಚಂದ್ರದೇವ) |
| ಬೋಂಟೆ | ಉದ್ಯಾವರ ನಾಗೇಶ್ ಕುಮಾರ್* (ಮೂಲ:ಕುಂ.ವೀ.) |
| ಬಂಟಮಲೆ ಬೀರೆ | " (ಮೂಲ:ಶೇಕ್ಸ್‌ಪಿಯರ್‌ನ ಮ್ಯಾಕ್‌ಬೆತ್) |
| ಊರುಗೊಂಜಿ ಸಂಗೆ | " (ಮೂಲ: ಕಂಬಾರರ ಸಂಕ್ರಾಂತಿ) |
| ಸೋಮಿನ ಸೌಭಾಗ್ಯೊ | " (ಮೂಲ: ಕಾರಂತರ ಸೋಮಿಯ ಸೌಭಾಗ್ಯ) |
| ಒಯ್ಲ್‌ಗ್ ತಿಕ್ಕಿನಕ್ಲು– | |
| ಪುನರ್ವಸು | " (ಮೂಲ: ಸುಳಿಗೆ ಸಿಕ್ಕವರು–ಎಸ್.ಜೆ. ಶಿವಶಂಕರ್) |
| ಗುವೆಲ್ ಕಳವಾತ್‌ಂಡ್ | ಕೆ. ಆನಂದ ಗಾಣಿಗ (ಮೂಲ ಕನ್ನಡದ ಸಣ್ಣಕಥೆ) |
| ಆಸೆ | ಕೆ. ಜಯರಾಂ ಆಳ್ವ(ಮೂಲ: ಮರಾಠಿ) |
| ಜೋಕುಲು–ಬಾಲೆಲು | ಶಿಮುಂಜೆ ಪರಾರಿ (ಮೂಲ ಮರಾಠಿ: ಅಶೋಕ್ ಪಾಟೋಳೆ) |
| ಬಿನ್ನೆ | ಪಾರ್ವತಿ ಜಿ. ಐತಾಳ್ (ಎರಡು ನಾಟಕಗಳು ಬಿನ್ನೆ– ಮೂಲ: ರೂಪರ್ಟ್ ಬ್ರೂಕ್‌ನ ಲಿತುವೇನಿಯಾ) |
| ಆ ಇಲ್ಲ್ ದಾಯೆ | ಮೂಲ: ಹಗ್ ಬೆರೆಸ್‌ಫೋರ್ಡ್‌ನ ದ ಮೇನ್ ಅಪ್‌ಸ್ಟೇರ್ಸ್) ಪಾರ್ವತಿ ಜಿ. ಐತಾಳ್, 2004. |
| ಚಂದ್ರಪ್ಪನ ಚಟದ ಯಾತ್ರೆ | ಕನ್ನಡ ಮೂಲ: ಬಾಲಸುಬ್ರಹ್ಮಣ್ಯಂ ಎನ್. ಆರ್. ಅನು: ಅರುಣ್ ಕುಮಾರ್ ಮಣಿಪಾಲ, 2004. |
| ಕತ್ತಲೆದ ತಾದಿ | ಅಂಬಾತನಯ ಮುದ್ರಾಡಿ (ಮೂಲ: ಡಿ.ಆರ್. ನಾಗರಾಜ್) 2004. |
| ಕೋರ್ಟ್ ಮಾರ್ಶಲ್ | " (ಮೂಲ : ಹಿಂದಿ, ಸ್ವದೇಶ್ ದೀಪಕ್, ಕನ್ನಡ ಸಿದ್ಧಲಿಂಗ ಪಟ್ಟಣಶೆಟ್ಟಿ) 2006 |
| ಏಕಲವ್ಯ | ಎಮ್. ಜಾನಕಿ ಬ್ರಹ್ಮಾವರ (ಮೂಲ : (ಕ) ಸಿದ್ಧಲಿಂಗಯ್ಯ) |
| ರಕ್ತಾಕ್ಷಿ | " (ಮೂಲ : ಕುವೆಂಪು) 2010 |
| ಶೂದ್ರ ತಪಸ್ವಿ | " (ಮೂಲ : ಕುವೆಂಪು) 2010 |
| ಮಾಯೊದ ಮುಗ್ಗ | " (ಮೂಲ : ಕನ್ನಡ, ಕೆ.ಟಿ.ಗಟ್ಟಿ), ಅಪ್ರಕಟಿತ, 2009 |
| ತುಕ್ರನ ಕನ | " (ಮೂಲ : ಡಾ. ಚಂದ್ರಶೇಖರ ಕಂಬಾರ) |
| ಆಜಂದಿ ಅಸರ್ | " (ಮೂಲ : ?) |
| ನಾಗಮಂಡಲ | ಡಾ. ಕಾತ್ಯಾಯಿನಿ ಕುಂಜಿಬೆಟ್ಟು |

(ಮೂಲ : ಗಿರೀಶ್ ಕಾರ್ನಾಡ್)

| | |
|---|---|
| ಕೋಮಲ ಗಾಂಧಾರ | ಡಾ. ಜಿ.ಪಿ. ಕುಸುಮ (ಮೂಲ ಹಿಂದಿ : ಶಂಕರ್ ಶೇಷ್), 2014 |
| ಅಂತಿಗೊನೆ | ಸತ್ಯ ಉಡುಪಿ (ಮೂಲ : ಗ್ರೀಕ್ ನಾಟಕದ ಅನುವಾದ), 2016 |
| ಶಾಕುಂತಲ | ಡಾ. ಭರತ್ ಕುಮಾರ್ ಪೊಲಿಪು (ಮೂಲ : ಕಾಳಿದಾಸನ ಕೃತಿ) |

* ಅನಂತರವೂ ಉದ್ಯಾವರ ನಾಗೇಶ್ ಕುಮಾರ್ 'ಸಮ್ಮಾಗರನ ಸಂಸಾರೊ', 'ಕತ್ತಲೆಗ್ ಪತ್ತ್ ತರೆ', 'ರಕ್ಕಸ-ತಂಗಡಿ', 'ಟ್ರೈನ್ ಟು ಪಾಕಿಸ್ತಾನ್' ಇತ್ಯಾದಿ ಹಲವಾರು ನಾಟಕಗಳನ್ನು ಅನುವಾದಿಸಿ ತುಳುವಿನಲ್ಲಿ ಅದನ್ನು ಬೇರೆ ಬೇರೆ ಹವ್ಯಾಸಿ ತಂಡಗಳು ಪ್ರಯೋಗಕ್ಕೆ ತಂದರು.

* * *

## ಮಕ್ಕಳ ನಾಟಕಗಳು

ಮಕ್ಕಳ ನಾಟಕವೆಂಬುದು ತುಳುವಿನಲ್ಲಿ ಢಾಳವಾಗಿ ಕಾಣಿಸಿಕೊಂಡಿಲ್ಲವಾದರೂ ಇಂದು ದೃಷ್ಟಿಯಿಂದ ತುಳು ನಾಟಕದ ಪ್ರಾರಂಭ ದಿಸೆಯಿಂದಲೂ ಶಾಲೆಗಳ ಪರಿಸರದಲ್ಲಿ ಈ ಕೆಲಸ ಸಾಗುತ್ತ ಬಂತು.

### ಮೈಮ್ ರಮೇಶ್

ಇಂದು ಕರ್ನಾಟಕ ರಂಗಭೂಮಿಯಲ್ಲಿ ಖ್ಯಾತನಾಮರಾಗಿ, ಮೈಸೂರು ರಂಗಾಯಣದ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸುತ್ತಿರುವ ಮೈಮ್ ರಮೇಶ್ ಮೂಲತಃ ತುಳುವಿನ ಅಪ್ಪಟ ಪ್ರತಿಭೆ. ಯಕ್ಷಗಾನ, ಮೂಕಾಭಿನಯ, ಬೀದಿನಾಟಕಗಳಲ್ಲಿ ಸಕ್ರಿಯರಾಗಿದ್ದವರು. 80ರ ದಶಕದಲ್ಲಿ ಕಾರ್ನಾಡರ 'ನಾಗಮಂಡಲ', ಶೇಕ್ಸ್‌ಪಿಯರ್‌ನ 'ಕಿಂಗ್ ಲಿಯರ್', ಆ್ಯಂಟನ್ ಚೆಕಾವ್‌ನ ನಾಟಕಗಳನ್ನು ತುಳು ಭಾಷೆಗೆ ಅನುವಾದಿಸಿ ನಿರ್ದೇಶಿಸಿ ಮಕ್ಕಳ ಮೂಲಕ ಪ್ರಯೋಗಿಸಿದರು. ತಮ್ಮ ನಾಲ್ಕು ದಶಕಗಳ ರಂಗಕಾಯಕದಲ್ಲಿ ಹೆಚ್ಚು ಕಾಲ ಮಕ್ಕಳ ರಂಗಭೂಮಿಯಲ್ಲಿ ತೊಡಗಿಸಿಕೊಂಡವರು. ಕರ್ನಾಟಕ ನಾಟಕ ಅಕಾಡೆಮಿಯ 2018ರ ವಾರ್ಷಿಕ ಪ್ರಶಸ್ತಿ ಸೇರಿದಂತೆ ಹತ್ತಾರು ಗೌರವ, ಪ್ರಶಸ್ತಿಗಳು ಇವರಿಗೆ ಸಂದಿವೆ.

ಹವ್ಯಾಸಿ ರಂಗಭೂಮಿ ಬೆಳೆಯತೊಡಗಿದ ಕಾಲದಲ್ಲಿ ಮೋಹನ ಸೋನ, ಐ.ಕೆ.

ಬೊಳುವಾರ್, ಗುರುರಾಜ ಮಾರ್ಪಳ್ಳಿ, ದಿ. ಸುರೇಶ್ ಹಂದಾಡಿ, ಎಂ.ಸಿ. ರಾಮು, ಜೀವನ್ ರಾಂ ಸುಳ್ಯ, ಕೆ.ಕೆ.ಪೇಜಾವರ, ಬಾಸುಮ ಕೊಡಗು, ಗೋಪಾಡ್ಕರ್, ಶೀನಾ ನಾಡೋಳಿ – ಮುಂತಾದವರು ಮಕ್ಕಳೊಂದಿಗೆ ತೊಡಗಿಕೊಂಡು ಕೆಲಸ ಮಾಡಿದ್ದಾರೆ. ಶಕುಂತಳಾ ಭಟ್, ಕ್ಯಾಥರಿನ್ ರೊಡ್ರಿಗಸ್, ಕನರಾಡಿ ವಾದಿರಾಜ ಭಟ್ಟ, ಕೆದಂಬಾಡಿ ಜತ್ತಪ್ಪ ರೈ (ಅಸೆನಿಯಾಗೊ ಕಾಂತಗೊ ಜೋಗಿ, ಕಾಬೂಲಿವಾಲೆ, ಸೂದ್ರೆ ಏಕಲವ್ಯೆ), ಕುದ್ಕಾಡಿ ವಿಶ್ವನಾಥ ರೈ, ರಾಂ ಎಲ್ಲಂಗಳ ಮುಂತಾದವರ ಕೃತಿಗಳು, ಅಮೃತ ಸೋಮೇಶ್ವರರ 'ಎಲುವೆರ್ ದೆಯ್ಯಾರ್' – ಇತ್ಯಾದಿ ನೃತ್ಯರೂಪಕಗಳು ಪ್ರಯೋಗವಾಗಿವೆ. ಬಿ.ವಿ.ಕಾರಂತರು ಅಗಲುವ ಮುನ್ನ (2004ರಲ್ಲಿ) ಮಂಗಳೂರಿಗೆ ಬಂದು, ಮಕ್ಕಳ ನಾಟಕ ತರಬೇತಿ ನೀಡಿ ಹೋದದ್ದೊಂದು ಅವಿಸ್ಮರಣೀಯ ಘಟನೆ. 'ಪರಿವಾರ ರಂಗ ಸುಳ್ಯ', 'ಮಕ್ಕಳ ಧ್ವನಿ' –ಮುಂತಾದ ಸಂಸ್ಥೆಗಳ ಮೂಲಕ ಹಲವು ಪ್ರತಿಭಾಶಾಲಿ ಶಿಕ್ಷಕರು, ರಂಗಕರ್ಮಿಗಳು – ಮಕ್ಕಳ ರಂಗ ತರಬೇತಿಗಾಗಿ ದುಡಿದಿದ್ದಾರೆ. ಎಂ. ವೆಂಕಪ್ಪಯ್ಯ ಕಾರಂತರ 'ಮಾಸ್ಟೆರೆ ಪಜೀತಿ' (1970), ಟಿ.ಜಿ.ಮುಡೂರರ 'ಜೋಕುಲೆ ಬುದ್ಧಿ' (1971), ಯು. ಗೋಪಾಲ ಶೆಟ್ಟಿ ಕವತ್ತಾರು ಇವರ ಜೋಕ್ಲೆನ ನಾಟಕೊಲು (2003), ಎಚ್. ಶಕುಂತಲಾ ಭಟ್ ಇವರ ಪಂಚಾಕ್ಷರಿ 2002 ಮುಂತಾದ ಮಕ್ಕಳ ನಾಟಕಗಳು ಪ್ರಕಟವಾಗಿ ಸ್ಥಳೀಯವಾಗಿ ಮಕ್ಕಳಿಂದ ಪ್ರದರ್ಶನ ಕಂಡಿವೆ. ಮಂಗಳೂರು ಆಕಾಶವಾಣಿ. ಅನೇಕ ವರ್ಷಗಳ ಕಾಲ ವರ್ಷಕ್ಕೊಮ್ಮೆ ನಡೆಸುವ ಹೊರಾಂಗಣ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ತುಳು ಮಕ್ಕಳ 15–20 ನಿಮಿಷಗಳ ಅವಧಿಯ ಸಂಗೀತ ನಾಟಕ, ರೂಪಕಾದಿ ಕಾರ್ಯಕ್ರಮಗಳನ್ನು ಅವಿಭಜಿತ ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ ಪ್ರದರ್ಶಿಸಿದೆ. ಚಿನ್ನಾ ಕಾಸರಗೋಡು, ವಿಜಯಕುಮಾರ್ ಶೆಟ್ಟಿ ಕೆಮ್ಮಣ್ಣು, ಮಹಾಲಿಂಗ, ದಿನೇಶ್ ಅತ್ತಾವರ, ವಿದ್ದು ಉಚ್ಚಿಲ್ ಮುಂತಾದವರೂ ವಿವಿಧ ಕಾಲಘಟ್ಟಗಳಲ್ಲಿ ಮಕ್ಕಳ ರಂಗಭೂಮಿಗಾಗಿ ಕೆಲಸ ಮಾಡಿದ್ದಾರೆ.

ದಿನೇಶ್ ಅತ್ತಾವರ ನಿರ್ದೇಶನದಲ್ಲಿ ತೊಕ್ಕೊಟ್ಟಿನಲ್ಲಿ ಬಯಲು ರಂಗಮಂಟಪದಲ್ಲಿ ಜರಗಿದ ಮಕ್ಕಳ ತರಬೇತಿ ಶಿಬಿರದಲ್ಲಿ ಪ್ರಸ್ತುತಪಡಿಸಲಾದ ಕಿರುನಾಟಕ, 2018

# ತುಳು ರಂಗಭೂಮಿ – ಪ್ರಬುದ್ಧತೆಯತ್ತ

ರಂಗಭೂಮಿಯ ಇತಿಹಾಸವು ಆವಿಷ್ಕಾರಗಳ ಸರಣಿ. ಸಮಾಜದ ಸಾಂಸ್ಕೃತಿಕ ಸ್ಥಿತ್ಯಂತರಗಳಿಗೆ ನಾಟಕಗಳು ಸಂವಾದಿಯಾಗುತ್ತವೆ. ಇಂದು ತುಳು ರಂಗಭೂಮಿಯೊಂದು ಗಂಭೀರ ಚಳುವಳಿಯ ಸ್ವರೂಪಕ್ಕೆ ತಲುಪಿದೆ. ಇದಕ್ಕೆ ಕಾರಣವೆಂದರೆ ಹೊಸ ತಲೆಮಾರಿನ ಹಲವು ಮಂದಿ ಪ್ರತಿಭಾವಂತ ರಂಗಕರ್ಮಿಗಳು ನೀನಾಸಂ ಮುಂತಾದೆಡೆ ರಂಗ ತರಬೇತಿ ಪಡೆದು, ತುಳುವಿನತ್ತ ಗಮನ ಹರಿಸತೊಡಗಿದರು. ತುಳುವಿನ ಶ್ರೀಮಂತ ಸಾಂಸ್ಕೃತಿಕ ಪರಂಪರೆ, ಜನಪದ ಸಾಹಿತ್ಯ, ಇಲ್ಲಿನ ಬಹು ಸಂಸ್ಕೃತಿಯ ಸೊಬಗು–ಸವಾಲು, ರಾಜಕೀಯ ಸಾಮಾಜಿಕ ಏಳುಬೀಳುಗಳ ಕಥೆಗಳನ್ನು ವಿಸ್ತೃತ ನೋಟ–ಒಳನೋಟಗಳೊಂದಿಗೆ ನಾಟಕ ಬಂಧಕ್ಕೆ ಒಗ್ಗಿಸಲು ಶ್ರಮಿಸತೊಡಗಿದುದು. ಹಳೆಯ ತಲೆಮಾರಿನ ವಿರಳ ಪ್ರತಿಭಾವಂತರು ತೋರಿಸಿಕೊಟ್ಟಿದ್ದ ಇಂಥ ಸಾಧ್ಯತೆಗಳ ಎಳೆ ಇಂದು ಗಟ್ಟಿಗೊಳ್ಳುತ್ತಲಿದೆ.

ಕಥಾವಸ್ತು, ಭಾಷೆ, ತಂತ್ರ, ಮೌಲ್ಯದ ದೃಷ್ಟಿಯಿಂದ ಉತ್ತಮವಾಗಿ ಬರುತ್ತಿರುವ, ರಂಗಸಾಧ್ಯತೆಯ–ಕೆಲವು ಕೃತಿಗಳನ್ನು ನಿರ್ದೇಶಿಸಲು ಇಂದು ಹಲವರು ಮುಂದೆ ಬರುತ್ತಿದ್ದಾರೆ. ಮೋಹನ ಸೋನ, ಐ.ಕೆ. ಬೊಳುವಾರು, ಕೃಷ್ಣಮೂರ್ತಿ ಕವತ್ತಾರು, ರಂಗಾಯಣದ ಮೈಮ್ ರಮೇಶ್, ಗುರುರಾಜ ಮಾರ್ಪಳ್ಳಿ, ಕೆ.ಕೆ. ಪೇಜಾವರ, ಉದ್ಯಾವರ ನಾಗೇಶ್ ಕುಮಾರ್, ಜೀವನ್‌ರಾಮ್ ಸುಳ್ಯ, ಬಾಸುಮ ಕೊಡಗು, ಶೀನಾ ನಾಡೊಳಿ, ಸುದೇಶ್ ರಾವ್ ಮಣಿಪಾಲ, ಬಾಲಕೃಷ್ಣ ಕೊಡವೂರು, ಸಂತೋಷ್ ನಾಯಕ್ ಪಟ್ಲ – ಮೊದಲಾದವರು ಹಾಗೂ ಮುಂಬಯಿಯ ಹಲವರು ತುಳು ನಾಟಕ ನಿರ್ದೇಶನದಲ್ಲಿ ಗಂಭೀರವಾಗಿ ತೊಡಗಿಕೊಂಡಿದ್ದಾರೆ. ಭಾರತೀಯ ಇತರ ಭಾಷಾ ಶ್ರೇಷ್ಠ ನಾಟಕಗಳಿಗೆ ಸರಿಗಟ್ಟುವ ಸ್ವರೂಪವನ್ನು ತುಳುವಿಗೆ ನೀಡುತ್ತಿದ್ದಾರೆ. ಇಷ್ಟೇ ಅಲ್ಲ, ವಿವಿಧ ಪ್ರದೇಶಗಳಲ್ಲಿ ಹೊಸ ಹೊಸ ಕಲಾವಿದರನ್ನು ತರಬೇತಿಗೊಳಿಸುವುದರಲ್ಲೂ ಸಕ್ರಿಯರಾಗುತ್ತಿದ್ದಾರೆ.

ಕೆದಂಬಾಡಿಯವರು ಅನುವಾದಿಸಿದ ಕಾರಂತರ 'ಚೋಮನ

ದುಡಿ'ಯನ್ನು 1986ರಲ್ಲಿ ಮೋಹನ ಸೋನರು ರಂಗರೂಪಕ್ಕಿಳಿಸಿ ವಿಟ್ಲದಲ್ಲಿ ಬೃಹತ್ ತಂಡವೊಂದಕ್ಕೆ ನಿರ್ದೇಶಿಸಿದರು. ವಿಶಾಲ ರಂಗಭೂಮಿ ಕಲ್ಪನೆಯ ಆ ಪ್ರದರ್ಶನ ಅತ್ಯಂತ ಯಶಸ್ವಿಯಾಗಿ ಅಪಾರ ಸಂಖ್ಯೆಯ ಗ್ರಾಮೀಣ ಪ್ರೇಕ್ಷಕರನ್ನು ಮನಸೂರೆ ಗೊಂಡಿತ್ತು.

2000ನೇ ಇಸವಿಯಲ್ಲಿ 'ಅಭಿವ್ಯಕ್ತ' ತಂಡವು ಅಮೃತ ಸೋಮೇಶ್ವರರಿಂದ 'ಕೊಡಿಮರ' ನಾಟಕ ಬರೆಯಿಸಿ, ಬಿ.ವಿ. ಕಾರಂತರ ನಿರ್ದೇಶನದಲ್ಲಿ ಎಪಿಕ್ ಥಿಯೇಟರ್ ಮಾದರಿಯಲ್ಲಿ ಅದು ಮಂಗಳೂರಿನಲ್ಲಿ ಪ್ರದರ್ಶನಗೊಂಡಿತು. ಡಿ.ಕೆ. ಚೌಟರ 'ಪಿಲಿಪತ್ತಿ ಗಡಸ್' (ಹುಲಿ ಹಿಡಿದ ಕನಸು) ನಾಟಕವನ್ನು ಎನ್.ಎಸ್.ಡಿ. ಪದವೀಧರ ಸುರೇಶ್ ಆನಗಳ್ಳಿ, ನೀನಾಸಂ ಪದವೀಧರರಾದ ಬಾಸುಮ ಕೊಡಗು, ಜೀವನ್‌ರಾಂ ಸುಳ್ಯ, ವಿವಿಧ ರಂಗತಂಡಗಳಿಗಾಗಿ ನಿರ್ದೇಶಿಸಿ ಪ್ರಯೋಗಿಸಿದ್ದಾರೆ. ಗಿರೀಶ್ ಕಾರ್ನಾಡರ 'ನಾಗಮಂಡಲ'ವನ್ನು ಮೈಮ್ ರಮೇಶ್ ತುಳುರಂಗಭೂಮಿಗೆ ತಂದರು. ಶೀನಾ ನಾಡೋಳಿಯವರು ಮನು ಇಡ್ಯರ 'ತಿರ್ಸಂಕು', ಜನಾರ್ದನ ಕಣಕ್ಕೂರರ 'ಅಸುದ್ದೊ', ಗಣೇಶ್ ಅಮೀನರ 'ಮಾಯದ ಕಾಯಿ'ಯನ್ನು ನಿರ್ದೇಶಿಸಿದ್ದಾರೆ. ಈಯೆಲ್ಲ ಪ್ರಯೋಗಶೀಲ ನಿರ್ದೇಶಕರು ಹಾಗೂ ಪ್ರತಿಭಾವಂತ ಹವ್ಯಾಸಿ ಕಲಾವಿದರು ಅಚ್ಚುಕಟ್ಟಿನ ನಿರ್ವಹಣೆಯಿಂದ ತುಳು ನಾಟಕಗಳ ಬಗ್ಗೆ ಪ್ರೇಕ್ಷಕರು ಅಭಿಮಾನ ಪಡುವಂತೆ ಮಾಡಿದ್ದಾರೆ.

ಈಚಿನ ನಾಟಕ ಸ್ಪರ್ಧೆಗಳ ವೇಳೆ ಹಲವು ಹವ್ಯಾಸಿ ನಾಟಕ ತಂಡಗಳು ಉತ್ಕೃಷ್ಟ ಪ್ರದರ್ಶನದಿಂದಾಗಿ ಗಮನ ಸೆಳೆದಿವೆ. 'ನಮ ತುಳುವೆರ್' ಕಲಾವಿದರು, ಮುದ್ರಾಡಿ, ಸಂಗಮ ಕಲಾವಿದರು, ಮಣಿಪಾಲ, ರಂಗತರಂಗ, ಕಾಪು, ಕಂಬಳ ಕಲಾ ಮತ್ತು ಸಾಹಿತ್ಯ ವೇದಿಕೆ, ಕಟಪಾಡಿ, ನಾರಾಯಣ ಗುರು ಸಾಂಸ್ಕೃತಿಕ ಸಂಘ, ಹಳೆಯಂಗಡಿ ಕರಾವಳಿ ಕಲಾವಿದೆರ್, ಸರಸ್ವತಿ ಯುವಕ ಮಂಡಲ, ಮಲ್ಪೆ ಕಲಾರಂಗ ಕಾರ್ಕಳ, ಸುಮನಸಾ ಕೊಡವೂರು, ಕೂಡ್ದಿ ಕಲಾವಿದೆರ್ ಪೆರ್ಡೂರು, ರಂಜನಾ ಕಲಾವಿದರು ಕಟಪಾಡಿ-ಮುಂತಾದ ಹವ್ಯಾಸಿ ತಂಡಗಳು ಉಡುಪಿಯ ಕೆಮ್ತೂರು ಸ್ಮಾರಕ ನಾಟಕ ಸ್ಪರ್ಧೆಯಲ್ಲಿ ಪ್ರದರ್ಶನ ನೀಡಿದವು.

ತುಳುನಾಟಕ ರಂಗಕ್ಕೆ 20ನೇ ಶತಮಾನ ಹೊಸ್ತಿಲಿನ ಮಹತ್ವದ ಕೊಡುಗೆ ಗಳಲ್ಲೊಂದು ಆನಂದಕೃಷ್ಣರ (ಡಿ.ಕೆ.ಚೌಟ ಬೆಂಗಳೂರು) 'ಪಿಲಿಪತ್ತಿ ಗಡಸ್' 1998ರಲ್ಲಿ ಪ್ರಕಟವಾದ ಈ ನಾಟಕ, ಮೊದಲು ರಾಷ್ಟ್ರೀಯ ನಾಟಕ ಶಾಲೆಯ ಸುರೇಶ್ ಆನಗಳ್ಳಿ ನಿರ್ದೇಶನದಲ್ಲಿ ಬೆಂಗಳೂರಿನ 'ನಲಿಕೆ' ತಂಡದವರಿಂದ ಕೆಲವು ಪ್ರಯೋಗ ಕಂಡಿತು.

ಆ ಬಳಿಕ, ಹಲವಾರು ವರ್ಷಗಳಿಂದ ನಾಟಕ ಚಟುವಟಿಕೆ ನಡೆಸುತ್ತಿರುವ ಕಾರ್ಕಳ ಮುದ್ರಾಡಿಯ 'ನಮ ತುಳುವೆರ್' ಕಲಾಸಂಘಟನೆ ಜೀವನ್‌ರಾಂರಂತಹ ಕೆಲವು ಸಮರ್ಥ ನಿರ್ದೇಶಕರಿಂದ ತರಬೇತುಗೊಳ್ಳುತ್ತಾ, ಉಡುಪಿಯಲ್ಲೂ, ಬಳಿಕ ಬೆಂಗಳೂರಿನಲ್ಲಿ ನಡೆದ ರಾಷ್ಟ್ರೀಯ ನಾಟಕ ಸ್ಪರ್ಧೆಯಲ್ಲೂ ತುಳುವಿಗೆ ('ಪಿಲಿಪತ್ತಿ ಗಡಸ್') ಬಹುಮಾನ ತಂದುಕೊಂಡಿದೆ. ಪಾಳೆಯಗಾರಿ ಯುಗದ ಸಮಾಜದಲ್ಲಿ

ಹೆಣ್ಣಿನ ಮೇಲಾಗುತ್ತಿದ್ದ ಶೋಷಣೆಯ ಕಥಾವಸ್ತು ಇವರದು. ಲೈಂಗಿಕ ಮೌಲ್ಯವೊಂದು ಸಾಮಾಜಿಕ, ಐತಿಹಾಸಿಕ ಪರಿಭಾಷೆಯ ಮುಖಾಂತರ ಪರೀಕ್ಷೆಗೊಳಪಟ್ಟು, ಮೂರ್ತ-ಅಮೂರ್ತಗಳು ಮುಖಾಮುಖಿಯಾಗುವ 'ಪಿಲಿಪತ್ತಿ ಗಡಸ್', ರಂಗಸೂತ್ರದ ಔಚಿತ್ಯವನ್ನು ಭಾಷೆಯ ನೆಲೆಯಲ್ಲಿ ವಿಸ್ತರಿಸಿ ಆರಂಭದಲ್ಲಿ ಸಂಪ್ರದಾಯನಿಷ್ಠ ಪ್ರೇಕ್ಷಕರನ್ನು ಹುಬ್ಬೇರಿಸಿದರೆ, ತುಳು ಜನಪದ ಕಥಾಹಂದರವೊಂದು ಪಾಶ್ಚಾತ್ಯ ಪರಿಕಲ್ಪನೆಯನ್ನು ಮೈಗೂಡಿಸಿಕೊಂಡು, ರಂಗಮಾಧ್ಯಮದ ಹಲವು ಸಾಧ್ಯತೆಗಳನ್ನು ಬಿಂಬಿಸಿದ ಸಂಕೀರ್ಣ ನಾಟಕವಾಗಿ ಅಪಾರ ಪ್ರೇಕ್ಷಕರ ಮೆಚ್ಚುಗೆ ಪಡೆಯಿತು. ಬೆಂಗಳೂರು ಸೇರಿದಂತೆ ಹಲವು ಊರು, ಹೊರ ರಾಜ್ಯಗಳಲ್ಲಿ ಮುದ್ರಾಡಿ ಕಲಾವಿದರಿಂದ ನಿರಂತರ ಪ್ರಯೋಗವಾಗುತ್ತಾ 300 ಪ್ರಯೋಗಗಳನ್ನೂ ಮಿಕ್ಕಿ ಮುಂದುವರಿದಿದೆ.

ಚಂದ್ರಶೇಖರ್ ಬಿ.ಸಿ.ರೋಡ್ ಅವರ 'ಆಪಿನಿ ಪೂರಾ ಎಡ್ಡೆಗೇ', ಕೆ.ಜೆ. ಕೊಕ್ರಾಡಿಯವರ 'ಹೊನ್ನೂರ್ದ ಕತೆ', ನಾರಾಯಣ ನಂದಳಿಕೆ ಅವರ 'ಬೊಜ್ಜ', ಶಿಮುಂಜೆ ಪರಾರಿಯವರ (ಅನು) 'ಜೋಕುಲು-ಬಾಲೆಲು', ಸುದೇಶ್ ರಾವ್ ಮಣಿಪಾಲ ಅವರ ರಚನೆ, ನಿರ್ದೇಶನದ 'ಅಂಗರೆ', ಪ್ರಭಾಕರ ಕಲ್ಯಾಣಿಯವರ 'ಕಾಲ ಕೂಡ್ದು ಬನ್ನಗ'-ಮತ್ತಿತರ ನಾಟಕಗಳೂ ನೂತನ ಸಾಧ್ಯತೆಗಳೊಂದಿಗೆ ಸ್ಪರ್ಧಾಕಣದಲ್ಲಿ ಪ್ರದರ್ಶಿತವಾಗಿವೆ.

ಇತ್ತೀಚಿನ ವರ್ಷಗಳಲ್ಲಿ ಉದ್ಯಾವರ, ಕಟಪಾಡಿ, ಪುಂಜಾಲಕಟ್ಟೆ, ಎಲ್ಲೂರು, ಅಡ್ಯಾರು ಮುಂತಾದೆಡೆ ಜರಗಿದ ನಾಟಕ ಸ್ಪರ್ಧೆಗಳು ಹಾಗೂ ಉಡುಪಿಯಲ್ಲಿ ಕಳೆದ ಹದಿನೈದು ವರ್ಷಗಳಿಂದ (2002-2003) ಜರುಗುತ್ತಿರುವ, 'ಕೆಮ್ತೂರು ದೊಡ್ಡಣ್ಣ ಶೆಟ್ಟಿ ಸ್ಮಾರಕ ನಾಟಕ ಸ್ಪರ್ಧೆ'ಯಲ್ಲಿ ಹಲವು ಹಳೆಯ ಹೊಸ ಗಟ್ಟಿ ನಾಟಕಗಳು, ಸಮರ್ಥರ ನಿರ್ದೇಶನದಲ್ಲಿ ಉತ್ಸಾಹೀ ತಂಡಗಳಿಂದ ಪ್ರಯೋಗಕ್ಕೆ ಬಂದು, ತುಳುವೇತರ ಪ್ರೇಕ್ಷಕರ ಆಸಕ್ತಿಯನ್ನೂ ಹೊರಳಿಸಿಕೊಂಡಿರುವುದು ಗಮನಾರ್ಹ ಬೆಳವಣಿಗೆ.

* * *

ಆರ್ಥಿಕ ಹೊರೆಯಿದ್ದಾಗ್ಯೂ ಈಗಲೂ ಹಲವು ನಾಟಕಕಾರರ ತುಳು ಪೌರಾಣಿಕ, ಚಾರಿತ್ರಿಕ ನಾಟಕಗಳಾದ -ಕೋಟಿಚೆನ್ನಯ್ಯ, ಕೋಡ್ದಬ್ಬು ತನ್ನಿಮಾನಿಗ, ದೈವರಾಜೆ ಬಬ್ಬುಸ್ವಾಮಿ, ಭೂತಾಳಪಾಂಡ್ಯೆ, ರಾಣಿ ಅಬ್ಬಕ್ಕ ಮುಂತಾದವು ಆಗೀಗ ವಿರಳವಾಗಿ ರಂಗದಲ್ಲಿ ಕಾಣಿಸಿಕೊಳ್ಳುತ್ತಿವೆ. ಕದ್ರಿ ನವನೀತ ಶೆಟ್ಟರ 'ಬೀರೆ ದೇವು ಪೂಂಜೆ', ಜನಾರ್ದನ ಪಡುಪಣಂಬೂರು ಅವರ 'ಅಗೋಳಿ ಮಂಜಣೆ', ರತ್ನಾಕರ ಕಾವೂರರ 'ಕಾರ್ನಿಕದ ಕೋಟಿ ಚೆನ್ನಯೆ', ಗಂಗಾಧರ ಕಿರೋಡಿಯನ್‌ರ 'ದೈವರಾಜೆ ಬಬ್ಬುಸ್ವಾಮಿ', ಬಿ.ಎಸ್. ಕರ್ಕೇರರ 'ಕಾರ್ನಿಕದ ತಗೆತಂಗಡಿ' ಕದ್ರಿ ನವನೀತ ಶೆಟ್ಟರ 'ಕಟೀಲ್ದಪ್ಪೆ ಉಳ್ಳಾಲ್ತಿ' ಮುಂತಾದವು ಇತ್ತೀಚಿನ ಯಶಸ್ವೀ ಹೊಸ ಪ್ರಯೋಗಗಳು.

ಹೀಗೆ ಕಳೆದ ಸುಮಾರು ಏಳು ದಶಕದಲ್ಲಿ ತುಳುಭಾಷೆಯಲ್ಲಿ ಸುಮಾರು ನಾಲ್ಕರಿಂದ ಐದು ಸಾವಿರದಷ್ಟು ನಾಟಕಗಳು ರಚನೆಗೊಂಡಿವೆ. ಪ್ರದರ್ಶನಕ್ಕೆ ಬಂದಿವೆ. (ಗೆಳೆಯ

ಮಹಾಲಿಂಗರು "ತುಳುವಿನಲ್ಲಿ ಕೊನೇಪಕ್ಷ ಹತ್ತು ಸಾವಿರವಾದರೂ ನಾಟಕಗಳು ರಚನೆಗೊಂಡಿವೆ" ಎನ್ನುತ್ತಾರೆ) ಕೆಲವು ಒಂದೇ ಪ್ರಯೋಗವಾದರೆ ಕೆಲವು ಹತ್ತಾರು ಪ್ರಯೋಗಗಳನ್ನೂ, ಹಲವು ಇಪ್ಪತ್ತು ಸಹಸ್ರಕ್ಕೆ ಮೀರಿದ ಪ್ರಯೋಗಗಳನ್ನೂ ಕಂಡಿವೆ. ಇವುಗಳಲ್ಲಿ ಸುಮಾರು ಐನೂರರಷ್ಟು ನಾಟಕಗಳು ಮುದ್ರಣಗೊಂಡಿರಬಹುದು. ಉಳಿದ ಕೃತಿಗಳು ಹಸ್ತಪ್ರತಿಯಲ್ಲೇ ಉಳಿದು ಹೆಚ್ಚಿನವು ನಶಿಸಿಹೋದವು.

ಒಟ್ಟಾರೆಯಾಗಿ ಹೇಳುವುದಾದರೆ ಪ್ರಾರಂಭದಲ್ಲಿ ಇಪ್ಪತ್ತನೇ ಶತಮಾನಾರಂಭದ ಶಿಕ್ಷಕ ತರಬೇತಿ ಶಾಲೆಯ ತುಳು ಪ್ರಹಸನಗಳು, ಪಣಿಯಾಡಿ ಕಾಲದ ನಾಟಕಗಳು ತುಳುರಂಗ ಚಟುವಟಿಕೆಗೆ ನಾಂದಿ ಹಾಡಿದರೆ ಕೆಮ್ತೂರರು, ಟೇಲರ್, ಪಾಂಡೇಶ್ವರ್ –ಮುಂತಾದವರ ಸಾಮಾಜಿಕ ಹಾಸ್ಯಮಿಶ್ರಿತ ನಾಟಕಗಳು ತುಳು ರಂಗಭೂಮಿಗೆ ಒಂದು ಚೌಕಟ್ಟನ್ನೊದಗಿಸಿದವು. ರಾಮ ಕಿರೋಡಿಯನ್, ಕೆ.ಬಿ. ಭಂಡಾರಿ, ಸೀತಾರಾಮ ಕುಲಾಲ್, ಯು.ಆರ್. ಚಂದರ್, ಕ್ಯಾಥರೀನ್, ವಿಜಯಕುಮಾರ್ ಕೆಮ್ಮಣ್ಣು ಮತ್ತಿತರರು ಜಾನಪದಕ್ಕೆ ಒಟ್ಟು ಪರಿಣಾಮಕ್ಕೆ ಒತ್ತು ನೀಡಿದರು. ದಂಡಕೇರಿ, ಮ್ಯೊದಿನಬ್ಬ, ಯು. ಮಚ್ಚೇಂದ್ರನಾಥ, ಇಬ್ರಾಹಿಂ, ಶಾಂತಾರಾಂ ಕಲ್ಲಡ್ಕ, ಸಾಲಿಯಾನ್, ಅಡ್ಯಾರ್, ನಂದಳಿಕೆ – ಮತ್ತಿತರರು ಸಾಂಸಾರಿಕ ಚಿತ್ರಣ ಕೊಟ್ಟರು. ಸದಾನಂದ ಸುವರ್ಣ, ಅಮೃತ ಸೋಮೇಶ್ವರ, ಕುದ್ಕಾಡಿ, ಮನು ಇಡ್ಯಾ, ಕೆ. ಆನಂದ ಗಾಣಿಗ, ಶ್ರೀನಾಥ್ ಮುಲ್ಕಿ – ಮತ್ತಿತರರ ನಾಟಕಗಳು ರಂಗಭಾಷೆ, ಸ್ವರೂಪ, ವೈಚಾರಿಕ ತುಡಿತಕ್ಕೆ ಗಮನಾರ್ಹವಾದವು. ಮನು ಇಡ್ಯಾರಂಥವರು ನವ್ಯತೆಯ ಕ್ರಾಂತಿ ಹಾಡಿದರು. 'ಪಿಲಿಪತ್ತಿ ಗಡಸ್'ನಂಥ ನಾಟಕಗಳ ಮೂಲಕ ಡಿ.ಕೆ. ಚೌಟರು ಆಧುನಿಕ ರಂಗ ಸಾಧ್ಯತೆಯ ವಿಸ್ತಾರಕ್ಕೆ ಕಾರಣರಾದರು. ಕೃಷ್ಣಮೂರ್ತಿ ಕವತ್ತಾರರ ಕೈಯಲ್ಲಿ ಚೌಟರ 'ಕರಿಯವಜ್ಜೆರೆ ಕತೆಕ್ಲು', 'ಮಿತ್ತಬೈಲ್ ಯಮುನಕ್ಕೆ' (ಮಿತ್ತಬೈಲ್ ಯಮುನಕ್ಕ) ಕಾದಂಬರಿ ಇವು ರಂಗರೂಪದಲ್ಲಿ ಗಮನಾರ್ಹವೆನಿಸಿದವು. ನಾ.ದಾ. ಶೆಟ್ಟರು ಅನುವಾದಿಸಿದ 'ಮೂರು ಹೆಜ್ಜೆ ಮೂರು ಲೋಕ' (ಮೂಲ ತುಳು : ಮೂಜಿ ಮುಟ್ಟು ಮೂಜಿ ಲೋಕ) ನಾಟಕವೂ ಬೆಂಗಳೂರು ಮುಂತಾದೆಡೆಯ ಕನ್ನಡದ ಪ್ರೇಕ್ಷಕರಿಗೆ ತುಳು ಸೊಗಡನ್ನು ಆಪ್ತವಾಗಿಸಿತು.

ತೊಂಭತ್ತರ ದಶಕದಲ್ಲಿ ತುಳುನಾಟಕ ಕಥಾಪ್ರಧಾನಕ್ಕಿಂತ ಹಾಸ್ಯ ಪ್ರಧಾನಕ್ಕೆ ಒಮ್ಮೆ ದಿಕ್ಕು ಬದಲಾಯಿಸಿತು. ಅದೇ ಜನಪ್ರಿಯ ಫಾರ್ಮುಲಾ ನಿಂತ ನೀರಾಗದಂತೆ ಸಮಾಂತರ ವಾಗಿ ಹೊಸ ಅಲೆಯ ಅನುವಾದ ನಾಟಕಗಳೂ, ವೈಚಾರಿಕ ನಾಟಕ ಪ್ರಯೋಗಗಳೂ, ಹವ್ಯಾಸಿ ರಂಗಕರ್ಮಿಗಳಿಂದಾಗಿ ರಂಗಕ್ಕೆ ಬಂದವು. ಜೋಕುಲು–ಬಾಲೆಲು, ಪುರುಷೆ, ಚಕ್ರವ್ಯೂಹ (ಕೆ. ರಾಧಾಕೃಷ್ಣ) ಮತ್ತಿತರ ನಾಟಕಗಳೂ 'ತಿರ್ಸಂಕು', 'ಬಸ್ತಿ', 'ಪೆದಂಬು'ನಂತಹ ನವ್ಯ ನಾಟಕಗಳೂ 'ನಂಬುಲೆ ನಂಬಾದ್ ಕೊರ್ಪೆ', 'ಊರೇ ಗತಿ', 'ಬೊಜ್ಜ'ದಂತಹ ಪ್ರಯೋಗಗಳೂ, 'ಅಸುದ್ದೊ', 'ಪಿಲಿಪತ್ತಿ ಗಡಸ್', 'ಒಯ್ಲ್‌ಗ್ ತಿಕ್‌ನಕ್ಲು' – ಮುಂತಾದ ಆಧುನಿಕ ಮನೋವಿಶ್ಲೇಷಣಾತ್ಮಕ ಗಂಭೀರ ನಾಟಕಗಳೂ ತುಳು ರಂಗಭೂಮಿಗೆ ಬರುತ್ತಾ, ತರಬೇತಾದ ನಟವರ್ಗ, ನಿರ್ದೇಶಕರ ಪರಿಶ್ರಮದ ಮೂಲಕ, ಆಧುನಿಕ

ತುಳುರಂಗಭೂಮಿ ಪ್ರಯೋಗಶೀಲವಾಗಿಯೂ, ಸಶಕ್ತವಾಗಲೂ ಮುಂದುವರಿಯುತ್ತಿದೆ. ಖ್ಯಾತ ರಂಗನಿರ್ದೇಶಕ ಸದಾನಂದ ಸುವರ್ಣರು ಇತ್ತೀಚಿನ ವರ್ಷಗಳಲ್ಲಿ ತನ್ನ ವಾಸ್ತವ್ಯವನ್ನು ಮುಂಬಯಿಯಿಂದ ಮಂಗಳೂರಿಗೆ ಬದಲಾಯಿಸಿದ ಬಳಿಕ ಇಲ್ಲಿನ ತುಳು ರಂಗದ ಕಲಾವಿದರನ್ನು ಸಮರ್ಥವಾಗಿ ರೂಪಿಸಿ ಉರುಳು, ಕೋರ್ಟ್ ಮಾರ್ಶಲ್‌ನಂತಹ ಗಟ್ಟಿ ನಾಟಕಗಳನ್ನು ನಿರ್ದೇಶಿಸಿ ಬಹಳಷ್ಟು ಪ್ರಯೋಗ ನಡೆಸಿದರು. 'ಬಿನ್ನೆ' ನಾಟಕದೊಂದಿಗೆ ನಾಟಕ ವಾಚನ ಪರಂಪರೆಯನ್ನೂ ತೊಡಗಿಸಿದರು. ಇದರಿಂದಾಗಿ ತುಳುರಂಗಭೂಮಿಯೂ ಸಾಕಷ್ಟು ಚುರುಕಾಯಿತೆನ್ನಬಹುದು.

ನಾಟಕ ಕೃತಿಯೊಂದು ಅಕ್ಷರ ಮಾಧ್ಯಮದ ಸಾಹಿತ್ಯ. ಆದರೆ ಅದು ರಂಗಕೃತಿಯಾಗಿ ಪ್ರದರ್ಶನಗೊಳ್ಳುವಲ್ಲಿ ಸಮರ್ಥ ನಿರ್ದೇಶಕರು ನಟ, ನಟಿಯರು ಸಂಗೀತ, ಹಾಡು, ರಂಗಮಂಚ, ಬಣ್ಣ, ನಟನೆ, ವೇಷಭೂಷಣ, ಬೆಳಕು, ಧ್ವನಿ, ರಂಗಚಲನೆ, ಪ್ರೇಕ್ಷಕರು – ಈ ಎಲ್ಲ ಅಂಗಗಳ ಪಾಲೂ ಇದೆ. ಪ್ರೇಕ್ಷಕರು ಹೆಚ್ಚು ಹೆಚ್ಚು ಪ್ರಬುದ್ಧರಾದಾಗ, ನಿರ್ದೇಶಕ ಸಮರ್ಥನಾಗಬೇಕಾಗುತ್ತದೆ. ಪ್ರಬುದ್ಧ – ನಿರ್ದೇಶಕ ಉತ್ಕೃಷ್ಟ ರಂಗಕೃತಿಯನ್ನು ಹುಡುಕುತ್ತಾನೆ. ಇಷ್ಟೇ ಅಲ್ಲದೆ ಒಳ್ಳೆಯ ನಾಟಕ ಕೃತಿಗಳು, ಉತ್ತಮ ಪ್ರಯೋಗಗಳು – ಬರಬೇಕಾದರೆ ನಾಟಕಗಳ ಸಹೃದಯಿ ವಿಮರ್ಶೆಯೂ ಕಾಲಕಾಲಕ್ಕೆ ಬೇಕು. ಇತ್ತೀಚಿನ ತುಳು ನಾಟಕಗಳು ಈ ಎಲ್ಲ ನಿಟ್ಟಿನಲ್ಲೂ ಆಶಾದಾಯಕ ಬೆಳವಣಿಗೆ ಕಾಣಿಸುತ್ತಲಿವೆ. ತುಳು ರಂಗಭೂಮಿ ಪ್ರಬುದ್ಧತೆಯತ್ತ ದಾಪುಗಾಲಿಕ್ಕಿದೆ.

* * *

**ಹೊಸಜಾಡಿನ ಅನ್ವೇಷಣೆಯಲ್ಲಿ ಕಾರ್ಕಳದ (ತುಳು) ರಂಗಭೂಮಿ**

**1. ಪೂರ್ವರಂಗ**

(ಕಾರ್ಕಳ ಮುದ್ರಾಡಿಯ 'ನಮ ತುಳುವೆರ್' ನಾಟಕ ಸಂಘಟನೆಯ ಆರಂಭಕ್ಕೆ ಮೊದಲು ಇದ್ದಂತಹ ರಂಗಸ್ಥಿತಿ: ಸುಮಾರು 3 ದಶಕಗಳ ಹಿಂದೆ 'ನವಭಾರತ'ದಲ್ಲಿ ಪ್ರಕಟವಾದ ಸಮೀಕ್ಷೆಯಿದು. ಈ ಸಮೀಕ್ಷಾ ಲೇಖನದ ಇಂದಿನ ಪ್ರಕಟಣೆ ಇತಿಹಾಸವನ್ನು ಅರಿಯಲು ಸೂಕ್ತವೆನಿಸೀತೆಂಬ ಹಂಬಲ.)

ಕಲಾ ಚಟುವಟಿಕೆಗಳು ಒಂದು ಊರಿಗೆ ಜೀವಂತಿಕೆ ನೀಡುವ ಮೂಲಭೂತ ಅಂಶಗಳು. ಕನ್ನಡ ಜಿಲ್ಲೆಯ ಕರಾವಳಿ. ತೀರದುದ್ದಕ್ಕೂ ಒಳಪ್ರದೇಶಗಳಲ್ಲೂ ಈ ದಶಕ ದಲ್ಲಿ ತೀವ್ರವಾಗಿ ನಡೆದಿರುವ ರಂಗಚಟುವಟಿಕೆಗಳನ್ನು ಗಮನಿಸಿದರೆ ಕಾರ್ಕಳದಲ್ಲಿ ಈ ನಿಟ್ಟಿನಲ್ಲಿ ನೀರಸ ಬೆಳವಣಿಗೆ. ಸ್ಥಳೀಯ ಕಾಲೇಜೊಂದರಲ್ಲಿ ಈ ಬಗೆಗೆ ಎಚ್ಚರದ ಪ್ರಯತ್ನಗಳಿವೆಯಾದರೂ, ಸಾರ್ವಜನಿಕವಾಗಿ, ಹೊರಗಡೆಯ ಗಾಳಿ ಇಲ್ಲಿನ ಕಲಾಸಕ್ತರನ್ನು ತಟ್ಟಲೇ ಇಲ್ಲವೇನೋ ಎಂಬ ಕೌತುಕ ಹುಟ್ಟುವಷ್ಟು ವಿರಳ ಕಲಾಪ್ರದರ್ಶನಗಳು. ಮುಖ್ಯವಾಗಿ ಪ್ರಾದೇಶಿಕ ಅಭಿರುಚಿ ಪ್ರಾತಿನಿಧ್ಯದ ಹಿನ್ನೆಲೆಯಲ್ಲಿ ತುಳು ರಂಗಭೂಮಿಯ ಬಗ್ಗೆ ಬರೆಯುವುದಾದರೆ, ಇಲ್ಲಿನ ಜನತೆಯ ಆಸಕ್ತಿ, ಅಭಿರುಚಿ ಬೆಳೆದಿಲ್ಲ ಎನ್ನುವುದ

ಕ್ಕಿಂತಲೂ, ಒಂದು ಹಳಸಲು ಚೌಕಟ್ಟಿನೊಳಗೆ ಮುಲುಕುತ್ತಿರುವ ನಾಟಕಗಳ ರಂಗ ಪ್ರಯೋಗ, ವಸ್ತು, ಅಭಿನಯ, ಸನ್ನಿವೇಶ ನಿರ್ಮಾಣ, ಪರಿಕರಗಳ ಬಳಕೆ, ಬೆಳಕಿನ ವಿನ್ಯಾಸ ಮುಂತಾದವುಗಳ ವೈವಿಧ್ಯಮಯ ಸಾಧ್ಯತೆಗಳತ್ತ ಇಲ್ಲಿ ಪ್ರಯತ್ನ ವೃದ್ಧಿಸಬೇಕು ಎನ್ನುವುದು ಸೂಕ್ತವೇನೋ! ಈ ಎಲ್ಲ ಅಪವಾದಗಳಿಗೆ ಹೊರತಾಗುವ ಪ್ರಯತ್ನಗಳೂ ಇತ್ತೀಚೆಗೆ ಕಂಡುಬರುತ್ತಿರುವುದು ಶುಭಸೂಚನೆ.

ಕಾರ್ಕಳ ಜೇಸೀಸ್; ವತಿಯಿಂದ ತಾಲೂಕು ಮಟ್ಟದ ತುಳು ನಾಟಕ ಸ್ಪರ್ಧೆಯೊಂದು ಹೋಟೆಲ್ ದ್ವಾರಕಾದ ರಂಗಮಂದಿರದಲ್ಲಿ ಜರಗಿತು. ಸ್ಪರ್ಧೆಯಲ್ಲುಳಿದ ನಾಟಕಗಳ ಸಂಖ್ಯೆ ತುಸು ಕಡಿಮೆ. ಈ ಪರಿಸರದಲ್ಲಿ ಅನೇಕ ಮಂದಿ ಪ್ರತಿಭಾನ್ವಿತ/ಉದಯೋನ್ಮುಖ ಕಲಾವಿದರಿದ್ದರೂ ಏಕೋ ಅವರಲ್ಲನೇಕರು ಉತ್ಸಾಹ ವಹಿಸಿದಂತೆ ತೋರಲಿಲ್ಲ. ಭಾಗವಹಿಸಿದ ಹವ್ಯಾಸಿ ನಾಟಕ ತಂಡಗಳಲ್ಲಿ ಹೆಚ್ಚಿನವು ಸ್ಪರ್ಧಿಸುವ ಅರ್ಹತೆಗಾಗಿ ಹೆಣಗಾಡಿದಂತಿರಲಿಲ್ಲ. ಪ್ರಾಯಶಃ ಅಭಿನಯಿಸಲಿಚ್ಛಿಸುವವರನ್ನು ಗುರುತಿಸಿ, ಒಟ್ಟುಗೂಡಿಸಿ ಅವರನ್ನು ತರಬೇತುಗೊಳಿಸುವ ಪ್ರಯತ್ನಕ್ಕೇನೇ ಅನೇಕ ಎಡರು ತೊಡರುಗಳೇನೋ! ಕ್ರಮವಾಗಿ 'ಸ್ವರಾಜ್ಯ ಕ್ರಿಕೆಟರ್ಸ್' ತಂಡದವರ 'ಬಂಗಾರದ ಬಿಸತ್ತಿ', ಮಯೂರ ಯುವಕ ವೃಂದ ಹವಾಲ್ದಾರಬೆಟ್ಟು ಇವರ 'ಕ್ರಾಂತಿದ ಕಿಡಿ', ಹಿರಿಯಂಗಡಿ ಯುವಕ ಮಂಡಲದ 'ಬಯ್ಯಮಲ್ಲಿಗೆ', ಶ್ರೀ ನಾರಾಯಣ ಗುರು ಕಲಾವೃಂದದ 'ಬಂಗಾರ್ ಪೊಣ್ಣು', ಮಿತ್ರವೃಂದ ಕಾರ್ಕಳ ಇವರ – 'ಉಡಲ್ದ ಉರಿ'– ಈ ನಾಟಕಗಳು ಪ್ರದರ್ಶಿಸಲ್ಪಟ್ಟವು. ನಾಟಕರಂಗದಲ್ಲಿ ಸಾಕಷ್ಟು ಅನುಭವವಿರುವಂತೆ ಕಂಡು ಬಂದ ಅನೇಕರು ಈ ತಂಡಗಳಲ್ಲಿದ್ದು ಮುತುವರ್ಜಿ ವಹಿಸಿದಂತೆಯೇ ಹೊಸಬರ ಸಂಖ್ಯೆಯೂ ಹೆಚ್ಚು ಇತ್ತು. ಪೂರ್ಣ ಸಿದ್ಧತೆಯೊಂದಿಗಿರದೆ, ನಟರಿಗೆ ರಿಹರ್ಸಲ್ ಸಾಲದೆ, ನಿರೀಕ್ಷಿಸಿದ ಪರಿಣಾಮ ನೀಡಲಾಗದ ಪ್ರಯೋಗಗಳೇ ಹೆಚ್ಚಿನವು. ಹೊಸ ವಸ್ತುಗಳನ್ನು ಹೊಂದಿಯೂ ಅಪಕ್ವ ನಿದರ್ಶನ, ಉತ್ಸಾಹೀ ಎಳೆಯರಿಂದಲೇ ಕೂಡಿದ್ದ ಕೆಲವು ಪ್ರಯೋಗಗಳು ನಿರೀಕ್ಷಿಸಿದ ಗುರಿ ಮುಟ್ಟಲಿಲ್ಲ. ಮೊದಲಿನೆರಡು ನಾಟಕಗಳ ಸೋಲಿಗೆ ಇನ್ನಿತರ ಕಾರಣಗಳ ಜೊತೆಗೆ ಧ್ವನಿವರ್ಧಕ ನಿರಂತರವಾಗಿ ಕೈಕೊಟ್ಟದ್ದು ಮುಖ್ಯ ಕಾರಣವಾಯಿತು. ರಂಗದ ಮೇಲಿನ ಯಾವ ಮಾತುಗಳೂ ಕೇಳಿಸದೆ ಪ್ರೇಕ್ಷಕರು ಗಲಭೆಯೆಬ್ಬಿಸಿದರೆ, ಪ್ರೇಕ್ಷಕರಲ್ಲಿ ಕೆಲವು ಮಂದಿ ಒರಟರ ಗಲಭೆಯಿಂದ, ಗಲಿಬಿಲಿಗೊಂಡ ನಟರು ಹುರುಪಿನ ಚೊಕ್ಕ ಅಭಿನಯದಲ್ಲಿ ತಲ್ಲೀನರಾಗುವುದು ಸಾಧ್ಯವಾಗಲಿಲ್ಲ.

'ಬಯ್ಯಮಲ್ಲಿಗೆ' ಹಾಗೂ 'ಬಂಗಾರ್ ಪೊಣ್ಣು' ನಾಟಕಗಳು ಇದ್ದುದರಲ್ಲಿ ಪರವಾಗಿಲ್ಲ ಎನಿಸಿದವು. ಜನಪ್ರಿಯ ನಾಟಕವಾಗಿದ್ದು ಹಲವು ವರ್ಷಗಳಿಂದ ಸಾವಿರಾರು ಪ್ರಯೋಗಗಳನ್ನು ಕಂಡಿರುವ 'ಬಯ್ಯಮಲ್ಲಿಗೆ' ಚಲನಚಿತ್ರವೂ ಆಗಿದ್ದು, ಮನ ಮಿಡಿಯುವ ದುರಂತ ವಸ್ತುವಿನಿಂದಾಗಿ ಗಮನ ಸೆಳೆಯಿತು. ದುರಂತ ನಾಯಕಿ 'ಶಾಂತಿ'ಯಾಗಿ ಧನಂಜಯ ಶೆಟ್ಟಿ ಹಾಗೂ ನಾಯಕಿಯ ಅಣ್ಣ 'ರವಿ'ಯಾಗಿ ಮಾಧೋಜಿರಾವ್ ಚೊಕ್ಕ ಅಭಿನಯ ನೀಡಿದರು. ನಾಟಕದ ಪಾತ್ರಗಳ ಉದ್ದೇಶಿತ ಗುಣಧರ್ಮಗಳಿಗೆ

ವ್ಯತಿರಿಕ್ತವಾಗಿ ಮಾತು ಅಭಿನಯ, ಉಡುಪುಗಳೊಂದಿಗಿದ್ದ ಪಾತ್ರಧಾರಿಗಳೂ ಇಲ್ಲದಿರಲಿಲ್ಲ.

ನಾಟಕರಂಗದಲ್ಲಾಗುತ್ತಿರುವ ಬದಲಾವಣೆ – ಬೆಳವಣಿಗೆಗಳನ್ನು ಗಮನಿಸಿಕೊಂಡು ಸೀಮಿತ ರಂಗಪರಿಕರಗ ಯಶಸ್ವೀ ಬಳಕೆಯೊಂದಿಗೆ ಹೊಸತನ, ಜೀವಂತಿಕೆಯನ್ನು ಮೈಗೂಡಿಸಿಕೊಂಡ ಹಾಸಯಪ್ರಧಾನ ನಾಟಕ 'ಬಂಗಾರ್ ಪೊಣ್ಣು' – ಕಿರಿದಾದ ಕಥಾವಸ್ತುವನ್ನು ಹೊಂದಿದ್ದು ಮುಖ್ಯ ಕತೆಗಿಂತ ಹಾಸ್ಯವೆ ಪ್ರಧಾನವಾಗಿ ನಾಟಕದುದ್ದಕ್ಕೂ ಹೊಮ್ಮಿದರೂ, ಮೂರು ಗಂಟೆಗಳ ಕಾಲ ಪ್ರೇಕ್ಷಕರನ್ನು ಸೆಳೆದಿಟ್ಟುಕೊಳ್ಳುವ ಸಾಮರ್ಥ್ಯ ಪಡೆಯಿತು. ಒಂದಿಬ್ಬರು ನಟರಿಂದ (ಸ್ವಂತ ಬತ್ತಳಿಕೆಯಿಂದಲೇ ಹೆಚ್ಚಾಗಿ ಹೊರಬಂದ) ಸೆನ್ಸಾರ್ ಮಾಡಬೇಕಾದ(!) ಹಲವು ಮಾತುಗಳು, ಸಂಭಾಷಣೆಯ ಅನವಶ್ಯಕ ಮುಂದುವರಿಕೆ, ಸೂಕ್ತಾಸೂಕ್ತತೆಯ ಪ್ರಶ್ನೆಯೆಬ್ಬಿಸಿದ ಅತೀ ದೀರ್ಘವಾದ ಕೆಲವು ದೃಶ್ಯಗಳು – ಇತ್ಯಾದಿ ನ್ಯೂನತೆಗಳಿದ್ದರೂ, ನಟರೆಲ್ಲ ಗಂಭೀರ ಅಭಿನಯ ನೀಡಿದರು. ನೆರಳು ಬೆಳಕಿನ ಸಂಯೋಜನೆ, ಸಾಂದರ್ಭಿಕ ಹಿನ್ನೆಲೆಯೊಂದಿಗೆ ಸಂಗೀತ, ಸ್ಟೇಜ್‌ಸೆಟ್ಟಿಂಗ್‌ನಲ್ಲಿ ನಾವೀನ್ಯತೆ – ಇಲ್ಲೆಲ್ಲ ನಿರ್ದೇಶಕರ ಶ್ಲಾಘನೀಯ ಕೌಶಲ ಎದ್ದು ತೋರುತ್ತಿತ್ತು.

ಹೆಚ್ಚಿನ ಎಲ್ಲ ನಾಟಕಗಳಿಗೂ ಸಂಗೀತ ಉತ್ತಮವಾಗಿತ್ತು. ಕೊನೆಯಲ್ಲಿ ಪ್ರದರ್ಶನ ಗೊಂಡ 'ಉಡಲ್ದ ಉರಿ' ನಾಟಕ ಸ್ತುತ್ಯ ಪ್ರಯತ್ನವಾದರೂ ನಟರ ಶ್ರಮ ಸಾಲದೆನಿಸಿತು. ಜೊತೆಗೆ – ಮಾತು ಮಾತಿಗೂ ಹಾಡು, ಸಮಯದ ದುಬಾರಿ ಬಳಕೆ – ಇತ್ಯಾದಿಗಳಿಂದ ನಾಟಕದ ರಂಜನೀಯ ಅಂಶಗಳು ಅಡಗಿಹೋದವು.

ನಮ್ಮ ಹವ್ಯಾಸಿ ನಾಟಕ ತಂಡಗಳು ನಾಟಕಗಳನ್ನು ಪ್ರಯೋಗಕ್ಕೆಂದು ಆಯ್ಕೆ ಮಾಡುವಾಗ ನಾಟಕದ ಬರಹ ಹಾಗೂ ಪ್ರಯೋಗದಲ್ಲಿ ಪರಿಣಾಮಕಾರಿಯಾಗುವಂತೆ ಭಿನ್ನತೆಯನ್ನು ತರುವಲ್ಲಿ ಸಮಕಾಲೀನ ಒಲವುಗಳನ್ನು ಗಮನಿಸಬೇಕಾಗುತ್ತದೆ. ಇಲ್ಲದಿದ್ದಲ್ಲಿ ಕಳಪೆ ಪ್ರಯೋಗಗಳು ಬಂದು ಪ್ರೇಕ್ಷಕನ ಮೇಲೆ ಯಾವ ಪರಿಣಾಮವನ್ನೂ ಬೀರದೆ, ನಾಟಕ ನಡೆಯುತ್ತಿರುವಷ್ಟು ಕಾಲ ಕುಳಿತಿರುವುದೇ ಹಿಂಸೆಯೆನಿಸುವ ಸ್ಥಿತಿಯೊದಗುತ್ತದೆ. ಜೊತೆಗೆ ಧ್ವನಿವರ್ಧಕ ಹಾಗೂ ಬೆಳಕಿನ ವ್ಯವಸ್ಥೆ ನೀಡುವ ಬಂಧುಗಳೂ ಅತ್ಯಂತ ಜಾಗರೂಕತೆಯಿಂದ ಕಾರ್ಯನಿರ್ವಹಿಸುವತ್ತ ಗಮನ ಕೊಡಬೇಕು. ಧ್ವನಿವರ್ಧಕದ ಅವ್ಯವಸ್ಥೆಯಿಂದ ಇಡಿಯ ಪ್ರದರ್ಶನವೇ ಸೋತುಹೋಗಲು ಕಾರಣವಾಗುತ್ತದೆಂದು ಅರಿತರೆ ಅವರು ತಮ್ಮ ಜವಾಬ್ದಾರಿ ಮನಗಂಡಾರು! ಇನ್ನು ನಮ್ಮ ಪ್ರೇಕ್ಷಕ ನಿಜವಾಗಿ ಕಲಾಭಿಮಾನಿಯಾಗಿದ್ದರೆ – ಅಭಿರುಚಿಯುಳ್ಳವನಾದರೆ ತಾನು ಕುಳಿತು ನೋಡಿ ಕೇಳಿ ಆಸ್ವಾದಿಸುವುದಕ್ಕಷ್ಟೇ ಬಂದಾತ; ಕೂಗೆಬ್ಬಿಸಿ, ಗಲಾಟೆ ಮಾಡಿ ಸಂಭಾಷಣೆಗಳನ್ನು ತಾನೇ ಹೇಳಕೂಡದು ಎಂದು ತಿಳಿದುಕೊಳ್ಳಬೇಕು. ರಂಗದ ಮೇಲಿನ ಮೈಕ್ ನಿಷ್ಕ್ರಿಯವಾದಾಗ, ನಟರ ಸಂಭಾಷಣೆ ತೊದಲಿದಾಗ ಪ್ರತಿಕ್ರಿಯಿಸುವ ಅನಿವಾರ್ಯತೆ ಬಂದರೂ, ಅದು ಸೌಮ್ಯರೀತಿಯಲ್ಲಿರಲಿ. ಯಾವುದೋ ಕೆಲವು ಮಂದಿಯ ಕೂಗಾಟ, ಚೀರಾಟ ದಿಂದಾಗಿ ಕಾರ್ಯಕ್ರಮದ ರಸಾಸ್ವಾದಿಸುತ್ತಿರುವ ಇತರ ಎಲ್ಲ ಪ್ರೇಕ್ಷಕರಿಗೂ ಎಷ್ಟು ಅಸಹನೆ ಯುಂಟಾಗುತ್ತದೆಂಬುದನ್ನು ಗಲಭೆಯೆಬ್ಬಿಸುವವರು ಅರ್ಥ ಮಾಡಿಕೊಂಡಲ್ಲೆಷ್ಟು ಚೆನ್ನು!

ಒಟ್ಟಿನಲ್ಲಿ, ಇಂಥದೊಂದು ವೇದಿಕೆಯ ಮೂಲಕ ಪರಿಸರದ ಪ್ರತಿಭೆಗಳಿಗೊಂದು ಪ್ರದರ್ಶನಾವಕಾಶ ಹಾಗೂ ನಾಟಕಪ್ರೇಮಿಗಳಿಗೆ ರಸದೌತಣದ ಕೊಡುಗೆಯ

ಉದ್ದೇಶದಿಂದ, ತೊಂಬತ್ತರ ದಶಕದಲ್ಲಿ ಕೆಲವರ್ಷ ಈ 'ತುಳು ನಾಟಕ ಸ್ಪರ್ಧೆ' ಯನ್ನೇರ್ಪಡಿಸಿದ 'ಕಾರ್ಕಳ ಜೇಸೀಸ್'ನ ಕಾರ್ಯಕ್ರಮ ಸಂಯೋಜಕರು ಶ್ರಮ ವಹಿಸಿದ್ದಾರೆ. ಇಂತಹ ಕಾರ್ಯಕ್ರಮ, ಸಮಾರಂಭಗಳನ್ನೇರ್ಪಡಿಸುವಾಗ ಏನಾದರೂ ಟೀಕೆ ಬರುವುದು ಸಾಮಾನ್ಯ. ಆದರೆ ಕುಂದು ಕೊರತೆಗಳನ್ನೇ ಎತ್ತಿ ತೋರಿಸಿ ಕೇವಲ ಟೀಕಿಸುವ ಪ್ರವೃತ್ತಿ ಮಾತ್ರವಿದ್ದರೆ, ಪ್ರಯತ್ನದ ಸತ್ಪ್ರಯೋಜನಗಳ ಬಗೆಗೆ ಸ್ತೋಷ ವ್ಯಕ್ತಪಡಿಸುವ ಮನೋವೃತ್ತಿ ಇಲ್ಲದಿದ್ದರೆ, ಆಗೊಮ್ಮೆ ಈಗೊಮ್ಮೆ ನಡೆಯುವ ಇಂತಹ ಕಾರ್ಯಕ್ರಮಗಳೂ ಇಲ್ಲವಾದಾವು. ಸಾಂಸ್ಕೃತಿಕ ಕಾರ್ಯಕ್ರಮಗಳಿಲ್ಲದೆ ಹೋದರೆ ಬದುಕು ಬರಡಾಗುತ್ತದೆ; ನಿಂತ ನೀರಾಗುತ್ತದೆ. ಅದರ ಬದಲು, ಲೋಪದೋಷ ಗಳೇನಾದರೂ ಕಂಡಲ್ಲಿ, ಪ್ರಾಮಾಣಿಕವಾಗಿ ನಿವೇದಿಸಿಕೊಂಡು ಕಾರ್ಯಕರ್ತರಿಗೆ ಸೂಕ್ತ ಸಲಹೆ ಸೂಚನೆಗಳನ್ನು ನೀಡಿದಲ್ಲಿ, ಇನ್ನಷ್ಟು ಜವಾಬ್ದಾರಿಯುತವಾಗಿ ಪರಿಣತ ಸಂಘಟಕರೂ ಜೊತೆಗೂಡಿದಲ್ಲಿ, ಮುಂಬರುವ ದಿನಗಳಲ್ಲಿ ಇನ್ನಷ್ಟು ಉತ್ಕೃಷ್ಟ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕಾಣುವ ಸುಯೋಗ ನಮ್ಮದಾದೀತು. (ಹಳೆಯ ಈ ಲೇಖನದ ನಂತರ ಕಲಾರಂಗ ಮುಂತಾದ ರಂಗಸಂಸ್ಥೆಗಳು ಚಟುವಟಿಕೆ ಆರಂಭಿಸಿದವು. 1987ರಲ್ಲಿ ಮುದ್ರಾಡಿಯಲ್ಲಿ ಜನ್ಮ ತಾಳಿದ ನಮ್ಮ ತುಳುವೆರ್ ಕಲಾ ಸಂಘಟನೆಯು ಈ ಊರಿನ ಹೆಸರನ್ನು ರಂಗಭೂಮಿ ದಿಸೆಯಲ್ಲಿ ಬಾನೆತ್ತರಕ್ಕೆ ಒಯ್ಯುವ ಸಿದ್ಧಿ ಸಾಧಿಸಿತು. ಕಳೆದ ಮೂರು ದಶಕಗಳಿಂದ ತುಳು ಮತ್ತು ಕನ್ನಡ ನಾಟಕಗಳನ್ನು ಈ ತಂಡ ರಂಗಕ್ಕೆ ತರುತ್ತಿದ್ದು ದೇಶದ ಹಲವು ಕಡೆ 1500ಕ್ಕೂ ಮಿಕ್ಕಿ ಪ್ರದರ್ಶನಗಳನ್ನು ನೀಡಿದ ಹಿರಿಮೆ ಇವರದು. ಸಂಸ್ಥೆಯ ವಿಂಶತಿ ಸಂದರ್ಭದಲ್ಲಿ 20 ತಂಡಗಳ 24 ನಾಟಕಗಳ ಪ್ರದರ್ಶನ ಆಯೋಜಿಸಿದ್ದು ದಾಖಲೆ ಯತ್ನ.

* * *

**2. ಕಾರ್ಕಳದ ರಂಗಭೂಮಿಗೆ ಹೊಸದಿಕ್ಕು ತೋರಿದ ನಮ ತುಳುವೆರ್ ಮುದ್ರಾಡಿ (ರಿ)**

ಕಾರ್ಕಳ ತಾಲೂಕು ಮುದ್ರಾಡಿಯ 'ನಮ್ಮ ತುಳುವೆರ್ ಕಲಾ ಸಂಘಟನೆಯು ಸುಕುಮಾರ್ ಮುದ್ರಾಡಿಯಂತಹ ಪ್ರತಿಭಾವಂತ ನಟ ನಿರ್ದೇಶಕರ ನೇತೃತ್ವದಲ್ಲಿ ರಾಜ್ಯ, ಹೊರರಾಜ್ಯದಲ್ಲಿ ವಿಶೇಷ ಗಮನ ಸೆಳೆದಿದೆ. 1987ರಲ್ಲಿ ಧರ್ಮಯೋಗಿ ಮೋಹನ್‌ರವರಿಂದ ಸ್ಥಾಪಿಸಲ್ಪಟ್ಟ 'ನಿಲಯ ಕಲಾವಿದರು' ಸಂಘಟನೆ ಮುಂದೆ 'ನಮ ತುಳುವೆರ್' ಎಂಬ ಹೆಸರಿನಲ್ಲಿ ಬೆಳೆದು ನಿಂತಿತು.

ಸುಕುಮಾರ್ ಮುದ್ರಾಡಿ ನೇತೃತ್ವದಲ್ಲಿ ಕಳೆದ 25 ವರ್ಷಗಳಿಂದ ರಂಗಚಟುವಟಿಕೆ ಯನ್ನು ಚಳುವಳಿಯೋಪಾದಿಯಲ್ಲಿ ನಡೆಸುತ್ತ ಬಂದಿದ್ದಾರೆ. ಜೀವನ್‌ರಾಂ ಸುಳ್ಯ, ಶ್ರೀಪಾದ ಭಟ್, ಬಸವ ಲಿಂಗಯ್ಯ ಉದ್ಯಾವರ, ನಾಗೇಶ್ ಕುಮಾರ್, ಬಾಸುಮ ಕೊಡಗು ಮುಂತಾದ ಹೆಸರಾಂತ ರಂಗನಿರ್ದೇಶಕರು ಈ ತಂಡದ ಕೆಲವೊಂದು ನಾಟಕಗಳಿಗೆ ನಿರ್ದೇಶಕರಾಗಿ ಒದಗಿದ್ದುದು ಇವರ ಬೆಳವಣಿಗೆಯಲ್ಲಿ ಬಹಳಷ್ಟು ನೆರವಾಗಿದೆ. ಡಿ.ಕೆ.ಚೌಟರ 'ಪಿಲಿಪತ್ತಿ ಗಡಸ್' ಈ ಕಲಾವಿದರಿಂದ 349ಕ್ಕೂ ಮಿಕ್ಕ ಪ್ರಯೋಗವಾಗಿದೆ. ಡಿ.ಕೆ. ಚೌಟರ 'ಧರ್ಮೆತ್ತಿ ಮಾಯೆ' ಕೂಡಾ ಪ್ರದರ್ಶನಗೊಂಡು

ಕ್ರಮೇಣ ಅನೇಕ ಹೊಸ ಸವಾಲಿನ ತುಳು ಮತ್ತು ತುಳುವೇತರ ಭಾಷೆಗಳಿಂದ ಅನುವಾದಿತ ನಾಟಕಗಳ ರಂಗಪ್ರಯೋಗ ಯಾನದಲ್ಲಿ ನಮ ತುಳುವೆರ್ ತಂಡ ನಾಡು, ಹೊರನಾಡಿನ ಪ್ರತಿಷ್ಠಿತ ರಂಗವೇದಿಕೆಗಳಲ್ಲಿ ಪ್ರದರ್ಶನ ನೀಡುತ್ತಾ ಪ್ರಬುದ್ಧ ಸ್ವಯಂಪೂರ್ಣ ತಂಡವಾಗಿ ಬೆಳೆದುನಿಂತಿದ್ದಾರೆ. ಸುಕುಮಾರರ ಮಾತಾಪಿತರ ಪ್ರೋತ್ಸಾಹ ದೊಂದಿಗೆ ಸಹೋದರ ಸಹೋದರಿಯರೆಂದು ಇಡೀ ಕುಟುಂಬವೇ ರಂಗಮನೆಯಾಗಿರು ವುದು ವಿಶೇಷ. ರಾಷ್ಟ್ರೀಯ ರಂಗೋತ್ಸವ, ನವರಂಗೋತ್ಸವಗಳನ್ನು ಆಯೋಜಿಸುವ ಮೂಲಕ ರಾಜ್ಯಮಟ್ಟದಲ್ಲಿ ಗಮನ ಸೆಳೆದಿದೆ. ವಾರಾಂತ್ಯ ನಾಟಕ, ರಂಗ ತರಬೇತಿ, ತಿಂಗಳ ತಿರುಳೂ, ಪಾಠ ನಾಟಕ, ಕಾಲೇಜು ರಂಗ, ಬೀದಿನಾಟಕ ಹೀಗೆ ವಿವಿಧ ಆಯಾಮಗಳಲ್ಲಿ ಸಕ್ರಿಯವಾಗಿದೆ.

ಕಾರ್ಕಳದ ರಂಗಚರಿತ್ರೆಗೆ ಹೊಸ ಇತಿಹಾಸವನ್ನೇ ಇದೀಗ ಈ ತಂಡ ನಿರ್ಮಿಸಿದೆ. 2018ರಲ್ಲಿ ತಮ್ಮ ಸಂಸ್ಥೆಯ ಬೆಳ್ಳಿಹಬ್ಬದ ಅಂಗವಾಗಿ ರಾಷ್ಟ್ರೀಯ ರಂಗೋತ್ಸವವನ್ನು (ಜೂನ್ 15ರಿಂದ 22) ಮುದ್ರಾಡಿಯಲ್ಲಿ ಏರ್ಪಡಿಸುವ ಮೂಲಕ ರಂಗಭೂಮಿ ಮತ್ತು ಚಲನಚಿತ್ರ ರಂಗದ ಹಲವು ಹೆಸರಾಂತರು ಆಗಮಿಸಿ ಮುದ್ರಾಡಿಯಂತಹ ಗ್ರಾಮಾಂತರ ಸಂದರ್ಭದಲ್ಲಿ ಕೆಲವು ಮಹತ್ವದ ನಾಟಕಗಳ ಪ್ರದರ್ಶನವಿತ್ತರು. ಮಂಜುನಾಥ್ ಎಲ್. ಬಡಿಗೇರ ನಿರ್ದೇಶನದಲ್ಲಿ 'ದಶಾನನ ಸ್ವಪ್ನ ಸಿದ್ಧಿ' (ಕನ್ನಡ) ಪ್ರಸ್ತುತಿ : ನಮ ತುಳುವೆರ್ ಕಲಾ ಸಂಘಟನೆ) 'ಪಗರಿದ ಮಂಚವು' ತುಳು(ತಂಡ : ಕಲಾಜಗತ್ತು ಕ್ರಿಯೇಶನ್ಸ್ ಮುಂಬಯಿ ನಿರ್ದೇಶನ –ತೋನ್ಸೆ ವಿಜಯಕುಮಾರ್ ಶೆಟ್ಟಿ) ಒಂದಾನೊಂದು ಕಾಲದಿ' ಅರೆಭಾಷೆ : (ತಂಡ – ಕಲಾಮಾಯಿ ಮುನ್ನೂರೊಕ್ಲು – ನಿರ್ದೇಶನ, ರಚನೆ : ಸುದೀರ್ ಏನೆಕಲ್), ರಾಮ ನಿರ್ಯಾಣ' ಕನ್ನಡ ನಿರ್ದೇಶನ ಹೊಸ ತೋಟ ಮಂಜುನಾಥ ಭಟ್ಟ ತಂಡ : ಸಾಕೇತ ಕಲಾವಿದರು ಹೆಗ್ಗೋಡು ಇಷ್ಟಲ್ಲದೆ ರಂಗೋತ್ಸವದ ಅಂಗವಾಗಿ ಒಂದಷ್ಟು ದೂರದ ಬಲ್ಯೊಟ್ಟು ಗುರುಕೃಪಾದಲ್ಲಿ ರಂಗಭೂಮಿ ವಿಚಾರಸಂಕಿರಣವನ್ನೂ ಹಮ್ಮಿಕೊಂಡಿದ್ದರು. ಉತ್ಸವದ ಕೊನೆಯ ದಿನ ಕಾಪು ರಂಗತರಂಗ ತಂಡದ ಬಹುಪ್ರಸಿದ್ಧಿಯ 'ಪೊಪ್ಪ' ತುಳು ನಾಟಕ ಪ್ರದರ್ಶನವಿತ್ತು.

'ದಶಾನನ ಸ್ವಪ್ನಸಿದ್ಧಿ'ಯನ್ನು ಇದೀಗ ಶ್ರೀ ಅಂಬಾತನಯ ಮುದ್ರಾಡಿಯವರು ತುಳುವಿಗೆ ಅನುವಾದಿಸಿದ್ದಾರೆ. ನಮ ತುಳುವೆರ್ ಕಲಾವಿದರು (ಈ ಬರವಣಿಗೆ ವೇಳೆಗೆ) ಪ್ರಯೋಗಸಿದ್ಧತೆ ನಡೆಸಿದ್ದಾರೆ. ಸತತವಾಗಿ ಪ್ರಶಸ್ತಿಗಳನ್ನು ಬಾಚಿಕೊಳ್ಳುತ್ತ ಬಂದಿರುವ ಈ ತಂಡವು 2017ರಲ್ಲಿ ಉದ್ಯಾವರ ನಾಗೇಶ್ ಕುಮಾರ್ ಅವರ 'ಕತ್ತಲೆಗ್ ಪತ್ತ್ ತರೆ' (ಮೂಲ : ಲಂಕೇಶರ 'ಈಡಿಪಸ್') ನಾಟಕವನ್ನು ಉಡುಪಿ ಎಂ.ಜಿ.ಎಂ. ಕಾಲೇಜು ಮುದ್ದಣ ಮಂಟಪದಲ್ಲಿ ಸುಕುಮಾರ್ ಮುದ್ರಾಡಿ ನಿರ್ದೇಶನದಲ್ಲಿ ಪ್ರಯೋಗಿಸಿ ಯಶಸ್ಸು ಕಂಡಿದೆ.

* * *

# ತುಳು ರಂಗಭೂಮಿ
# ವಿಭಿನ್ನ ಆಯಾಮಗಳು

ಕೃತಿಯೊಂದು ರಂಗಪ್ರಯೋಗವೆನಿಸುವ ನಟವರ್ಗ, ನಿರ್ದೇಶಕರು, ಬೆಳಕು ದೀಪಾಲಂಕಾರದವರು, ಪ್ರಸಾದನ ರಂಗಸಜ್ಜಿಕೆ, ವಸ್ತ್ರಾಲಂಕಾರದವರು, ಸಂಗೀತ, ಹಿನ್ನೆಲೆ ಗಾಯಕರು – ಹೀಗೆ ಹಲವು ಬಗೆಯ ಕಲಾಕಾರರ ಕೊಡುಗೆಯಿದು. ಇವರಲ್ಲಿ ಕೆಲವರನ್ನಾದರೂ ದಾಖಲಿಸುವ ಮೂಲಕ ಆ ಸಮಸ್ತರ ವರ್ಗಕ್ಕೆ ಗೌರವ ಸಲ್ಲಿಸಿದಂತಾದೀತು.

## ನಿರ್ದೇಶಕರಾಗಿ ದುಡಿದವರು

ಸದಾನಂದ ಸುವರ್ಣ, ಜೆ. ರವೀಂದ್ರ, ಬಿ.ವಿ. ಕಿರೋಡಿಯನ್, ಬಾಲಕೃಷ್ಣ ರಾವ್, ಎಂ. ಎಸ್. ರಾವ್, ಯು.ಸಿ.ರಾಜು, ಕೆ.ವಿ. ಕುಮಾರ್, ಮೈದಿನಬ್ಬ, ಕೃಷ್ಣಪ್ಪ ಉಪ್ಪೂರು, ಕೆ.ಕೆ. ಗಟ್ಟಿ, ಕೆ.ಕೆ. ಸಾಲ್ಯಾನ್, ಜಯರಾಜ್ ಮೂಡಬಿದ್ರೆ, ಆರ್.ಕೆ. ಉಳ್ಳಾಲ್, ಕೆ.ಕೆ.ಟೈಲರ್ ಮುಲ್ಕಿ, ಜಿ.ಕೆ. ಪುರುಷೋತ್ತಮ್, ಶರತ್ ಶೆಟ್ಟಿ, ಮುಂಡ್ಕೂರು, ಚಿನ್ನಾ ಕಾಸರಗೋಡು, ಕೆ. ಆನಂದ ಗಾಣಿಗ, ಜೀವನ್‌ರಾಂ ಸುಳ್ಯ, ಬಾಸುಮ ಕೊಡಗು, ಸುರೇಶ್ ಆನಗಳ್ಳಿ (ಪಿಲಿಪತ್ತಿ ಗಡಸ್, ಕೊಡಿಮರ), ಗುರುರಾಜ ಮಾರ್ಪಳ್ಳಿ, ಸುಕುಮಾರ ಕಣ್ಣನ್, ಎಂ.ಕೆ. ವಾಸುದೇವ, ವಡಭಾಂಡೇಶ್ವರ, ರಾಜು ಬಿ. ತೋನ್ಸೆ, ಪ್ರದೀಪ್‌ಚಂದ್ರ ಕುತ್ಪಾಡಿ, ಪಿ. ಚೆನ್ನಪ್ಪ ಅಳಿಕೆ, ಕೆ.ವಿ.ಭಟ್, ಚಂದ್ರಹಾಸ ಉಳ್ಳಾಲ್, ಯಕ್ಷಾನಂದ ಕುತ್ಪಾಡಿ, ಶಿಮಂತೂರು ಚಂದ್ರಹಾಸ್ ಸುವರ್ಣ, ರಮಾ ಬಿ.ಸಿ.ರೋಡ್ (ರಮೇಶ್ ಮಾಸ್ಟರ್) ವಸಂತ ವಿ. ಅಮೀನ್, ಜೀವನ್ ಉಳ್ಳಾಲ್, ಬಿ. ಆರ್. ಕುಲಾಲ್ ಬಂಟ್ವಾಳ, ಪಿ.ಕೆ. ಟೈಲರ್, ಜಗನ್ ಪವಾರ್ ಬೇಕಲ್, ಉದ್ಯಾವರ ನಾಗೇಶ್ ಕುಮಾರ್, ಚಿದಾನಂದ ಅದ್ಯಪಾಡಿ, ಬಿ.ಎಸ್. ಕರ್ಕೇರ, ಶಿವರಾಮ ಪಣಂಬೂರು, ಪರಮಾನಂದ ಸಾಲ್ಯಾನ್ ಸಸಿಹಿತ್ಲು, ಶ್ರೀನಾಥ್ ಮುಲ್ಕಿ, ಕೆ.ಕೆ. ಪೇಜಾವರ, ಕೆ. ಸುದೇಶ್ ರಾವ್, ಜಗದೀಶ್ ಕೆಂಚನಕೆರೆ, ಕೃಷ್ಣಮೂರ್ತಿ ಕವತ್ತಾರು, ಪ್ರಭಾಕರ ಆಚಾರ್ ಎಡ್ಮೇರು ಮುಂತಾದವರು.

## ನಟ, ನಿರ್ದೇಶಕ ಸೋಮಶೇಖರ ಪುತ್ರನ್ (1930–1992)

ಹಿರಿಯ ತಲೆಮಾರಿನ ಹೆಸರಾಂತ ನಿರ್ದೇಶಕ, ನಟರಿವರು. 1961ರಲ್ಲಿ ವಿಶುಕುಮಾರರ ಕಲ್ಜಿಗದ ಕುರುಕ್ಷೇತ್ರ ನಿರ್ದೇಶಿಸಿದ ಮೇಲೆ ವಿಶುಕುಮಾರರ 'ಕೋಟಿಚೆನ್ನಯ' ನಾಟಕವನ್ನು 1964ರಲ್ಲಿ ಮುಂಬೈ ಬಾಂಗ್ವಾಡಿ ಥಿಯೇಟರ್ಸ್‌ನಲ್ಲಿ, ಮುಂಬೈ ರಂಗ ಕಲಾವಿದರ ಅಭಿನಯದೊಂದಿಗೆ ಪ್ರದರ್ಶಿಸಿದ್ದರು. 'ವಿಶುಕುಮಾರ್ ಉಪಸ್ಥಿತಿಯಲ್ಲಿ ಅಂದು ಸುಭಾಷ್ ಚಂದ್ರ ಪಡಿವಾಳ್ (ಕೋಟಿ), ವಾಮನ್‌ರಾಜ್ (ಚೆನ್ನಯ), ಭೋಜರಾಜ್ (ಪೆರುಮಾಳ ಬಲ್ಲಾಳ) ಪಾತ್ರ ಮಾಡಿದ್ದರು. ಈ ಅಭಿನಯವನ್ನು ಮೆಚ್ಚಿದ ವಿಶುಕುಮಾರ್ ಮುಂದೆ ಕೋಟಿಚೆನ್ನಯ ಸಿನಿಮಾವಾದಾಗಲೂ ಈ ಕಲಾವಿದರನ್ನೇ ಆಯಾ ಪಾತ್ರಕ್ಕೆ ಬಳಸಿಕೊಂಡರು.

ಸೋಮಶೇಖರ ಪುತ್ರನ್ ಶ್ರೇಷ್ಠ ರಂಗ ನಿರ್ದೇಶಕರು ಅವರ ನಿರ್ದೇಶನದಲ್ಲಿ ಬಿ. ರಾಮ ಕಿರೋಡಿಯನ್‌ರ 'ತುಳುನಾಡ ತುಡರ್ ಉಳ್ಳಾಲರಾಣಿ ಅಬ್ಬಕ್ಕ' ಚೊಚ್ಚಲ ಪ್ರದರ್ಶನ ಮಂಗಳೂರು ಡಾನ್‌ಬಾಸ್ಕೋ ಹಾಲ್‌ನಲ್ಲಿ 21–07–1968ರಂದು ಪ್ರಯೋಗವಾಯಿತು. ಇದರಲ್ಲಿ ನಿರ್ದೇಶನದ ಜತೆ ಕಾಮರಾಯನ ಪಾತ್ರ ಮಾಡಿ ತಾನೊಬ್ಬ ಶ್ರೇಷ್ಠ ರಂಗನಟ, ದಕ್ಷ ನಿರ್ದೇಶಕನೆಂದು ಗುರುತಿಸಲ್ಪಟ್ಟರು. ಮುಂದೆ ಮುಂಬೈಗೆ ಉದ್ಯೋಗ ನಿಮಿತ್ತ ಹೋದಾಗ ಮುಂಬೈ ಚರ್ಚ್‌ಗೇಟ್‌ನ ಬಿರ್ಲಾ ಮಾತ್ರೋಶ್ರೀ ಸಭಾಂಗಣದಲ್ಲಿ 14–12–1980ರಂದು ಅಬ್ಬಕ್ಕ ನಾಟಕ, ಬೆಂಗಳೂರು ರವೀಂದ್ರ ಕಲಾಕ್ಷೇತ್ರದಲ್ಲಿ ಚಕ್ರವ್ಯೂಹ (1–7–1986), ರತ್ನಾಕರ ರಾವ್ ಕಾವೂರರ 'ಗುರುರಾಘವೇಂದ್ರ ವೈಭವ' ರಮಾನಂದ ಚೂರ್ಯರ 'ಊರೆಲ್ಲಾ ಹೇಳ್ಬೇಡಿ ಇದರ ತುಳು ರೂಪಾಂತರ 'ತೆಲಿಪುವಲ್ ಜಾಗ್ರತೆ' ಕೆ.ಬಿ. ಭಂಡಾರಿಯವರ 'ಬಂಗಾರ್ ಬಾಲೆ' ಮೊದಲಾದ ನಾಟಕಗಳನ್ನು ಮುಂಬಯಿಯಲ್ಲೂ ದ.ಕ. ಜಿಲ್ಲೆಯಾದ್ಯಂತವೂ ಪ್ರದರ್ಶಿಸಿದರು.

## ಜೆ. ರವೀಂದ್ರ (1941–2003)

ಕಲಾವಲ್ಲಭ ಜೆಪ್ಪಿನಮೊಗರು ದಿ. ರವೀಂದ್ರರು ನಟ, ನಿರ್ದೇಶಕರಾಗಿ ಖ್ಯಾತರು. ಆರಂಭದಲ್ಲಿ ಹಾಸ್ಯ ಪಾತ್ರಗಳಲ್ಲೇ ಪಳಗಿ ಬಳಿಕ ಗಂಭೀರ ಅಭಿನಯದ ಪಾತ್ರಗಳಲ್ಲಿ ಯಶಸ್ವಿ ನಟರಾದರು. 500ಕ್ಕಿಂತಲೂ ಹೆಚ್ಚು ತುಳು, ಕನ್ನಡ ನಾಟಕಗಳಲ್ಲಿ ಚರಿತ್ರ ನಟ, ಕಥಾನಾಯಕ, ವಿಲನ್ ಮುಂತಾಗಿ ನಟಿಸಿದ ರವೀಂದ್ರರು ನಾಟಕ ದಿಗ್ದರ್ಶನ, ಕೂಟ ಸಂಘಟನೆಗಳಲ್ಲೂ ಸಿದ್ಧ ಹಸ್ತರಾದರು. ಕೆ.ಬಿ. ಭಂಡಾರಿ, ರಾಮ ಕಿರೋಡಿಯನ್ (ಕಿರೋಡಿಯನ್

ಬಹುಪಾಲು ನಾಟಕಗಳ ನಿರ್ದೇಶನ ರವೀಂದ್ರರದೇ ಆಗಿತ್ತು), ಎನ್.ಎಸ್. ರಾವ್ ಮೊದಲಾದವರ ನಾಟಕಗಳನ್ನು ನಿರ್ದೇಶಿಸಿ ಹೆಸರು ಗಳಿಸಿದರು. ಸರಕಾರಿ ಫಿಶ್ ಫ್ರೀಜಿಂಗ್ ಎಂಡ್ ಕೋಲ್ಡ್ ಸ್ಟೋರೇಜ್‌ನಲ್ಲಿ ನೌಕರಿಯಲ್ಲಿದ್ದವರು. ಜೆ. ರವೀಂದ್ರರು ಪ್ರಶಸ್ತಿ ವಿಜೇತ ರಂಗನಟ, ನಿರ್ದೇಶಕ ಸಿನಿಮಾ ನಟ, ಯು.ಮಚ್ಚೇಂದ್ರನಾಥರ ಪ್ರಸಿದ್ಧ 'ಕೈದಾರೆ' ನಾಟಕದ ನಟನಾಗಿ ಪ್ರಥಮವಾಗಿ ರಂಗಕ್ಕೆ ಕಾಲಿಟ್ಟ ಇವರು, ಕೆ.ಬಿ. ಭಂಡಾರಿಯವರ 'ಬಂಗಾರ್ ಬಾಲೆ', ದಂಡಕೇರಿಯವರ 'ಬಯ್ಯಮಲ್ಲಿಗೆ'ಯಿಂದ ಹಿಡಿದು ಮಂಗಳೂರು ಹಾಗೂ ಆಸುಪಾಸಿನ ಬಹುತೇಕ ಪ್ರಮುಖ ನಾಟಕಕಾರರೆಲ್ಲರ ನಾಟಕಗಳಲ್ಲಿ ಅಭಿನಯಿಸಿದರು, ನಿರ್ದೇಶಿಸಿದರು – ಕಾಸರಗೋಡು, ಕುಂಬಳೆ, ಉಳ್ಳಾಲ, ಪುತ್ತಿಗೆ, ಜೋಡುಕಲ್ಲು – ಮುಂತಾದೆಡೆ ಸಾವಿರಾರು ರಂಗಶಿಷ್ಯರನ್ನು ಸಿದ್ಧಗೊಳಿಸಿದರು. ಹಲವು ಕನ್ನಡ ನಾಟಕಗಳನ್ನೂ ರಚಿಸಿದರು.

### ಜೀವರತ್ನ ಚನಿಲೊ (ಸನಿಲ್) (1935–2007)



ಮಂಗಳೂರು ಮಹಾಕಾಳಿ ಪಡ್ಪುವಿನ ನಟ, ನಿರ್ದೇಶಕ ದಿ. ಜೀವರತ್ನ ಚನಿಲ್ ರಂಗಭೂಮಿ ಮತ್ತು ಚಲನಚಿತ್ರ ರಂಗದ ಹಿರಿಯ ಹೆಸರು. ಆಯುರ್ವೇದ ಪಂಡಿತರಾದ ದಿ| ನಾಗಪ್ಪ ಸೀತಮ್ಮ ದಂಪತಿಯ ಮಕ್ಕಳಲ್ಲಿ 2ನೆಯವರೇ ಜೀವರತ್ನರು. ಅಣ್ಣ ಹಿರಿಯ ನಾಟಕಕಾರ ಯು. ಮಚ್ಚೇಂದ್ರನಾಥ್ ಮತ್ತು ದಿ| ಬೇಲಗದ್ದೆ ಅಪ್ಪಯ್ಯರ ರಂಗಗರಡಿಯಲ್ಲಿ ಪಳಗಿದ ಜೀವರತ್ನ ಚನಿಲೊ ತನ್ನ 17ನೆ ವಯಸ್ಸಿನಲ್ಲಿ ನಾಟಕದಲ್ಲಿ ಪಾತ್ರ ಮಾಡತೊಡಗಿದರು. ದಷ್ಟಪುಷ್ಟ ಶರೀರಕ್ಕೆ ತಕ್ಕಂಥ ಸ್ವರಭಾರ. ಯಕ್ಷಗಾನ ತಾಳಮದ್ದಳೆಗಳಲ್ಲಿ ಅರ್ಥವನ್ನು ಹೇಳುತ್ತಿದ್ದವರು. ದಿ. ಆನಂದ ಶೇಖರ್, ಎಂ. ತಾರಾನಾಥ ನ್ಯಾಕ್ ಅಲ್ಲದೆ ಅಣ್ಣ ಮಚ್ಚೇಂದ್ರನಾಥ್‌ರನ್ನು ಸೇರಿಸಿಕೊಂಡು 'ಜ್ಞಾನೋದಯ ನಾಟಕ ಸಂಘ'ವನ್ನು ಆರಂಭಿಸಿದರು. 'ಕೋಟಿಚೆನ್ನಯ' ನಾಟಕ ಬರೆದು ಪ್ರದರ್ಶನ ನೀಡಿದರು. ಬಳಿಕ 'ಜೈಹಿಂದ್ ನಾಟಕ ಮಂಡಳಿ' ಮೂಲಕ 'ಅರಿಕೇಸರಿ ತೈಲಪ', 'ಅಲೆಕ್ಸಾಂಡರ್', ರಾಣಾ ಪೃಥ್ವಿರಾಜ್', 'ಸಮ್ರಾಟ್ ಅಶೋಕ', 'ಸಮರ ಸನ್ನಾಹ', 'ಕಣ್ಣೀರ್ದ ಕರಿಮಣಿ', 'ತಾಯಿ ಕರುಳು', 'ಕೋಟಿ ಚೆನ್ನಯ', 'ಕುರುಕ್ಷೇತ್ರ', 'ವೀರಪಾಂಡ್ಯ' ಕಟ್ಟ ಬೊಮ್ಮನ್, ತ್ಯಾಗರಾಜಕರ್ಣ ಮುಂತಾದ ಕನ್ನಡ, ತುಳು ನಾಟಕಗಳಲ್ಲಿ ಅಭಿನಯಿಸಿದರು, ನಿರ್ದೇಶನ ಮಾಡಿದರು. ವೀರ ಪಾಂಡ್ಯ ಕಟ್ಟ ಬೊಮ್ಮನ್ (ಎಂ. ಪುರುಷೋತ್ತಮರ ನಾಟಕ; ಜೀವರತ್ನರ ಕಲಾ ಚಾತುರ್ಯದಲ್ಲಿ ಹೊಸರೂಪ ಪಡೆಯಿತು.) ಇದರ ಕಥಾನಾಯಕ ಪಾತ್ರಕ್ಕೆ ಸ್ಪರ್ಧೆಯಲ್ಲಿ ಪ್ರಥಮ ಪುರಸ್ಕಾರ ಪಡೆದರು. ನಾಲ್ಕು ತುಳು ಚಿತ್ರಗಳಲ್ಲೂ ಅಭಿನಯಿಸಿ ಗಮನ ಸೆಳೆದ ಜೀವರತ್ನ ಚನಿಲೊ ಅವರ ಅಚ್ಚಳಿಯದ ರಂಗಪ್ರತಿಭೆಯನ್ನು

ತುಳು ನಾಟಕ ಕಲಾವಿದರ ಒಕ್ಕೂಟ (ರಿ) ದ ಸಮಾರಂಭದಲ್ಲಿ ಸ್ಮರಿಸಲಾಗಿದೆ.

**ರಾಘವ ಉಳ್ಳಾಲ್ (ಆರ್ಕೆ ಉಳ್ಳಾಲ್) (1944–2013)**



ನಟ ನಿರ್ದೇಶಕ, ಗೀತೆ ರಚನೆಕಾರ ಉಳ್ಳಾಲ ಬಂಡಿಕೊಟ್ಯದ ರಾಘವ ಉಳ್ಳಾಲ್ 'ಆರ್ಕೆ' ಎಂದೇ ಪ್ರಖ್ಯಾತಿ ಪಡೆದವರು. ಕೆ.ಬಿ. ಭಂಡಾರಿಯವರ 'ಬಂಗಾರ್ ಬಾಲೆ' ನಾಟಕದಲ್ಲಿ ಹಾಸ್ಯದ ಹೊಳೆ ಹರಿಯಿಸಿದ ಉಳ್ಳಾಲ್, ಎಳೆಯ ವಯಸ್ಸಿನಿಂದಲೇ ನಾಟಕರಂಗ ಯು.ಆರ್. ಚಂದರ್ ಅವರ ನವಶಕ್ತಿ ತರುಣವೃಂದ ತಂಡದಲ್ಲಿ ಬಾಲನಟನಾಗಿ ಪ್ರವೇಶಿಸಿ ನೂರಾರು ತುಳು ನಾಟಕಗಳಲ್ಲಿ ಅಭಿನಯಿಸಿ ಪ್ರೇಕ್ಷಕರ ಮನಸೂರೆ ಗೊಂಡರು. ಗೀತೆಗಳ ರಚನೆ, ನಾಟಕ ದಿಗ್ದರ್ಶನಗಳಲ್ಲೂ ಪರಿಣತರು. ಯು. ಆರ್. ಚಂದರ್, ಯು. ಮಚ್ಚೇಂದ್ರನಾಥ್, ಕಿರೋಡಿಯನ್ ಮುಂತಾದ ಅನೇಕರ ನಾಟಕಗಳಲ್ಲಿ ಅಭಿನಯಿದರು. ಹಲವಾರು ನಾಟಕಗಳ ನಿರ್ದೇಶನ ಮಾಡಿದ ಆರ್ಕೆಯವರು ಪುತ್ತೂರಿನಲ್ಲಿ ಎಂಬತ್ತರ ದಶಕದಲ್ಲಿ ನಡೆದ ಜಿಲ್ಲಾ ನಾಟಕ ಸ್ಪರ್ಧೆಯಲ್ಲಿ ದಿಗ್ದರ್ಶನಕ್ಕೆ ಪ್ರಥಮ ಪ್ರಶಸ್ತಿ ಗಳಿಸಿದರು. 1976ರಲ್ಲಿ ಬರೆದ ಮಿಲಿಟ್ರಿದಾಯೆ ಕಂಡನೇ ಇದು ಮಂಗಳೂರು ಆಕಾಶವಾಣಿಯ ಪ್ರಾರಂಭ ಕಾಲಕ್ಕೆ ಪ್ರಸಾರವಾಗಿತ್ತು. ಚಲನಚಿತ್ರ ನಟರೂ ಆದ ಆರ್ಕೆ ಉಳ್ಳಾಲರ ಲೇಖನಿಯಿಂದ ಮೂಡಿದ ತುಳು ಹಾಡುಗಳು ಅಚ್ಚ ತುಳುವಿನ ಸಾಹಿತ್ಯ ಸಂಸ್ಕೃತಿ ಹೊಳಪಿನ ಮರೆಯಲಾಗದ ಹಾಡುಗಳಾಗಿವೆ. ಬ್ರಹ್ಮಶ್ರೀ ನಾರಾಯಣಗುರು, ಪೇಂಟೆದ ಪೊದು, ಲಕ್ಷ್ಮಿ ಬರ್ಪೊಲು ಮತ್ತಿತರ ನಾಟಕ ರಚಿಸಿ ದಿಗ್ದರ್ಶಿಸಿದವರು.

1948ರಲ್ಲಿ ನಾಲ್ಕರ ಬಾಲಕ ಬಂಡಿಕೊಟ್ಯದ ತಾಯಿಯ ತವರು ಮನೆಗೆ ಬಂದು ನಿಂತರು. ಕೆಲವೇ ಸಮಯದಲ್ಲಿ ಯು.ಆರ್. ಚಂದರ್‌ರ 'ನವತರುಣ ಕಲಾವೃಂದ'ದ ನಾಟಕಗಳಲ್ಲಿ ಬಾಲನಟನಾಗಿ ಅಭಿನಯ ಆರಂಭವಾಯಿತು. ಬೇರೆ ಬೇರೆ ಕೂಟಗಳ ನಾಟಕಗಳಲ್ಲಿ ಪಾತ್ರವಹಿಸುತ್ತಾ 1962ರಲ್ಲಿ ತೊಕ್ಕೊಟ್ಟು ಅಂಬೇಡ್ಕರ್ ಭವನದಲ್ಲಿ ನಡೆದ 'ಬಡ್ಡಿದ ದೂಮಣ್ಣೆ' (ರಚನೆ: ಯು.ಆರ್. ಚಂದರ್) ನಾಟಕದಲ್ಲಿ ನಿರ್ವಹಿಸಿದ ಹಾಸ್ಯ ಪಾತ್ರದ ಚಮಕ್‌ಗೆ ಪ್ರೇಕ್ಷಕರು ದಂಗಾಗಿ ಭರ್ಜರಿ ಚಪ್ಪಾಳೆ ಮುಂದೆ ಹಲವು ಕಾಲ ಅಂಥದೇ ಪಾತ್ರ. 'ಹಾಸ್ಯವೆಂದರೆ ಆರ್ಕೆ ಉಳ್ಳಾಲ್' ಎಂದೇ ಆ ಪ್ರದೇಶದಲ್ಲಿ ಮನೆ ಮಾತಾಯಿತು. ಮಂಗಳೂರು ನಗರದ ರಂಗಕ್ಕೆ ರಾಘವರನ್ನು ಕೆ.ಬಿ. ಭಂಡಾರಿ ತನ್ನ ನಾಟಕ ರಂಗ ಪ್ರಯೋಗದ ಮೂಲಕ ಪರಿಚಯಿಸಿದರು.

1968ರಲ್ಲಿ ಜಿ.ವಿ.ಕಾಮತರ 'ಅರುಣೋದಯ ಕಲಾವೃಂದ' ತಂಡಕ್ಕೆ ಅಚ್ಯುತ ಕಲ್ಲಾಪು ರಾಘವರನ್ನೂ ಕೆ.ವಿ. ಭಟ್ (ಶ್ರೀಭವ್ಯಾ)ರನ್ನೂ ಪರಿಚಯಿಸಿದರು. ಅಲ್ಲಿಂದ ಮುಂದೆ ಇವರಿಬ್ಬರು ಬಾಳಿನುದ್ದಕ್ಕೂ 'ಜಿಗ್ರಿದೋಸ್ತ್'ಗಳಾಗಿ ಉಳಿದರು. ಇಬ್ಬರೂ

ಹಾಸ್ಯಪಟುಗಳು 'ಮಿಸ್ ರಾಗಿಣಿ', 'ಅಣ್ಣ ತಮ್ಮ', 'ದೇವದಾಸಿ' ಇತ್ಯಾದಿ ಕನ್ನಡ ನಾಟಕಗಳಲ್ಲಿ ಇಬ್ಬರದೂ ಜೋಡಿ ಇಂಥ ನಾಟಕಗಳ ಮೂಲಕ ಸುರತ್ಕಲ್, ಮುಲ್ಕಿ, ಮೂಡಬಿದ್ರೆ, ಕಿನ್ನಿಗೋಳಿ ಮುಂತಾದ ಹಳ್ಳಿಹಳ್ಳಿಗಳಿಗೆ ಹೋದ ಈ ನಾಟಕಗಳ ಪ್ರದರ್ಶನದಿಂದಾಗಿ ರಾಘವ ಉಳ್ಳಾಲ್ ಎಲ್ಲೆಲ್ಲೂ ಜನಪ್ರಿಯತೆ ಗಳಿಸಿದರು.

ಇಂತಹ ಸಂಚಾರದ ವೇಳೆ ಮುಲ್ಕಿಯಲ್ಲಿ ಅಲ್ಲಿಯ ಪ್ರಸಿದ್ಧ ನಟ ಎಸ್.ಆರ್. ಅಂಚನ್‌ರ ಪರಿಚಯವಾಯಿತು. ಆ ಕಾಲದಲ್ಲಿ ಮೂಲ್ಕಿಯಲ್ಲಿ ಬಿರುಸಾಗಿ ತುಳು, ಕನ್ನಡ ನಾಟಕ ಪ್ರಯೋಗಗಳು ನಡೆಯುತ್ತಿದ್ದವು. ಎಸ್.ಆರ್. ಅಂಚನ್ ಮತ್ತು ವೇದಾ ಅಂಚನ್ ಅಲ್ಲಿ ಜನಪ್ರಿಯ ಕಲಾವಿದರಾಗಿದ್ದರು. ತುಳುವಿನಲ್ಲಿ ಟೇಲರ್ ಸಿನಿಮಾಗಳನ್ನು ಆರಂಭಿಸುವಾಗ ಇದೇ ನಟಿ ವೇದಾ ಅವರನ್ನು ರಾಘವರು ಪ್ರಥಮವಾಗಿ ಡಾ. ದಂಡೆಕೇರಿಯವರ ಬಯ್ಯಮಲ್ಲಿಗೆ ಮೂಲಕ ಚಿತ್ರರಂಗಕ್ಕೆ ಪರಿಚಯಿಸಿದರು. ವೇದಾ ಚಿತ್ರ ನಟಿಯಾಗಿ 'ಚಿತ್ರಾಂಜಲಿ'ಯಾಗಿ ಪ್ರಸಿದ್ಧರಾದರು.

ರಾಘವ ಉಳ್ಳಾಲರು ವಿಶುಕುಮಾರ್, ಮ್ಯೊದಿನಬ್ಬರ ಸೂರ್ಯಕಾಂತಿ, ಮುತ್ತುದ ಸರ, ಸಂಸಾರ, ಮುಂತಾದ ನಾಟಕಗಳಲ್ಲಿ, ದಂಡೆಕೇರಿಯವರ 'ಬಯ್ಯಮಲ್ಲಿಗೆ' ಟೇಲರರ 'ಕಲ್ಜಿಗದ ಕುರುಕ್ಷೇತ್ರ' ಮುಂತಾದ ಹತ್ತಾರು ನಾಟಕಗಳ ಸುಮಾರು 500ಕ್ಕೂ ಮಿಕ್ಕ ರಂಗಪ್ರದರ್ಶನಗಳಲ್ಲಿ ಹಾಸ್ಯನಟರಾಗಿ ಅಭಿನಯಿಸಿದವರು. 1968ರಲ್ಲಿ ಕೆ.ವಿ.ಭಟ್–ರಾಘವ ಜತೆಗೂಡಿ ಜೆ. ರವೀಂದ್ರರಂತಹ ಗೆಳೆಯರನ್ನು ಸೇರಿಸಿ 'ಜ್ಯೋತಿಮಿತ್ರ ಕಲಾವೃಂದ' ಸ್ಥಾಪಿಸಿ ಅದರ ಮೂಲಕವೂ ನಾಟಕಗಳನ್ನು ಪ್ರದರ್ಶಿಸಿದರು. ಕೆ.ಬಿ. ಭಂಡಾರಿಯವರ ಬಹುಪಾಲು ನಾಟಕಗಳು ಶಾಲಾನಾಟಕಗಳಾಗಿದ್ದವು. 'ಬಂಗಾರ್‌ಬಾಲೆ' ನಾಟಕದಲ್ಲಿ ಭಂಡಾರಿಯವರೊಂದಿಗೆ ಸೇರಿ ಪಾತ್ರವಹಿಸಿದ ರಾಘವರು ಅವರ ನಾಟಕ 'ಪ್ಲಾಟ್'ಗಳಿಗೆ ಪೂರ್ಣಪ್ರಮಾಣದ ಸ್ವರೂಪ ನೀಡಿದರು. 'ಕಲ್ಯಾಣಪ್ಪನ ಕಾಟ್‌ಕಾಯಿ' ಯನ್ನು ರಾಘವ, ಜೆ. ರವೀಂದ್ರ, ಕೆ.ವಿ. ಭಟ್ ಇತ್ಯಾದಿ ಗೆಳೆಯರು ಸೇರಿ ರಾಘವರ ನಿರ್ದೇಶನದಲ್ಲಿ ನಡೆಸಿದ ಪ್ರಯೋಗ ಹಿಟ್ ಆಯಿತು. ಕೆ.ಬಿ. ಭಂಡಾರಿಯವರ 'ರಾಣಿ ಅಬ್ಬಕ್ಕ ದೇವಿ'ಯನ್ನು ಉತ್ಕರ್ಷಕ್ಕೇರಿಸಿದವರೂ ಇದೇ ರಾಘವ. (ಪೂರಕ ಮಾಹಿತಿ: ಶ್ರೀ ತಮ್ಮ ಲಕ್ಷ್ಮಣ) 'ಬಂಗಾರ್‌ಬಾಲೆ'ಯಲ್ಲಿ ಜೆ. ರವೀಂದ್ರ, ರೋಹಿದಾಸ್ ಕದ್ರಿ ಮತ್ತು ರಾಘವ ಉಳ್ಳಾಲರ ಮೂವರು ಕಳ್ಳರ ಪಾತ್ರಗಳು ಜನಪ್ರಿಯವಾಗಿದ್ದವು.

ಗೆಳೆಯ ಕೆ.ವಿ. ಭಟ್ (ಶ್ರೀಭವ್ಯ)ರ ಆರತಿ, ತೂತುಡರ್, ಪೊಣ್ಣಬದ್ಕ್, ಒಡಕ್, ಅಂಗಲಾಪು ಮುಂತಾದ ನಾಟಕಗಳಿಗೆ ರಾಘವ ಉಳ್ಳಾಲರದೇ ನಿರ್ದೇಶನ.

1976ರಲ್ಲಿ ರಾಘವರನ್ನು 'ಅರುಣ್–ಕಿರಣ್' ಪ್ರೊಡಕ್ಷನ್‌ನ ಡಾ. ರಿಚಾರ್ಡ್ ಕ್ಯಾಸ್ಟಲಿನೋರಿಗೆ ತಮ್ಮ ಲಕ್ಷ್ಮಣರು ಪರಿಚಯಿಸಿದರು. 'ತಮ್ಮ'ರ 'ಸತ್ಯಮುನೀಂಡಾ' ನಾಟಕವನ್ನು ರಾಘವ ಉಳ್ಳಾಲರ ನಿರ್ದೇಶನದಲ್ಲಿ ಮಂಗಳೂರು ಪುರಭವನದಲ್ಲಿ ರಿಚಾರ್ಡರು ಟಿಕೇಟ್ ನಾಟಕವಾಗಿ ಆಡಿಸಿ ಅದು ಯಶಸ್ವಿಯಾಯಿತು.

ನಟನೆ, ನಿರ್ದೇಶನವಲ್ಲದೆ ರಾಘವ ಉಳ್ಳಾಲರ ಪ್ರತಿಭೆ ಪದ್ಯ ರಚನೆಯಲ್ಲೂ

ಮೇಲ್ಪಟ್ಟದ್ದಾಗಿತ್ತು. 1970-90ರ ಅವಧಿಯ 20 ವರ್ಷಗಳಲ್ಲಿ ರಾಘವರು ಹೆಚ್ಚಾಗಿ ಹಿಂದಿ ಚಿತ್ರಗೀತೆಗಳ ಧಾಟಿಯಲ್ಲಿ ಪದ್ಯ ಬರೆದರು. ಆ ಬಳಿಕ ಅವರದೇ ಸ್ವಂತ ಧಾಟಿಯ ತುಳು ಬನಿಯ ಹಾಡುಗಳು ಹೆಚ್ಚು ಜನಪ್ರಿಯವಾದವು. ತುಳುಚಿತ್ರಗಳಿಗೂ ಗೀತೆ ಬರೆದರು. ತುಳುನಾಡ ಸಿರಿಯ 'ತಂಕರಕನ ತಾಳಿ ಬಂದಿ', ಬಂಗಾರ್ ಪಟ್ಲೆರ್‌ನ "ಪುಟ್ಟುನವು ಚೈಪಿನವು' ಮುಂತಾದ ಹಾಡುಗಳು ಸದಾ ಸ್ಮರಣೀಯವಾದವು. 2012ರ 'ತೆಲಿಕೆದ ಬೊಳ್ಳಿ' ಚಿತ್ರಕ್ಕೆ ಬರೆದುದೇ ಅವರ ಕೊನೆಯ ಗೀತೆ. ಇವರು ಬರೆದ ತುಳುಹಾಡುಗಳ 'ಮದಿಮಾಯೆ ಮದಿಮಾಲ್' ಕ್ಯಾಸೆಟನ್ನು ಅಚ್ಯುತ ಕಲ್ಲಾಪು ನಿರ್ಮಾಣ ಮಾಡಿದ್ದು, ಅದು ಅತ್ಯಂತ ಜನಪ್ರಿಯವಾಯಿತು. ಹಲವು ತುಳು, ಕನ್ನಡ ಚಿತ್ರಗಳಲ್ಲೂ ಉಳ್ಳಾಲ್ ಅಭಿನಯಿಸಿದವರು. ವಾಚ್ ರಿಪೇರರ್ ಮತ್ತು ಇಪ್ಪತ್ತರ ವಯಸ್ಸಿನಿಂದಲೇ ಯೋಗಾಸನಪಟುವಾಗಿದ್ದ ರಾಘವ ಉಳ್ಳಾಲ್ 2013ರಲ್ಲಿ ನಿಧನರಾದರು. ನೂರಾರು ಹೊಸ ಕಲಾವಿಧರನ್ನೂ ತುಳುರಂಗಭೂಮಿಗೆ ಪರಿಚಯಿಸಿದ ಹೆಚ್ಚುಗಾರಿಕೆ ಅವರದು.

**ನಾಟಕಕಾರ, ನಿರ್ದೇಶಕ ವಸಂತ ವಿ. ಅಮೀನ್ (1951)**



ವಸಂತ ವಿ. ಅಮೀನ್ ಬಡತನದಲ್ಲೇ ಹುಟ್ಟಿ ಅಲ್ಲೇ ತನ್ನ ಕಲಾ ಪ್ರೌಢಿಮೆಯನ್ನು ಅರಳಿಸಿ ಈಗಲೂ ತನ್ನ ಕಲಾಸೇವೆ ಮಾಡುತ್ತಿರುವ ಅಮೀನ್ ತುಳುನಾಡು ಕಂಡ ಓರ್ವ ಅಪೂರ್ವ ಸಾಧಕ. ಬದುಕಿನಲ್ಲಿ ತಾನು ಕಟ್ಟಿಕೊಂಡಿರುವ ಕನಸುಗಳನ್ನು ಒಟ್ಟು ಗೂಡಿಸಿಕೊಂಡು ಅದಕ್ಕೊಂದು ಮೂರ್ತ ರೂಪ ಕೊಟ್ಟು, ಸಾಹಿತ್ಯಾಭಿಮಾನಿ ಗಳನ್ನು ರಂಗಾಸಕ್ತರನ್ನು ಸೃಷ್ಟಿ ಮಾಡಿದ ವಸಂತ ವಿ. ಅಮೀನ್‌ರು ಜಾನಪದ, ಐತಿಹಾಸಿಕ, ಪೌರಾಣಿಕ, ಸಾಮಾಜಿಕ ನಾಟಕಗಳನ್ನು ರಚಿಸಿ ಯಶಸ್ಸು ಗಳಿಸಿದವರು.

ಆರಂಭದ ದಿನದಲ್ಲಿ ಇವರು ಬರೆದ ಕಥೆ, ಕವನ ಲೇಖನಗಳು ತುಳುಕೂಟ ಮತ್ತು ತುಳುನಾಡು ಪತ್ರಿಕೆಯಲ್ಲಿ ಪ್ರಕಟಗೊಂಡಿದ್ದವು. ಆ ಬಳಿಕ ಎಂಬತ್ತರ ದಶಕದಲ್ಲಿ ಹಿರಿಯ ಸಂಶೋಧಕರಾದ ಡಾ. ಗುರುರಾಜ್ ಭಟ್ಟರವರ ಸಂಶೋಧನ ಕೃತಿಗಳ ಕ್ಷೇತ್ರಕಾರ್ಯ ಕಾಲದಲ್ಲಿ ಸಹಕಾರವನ್ನು ನೀಡಿದ್ದು, ಇದೇ ಸಂದರ್ಭದಲ್ಲಿ 'ಬೀರ ಸಿರಿತ ಸಿಂಘದ ಕಿನ್ನಿ' ಎಂಬ ನಾಟಕವನ್ನು ಮಂಗಳೂರು ಆಕಾಶವಾಣಿಯ ಪ್ರಸಾರಕ್ಕಾಗಿ ಬರೆದರು. ಇವರು ಅಭಿನಯಿಸಿ ಹೆಸರು ಮಾಡಿದ ಪ್ರಮುಖ ನಾಟಕಗಳು 'ಹೆಡ್ಡೆ ತಿಮ್ಮೆ', 'ಏರ್‌ಮಲ್ತಿನ ತಪ್ಪು', 'ನಂದಾವರದ ನಂದಾದೀಪ' ಮುಂತಾದವು.

ಇವರು ಬೀರಸಿರಿತ ಸಿಂಘದ ಕಿನ್ನಿ, ನಂದಾವರದ ನಂದಾದೀಪ, ಕೋಟಿಚೆನ್ನಯ, ವಜ್ರಕಂಭ, ಶ್ರೀನಾರಾಯಣ ಗುರುಸ್ವಾಮಿ, ಶ್ರೀ ನಿತ್ಯಾನಂದ ಸ್ವಾಮಿ, ಕದಿರೆದ ಕತೆ ಮುಂತಾದ ಚಾರಿತ್ರಿಕ ನಾಟಕಗಳನ್ನು 'ಕಾನೂನು ಕಣ್ಣ್ ಮುಚ್ಚಿನಗ', 'ಓಟು ಪಾಡರೆ

ಪೋನಗ', 'ನಮ ಓಯಿಕ್ಲಾ ಸೈ', ಅಸಡ್ಡೆ ಮುಂತಾದ ಸಾಮಾಜಿಕ ನಾಟಕಗಳನ್ನೂ, ಮಕರ ಜ್ಯೋತಿ, ಶ್ರೀ ಶನೀಶ್ವರ ಮಹಾತ್ಮೆ–ಎಂಬ ಪೌರಾಣಿಕ ನಾಟಕಗಳನ್ನು ಬರೆದಿದ್ದುದಲ್ಲದೆ ಕಾಂತಾಬಾರೆ ಬೂದಾಬಾರೆ ಎಂಬ ಯಕ್ಷಗಾನ ರಚಿಸಿದ್ದಾರೆ.

ಕಲಾಸಂಗಮದ ವಿಜಯಕುಮಾರ್ ಕೊಡಿಯಾಲ್‌ಬೈಲ್‌ರ ತುಳು ರಂಗ ಭೂಮಿಯಲ್ಲಿ ದಾಖಲೆ ನಿರ್ಮಿಸಿದ 'ಒರಿಯರ್ದೊರಿ ಅಸಲ್', 'ಕುಸೆಲ್ದ ಕುಸಲ್', 'ಏರ್‌ಂದ್ ಏರೆಗ್ ಗೊತ್ತು' ಮುಂತಾದ ಅನೇಕ ನಾಟಕಗಳ ಆರಂಭದ ಪ್ರಯೋಗಗಳನ್ನು ವಸಂತ ವಿ. ಅಮೀನ್‌ರವರೇ ನಿರ್ದೇಶಿಸಿದರು.

ಈಚೆಗೆ (2018) ಕಿಶೋರ್ ಡಿ. ಶೆಟ್ಟರ ಲಕುಮಿ ಹಾಗೂ ಶ್ರೀಲಲಿತೆ ತಂಡದ ನಾಲ್ಕು ನಾಟಕಗಳ ಮುಹೂರ್ತ ಏಕಕಾಲದಲ್ಲಿ ಶರವು ಮಹಾಗಣಪತಿ ದೇವಸ್ಥಾನದಲ್ಲಿ ನಡೆದಾಗ 'ಶ್ರೀಲಲಿತೆ' ತಂಡಕ್ಕಾಗಿ ವಸಂತ ವಿ. ಅಮೀನರು ಬರೆದ ಪೌರಾಣಿಕ ನಾಟಕ 'ತಿರುಪತಿ ತಿಮ್ಮಪ್ಪೆ' ಇದರ ಪ್ರಾರಂಭೋತ್ಸವ ನಡೆದು, ರಿಹರ್ಸಲ್ ನಡೆದಿದೆ.

ತುಳು ಚಲನ ಚಿತ್ರಗಳಲ್ಲಿಯೂ ತನ್ನ ಸಾಮರ್ಥ್ಯವನ್ನು ಮೆರೆದಿರುವ ಅಮೀನ್ 'ಬದ್ಕೊಂಜಿ ಕಬಿತೆ' ತುಳು ಚಲನ ಚಿತ್ರಕ್ಕೆ ಚಿತ್ರ ಕಥೆ, ಸಂಭಾಷಣೆ ಮತ್ತು ಗೀತಾ ರಚನೆಯನ್ನು ಮಾಡಿದ್ದಾರೆ. ರಿಚಾರ್ಡ್ ಕೆಸ್ಟೋಲಿನ್‌ರವರ "ಸಪ್ಟೆಂಬರ್ 8" ಚಲನ ಚಿತ್ರದ ಸಂಭಾಷಣೆ ಮತ್ತು ಸಹ ನಿರ್ದೇಶನ ಇವರದಾಗಿರುತ್ತದೆ.

### ರಮಾ ಬಿ.ಸಿ.ರೋಡ್ (1957)



'ಚಾ ಪರ್ಕ' ತಂಡದ ಹಿರಿಯ ಕಲಾವಿದರಲ್ಲಿ ತಮ್ಮ ತೂಕದ ಮಾತು ಹಾಗೂ ಸದಭಿರುಚಿಯ ಪಾತ್ರಗಳಲ್ಲಿ ಗಮನ ಸೆಳೆಯುವ ನಟರೆಂದರೆ ರಮಾ ಬಿ.ಸಿ.ರೋಡ್ ಅವರು. ಶಿಕ್ಷಕ ವೃತ್ತಿಯನ್ನು ತಮ್ಮದಾಗಿಸಿಕೊಂಡ ರಮೇಶ್ ಮಾಸ್ತರ್ ಅವರಿಗೆ ಕಲೆಯ ಮೇಲೆ ಇದ್ದ ಆಸಕ್ತಿ ಅವರನ್ನು ಓರ್ವ ರಂಗನಟನನ್ನಾಗಿ, ಬಳಿಕ ದಕ್ಷ ನಿರ್ದೇಶಕರನ್ನಾಗಿಸಿತು.

1992ರಲ್ಲಿ ಕಾಪಿಕಾಡ್‌ರ 'ಚಾಪರ್ಕ' ನಾಟಕ ತಂಡಕ್ಕೆ ಸೇರಿದ ರಮಾ ಬಿ.ಸಿ.ರೋಡ್ ಅವರು 'ಈರ್ ದೂರ' ನಾಟಕದಲ್ಲಿ ಮೊದಲ ಬಾರಿಗೆ ಬಣ್ಣ ಹಚ್ಚಿದರು. ಅನಂತರ ಕಾಪಿಕಾಡ್ ತಂಡದ ಎಲ್ಲಾ ನಾಟಕಗಳಲ್ಲಿ ಪಾತ್ರ ನಿರ್ವಹಿಸಿರುವ ರಮಾ ಅವರದ್ದು ಆದರ್ಶ ವ್ಯಕ್ತಿತ್ವ. 2007ರಲ್ಲಿ ಶಿಕ್ಷಕ ವೃತ್ತಿಯಿಂದ ಸ್ವಯಂ ನಿವೃತ್ತಿಯನ್ನು ಪಡೆದ ರಮೇಶ್ ಮಾಸ್ತರ್ ಆ ಬಳಿಕ 'ಚಾ ಪರ್ಕ' ತಂಡದ ಪೂರ್ಣಾವಧಿ ಸದಸ್ಯರಾದರು. 'ಯಾನೊರಿ ಬರೋಲಿಯಾ' ನಾಟಕದಲ್ಲಿ ನಿರ್ವಹಿಸಿದ್ದ ಮೇಸ್ತ್ರ ಪಾತ್ರ ಹಾಗೂ ದೇವೆರ್ ದೀಲೆಕ್ಕಾಮುಂಡು ನಾಟಕದಲ್ಲಿ ಕುಡಿತದ ಚಟವನ್ನು ಬಿಡಲಾರದೆ ಒದ್ದಾಡುವ ನಾಯಕನ ತಂದೆಯ ಪಾತ್ರ ಅಪಾರ ಜನಮೆಚ್ಚುಗೆ ಯನ್ನು ಪಡೆದಿವೆ ಎಂದರೆ ಅತಿಶಯವಲ್ಲ. ಗಂಭೀರ ಪಾತ್ರಗಳಿಗೆ ಸೈ ಅನ್ನಿಸುವ

ಕಾಪಿಕಾಡ್ ತಂಡದ ಹಿರಿಯ ನಟ ರಮಾ ಅವರು ಇತರೇ ಕಲಾವಿದರಿಗೆ ಪ್ರೀತಿಯ 'ಮೇಸ್ಟ್ರು'.

ಮಗ ಬಿ.ಸಿ. ಅರುಣಚಂದ್ರ ಅವರನ್ನೂ ಕಾಪಿಕಾಡ್ ತಂಡದಲ್ಲಿ ಕಲಾವಿದನಾಗಲು ಪ್ರೋತ್ಸಾಹ ನೀಡಿರುವ ರಮಾ ಅವರು ನಾಟಕ ನಿರ್ದೇಶಕರಾಗಿ ಬಿ.ಆರ್. ಕುಲಾಲರ ಹತ್ತಾರು ನಾಟಕಗಳು ಮತ್ತು ಪುತ್ರ ಅರುಣ್‌ಚಂದ್ರರ ಎಲ್ಲಾ ನಾಟಕಗಳಲ್ಲೂ ದಿಗ್ದರ್ಶಿಸುತ್ತ ಬಂದ ಸಮರ್ಥ ರಂಗಕರ್ಮಿಗಳು. ಬಂಟ್ವಾಳ ಸಮೀಪದ ಪುದು ಗ್ರಾಮದಲ್ಲಿ ನೆಲೆಸಿರುವ ರಮೇಶ್ ಮಾಸ್ತರ್ ಬಿ.ಸಿ.ರೋಡ್ ಅವರನ್ನು ಜನರು ಪ್ರೀತಿಯಿಂದ ಇಂದಿಗೂ 'ಮಾಸ್ತರ್' ಎಂದೇ ಕರೆಯುತ್ತಾರೆ.

ರಮಾ ಬಿ.ಸಿ.ರೋಡ್ ನಿರ್ದೇಶಿಸಿರುವ ನಾಟಕಗಳು, ನಾಟಕ ತಂಡಗಳ ಸಂಖ್ಯೆ ಅಚ್ಚರಿ ಮೂಡಿಸುವಂತಿದೆ. ವಿನಾಯಕ ನಾಟಕ ಸಭಾದ ಬಿ.ಆರ್. ಕುಲಾಲರ ಎಲ್ಲ ನಾಟಕಗಳನ್ನು ಕಲಾವಿದರ ಬಳಗ ಜೋಡುಮಾರ್ಗ, ಇವರ 'ಪೂತಪೂಜೆ ಕರಿಯನ ಕರಿಯಣಿ, ಬನ್ನಗ ಕನ್ಯೆದನಾ' ಮುಂತಾದ ಹಲವಾರು ನಾಟಕಗಳು, ಈ ತಂಡಗಳಿಗಲ್ಲದೆ ಮಾನಸ ಕಲಾವಿದರು ಪರಂಗಿಪೇಟೆ ಇವರು ಪ್ರದರ್ಶಿಸಿದ ಅರುಣ್‌ಚಂದ್ರ ಬಿ.ಸಿ.ರೋಡ್ ಇವರ ಎಲ್ಲ ನಾಟಕಗಳು 'ನಮ್ಮ ಕಲಾವಿದೆರ್ ನೆಲ್ಯಾಡಿ', 'ರಾಜಶ್ರೀ' ಮೋಕೆದ ಕಲಾವಿದೆರ್ ಪೊಳಲಿ, 'ಹರಿಣಿ ಕಲಾವಿದೆರ್' ಬಿ.ಸಿ.ರೋಡ್. ಮುಂತಾದ ಹತ್ತಾರು ತಂಡಗಳ ನೂರಾರು ನಾಟಕಗಳನ್ನು ಅಲ್ಲದೆ ಇನ್ನೆಷ್ಟೋ ಶಾಲಾ ಮಕ್ಕಳ ತಂಡಗಳನ್ನು ರಮಾ ಬಿ.ಸಿ.ರೋಡ್ ನಿರ್ದೇಶಿಸಿ ತುಳುರಂಗಭೂಮಿಗೆ ಬಹುಕಾಲ ನೆನಪಿಡುವಷ್ಟು ಕಾಣಿಕೆ ನೀಡಿದ್ದಾರೆ.

### ನಟ, ನಿರ್ದೇಶರ ಪ್ರಭಾಕರ ಕಲ್ಯಾಣಿ (1959)



ಪೆರ್ಡೂರಿನ ಪ್ರಭಾಕರ ಕಲ್ಯಾಣಿ 11ನೇ ವಯಸ್ಸಿನಲ್ಲಿ ನಾಟಕದಲ್ಲಿ ಅಭಿನಯಿಸತೊಡಗಿ ಈವರೆಗೆ 400ಕ್ಕೂ ಅಧಿಕ ತುಳು ಮತ್ತು ಕನ್ನಡ ನಾಟಕಗಳಲ್ಲಿ ಅಭಿನಯಿಸಿದ್ದಾರೆ. 'ಕೂಡ್ಲಿ ಕಲಾವಿದೆರ್' ಸಂಸ್ಥೆಯನ್ನು ಹುಟ್ಟುಹಾಕಿ ಅದರ ಅಧ್ಯಕ್ಷರಾಗಿ ಸ್ಥಳೀಯವಾಗಿ ನಾಟಕ ಮಾಡಿಸಿ, ಅನೇಕ ಕಲಾವಿದರನ್ನು ರಂಗಭೂಮಿಗೆ ಪರಿಚಯಿಸಿದ್ದಾರೆ. ಮಂಗಳೂರಿನಲ್ಲಿರುವ ತುಳುನಾಟಕ ಕಲಾವಿದರ ಒಕ್ಕೂಟದ ಉಪಾಧ್ಯಕ್ಷರಾಗಿ, ಕರ್ನಾಟಕ ನಾಟಕ ಅಕಾಡೆಮಿಯ ಸದಸ್ಯರಾಗಿ ಸೇವೆ ಸಲ್ಲಿಸಿರುವರು. ಉತ್ತಮ ನಟ, ರಚನೆಕಾರ, ಉತ್ತಮ ನಿರ್ದೇಶನ, ಉತ್ತಮ ರಂಗಸಜ್ಜಿಕೆಯಂತಹ ಹಲವು ಪ್ರಶಸ್ತಿಗಳು ಇವರಿಗೆ ಲಭಿಸಿವೆ. ಇವರು 2018ನೇ ಸಾಲಿನ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಇವರ ತಂದೆ ದಿವಂಗತ ರಾಮಕೃಷ್ಣ ಕಲ್ಯಾಣಿ ಕೂಡಾ ಹಿರಿಯ ನಟರಾಗಿದ್ದರು.

## ರಂಗನಟರಾಗಿ ಮಿಂಚಿದವರು

ಈ ಪಟ್ಟಿಯೆಲ್ಲವನ್ನು ಬರೆಯಹೋಗುವುದಂತೂ ದುಸ್ಸಾಧ್ಯವಾದ ವಿಷಯ. ಈ ಏಳು ದಶಕಗಳುದ್ದಕ್ಕೆ ಸುಮಾರು ಐದು ಸಾವಿರಕ್ಕೂ ಮಿಕ್ಕಿ ಬಂದ ತುಳುನಾಟಕಗಳಲ್ಲಿ ಮತ್ತವುಗಳ ಸಹಸ್ರಾರು ವಿಭಿನ್ನ ತಂಡಗಳ ಲಕ್ಷಾಂತರ ಪ್ರದರ್ಶನಗಳಲ್ಲಿ) ಪಾತ್ರವಹಿಸಿದ ಕಲಾವಿದರು ಸಹಸ್ರ ಸಹಸ್ರ ಮಂದಿ. ಹಿರಿಯ ತಲೆಮಾರಿನ ಪ್ರಸಿದ್ಧ ನಾಟಕಕಾರರೆಲ್ಲ ಸ್ವತಃ ಶ್ರೇಷ್ಠ ನಟರೂ, ನಿರ್ದೇಶಕರ ಅನೇಕರು ಪ್ರಸಾದನ ರಂಗಸಜ್ಜಿಕೆ, ಸಂಗೀತದಲ್ಲಿ ಪರಿಣತರೂ ಆಗಿದ್ದರು. ಅವರನ್ನು ಬಿಟ್ಟು ಒಂದಿಷ್ಟು ಮುಂದೆ ಬಂದರೆ ಪ್ರಸಿದ್ಧ ನಟರಾಗಿ ಕಾಣುವ ಹೆಸರುಗಳು – ಎಸ್.ಆರ್. ಅಂಚನ್ ಮುಲ್ಕಿ, ಗಿರಿಧರ ನಾಯಕ್, ದಿ. ರಾಮಚಂದ್ರ ಕೂಳೂರು, ಆನಂದ ಬೋಳಾರ್, ದಿ. ರಾಮಣ್ಣ ರೈ ಪುತ್ತೂರು, ದಿ। ಬಾಲಕೃಷ್ಣ ಕದ್ರಿ, ವಿ.ಜಿ.ಪಾಲ್, ರೋಹಿದಾಸ್ ಕದ್ರಿ, ಅಚ್ಯುತ ಕಲ್ಲಾಪು, ಜೆ. ಸೀತಾರಾಂ ಶೆಟ್ಟಿ, ಜೀವರತ್ನ ಸನಿಲ್, ದಿ. ಮನಮೋಹನ್ ಕದ್ರಿ, ದಿ. ಶಿವಾನಂದ ಸುವರ್ಣ, ರಮಾನಾಥ್ ಆಳ್ವ, ನವೀನ್ ಪಡೀಲ್, ಮಧುಕುಮಾರ್, ಭಾಸ್ಕರ ಶೆಟ್ಟಿ, ಶುಭಕರ ಶೆಟ್ಟಿ, ಮಾಧವ ಜೆಪ್ಪುಪಟ್ಣ, ತಾರಾನಾಥ ನ್ಯಾಕ್ ಜೆಪ್ಪು, ಆನಂದ, ಸತ್ಯಾನಂದ, ದೇವಸ್ಯ ರಾಮಣ್ಣ ಶೆಟ್ಟಿ, ಜಯರಾಂ ಗಟ್ಟಿ, ಚಲಚ್ಚಿತ್ರನಟ ರಾಂದಾಸ್ ದೇವಾಡಿಗ, ಖಾಲೀಖಾನ್, ಸಂಜೀವ ಶೆಟ್ಟಿ, ಎಂ.ಎಸ್. ರಾವ್, ಗಣಪತಿ ಆರ್. ನಾಯಕ್, ಬಿ. ಎನ್. ಆಚಾರ್ ಜಗತ್‌ಪಾಲ್, ಸೀತಾರಾಮ್ ಬಂಗೇರ, ರಾಮದಾಸ್ ದೇವಾಡಿಗ, ಸಂಜೀವ ಶೆಟ್ಟಿ, ಶರತ್ ಹೊಳ್ಳ, ಗಣಪತಿ ಆರ್. ನಾಯಕ್, ಬಿ.ಎನ್. ಆಚಾರ, ದೇವಸ್ಯ ರಾಮಣ್ಣ ಶೆಟ್ಟಿ, ಸೀತಾರಾಮ ಬಂಗೇರ, ಜಗತ್‌ಪಾಲ್, ಶಿವರಾಮ ಪಣಂಬೂರು, ಕೆಲವು ನಾಟಕಗಳ ರಚನಾಕಾರರೂ ಆಗಿರುವ ಡಿ.ಎಸ್. ಬೋಳೂರು, ಲಕ್ಷ್ಮಣಕುಮಾರ ಮಲ್ಲೂರು, ಹರೀಶ್‌ರಾಜ್ ಅತ್ತಾವರ, ಜಿ.ಕೆ. ಪುರುಷೋತ್ತಮ, ನಾಟಕಕಾರ, ನಿರ್ದೇಶಕ ವಿಠಲ ಶೆಟ್ಟಿ ಕನಕಪ್ಪಾಡಿ, ಸುಂದರ ಹೆಗ್ಡೆ, ದಿ. ರವಿಕುಮಾರ್, ಕ್ಯಾಲಿ, ಸದಾಶಿವ ಅಮೀನ್, ಅರವಿಂದ ಬೋಳಾರ್, ಭೋಜರಾಜ್ ವಾಮಂಜೂರು, ಸುಂದರ ರೈ ಮಂದಾರ, ರಾಜೇಶ್, ರಘುರಾಂ ಶೆಟ್ಟಿ ಬೆಳ್ತಂಗಡಿ, ದೀಪಕ್ ರೈ ಪಾಣಾಜೆ, ಶ್ರೀನಿವಾಸ ಕಾರ್ಕಳ, ಉಡುಪಿಯ ಆನಂದ ಗಾಣಿಗ, ರಾಜಗೋಪಾಲ ಶೇಟ್, ಪಿ.ಆರ್. ಕಲ್ಯಾಣಿ, 'ಅಸಲ್ ಏರ್' ಖ್ಯಾತಿಯ ಲಕ್ಷ್ಮಣ್, ಮಾಧವ ಶಕ್ತಿನಗರ, ಗುರುಪ್ರಸಾದ್, ಸಾಯಿಕೃಷ್ಣ, ರಿಚಾರ್ಡ್ ಪಿಂಟೊ, ಮಹೇಶ್, ಜೀವನ್, ರಾಜೇಶ್ ಬಂಟ್ವಾಳ್, ಗುರುಪ್ರಸಾದ್, ಸಾಯಿಕೃಷ್ಣಾ, ರಿಚಾರ್ಡ್ ಪಿಂಟೋ, ಮಹೇಶ್, ಜೀವನ್, ಸುರೇಂದ್ರನಾಥ್ ಪಾಂಡೇಶ್ವರ, ಲಕ್ಷ್ಮಣ್ ಬಿ.ಬಿ. ಏಳಿಂಜೆ, ಕಾರ್ಕಳದ ಗಣೇಶ್ ಶೆಟ್ಟಿ, ದಿ. ಶೇಖರ ಗುಜರನ್, ಪ್ರೇಮಾನಂದ ಕುಕ್ಯಾನ್, ಪ್ರಭಾಕರ ಕಾಸರಗೋಡು, ಇಂದು ಎಸ್. ಮಂಗಳೂರು, ದಿ। ಸುಭಾಶ್ ಪಡಿವಾಳ, ದಿ। ಸದಾಶಿವ ಸಾಲಿಯಾನ್, ಬೆಂಗಳೂರು, ಮುಂಬಯಿ, ಕೊಲ್ಲಿ ರಾಷ್ಟ್ರಗಳ ಅಸಂಖ್ಯ ಕಲಾವಿದರೂ ತುಳುನಾಟಕಗಳಲ್ಲಿ ಅಭಿನಯಿಸಿದ್ದಾರೆ.

## ಸಾವಿರಾರು ರಂಗನಟರ ಪ್ರತಿನಿಧಿಗಳಾಗಿ ಕೆಲವರ ಚಿತ್ರಗಳು


ಬಿ. ನಾರಾಯಣ ರಾವ್


ಹರಿದಾಸ್ ಚೌಟ

ಕೆ.ಜೆ. ಜನಾರ್ದನ್


ಆನಂದ ಶೇಖರ್


ರಾಮಚಂದ್ರ ಕೂಳೂರು

ಸುರೇಶ್ ಮಂಗಳೂರು

ಕೃಷ್ಣಪ್ಪ ಕದ್ರಿ

ಸೀತಾರಾಮ ಬಂಗೇರ

ಬಾಲಕೃಷ್ಣ ಕದ್ರಿ


ಎಂ.ಎಸ್. ರಾವ್

ದೇವಸ್ಯ ರಾಮಣ್ಣ ಶೆಟ್ಟಿ

ಎಸ್. ರಾಮದಾಸ್

ಬಿ.ಎನ್. ಆಚಾರ್

ಎಂ.ಉಮೇಶ್ ಸಾಲಿಯಾನ್
ಕಾಸರಗೋಡು
(ನಿರ್ದೇಶಕರು)

### ಹಾಸ್ಯನಾಟಕಗಳ ಪ್ರಖ್ಯಾತ ಕಲಾವಿದರು

ಅರವಿಂದ ಬೋಳಾರ್

ಭೋಜರಾಜ್
ವಾಮಂಜೂರು

## ಆನಂದ ಬೋಳಾರ್ (1945–2008)



ಹಿರಿಯ ತಲೆಮಾರಿನ ಹೆಸರಾಂತ ಹಾಸ್ಯ ಕಲಾವಿದರಾದ ಆನಂದ ಬೋಳಾರ್ ಮಚ್ಚಂದ್ರನಾಥ್ ಪಾಂಡೇಶ್ವರ 'ಕೌನ್ಸಿಲರ್ ಕೊಗ್ಗಣ್ಣೆ'ಯ ಹಾಸ್ಯಪಾತ್ರದ ಕಾಲದಿಂದ ತೊಡಗಿ ಕಾಪಿಕಾಡ್‌ರ ನಗೆನಾಟಕಗಳು, ಕೊಡಿಯಾಲ್ ಬೈಲ್‌ರ 'ಒರಿಯದೊರಿ ಅಸಲ್' ಉಚ್ಛ್ರಾಯ ಕಾಲದ ವರೆಗೂ ತುಳುರಂಗದ ಹಾಸ್ಯ ಸಾಮ್ರಾಟನಾಗಿ ಮಿಂಚಿ ಸುದೀರ್ಘ ಕಲಾಸೇವೆಯ ಹೆಸರುಳಿಸಿ ತೆರಳಿದವರು. ದೇವದಾಸ್ ಕಾಪಿಕಾಡರ  ಮೊದಲ ನಾಟಕ 'ಯಾನ್ ಮಲ್ಲಾಯೆ' ಇದರ ಎರಡನೆಯ ಪ್ರಯೋಗಕ್ಕೆ 'ಬಲೇ ಚಾಪರ್ಕ' ಎಂದು ಬದಲಿ ಹೆಸರು ಇರಿಸಿದ್ದು ಇದೇ ಆನಂದ ಬೋಳಾರ್.

ತುಳು ನಾಟಕಗಳು ತಂಡಕಟ್ಟಿ ವೃತ್ತಿಪರವಾಗಿ ಮೇಲೇಳುತ್ತಿರುವ ಕಾಲಘಟ್ಟದಲ್ಲೇ ತನ್ನ ಶಾಲಾ ವಿದ್ಯಾರ್ಥಿ ದಿನಗಳಲ್ಲೇ ಸಾರ್ವಜನಿಕ ರಂಗವೇದಿಕೆಯಲ್ಲಿ ಮಿಂಚಲಾರಂಭಿಸಿ ಮಿಂಚಿ ಮರೆಯಲಾದವರು ಆನಂದ್ ಬೋಳಾರ್. ಮಂಗಳೂರು ಹಂಪನಕಟ್ಟೆಯ ಅಭ್ಯಾಸಿ ಶಾಲೆಯಲ್ಲಿ ಹೈಸ್ಕೂಲು ವಿದ್ಯಾರ್ಥಿಯಾಗಿದ್ದಾಗ ನೆಹರೂ ಮೈದಾನದಲ್ಲಿ ನಡೆಯುತ್ತಿದ್ದ ಕಾಂಗ್ರೆಸ್ ವಸ್ತುಪ್ರದರ್ಶನ ವೇದಿಕೆಯ ತುಳುನಾಟಕದ ಪಾತ್ರಕ್ಕೆ ಪ್ರಥಮ ಬಹುಮಾನ, ಚಿನ್ನದ ಪದಕ ವಿಜೇತರು ಮುಂದೆ ಪೂರ್ಣಾವಧಿ ರಂಗಕ್ಕಿಳಿದು ಮಚ್ಚೇಂದ್ರನಾಥ ಪಾಂಡೇಶ್ವರರ ನೂರಾರು ನಾಟಕಗಳ ಮುಖ್ಯ ಹಾಸ್ಯನಟರಾಗಿ ಪ್ರಸಿದ್ಧರಾದರು. ಚಾಪರ್ಕ ತಂಡ ಕಲಾಸಂಗಮ ತಂಡಗಳ ಬಹುಪಾಲು ನಾಟಕಗಳ

'ಒರಿಯದೊರಿ ಅಸಲ್' ನಾಟಕದಲ್ಲಿ
ನವೀನ್ ಡಿ. ಪಡೀಲ್, ಆನಂದ ಬೋಳಾರ್ ಮತ್ತು ಮಾಧವ ಶಕ್ತಿನಗರ

ಸಾವಿರಾರು ಪ್ರದರ್ಶನಗಳಲ್ಲಿ ರಂಗದಲ್ಲಿ ಮೆರೆದರು. ಈಗ ಅವರ ಪ್ರತಿಭಾವಂತ ಮಗ ಸಂದೀಪ್ ಬೋಳಾರ್ ಪತ್ತಿಸ್ ಗ್ಯಾಂಗ್‌ನಂತಹ ಚಲನಚಿತ್ರಗಳ ಮೂಲಕ ಹೆಸರಾಗುತ್ತಿದ್ದಾರೆ. ಸಂದೀಪ್ ಬೋಳಾರ್ ಅವರ ನೇತೃತ್ವದಲ್ಲಿ – ವಿ.ಜಿ. ಪಾಲ್ ಸಾಂಗತ್ಯದಲ್ಲಿ 2018ರಲ್ಲಿ ಮಂಗಳೂರು ಪುರಭವನದಲ್ಲಿ ಆನಂದ ಬೋಳಾರ್ ಸಂಸ್ಮರಣ ಅವಿಸ್ಮರಣೀಯವಾಗಿ ನಡೆಯಿತು.

**ದಿ. ರಾಮಣ್ಣ ರೈ ಪುತ್ತೂರು**



ಪ್ರಸಿದ್ಧ ನಟ ನಾಟಕಕಾರ ಪುತ್ತೂರಿನ ರಾಮಣ್ಣ ರೈ ಹಿರಿಯ ತಲೆಮಾರಿನ ನಾಟಕಕಾರರಲ್ಲೊಬ್ಬರು. 70ರ ದಶಕದ ಅವರ ಮೋಕೆದ ಬೆಲೆ ನಾಟಕದಲ್ಲಿ ವೀರಪ್ಪ ಮೊಯ್ಲಿ–ಅನಿಲ್ ಕುಮಾರ್ ಬರ್ಕೆ ಜೋಡಿಯಾಗಿ ನಟಿಸಿದ್ದರು. ರಾಮಣ್ಣ ರೈ ಯವರು ತುಳು ಚಲನಚಿತ್ರ ರಂಗದಲ್ಲೂ ದುಡಿದವರು. ಕೆ.ಎನ್. ಟೇಲರ್‌ರವರ ಒಡನಾಡಿಯಾಗಿದ್ದವರು.

**ವಿ.ಜಿ. ಪಾಲ್ (1942)**



ಪೂರ್ತಿ ಹೆಸರು ವೇಣುಗೋಪಾಲ ಟಿ. ಕೋಟ್ಯಾನ್. ಪ್ರಥಮ ರಂಗಪ್ರವೇಶ 1961ರಲ್ಲಿ ವಿಶುಕುಮಾರರ 'ಕಲ್ಜಿಗದ ಕುರುಕ್ಷೇತ್ರ' ತುಳುನಾಟಕದ ಮೂಲಕ (ನಿರ್ದೇಶಕರು ಸೋಮಶೇಖರ್ ಪುತ್ರನ್) ಹಾಸ್ಯ ಪಾತ್ರಕ್ಕೊಂದು ಮಾದರಿಯೆನ್ನುವಂತೆ ಮುಂದೆ ಸಾಗುತ್ತಲೇ ಕಳೆದ ಸುಮಾರು 55 ವರ್ಷಗಳ ಸುದೀರ್ಘ ಯಶಸ್ವೀ ರಂಗ ಪಯಣಿಗರು ಸಾಮಾಜಿಕ, ಐತಿಹಾಸಿಕ, ಪೌರಾಣಿಕವೆಂದು ಸುಮಾರು 2000 ಪ್ರದರ್ಶನಗಳಲ್ಲಿ ಅಭಿನಯದ ಮಿಂಚಿನ ಸಂಚಾರ. ಕೆ.ಎನ್. ಟೇಲರ್, ರತ್ನಾಕರ ಕಾವೂರು, ಕುಲಾಲ್, ಪಾಂಡೇಶ್ವರ್, ಕಿರೋಡಿಯನ್, ಭಂಡಾರಿಯವರ ಆಕಾಲದ ನಾಟಕಗಳಿಂದ ತೊಡಗಿ ಇಂದಿನ ಕಾಪಿಕಾಡ್, ಕೊಡಿಯಾಲ್‌ಬೈಲ್ ಮುಂತಾದವರ ನಾಟಕಗಳಲ್ಲಿಯೂ ತಲೆಮಾರುಗಳ ಕೊಂಡಿಯಾಗಿ ಹಾಸ್ಯದ ವಿಭಿನ್ನ ಧಾಟಿ, ಭಾಷೆ, ಸ್ವರೂಪ ಮಾತ್ರವಲ್ಲದೆ ಸಂದರ್ಭ ಬಂದರೆ ಗಂಭೀರ ಪಾತ್ರ, ನಿರ್ದೇಶನ, ಸಂಘಟನೆ ಹೀಗೆ ವಿವಿಧ ಆಯಾಮಗಳ ಅಭಿವ್ಯಕ್ತಿಗೆ ಹೆಸರಾದವರು. ತಾಯ್ನಾಡು, ಹೊರನಾಡು ಅಲ್ಲದೆ ಕೊಲ್ಲಿರಾಷ್ಟ್ರಗಳಿಗೂ ಮೊತ್ತಮೊದಲು ತುಳುನಾಟಕಗಳನ್ನು ಕರೆದೊಯ್ದು ಅಭಿನಯಿಸಿದವರು.

ಮುಂದೆ ಸುಮಾರು 50 ಧ್ವನಿ ಸುರುಳಿಗಳಿಗೆ ಕಂಠದಾನ ಮಾಡಿ, ಅಚ್ಯುತ

ಕಲ್ಲಾಪು ಅವರ 'ಪೂಪನ್ನೀರ್' ತುಳು ವೀಡಿಯೋ ಚಿತ್ರ, 'ಸಂಕಲ್ಪ' ಕಿರುತೆರೆ ಚಿತ್ರ, ಅಲ್ಲದೆ ಹಲವು ಕನ್ನಡದ ಕಿರುತೆರೆ ಚಿತ್ರಗಳ ಸಹಾಯಕ ನಿರ್ವಾಹಕರಾಗಿ, ದಂಡೆಕೇರಿಯವರ, ಬಯ್ಯಮಲ್ಲಿಗೆ (1974), ಟೇಲರರ ಭಾಗ್ಯವಂತೆದಿ (1981) 'ಸತ್ಯ ಓಲುಂಡು' (1991) ಅಲ್ಲದೆ ರಿಚಾರ್ಡ್‌ರ ಬಂಗಾರ್ ಪಟ್ಲೆರ್, ಉಪ್ಪೂರರ ಮಾರಿಬಲೆ, ತುಡರ್ ಮುಂತಾದ ತುಳುಚಿತ್ರಗಳಲ್ಲಿ ನಟಿಸಿ, ಸಹಸ್ರಾರು ಅಭಿಮಾನಿಗಳನ್ನು ಹೊಂದಿದವರು. 'ಏರೆನ್ಲಾ ನಂಬೊಡ್ಚಿ'ಯ 'ಕೊಂಕ್ಣಿ ಮಾಮ್', 'ಗಂಟೇತಾಂಡ್'ನ ಜೊಪ್ಪಿ ಪೊರ್ಬುಲು' – ಮುಂತಾದ ಇವರ ಪಾತ್ರಗಳನ್ನು ಕಂಡವರು ಎಂದೂ ಮರೆಯಲಾರರು.

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಸದಸ್ಯತ್ವ (2001–2004) ಕರ್ನಾಟಕ ನಾಟಕ ಅಕಾಡೆಮಿ ಸದಸ್ಯತ್ವ (2005–2008) ಮುಂತಾದೆಡೆ ಕ್ರಿಯಾಶೀಲರಾಗಿ ತುಳು ಕಲಾವಿದರ, ಕಲಾಬಳಗಗಳಿಗಾಗಿ ವಿಧಾಯಕ ಕಾರ್ಯಕ್ರಮ ನಡೆಸಿದವರು. ರಂಗಭೂಮಿ, ಸಿನಿಮಾ ಕ್ಷೇತ್ರಗಳ ವಿಶ್ವಕೋಶ ಎನಿಸಿದವರು. 2004ರಲ್ಲಿ ತುಳು ನಾಟಕ ಕಲಾವಿದರ ಒಕ್ಕೂಟ ಮಂಗಳೂರಲ್ಲಿ ಸ್ಥಾಪನೆಯಾಗುವ ಹಿನ್ನೆಲೆಯಲ್ಲೂ ಸೂತ್ರಧಾರರಾಗಿದ್ದ 'ಪಾಲ್' ಉದ್ಯೋಗದಿಂದ ನಿವೃತ್ತರಾದ ಮೇಲೆ ಮಂಗಳೂರಲ್ಲಿ 2000ನೇ ಇಸವಿಯಲ್ಲಿ 'ರಂಗಸ್ಪಂದನ' ಎನ್ನುವ ಸಂಸ್ಥೆಯನ್ನು ಹುಟ್ಟುಹಾಕಿ ಅದರ ಮೂಲಕ ನಿರಂತರ 'ರಂಗಚಟುವಟಿಕೆ' ನಡೆಸಿದರು. ಇಂತಹ ನಟ, ನಿರ್ದೇಶಕ, ಸಂಘಟಕ, ನಗೆಯ ಮಾತಿನ ಮಲ್ಲ ರಂಗ ಸವ್ಯಸಾಚಿಗೆ 2016ರಲ್ಲಿ ಅಭಿನಂದನೆ, ಸಮಾರಂಭ, 'ಪಾಲ್ ಕಡಲ್' (ಸಂಪಾದಕರು : ಎಂ.ಎಂ.) ಎನ್ನುವ ಅಭಿನಂದನ ಗ್ರಂಥ ಸಮರ್ಪಣೆಗೊಂಡಿದೆ. ಕರ್ನಾಟಕ ನಾಟಕ ಅಕಾಡೆಮಿಯ ಗೌರವ ಸೇರಿದಂತೆ

ದಿನೇಶ್ ಕಂಕನಾಡಿಯವರ 'ಕುಸೆಲ್ದ ಪರಬೆ' ನಾಟಕದಲ್ಲಿ ಮಾಧವ ಶಕ್ತಿನಗರ, ವಿ.ಜಿ. ಪಾಲ್, ಸುಧೀರ್‌ರಾಜ್ ಉರ್ವ (ಚಿತ್ರಕೃಪೆ : ಪಾಲ್ ಕಡಲ್)

ಇವರ ರಂಗಕಲಾಸಾಧನೆಗೆ ಅಸಂಖ್ಯ ಪುರಸ್ಕಾರ ಸಂದಿವೆ. ನಾಟಕ ಅಕಾಡೆಮಿ ಸದಸ್ಯರಾಗಿದ್ದ ವೇಳೆ – ಮಂಗಳೂರಿನ ಮಹಿಳಾ ತಂಡವನ್ನು ಮೈಸೂರು ದಸರಾಗೆ ಕೊಂಡೊಯ್ದು ದಸರಾವೇದಿಕೆಯಲ್ಲಿ 'ರಾಣಿ ಅಬ್ಬಕ್ಕ' ನಾಟಕ ನಿರ್ದೇಶನ ಪ್ರದರ್ಶನ ವ್ಯವಸ್ಥೆಗೊಳಿಸಿದ ಶ್ರೇಷ್ಠ ಸಂಘಟಕರು.

**ಲಕ್ಷ್ಮಣ ಕುಮಾರ ಮಲ್ಲೂರು (1952)**



ಹಿರಿಯ ರಂಗನಟ ಹಾಗೂ ಚಲನಚಿತ್ರ ಕಲಾವಿದ ಲಕ್ಷ್ಮಣ ಕುಮಾರ್ ಮಲ್ಲೂರು 90ರ ದಶಕದಲ್ಲಿ 'ಪೂಜೆಗಾವಂದಿ ಪೂ', 'ತಲವಾರ್ ಸುಬ್ಬಣ್ಣೆ', ಬಹುಪ್ರದರ್ಶಿತ 'ಶಾರದಾ' ಮುಂತಾದ ಹಲವಾರು ನಾಟಕಗಳನ್ನು ರಚಿಸಿ, ನಟನೆ ಮತ್ತು ಸ್ವತಃ ನಿರ್ದೇಶನವನ್ನೂ ಮಾಡಿದವರು.

ಪಾರಂಪರಿಕ ತುಳು, ಕನ್ನಡ ನಾಟಕಗಳಲ್ಲಿ ಅಭಿನಯಿಸಿ ಸ್ವತಃ ನಾಟಕ ರಚಿಸಿ, ನಿರ್ದೇಶಿಸಿ ಗಾಯಕನೂ ಆಗಿ ಅನುಭವ ಗಳಿಸಿ, ಎಂಭತ್ತರ ದಶಕದಲ್ಲಿ ನೂತನ ಆವಿಷ್ಕಾರಗಳೊಂದಿಗೆ ಆಧುನಿಕ ರಂಗಭೂಮಿಯಲ್ಲಿ ತುಳು ಹೆಸರು ಮಾಡಹೊರಟ ಕಾಲದ 'ಚಕ್ರವ್ಯೂಹ' ಪ್ರವೇಶಿಸಿ ಗೆದ್ದು ನಿರಂತರ ಬೇಡಿಕೆಯ ನಟನಾಗಿ ಬಹು ಎತ್ತರಕ್ಕೆ ಏರಿ ಬೀಸುದಾರಿಯಲ್ಲಿ ಸಾಗುತ್ತಿರುವ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ (2005) ವಿಜೇತರ ಹಿರಿಯ ಕಲಾವಿದರು ಲಕ್ಷ್ಮಣ ಕುಮಾರ ಮಲ್ಲೂರು.

ಮಂಗಳೂರು ತಾಲೂಕು ಮಲ್ಲೂರು ದಿ. ಐತಪ್ಪ ಕೊಟ್ಟಾರಿ–ಗುಲಾಬಿ ದಂಪತಿಗಳ ಎರಡನೆಯ ಮಗ ಲಕ್ಷ್ಮಣ ಕುಮಾರ್ 1962ರಲ್ಲಿ ತನ್ನ 10ನೆಯ ವಯಸ್ಸಿನಲ್ಲೇ ನಾಟಕರಂಗಕ್ಕೆ ಹೆಜ್ಜೆಯಿರಿಸಿದರು. ಹಲವು ನಾಟಕ ಸಂಘಟನೆಗಳಲ್ಲಿ ದುಡಿದರು. ಮಂಗಳೂರಿನ ಪ್ರತಿಷ್ಠಿತ ಹವ್ಯಾಸಿ ನಾಟಕ ಸಂಸ್ಥೆ ಭೂಮಿಕಾದ ಕಾರ್ಯದರ್ಶಿಯಾಗಿ ಹಲವು ವರ್ಷ ತುಳು, ಕನ್ನಡ ನಾಟಕಗಳನ್ನು ರಂಗಭೂಮಿಗೆ ಸಮರ್ಪಿಸಿದರು.

ದಿ। ಮಚ್ಚೇಂದ್ರನಾಥ ಪಾಂಡೇಶ್ವರರ ಹೆಚ್ಚಿನ ಹಾಸ್ಯನಾಟಕಗಳಲ್ಲಿ ಅಜ್ಜಿ, ಅಜ್ಜೆರ್, ಹಾಸ್ಯ ನಾಯಕನ ಪಾತ್ರ ನಿರ್ವಹಿಸಿದರು. 1980ರಲ್ಲಿ ಭೂಮಿಕಾದ 'ಚಕ್ರವ್ಯೂಹ' ತುಳು ನಾಟಕದಲ್ಲಿ 'ಶಂಕರರಾಯ'ರ ಪಾತ್ರದ ಯಶಸ್ಸಿನ ಬಳಿಕ 'ತುಳುರಂಗಭೂಮಿ ಮಲ್ಲೂರ್ ಎಂದೇ ನಾಮಾಂಕಿತರಾದರು. ವಿಜಯಕುಮಾರ್ ಕೊಡಿಯಾಲ್‌ಬೈಲ್‌ರ ಚೊಚ್ಚಲ ನಾಟಕ 'ಒರಿಯೆ ಮಗೆ' ಇದನ್ನು ತಿದ್ದಿತೀಡಿ ನಿರ್ದೇಶಿಸಿದರು. 'ಒಂಜಿ ನಿಮಿಷ'ದ 'ಅಜ್ಜೆರ್', 'ಮಿಲಿಟ್ರಿ ಕೇಶವ' ಪಾತ್ರಗಳಲ್ಲಿ 'ಬ್ರಾಂಡ್' ಆದರು.

ಮಂಗಳೂರಿನಲ್ಲಿ ಸದಾನಂದ ಸುವರ್ಣ ಸಾಂಸ್ಕೃತಿಕ ಪ್ರತಿಷ್ಠಾನದ 'ಉರುಳು', ಕೋರ್ಟ್ ಮಾರ್ಷಲ್', 'ಕಲಂಕ್‌ದಿ ನೀರ್', ಮಳೆ ನಿಲ್ಲುವವರೆಗೆ' ಇಂತಹ ಕನ್ನಡ,

ತುಳು ನಾಟಕಗಳಲ್ಲಿ ಪ್ರಧಾನ ಪಾತ್ರ ನಿರ್ವಹಿಸಿದರು.

ಮಂಗಳೂರು ಆಕಾಶವಾಣಿಯ 'ಬಿ-ಹೈ' ಶ್ರೇಣಿಯ ನಾಟಕ ಕಲಾವಿದರಾಗಿದ್ದು ಸುಮಾರು 100ಕ್ಕಿಂತಲೂ ಅಧಿಕ ಬಾನುಲಿ ನಾಟಕಗಳಲ್ಲಿ ಪಾತ್ರ ಮಾಡಿದ್ದಾರೆ. ರಂಗಭೂಮಿಯಲ್ಲಿ ಸುಮಾರು 200ಕ್ಕೆ ಮೇಲ್ಪಟ್ಟು ನಾಟಕಗಳಲ್ಲಿ ಅಭಿನಯಿಸಿದ ಮಲ್ಲೂರು ಹಲವಾರು ನಾಟಕ ಬರೆದು, ಅವಕ್ಕೆ ನಿರ್ದೇಶನ ಮಾಡಿದ್ದರು. ಮಾತ್ರವಲ್ಲದೆ ಧಾರಾವಾಹಿ, ಕಿರುಚಿತ್ರ, ತುಳು ಚಲನಚಿತ್ರ ರಂಗದಲ್ಲೂ ಹೆಸರಾಂತರು.

ನಾಗಶಾಪ, ರೈಲ್ ಬಾಬು, ಬಣ್ಣ, ಬರವುದ ಬಂಡಸಾಲೆ, ನಾದಮೃದಂಗ ಒಂದು ಗೋಡೆಯ ತುಂಡು ಮುಂತಾದ ಕಿರುಚಿತ್ರಗಳು, ಪೆಟ್ಟಾಯಿ ಪಿಲಿ, ಬಂಗಾರ್ ಪಟ್ಲೆರ್, ಚಾಲಿಪೋಲಿಲುನಿಂದ ಹಿಡಿದು ಇತ್ತೀಚಿನ ಅಮ್ಮೆರ್ ಪೋಲಿಸಾ, ಮೈ ನೇಮ್ ಈಸ್ ಅಣ್ಣಪ್ಪ'ದ ವರೆಗೆ ಹಲವು ತುಳು ಚಿತ್ರಗಳಲ್ಲಿ ಮಲ್ಲೂರರದು ಅಮೋಘ ಅಭಿನಯ.

'ಚಾಲಿಪೋಲಿಲು' ಶತದಿನೋತ್ಸವ ಸಂದರ್ಭದಲ್ಲಿ ಪಡೆದ ರಂಗಭೂಷಣ ಪ್ರಶಸ್ತಿಯಂತಹ ಹಲವು ಬಿರುದು ಪ್ರಶಸ್ತಿಗಳು ಇವರ ಪಾಲಿಗೊದಗಿವೆ.

1980ರಿಂದ ದ.ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಉದ್ಯೋಗಿಯಾಗಿ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಯೊಂದಿಗೆ ನಿವೃತ್ತರಾಗಿ ಸಂಪೂರ್ಣವಾಗಿ ರಂಗಭೂಮಿ, ಚಲನಚಿತ್ರ ಕಲಾಕ್ಷೇತ್ರದಲ್ಲಿ ತೊಡಗಿಕೊಂಡಿದ್ದಾರೆ.

**ರೋಹಿದಾಸ್ ಕದ್ರಿ (1943)**



ಕದ್ರಿಯ ರೋಹಿದಾಸ್ ಬಾಲ್ಯದಿಂದಲೇ ನಾಟಕಾಸಕ್ತರಾಗಿದ್ದು ಎಪ್ಪತ್ತರ ದಶಕದಿಂದ ತುಳುನಾಟಕಗಳ ಸಾವಿರಾರು ಪ್ರದರ್ಶನಗಳಲ್ಲಿ ಅಭಿನಯಿಸಿ ಮಂಗಳೂರಿನ ಮನೆ ಮಾತಾದವರು. ಜಿಲ್ಲಾ ಮಟ್ಟದಲ್ಲಿ ಶ್ರೇಷ್ಠ ನಟ ಪ್ರಶಸ್ತಿ ಪಡೆದ ಇವರು ಸ್ವರಭಾರಗಳನ್ನು ಹೊಂದಿದ ಇವರ ಟಿಪ್ಪು ಸುಲ್ತಾನ, ಕಲ್ಯಾಣಸ್ವಾಮಿ, ಬೇಡರ ಕಣ್ಣಪ್ಪ, ಚಾಣಕ್ಯ, ರಾವಣ, ಮಹಿಷಾಸುರ, ಬೈರವರಸ, ಶಾಮರಾಯ ಮುಂತಾದ ಪಾತ್ರಗಳು ಪ್ರೇಕ್ಷಕರ ಮನದಲ್ಲಿ ಬಹುಕಾಲ ನೆನಪಿನವು. ಆಕಾಶವಾಣಿ ನಾಟಕಧ್ವನಿ ಕಲಾವಿದರಾಗಿಯೂ ಹೆಸರಾದ ರೋಹಿದಾಸ್ ಕದ್ರಿ ಚೋಮನದುಡಿ, ಬಂಗಾರ್ ಪಟ್ಲೆರ್ ಸೇರಿದಂತೆ ಹಲವಾರು ಚಲನಚಿತ್ರಗಳಲ್ಲೂ ನಟಿಸಿದವರು.

**ಅಭಿನಯಿಸಿದ ತುಳು ಪೌರಾಣಿಕ ನಾಟಕಗಳು :** ಭೂಕೈಲಾಸ, ಮಹಾರಥಿ ಕರ್ಣ, ಬಬ್ರುವಾಹನ, ತುಳಸಿ ಜಲಂಧರ ಗದಾಯುದ್ಧ, ಮಹಿಶಾಸುರ ಮರ್ದಿನಿ, ಮಹಾವೀರ ರಾವಣೆ, ಸತ್ಯನಾರಾಯಣ ಮಹಾತ್ಮೆ, ಭಕ್ತ ಪ್ರಹ್ಲಾದೆ, ಸ್ವಾಮಿ ಅಯ್ಯಪ್ಪ, ದುಶ್ಯಂತ-

ಶಕುಂತಲೆ, ಭೀಷ್ಮ, ಬೇಡೆರೆಕಣ್ಣಪ್ಪೆ, ಶಿವ ಪಂಚಾಕ್ಷರಿ ಮಹಿಮೆ, ಮಹಿಮೆದ ಜೋಗಿಲು, ಕಾರ್ತಿವ್ಯ ಅರ್ಜುನ, ಕುಕ್ಕೆದ ಸುಬ್ರಾಯೆ, ಕಟೀಲ್ದಪ್ಪೆ ಉಳ್ಳಾಲ್ದಿ, ಬಲೀಂದ್ರೆ, ಬ್ರಹ್ಮಕಪಾಲ, ಕಾರ್ನಿಕದ ಶಿವಮಂತ್ರ ಇತ್ಯಾದಿ ಅಭಿನಯಿಸಿದ ತುಳು ಐತಿಹಾಸಿಕ ನಾಟಕಗಳು.

ರಾಣಾ ಪ್ರತಾಪ, ಬೆಳವಡಿ ಮಲ್ಲಮ್ಮ, ಟಿಪ್ಪು ಸುಲ್ತಾನ್, ರಾಣಿ ಅಬ್ಬಕ್ಕ, ಬಿರ್ದ್‌ದ ಬೈರವೆರ್, ತಿರುಮಲಾದೇವಿ, ಕಲ್ಯಾಣಪ್ಪನ ಕಾಟ್‌ಕಾಯಿ, ವಿಟ್ಲದ ವೀರವರ್ಮೆ, ನಂದಾವರದ ನಂದಾದೀಪ, ಯಕ್ಷಮಣಿ ಕಲ್ಲುರ್ಟಿ–ಕಲ್ಕುಡೆ, ಧನೇಶ್ವರೆ, ತುಳುನಾಡ ಸಿರಿ ಗಗ್ಗರ, ಬೈಲಪ್ಪೆ, ಸಮ್ರಾಟ್ ಸಂಕಣ್ಣೆ, ಮುಂತಾದವು.

**ತುಳು ಜಾನಪದ ನಾಟಕಗಳು :** ಕೋಟಿ ಚೆನ್ನಯ, ಕಾಂತಾಬಾರೆ, ಬೂದಬಾರೆ, ದೇವು ಪೂಂಜೆ, ಕೋರ್ದಬ್ಬು ತನ್ನಿಮಾನಿಗ, ಮಂಗಳೂರು ಆಕಾಶವಾಣಿಯ ನಾಟಕ ಕಲಾವಿದರಾಗಿ ಹತ್ತಾರು ನಾಟಕಗಳಿಗೆ ಧ್ವನಿ ನೀಡಿದಾರೆ. ಜಿಲ್ಲಾ ಮಟ್ಟದ ಹಲವು ನಾಟಕ ಸ್ಪರ್ಧೆಗಳಲ್ಲಿ ಅತ್ಯುತ್ತಮ ನಟ ಪ್ರಶಸ್ತಿ ಪಡೆದವರು. ಬೇಲಗದ್ದೆ ಅಪ್ಪಯ್ಯ, ಕೆ. ಬಾಲಕೃಷ್ಣ ರಾವ್, ಕಿರೋಡಿಯನ್ ಪಾಂಡೇಶ್ವರ್‌ರಿಂದ ಹಿಡಿದು ನವನೀತ ಶೆಟ್ಟರವರೆಗಿನ, ನೂರಾರು ನಾಟಕಕಾರರ ತಂಡ ನಾಟಕಗಳಲ್ಲಿ ಅಭಿನಯಿಸಿ ಹೆಸರಾಗಿದ್ದಾರೆ. ಚಲನಚಿತ್ರ ಕ್ಷೇತ್ರದಲ್ಲಿ 'ಚೋಮನ ದುಡಿ', 'ಬಂಗಾರ್ ಪಟ್ಲೆರ್', ವಿದೇಯನ್ (ಮಲಯಾಳಂ) ಮುಂತಾದ ರಾಷ್ಟ್ರಪ್ರಶಸ್ತಿ ವಿಜೇತ ಚಿತ್ರಗಳಲ್ಲೂ, ಸರ್ಪಸಂಕಲೆ, ತುಳುನಾಡ ಸಿರಿ, ಬದಿ, ಬಯ್ಯಮಲ್ಲಿಗೆ ಮುಂತಾದ ತುಳು ಮತ್ತು 'ಕಾಝೂರ್', ಕೊಂಕಣಿ ಚಿತ್ರಗಳಲ್ಲೂ ಅಭಿನಯಿಸಿದ್ದಾರೆ.

ರೋಹಿದಾಸರೆನ್ನುವಂತೆ ಐವತ್ತು ಅರುವತ್ತು ದಶಕಗಳಲ್ಲಿ ಗಣಪತಿ ಶಾಲೆಯ ಶಾರದಾ ಮಂದಿರದಲ್ಲಿ ತುಳು ನಾಟಕಗಳ ರಂಗತಾಲೀಮು ನಡೆಯುತ್ತಿತ್ತು. ಆ ಬಳಿಕ ಮಂಗಳೂರಿನಲ್ಲಿ ಈಗಿನ ಪೂಂಜ ಕಟ್ಟಡ ಇರುವಲ್ಲಿ ರಂಗ ಪೈ ಎನ್ನುವವರ ವಿಶಾಲವಾದ ಬಂಗಲೆಯಿತ್ತು. ಅದರ ಮಹಡಿಯಲ್ಲಿ ಬಹುಪಾಲು ನಾಟಕಗಳ ರಿಹರ್ಸಲ್, ವೇಷಧಾರಣೆ ನಡೆಯುತ್ತಿತ್ತು. ತುಳು ಚಲನಚಿತ್ರಗಳು ಆರಂಭವಾದಾಗ ಹಲವು ರೀತಿಯ ಸೆಟ್ಟಿಂಗ್‌ಗಳನ್ನು ಈ ಕಟ್ಟಡದಲ್ಲಿಯೇ ಅಳವಡಿಸಿ ಶೂಟಿಂಗ್ ನಡೆಯುತ್ತಿತ್ತು. ಅನೇಕ ದಿನಗಳವರೆಗೆ ಕಲಾವಿದರೆಲ್ಲರೂ ಒಂದು ಕುಟುಂಬದಂತೆ ಇಲ್ಲಿ ವಾಸಿಸುವುದಿತ್ತು. ಕೋಮಲ್ಸ್‌ನ ಮಹಡಿಯಲ್ಲಿ ನಾರಾಯಣ ಶೆಣೈ ಅವರ ಸಂಗೀತ ಶಾಲೆ, ಕೋಕಿಲ ಆರ್ಟ್ಸ್ ಮುಂತಾದ ರಂಗಸಂಗೀತದ ದೊಡ್ಡ ಬಳಗವಿತ್ತು.

ಕರ್ನಾಟಕ ತುಳುಸಾಹಿತ್ಯ ಅಕಾಡೆಮಿಯ 2012ನೇ ಸಾಲಿನ ಗೌರವ ಪ್ರಶಸ್ತಿ ಜಿಲ್ಲಾ ರಾಜ್ಯೋತ್ಸವ (2006) ಪ್ರಶಸ್ತಿಯಂತಹ ಪ್ರಶಸ್ತಿಗಳನ್ನು ಅರ್ಹವಾಗಿಯೇ ಪಡೆದ ಈ ಹಿರಿಯ ಶ್ರೇಷ್ಠ ನಟ ಸದ್ಯ ನಾಟಕ ಕಲಾವಿದರ ಒಕ್ಕೂಟದ ಗೌರವಾಧ್ಯಕ್ಷರಾಗಿರುವರು.

**ರಾಮದಾಸ್ ದೇವಾಡಿಗ**

ತುಳುರಂಗಭೂಮಿ ಮತ್ತು ಚಲನಚಿತ್ರರಂಗದ ಹಿರಿಯ ಹೆಸರಾಂತ ನಟ ರಾಮಚಂದ್ರ ದೇವಾಡಿಗರ ದಶಕಗಳ ಹಿಂದಿನ ಕೆಲವು ಪಾತ್ರಗಳ ಪರಕಾಯ ಪ್ರವೇಶ ಎಂದೂ ಅಚ್ಚಳಿಯದ ನೆನಪು. ಎಪ್ಪತ್ತರ ದಶಕದಲ್ಲಿ ಮಂಗಳೂರು ತುಳುಕೂಟ ಮತ್ತು ನವಭಾರತ ಸಂಸ್ಥೆಗಳು ಜಂಟಿಯಾಗಿ ನಾಟಕ ಸ್ಪರ್ಧೆ ನಡೆಸುತ್ತಿದ್ದವು. ಅಬ್ಬಕ್ಕರಾಣಿಯ ಕಥಾವಸ್ತುವಿನ ವಿವಿಧ ನಾಟಕಕಾರರ 'ಅಬ್ಬಕ್ಕ' ನಾಟಕ ಸ್ಪರ್ಧೆ. ಇದರಲ್ಲಿ 'ಅತ್ಯುತ್ತಮ ನಟ' ಎನ್ನುವ ಒಂದೇ ಪ್ರಶಸ್ತಿ. ಇಂತಹ 'ಅತ್ಯುತ್ತಮ ನಟ' ಪ್ರಶಸ್ತಿ ಪಡೆದವರು ತನ್ನ 'ಮುಂಡ ಗುರಿಕಾರ (ಮೊಗವೀರ ಸಮಾಜ ಗುರಿಕಾರ) ಪಾತ್ರದ ರಾಮಚಂದ್ರ ದೇವಾಡಿಗರು. ಮುಂದೆಯೂ ಕೆ.ಬಿ. ಭಂಡಾರಿ, ಕಿರೋಡಿಯನ್, ರತ್ನಾಕರ ಕಾವೂರ್ ಮುಂತಾದವರ ನಾಟಕಗಳಲ್ಲೂ ದೇವಾಡಿಗರು ಇಂಥದೇ ಪಾತ್ರಕ್ಕೆ ಬ್ರಾಂಡ್ ಆದರು. ಡಾ. ರಿಚಾರ್ಡ್‌ರ 'ಬಂಗಾರ್ ಪಟ್ಲೆರ್' ತುಳು ಚಿತ್ರದ ಅವರ ಪಾತ್ರವೂ ಅವಿಸ್ಮರಣೀಯ. (ಚಿತ್ರವು ತುಳುವಿಗೆ ಮೊದಲ ರಾಷ್ಟ್ರಪ್ರಶಸ್ತಿ ತಂದುಕೊಟ್ಟಿತು.)

ಸರಕಾರಿ ಹಿ.ಪ್ರಾ. ಶಾಲೆ ಬೊಕ್ಕಪಟ್ಟಣದ ಹಳೆವಿದ್ಯಾರ್ಥಿ ಸಂಘದಿಂದ ಕೆ. ನಾರಾಯಣ ಶೆಟ್ಟಿ ಅವರ 'ಸತ್ಯ ಬತ್ತಲೆ' ಪ್ರದರ್ಶನದಲ್ಲಿ ರಾಮದಾಸ್ ದೇವಾಡಿಗ, ಜೆ. ರವೀಂದ್ರ ಮತ್ತು ವಿ.ಜೆ. ಪಾಲ್ (ಚಿತ್ರಕೃಪೆ : ಪಾಲ್ ಕಡಲ್)

**ರಾಘವ ಎಸ್. ಉಚ್ಚಿಲ್ (1944–2016)**

ರಾಘವ ಎಸ್. ಉಚ್ಚಿಲ್‌ರು ಉಚ್ಚಿಲದಲ್ಲಿ ಶಿಕ್ಷಣ ಪಡೆದು ಐ.ಟಿ.ಐ. ಉತ್ತೀರ್ಣರಾಗಿ ಮುಂಬೈಯಲ್ಲಿ ಕೆಲಕಾಲ ಉದ್ಯೋಗ ಮಾಡಿ, ಊರಿಗೆ ಹಿಂತಿರುಗಿ ಸಿ.ಎಲ್. ಕಂಟ್ರಾಕ್ಟರಾಗಿ ವೃತ್ತಿ ನಿರತರಾದವರು. ಶಾಲಾ ಜೀವನದಿಂದಲೇ ರಂಗಭೂಮಿಯತ್ತ ಒಲಿದು, ಕೆ.ಬಿ.

ಭಂಡಾರಿಯವರ ನಾಟಕದಲ್ಲಿ ಪ್ರಥಮವಾಗಿ ಪಾತ್ರ ನಿರ್ವಹಿಸ ತೊಡಗಿ ಅವರನ್ನೇ ಗುರುವಾಗಿ ಸ್ವೀಕರಿಸಿದರು. ಮುಂದೆ ಯು. ಮಚ್ಚೇಂದ್ರನಾಥ್, ಜೀವರತ್ನ ಚನಿಲೊ, ಜೆ. ರವೀಂದ್ರ, ಬಿ.ವಿ. ಕಿರೋಡಿಯನ್, ಮಚ್ಚೇಂದ್ರನಾಥ ಪಾಂಡೇಶ್ವರ, ಯು.ಆರ್. ಚಂದರ್, ಡಾ. ಸಂಜೀವ ದಂಡೆಕೇರಿ ಮೊದಲಾದ ಘಟಾನುಘಟಿಗಳ ನಾಟಕಗಳಲ್ಲಿ ಪ್ರಧಾನ ಪಾತ್ರ ನಿರ್ವಹಿಸಿ ಹೆಸರಾದರು. ಸಾಮಾಜಿಕ, ಚಾರಿತ್ರಿಕ, ಜಾನಪದ, ಪೌರಾಣಿಕ ನಾಟಕಗಳಲ್ಲಿ ನಾಯಕ, ಖಳನಾಯಕ, ಪೋಷಕ ನಟ ಹೀಗೆ ವಿಭಿನ್ನ ನಿರ್ವಹಣೆಯಲ್ಲಿ ಮಿಂಚಿದ ಶ್ರೇಷ್ಠ ನಟರಾಗಿದ್ದರು. ಅನೇಕ ಸಂಘ ಸಂಸ್ಥೆಗಳಿಗಾಗಿ ಪ್ರಸಿದ್ಧ ನಾಟಕಕಾರರ ನಾಟಕಗಳನ್ನು ನಿರ್ದೇಶಿಸಿ ಹಲವು ಹೊಸ ಕಲಾವಿದರನ್ನು ಸೃಷ್ಟಿಸಿದ್ದರು.

**ಮಾಧವ ಕೆ. ಶಕ್ತಿನಗರ**

ತುಳುನಾಟಕ ರಂಗದ ಪ್ರಸಿದ್ಧ ಹಾಸ್ಯನಟರಲ್ಲೊಬ್ಬರಾದ ಮಾಧವ ಕೆ. ಶಕ್ತಿನಗರ ತನ್ನ ಕಾಲದ 'ಹಾಸ್ಯ ಚಕ್ರವರ್ತಿ'ಯೆನಿಸಿದವರು. ಶಕ್ತಿನಗರದಲ್ಲಿ ಜನಿಸಿ, ತನ್ನ 16ನೆಯ ವಯಸ್ಸಿನಲ್ಲಿ ಗೆಳೆಯರನ್ನು ಸೇರಿಸಿಕೊಂಡು 'ಪದವು ಫ್ರೆಂಡ್ಸ್ ಕ್ಲಬ್' ಸ್ಥಾಪಿಸಿ, ವಾರ್ಷಿಕೋತ್ಸವ ಸಂದರ್ಭಗಳಲ್ಲಿ ಹಾಸ್ಯಪಾತ್ರಾಭಿನಯ ಆರಂಭಿಸಿ ಜನಪ್ರಿಯತೆ ಗಳಿಸಿಕೊಂಡರು. ಮಂಗಳೂರಿನ ಬಹುಪಾಲು ನಾಟಕ ತಂಡಗಳಿಂದ ಹಾಸ್ಯ ಪಾತ್ರ ಮಾಡಲು ಬೇಡಿಕೆ ಗಳಿಸಿದರು. ಮಚ್ಚೇಂದ್ರನಾಥ ಪಾಂಡೇಶ್ವರರ ಅನೇಕ ನಾಟಕಗಳಲ್ಲಿ ನಟಿಸಿ ಸಮರ್ಥ ನಟನೆನಿಸಿದರು.

ಪಾಂಡೇಶ್ವರರ 'ತೆಲ್ಪರೆಕಲ್ಪಿ', ಕೌನ್ಸಿಲರ್ ಕೊಗ್ಗಣ್ಣೆ' ನಾಟಕಗಳ ಶಾಲಾಹುಡುಗನ ಪಾತ್ರ ಅಪಾರ ಪ್ರೇಕ್ಷಕರ ಮೆಚ್ಚುಗೆ ತಂದಿತ್ತು. ದೇವದಾಸ್ ಕಾಪಿಕಾಡ್‌ರನ್ನು ನಾಟಕರಂಗಕ್ಕೆ ಬರಮಾಡಿಸಿದ ಕೀರ್ತಿ ಮಾಧವ ಶಕ್ತಿನಗರರಿಗೆ ಸಂದಿವೆ. 1985ರಲ್ಲಿ ಪದವು ಫ್ರೆಂಡ್ಸ್ ಕ್ಲಬ್'ನ ವಾರ್ಷಿಕೋತ್ಸವಕ್ಕೆ ನಾಟಕ ಬರೆದುಕೊಡಲು ತನ್ನ ಕಾಲೇಜು ಸಹಪಾಠಿ ಕಾಪಿಕಾಡರಿಗೆ ಹೇಳಿದರು. ಆಗ ಕಾಪಿಕಾಡ್‌ರಿಂದ ಸೃಷ್ಟಿಯಾದ ನಾಟಕವೇ 'ಯಾನ್ ಮಲ್ಲಾಯೆ'. ನಾಟಕ ಯಶಸ್ವಿಯಾಯಿತು. ಮುಂದೆ ಅದರ ಮಂಗಳೂರು ಪುರಭವನ ಪ್ರದರ್ಶನ ವೇಳೆ ನಟ ಆನಂದ ಬೋಳಾರರ ಸಲಹೆಯಂತೆ 'ಬಲೆ ಚಾಪರ್ಕ' ಎಂಬ ಹೆಸರಿನೊಂದಿಗೆ ಪ್ರದರ್ಶಿಸಲಾಯಿತು. ನಾಟಕ 'ಹಿಟ್' ಆಯಿತು. ಮುಂದೆ 'ಚಾಪರ್ಕ' ತಂಡ ಇತಿಹಾಸ ನಿರ್ಮಿಸಿತು.

ಮಾಧವ ಶಕ್ತಿನಗರ ಮುಂದೆ ವಿಜಯಕುಮಾರ್ ಕೊಡಿಯಾಲ್‌ಬೈಲ್‌ರ ಯಶಸ್ವಿ ನಾಟಕ 'ಒರಿಯದಿರ್ಂರಿ ಅಸಲ್' ಸೇರಿದಂತೆ ಇತರ ನಾಟಕಗಳ ಖಾಯಂ ಬೇಡಿಕೆಯ ಹಾಸ್ಯನಟರಾಗಿ ಮಿಂಚಿದರು. ಅನೇಕ ಸಂಘ ಸಂಸ್ಥೆಗಳ ನಾಟಕಗಳಲ್ಲೂ ನಟಿಸಿ,

ಕೊಲ್ಲಿರಾಷ್ಟ್ರಗಳಲ್ಲೂ ಅಭಿನಯ ನೀಡಿ ಹೆಸರಾದ ಈ ಕಲಾವಿದ ಅಕಾಲದಲ್ಲಿ ನಿಧನರಾದರು.

**ದಿ| ಆನಂದ ಶೆಟ್ಟಿ ಅಶೋಕನಗರ**

ಬಾಲ್ಯದಿಂದಲೇ ಬೋಳೂರು, ಅಶೋಕನಗರ ಪರಿಸರದಲ್ಲಿ 'ಅನಾರ್ಕಲಿ' ವೇಷಧಾರಣೆ ಮಾಡುತ್ತಾ ಹೆಸರಾದ ಆನಂದಶೆಟ್ಟಿ ಮುಂದೆ ನಾಟಕ ಸ್ತ್ರೀಪಾತ್ರ, ಪೋಷಕ ಪಾತ್ರಗಳ ಅನಿವಾರ್ಯ ನಟರಾದರು. ಕೆ. ಬಿ. ಭಂಡಾರಿ, ಮಚ್ಚೇಂದ್ರನಾಥ ಪಾಂಡೇಶ್ವರ, ಕೆ.ಎನ್. ಟೇಲರ್, ಇಂಥ ದಿಗ್ಗಜರ ನೂರಾರು ನಾಟಕಗಳ ಸಹಸ್ರಾರು ಪ್ರದರ್ಶನಗಳಲ್ಲಿ 70ರಿಂದ 90ರ ದಶಕದ ಅವಧಿಯಲ್ಲಿ ನಿರಂತರ ರಂಗಭೂಮಿಯಲ್ಲಿ ಅಭಿನಯಿಸಿದ ಆನಂದ ಶೆಟ್ಟರು ದೇವದಾಸ್ ಕಾಪಿಕಾಡರ ಚಾಪರ್ಕ ತಂಡದ ಕೆಲವು ನಾಟಕಗಳಲ್ಲೂ ಪಾತ್ರ ವಹಿಸಿದವರು. ಕೊನೆಗಾಲದಲ್ಲಿ ಚಿಲಿಂಬಿಯಲ್ಲಿ ವಾಸವಾಗಿದ್ದರು. ತುಳು ಅಕಾಡೆಮಿಯ 2016-17ನೆ ಸಾಲಿನಲ್ಲಿ ಇವರ ನಾಟಕ ಕ್ಷೇತ್ರದ ಅಪಾರ ಸೇವೆಗಾಗಿ ಗೌರವ ಪುರಸ್ಕಾರ ನೀಡಿತ್ತು 2017ರಲ್ಲಿ ನಿಧನರಾದರು.

**ಡಿ.ಎಸ್. ಬೋಳೂರು (1952)**

ಚರಿತ್ರನಟ, ಖಳನಾಯಕ, ಕಥಾನಾಯಕ, ಪ್ರಮುಖ ಪೋಷಕನಟ – ಹೀಗೆ ರಂಗಭೂಮಿಯಲ್ಲಿ ತಮ್ಮ ಶರೀರ, ಶಾರೀರ ಎರಡರಲ್ಲೂ ಆಕರ್ಷಕರಾದ ಕಂಚಿನ ಕಂಠದ ಹಿರಿಯ ನಟ ಡಿ.ಎಸ್. ಬೋಳೂರು ಇವರದು ಸುದೀರ್ಘ ರಂಗಯಾನ ಕಲಾಜೀವನದ ಆರಂಭ ವರ್ಷಗಳಲ್ಲಿ ಮಾಡುತ್ತಿದ್ದುದು ಸ್ತ್ರೀಪಾತ್ರ ನಿರ್ವಹಣೆ.

ಪುಂಜಾಲಕಟ್ಟೆ ಕುಟುಂಬ ಮೂಲ ಮನೆಯಾಗಿ, ಮಂಗಳೂರು ಮೇರಿಹಿಲ್ ತಂದೆ ತಾಯಿಯ ಸಂಸಾರದ ಮನೆಯಾದರೆ, ಬೋಳೂರು-ಹ್ಯೊಗೆಬೈಲ್ ಅಜ್ಜಿಮನೆ. ತನಿಯಪ್ಪ ಮೂಲ್ಯ-ಪದ್ಮಾವತಿ ದಂಪತಿಯ ಮಗ ದಾಮೋದರ ಸಾಲಿಯಾನ್ ಡಿ.ಎಸ್. ಬೋಳೂರು ಆಗಿ ದ.ಕ. ಜಿಲ್ಲಾ ರಂಗಭೂಮಿಯಲ್ಲಿ ತಮ್ಮ ಅಪ್ರತಿಮ ನಟನೆಯಿಂದ ಮನೆಮಾತಾದವರಲ್ಲಿ ಒಬ್ಬರು.

1956ರಲ್ಲಿ ಅಂದಿನ ರೂರಲ್ ಎಲಿಮೆಂಟರಿ ಶಾಲೆ (ಗುಡ್ಡೆಶಾಲೆ – ಇಂದಿನ ಅಶೋಕನಗರ ಶಾಲೆ)ಯ ರಂಗಮಂಟಪಕ್ಕೆ ಇವರ ಮೊದಲ ಪಾದಾರ್ಪಣೆ, ಒಂದನೇ ತರಗತಿಯಲ್ಲೇ – ಬಾಲಕರ ನೃತ್ಯ ಗೀತೆಗೆ ಪಾದಾರ್ಪಣೆ ಮುಖಕ್ಕೆ ಬಣ್ಣ ಬಳಿದು ಕುಣಿತ. ಮುಂದೆ ಕ್ರಮೇಣ ನಾಟಕಗಳಲ್ಲಿ ಅಭಿನಯ. ಆ ಕಾಲದಲ್ಲಿ ಈ ಅಶೋಕನಗರ ಶಾಲಾ ವಾರ್ಷಿಕೋತ್ಸವ ಜನವರಿ ತಿಂಗಳಲ್ಲಿ ನಡೆದರೆ ಆ ಸ್ಟೇಜ್‌ನಲ್ಲಿ ಮುಂದೆ ಪ್ರತೀ

ರಜಾದಿನಗಳಲ್ಲಿ ಮಳೆಗಾಲ ಕಾಲಿಡುವವರೆಗೂ ನಾಟಕ, ನಾಟಕ ಆನಂದ ಶೆಟ್ಟಿ ಅಶೋಕನಗರ, ದಯಾನಂದ, ಉಮೇಶ್, ಲಕ್ಷ್ಮಣ, ಗೋಪಾಲ್, ಜಗತ್ಪಾಲ ಕರ್ಕೇರ, ಯು.ಪಿ. ಕುಂದರ್, ಗಣೇಶ್ ಕುಮಾರ್ ಮತ್ತು ಡಿ.ಎಸ್. ಬೋಳೂರು ಇವರೆಲ್ಲ ಜೊತೆಯಾಗಿ ತುಳು ಕನ್ನಡ ನಾಟಕಗಳಲ್ಲಿ ಪಾತ್ರ ವಹಿಸುತ್ತಾ ಬಂದರು.

ಪಕ್ಕದ ಹ್ಯೊಗೆಬೈಲ್ ಪ್ರದೇಶದಲ್ಲಿ 1964ರಲ್ಲಿ ಡಿ.ಎಸ್. ಬೋಳೂರು ಮತ್ತು ಗೆಳೆಯರು ನಾಟಕವಾಡಲು 'ಬಾಲಕರ ನಾಟಕ ಸಭಾ'ವನ್ನು ಆರಂಭಿಸಿದರು. ಆ ಕಾಲದ ಕೃಷಿ ಮನೆಗಳ ಬಟ್ಟೆ ಪರಿಕರಗಳೇ ವೇಷಭೂಷಣ. ಈ ತಂಡ ಮುಂದೆ 'ಕ್ರಿಕೆಟ್ ಕ್ಲಬ್' ಆಗಿ ಬಳಿಕ 'ಜೈಭಾರತಿ ತರುಣ ವೃಂದ'ವೆಂಬ ಹೆಸರು ಪಡೆದು ಸುವರ್ಣ ಮಹೋತ್ಸವದೊಂದಿಗೆ ಇಂದಿಗೂ ಕ್ರಿಯಾಶೀಲವಾಗಿದೆ. ಇದರ ಮೊದಲ ಹತ್ತು ವರ್ಷ ಡಿ.ಎಸ್.ಬೋಳೂರರೇ ಕಾರ್ಯದರ್ಶಿ. ಆಗ ಮಿತ್ರ ಶೇಖರ ಶೆಟ್ಟರು ಇವರೂ ಸೇರಿ ಬರೆದ 'ದೇಶಬಂಧು' ನಾಟಕದಲ್ಲಿ ಡಿ.ಎಸ್. ಸ್ತ್ರೀಪಾತ್ರ ಮಾಡಿದರು.

1970ರಲ್ಲಿ (18ರ ಹರೆಯದಲ್ಲಿ) ಇವರು ರಚಿಸಿದ ಪ್ರಥಮ ತುಳುನಾಟಕ 'ಬೀದಿ ಭಿಕಾರಿ' 23 ದೃಶ್ಯಗಳ ನಾಟಕವಾಗಿತ್ತು. ಪದ್ಮನಾಭ ಮಾಸ್ಟರ್ ದಿಗ್ದರ್ಶನ ಮಾಡಿದರು. ಡಿ.ಎಸ್. ಪ್ರಧಾನ (ರಾಜು) ಪಾತ್ರ ನಿರ್ವಹಿಸಿ ನೆರೆದ ಅಪಾರ ಪ್ರೇಕ್ಷಕರ ಮನಗೆದ್ದರು.

ಮುಂದೆ ಮಂಗಳೂರು ಸರಕಾರಿ ಕಾಲೇಜು (ಈಗಿನ ವಿ.ವಿ. ಕಾಲೇಜು)ನಲ್ಲಿ ಬಿ.ಕಾಂ. ಕಲಿಯುತ್ತಿರುವಾಗ ಒಂದೆಡೆ ಕಾಲೇಜಿನ ಲಲಿತ ಕಲಾ ಸಂಘದ ಅಧ್ಯಕ್ಷ ಪ್ರೊ. ಕೆ.ಸಿ. ಚೆನ್ನಕೇಶವರಾವ್ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಡಿ.ಎಸ್.ಗೆ ಅವಕಾಶ ನೀಡಿ ಪ್ರತಿಭೆ ಬೆಳಗುವಂತಾದರೆ ಇನ್ನೊಂದೆಡೆ ಆಗ ಆ ಕಾಲೇಜಿನ ಕಚೇರಿ ಅಧೀಕ್ಷಕರಾಗಿದ್ದ ನಾಟಕಕಾರರು ನೆಕ್ಕಿತಪುಣಿ ಗೋಪಾಲಕೃಷ್ಣರು ತಮ್ಮ ತುಳುನಾಟಕಗಳಲ್ಲಿ ಇವರಿಗೆ ಪಾತ್ರ ನೀಡಿದ ಗುರುವಾದರು. 1971–72ರ ವೇಳೆಗೆ ಅವರ 'ಪವಿತ್ರಪಾಪಿ', 'ಗೊಮ್ಮಡ್ದೇವೆರ್', 'ನಾಟ್ಯರಾಣಿ ಶಾಂತಲಾ' ಮುಂತಾದ ನಾಟಕಗಳಲ್ಲಿ ಡಿ.ಎಸ್.ಗೆ ಒಳ್ಳೆಯ ಪಾತ್ರಗಳಿದ್ದವು. ಮುಂದೆ ರಾಜಕೀಯಕ್ಕೆ ಹೋಗಿ ಸಚಿವರಾದ ಶ್ರೀ ರಮಾನಾಥ ರೈಯವರೂ ಆಗ ಇವರ ಸಹಪಾಠಿಯಾಗಿದ್ದರು.

ಒಮ್ಮೆ ಮಚ್ಚೇಂದ್ರನಾಥ ಪಾಂಡೇಶ್ವರರ 'ಕೌನ್ಸಿಲರ್ ಕೊಗ್ಗಣ್ಣೆ' ನಾಟಕವನ್ನು ಕಾಲೇಜಿನಲ್ಲಿ ವಿದ್ಯಾರ್ಥಿಗಳಿಂದ ಪ್ರದರ್ಶಿಸಲಾಯಿತು. ನಾಟಕ ನೋಡಲು ಬಂದ ಪಾಂಡೇಶ್ವರ್ ಡಿ.ಎಸ್.ರ ಪಾತ್ರ ನೋಡಿದರು. ಮುಂದೆ ತನ್ನ ಪ್ರತೀ ನಾಟಕಗಳಲ್ಲಿ ಪ್ರಮುಖ ಪಾತ್ರ ನೀಡಿದರು. ಡಿ.ಎಸ್. ಬೋಳೂರು ಗೋಪಾಲಕೃಷ್ಣ ಮತ್ತು ಪಾಂಡೇಶ್ವರ್ ಈ ಇಬ್ಬರನ್ನು ತನ್ನ ರಂಗಗುರುಗಳಾಗಿ ಗೌರವಿಸುತ್ತಾರೆ.

1977ರಿಂದ 2012ರವರೆಗೆ ಡಿ.ಎಸ್. ಬೋಳೂರು ಸುರತ್ಕಲ್ ಕೆ.ಆರ್.ಇ.ಸಿ.ಯ ಕಚೇರಿಯ ಉದ್ಯೋಗಿಯಾಗಿದ್ದರು. ಅಲ್ಲಿ ಸೇರಿದ ಆರಂಭ ಕಾಲವು ರಾಮ ಕಿರೋಡಿಯನ್, ಮಚ್ಚೇಂದ್ರನಾಥ್ ಪಾಂಡೇಶ್ವರ, ಯು. ಮಚ್ಚೇಂದ್ರನಾಥ್, ಕೆ.ಬಿ. ಭಂಡಾರಿ ಇವರ ನಾಟಕ ಪ್ರದರ್ಶನಗಳ ಉಚ್ಛ್ರಾಯಕಾಲವಾಗಿತ್ತು. ಡಿ.ಎಸ್.ರು ಹವ್ಯಾಸಿ

ಕಲಾವಿದರಾಗಿ ಈ ನಾಟಕಕಾರತ್ರಯರ ಬಹಳಷ್ಟು ನಾಟಕಗಳಲ್ಲಿ ಪ್ರದಾನ ಕಲಾವಿದನಾಗಿ ಪಾಲ್ಗೊಂಡು ಮಂಗಳೂರು ತುಳುರಂಗದಲ್ಲಿ ಪ್ರಸಿದ್ಧರಾದರು. ದಂಡೆಕೇರಿಯವರ 'ಬಯ್ಯಮಲ್ಲಿಗೆ' ನಾಟಕದ 'ರವಿ'ಯಾಗಿ ನೂರಾರು ಪ್ರದರ್ಶನಗಳಲ್ಲಿ ಪಾತ್ರ ನಿರ್ವಹಿಸಿದವರು. ವರ್ಷಂಪ್ರತಿ ಚಿಲಿಂಬಿ ಶಾರದೋತ್ಸವದ ಮಹಿಷಮರ್ದಿನಿ ನಾಟಕದಲ್ಲಿ 'ಮಹಿಷಾಸುರ', ಕೊಂಚಾಡಿ ಮಿತ್ರಮಂಡಳಿಯ ವಾರ್ಷಿಕೋತ್ಸವಗಳ ಬೆಳವಡಿ ಮಲ್ಲಮ್ಮ (ಕೆ.ಬಿ. ಭಂಡಾರಿ) ನಾಟಕದ ಮುಖ್ಯಪಾತ್ರ 'ಶಿವಾಜಿ' ಇವುಗಳೂ ತುಂಬ ಹೆಸರು ತಂದುಕೊಟ್ಟಿವೆ.

ಆ ಬಳಿಕ ರಿಚಾರ್ಡ್ ಕ್ಯಾಸ್ಟಲಿನೊ ತನ್ನ 'ಅರುಣ್ ಕಿರಣ್' ಸಂಸ್ಥೆಯ ಮೂಲಕ ಪುರಭವನದಲ್ಲಿ ನಡೆಸಿದ ನಾಟಕ ಸ್ಪರ್ಧೆಯಲ್ಲಿ ಇವರ ನಟನೆಗೆ ಜಿಲ್ಲಾ ಮಟ್ಟದ ಪ್ರಥಮ ಬಹುಮಾನ ಬಂತು. ಕಾರ್ನಾಡರ ನಾಟಕ 'ತುಘಲಕ್' ಎನ್.ಎಸ್. ರಾವ್ ಅವರ 'ಒಥೆಲೊ' ಮುಂತಾದ ನಾಟಕಗಳ ನಾಯಕನಟನಾಗಿ ಇವರದು ಮನೋಜ್ಞ ಅಭಿನಯ 1985ರಲ್ಲಿ ಕಾಪಿಕಾಡ್‌ರ ಚಾಪರ್ಕ ತಂಡದ 'ಬಲೇ ಚಾಪರ್ಕ'ದ (ಆರಂಭದ) ವಕೀಲ ಪಾತ್ರ ಮೂಲಕ ನಗೆನಾಟಕಗಳಲ್ಲೂ ಯಶಸ್ವೀ ಹೆಜ್ಜೆಗಳ ದಾಪುಗಾಲಿಕ್ಕಿದ ಡಿ.ಎಸ್. ಬೋಳೂರು ನಾಟಕ ಸ್ಪರ್ಧೆಳ ತೂಕದ ತೀರ್ಪುಗಾರನಾಗಿಯೂ ಬೇಡಿಕೆಯುಳ್ಳವರು. 'ಪೆಟ್ಟಾಯಿಪಿಲಿ(1986)ಯ ಮುಖ್ಯ ಖಳ ನಾಯಕ ಪಾತ್ರದೊಂದಿಗೆ ಮುಂದೆ ತುಳು ಸಿನೆಮಾ ರಂಗದಲ್ಲೂ ನಟನಾಗಿ ಗಮನಸೆಳೆದರು 'ಏರೆಗಾವ್ ಕಿರಿಕಿರಿ' ಖ್ಯಾತಿಯ ಹಾಸ್ಯನಟರಾದ ಸತೀಶ್ ಬಂದಲೆ, ಕಿನ್ನಿಗೋಳಿಯ ಸತೀಶ್ ಪಿಲಾರ್ ಸ್ತ್ರೀಪಾತ್ರದ ಶ್ರೀಧರ ಪ್ರಭು ಬಜ್ಪೆ, ರಂಗದಲ್ಲಿ ಹೆಣ್ಣಾಗುವ ಗಂಡು!

### ಸದಾಶಿವ ಅಮೀನ್ (1949)

ಹಿರಿಯ ಮತ್ತು ಹಿಂದಿನ ತಲೆಮಾರುಗಳ ಕೊಂಡಿಯಾಗಿರುವ ಮತ್ತೋರ್ವ ಪ್ರಸಿದ್ಧ ನಟ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ವಿಜೇತ ಸದಾಶಿವ ಅಮೀನ್ ರಂಗಕರ್ಮಿಯಾಗಿ ಈಗಾಗಲೇ ಐವತ್ತು ವರ್ಷಗಳನ್ನು ಕ್ರಮಿಸಿದ್ದಾರೆ. ಪೌರಾಣಿಕ, ಚಾರಿತ್ರಿಕ ರಂಗನಾಟಕಗಳಿಗೆ ಹೇಳಿ ಮಾಡಿಸಿದ ಕಂಠದ ಇವರು ನಿರ್ದೇಶಕರೂ ಹೌದು. ಪ್ರಸ್ತುತ ಕಾಪಿಕಾಡರ ತಂಡದ ಖಾಯಂ ನಟರು.

### ಎಸ್.ಆರ್. ಅಂಚನ್

ಅಂಚನ್‌ರು ಮುಲ್ಕಿಯ ಚೆನ್ನಪ್ಪ ಸುವರ್ಣರ 'ಸುವರ್ಣ ಆರ್ಟ್ಸ್' ತಂಡದಲ್ಲಿ ಸುವರ್ಣರ ಬಲಗೈಯಂತಿದ್ದರು. ಆ ಕಾಲದಲ್ಲಿ ಹೆಜಮಾಡಿಯ ರಾಮ್ ಮಾಸ್ಟರ್,

ಮುಲ್ಕಿ ಸೋಮಪ್ಪ ಸುವರ್ಣ, ಚೆನ್ನಪ್ಪ ಸುವರ್ಣ ಮತ್ತು ಇದೇ ಎಸ್. ಆರ್. ಅಂಚನ್ ಆತ್ಮೀಯ ಬಳಗವಾಗಿದ್ದು ಮುಲ್ಕಿ, ಕಿನ್ನಿಗೋಳಿ ಪರಿಸರದ ರಂಗಚಟುವಟಿಕೆಗಳ ಸೂತ್ರಧಾರರಾಗಿದ್ದರು. ಚೆನ್ನಪ್ಪ ಸುವರ್ಣರಿಗೆ ವರ್ಣಾಲಂಕಾರದಲ್ಲೂ ನೆರವಾಗುತ್ತಿದ್ದ ಅಂಚನ್ ಸ್ಫುರದ್ರೂಪಿಯಾಗಿದ್ದು ನಾಟಕಗಳಲ್ಲಿ ಕಥಾನಾಯಕ ಪಾತ್ರ ನಿರ್ವಹಿಸುತ್ತಿದ್ದರು.

**'ಕುಸಲ್ದರಸೆ' ನವೀನ್ ಡಿ. ಪಡೀಲ್**



ತುಳು ರಂಗಭೂಮಿ ಮತ್ತು ಚಿತ್ರರಂಗದಲ್ಲಿ ಪ್ರಕಾಶಮಾನವಾಗಿ ಬೆಳಗುತ್ತಿರುವ ನವೀನ್ ಡಿ. ಪಡೀಲ್ ಅಭಿಮಾನಿಗಳ ಬಾಯಲ್ಲಿ 'ಕುಸಲ್ದರಸೆ' ಎನ್ನುವ ಬಿರುದು ಗಳಿಸಿರುವ ಅಪ್ಪಟ ಪ್ರತಿಭಾಶಾಲಿ ಹಾಸ್ಯನಟ.

ತನ್ನ ಶಾಲಾದಿನಗಳಲ್ಲೇ ಬಿ.ಆರ್. ಕುಲಾಲ್‌ರ ನಾಟಕದಲ್ಲಿ ಬಣ್ಣ ಹಚ್ಚುವ ಮೂಲಕ ರಂಗಪ್ರವೇಶ ಮಾಡಿದ ನವೀನ್ ಪಡೀಲ್, ರಮಾ ಬಿ.ಸಿ.ರೋಡ್ ನಿರ್ದೇಶನದಲ್ಲಿ ಗಮನ ಸೆಳೆದ ಹಾಸ್ಯಕಲಾವಿದರಾದರು. 'ಚಾಪರ್ಕ' ತಂಡ, ಕಲಾಸಂಗಮ ತಂಡ, ಲಕುಮಿ ತಂಡಗಳಲ್ಲಿ ಹಾಸ್ಯನಟನೆಯಲ್ಲಿ ತನ್ನದೇ ಛಾಪು ಮೂಡಿಸಿ ಪ್ರೇಕ್ಷಕರಲ್ಲಿ ಬೆರಗುಹುಟ್ಟಿಸಿದ ಪಡೀಲ್ 'ಒರಿಯದರ್ೊರಿ ಅಸಲ್' ನಾಟಕದ 'ಭಜನೆ ಬಸಪ್ಪಣ್ಣೆ, 'ಮದರ್ ದೀತ್‌ಜಿ'ಯ ಬೂಬಣ್ಣೆ, 'ಕಾಸ್ ಓಲ್ದೀಪರ್' ನಾಟಕದ ಕಾಸರಗೋಡ್ ಮೋನೆ', 'ಬಾಬು' ನಾಟಕದ 'ಬುಲ್ಲೆ' ಸೇರಿದಂತೆ ಅಂಚಿಲತ್ತ್ ಇಂಚಿಲತ್ತ್, ಗಂಗುನ ಗಮ್ಮತ್ತ್ ಮುಂತಾದ ಹತ್ತಾರು ನಾಟಕಗಳ ಪಾತ್ರಗಳಲ್ಲಿ ಅವಿಸ್ಮರಣೀಯ ನಟನೆಯಿಂದ ತುಳುನಾಡಿನಾದ್ಯಂತ ಅದ್ವಿತೀಯ ನಟರೆನಿಸಿದರು. ತುಳು ಚಿತ್ರರಂಗದ ಆಧುನಿಕ ಹಂತದ ಪ್ರಚಂಡ ಬೆಳವಣಿಗೆಯ ಹಿಂದೆ ಪಡೀಲ್‌ನ ಪ್ರತಿಭೆ ನೀಡಿದ ಕೊಡುಗೆ ಅದ್ವಿತೀಯ. 'ಬಿರ್ಸೆ', 'ಒರಿಯದರ್ೊರಿ ಅಸಲ್', 'ಆಮೇಟ್ ಅಸಲ್ ಈಮೇಟ್ ಕುಸಲ್', 'ತೆಲಿಕೆದ ಬೊಳ್ಳಿ' ಮುಂತಾದ ತುಳುಚಿತ್ರಗಳಲ್ಲದೆ ಕನ್ನಡ ಚಿತ್ರಗಳಲ್ಲೂ ಈ ಸಹಜ ಪ್ರತಿಭೆಯ ಕಲಾವಿದ ಬಹುಬೇಡಿಕೆಯವರಾದರೂ ಮಲೆಯಾಳಂನ 'ವಿಧೇಯನ್' ಮುಂತಾದ ಸಿನೆಮಾಗಳಲ್ಲಿ ಅವರದು ಮನೋಜ್ಞ ಅಭಿನಯ. ಇತ್ತೀಚೆಗೆ ನಾಟಕ ನಿರ್ದೇಶನಕ್ಕೂ ಕೈಯಿಕ್ಕಿ 'ಶಾರದಾ ಆರ್ಟ್ಸ್ ಕಲಾವಿದೆರ್' ಮುಂತಾದ ತಂಡಗಳ ಕೆಲವಾರು ನಾಟಕಗಳನ್ನು ನಿರ್ದೇಶಿಸುತ್ತಲಿದ್ದಾರೆ. 'ಗೊತ್ತಾನಗ ಪೊರ್ತಾಂಡ್' ತುಳು ಧಾರಾವಾಹಿಯಲ್ಲೂ ವೀಕ್ಷಕರ ಮನಸೂರೆಗೊಂಡವರು.

**ತುಳಸಿದಾಸ್ ಉರ್ವ**

ಯುವ ತಲೆಮಾರಿನ ಪ್ರಸಿದ್ಧ ಹಾಸ್ಯನಟರಲ್ಲಿ ಓರ್ವರಾದ ತುಳಸಿದಾಸರು ಮೀರ್ ಸಾದಿಕ್, ಪುರ್‌ಸೊತ್ತಿಜ್ಜಿ, ಎಂಕಿಜ್ಜ, (ವಿಧಾತ್ರಿ) ನಾಟಕ ನಿಕ್ಕ್ ಗೊತ್ತುಂಡ, ಎಂಕುಲುಲ್ಲ,

ರಿಕ್ಷೊಡು ಪೋಯಿ ಮುಂತಾದ ನಾಟಕಗಳಲ್ಲಿ ಜನಪ್ರಿಯ ನಟನೆಯಲ್ಲದೆ, ನಿರ್ದೇಶನ, ಪ್ರಸಾದನದಲ್ಲೂ ಪರಿಶ್ರಮಿ. ಇವರು ಇನ್ನೋರ್ವ ಪ್ರಸಿದ್ಧ ನಾಟಕಕಾರ ಸುಧೀರ್ ರಾಜ್‌ರವರ ಕಿರಿಯ ಸಹೋದರ.



70ರ ದಶಕದಲ್ಲಿ ಕೆ.ಬಿ. ಭಂಡಾರಿಯವರ 'ದಳವಾಯಿ ದುಗ್ಗಣ್ಣ' ನಾಟಕದ ಕಂಪಣನ ಪಾತ್ರ ವಹಿಸುತ್ತಿದ್ದ ಶ್ರೀ ಎ.ಸಿ. ಭಂಡಾರಿ



80ರ ದಶಕದಲ್ಲಿ ತನ್ನ ವಿದ್ಯಾರ್ಥಿ ದೆಸೆಯಲ್ಲಿ ಅಮೃತ ಸೋಮೇಶ್ವರರ ಪ್ರಸಿದ್ಧ 'ಗೋಂದೋಳು' ನಾಟಕದ ಪ್ರಧಾನ ಪಾತ್ರ ವಹಿಸಿದ್ದ ಡಾ. ಕೆ. ಮೋಹನ ಆಳ್ವ

## ನೂರಾರು ತುಳು ನಾಟಕ ತಂಡಗಳು, ನಾಟಕಕಾರರು

ಮಂಗಳೂರಿನಲ್ಲಿ ತುಳುಕೂಟ 1970ರಲ್ಲಿ ಹುಟ್ಟಿಕೊಂಡು ತುಳು ಸಂಘಟನೆ ನಾಟಕ ಸ್ಪರ್ಧೆ, ನಾಟಕ ಸಪ್ತಾಹಗಳನ್ನು ನಡೆಸತೊಡಗಿದ ಪ್ರಭಾವದಿಂದ ಅಂದಿನ ಅವಿಭಜಿತ ದ.ಕ. ಜಿಲ್ಲೆಯ ಕುಂದಾಪುರ ಭಾಗವನ್ನು ಹೊರತುಪಡಿಸಿ ಉಳಿದೆಡೆ ಎಲ್ಲ ತಾಲೂಕುಗಳ ಅಲ್ಲಲ್ಲಿ ತುಳುನಾಟಕ ಚಟುವಟಿಕೆಗಳು ಚಿಗುರಿಕೊಂಡವು.

ಉಡುಪಿ ಭಾಗದಲ್ಲಿ ಕೆಮ್ತೂರರ ದಟ್ಟ ಪ್ರಭಾವದಿಂದ ಉಡುಪಿ ನಗರಕ್ಕಿಂತಲೂ ಹೆಚ್ಚು ಹೊರಭಾಗಗಳಲ್ಲಿ ರಂಗಾಸಕ್ತರು ಉದಿಸಿದರು. ಅಂಬಲಪಾಡಿಯ ಯೂತ್ ಸ್ಪೋರ್ಟ್ಸ್ ಅಂಡ್ ಕಲ್ಚರಲ್‌ಕ್ಲಬ್ ಮಾಡರ್ನ್ ಸ್ಕೂಲ್ ಕಾಡಬೆಟ್ಟು ಇವರು ಮಾಧವ ಕಾಡೆಬೆಟ್ಟು ಅವರ ನಾಟಕಗಳನ್ನಾಡುತ್ತಿದ್ದರು. ನಾರಾಯಣ ಗಾಣಿಗರಂತಹ ಗೀತರಚನೆಕಾರ, ಗಾಯಕರ ಬೆಂಬಲದಿಂದ ಉದ್ಯಾವರದ ಬಿಲ್ಲವ ಯುವ ಜನ ಸಂಘ, ಗಣೇಶ್ ಕಲಾವೃಂದ (ರಿ) ಉದ್ಯಾವರ, ಕರಾವಳಿ ಕಲಾವಿದರು, ಕಿನ್ನಿಮೂಲ್ಕಿಯ ಮಿತ್ರವೃಂದ (ಈಗ ಕೃಷ್ಣಮೂರ್ತಿ ಆಚಾರ್ಯರ ನೇತೃತ್ವದ ಹವ್ಯಾಸಿಬಳಗ), ಮಾರ್ಪಳ್ಳಿ, ಕೊರಂಗ್ರಪಾಡಿ ಬೈಲೂರು ಪ್ರದೇಶದಲ್ಲಿ ಚಂದ್ರಶೇಖರ್, ಮಂಜುನಾಥ್, ರಾಮಚಂದ್ರ

ನ್ಯಾಕ್ ಮುಂತಾದ ರಂಗಕರ್ಮಿಗಳ ಕೂಟಗಳು, ನಂದಗೋಕುಲ ಬೈಲೂರು, ಕಲಾಕಿರಣ್ ಬೈಲೂರು ಕುಕ್ಕಿಕಟ್ಟೆಯ ತಾರಾನಾಥ್ ನ್ಯಾಕ್ ಮತ್ತಿತರರು ವಾರ್ಷಿಕೋತ್ಸವ ವೇಳೆ ತುಳುನಾಟಕಗಳನ್ನಾಡತೊಡಗಿದರು. ಕಟಪಾಡಿಯ ಮಾಡರ್ನ್ ಸ್ಕೂಲ್ ಹಿನ್ನೆಲೆಯ ಪ್ರಕಾಶ್ ಮಣಿಪುರ, ಶೇಖರ್ ಮಣಿಪುರ ಅಬ್ಬಾಸ್ ಮುಂತಾದವರು ಹಿರಿಯಡಕ ಭಾಗದಲ್ಲಿ ಕೆ.ಕೆ. ಸಾಲಿಯಾನ್ ನಟ, ನಾಟಕಕಾರರಾಗಿ ಪ್ರವರ್ಧಮಾನಕ್ಕೆ ಬಂದು ಅವರ ಪರ್ಪಲನ ಪಗೆ, ಕರಿಯೆ ಕಟ್ಟಿನ ಕರಿಯಮಣಿ ಮುಂತಾದ ಯಶಸ್ವಿ ನಾಟಕಗಳು ಅಲ್ಲಲ್ಲಿ ಹಲವು ಪ್ರದರ್ಶನಕಂಡವು.

'ಸನ್ನಿಧಿ ಕಲಾವಿದೆರ್ ಮಾರ್ಪಳ್ಳಿ' ಎನ್ನುವ ಕೂಟವೂ 80-90ರ ದಶಕದಲ್ಲಿ ನಾಟಕದಲ್ಲಿ ಸಕ್ರಿಯವಾಯಿತು. ಅತ್ತ ಮಲ್ಪೆಯಲ್ಲಿ ಎಂ.ಕೆ.ರವಿ ಅವರ ನೇತೃತ್ವದ ಉದಯ ಕಲಾವೃಂದ ಕಲ್ಮಾಡಿ, ಫಿಶರೀಸ್ ಕಾಲೇಜ್ ಹಳೆ ವಿದ್ಯಾರ್ಥಿ ಸಂಘವು ರಾಜು ಬಿ. ತೋನ್ಸೆಯವರ ಪ್ರಸಿದ್ಧ ನಾಟಕ 'ಜಲಜ ಮಗಲೆಗ್ ಜಪಾನ್ದ ಕಂಡನಿ' ನಾಟಕವನ್ನು ಮೊದಲು ಪ್ರಯೋಗಿಸಿತು. ಕರ್ಮಯೋಗಿ ಕಲಾಸಂಘ ಬನ್ನಂಜೆ ಎನ್ನುವ ವಿಶ್ವಕರ್ಮ ಬಾಂಧವರ ಕೂಟದ ನಾಟಕಗಳಲ್ಲಿ ಮುಂದೆ ಸಿನೆಮಾ ಕ್ಷೇತ್ರದಲ್ಲಿ ಹೆಸರಾದ ಸುಧಾಕರ ಬನ್ನಂಜೆ ಸಕ್ರಿಯರಾಗಿದ್ದರು. ದೊಡ್ಡಣಗುಡ್ಡೆಯ ಜನತಾವ್ಯಾಯಾಮ ಶಾಲೆಯ ವತಿಯಿಂದ ಬಾಲಕೃಷ್ಣ ಶೆಟ್ಟರಂಥವರ ಮುಂದಾಳ್ತನದಲ್ಲಿ ತುಳು ನಾಟಕಗಳು ಪ್ರದರ್ಶಿತವಾಗುತ್ತಿದ್ದವು. ಅಂಬಾಗಿಲಿನಲ್ಲಿ ಯುವಕರ ಬಳಗಗಳು, ಸಂಘಗಳು ಗಂಗಾಧರ ಕಿದಿಯೂರರ ನಾಟಕಗಳನ್ನಾಡುತ್ತಿದ್ದವು. ಎಣ್ಣೆದಾಂತಿ ತುಡರ್, 'ಇಲ್ಲ್ ಒಕ್ಕೆಲ್ ಬಗ್ಗನ ಭಾಗ್ಯೊ' ಮುಂತಾದ ತನ್ನ ನಾಟಕಗಳನ್ನು ಆಡುವಲ್ಲಿಗೆ ನಾಟಕಕಾರ ಗಂಗಾಧರರೇ ಹೋಗಿ ನಿರ್ದೇಶಿಸುವುದಿತ್ತು.

ಜೈಹಿಂದ್ ಯುವಕ ಮಂಡಲ ಬೊಕ್ಕಪಟ್ಣ, ದೋಸ್ತ್ ಕ್ರಿಕೆಟರ್ಸ್, ಅರುಣೋದಯ ಕಲಾ ವಿಹಾರ ಸಂಘ, ಸ್ನೇಹ ಕಲಾವೃಂದ ಪಾಂಡೇಶ್ವರ, ನಂದಿಕೇಶ್ವರ ನಾಟಕ ಸಂಘ, ಬಿ.ಇ.ಎಂ. ಹೈಸ್ಕೂಲು ಹಳೆ ವಿದ್ಯಾರ್ಥಿ ಸಂಘ, ಕಲಾಕುಂಭ ಕುಳಾಯಿ, ಶ್ರೀ ಗುರುರಾಘವೇಂದ್ರ ನಾಟಕ ಸಭಾ ಮಂಗಳೂರು, ಯುನೈಟೆಡ್ ಸ್ಪೋರ್ಟ್ಸ್ ಕ್ಲಬ್, ಬೋಳೂರು, ಅಭಯ್ ಕುಡ್ಲ, ಅರುಣ್ -ಕಿರಣ್ ಪ್ರೊಡಕ್ಷನ್.

**ಮತ್ತಷ್ಟು ತಂಡಗಳು :** ಕಲಾವಾಹಿನಿ (ರಿ), ಕಟಪಾಡಿ, ಸಂಕೇತ್ ಕಲಾವಿದರು, ಮಂಗಳೂರು, ಬೆನಕ, ಆಯನ, ಅಭಿವ್ಯಕ್ತ, ಭೂಮಿಕಾ, ನರ್ತಕಿ ಕಲಾರಂಗ ಕಟಪಾಡಿ, ಯಂಗ್‌ಸ್ಟಾರ್ ಕಾರ್ನಾಡ್ ಕರಾವಳಿ ಯುವಕ ಸಂಘ ಹೆಜಮಾಡಿ, ನವನೀತ ಕಲಾರಂಗ ಹೆಜಮಾಡಿ ವಿಜಯ ಕಲಾವಿದರು ಕಿನ್ನಿಗೋಳಿ, ಸುವರ್ಣ ಆರ್ಟ್ಸ್ ಮೂಲ್ಕಿ, ಪ್ರತಿಭಾ ಕಲಾವಿದರು, ಕುಡ್ಲ, ರಂಗತರಂಗ ಕಾಪು, ಕೂಡ್ದಿ ಕಲಾವಿದರ್, ಪೆರ್ಡೂರು, ಸರಸ್ವತಿ ಯುವಕ ಮಂಡಲ ಮಲ್ಪೆ, ನಾರಾಯಣಗುರು ಕಲಾವೃಂದ ಕಾರ್ಕಳ, ಇತ್ಯಾದಿ.(ಮುಂಬಯಿ ತಂಡಗಳ ವಿವರ ಪ್ರತ್ಯೇಕವಾಗಿದೆ.) ಮಹಾಜನಸಂಘ ಉದ್ಯಾವರ, ಕಲಾರಂಗ ಕಾರ್ಕಳ, ಲಕುಮಿತಂಡದ ಕುಸೇಲ್ದ ಕಲಾವಿದೆರ್, ಕಲಾಸಂಗಮ

ಮಂಗಳೂರು, ಕಾಪಿಕಾಡ್‌ರ ಚಾಪರ್ಕ ತಂಡ, ನಮ ತುಳುವೆರ್ ಮುದ್ರಾಡಿ, ಮಾನಸ ಮಹಿಳಾ ಕಲಾತಂಡ ಪಾವಂಜೆ, ಸಂಗಮ ಕಲಾವಿದೆರ್, ಮಣಿಪಾಲ, ಸ್ಫೂರ್ತಿ ಮಹಿಳಾ ಮಂಡಲ ಕಲಾವಿದರು, ಮೂಡುಬೆಳ್ಳೆ, ಸುಮನಸ ಸಾಂಸ್ಕೃತಿಕ ಸಂಘಟನೆ, ಕೊಡವೂರು ನವಸುಮರಂಗ ಮಂಚ, ವನಸುಮ ವೇದಿಕೆ ಕಟಪಾಡಿ, ನಲಿಕೆ ತಂಡ, ಬೆಂಗಳೂರು ಇತ್ಯಾದಿ.

ಮಡಂತ್ಯಾರಿನ ಶ್ಯಾಮರಾಯಾಚಾರ್, ಪುಂಜಾಲಕಟ್ಟೆಯ ಗಿರಿರಾಜ್ ವಗ್ಗ, ಪಿ.ಕೆ. ಟೈಲರ್ ಮುಂತಾದವರು ತಮ್ಮ ತಮ್ಮ ಪ್ರದೇಶದಲ್ಲಿ ತುಳುನಾಟಕಕಾರರಾಗಿ ಹಲವಾರು ನಾಟಕ ರಚಿಸಿ ಸ್ಥಳೀಯ ತಂಡಗಳಿಂದ ಅವು ಪ್ರಯೋಗಕ್ಕೆ ಬಂದಿವೆ. ಇವರು ಮಾತ್ರವಲ್ಲದೆ ಮತ್ತಷ್ಟು ಸಾಲು ಸಾಲು ನಾಟಕ ತಂಡಗಳು ತುಳು ಪ್ರದರ್ಶನಗಳನ್ನು ನೀಡುತ್ತಿದೆ. ಎಲ್ಲೆಡೆಯ ಉತ್ಸವ, ಜಾತ್ರೆ ವೇಳೆಯಲ್ಲಿ ಸಹಾಯಾರ್ಥ ನಾಟಕವಾಡಿದ ತಂಡಗಳನ್ನು ಹೆಸರಿಸುವುದಾದರೆ – ಸಿಂಧೂರ ಕಲಾವಿದೆರ್ ಕಾರ್ಲ, ಈ ತಂಡ

ತುಳು ಹಾಸ್ಯನಾಟಕಗಳ ವ್ಯಾಪಕ ಪ್ರದರ್ಶನಕ್ಕೆ ಸಾಕ್ಷಿ ನೀಡುವ ದಿನಪತ್ರಿಕೆಯೊಂದರ ಜಾಹೀರಾತಿನ ಮಾದರಿ

ಚಿತ್ರನಟಿ ಲೀಲಾವತಿ ಪೊಸಲಾಯಿ ಸಾರಥ್ಯದಲ್ಲಿ ಕಾರ್ಕಳ ಮೂಲದಿಂದ ಸಕ್ರಿಯಗೊಂಡು 'R ಏರ್?', 'ಎಂಕ್ ಗೊತ್ತುಂಡು' ಮುಂತಾದ ನಾಟಕ ಪ್ರದರ್ಶನ ಸಂಚಾರದಲ್ಲಿ ತೊಡಗಿದೆ. 'ಐಸಿರಿ ಕಲಾವಿದೆರ್' ವೇಣೂರು, ಕುರಲ್ ಕಲಾವಿದೆರ್ ಬೆದ್ರ, ತೆಲಿಕೆದರಸೆ ಪ್ರಸನ್ನ ಶೆಟ್ಟಿ ಬೈಲೂರು ನೇತೃತ್ವದ ಚೈತನ್ಯ ಕಲಾವಿದರ 'ಸ್ವಾರ್', 'ಬುದ್ಧಿ ಚಪಟ್', ನಿಸರ್ಗ ಕಲಾವಿದೆರ್ ಬೆದ್ರ ಇವರ 'ನನ ಏಪಲ ಇಂಚನೆ', ಸ್ನೇಹ ಕಲಾವಿದರು ಪುಣಚ 'ಮನಸ್ಸ್ ಎನ್ನಿಲೆಕ್ಕ', ತಾಂಬೂಲ ಕಲಾವಿದೆರ್ ಪುಂಜಾಲಕಟ್ಟೆ 'ಇಂಚಲಾ ಉಂಡಾ?' ತೆಲಿಕೆದ ತೆನಾಲಿ ಕಾರ್ಕಳ ತಂಡದ 'ಮದಿರೆಂಗಿ' ಇವರ 'ಮೇ 22' ಮೋಕೆದ ಕಲಾವಿದೆರ್ ಬರಿಮಾರ್ ಇವರ 'ಏರಾದುಪ್ಪು?', ಸುಮನಸಾ ಕೊಡವೂರು ಇವರ 'ಎಂಚಲಾ ಬದ್ಕೊಲಿ', ಜನನಿ ಕಲಾವಿದೆರ್, ಪದವು ಕಾರ್ಕಳ ಇವರ 'ಪನಂದೆ ಪೋಯೆರ್...' ಸುವರ್ಣ ಕಲಾವಿದೆರ್ ಶಿರ್ವ ಇವರ 'ಒಟ್ರಾಸಿ ಮಂಡೆ ಬೆಚ್ಚ', ಯಶಸ್ವಿ ಕಲಾವಿದರು ಮಂಜೇಶ್ವರ ಇವರ 'ಅವು ಪನಿಯರೆ ಆಪುಜಿ', ಅಭಿನಯ ಕಲಾವಿದರು ಉಡುಪಿ ಇವರ '3ಡಿ', ಬಂಗಾರ್ ಕಲಾವಿದೆರ್ ಗಂಜಿಮಠ ಇವರ ಭಾಸ್ಕರೆ ಬಂಗೊಡುಲ್ಲೆ, ತೆಲಿಕೆದ ಕಲಾವಿದೆರ್ ಕೊಯಿಲ ಇವರ 'ನಿಕ್ಲ್ ಎನ್ನಿಲೆಕತ್ತ್...'! ರಂಗಭೂಮಿ ಬಿ.ಸಿ.ರೋಡ್ ಇವರ 'ದಾದಾಂದ್ ಗೊತ್ತಿಜ್ಜಿ', ರಂಗ್‌ದ ಕಲಾವಿದೆರ್ ಗುರುಪುರ ಇವರ 'ದಾಯೆ ಬದ್ಕೆರಾಪುಜಿ...?', ತುಳುವೆರೆ ಉಡಲ್ ಜೋಡುಕಲ್ಲ್ ಇವರ 'ಶ್ರೀಮತಿ', ತುಳುವೆರೆ ತುಡರ್ ಕಲಾವಿದರು, ಸುರತ್ಕಲ್ ಅಭಿನಯದ ಮಧುಬಂಗೇರ ಕಲ್ಲಡ್ಕ ಕಥೆ, ಸಂಗೀತ, ನಿರ್ಮಾಣದ ಅರುಣ್ ಚಂದ್ರ ಬಿ.ಸಿ.ರೋಡ್‌ರ ಸಂಭಾಷಣೆ ನಿರ್ದೇಶನದ 'ಕೊಪ್ಪರಿಗೆ', ನಿಮಿಷ ಕಲಾವಿದೆರ್ ಕಟಪಾಡಿ ಇವರ 'ಉಲಾಯಿಡೊಂಜಿ ಪಿದಾಯಿಡೊಂಜಿ' ಅಮ್ಮ ಕಲಾವಿದೆರ್ ಕುಡ್ಲ ಇವರ 'ಎನ್ನ ಗುರ್ತ ತಿಕ್‌ಂಡಾ...?' –ಹೀಗೆ ತುಳುನಾಡಿನ ನಾಲ್ಕು ದಿಕ್ಕುಗಳಲ್ಲೂ ರಂಗತಂಡಗಳು ಕ್ರಿಯಾಶೀಲವಾಗಿವೆ.

## ಧ್ವನಿ, ಬೆಳಕು, ದೀಪಾಲಂಕಾರ

ಒಂದು ನಾಟಕದ ಯಶಸ್ಸಿಗೆ ಧ್ವನಿ ಮತ್ತು ಬೆಳಕಿನ ಸಮರ್ಪಕ ನಿರ್ವಹಣೆ ಅತ್ಯಂತ ಅವಶ್ಯವಾದ ಅಂಶ. ಶಾರದಾ ಇಲೆಕ್ಟ್ರಿಕಲ್ಸ್ ಉಳ್ಳಾಲ (ರಾಜೀವ ಸಾಲ್ಯಾನ್), ವಿವೇಕ್ ಇಲೆಕ್ಟ್ರಿಕಲ್ಸ್ ಜೆಪ್ಪು, ಗೀತಾ ಇಲೆಕ್ಟ್ರಿಕಲ್ಸ್, ಮಂಗಳಾದೇವಿ, ದೇವು ಇಲೆಕ್ಟ್ರಿಕಲ್ಸ್ ಬೋಳಾರ, ರಾಜ್ ಇಲೆಕ್ಟ್ರಿಕಲ್ಸ್ ಪಾಂಡೇಶ್ವರ, ಜಯರಾಂ ಸೌಂಡ್ಸ್, ಶಂಭು ಶೆಟ್ಟಿ ತಂಡ, ರಾಜ್ ಸೌಂಡ್ಸ್, ಕ್ರಿಸ್ ಇಲೆಕ್ಟ್ರಿಕಲ್ಸ್ – ಮುಂತಾದವರೆಲ್ಲ ಮಂಗಳೂರು ಭಾಗದಲ್ಲಿ ನಾಟಕಗಳಿಗೆ ಹಲವು ದಶಕಗಳಿಂದ ಬೆಳಕು, ದೀಪಾಲಂಕಾರ ನೀಡಿದರೆ ಉಡುಪಿ ಭಾಗದಲ್ಲಿ ದೇವು ಇಲೆಕ್ಟ್ರಿಕಲ್ಸ್ ಅನಿಲ್ ಸೌಂಡ್ಸ್, ಶಂಕರಪುರ, ಉಡುಪಿ ಕುತ್ಪಾಡಿಯ ಭೋಜ ಪೂಜಾರಿ ಮುಂತಾದವರ ಸೇವೆ ಸ್ಮರಣೀಯ.

## ಸೆಟ್ಟಿಂಗ್ಸ್, ಪ್ರಸಾಧನ – ವೇಷಭೂಷಣ

ಪ್ರಸಿದ್ಧ ಮೇಕಪ್‌ಮ್ಯಾನ್ ಬಾರಕೂರಿನ ದಿ। ಬುಡಾನ್ ಸಾಹೇಬರನ್ನು ಕರ್ನಾಟಕ ನಾಟಕ ಅಕಾಡೆಮಿಯೇ ಅವರ ನಿಡುಗಾಲದ ಕಲಾಸೇವೆಗಾಗಿ ಪ್ರಶಸ್ತಿ ನೀಡಿ ಗೌರವಿಸಿದೆ. ಇವರಂತೆಯೇ ಕೃಷ್ಣನಾಯಕ್, ಲಕ್ಷ್ಮಣ ನಾಯಕ್, ಜಿ.ವಿ. ಕಾಮತರ ಪ್ರಸಿದ್ಧ 'ಅರುಣೋದಯ ನಾಟಕ ಸಂಘ, ಬಿ. ವೆಂಕಟ್ರಮಣಾಚಾರ್, ಉಡುಪಿಯ (ನಾಟಕ ಸಭಾ) ದಿ. ಭಾಷಾ ಸಾಹೇಬ್, ಗುಲ್ವಾಡಿ ಆರ್ಟ್ಸ್ ಮಂಗಳೂರು, ಮಂಗಳಾ ಆರ್ಟ್ಸ್ ಜೆಪ್ಪು, ಸುಧಾ ಆರ್ಟ್ಸ್ ಕಲ್ಲಡ್ಕ, ಶಾಂತಾರಾಂ ಕಲ್ಲಡ್ಕರ ಶಾಂತಾರಾಂ ಆರ್ಟ್ಸ್, ಸುವರ್ಣ ಆರ್ಟ್ಸ್ ಮುಲ್ಕಿ, ಎಂ.ಎಸ್. ಆರ್ಟ್ಸ್, ಮಣ್ಣಗುಡ್ಡೆ, ಅಚ್ಚುತ ಕಲ್ಲಾಪು ಅವರ ವಸುಧಾ ಮಂಗಳೂರು, ಸುಧಾ ಆರ್ಟ್ಸ್ ಉಚ್ಚಿಲ, ಜೈಭವಾನಿ ಆರ್ಟ್ಸ್ ಕೈಕಂಬ, ಪೊರ್ಲುಂ ಆರ್ಟ್ಸ್ ಕಳ್ಳಿಗೆ, ಭಾವನಾ ಕಲಾ ಆರ್ಟ್ಸ್ ಪುತ್ತೂರು, ಚಿತ್ರಕಲಾ ಆರ್ಟ್ಸ್ ಅಳಕೆ –ಈ ಸಂಸ್ಥೆಗಳಲ್ಲದೆ ಹಿಂದೆ ದಿ. ಕೆ. ಬಿ. ಭಂಡಾರಿ, ಭಾಸ್ಕರ ಶೆಟ್ಟಿ, ಪೊರ್ಲುಂ ಆರ್ಟ್ಸ್‌ನ ಗಂಗಾಧರ ಕಿರೋಡಿಯನ್, ಪದ್ದಣ ಪ್ರಶಸ್ತಿ ವಿಜೇತ ಪಿ.ವಿ. ಪರಮೇಶ್ ಬಳಿಕ ಈಚಿನ ದಶಕಗಳಲ್ಲಿ ರವಿಕುಮಾರ್ ಸುರತ್ಕಲ್, ಸೋಮನಾಥ್ ಚಿಟ್ಪಾಡಿ, ಸರಸ್ವತಿ ಆರ್ಟ್ಸ್ ಕಲ್ಯಾಣಪುರ, ಕಲಾ ನಿರ್ದೇಶಕ ತಮ್ಮ ಲಕ್ಷ್ಮಣ – ಮುಂತಾದ ಪ್ರತಿಭಾವಂತರು ಈ ರಂಗದಲ್ಲಿ ಸೇವೆ ನೀಡುತ್ತಿದ್ದಾರೆ. ಸುರತ್ಕಲ್ ಜನಾರ್ದನ ಶೆಟ್ಟಿಗಾರರು 'ಸಿಂಗಾರ ಸುರತ್ಕಲ್' ತಂಡಕ್ಕೆ ವಿಶಿಷ್ಟ ವರ್ಣಾಲಂಕಾರ ತಜ್ಞರಾಗಿರುವಂತೆಯೇ ಪರಿಸರದ ನಾಟಕ ವೇದಿಕೆಗಳಿಗೆಲ್ಲಾ ಕೆಲಸ ಮಾಡಿರುವವರು.

ಮೇಕಪ್‌ನ ಬುಡಾನ್ ಬಾಶಾ, ಎಂ. ಮೋಹನರಾವ್, ಎ. ಕೃಷ್ಣ ನಾಯಕ್, ಲಕ್ಷ್ಮಣ ನಾಯಕ್, ರಮಾನಂದ ಶೇಟ್, ಗಿರಿಯಪ್ಪ ಮಾಸ್ಟರ್ ಇಡ್ಯಾ, ಜಯರಾಮ ಶೆಟ್ಟಿ, ಸುದೇಕರ್, ಕೃಷ್ಣಪ್ಪ ಕದ್ರಿ, ಪಿ.ವಿ. ಪರಮೇಶ್, ರವಿಕುಮಾರ್ ಸುರತ್ಕಲ್, ನಾಣಿ ಬಂಟ್ವಾಳ, ಸುರೇಶ್ ಜಿ. ಮಾಸ್ತರ್, ಶರತ್ ಹೊಳ್ಳ ಇವರಂತಹ ಹಲವಾರು ಮಂದಿ ಕಲಾವಿದರಿಗೆ ಮೇಕಪ್ ಮಾಡುವುದರಲ್ಲಿ ಪ್ರಸಿದ್ಧರು.

### ಎ. ಕೃಷ್ಣನಾಯಕ್ (1923–2011)



ಮಂಗಳಾದೇವಿ ದೇವಸ್ಥಾನದ ಪಕ್ಕದಲ್ಲೇ ಮನೆ ಮಾಡಿಕೊಂಡಿದ್ದ ಕೃಷ್ಣನಾಯಕರು ಚಿತ್ರಕಲಾ ಶಿಕ್ಷಣ ಪಡೆದು ಸುರತ್ಕಲ್ ವಿದ್ಯಾದಾಯಿನಿ ಶಾಲೆಯಲ್ಲಿ ಕಲಾ ಶಿಕ್ಷಕರಾಗಿ 1948ರಿಂದ 1979ರ ವರೆಗೆ ದುಡಿದವರು. ಆ ಕಾಲ ದಿಂದಲೇ ಸುರತ್ಕಲ್ ಮಾತ್ರವಲ್ಲದೆ ಅವಿಭಜಿತ ಜಿಲ್ಲೆಯ ನೂರಾರು ಕಡೆ ಸಾವಿರಾರು ಕಲಾವಿದರಿಗೆ ವರ್ಣಾಲಂಕಾರ, ವಸ್ತ್ರಾಲಂಕಾರ ಮಾಡುತ್ತ ಬಂದವರು.

ನಿವೃತ್ತಿಯ ಬಳಿಕ ಅಣ್ಣನನ್ನು ಜೊತೆಗೂಡಿಸಿಕೊಂಡು ಮೇಕಪ್ ವೃತ್ತಿಯನ್ನೇ ಪೂರ್ಣಾವಧಿ ಮಾಡಿದ ಸರಳ, ಸಜ್ಜನ ನಗುಮೊಗದ ವ್ಯಕ್ತಿ (ಈ ಲೇಖಕ ಕೃಷ್ಣ ನಾಯಕರನ್ನೂ ಸಂದರ್ಶಿಸಿದ್ದು 90ರ ದಶಕದಲ್ಲಿ ಮಂಗಳೂರು ಆಕಾಶವಾಣಿ ಪ್ರಸಾರಕ್ಕಾಗಿ).

1950ರಲ್ಲಿ ಮುಂಬಯಿ ಫಿಲ್ಮಿಸ್ತಾನ್ ಸ್ಟುಡಿಯೋದಲ್ಲಿ ನೇಪಥ್ಯ ಕಲೆಯ ಉನ್ನತಾಧ್ಯಯನ, ಕೆಲಸ ಮಾಡಿದರು. ಒಂದು ಕೊಂಕಣಿ ಮತ್ತೊಂದು ತುಳುಚಿತ್ರದ ಕಲಾವಿದರಿಗೂ ಮೇಕಪ್ ಮಾಡಿದ್ದಲ್ಲದೆ ಗುಜರಾಥ್, ಮುಂಬಯಿ, ಕೇರಳ, ತಮಿಳುನಾಡು ಗಳಿಗೂ ಹೋಗಿ ಬೇರೆ ಬೇರೆ ಕಲಾ ತಂಡಗಳಿಗೆ ವರ್ಣಾಲಂಕಾರ ಮಾಡಿದ್ದರು. ತುಳುನಾಡಿನ ಹೆಸರಾಂತ ನಾಟಕಕಾರರಾದ ಯು. ಮಚ್ಚೇಂದ್ರನಾಥ್, ಕೆ.ಬಿ. ಭಂಡಾರಿ, ರಾಮ ಕಿರೋಡಿಯನ್, ಕೆ.ಎನ್. ಟೇಲರ್, ಡಾ. ಸಂಜೀವ ದಂಡೆಕೇರಿ, ಕೊಡಿಯಾಲ್ ಬೈಲ್, ಕಾಪಿಕಾಡ್ ಮುಂತಾದವರ ನಾಟಕ ತಂಡಗಳಿಗೂ ನೇಪಥ್ಯ ಕಲಾವಿದರಾದ ವಿಶಾಲ ಅನುಭವಿ ಅವರು. ರಾಜ್ಯ ನಾಟಕ ಅಕಾಡೆಮಿಯು ಇವರ ಅಮೂಲ್ಯ ಸೇವೆ ಪರಿಗಣಿಸಿ ಅಕಾಡೆಮಿಯ ಗೌರವ ಪುರಸ್ಕಾರ ನೀಡಿ ಸಮ್ಮಾನಿಸಿತ್ತು.

**ದಿ. ಮೋಹನರಾವ್ ಮಣ್ಣಗುಡ್ಡೆ**

ಇವರು ಹಿರಿಯ ತಲೆಮಾರಿನ ಪ್ರತಿ ನಾಟಕ ಕಲಾವಿದರಿಗೆ ಕಡಿಮೆಯೆಂದರೆ ಹತ್ತು – ಹದಿನೈದು ಸಾವಿರ ಬಾರಿ ಬಣ್ಣ ಹಾಕಿದ್ದಾರೆ. ಮುಂದೆ ಅವರ ಮಕ್ಕಳು ಕೂಡಾ ಇದೇ ಕೈಂಕರ್ಯ ಮುನ್ನಡೆಸಿಕೊಂಡು ಬಂದವರು.

**ದಿ। ಚೆನ್ನಪ್ಪ ಸುವರ್ಣ, ಸುವರ್ಣ ಆರ್ಟ್ಸ್ ಮುಲ್ಕಿ**



ಮೊದಲ ಕೋಟಿ ಚೆನ್ನಯ ತುಳುಚಿತ್ರ ವರ್ಣಾಲಂಕಾರ ಖ್ಯಾತಿಯ ದಿ। ಮೂಲ್ಕಿ ಚೆನ್ನಪ್ಪ ಸುವರ್ಣರು ತುಳುರಂಗಭೂಮಿಯ ಇತಿಹಾಸದಲ್ಲಿ ಸ್ಮರಣೀಯರು ಐವತ್ತರ ದಶಕದಿಂದಲೇ ಸುಬ್ರಾಯ ಭಟ್ ಅವರ ಜೊತೆಯಲ್ಲಿ ಮೇಕಪ್ ಕಲಾವಿದರಾಗಿ ಮುಂದೆ 1961ರ ವೇಳೆಗೆ ಮುಲ್ಕಿಯಲ್ಲಿ ಸುವರ್ಣ ಆರ್ಟ್ಸ್ ಎನ್ನುವ ವರ್ಣಾಲಂಕಾರ, ರಂಗಪರಿಕರಗಳ ಸಂಸ್ಥೆಯನ್ನು ಆರಂಭಿಸಿ ಅದರ ಮೂಲಕ ಪ್ರಸಿದ್ಧರಾದರು. ಭಜನೆ ಹಾಡುವುದು, ವಿಶೇಷವಾದ ಕರಡಿ ವೇಷಧಾರಣೆ ಮಾಡಿ ಪರಿಸರದಲ್ಲಿ ಬಾಲ್ಯ ಕಾಲದಿಂದಲೇ ಜನಪ್ರಿಯ ಕಲಾವಿದರಾದವರು. ಕ್ರಮೇಣ ಯಕ್ಷಗಾನ ಮತ್ತು ನಾಟಕಗಳ ಮೇಕಪ್, ಪರದೆ ವಸ್ತ್ರಾಲಂಕಾರ ಮಾಡತೊಡಗಿ ಸುಮಾರು ಐದು ದಶಕ ಕಾಲ ಬಹು ಬೇಡಿಕೆ ಪಡೆದ ಕಲಾವಿದರಾಗಿದ್ದರು. ಕೋಟಿ ಚೆನ್ನಯ ನಾಟಕದ ಪಯ್ಯಬೈದ

ಪ್ರಥಮ ಕೋಟಿ ಚೆನ್ನಯ ತುಳು ಚಿತ್ರ ಚಿತ್ರೀಕರಣ ಸಂದರ್ಭದಲ್ಲಿ
ಕೋಟಿ ಚೆನ್ನಯ ಪಾತ್ರಧಾರಿಗಳೊಂದಿಗೆ ಪ್ರಸಾಧನ ತಜ್ಞ ಚೆನ್ನಪ್ಪ ಸುವರ್ಣರು (1972)

ಮುಂತಾಗಿ ಹಾಗೂ ಚಲನಚಿತ್ರಗಳಲ್ಲಿ ಹಾಸ್ಯಪಾತ್ರದಲ್ಲೂ ಮಿಂಚಿದವರು. ಅವರು ಬೆಳೆಸಿದ ಶಿಷ್ಯರಲ್ಲಿ ಅವರದೇ ಪುತ್ರರಲ್ಲಿ ಓರ್ವರಾದ ಮೂಲ್ಕಿ ಚಂದ್ರಶೇಖರ ಸುವರ್ಣರು ತಂದೆಯ ಬಳಿಕ ಸುವರ್ಣ ಆರ್ಟ್ಸ್‌ನ ಸಾರಥ್ಯವಹಿಸಿ ಬಹುಪ್ರಸಿದ್ಧ ರಂಗಕಲಾವಿದರೂ ರಂಗನಿರ್ಮಾಣ ತಜ್ಞರೂ ಆಗಿ ಮುಂದುವರಿಯುತ್ತಿದ್ದಾರೆ.

**ಪ್ರಸಾದನ ಕಲಾವಿದ ಗಿರಿಯಪ್ಪ ಇಡ್ಯಾ (1950)**



ಸುರತ್ಕಲ್ ಇಡ್ಯದ ಗಿರಿಯಪ್ಪ ಕೃಷಿ ಕಾರ್ಯದೊಂದಿಗೆ ಮೆಟ್ರಿಕ್ ಶಿಕ್ಷಣ ಪಡೆದು ಫ್ಲೆಕ್ಷನ್ ಸಸ್ಪೆನ್‌ಶನ್ ಸ್ಪ್ರಿಂಗ್ಸ್‌ನಲ್ಲಿ ಉದ್ಯೋಗಿಯಾಗಿರುತ್ತಾ ನಾಟಕ, ಯಕ್ಷಗಾನ ಬಯಲಾಟ ನೋಡುವುದು, ಪುಸ್ತಕ ವಾಚನ ಅಭಿರುಚಿಯಿದ್ದು, ಮನು ಇಡ್ಯರ ರಂಗ ನಾಟಕಗಳಿಗೆ ಪರದೆ ಕಟ್ಟುವುದು ಸೆಟ್ಟಿಂಗ್ಸ್, ವಸ್ತ್ರಾಲಂಕಾರ ಮಾಡುತ್ತಾ ನೈಪುಣ್ಯ ಗಳಿಸಿಕೊಂಡು ಮುಂದುವರಿದರು.

1980ರಲ್ಲಿ 'ನಿಲೆದಾಂತಿನ ಪ್ರೇಮ' ನಾಟಕದೊಂದಿಗೆ ಪೂರ್ತಿಪ್ರಮಾಣದ ಪ್ರಸಾಧನಕಾರರಾದರು. 'ಸಿಂಗಾರ ಸುರತ್ಕಲ್' ಈ ತಂಡದ ಬಲಿ, ತ್ರಿಶಂಕು, ಅಮಾಸೆ, ಮುಂತಾದ ನವ್ಯಶೈಲಿಯ ರಂಗವಿನ್ಯಾಸದಲ್ಲೂ ಪರಿಣತಿ ಗಳಿಸಿದರು.

ಮುಂದೆ ಗೋಪಾಡ್ಕರ್‌ರೊಂದಿಗೆ ಮುಖವಾಡ ರಚನೆಗೆ ಜೊತೆಯಾದರು. 1982ರಲ್ಲಿ ಹೂಲಿಶೇಖರ್ ಅವರ 'ದಫನ್' ನಾಟಕದ ನಿರ್ದೇಶನವನ್ನು ಮಾಡಿ ಗಮನ ಸೆಳೆದರು. ಉಡುಪಿಯ ಕೆಮ್ಮೂರು ನಾಟಕ ಸ್ಪರ್ಧೆ, ರಂಗಭೂಮಿ ನಾಟಕ ಸ್ಪರ್ಧೆಯ ಪ್ರಶಸ್ತಿ ವಿಜೇತ ನಾಟಕಗಳಿಗೆ ಚಿಕ್ಕಮಗಳೂರಿನ ಸಮತಾತಂಡದ 'ನಾಗಮಂಡಲ' ನಾಟಕ ಹೀಗೆ ಪ್ರತಿಷ್ಠಿತ ರಂಗತಂಡಗಳಿಗೆ ಪ್ರಸಾಧನಕಾರರಾಗಿ 2011–2012 ಸಾಲಿನ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿಯಂಥ ಹಲವು ಪ್ರಶಸ್ತಿಗಳಿಂದ ಪುರಸ್ಕೃತರು.

### ಗಿರೀಶ್ ಪಲಿಮಾರು (1953)



ಪ್ರಸಾಧನ ಮತ್ತು ವಸ್ತ್ರಾಲಂಕಾರ ವಿನ್ಯಾಸ ಕಲಾವಿದನಾಗಿ ಸುಮಾರು 35 ವರ್ಷಗಳಿಂದ ಮೂಲ್ಕಿಯ ಉತ್ತರ ವ್ಯಾಪ್ತಿಯ ವಿಶಾಲ ತುಳುರಂಗಭೂಮಿಯಲ್ಲಿ ಪ್ರಸಿದ್ಧಿ ಹೊಂದಿರುವವರು ಗಿರೀಶ್. ನಾಟಕ ಕ್ಷೇತ್ರ ಮಾತ್ರವಲ್ಲ, ಯಕ್ಷಗಾನ, ನೃತ್ಯ, ಚಲನಚಿತ್ರ, ಕಿರುತೆರೆ ಧಾರಾವಾಹಿಗಳು, ಸಾಕ್ಷ್ಯಚಿತ್ರಗಳು, ಕಿರುಚಿತ್ರಗಳು ಹೀಗೆ ವ್ಯಾಪಕ ಪ್ರಕಾರಗಳಲ್ಲಿ ನಿರಂತರವಾಗಿ ಕಾರ್ಯನಿರ್ವಹಿಸಿರುವರು. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಪ್ರಸಿದ್ಧಿ ಹೊಂದಿದ ಮೂಲ್ಕಿಯ 'ಸುವರ್ಣ ಆರ್ಟ್ಸ್' ಸಂಸ್ಥೆಯಲ್ಲಿ ಮುಖ್ಯ ಪ್ರಸಾಧನಕಾರ. ಉಡುಪಿ, ದ.ಕ. ಮಾತ್ರವಲ್ಲ ಬೆಂಗಳೂರು, ಮುಂಬಯಿ, ಗುಜರಾತ್, ಚೆನ್ನೈನ ಕಲಾತಂಡಗಳಿಗೆ ಪ್ರಸಾಧನಕಾರರಾಗಿ ಸೇವೆ ಸಲ್ಲಿಸಿರುವುದಲ್ಲದೆ ಉಡುಪಿ ರಂಗಭೂಮಿ ವತಿಯ ನಾಟಕ ಸ್ಪರ್ಧೆಯಲ್ಲಿ ಕುದುರೆಮುಖ ತಂಡದ 'ನಾಗಮಂಡಲ' ನಾಟಕದಲ್ಲಿ ಪ್ರಸಾಧನಕ್ಕಾಗಿ ಪ್ರಥಮ ಪ್ರಶಸ್ತಿ ಮತ್ತು ಕಾಪು 'ರಂಗತರಂಗ' ತಂಡದೊಂದಿಗೆ ಮಡಂತ್ಯಾರ್‌ನಲ್ಲಿ ಜರಗಿದ ಜಿಲ್ಲಾಮಟ್ಟದ ತುಳು ನಾಟಕ ಸ್ಪರ್ಧೆಯಲ್ಲಿ (ಬೊಜ್ಜ ನಾಟಕಕ್ಕೆ) ಪ್ರಥಮ ಪ್ರಸಾಧನ ಪ್ರಶಸ್ತಿ ಗಳಿಸಿರುವರು. ಉಡುಪಿ ಮತ್ತು ದ.ಕ. ಜಿಲ್ಲೆಯ ಹಲವಾರು ಶಾಲಾ ಕಾಲೇಜುಗಳು ಸಂಘಸಂಸ್ಥೆಗಳ ಕಾರ್ಯಕ್ರಮಗಳಿಗೆ ಪ್ರಸಾಧನ ಸೇವೆ ಸಲ್ಲಿಸಿದ್ದಾರೆ.

ಚಲನಚಿತ್ರರಂಗದಲ್ಲಿ ಕೋಟಿ ಚೆನ್ನಯ, ದೇವುಪೂಂಜ, ಶ್ರೀ ನಾರಾಯಣ ಗುರುಸ್ವಾಮಿ ಅಲ್ಲದೆ ಕಿರುತೆರೆ ಧಾರಾವಾಹಿಗಳಾದ 'ಅಮ್ಮ ನೀನಿಲ್ಲದೆ' 'ನೋಡಿ, ನಡೆಯುವುದೇ ಹೀಗೆ', ಕೋಟಿಚೆನ್ನಯ (ಧಾರಾವಾಹಿ), ಅಜನೆ ಕಿರುಚಿತ್ರಗಳಾದ ಸತ್ಯದ ಸಿರಿ, ಶನೀಶ್ವರ ಮಹಾತ್ಮೆ, ಬ್ಯಾರಿ ಭಾಷೆಯ 'ಮಾಮಿ ಮರ್ಮೊಲು' ಮುಂತಾದವುಗಳಿಗೆ ಪ್ರಸಾಧನಕಾರ. 'ಸಾಕ್ಷಿ' ಕಿರುಚಿತ್ರದಲ್ಲಿ ನಟನೆ ಮತ್ತು ಪ್ರಸಾಧನದ ವೈಶಿಷ್ಟ್ಯ.

ಇತ್ತೀಚೆಗೆ ಮಕ್ಕಳ ಕನ್ನಡ ಚಲನಚಿತ್ರ 'ಮೀನಾ' ಮತ್ತು ಕೊಂಕಣಿ ಧಾರಾವಾಹಿ 'ಚಲಿಯೆ ಚತ್ರಾಯ್' ಇವುಗಳಿಗೆ ಪ್ರಸಾಧನ ಕಾರ್ಯ ನಡೆಸಿರುವ ಗಿರೀಶ್ ಪಲಿಮಾರಿನಲ್ಲಿ ಹೈಸ್ಕೂಲು ಶಿಕ್ಷಣದ ಬಳಿಕ ಮುಂಬಯಿಯಲ್ಲಿ ಪದವಿ ಓದಿದವರು ತಾಯ್ನಾಡಿಗೆ

ಹಿಂತಿರುಗಿ ರಂಗಭೂಮಿ ಸೇವೆಯಲ್ಲಿ ತೊಡಗಿ ಮೂಲ್ಕಿಯ ಸುವರ್ಣ ಆರ್ಟ್ಸ್ ತಂಡ ವನ್ನು ಸೇರಿಕೊಂಡು ಪ್ರಸಾಧನಕಾರರಾಗಿ ದಕ್ಷತೆಯಿಂದ ಮೇಲೇರಿದವರು. ಸಾಮಾಜಿಕ ಸಾರ್ವಜನಿಕ ಸೇವೆಯಲ್ಲೂ ನಿರತರು.

**ಮೇಕಪ್‌ಮೇನ್ ಎಂ. ಶ್ರೀನಿವಾಸ ಆಚಾರ್ಯ ಎಡಪದವು**



ಮೂಲತಃ ನಟ, ನಾಟಕಕಾರರಾದ ಎಡಪದವು ಶ್ರೀನಿವಾಸರು 1977ರ ವೇಳೆಗೆ ಬರೆದ ಪ್ರಥಮ ನಾಟಕ 'ಕಾಸ್‌ದ ಕಾರ್ಬಾರ್' (1984) ಅನಂತರ ತಾಂಕನದ ಮಗೆ, ನಮ ಮಾತೆರ್ಲಾ ಒಂಜೇ, ಬಾಡಾಯಿದ ಬದ್‌ಕ್ ಮುಂತಾದ ನಾಟಕಗಳನ್ನು ಬರೆದರು. ಇವುಗಳಲ್ಲಿ 'ತಾಂಕನದ ಮಗೆ (1976) ಇದು ಎಡಪದವು, ಗುರುಪುರ, ನೀರ್ಕೆರೆ ಮುಂತಾದೆಡೆ ಸುಮಾರು 250ಕ್ಕೂ ಮಿಕ್ಕ ಪ್ರದರ್ಶನಗಳ ದಾಖಲೆ ನಿರ್ಮಿಸಿದೆ. 'ರಮ್ಯ ಗೆಳೆಯರ ಬಳಗ ಎಡಪದವು' ಹಾಗೂ 'ಯಶಸ್ವಿ ಕಲಾವಿದರು ಎಡಪದವು' ಮುಂತಾದ ತಂಡಗಳು ಶ್ರೀನಿವಾಸ ನಾಟಕಗಳನ್ನು ಪ್ರಯೋಗಿಸಿದ್ದಾರೆ. ಹೆಚ್ಚಿನ ಕಡೆ ತನ್ನ ನಾಟಕಗಳನ್ನು ಇವರು ಸ್ವತಃ ದಿಗ್ದರ್ಶನ ಮಾಡಿದ್ದಾರೆ.

ಹಿರಿಯ ನಾಟಕಕಾರ ಯು. ಎಂ. ಮ್ಯೊದಿನಬ್ಬರನ್ನು ತನ್ನ 'ರಂಗ ಗುರು' ಎನ್ನುವ ಶ್ರೀನಿವಾಸ್ ಮ್ಯೊದಿನಬ್ಬರ ಪ್ರಸಿದ್ಧ 'ಸೂರ್ಯಕಾಂತಿ' ನಾಟಕದಲ್ಲಿ ಹ್ಯೊಗೆಬಜಾರ್ ಮುಂತಾದೆಡೆ ಹೋಗಿ ಅಭಿನಯಿಸಿದ್ದಾರೆ. ಮೇಕಪ್ ಕಲಾವಿದರಾಗಿ ರೂಪುಗೊಳ್ಳಲು, ಪೌರಾಣಿಕ ನಾಟಕಗಳು, ಸಾಮಾಜಿಕ, ಕಾಲ್ಪನಿಕ ನಾಟಕಗಳ ವರ್ಣಾಲಂಕಾರ ಹೇಗೆ ಮಾಡುವುದೆಂಬುದನ್ನು ಕಲಿಸಿಕೊಟ್ಟವರೇ ಮ್ಯೊದಿನಬ್ಬರು ಎನ್ನುತ್ತಾರೆ ಶ್ರೀನಿವಾಸ ಆಚಾರ್ಯರು. ನಾಟಕ ನಿರ್ದೇಶನದೊಂದಿಗೆ ವರ್ಣಾಲಂಕಾರದಲ್ಲೂ ತನ್ನ ಪರಿಸರದಲ್ಲಿ ಹೆಸರಾದ ಶ್ರೀನಿವಾಸ ಆಚಾರ್ಯರು 'ಶ್ರೀನಿವಾಸ ಮತ್ತು ನಾರಾಯಣ ಪಾರ್ಟಿ' ಎಂಬ ಲಾಂಛನದಲ್ಲಿ ಅಂದಿನ ನಾಟಕಗಳ ಕರಪತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದರು.



**ಬಂಟ್ವಾಳದ ಭಾಸ್ಕರ ಆಚಾರ್ಯ (1954–2018)**

ಬಂಟ್ವಾಳ ಕಳ್ಳಿಗೆ ಪಚ್ಚಿನಡ್ಕದ ದಿ। ಭಾಸ್ಕರ ಆಚಾರ್ಯರು ಕಳ್ಳಿಗೆಯಲ್ಲಿ ಪೊರ್ಲು ಆರ್ಟ್ಸ್ ಸಂಸ್ಥೆಯನ್ನು ಆರಂಭಿಸಿ ಸುಮಾರು ನಾಲ್ಕು ದಶಕಗಳಿಗಿಂತಲೂ ಹೆಚ್ಚು ಕಾಲ ರಂಗಾಲಂಕಾರ, ಪರದೆ, ಪ್ರಸಾಧನ, ವೇದಿಕೆ ನಿರ್ಮಿತಿ ಯಂತಹ ರಂಗಪೂರಕ ಕ್ರಿಯೆಗಳಲ್ಲಿ ತೊಡಗಿದ್ದರು. ಸ್ವತಃ ರಂಗಕಲಾವಿದರೂ ಆಗಿದ್ದ ಇವರು 'ತುಳುವಪ್ಪೆ

ಜೋಕ್ಲು' ಕಲಾಬಳಗ, ಭಾವನಾ ಕಲಾ ಆರ್ಟ್ಸ್ ಪುತ್ತೂರು –ಇಲ್ಲೆಲ್ಲ ಮೇಕಪ್ ಕಲಾವಿದರಾಗಿದ್ದರು. ಕಲಾ ಕೌಸ್ತುಭ ಎನ್ನುವಂತಹ ಸ್ಥಳೀಯ ಪ್ರಶಸ್ತಿಗಳನ್ನು ಪಡೆದ ನಿರಂತರ ಕಲಾ ಸೇವೆಯವರು. ಇತ್ತೀಚೆಗೆ 2018ರಲ್ಲಿ ನಿಧನರಾದರು.

**ಮೇಕಪ್ ಕಲಾವಿದ ಸವ್ಯರಾಜ್ ಕಲ್ಲಡ್ಕ**

ದಿ. ಶಾಂತಾರಾಂ ಕಲ್ಲಡ್ಕರ ಪುತ್ರ ಸವ್ಯರಾಜ್ ತಂದೆಯ ಜತೆಯಲ್ಲೇ ಸಹಾಯಕನಾಗಿದ್ದು ರಂಗ ಚಟುವಟಿಕೆ ಮಾಡಿ ಮೇಕಪ್‌ನಲ್ಲಿ ನುರಿತರು. 'ತುಳುವಪ್ಪೆ ಜೋಕ್ಲು ಕಲ್ಲಡ್ಕ' ತಂಡಕ್ಕೆ ಮಾತ್ರವಲ್ಲ ಊರು, ಪರವೂರಿನ ಶಾಲಾ ಕಾಲೇಜು ಯುವಕ ಸಂಘಗಳ ವಾರ್ಷಿಕೋತ್ಸವ ನಾಟಕಗಳಲ್ಲಿ ದುಡಿದರು. 'ಶಾಂತಾರಾಮ್ ಆರ್ಟ್ಸ್' ಎನ್ನುವ ಸಂಸ್ಥೆಯನ್ನೇ ಕಲ್ಲಡ್ಕದಲ್ಲಿ ನಡೆಸುತ್ತಿದ್ದಾರೆ. ಶಾರದಾ ಆರ್ಟ್ಸ್ ಮಂಜೇಶ್ವರ, ಐಸಿರಿ ಕಲಾವಿದರು ಮಾನಸ ಕಲಾವಿದರು ಮುಂತಾದ ತಂಡಗಳಿಗೆ ಮೇಕಪ್ ಕಲಾವಿದರಾಗಿದ್ದು ಪ್ರಸ್ತುತ 'ಲಕುಮಿ' ತಂಡದಲ್ಲಿದ್ದಾರೆ.

ಹೀಗೆಯೇ ಶೇಖರ್ ಕಾಪಿಕಾಡ್, ಜಯರಾಂ ಸುದೇಕರ್, ದಿನೇಶ್ ಅತ್ತಾವರ್, ಡಿ.ಪಿ. ಶೆಟ್ಟಿ, ರಾಜೇಶ್, ಕೃಷ್ಣಪ್ಪ ತುಂಬೆ, ಸೀತಾರಾಂ ತುಂಬೆ – ಈ ಜೋಡಿ ಬಂಟ್ವಾಳ, ಮೂಡಬಿದ್ರೆ, ಕಾರ್ಕಳ ಪ್ರದೇಶದವರೆಗೂ ನಾಟಕಗಳಿಗಾಗಿ ಕೆಲಸ ಮಾಡಿದ್ದಾರೆ. ಜನಾರ್ದನ ಸುರತ್ಕಲ್, ಪ್ರಭಾಕರ್, ಎಸ್. ರಾಮದಾಸ್, ಬಾಬು ಆಚಾರ್ಯ, ನಾಣಿ ಬಂಟ್ವಾಳ, ಸುರೇಶ್ ಮಾಸ್ಟರ್ – ಹೀಗೆ ಪಟ್ಟಿ ಬೆಳೆಯುತ್ತದೆ.

## ರಂಗಸಜ್ಜಿಕೆ (ಸ್ಟೇಜ್ ಸೆಟ್ಟಿಂಗ್)

ಮೂಲತಃ ಖಾಲಿ ಜಾಗವೇ ರಂಗಭೂಮಿ ಒಬ್ಬ ನಟ, ಒಬ್ಬ ಪ್ರೇಕ್ಷಕ ಇಷ್ಟಿದ್ದರೆ ನಾಟಕ ನಡೆಸಬಹುದು ಎಂದಾತ ಪೀಟರ್ ಬ್ರೂಕ್. ನಟನು ತನ್ನ ಪ್ರದರ್ಶನ ನೀಡಲು ಬಳಸುವ ಜಾಗವೇ ರಂಗ. ರಂಗದಲ್ಲಿ ಮೂಲತಃ ರಂಗಸಜ್ಜಿಕೆ ಎನ್ನುವಂಥದ್ದು ಇರಲಿಲ್ಲ. ಅದು ಇತ್ತೀಚೆಗೆ ಬಂದುದು. ಗ್ರೀಕ್‌ನಲ್ಲಿ ಗುಡ್ಡದ ಕೆಳಗಿನ ವೃತ್ತಾಕಾರವಾದ ಪ್ರದೇಶದಲ್ಲಿ ನಾಟಕವನ್ನು ಮಾಡಲಾಗುತ್ತಿತ್ತು. ಗುಡ್ಡದ ಕೆಳಭಾಗದಿಂದ ಮೇಲ್ತುದಿ ಯವರೆಗೂ ಜನ ಕುಳಿತುಕೊಳ್ಳುತ್ತಿದ್ದರು ಇಂದಿನ ಆಡಿಟೋರಿಯಂಗಳು ಅದೇ ಮಾದರಿಯಿಂದ ಅಭಿವೃದ್ಧಿಗೊಂಡದ್ದು. ಇದನ್ನು ರಂಗಭೂಮಿ ಎಂಬುದಾಗಿ ಕರೆದರು.

14ನೇ ಶತಮಾನದಲ್ಲಿ ಯುರೋಪ್‌ನಲ್ಲಿ ಆಧುನಿಕ ರಂಗಭೂಮಿಯ ಸ್ವರೂಪ ಹುಟ್ಟಿಕೊಂಡಿತು. ರಂಗಭೂಮಿಯ ಹಿಂದುಗಡೆ 'ಪ್ರೆಸ್ಕಿನಿಯನ್' ಎನ್ನುವ ಜಾಗವಿರುತ್ತಿತ್ತು. ಅದರ ಹಿಂದೆ ವೇಷಭೂಷಣ ಮಾಡಿಕೊಳ್ಳುವ ಕೋಣೆ ಈ ರೀತಿಯ ರಂಗಸಜ್ಜಿಕೆ ಗ್ರೀಕ್‌ನಲ್ಲಿತ್ತು. ಆ ಬಳಿಕ ರೋಮ್ ದೇಶ ರಂಗಸಜ್ಜಿಕೆಯನ್ನು ವಿಸ್ತರಿಸಿತು ಅಲ್ಲಿ ಮಧ್ಯ ಯುಗದಲ್ಲಿ ಚರ್ಚ್‌ನ ಪ್ರಾರ್ಥನಾ ಸ್ಥಳದಲ್ಲಿ ನಡೆಯುತ್ತಿದ್ದ ನಾಟಕಗಳು ಕಾಲ

ಕಳೆಯುತ್ತಿದ್ದಂತೆ ಹೊರಗಡೆ ಬಂದವು ನಂತರ ಊರಿನ ಚೌಕಗಳಿಗೆ ಬಂದವು. ಕೆಲವು ಕಡೆ ರಥಗಳು, ಇನ್ನೂ ಕೆಲವು ಕಡೆ ವಿಶಾಲ ಪ್ರದೇಶದಲ್ಲಿ ಸ್ವರ್ಗ, ನರಕ, ಸಮುದ್ರಗಳನ್ನು ಸೂಚಿಸುವ ಪರದೆಗಳನ್ನು ಉದ್ದಕ್ಕೆ ನಿಲ್ಲಿಸಿ ಆ ರಂಗಭೂಮಿಯಲ್ಲಿ ನಾಟಕಗಳನ್ನು ಮಾಡುತ್ತಿದ್ದರು.

ಆದರೆ ನಮ್ಮ ಭಾರತೀಯ ಸಮಾಜದಲ್ಲಿ ಅಂಥ ಸಂಪ್ರದಾಯ ಇರಲಿಲ್ಲ. ಖಾಲಿ ಜಾಗವೇ ರಂಗಭೂಮಿ. ಅವಶ್ಯಕತೆ ಇದ್ದರೆ ಪರಿಸರದ ಚಿತ್ರಣವನ್ನು ಬಳಸಬಹುದೆಂದು ರಂಗಶಾಸ್ತ್ರ ಸೂಚಿಸಿದೆ. ಕರಾವಳಿಯ ಕಲೆ ಯಕ್ಷಗಾನದ ರಂಗಸ್ಥಳದ ಹಿಂಭಾಗ ಚೌಕಿಯಲ್ಲಿ ವೇಷಧಾರಣೆ ಮತ್ತು ರಂಗಸ್ಥಳದ ಮೂರು ಸುತ್ತಿನಲ್ಲೂ ಪ್ರೇಕ್ಷಕರು ಕುಳಿತುಕೊಳ್ಳುವ ವ್ಯವಸ್ಥೆ–ಪ್ರಾಚೀನ ಗ್ರೀಕ್ ರಂಗಭೂಮಿಗೆ ಸಂವಾದಿಯಾಗಿದೆ.

14ನೇ ಶತಮಾನದಲ್ಲಿ ಯುರೋಪ್‌ನಲ್ಲಿ ಆಧುನಿಕ ರಂಗಸಜ್ಜಿಕೆಯ ಸ್ವರೂಪವನ್ನು ನೀಡಿದಾತ ಜರ್ಮನಿಯ ಡ್ಯೂಕ್ (ಜಾರ್ಜ್ ದಿ. 2) ಎನ್ನುವಾತ. ನಾಟಕದ ಅರ್ಥಕ್ಕೆ ಸರಿಹೊಂದುವ ಹಾಗೆ ರಂಗಸಜ್ಜಿಕೆ ಮಾಡಬೇಕು ಎಂದು ಆತ ತಿಳಿಸಿಕೊಟ್ಟ. ಮುಂದೆ ಫ್ರಾನ್ಸ್, ರಶ್ಯಾ, ಜರ್ಮನಿಯಲ್ಲಿ ಇದನ್ನು ಬಳಸಿಕೊಂಡರು. ಗೋಡನ್‌ಕ್ರೇಗ್ ಎನ್ನುವಾತ ನಾಟಕಕ್ಕೆ ತುಂಬಾ ಸಾಂಕೇತಿಕವಾದ ರಂಗಸಜ್ಜಿಕೆಯ ವಿನ್ಯಾಸಗಳನ್ನು ಪರಿಚಯಿಸಿದ. ಅದನ್ನು 'ಕ್ರೇಗ್ ಡಿಸೈನ್' ಎಂದೇ ಕರೆಯುತ್ತಾರೆ. ಈ ಕ್ರಿಯಾತ್ಮಕ ರಂಗಸಜ್ಜಿಕೆ ಎನ್ನುವುದು ಜಗತ್ತಿನಾದ್ಯಂತ ಹರಡಿತು ರಂಗಸಜ್ಜಿಕೆಯನ್ನು ಕೇವಲ ಅಂದಕ್ಕಾಗಿ ಮಾಡದೆ ಅರ್ಥಪೂರ್ಣವಾಗಿ, ನಾಟಕದ ವಸ್ತುವನ್ನು ಧ್ವನಿಸುವಂತೆ, ನಟರಿಗೆ ಅನುಕೂಲಕರವಾಗಿ ರಚಿಸಬೇಕು. ಹೀಗಾಗಿಯೇ ಆ ಕಾಲಕ್ಕೆ ನಿರ್ದೇಶಕನ ಅವಶ್ಯಕತೆ ಬಂದಿತು. ಆಧುನಿಕ ಪ್ರಾಯೋಗಿಕ ರಂಗಭೂಮಿಯಲ್ಲಿ ನಿರ್ದೇಶಕನ ತಜ್ಞತೆ ಮತ್ತು ಪಾತ್ರ ಪ್ರಮುಖವಾಗಿದೆ.

ಆಧುನಿಕ ನಾಟಕಗಳಲ್ಲಿ ಎಲ್ಲಾ ಶೈಲಿಯನ್ನೂ ಪರಿಣಾಮಕಾರಿಯಾಗುವಂತೆ ಪ್ರಯೋಗಿಸುತ್ತ ಬದಲಾಯಿಸುತ್ತಾ ಹೋಗಬೇಕಾಗುತ್ತದೆ (ನೀನಾಸಂ ಪ್ರಾಂಶುಪಾಲ ವೆಂಕಟರಮಣ ಐತಾಳ್ – ಒಂದು ಸಂದರ್ಶನದಲ್ಲಿ).

### ಸ್ಟೇಜ್ ಸೆಟ್ಟಿಂಗ್ ತ್ರಿವಿಕ್ರಮ ತಮ್ಮ ಲಕ್ಷ್ಮಣ



ನಾಟಕಗಳ ದೃಶ್ಯ ಬದಲಾವಣೆಗಾಗಿ ಪರದೆಗಳ ಬಳಕೆಯು ಪಾರ್ಸಿ ರಂಗಭೂಮಿಯ ಕೊಡುಗೆ, ಅವಿಭಜಿತ ದ.ಕ. ಜಿಲ್ಲೆಯ ನಾಟಕಗಳ ಸ್ಟೇಜ್‌ಗಳಲ್ಲೂ ಎಪ್ಪತ್ತರ ದಶಕದವರೆಗೂ (ಕೆಲವೆಡೆ ಅನಂತರವೂ) ಪರದೆಗಳು ಮತ್ತು ಸಾಂಪ್ರದಾಯಿಕ ಸಲಕರಣೆಗಳನ್ನು ಬಳಸಲಾಗುತ್ತಿತ್ತು.

ಮೂಲ್ಕಿಯಲ್ಲಿ ಜನಿಸಿದ ತಮ್ಮ ಲಕ್ಷ್ಮಣ ಮಂಗಳೂರಿನ ಗಣಪತಿ ಶಾಲೆಯಲ್ಲಿ ಕಲಿಯುತ್ತಿರುವ

ವೇಳೆ ಮಂಗಳೂರಿನ ರಂಗಭೂಮಿಯಲ್ಲಿ 'ಅಶೋಕ್ ಗೇಮ್ಸ್ ಕ್ಲಬ್'ನವರು ಪ್ರದರ್ಶಿಸುತ್ತಿದ್ದ ಪಾಂಡೇಶ್ವರರ ನಾಟಕಗಳನ್ನು ನೋಡಿದರು. ರಾಮ್ ಕಿರೋಡಿಯನ್ನರ ನಾಟಕಗಳೂ ನಡೆಯುತ್ತಿದ್ದವು. ಗಾರ್ಡನ್ ಇತ್ಯಾದಿ ದೃಶ್ಯಗಳಿಗೆ ಬೇರೆ ಬೇರೆ ಸೆಟ್ಟಿಂಗ್ ಪ್ರಯೋಗ ವಾಗುತ್ತಿರುವುದನ್ನು ಕಂಡರು. ಶರತ್ ಹೊಳ್ಳ ಎನ್ನುವ ಚಿತ್ರಕಲಾವಿದರು (ಇವರು ಕಿರೋಡಿಯನ್, ಟೇಲರ್ ಮತ್ತಿತರರ ತಂಡಗಳ ನಟರೂ ಕೂಡಾ) ವಿಶೇಷ ದೃಶ್ಯಜೋಡಣೆ ಮಾಡುತ್ತಿರುವುದನ್ನು ಕಂಡರು. ಮೂಲ್ಕಿಯಲ್ಲಿ ಆವೇಳೆ ಬಿಲ್ಲವ ಸಂಘದ ಆಶ್ರಯದಲ್ಲಿ ವರ್ಷಂಪ್ರತಿ ಬೇರೆ ಬೇರೆ ನಾಟಕಕಾರ ನಾಟಕಗಳ ಪ್ರದರ್ಶನವಿತ್ತು. ಮಂಗಳೂರಿನ ಜಿ.ವಿ. ಕಾಮತರ 'ಅರುಣೋದಯ ಕಲಾವಿಹಾರ' ಎಂಬ ಸಂಸ್ಥೆಯ ಒಂದು ಶಾಖೆ ಮೂಲ್ಕಿಯಲ್ಲೂ ಇತ್ತು. ಇವರು ನಾಟಕಗಳನ್ನು ಅಣಿಗೊಳಿಸುತ್ತಿದ್ದರು. ತಮ್ಮ ಲಕ್ಷ್ಮಣರು ಶರತ್ ಹೊಳ್ಳರ ನೆರವು ಪಡೆದು ಮೂಲ್ಕಿಯಲ್ಲಿ ತನ್ನ 'ಸತ್ಯ ಮುನಿೀಂಡಾ?' (ಸಂಗೀತ ಮಂಗಳೂರಿನ ಅಶೋಕ್–ಚರಣ್. ನಿರ್ದೇಶನ : ರಾಘವ ಉಳ್ಳಾಲ್) ನಾಟಕದ ಪ್ರಥಮ ಪ್ರಯೋಗಕ್ಕೆ ಹೊಸ ಸೆಟ್ಟಿಂಗ್ ಬಳಸಿದರು. ಅದು ತುಂಬ ಪರಿಣಾಮಕಾರಿಯಾಯಿತು.

ಮುಂದೆ 'ಸ್ಟೇಜ್ ಸೆಟ್ಟಿಂಗ್'ಗಾಗಿ ಮೂಲ್ಕಿ, ಮಂಗಳೂರಿನವರು ತಮ್ಮಲಕ್ಷ್ಮಣರನ್ನೇ ಆಹ್ವಾನಿಸತೊಡಗಿದರು. ಧ್ವನಿ ಬೆಳಕು, ರಂಗ ಪರಿಕರ ಜೋಡಣೆ, ದೃಶ್ಯವಿನ್ಯಾಸದಲ್ಲಿ ತಮ್ಮರು ಬಹುಬೇಗನೇ ತಜ್ಞರಾದರು. ಎಲ್ಲೆಲ್ಲೂ ಬೇಡಿಕೆ ಬಂತು. ಮೂಲತಃ ನಾಟಕ ರಚನೆ, ಸ್ತ್ರೀ ಪಾತ್ರ, ಬಳಿಕ ಪುರುಷಪಾತ್ರದ ನಟರಾದರೂ, ಜನ ಬಯಸಿದ್ದು ಇವರನ್ನು ಸ್ಟೇಜ್ ಸೆಟ್ಟಿಂಗ್ ಮಾಡಬೇಕೆಂದು ಹೀಗಾಗಿ ಅದರಲ್ಲೇ ತೊಡಗಿಕೊಂಡರು. ಇಡೀ ರಂಗ ಮಂಚದ ಅನುಭವಿಯಾದುದರಿಂದ ಬಹುಪಾಲು ತಂಡಗಳ ನಾಟಕ ಸಾಂಸ್ಕೃತಿಕ, ಧಾರ್ಮಿಕ ಕಾರ್ಯಕ್ರಮ ವೇದಿಕೆ ನಿರ್ಮಾಣ ಎಲ್ಲದಕ್ಕೂ ಬೇಡಿಕೆ ಪಡೆದರು. ಈಚಿನ ವರ್ಷಗಳಲ್ಲಿ ತುಳುಚಿತ್ರರಂಗ ಭರದಿಂದ ಚಿತ್ರ ನಿರ್ಮಾಣಕ್ಕೆ ತೊಡಗಿದಾಗ, ಇಲ್ಲೂ ಕಲಾ ನಿರ್ದೇಶಕರಾಗಿ ಬೇಡಿಕೆಯುಳ್ಳವರು ತಮ್ಮಲಕ್ಷ್ಮಣ.

ಮೂಲ್ಕಿಯ 'ಸುವರ್ಣ ಆರ್ಟ್ಸ್'ನ ಚೆನ್ನಪ್ಪ ಸುವರ್ಣರು ಮತ್ತು ಯಕ್ಷಗಾನ, ನಾಟಕದವರು 'ಏ ತಮ್ಮಾ ಇಲ್ಲಿ ಬಾ' ಎನ್ನುವ ಶೈಲಿಯೇ ಬಲವಾಗಿ ಲಕ್ಷ್ಮಣನಾಗಿದ್ದ ತಾನು 'ತಮ್ಮ ಲಕ್ಷ್ಮಣ' ಎನಿಸಿದೆ ಎನ್ನುತ್ತಾರವರು. ಮುಲ್ಕಿ ಹಾಗೂ ಮಂಗಳೂರಿನ ಡಾನ್‌ಬಾಸ್ಕೋ ದಲ್ಲಿ 'ಸತ್ಯ ಮುನೀಂಡಾ?' ಸಿನಿಮಾದ ಪ್ರಯೋಗಿಸಲ್ಪಟ್ಟಿತ್ತು. ಅದನ್ನು ವೀಕ್ಷಿಸಿದ ಡಾ। ರಿಚಾರ್ಡ್ ಉತ್ಸಾಹಿತರಾಗಿ ಈ ನಾಟಕವನ್ನು ಪುರಭವನದಲ್ಲಿ ಟಿಕೇಟ್ ನಾಟಕವಾಗಿ ಪ್ರದರ್ಶಿಸಬಯಸಿದರು. ರಾಘವ ಕೆ. ಉಳ್ಳಾಲರು ತಿದ್ದಿ, ತೀಡಿ, ನಿರ್ದೇಶಿಸಿದ 1976ರ 'ಸತ್ಯ ಮುನೀಂಡಾ? ಮಾದರಿಯಲ್ಲಿ ಪ್ರಯೋಗಿಸಲ್ಪಟ್ಟು ಅಪಾರ ಜನಮೆಚ್ಚುಗೆ ಪಡೆಯಿತಂತೆ.

ಉಡುಪಿ, ಮುಂಬಯಿಯ ನೇಪಥ್ಯ ಕಲಾವಿದ ವಿಶ್ವೇಶ್ವರ ಪರ್ಕಳ, ಜನಾರ್ದನ ಹಾವಂಜೆ, ದಿನೇಶ್ ಅಮೀನ್ ಕದಿಕೆ ಮುಂತಾದವರು ಕೂಡಾ ಹವ್ಯಾಸಿ ರಂಗಭೂಮಿಯಲ್ಲಿ ರಂಗಪರಿಕರ ಕ್ಷೇತ್ರದಲ್ಲಿ ಹೆಸರಾಗುತ್ತಿದ್ದಾರೆ.

## ಗೀತ ರಚನಾಕಾರರು



ಇವರಲ್ಲಿ **ಎಮ್.ಕೆ. ಸೀತಾರಾಮ್ ಕುಲಾಲರದು** ದೊಡ್ಡ ಹೆಸರು. ರಾಧಾಕೃಷ್ಣ ರಾಯರು ತನಗೆ ಸಂಗೀತದ ಟ್ಯೂನ್‌ಗೆ ಸರಿಯಾಗಿ ಹಾಡು ಬರೆಯಲು ಕಲಿಸಿ ಕೊಟ್ಟವರು ಎಂದು ಕುಲಾಲರು ಸ್ಮರಿಸಿಕೊಳ್ಳುತ್ತಾರೆ. ತುಳು, ಕನ್ನಡ ನಾಟಕಗಳಿಗೆ ನಾಲ್ಕೂರಕ್ಕೂ ಮಿಕ್ಕ ಗೀತೆಗಳನ್ನು ಬರೆದವರು ಕುಲಾಲ್ ಮುಂದೆ ತುಳು ಸಿನೆಮಾಗಳಿಗೂ ಹಾಡು ರಚಿಸಿಕೊಟ್ಟರು. ಕೆಮ್ತೂರು ದೊಡ್ಡಣ್ಣ ಶೆಟ್ಟಿ ವಿಶುಕುಮಾರ್, ಬಿ. ಭೋಜ ಸುವರ್ಣ, ರಾಮ ಕಿರೋಡಿಯನ್, ಕೆ. ಬಿ. ಭಂಡಾರಿ, ಸೋಮಶೇಖರ ಪುತ್ರನ್, ವಿಜಯಕುಮಾರ್, ಉದ್ಯಾವರ ನಾರಾಯಣ ಗಾಣಿಗ, ಯಶವಂತ ಬೋಳೂರು, ಯು. ಮಚ್ಚೇಂದ್ರನಾಥ್, ಮಚ್ಚೇಂದ್ರನಾಥ ಪಾಂಡೇಶ್ವರ್, ರಾಘವ ಉಳ್ಳಾಲ್, ಎಂ. ಎಸ್. ಇಬ್ರಾಹಿಂ, ಅಮೃತ ಸೋಮೇಶ್ವರ, ಕೋಡುಭೋಜ ಶೆಟ್ಟಿ, ಎಂ. ಗಣೇಶ್ ರೈ, ರತ್ನಾಕರ ಕಾವೂರು, ಜೋನ್, ಕೆ.ಕೆ. ಗಟ್ಟಿ, ಕುದ್ಕಾಡಿ ವಿಶ್ವನಾಥ ರೈ, ಮನು ಇಡ್ಯಾ, ಹುಸೈನ್ ಕಾಟಿಪಳ್ಳ, ದಿ। ಭಾಸ್ಕರ ನೆಲ್ಲಿತೀರ್ಥ, ಶಶಿರಾಜ್ ಕಾವೂರು, ಆರ್ಕೆ ಉಳ್ಳಾಲ್, ವಿಜಯಕುಮಾರ್ ಕೊಡಿಯಾಲ್‌ಬೈಲ್, ಟಿ. ದಿನೇಶ್ ರಾವ್ ಅಗರಿ ಹಾಗೂ ನಗರ, ಗ್ರಾಮಾಂತರ ಶಾಲೆ ಕಾಲೇಜುಗಳ ಶಿಕ್ಷಕ ಬಳಗದಂತಹ ನೂರಾರು ಮಂದಿ ನಾಟಕಗಳಿಗೆ ಗೀತೆಗಳನ್ನು ಬರೆದವರಿದ್ದಾರೆ.



**ಶೇಖರ್ ಶೆಟ್ಟಿ ಹ್ಯೊಗೆಬೈಲ್** ಇವರು ಕಳೆದ 50 ವರ್ಷಗಳ ಹಿಂದಿನಿಂದಲೂ ತುಳುನಾಟಕಗಳಿಗೆ ಹಾಡು ಗಳನ್ನು ಬರೆಯುತ್ತಿರುವವರು. ಎ.ಕೆ. ವಿಜಯ್ ಹಿನ್ನೆಲೆ ಸಂಗೀತದಲ್ಲಿ ಇವರು ಒಮ್ಮೊಮ್ಮೆ ಸ್ವತಃ ಗಾಯಕ ರಾಗಿಯೂ ಕೆಲಸ ಮಾಡಿದ್ದು ಇತ್ತೀಚಿನ ಗಂಗಾಧರ ಕಿರೋಡಿಯನ್‌ರ ನಾಟಕಗಳವರೆಗೆ ಸುಮಾರು 200ಕ್ಕೂ ಮಿಕ್ಕಿ ಪದ್ಯ ರಚನೆ ಮಾಡಿದವರು, ರಂಗನಟರೂ ಆಗಿರುವರು.

# ಹಳೆಗಾಲದ ಕೆಲವು ತುಳು ನಾಟಕಗಳ ಪದ್ಯಗಳು

**ನಾಟಕ : ಮುತ್ತುನ ಮದ್ಮೆ**
**ನಾಟಕಕರ್ತರು ಹಾಗೂ ಗೀತೆ ಬರೆದವರು : ಕೆಮ್ತೂರು ದೊಡ್ಡಣ್ಣ ಶೆಟ್ಟಿ**

ಲಕ್ಕ್‌ಲೆಯೇ ಮಾಮೋ । ಮೋನೆ । ದೆಕ್ಕ್‌ಲೆಯೇ ಮಾಮೋ ।
ಕಕ್ಕೆಲು ಪಕ್ಕಿಲು ಕಿಲಿಕಿಲಿ ಯಿಂದ್‌ದ್ । ಲಕ್ಕ್‌ಲೆ ಲಕ್ಕ್‌ಲೆ ಯಿಂದ್‌ದ್ ಪಣ್ಪಾ ।
ಅಕ್ಕನ ಕಾಫಿ ತಯಾರಾಂಡ್ । ದೆಕ್ಕ್‌ಲೆ ಕೂಲಿ ಓ–ಮಾಮೊ ॥ ಲಕ್ಕ್‌ಲೆಯೇ ॥ 1 ॥
ಗಾಳಿ ಬೀಜುಂಡು । ಮಾಮೋ । ಮುಗಲ್ ಪಾರುಂಡೂ ॥
ಬೇಲಿಡ್ ಮರಟ್ಟ್ । ಕೀ ಕೀ ಗುಟ್ಟುವ । ಕೋಗಿಲೆ ಗಿಳಿಕುಳು ಕೂ, ಕೂ ಇನ್ಪಾ ।
ಮೂಡೊಂದು ಬತ್ತೆರ್ । ಸೂರ್ಯ ದೇವೆರ್ । ನಾಡೊಂದು
ಬತ್ತೆರ್ ಇರೆನ್ ಮಾಮೋ ॥ 2 ॥
ಬರ್ಸಲ ಬತ್ತ್‌ಂಡ್ । ಮಾಮೋ । ದೆಂಬುಲ ಕಾಯಿಂಡ್ ॥
ಬರ್ಸಲ ಬತ್ತ್‌ದ್, ದೆಂಬುಲ ಕಾಯಿದ್, ಭಾರತ್ ಭೂಮಿಡ್ ಬುಲೆಸಲೆ ಹೆಚ್ಚಡ್ ॥
ಆರ್ಥಿಡ್ ಪಣ್ಕಾ ನಮಲಾ ಇನಿಕ್ಕ್, ಸ್ವತಂತ್ರ ಭೂಮಿಗ್ ಜೈ ಜೈ ಮಾಮೋ ॥ 3 ॥

**ನಾಟಕ : ಸತ್ಯದ ಬೊಲ್ಪು ನಿತ್ಯಲಾ ನಲಿಪು**
**ನಾಟಕಕರ್ತರು ಹಾಗೂ ಗೀತೆ ಬರೆದವರು : ಬಿ. ರಾಮ ಕಿರೋಡಿಯನ್**

ಸತ್ಯದಾ ಬೊಳುಪು । ನಿತ್ಯಲಾ ನಲಿಪು
ಶಾಂತಿನೆ ಸಂಪಲಿಪು । ಮನಸ್ಸೇ ....
ನೀತಿಡೇ ಈ ನಡಪು ॥ ಅನುಪಲ್ಲ ॥
ನಿರ್ಮಲಾತ್ಮೊಡು । ಚಂಚಲ ದಾಯೆ ।
ಧರ್ಮ ಪ್ರೀತಿಡ್ । ಸಂಶಯ ದಾಯೆ ॥
ಶಾಂತಿನ್ ಸಂಪಲಿಪು ॥ ಮನಸ್ಸೇ ॥
ನೀತಿಡೇ ಈ ನಡಪು ॥ ಪಲ್ಲವಿ ॥
ಸತ್ಯ ತ್ಯಾಗದ । ಸತ್ವನೆ ಶೀಲ ।
ನಿತ್ಯ ಒರಿವುನ । ಪ್ರೀತಿ ವಿಶಾಲ ॥
ಶಾಂತಿದ ತನು ಬೊಳುಪು ॥ ಮನಸ್ಸೇ ॥
ಸಾಸ್ವಿತ ಸಂಪಲಿಪು ॥ 1 ॥
ಮರ್ಲ್–ಪೊರ್ಲುದ । ಮಾಯದ ಮೋಹ ।
ಸ್ವಾರ್ಥ ಸಾಧನೆ । ಮೋದಸ ಸ್ನೇಹ ॥
ಶಾಂತಿನೆ ಅವು ತಲೆಪು ॥ ಮನಸ್ಸೇ ॥
ಶೋಕದ ಫಲ ಬುಲಿಪು ॥ 2 ॥

**ನಾಟಕ : ತೆಲ್ಪೆರೆ ಕಲ್ಪಿ**
**ನಾಟಕ, ಪದ ಬರೆತಿನಾರ್ : ಮಚ್ಚೇಂದ್ರನಾಥ ಪಾಂಡೇಶ್ವರ್**

ಬುಲ್ತುದಾ ನಮ ಬನ್ನಗ ।
ಬುಲಿಪುವೆರ್ ನಮ ಪೋನಗ ।
ಉಂದು ಪೋಪಿ –ಬರ್ಪಿ ಜಾತ್ರೆ ।
ಬದ್‌ಕೇ ನಾಲ್ ದಿನಾ –
ಈ ನಾಲ್ ದಿನೊನು ತೆಲ್ತೊಂದು ದೆಪ್ಪಿ ।
ತೆಲ್ಪೆರೆ ಕಲ್ಪಿ –ತೆಲ್ಪಯರೆ ಕಲ್ಪಿ ॥ 1 ॥ ತೆಲ್ಪೆರೆ ಕಲ್ಪಿ ॥

ಆಸೆನೆ ದುಃಖೊಗು ಮೂಲ ।
ಆಸೆ ಮನ್ಪಡೇ....
ಬಯಕಿನವು ತಿಕ್ಕುಜಿ ಮೂಲು ।
ಯೆತೆ ದೆಪ್ಪಡೇ...
ಇತ್ತಿನೆಟ್ ಸುಖೊಟು ಬದ್ಕೆರೆ ಕಲ್ಪಿ ॥ 2 ॥ ತೆಲ್ಪೆರೆ ಕಲ್ಪಿ ॥

ಇನಿ ಉಲ್ಲ ಎಲ್ಲೆ ಪೋಪ ।
ಸೃಷ್ಟಿ ಮಲ್ತಿ ದೇವೆರೆನ್ ಸುಗಿಪುನು ಏಪ?
ಬೊಡ್ಚಿ ನಂಜಿ–ನರಕಡೆ ಕೋಪ ।
ಪೋನಗ ತುಂಬೊಂದು ಪೋವಡೆ ಪಾಪ ।
ಕಣನೀರ್ ಒಚ್ಚೊಂದು ಒಚ್ಚಿದ್ ಉಪ್ಪಿ ॥ 3 ॥ ತೆಲ್ಪೆರೆ ಕಲ್ಪಿ ॥

**ನಾಟಕ : ಎಂಕ್‌ಲಾ ಮದ್ಮೆ ಆವೊಡು**
**ನಾಟಕ, ಪದ ಬರೆತಿನಾರ್ : ಯು. ಮಚ್ಚೇಂದ್ರನಾಥ್**

ಮದಿಮೆ ಒಂಜಿ ಆವೊಂಡುಂದು ಯಾನ್ ಉಲ್ಲೆಯೆ ।
ಆಸೆ ಪೂರ ಕಟ್‌ದ್ ಯಾನ್ ಸೋತ್‌ದ್ ಪೋಯೆಯೆ ॥
ಆನ್ ಯಾನ್ ಸೋಕು ಇಜ್ಜಿ ದಾದ ಕಡಮೆಯೇ ।
ರೂಪ ಉಂಡು ಮನ್ಮಥನಂಚ ದಾಯೆ ಪೋಡಿಯೆ ॥ 1 ॥

ರೂಪದ ಪೊನ್ನು ಕಲ್ತಿನ ಪೊನ್ನು ಔಲ ಆವುಯೆ ।
ಕೂಲಿದ ಪೊನ್ನು ಬೇಲೆದ ಪೊನ್ನು ಯೆರ್ಲಾ ಆವುಯೆ ॥ 2 ॥

ಮದಿಮೆ ಆದ್ ಕಂಡನಿ ಬೊಡೆದಿ ಪೋಪುನ ತೂಲೆಯೆ ।
ಜನಕುಲು ಪೂರ ನಂಜಿ ಕಿಚ್ಚಿಡ್ ತೆಲ್ಪುನ ತೂಲೆಯೆ ॥ 3 ॥

**ನಾಟಕ : ಮಣ್ಣ್‌ದ ಮಗಲ್ ಅಬ್ಬಕ್ಕ**

**ನಾಟಕ, ಪದ ಬರೆತಿನಾರ್ : ಯಮ್.ಕೆ. ಸೀತಾರಾಮ ಕುಲಾಲ್**

ಅಬ್ಬಕ್ಕೆ :
ಕಲ್ಲಾದ್ ಕುಲ್ಲಿಯನೆ ದಾಯೆ ಭಗವಂತಾ?
ಕೆಲ್ಲಾದ್ ಕುತ್ತುನೆನ್ ತಾಂಗ್‌ದ್‌ಲಾ ವಾ ಪಂತ?
ತೆಲಿಕೆ ನಲಿಕೆಡ್ ಮೆರೆಯಿನ ತುಳುನಾಡ್ ।
ಪರದೇಶಿ ಪಾಪಿಲೆನ ಪಗೆಕಿನಿ ಬಲಿಯಾಂಡ್ ।
ಕಾಪುನ ಜನಮಾನಿ ಉರಿಪಾಡ್ದ್ ಪೊತ್ತಾಂಡ್ ।
ಸೊರ್ಕುಡು ಸಿರ್ಕ್‌ದ್ ಮಣ್ಣ್‌ಡ್ ಬೊನ್ಯಾಂಡ್ ॥ 1 ॥
ಬಗೆ ಬಗೆತ ಆಸೆಲೆಡ್ ಬರ್ಪರೋ ಏತೋ ।
ದಗೆ ಮಲ್ತ್ ಪೊಪುನಂಚಿ ಜನೆಮಾನಿ ತೂತ ।
ಒರಿತ್ ಮಟ್ಟೆಲೆಗ್ ಪಾಡ್ ಸೋಮನಾಥ ।
ಯಾನಿತ್ತೆ ನಟ್ಟೊನುವೆ ತುಳುನಾಡ್ ಮಾತ ॥ 2 ॥

**'ಉಳ್ಳಾಲದ ರಾಣಿ ಅಬ್ಬಕ್ಕ' ಅತ್ತ್‌ಂಡ 'ವಿಟ್ಲದ ವೀರವರ್ಮೆ' ನಾಟಕೊದ ಪದ :**

**ನಾಟಕ, ಗೀತೆ ರಚನೆ : ಕೆ.ಬಿ. ಭಂಡಾರಿ**

**ಸುಬ್ಬೆ :** ಲಂಬು ಕೊಡಿ ಬಚ್ಚಿರೆ
ದೊಂಬು ಬಾಯ್ದು ಲತ್ತಿರೆ
ಕುಂಬು ಕುಜುಂಬದಾಂತಿನ
ಲಂಬು ಕೊಡಿ ಬಚ್ಚಿರೆ
ಅಂಬಿ ನೀರ್ ಚೇತದ್
ದೊಂಬಿ ನೀರ್ ಮೈತ್‌ದ್
ಕಂಬ ಕಾರ್ ನಡ್‌ದ್ ಭಾರಿ
ಬಂಜೊಡಾಯಿ ಬಚ್ಚಿರೆ
ಮದ್‌ಮೆ ಕಜಂಬು ಪಂಚತಿಗೆ
ಪೆದಿನ ಸುದ್ದೊ ಸಾವು ಬೊಜ್ಜ
ಪುದರ್ ದೀಪಿ ಗೌಜಿಲೆಗ್
ಎದುರು ಬೋಡ್ ಬಚ್ಚಿರೆ
ಊರ ದೈವ ದೇವೆರೆಗ್
ಪೂರ ಬೂತ ಕುಲೆಕುಲೆಗ್
ಬಾರಿ ಮಾಟ ಮಂತ್ರೊಲೆಗ್
ಎದುರು ಬೋಡು ಬಚ್ಚಿರೆ

ಖಾರ ಗರಮು ಮುಂಡೊಲಿ
ತೋರ ನರಂಬು ಪಂಚೊಲಿ
ಸಾರ ಗುಣತ ಸತ್ವ ಇತ್ತಿ
ಬಾರಿ ಪೊರ್ಲು ಲತ್ತೊಲಿ

**ಮೀಸೆಮಾರು :** ಏರ್ ದಾನೆನೇ ಬಗ್‌ಲಡ್
ಯಾನ್ ದಾಲಾ ಕೇನಯೆ
ಬಾರಿ ಗುಡ್ಡೆನೆ ಜರಿಯಡ್
ಯಾನ್ ದಾಲಾ ಪೋಡ್ಯಯೆ
ಬುರ್ಡೆಡಿತ್ತಿ ಪೊಡಿನ್ ದೊರ್ತ್‌ದ್
ಭಾರಿ ಜೋರ್‌ಡೇ ಒಯಿಪುವೆ

**ಕವಾಲಿ :** ಪೊಡಿ ಬಾರಿ ಎಡ್ಡೆ ಜೀವೊಗು
ತಡೆದಾಂತಿನ ಕಡು ಸೀತೊಗು
ಪುಡೆ ಬಾಪುನ ನಡು ಬೇನೆಗ್
ಕಡು ಬೇನೆದ ಪರ ಸೀಕ್‌ಗ್

## ಸಂಗೀತ ಸಂಯೋಜನೆ / ಸಂಗೀತ ನಿರ್ದೇಶನ

### ರಾಧಾಕೃಷ್ಣ ರಾವ್ (1932)



ಹಿರಿಯ ತಲೆಮಾರಿನ ಇವರು ಮಂಗಳೂರು ಭಾಗದಲ್ಲಿ ಅತ್ಯಂತ ಪ್ರಸಿದ್ಧ ಸಂಗೀತ ನಿರ್ದೇಶಕರು. ಕೋಕಿಲ ಆರ್ಟ್ಸ್ ಎಂಬ ಸಂಗೀತ ತಂಡವನ್ನು ನಡೆಸುತ್ತಿದ್ದರು. (ಇದೇ ತಂಡದ ವ್ಯವಸ್ಥಾಪಕರು ನಾರಾಯಣ ಶೆಣೈ ಎಂಬವರು.) ರಾಧಾಕೃಷ್ಣ ರಾಯರು ಗಣಪತಿ ಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿದ್ದು ನಾಟಕ, ರಂಗಭೂಮಿಯ ಪರಿಪೂರ್ಣ ಜ್ಞಾನವುಳ್ಳವರಾಗಿದ್ದು ಸಂಗೀತ ಶಿಕ್ಷಕರಾಗಿ ಅನೇಕ ಶಿಷ್ಯರನ್ನು ಸಿದ್ಧಗೊಳಿಸಿದ್ದಲ್ಲದೆ ಶಾಸ್ತ್ರೀಯ ಪರಿಕರಗಳೊಂದಿಗಿನ ಇವರ ಕೋಕಿಲ ಸಂಗೀತ ಬಳಗ ಮಂಗಳೂರಿನ ಎಂ.ಕೆ. ಸೀತಾರಾಮ್ ಕುಲಾಲ್‌ರಂತಹ ಪ್ರಮುಖ ನಾಟಕಕಾರರ ರಂಗಪ್ರದರ್ಶನಗಳಿಗೆ ಸಂಗೀತ ಸಂಯೋಜನೆ ಮತ್ತು ಹಿನ್ನೆಲೆ ಸಂಗೀತ ಒದಗಿಸುತ್ತಿದ್ದರು.

ಮಂಗಳೂರು ಉರ್ವ ಮಾರಿಗುಡಿ ಸಮೀಪ ವಾಸವಿದ್ದ ರಾಧಾಕೃಷ್ಣರಾಯರು ರೇಡಿಯೋದಲ್ಲಿ ಪ್ರಸಾರವಾಗುತ್ತಿರುವ ಶಾಸ್ತ್ರೀಯ ಸಂಗೀತವನ್ನು ಆಲಿಸುತ್ತಾ ಅದರ ರಾಗ, ತಾಳಗಳನ್ನು ತನ್ನಷ್ಟಕ್ಕೆ ತಾನೇ ಅಭ್ಯಾಸ ಮಾಡಿಕೊಂಡು ಪರಿಣತಿ ಗಳಿಸಿದರು. ಮಂಗಳೂರು ರಥಬೀದಿಯ ಸಂಗೀತೋಪಕರಣ ದುರಸ್ತಿಕಾರ ಪದ್ಮಪ್ಪ ಎಂಬವರಿಂದ ತನಗೇ ಬೇಕಾದ ರೀತಿಯ ವಿನ್ಯಾಸದ ಹಾರ್ಮೋನಿಯಂ ರೂಪುಗೊಳಿಸಿ ಸಂಗೀತ ಸಾಧನೆ ಮುಂದುವರಿಸಿದರು. ಗಣಪತಿ ಶಾಲೆಯಲ್ಲಿ ಅವರ ವಿದ್ಯಾರ್ಥಿಯಾಗಿದ್ದವರು ಎಮ್. ಕೆ. ಸೀತಾರಾಮ್ ಕುಲಾಲ್. ರಾಧಾಕೃಷ್ಣರಾಯರು ಪ್ರಥಮವಾಗಿ ಹಿನ್ನೆಲೆ ಸಂಗೀತ ನೀಡಿದ್ದು ಕುಲಾಲರ 'ದಾಸೀಪುತ್ರ', ಕನ್ನಡ ನಾಟಕಕ್ಕೆ. ಇದಕ್ಕೆ ಗೀತೆ ಬರೆಯುವವರು ಅಕಸ್ಮಾತ್ ತಪ್ಪಿಹೋದಾಗ ಕುಲಾಲರೇ ಸ್ವತಃ ಬರೆಯಬೇಕಾಯಿತು. ಅವರ ತಂದೆ ಸಾಹಿತ್ಯ ತಿದ್ದಿಕೊಟ್ಟರು. ಮುಂದೆ ಕುಲಾಲರ 'ರುದ್ರವೀಣೆ' ನಾಟಕದ ಸಂದರ್ಭಕ್ಕೆ ಸಂಗೀತದ ಟ್ಯೂನ್‌ಗೆ ಸರಿಯಾಗಿ ಪದ್ಯರಚನೆ ಮಾಡುವುದನ್ನು ರಾಧಾಕೃಷ್ಣ ರಾಯರೇ ಕಲಿಸಿಕೊಟ್ಟರು. ರಂಗಪ್ರಯೋಗದಲ್ಲಿ ಅದರ ಆರೂ ಹಾಡುಗಳೂ 'ಹಿಟ್' ಆದುವು.

ಅಲೋಶಿಯಸ್ ಹೈಸ್ಕೂಲಿನ ಕನ್ನಡ ಪಂಡಿತ ಎಸ್.ಎಸ್. ಐತಾಳರು ಕಿರೋಡಿಯನ್‌ರ ತುಳುನಾಟಕಗಳಿಗೆ ಆರಂಭದಲ್ಲಿ ತುಳುಪದ್ಯ ರಚನೆ ಮಾಡುತ್ತಿದ್ದರು. ಕ್ರಮೇಣ ಅವರು ರಾಧಾಕೃಷ್ಣರಾಯರನ್ನು ಸಂಗೀತಕ್ಕೆ, ಶಿಷ್ಯ ಕುಲಾಲರನ್ನು ತುಳು ಗೀತೆ ಬರೆಯುವುದಕ್ಕೆ – ಹುರಿದುಂಬಿಸಿದರು. ಕುಲಾಲರು ಬರೆದರು, ರಾಧಾಕೃಷ್ಣ ರಾವ್ ಹಿನ್ನೆಲೆ ಸಂಗೀತ ನೀಡುತ್ತಾ ಬಂದರು. ಈ 'ರಾವ್ ಕುಲಾಲ್' ಜೋಡಿ

ಅತ್ಯಂತ ಜನಪ್ರಿಯವಾಯಿತು. ಆ ಕಾಲದಲ್ಲಿ ಒಂದು ನಾಟಕಕ್ಕೆ ಸರಾಸರಿ ಏಳೆಂಟು ಹಾಡುಗಳು ಬೇಕಾಗುತ್ತಿದ್ದವು. ಕುಲಾಲ್ ನಾಟಕಗಳಿಗೆ ಮೊದಲು ಫಿಲ್ಮ್ ಟ್ಯೂನ್ ಬಳಸುತ್ತಿದ್ದರು. ನಂತರ ಸ್ವತಂತ್ರ ಟ್ಯೂನ್ ಬಳಸಿ ಬರೆದ ಹಾಡುಗಳ ಸಂಖ್ಯೆಯೇ 500ಕ್ಕೂ ಮಿಕ್ಕಿದೆ.

ಕುಲಾಲರ ನಾಟಕಗಳು ಮೊದಲು ರಾಮಚಂದ್ರ ಶೆಟ್ಟರ 'ಸತ್ಯಸಾಯಿ ನಾಟಕ ಸಭಾ'ದ ಲಾಂಛನದಲ್ಲಿ-ಪ್ರಯೋಗವಾಗುತ್ತಿದ್ದು ಮುಂದೆ ತನ್ನದೇ ಆದ 'ಕಡಲನಾಡು ಕಲಾವಿದರು' ತಂಡವನ್ನು ಕಟ್ಟಿ ಕುಲಾಲ್ ನಾಟಕವಾಡಿದರು.

ಚಲನಚಿತ್ರಗಳಿಗೂ ಸಂಗೀತ ಸಂಯೋಜನೆ ಮಾಡಿರುವ ರಾಧಾಕೃಷ್ಣ ರಾಯರು ಕಿರೋಡಿಯನ್ನರ ಸರ್ಪಸಂಕಲೆ, ಕುಲಾಲ್‌ರ ಉಡಲ್‌ದ ತುಡರ್ ಚಿತ್ರಕ್ಕೆ (ನಾಲ್ಕು) ಹಾಡುಗಳನ್ನು ಕಂಪೋಸ್ ಮಾಡಿದವರು. 'ಸರ್ಪಸಂಕಲೆ' ಚಿತ್ರೀಕರಣ ಕಾರಣಾಂತರಗಳಿಂದ ಮುಂದುವರಿಯಲಿಲ್ಲ. ಸಂಗೀತ ಕ್ಷೇತ್ರಕ್ಕೆ ಬೆಂಗಳೂರಿನಲ್ಲಿ ಹೆಚ್ಚು ಅವಕಾಶ ನಿರೀಕ್ಷಿಸಿ ರಾಧಾಕೃಷ್ಣ ರಾಯರು ಮುಂದೆ ಬೆಂಗಳೂರಿಗೆ ಹೋಗಿ ನೆಲೆಸಿದರು. ಆಮೇಲೂ ಕೆಲವು ಕನ್ನಡ ಚಿತ್ರಗಳಿಗೆ ಸಂಗೀತ ಸಂಯೋಜನೆ ಮಾಡಿದರು.

ಇವರ ಸಹಧರ್ಮಿಣಿ ಸುಗಂಧಿ ರಾಧಾಕೃಷ್ಣರಾವ್ ಉತ್ತಮ ಗಾಯಕಿಯಾಗಿದ್ದರು. ಮಂಗಳೂರಲ್ಲಿ ಹಲವಾರು ನಾಟಕಗಳಿಗಾಗಿ ಹಾಡಿದವರು. ಸದ್ಯ ಇಬ್ಬರು ಮಕ್ಕಳೊಂದಿಗೆ ಬೆಂಗಳೂರಿನಲ್ಲಿ ವಾಸಿಸುತ್ತಾ, ರಾಯರು ಈಗಿನ 82ರ ಇಳಿವಯಸ್ಸಿನಲ್ಲಿಯೂ ಆಗೀಗ ಮುಖ್ಯವಾಗಿ ಬೆಂಗಳೂರು ಆಕಾಶವಾಣಿಯಲ್ಲಿ ವಿವಿಧ ತಂಡಗಳ ಕಾರ್ಯಕ್ರಮಗಳಿಗೆ ಹಿನ್ನೆಲೆ ಸಂಗೀತ ನೀಡುತ್ತಿರುವವರು.

ಇವರಂತೆಯೇ ಹಾರ್ಮೋನಿಯಂ ಚಂದಪ್ಪ ಬಳಿಕ ಇವರ ಮಗ ವಿಜಯಕುಮಾರ್ ಮಂಗಳೂರು, ಮಿಲಾಗ್ರಿಸ್ ಹೈಸ್ಕೂಲಿನ ಕಲಾಶಿಕ್ಷಕ ಎಂ.ಜೆ. ರಾವ್, ವಸಂತ ಕದ್ರಿ, ಎಸ್. ವಿಶ್ವನಾಥ್, ಅಶೋಕ್–ಚರಣ್ ಸೋದರರು, ನವೀನ್–ಪ್ರವೀಣ್, ನಾರಾಯಣ ಗಾಣಿಗ, ಭಕ್ತ ಬ್ರದರ್ಸ್(ಉಡುಪಿ), ಮೆಲೋಡಿ ಸ್ಟಾರ್ಸ್ ಮಂಗಳೂರು, ಎ.ಕೆ. ವಿಜಯ್ ಕೋಕಿಲ, ರಮೇಶ್ ಕಮಲ್, ವಿಶ್ವನಾಥ ಬರ್ಕೆ, ಸತೀಶ್ ಸುರತ್ಕಲ್, ವೆಂಕಟೇಶ್, ಸುಬ್ರಾಯ, ವಿಶ್ವನಾಥ ಅಂಚನ್, ಆನಂದ ಅಮೀನ್, ಪದ್ಮನಾಭ ಸಸಿಹಿತ್ಲು (ಮುಂಬೈ ರಂಗ), ತೋನ್ಸೆ ಪುಷ್ಕಳ ಕುಮಾರ್, ಮುರಳೀಧರ ಕಾಮತ್, ಗುರುಪ್ರಸಾದ್ ಎನ್. ಆರ್., ದೇವದಾಸ ಕಾಪಿಕಾಡ್, ಮುಂತಾದವರು ತುಳು ನಾಟಕಗಳ ಗೀತೆಗಳಿಗೆ ಸಂಗೀತ ನಿರ್ವಹಣೆ ಮಾಡಿ ರಂಗಕ್ಕೆ ಜೀವ ತುಂಬಿದವರು.

ನಾಟಕಗಳಿಗಾಗಿ ಸಂಗೀತ ಒದಗಿಸಿ ಹೆಸರಾದವರಲ್ಲಿ ಉಡುಪಿಯ ರಂಗಭೂಮಿ, ಉದ್ಯಾವರ ನಾರಾಯಣ ಗಾಣಿಗ ಬಳಗ, ಭಕ್ತ ಬ್ರದರ್ಸ್, ಉಡುಪಿಯ ಸುದರ್ಶನ್ ಸುವರ್ಣ, ಮಂಗಳೂರು ಪ್ರದೇಶದಲ್ಲಿ ನಾರಾಯಣ ಶೆಣೈಯವರ ಕೋಕಿಲ ಆರ್ಟ್ಸ್, ಆನಂದ ಮಾಸ್ಟರ್ ಅವರ ಆನಂದ ಸಂಗೀತಾಲಯ, ಅಶೋಕ್–ಚರಣ್ ಜೋಡಿ, ವಸಂತ ಕದ್ರಿ ಬಳಗ, ಫ್ರೆಂಡ್ಸ್ ಮ್ಯೂಸಿಕ್ಸ್ 'ಎ' ತಂಡ (ವಿಶ್ವನಾಥ ಬರ್ಕೆ), ಎಸ್.

ವಿಶ್ವನಾಥ್ ಸೂಟರ್‌ಪೇಟೆ, ರಮೇಶ ಕಮಲ, ಎ.ಕೆ. ವಿಜಯ್(ಕೋಕಿಲ), ಕಮಲಾಕ್ಷ ನಂದಿಗುಡ್ಡೆ, ಸುಬ್ರಾಯ ಉರ್ವಸ್ಟೋರ್, ಮುರಳೀಧರ ಕಾಮತ್, ಬಂಟ್ವಾಳ ವಿಟ್ಲ ಕಡೆಗೆ ನಂದನ್ ಬಿ.ಸಿ.ರೋಡ್, ಬಳಿಕ ನವೀನ್ –ಪ್ರವೀಣ್(ಅಡ್ಯಾರ್), ಪುರುಷೋತ್ತಮ್ ಪದಕಣ್ಣಾಯ, ಆನಂದ ಅಮೀನ್ ಅವರ ಫ್ರೆಂಡ್ಸ್ ಮ್ಯೂಸಿಕ್ಸ್ – 'ಬಿ' ತಂಡ ಮುಂತಾದ ಹತ್ತಾರು ಸಂಗೀತ ನಿರ್ದೇಶಕರು ತುಳು ನಾಟಕಗಳಿಗೆ ಸಂಗೀತ ನೀಡಿದ್ದಾರೆ. ದಿ. ವಿಜಯಕುಮಾರ್ ಗೀತರಚನಕಾರ, ಸಂಗೀತ ಸಂಯೋಜಕರಾಗಿ ಹೆಸರಾದವರು. ಆಧುನಿಕ ರಂಗಭೂಮಿ ಸಂದರ್ಭದಲ್ಲಿ ತರಬೇತಿ ಹೊಂದಿದ ನಾಟಕ ನಿರ್ದೇಶಕರೇ ಎಷ್ಟೋ ಮಂದಿ ಸಂಗೀತ ನಿರ್ದೇಶಿಸುತ್ತಲೂ ಇದ್ದಾರೆ. ಸದಾನಂದ ಸುವರ್ಣ, ಬಿ.ವಿ. ಕಾರಂತರಂತಹ ನಿರ್ದೇಶಕರ ಸಂಗೀತ ಜ್ಞಾನ, ಬಾಸುಮ ಕೊಡಗು, ಶೀನ ನಾಡೋಳಿ, ಜೀವನ್‌ರಾಮ್ ಸುಳ್ಯ ಮುಂತಾದ ಆಧುನಿಕರಿಂದ ರಂಗಸಂಗೀತವು ಹೊಸ ಹೊಸ ಆಯಾಮಗಳನ್ನು ಪಡೆದಿದೆ.

**ವಸಂತ ಕದ್ರಿ (1948)**



ಹಿರಿಯ ತಲೆಮಾರಿನ ಸಂಗೀತ ನಿರ್ದೇಶಕರಾಗಿ ನಮ್ಮ ನಡುವೆ ಇರುವ ವಸಂತ ಕದ್ರಿಯವರು ಮೂಲತಃ ನಟನಾಗಿ, ಟೇಲರ್ ಮುಂತಾದವರ ನಾಟಕಗಳ ನೂರಾರು ಪ್ರದರ್ಶನಗಳಿಗೆ 'ಪ್ರಾಂಪ್ಟರ್' ಕೂಡಾ ಆಗಿದ್ದು, ಹಿನ್ನೆಲೆ ಗಾಯನ, ಸಂಗೀತಾಭ್ಯಾಸದ ಬಳಿಕ ಹಿನ್ನೆಲೆ ಸಂಗೀತಗಾರರಾದವರು.

ಅವರ ತಾರುಣ್ಯದಲ್ಲಿ ಕದ್ರಿ, ಮಂಗಳೂರು ಪರಿಸರದಲ್ಲಿ ಹೆಚ್ಚಾಗಿ ಕನ್ನಡ ನಾಟಕಗಳಷ್ಟೇ ನಡೆಯುತ್ತಿದ್ದವು. ಕನ್ನಡ ನಾಟಕಗಳಲ್ಲಿ ನಟಿಸುತ್ತಿದ್ದರು. ಅದಕ್ಕಾಗಿಯೇ ಇವರು 1968ರಲ್ಲಿ ಕದ್ರಿಯಲ್ಲಿ 'ಜಯ ಕಲಾನಿಲಯ' ಎನ್ನುವ ನಾಟಕ ಕೂಟ ಕಟ್ಟಿಕೊಂಡು ಶಿವರಾತ್ರಿ ಕಾಲದಲ್ಲಿ ದೇವಳ ಪರಿಸರದಲ್ಲಿ ಮಹಾಂತೇಶ ಶಾಸ್ತ್ರಿಗಳ 'ಅಣ್ಣ–ತಮ್ಮ', 'ದೇವದಾಸಿ', ಗರೂಡ ಸದಾಶಿವರಾಯರ 'ಪಾದುಕಾ ಪಟ್ಟಾಭಿಷೇಕ' ಮುಂತಾದ ಪೌರಾಣಿಕ, ಚಾರಿತ್ರಿಕ ನಾಟಕಗಳನ್ನು ಆಡಿಸುವುದು, ಸ್ವತಃ ಪಾತ್ರ ಮಾಡುವುದು ನಡೆಯಿತು. ಆಗೆಲ್ಲ ಕೃಷ್ಣ ಗೋಪಾಲ್ ಮತ್ತು ಎಸ್.ಆರ್. ಬಾಲಗೋಪಾಲ್ ಎಂಬಿಬ್ಬರು ಕಲಾಭವನ (ರಿ) ಬ್ಯಾನರ್‌ನಲ್ಲಿ ಕಂಪೆನಿ ನಾಟಕಗಳನ್ನು ಮಂಗಳೂರಿಗೆ ಕರೆಯಿಸಿ ನಾಟಕ ಸಪ್ತಾಹ, ಸ್ಪರ್ಧೆಗಳನ್ನು ಏರ್ಪಡಿಸುತ್ತಿದ್ದರು. ಅವರಿಬ್ಬರು ಹಲವು ಕನ್ನಡ ಪೌರಾಣಿಕ ನಾಟಕಗಳನ್ನು ಬರೆದು ದಿಗ್ದರ್ಶಿಸಿ ಪ್ರದರ್ಶನ ನಡೆಸಿದ್ದರು. ಗುಲ್ವಾಡಿ ಗೋಪಿನಾಥ ಭಟ್ಟರ 'ಭೀಷ್ಮ', ಕೃಷ್ಣಗೋಪಾಲರ 'ದಾನಶೂರ ಕರ್ಣ', ಬೇಲಗದ್ದೆ ಅಪ್ಪಯ್ಯರ 'ಅಲೆಗ್ಸಾಂಡರ್' ಮುಂತಾದ ನಾಟಕಗಳು, ರಮಾನಂದ ಚೂರ್ಯರ ಮರಾಠಿಯಿಂದ ಅನುವಾದಿಸಿದ 'ಊರೆಲ್ಲಾ

ಹೇಳ್ಬೇಡಿ' ಇಂತಹ ನಾಟಕಗಳು ನಡೆಯುತ್ತಿದ್ದವು. ವಸಂತ ಕದ್ರಿಯವರ ಚಿಕ್ಕಪ್ಪ ವೆಂಕಟರಾವ್ ಕೂಡಾ ನಾಟಕ ನಿರ್ದೇಶನ ಮಾಡುತ್ತಿದ್ದರು. ಆ ಕಾಲದಲ್ಲಿ ಗಣಪತಿ ಶಾಲಾ ಅಧ್ಯಾಪಕ 'ಕೋಕಿಲ' (ಬಳಗದ) ರಾಧಾಕೃಷ್ಣ ರಾವ್ ಮಾತ್ರ ಪ್ರಸಿದ್ಧ ಸಂಗೀತ ನಿರ್ದೇಶಕರು.

ಎಪ್ಪತ್ತರ ದಶಕದಲ್ಲಿ ವಸಂತ ಕದ್ರಿ ಜೀವರತ್ನ ಚನಿಲೊ ಅವರ 'ಕಣ್ಣೀರ್ದ ಕರಿಮಣಿ', ಕೆ.ಬಿ. ಭಂಡಾರಿಯವರ ಬಂಗಾರ್ ಬಾಲೆ, ಕೆ. ಎನ್. ಟೇಲರರ ಸೈನಗಾಂಡಲ ಸತ್ಯಪನ್ಲೆ, 'ವಿಶ್ವಾಮಿತ್ರ –ಮೇನಕಾ', ಕಿರೋಡಿಯನ್‌ರ 'ದನೇಶ್ವರ' (ಚಾರಿತ್ರಿಕ), ಕೆ. ಆರ್. ಶ್ರೀಯಾನ್‌ರ 'ಇಲ್ಲ್ ದೆತ್ತಿಮಗೆ' ಮುಂತಾದ ತುಳುನಾಟಕಗಳಲ್ಲೂ ಪಾತ್ರ ನಿರ್ವಹಣೆಗೆ ತೊಡಗಿದರು. ಆಗ ಇಂದುಶೇಖರ್ ಇವರು ಜತೆಯಾಗಿ ಪಾತ್ರ ಮಾಡುತ್ತಿದ್ದರು. (ಇಂದುಶೇಖರ್ 'ಡೈಲಾಗ್ ಕಿಂಗ್' ಎನ್ನುವ ಬಿರುದು ಹೊಂದಿದ್ದ ಆ ಕಾಲದ ಪ್ರಖ್ಯಾತ ರಂಗಭೂಮಿ ಮತ್ತು ಕನ್ನಡ ಚಲನಚಿತ್ರ ನಟರು.)

ವಸಂತ ಕದ್ರಿಯವರು ಅಭಿನಯಿಸಿದ 'ದೇವದಾಸಿ' ನಾಟಕದ ನಾಜೂಕಯ್ಯ, ಸತ್ಯಹರಿಶ್ಚಂದ್ರದ 'ವಿಶ್ವಾಮಿತ್ರ', ವಿಶ್ವಾಮಿತ್ರ ಮೇನಕದ ಪಾದುಕಾ ಪಟ್ಟಾಭಿಷೇಕದ ಭರತ– ಮುಂತಾದ ಪಾತ್ರ ನಿರ್ವಹಣೆ ಜನಮನದಲ್ಲಿ ಹಸಿರು.

ತನ್ನ ಸ್ತ್ರೀ, ಪುರುಷ ಪಾತ್ರಗಳಿಗೆ ತಾನೇ ಹಾಡಿಕೊಂಡು ಪಾತ್ರ ನಿರ್ವಹಿಸುತ್ತಿದ್ದ ಕದ್ರಿಯವರು ರಥಬೀದಿಯ ಹಿಂದೂಸ್ಥಾನೀ ಸಂಗೀತಗಾರರಾದ ಎಂ.ಎ. ದೇವಾಡಿಗ, ಆನಂದ ಮಾಸ್ಟರ್ ಇವರಲ್ಲಿ ನಾಟಕದ ಸಂಗೀತದ ಮೂಡ್‌ಗಳನ್ನು ಹಾರ್ಮೋನಿಯಂನಲ್ಲಿ ನುಡಿಸುವುದನ್ನು ಹಾಡುವುದನ್ನು ಕಲಿತುಕೊಂಡರು. ಕದ್ರಿ ನವನೀತ ಶೆಟ್ಟರ ನಾಟಕಗಳ ಕದ್ರಿಕ್ಷೇತ್ರದ ಎಲ್ಲ ಮೊದಲ ಪ್ರದರ್ಶನಗಳಿಗೆ ಹಿನ್ನೆಲೆ, ಸಂಗೀತ ವಸಂತರದೇ. ಮುಂದೆ ಬಹಳಷ್ಟು ನಾಟಕಗಳಿಗೆ ಹಿನ್ನೆಲೆ ಸಂಗೀತ ನೀಡಿದರು. ಎಲ್ಲ ನಾಟಕಗಳ ತಂಡ ಗಳೊಂದಿಗೆ ಹಳ್ಳಿಹಳ್ಳಿಯ ಪ್ರದರ್ಶನಗಳಿಗೆ ಸಂಗೀತ ಒದಗಿಸಲೂ ಓಡಾಡಿದರು. ಆಗ ಎಂವ್ಯಾಡಿಂಯು ಸೀತಾರಾಮ ಶೆಟ್ಟಿ, ಕುಮುದಾ ಬಾರ್ಕೂರುರಂತಹ ಗಾಯಕ ರಿದ್ದರು.

ಎಚ್ಚಮ ನಾಯಕ ನಾಟಕದ ಚಾಂದ್‌ಖಾನ್ ಪಾತ್ರದಲ್ಲಿ ವಸಂತ ಕದ್ರಿ

'1985ರ ವೇಳೆಗೆ 'ಕದಿರೆಯ ಕಲಾವಿದರು' ಎನ್ನುವ ನಾಟಕ ತಂಡವನ್ನು

**ವಸಂತ ಕದ್ರಿ ಬಳಗ ಏರ್ಪಡಿಸುತ್ತಿದ್ದ ನಾಟಕ ಪ್ರದರ್ಶನಗಳ ನೆನಪುಗಳು**

ಗೆಳೆಯ ಶ್ರೀನಿವಾಸ ಕದ್ರಿಯವರನ್ನು ಜೊತೆ ಗೂಡಿಸಿಕೊಂಡು ಆರಂಭಿಸಿ ಕಲಾವಿದರನ್ನು ಸೇರಿಸಿಕೊಂಡು ಹಲವು ನಾಟಕ ಪ್ರದರ್ಶನಗಳಿಗೆ ನಿರ್ದೇಶನ, ಹಿನ್ನೆಲೆ ಸಂಗೀತ ಒದಗಿಸಿದರು. ರಮಾನಂದ ಚೂರ್ಯರ 'ಊರೆಲ್ಲಾ ಹೇಳ್ಬೇಡಿ' ನಾಟಕವನ್ನು 'ತೆಲಿಪುವಲ್ ಜಾಗ್ರತೆ' ಎಂದು ತುಳುವಿಗೆ ಅನುವಾದಿಸಿ, ಹಕ್ಕುಗಳನ್ನು ಪಡೆದು ತನ್ನದೇ ನಿರ್ದೇಶನದಲ್ಲಿ ಡಾನ್ ಬಾಸ್ಕೋ ಹಾಲ್‌ನಲ್ಲಿ ತ್ರಿಮುಖ ರಂಗಭೂಮಿ ಸೇರ್ಪಡೆಯನ್ನು ಮಾಡಿಕೊಂಡು ವಿಶಿಷ್ಟ ಶೈಲಿಯಲ್ಲಿ ಪ್ರದರ್ಶಿಸಿ ಯಶಸ್ಸು ಗಳಿಸಿದರು. ಮುಂದೆ ಸಂಗೀತ ನಿರ್ವಹಣೆಯೇ ಜೀವಾಳವಾಯಿತು.

ವಸಂತ ಕದ್ರಿಯವರ ಅಭಿಪ್ರಾಯದಂತೆ ಹಿರಿಯ ತಲೆಮಾರಿನಲ್ಲಿ ರಮಾನಂದ ಚೂರ್ಯ ಮತ್ತು ಕೆ. ಎನ್. ಟೇಲರ್ ಇಬ್ಬರು ಶಿಸ್ತಿನ ಕಟ್ಟುನಿಟ್ಟಿನ ನಿರ್ದೇಶಕರು.

**ನಾರಾಯಣ ಬಿ.ಕೆ. (1948)**

ಹಾರ್ಮೋನಿಯಂ, ಕೀಬೋರ್ಡ್ ವಾದಕರಾದ ಉರ್ವದ ನಾರಾಯಣ ಬಿ.ಕೆ. ಇವರು 1964ರಲ್ಲಿ ಉರ್ವದಲ್ಲಿ 'ಅಮೃತಕಲಾ ತಂಡ' ಎಂಬ ಹಿನ್ನೆಲೆ ಸಂಗೀತ ಕೂಟ ವನ್ನು ಆರಂಭಿಸಿ ನಾಟಕಗಳಿಗೆ ಹಿನ್ನೆಲೆ ಸಂಗೀತ ಸಂಯೋಜನೆ ನೀಡುತ್ತಾ ಬಂದರು. 40 ವರ್ಷಕಾಲ ಈ ಕ್ಷೇತ್ರದಲ್ಲಿ ಕೆ. ಬಿ. ಭಂಡಾರಿ, ಬಿ. ರಾಮಕಿರೋಡಿಯನ್, ಮಚ್ಚೇಂದ್ರನಾಥ ಪಾಂಡೇಶ್ವರ, ಸೀತಾರಾಮ್ ಕುಲಾಲ್, ಯು.ಎಂ. ಮೊೖದಿನಬ್ಬ

ದಂಡೆಕೇರಿ, ಕೆ.ವಿ.ಭಟ್ – ಮುಂತಾದ ಹತ್ತಾರು ನಾಟಕಕಾರರ ನೂರಾರು ನಾಟಕಗಳ ಸಹಸ್ರಾರು ಪ್ರದರ್ಶನಗಳಿಗೆ ಹಿನ್ನೆಲೆ ಸಂಗೀತ ಸಂಯೋಜಿಸಿದವರು ಇವರ ಶಿಷ್ಯರನೇಕರು ಮುಂದೆ ತಜ್ಞ ಸಂಗೀತಗಾರರಾಗಿ ವಿವಿಧ ತಂಡಗಳಿಗಾಗಿ ದುಡಿಯುತ್ತಿದ್ದಾರೆ.

**ಎಸ್. ವಿಶ್ವನಾಥ್ (1940–2007)**

(ಹಳೆಯ ಚಿತ್ರ)

ಅಂಚೆ ಇಲಾಖೆಯ ಉದ್ಯೋಗದಲ್ಲಿದ್ದ ವೆಲೆನ್ಸಿಯಾ ಸೂಟರ್‌ಪೇಟೆಯ ಎಸ್. ವಿಶ್ವನಾಥ್ ಉತ್ತಮ ಸಂಗೀತ ಸಂಯೋಜಕರಾಗಿದ್ದರು. ತಬಲಾ, ಹಾರ್ಮೋನಿಯಂ, ಬೋಂಗೊ ಡೋಲಕ್ ಮೊದಲಾದ ಹಲವು ಸಂಗೀತ ಸಾಧನಗಳನ್ನು ನುಡಿಸಬಲ್ಲವರಾಗಿ, ಗಾಯನವನ್ನೂ ಮಾಡುತ್ತಿದ್ದರು. ಶಾಸ್ತ್ರೀಯ ಸಂಗೀತ ಹಾಗೂ ಜಾನಪದ ಶೈಲಿಯ ಹಾಡುಗಳ ಗಾಯನದಲ್ಲೂ ನಾಟಕ ಸ್ಪರ್ಧೆಯಲ್ಲಿ ನಟನೆಗಾಗಿ ಪ್ರಶಸ್ತಿಗಳನ್ನೂ ಪಡೆದಿದ್ದರು. ತೊಂಬತ್ತರ ದಶಕದಲ್ಲಿ 'ಕೋರ್ದಬ್ಬು ಬಾರಗ' ಎನ್ನುವ ಗೀತರೂಪಕ ವನ್ನೂ ರಚಿಸಿ ಪರಿಶೀಲನೆಗಾಗಿ ಈ ಲೇಖಕನಲ್ಲಿ ತೋರಿಸಿದ್ದರು.

ಸಜೀಪ ಮೂಡದ ಮುದರ ಮೇಸ್ತ್ರಿ ಸೀತಮ್ಮ ದಂಪತಿಯ ಪುತ್ರ ಎಸ್. ವಿಶ್ವನಾಥರು ಮಂಗಳೂರಿನ ಬಿ.ಇ.ಎಂ. ಶಾಲೆಯಲ್ಲಿ ಎಸ್.ಎಸ್.ಎಲ್.ಸಿ. ಮುಗಿಸಿ, ಗಣಪತಿ ಶಾಲಾ ಅಧ್ಯಾಪಕ ಸಂಗೀತಗುರು ರಾಧಾಕೃಷ್ಣ ರಾವ್ ಅವರಿಂದ ಹಾರ್ಮೋನಿಯಂ ಅಭ್ಯಾಸ ಮಾಡಿ ಗಾನಮೇಳದಲ್ಲಿ ಹೆಸರಾದರು. ಸಂಗೀತ ಸ್ಪರ್ಧೆ, ಭಾವಗೀತೆ ಸ್ಪರ್ಧೆ, ಭಕ್ತಿಗೀತೆಗಳಲ್ಲಿ ಪ್ರಥಮ ಸ್ಥಾನಗಳನ್ನೇ ಗಳಿಸಿ 'ಶಾರದಾ ಸಂಗೀತ ಸಭಾ'ದ ಪ್ರೋಂದ್ರಂಗಂ ಪಿಳ್ಳೆ ಅವರಿಂದ ಶಾಸ್ತ್ರೀಯ ಗಾಯನದ ಶಿಕ್ಷಣವನ್ನೂ ಪಡೆದರು. ತುಳುನಾಟಕಗಳಲ್ಲಿ ಅಭಿನಯ, ಗಾಯನ ಮತ್ತು ಸಂಗೀತ ನಿರ್ದೇಶನ ಮಾಡುತ್ತಾ ಹೆಸರು ಪಡೆದರು. ಅಂಚೆ ಇಲಾಖೆಯಲ್ಲಿ ಪೋಸ್ಟ್ ಮಾಸ್ಟರಾಗಿದ್ದರು. ಜಿಲ್ಲೆ, ರಾಜ್ಯ ಮತ್ತು ಅಖಿಲಭಾರತ ಮಟ್ಟದ ಸಂಗೀತ, ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಬಹುಮಾನಿತರಾಗಿ ಸಹಸ್ರಾರು ತುಳುನಾಟಕ ಪ್ರದರ್ಶನಗಳಿಗೆ ಉತ್ತಮ ಹಿನ್ನೆಲೆ ಸಂಗೀತ ಒದಗಿಸಿದರು. ಹಲವು ಎಳೆಯರನ್ನು ಪ್ರೋತ್ಸಾಹಿಸಿ ಈ ರಂಗಕ್ಕೆ ಕರೆತಂದರು. 'ಗೀತಾಕಲಾಸಾಧಕ' ಎನ್ನುವ ಬಿರುದೂ ಇವರಿಗಿತ್ತು. 2007ರಲ್ಲಿ ತನ್ನ 69ನೇ ವಯಸ್ಸಿನಲ್ಲಿ ನಿಧನರಾದರು.

**ಚರಣ್ ಕುಮಾರ್**

ಮಂಗಳೂರಿನ ಪ್ರಖ್ಯಾತ 'ಅಶೋಕ್–ಚರಣ್' (ಬಳಿಕ ರಾಗ್‌ದೇವ್) ಸಂಗೀತ ತಂಡದ ಚರಣ್ ಕುಮಾರ್ ಬಾಲ್ಯದಿಂದಲೇ ಭಜನೆ, ಗಾಯನ ಮತ್ತು ನಾಟಕಾಭಿನಯ ಹವ್ಯಾಸಿಯಾಗಿದ್ದು ಸಂಗೀತಾಭ್ಯಾಸದ ಬಳಿಕ ತನ್ನ ಅಣ್ಣ ಅಶೋಕ್‌ಕುಮಾರ್ ಜೊತೆಯಲ್ಲಿ



ಅಶೋಕ್

ಚರಣ್

'ಅಶೋಕ್ ಚರಣ್' ತಂಡ ನಿರ್ಮಿಸಿ ತುಳು ನಾಟಕಗಳಿಗೆ ಹಿನ್ನೆಲೆ ಸಂಗೀತ ನೀಡತೊಡಗಿದರು. 'ಅಶೋಕ್ ಚರಣ್' ಸಂಗೀತ ರಸಮಂಜರಿಯೂ ಜನಪ್ರಿಯ. ಮುಂದೆ ಚಲನಚಿತ್ರಗಳಿಗೆ ಸಂಗೀತ ನಿರ್ದೇಶನ ಮಾಡತೊಡಗಿದಾಗ 'ರಾಗ್ ದೇವ್' ಹೆಸರಿನ ತಂಡವಾಯಿತು.

## ಹಿನ್ನೆಲೆ ಗಾಯನ

ಎಪ್ಪತ್ತರ ದಶಕದ ವೇಳೆಗೆ ದಿ. ಶೇಖರ್ ಅತ್ತಾವರ್, ಚರಣ್‌ಕುಮಾರ್, ಜಗದೀಶ್ ವರ್ಮ, ದಿ. ಸುಹಾಸಿನಿ ಬೆಂಗ್ರೆ, ಮೀರಾ, ದಯಾವತಿ, ಸುಗಂಧಿ ರಾಧಾಕೃಷ್ಣ ರಾವ್, ಉದ್ಯಾವರ ನಾರಾಯಣ ಗಾಣಿಗ, ಎಸ್. ರಾಮದಾಸ್, ಭಾಸ್ಕರ್ ಉಳ್ಳಾಲ್, ಇಬ್ರಾಹಿಂ ತಣ್ಣೀರುಬಾವಿ, ಮೊಹಮ್ಮದ್ ಶರೀಫ್, ಖಾಲಿದ್ ತಣ್ಣೀರುಬಾವಿ, ವಿಜಯಲಕ್ಷ್ಮಿ ಹೊಯಿಗೆ ಬಜಾರ್, ಮಹಾದೇವಿ, ಚಂದ್ರಹಾಸ್ ತೊಕ್ಕೊಟ್ಟು, ಎ.ಕೆ. ವಿಜಯ್, ಶಾರದಾ ಬಾರ್ಕೂರು, ರೋಹಿಣಿ ಜಗರಾಂ, ವೀಣಾ ಬಾರ್ಕೂರು, ಪುರುಷೋತ್ತಂ ತೊಕ್ಕೊಟ್ಟು, ಭಕ್ತ ಬ್ರದರ್ಸ್ ಗುಂಡಿಬೈಲ್, ವಿನಯಾ, ನಯನಾ, ಎಸ್. ರಾಮದಾಸ್, ಮೋಹನ್ ಎ. ಕುಂದರ್, ಲೋಲಾಕ್ಷಿ ಹಾಗೂ ಇನ್ನೂ ಅನೇಕ ಗಾಯಕರು ತುಳುನಾಟಕ ರಂಗದಲ್ಲಿ ತಮ್ಮ ಅಪೂರ್ವ ಕಂಠಸಿರಿಯಿಂದ ಹಾಡಿ ಹೆಸರಾಗಿದ್ದಾರೆ. ಎಪ್ಪತ್ತರ ದಶಕದಲ್ಲಿ ತುಳು ಚಿತ್ರ ನಿರ್ಮಾಣ ಆರಂಭವಾದಾಗ ಇವರಲ್ಲಿ ಹಲವರು ಗಾಯಕರಾಗಿ ಸಿನಿಮಾಗಳಲ್ಲೂ ಪರಭಾಷಾ ಗಾಯಕರಾದ 'ಎಸ್ಪಿಬಿ', ಪಿ.ಬಿ. ಶ್ರೀನಿವಾಸ್, ವಾಣಿಜಯರಾಂ ಮುಂತಾದವರ ಜತೆಗೆ ಒಂದೆರಡು ಹಾಡುಗಳನ್ನು ಹಾಡಿಯೂ ದಾಖಲೆ ನಿರ್ಮಿಸಿದರು.



**ರಂಗಸಂಗೀತದ ಎ.ಕೆ. ವಿಜಯ 'ಕೋಕಿಲ'**

ನಾಟಕಗಳಿಗೆ ಸಂಗೀತ ಸಂಯೋಜನೆ ಮಾಡುತ್ತಿದ್ದ ದೊಡ್ಡಮ್ಮನ ಮಗ ಕಾಳಪ್ಪ ಎಂಬವರ ಗರಡಿಯಲ್ಲಿ ಪಳಗಿದ ಎ.ಕೆ. ವಿಜಯರಿಗೆ ಮಚ್ಚೇಂದ್ರನಾಥ ಪಾಂಡೇಶ್ವರರು 'ತೆಲ್ಪರೆ ಕಲ್ಪಿ' ನಾಟಕದಲ್ಲಿ ಸಂಗೀತದ ಅವಕಾಶ ನೀಡಿ ರಂಗಕ್ಕೆ ತಂದರು. ಬಳಿಕ ಕಲಾಸಂಗಮ ವಿಜಯಕುಮಾರ ಕೊಡಿಯಾಲ್‌ಬೈಲ್ ತನ್ನ ಚೊಚ್ಚಲ

ನಾಟಕ 'ಒಂಜಿ ನಿಮಿಷ'ದ ಹಿನ್ನೆಲೆ ಸಂಗೀತಕ್ಕಾಗಿ ವಿಜಯರನ್ನು ಆಹ್ವಾನಿಸಿದರು. ಮುಂದೆ 'ಕಲಾಸಂಗಮ'ದ ಎಲ್ಲ ನಾಟಕ ಪ್ರದರ್ಶನಗಳಿಗೂ ವಿಜಯರದೇ ಸಂಗೀತ.

ದೇವದಾಸ್ ಕಾಪಿಕಾಡರ ಚೊಚ್ಚಲ ನಾಟಕ (1985) 'ಬಲೇ ಚಾಪರ್ಕ' (ಮೊದಲ ಹೆಸರು 'ಯಾನ್ ಮಲ್ಲಾಯೆ')ಕ್ಕಾಗಿ ('ಬರ್ಪಾಲ್ ಮದಿಮಾಲ್' ಎಂಬ ಹಿಟ್ ಹಾಡು) ಮೊದಲು ಹಾಡಿದ ವಿಜಯರು ಆ ಬಳಿಕ ಕೀಬೋರ್ಡ್ ನುಡಿಸುವುದು, ಹಾಡುವುದು ಎರಡರಲ್ಲೂ ನಿಷ್ಣಾತರಾದರು. ಈ ಮುಂಚೆ ಗಣಪತಿ ಹೈಸ್ಕೂಲ್ ಅಧ್ಯಾಪಕ ರಾಧಾಕೃಷ್ಣ ರಾವ್ 'ಕೋಕಿಲ ಆರ್ಟ್ಸ್' ಎಂಬ ಹೆಸರಿನ ಸಂಗೀತ ಸಂಸ್ಥೆ ನಡೆಸುತ್ತಿದ್ದರು. ಅದರ ಮೇಲಿನ ಅಭಿಮಾನದಿಂದ ವಿಜಯ್ ತನ್ನ ಹೆಸರನ್ನೂ 'ವಿಜಯ ಕೋಕಿಲ' ಎಂಬುದಾಗಿ ರಂಗಭೂಮಿಗೆ ಬಳಸಿಕೊಂಡರು. ಮುಂಬಯಿ ಕಲಾಜಗತ್ತು (ರಿ) ಸಂಸ್ಥೆಯ ನಾಟಕಗಳಿಗೂ ವಿಜಯ್ ಸಂಗೀತ ನೀಡುತ್ತಲಿದ್ದಾರೆ. ತುಳುವಿನ ಮೊದಲ ಆಡಿಯೋ ಕ್ಯಾಸೆಟ್‌ಗೆ (ಮಚ್ಚೇಂದ್ರನಾಥ್ ಪಾಂಡೇಶ್ವರರ ನಾಟಕ ದುಲಾಯಿ ನಾಟಕ)ಗೆ ಸಂಗೀತ ನೀಡಿದವರೂ ಇದೇ ಎ.ಕೆ. ವಿಜಯ್. ಸದ್ಯ ವಿಜಯಕುಮಾರ್ ಕೋಡಿಯಾಲ್‌ಬೈಲ್‌ರ ಕಲಾಸಂಗಮದ ನಾಟಕಗಳ ಸಂಗೀತ ಸಂಯೋಜನೆಯಲ್ಲಿ ತೊಡಗಿರುವ ಇವರು ಹಲವು ತುಳು ಚಲನಚಿತ್ರಗಳಿಗೂ ಸಂಗೀತ ನೀಡಿದ್ದಾರೆ.

**ಉದಯೋನ್ಮುಖ ಸಂಗೀತ ನಿರ್ದೇಶಕರು :** ನೆಲ್ಲು ಪೆರ್ಮನ್ನೂರು, ನಿತಿನ್ ಎಣ್ಣೆಹೊಳೆ, ರಾಜಶೇಖರ ಶೆಟ್ಟಿ, ಸುರೇಶ್ ಬೋರುಗುಡ್ಡೆ, ಶಂಕರನಾರಾಯಣ್ ಪೆರ್ಡೂರು, ಮಧುಕರ್ ಕಟಪಾಡಿ ಸುರೇಶ್ ಗೋಪಾಲ್ ಉಡುಪಿ, ಸುಧಾಕರ ಶೆಟ್ಟಿ ಬೆದ್ರ, ಮೋನಿಕಾ ಮಂಗಳೂರು ಕಾರ್ತಿಕ್ ಮಣಿಲ, ಪ್ರವೀಣ್ ಕಣಿಯೂರು, ದೀಪಕ್ ಮಳಲಿ, ಶ್ರೇಯಸ್ ಕಲ್ಲಡ್ಕ, ಅಶೋಕ್ ಜೋಡುಕಲ್ಲು, ವಿಶ್ವನಾಥ ಶೆಟ್ಟಿ ನೆಲ್ಯಾಡಿ, ಪ್ರಕಾಶ್ ಆಚಾರ್ಯ ಕಿನ್ನಿಗೋಳಿ, ಶಿವಗಿರಿ ಕಲ್ಲಡ್ಕ ಮುಂತಾದವರು.

* * *

**ಎಪ್ಪತ್ತರ ದಶಕದಲ್ಲಿ ತುಳುಭಾಷೆಯಲ್ಲಿ ಚಲನಚಿತ್ರ ನಿರ್ಮಾಣ ಶಕೆ ಆರಂಭವಾದಂದಿನಿಂದ ಇತ್ತೀಚಿನವರೆಗೂ ಜನಪ್ರಿಯ ನಾಟಕಗಳೇ ಚಿತ್ರ ನಿರ್ಮಾಣಕ್ಕೆ ಮೂಲವಾಗಿದ್ದವು.**

### ಬೆಳ್ಳಿತೆರೆಯಲ್ಲಿ ತುಳುನಾಟಕಗಳು

| | ನಾಟಕಕಾರರು | ನಾಟಕ | ಸಿನಿಮಾ |
|---|---|---|---|
| 1. | ಕೆ.ಬಿ. ಭಂಡಾರಿ | ಮೆಗ್ಗೆ ಪಲಯೆ | ಎನ್ನ ತಂಗಡಿ |
| 2. | ಕೆ.ಎನ್.ಟೇಲರ್ | ಯಾನ್ ಸನ್ಯಾಸಿ ಆಪೆ | ಯಾನ್ ಸನ್ಯಾಸಿ ಆಪೆ |
| 3. | ಕೆ.ಎನ್.ಟೇಲರ್ | ಯೇರ್ ಮಲ್ತಿನ ತಪ್ಪು | ಯೇರ್ ಮಲ್ತಿನ ತಪ್ಪು |
| 4. | ಕೆ.ಎನ್.ಟೇಲರ್ | ಕಂಡನೆ ಬುಡೆದಿ | ಭಾಗ್ಯವಂತೆದಿ |

| | | |
|---|---|---|
| 5. ಡಾ.ಪಿ. ಸಂಜೀವ ದಂಡೆಕೇರಿ | ಬಯ್ಯಮಲ್ಲಿಗೆ | ಬಯ್ಯಮಲ್ಲಿಗೆ |
| 6. ಡಾ.ಪಿ. ಸಂಜೀವ ದಂಡೆಕೇರಿ | ಗಂಗಾರಾಮ್ | ಬೊಳ್ಳಿದೋಟ |
| 7. ವಿಶುಕುಮಾರ್ | ಕೋಟಿಚೆನ್ನಯ | ಕೋಟಿಚೆನ್ನಯ |
| 8. ಎಮ್.ಕೆ. ಸೀತಾರಾಮ ಕುಲಾಲ್ | ಉಡಲ್ದ ತುಡರ್ | ಉಡಲ್ದ ತುಡರ್ |
| 9. ಮಚ್ಚೇಂದ್ರನಾಥ ಪಾಂಡೇಶ್ವರ | ಪೊರ್ತುರ್ ಕಂತ್‌ಂಡ್ | ದಾರೆದ ಸೀರೆ |
| 10. ದೇವದಾಸ್ ಕಾಪಿಕಾಡ್ | ಬಲೇ ಚಾಪರ್ಕ | ಸತ್ಯ ಓಲುಂಡು |
| 11. ಕೆ. ನಾರಾಯಣ ಶೆಟ್ಟಿ | ಸತ್ಯ ಬತ್ತಲೆ | ಬಂಗಾರ್ ಪಟ್ಲೆರ್ |
| 12. ಕೃಷ್ಣಪ್ಪ ಉಪ್ಪೂರು | ಹೌಂದ್ರಾಯನ ವಾಲಗ | ಮಾರಿಬಲೆ |
| 13. ವಿಜಯಕುಮಾರ್ ಕೊಡಿಯಾಲ್‌ಬೈಲ್ | ಒಂಜಿ ನಿಮಿಷ | ಒಂತೆ ಎಜೆಸ್ಟ್ ಮಲ್ಪಿ |
| 14. ವಿಜಯಕುಮಾರ್ ಕೊಡಿಯಾಲ್‌ಬೈಲ್ | ಒರಿಯದರ್ೊರಿ ಅಸಲ್ | ಒರಿಯದರ್ೊರಿ ಅಸಲ್ |
| 15. ನಂದಳಿಕೆ ನಾರಾಯಣ ಶೆಟ್ಟಿ | ಬೊಜ್ಜ | ಸುದ್ದೊ |
| 16. ಗಂಗಾಧರ ಶೆಟ್ಟಿ | ಒರಿಯನ್ ತೂಂಡ | ಒರಿಯನ್ ತೂಂಡ |
| | ಒರಿಯಗಾಪುಜಿ | ಒರಿಯಗಾಪುಜಿ |

ಇತ್ಯಾದಿ

* * *

# ವಸ್ತು, ಭಾಷೆ, ತಂತ್ರದ ದೃಷ್ಟಿಯಿಂದ ತುಳುನಾಟಕಗಳು

ಯಾವುದೇ ಭಾಷೆಯಲ್ಲಾದರೂ ನಾಟಕಗಳ ಉಗಮವಾದುದು ಸಾಮಾಜಿಕ ಆಚರಣೆಗಳ ಲೋಪದೋಷ, ಅತಿರೇಕ, ಅಂಧಾನುಕರಣೆಗಳನ್ನು ವಿಡಂಬಿಸುವ ಪ್ರಶ್ನಿಸುವ ಇಂಗಿತದೊಂದಿಗೆ ಸುಮಾರು ಏಳು ದಶಕಗಳ ತುಳು ನಾಟಕಗಳ ಮೇಲೊಂದು ಸಿಂಹಾವಲೋಕನ ಮಾಡಿದರೆ ಇಲ್ಲಿನ ಆಶಯವೂ ಅದೇ. ಕೆಲವು ಅನ್ಯ ಭಾಷಾನಾಟಕಗಳು ಪ್ರಬುದ್ಧತೆಯ ತಳಪಾಯದೊಂದಿಗೆ ಬೆಳೆದು ಬಂದವು. ಹಲವು ಪ್ರಭಾವ, ಪ್ರೇರಣೆಗಳನ್ನು ಸಮರ್ಥವಾಗಿ ಒಡಗೂಡಿಸಿಕೊಂಡು ವಿವಿಧ ಕಾಲಘಟ್ಟದಲ್ಲಿ ವೈಶಿಷ್ಟವನ್ನು ತೋರ್ಪಡಿಸಿದವು. ಆದರೆ ತುಳುವಿನಲ್ಲಿ ನಾಟಕಗಳದ್ದೇನೋ ಲಕ್ಷಾಂತರ ಪ್ರದರ್ಶನ ನಡೆದಿದೆ. ಆದರೆ ಪ್ರಯೋಗ ದೃಷ್ಟಿಯಿಂದ ಹೇಳಿಕೊಳ್ಳುವ – ಇತರ ಭಾಷೆಗಳೊಂದಿಗೆ ಪೈಪೋಟಿಯ ನಾಟಕಗಳೂ ವಿರಳ. ಪರಿಣಾಮಕಾರಿ ನಾಟಕಗಳು ಹವ್ಯಾಸೀ ರಂಗ ಚಳವಳಿಯಲ್ಲಷ್ಟೇ ಬೆರಳೆಣಿಕೆಯಲ್ಲಿ ಗೋಚರಿಸಿದವು.

ಆರಂಭದ ತಿಂಗಳಾಯ, ಶಿವಣ್ಣ ಹೆಗ್ಡೆ, ಧೂಮಪ್ಪ ಮಾಸ್ತರರಂಥವರ ನಾಟಕಗಳು ಸಮಾಜದ ಅಂಧಾನುಕರಣೆಗಳನ್ನು ಲೇವಡಿ ಮಾಡುವ, ರಾಷ್ಟ್ರೀಯತೆಯನ್ನು ಗಾಂಧೀವಾದವನ್ನು ಪ್ರತಿಪಾದಿಸುವ ಧೋರಣೆಯವುಗಳು.

ತುಳುನಾಟಕವೆಂಬುದು ಮೊದಲು ಪ್ರಹಸನ ಮಾದರಿ, ನೀತಿ ಬೋಧಕವಾಗಿತ್ತು. ಬಳಿಕ ಕೆಮ್ತೂರರಿಂದ ತೊಡಗಿ, ಕಿರೋಡಿಯನ್‌ರಿಂದ ಪೂರ್ಣತ್ವ ಪಡೆದು, ಕಥಾಪ್ರಧಾನವಾದ ಪೂರ್ಣ 3 ಗಂಟೆಯ ನಾಟಕಗಳ ಆಗಮನವಾಯಿತು. ಪಾಂಡೇಶ್ವರ್, ಟೇಲರ್, ದಂಡಕೇರಿ, ಮ್ಯೊದಿನಬ್ಬ, ಪಿ.ಯಸ್.ರಾವ್ – ಸಾಂಸಾರಿಕ ಕಥಾಪ್ರಧಾನ ವಸ್ತುವಿನ ನಾಟಕ ನೀಡಿದರು.

ಕೆಮ್ತೂರರು ಕಿರೋಡಿಯನ್, ವಿಶುಕುಮಾರ್ ಮುಂದೆ ಕ್ಯಾಥರೀನ್, ಚಂದರ್–ಜಾನಪದಕ್ಕೆ ಒತ್ತು ನೀಡಿದರು. ವಿಶುಕುಮಾರ್ ಚಾರಿತ್ರಿಕ 'ಕೋಟಿ ಚೆನ್ನಯ' ಕತೆಯನ್ನು ವೈಚಾರಿಕ ನೋಟ, ತಾಂತ್ರಿಕತೆಯೊಂದಿಗೆ ರಂಗಕ್ಕೆ ತಂದರು. ವಿಶುಕುಮಾರರ ಹಾದಿಯಲ್ಲಿ ಮನು

ಇಡ್ಯರು ಇನ್ನಷ್ಟು ಎತ್ತರಕ್ಕೆ ಹೋಗಿ, ನವ್ಯ ನಾಟಕಗಳನ್ನು ನೀಡಿದರು. ಟೇಲರರದು ಸರಳ ಚುರುಕಿನ ಸಂಭಾಷಣೆ, ನಿರ್ದೇಶನ ಶಿಸ್ತು, ಇದರಿಂದಾಗಿ ಇವರ ನಾಟಕಗಳು ವೇಗವಾಗಿ ಜನಾಕರ್ಷಣೆ ಗಳಿಸಿಕೊಂಡವು. ಕೆಮ್ತೂರರು ಉದ್ಗರಿಸಿದಂತೆ 'ಟೇಲರರೇ ನನ್ನದು ಗಂಜಿ ಚಟ್ನಿ ಊಟವಾಗಿದ್ದರೆ ನಿಮ್ಮದು ಕೋಳಿರೊಟ್ಟಿ ಸಮ್ಮನದ (ಕಮರ್ಶಿಯಲ್ ಆಕರ್ಷಣೆಯ) ಔತಣ...'. ಕುಲಾಲ್, ಕಾವೂರ್, ಕೆ.ಬಿ.ಭಂಡಾರಿ, ವಿಜಯಕುಮಾರ್ ಶೆಟ್ಟಿ, ಕೆಮ್ಮಣ್ಣು ಮುಂತಾದವರು ಜಾನಪದ, ಐತಿಹಾಸಿಕ ಪೌರಾಣಿಕ ವಸ್ತುಗಳನ್ನಾಯ್ದರು ಪಾತ್ರಚಿತ್ರಣ ಸನ್ನಿವೇಶ ನಿರ್ಮಿತಿಗೆ ಭಾಷೆಯ ಮೆರುಗನ್ನಿತ್ತರು.

ಹೊಸ ಕಾಲದಲ್ಲಿ ಪ್ರೌಢ ಚಿಂತನೆಯ ಸಾಹಿತಿಗಳು ನಾಟಕದ ಆವರಣಕ್ಕೆ ಪ್ರವೇಶಿಸಿದರು. ವಿಶುಕುಮಾರ್, ಸದಾನಂದ ಸುವರ್ಣ, ಅಮೃತ ಸೋಮೇಶ್ವರ, ಕುದ್ಕಾಡಿ ವಿಶ್ವನಾಥ ರೈ ಮುಂತಾದವರಿಂದ ಡಿ.ಕೆ. ಚೌಟರವರೆಗೆ ಹರಡಿದ ಆಧುನಿಕ ಅಲೆ ತುಳುನಾಟಕಗಳನ್ನು ಭಾರತೀಯ ಭಾಷಾ ನಾಟಕಗಳ ಸಾಲಿಗೆ ಒಯ್ದಿತು. ಮನು ಇಡ್ಯಾರಂಥವರು ವೈಚಾರಿಕ ನವ್ಯ ನಾಟಕಗಳನ್ನು ನೀಡಿದರು.

ಎಂಬತ್ತು-ತೊಂಭತ್ತರ ದಶಕದಲ್ಲಿ ತುಳುನಾಟಕ ಕಥಾಪ್ರಧಾನದಿಂದ ಹಾಸ್ಯಪ್ರಧಾನಕ್ಕೆ ಹೊರಳಿಕೊಂಡಿತು. ರಸ್ತೆಯಲ್ಲಿ ನಿಂತು ಜೋಕ್ಸ್ ಹೇಳಿಕೊಳ್ಳುವ ರೀತಿಯ ಸಂಭಾಷಣೆಗಳ ಸರಪಳಿಗಳೇ ನಾಟಕ ಸಾಹಿತ್ಯದಂತೆನಿಸಿತು.

ತೊಂಭತ್ತರ ದಶಕದಲ್ಲಿ ಆಧುನಿಕ ರಂಗಭೂಮಿ ಮತ್ತೆ ಜಾಗೃತವಾಯಿತು. ನಾಟಕ ಸಪ್ತಾಹ, ಸ್ಪರ್ಧೆಗಳ ಮೂಲಕ ಹಲವು ಪ್ರತಿಭಾಸಂಪನ್ನ ನಿರ್ದೇಶಕರ ಮೂಲಕ ತುಳು ರಂಗಭೂಮಿ ಬೆಳೆಯಿತು. ಅನುವಾದ ನಾಟಕಗಳ ರಂಗಪ್ರಯೋಗಗಳು ತುಳುವಿನ ಪರಿಧಿಯನ್ನು ವಿಸ್ತರಿಸಿದವು.

2001ರಲ್ಲಿ ಉಡುಪಿಯ ಪಂದುಬೆಟ್ಟಿನಲ್ಲಿ ತುಳುನಾಟಕ ಸ್ಪರ್ಧೆ ರಾಜ್ಯಮಟ್ಟದಲ್ಲಿ ನಡೆದುದು ವಿಶೇಷ.

2002ರಲ್ಲಿ ಕಾರ್ಕಳ ಮಂಜುನಾಥ್ ಪೈ ಹಾಲ್‌ನಲ್ಲಿ ಬಜಗೋಳಿಯ ಪ್ರೀತಿ ಕಲಾವಿದರು ಇವರಿಂದ ತಾಲೂಕು ಮಟ್ಟದ ತುಳುನಾಟಕ ಸ್ಪರ್ಧೆ ಜರಗಿತ್ತು.

ಸಾಮಾಜಿಕ, ಸಾಂಸಾರಿಕ ಇಲ್ಲವೇ ಜಾನಪದ, ಚಾರಿತ್ರಿಕ ಕಥಾಪ್ರಧಾನ ಸಾಂಪ್ರದಾಯಿಕ ನಾಟಕಗಳೇ ತುಳುವಿನಲ್ಲಿ ಬಹಳವಾಗಿ ಬೆಳೆದುಬಂದವು. ಕಿರೋಡಿಯಲ್, ಯು.ಆರ್. ಚಂದರ್, ಭಂಡಾರಿ, ಕ್ಯಾಥರೀನ್, ಕುಲಾಲ್‌ರಂಥವರು ಚಾರಿತ್ರಿಕ ಜಾನಪದವನ್ನು ತಂದರು. ನಾಟಕ ಮಂಡಳಿಗಳು, ಸಂಘಸಂಸ್ಥೆ, ಶಿಕ್ಷಣಾಲಯಗಳ ಹವ್ಯಾಸಿ ನಟರು, ನಾಟಕಕಾರರು, ನಿರ್ದೇಶಕರು, ಗೀತರಚನಾಕಾರರು ಈ ಪರಂಪರೆಯನ್ನು ಮುಂದುವರಿಸಿದರು. ಎಂಬತ್ತು-ತೊಂಭತ್ತರ ದಶಕದಲ್ಲಿ ಆಧುನಿಕ ಕಲೆ ಅಡಿಯಿಟ್ಟು, ಅಲ್ಲಲ್ಲಿ ವಿರಳ ಪ್ರಯತ್ನಗಳಾದವು. ಸದಾನಂದ ಸುವರ್ಣ, ಮನು ಇಡ್ಯ ಮುಂತಾದವರು ಹಳೆಯ ವಸ್ತುವನ್ನೇ ಆದರೂ, ಆಧುನಿಕ ಸಂಘರ್ಷಗಳ, ವರ್ತಮಾನ ಬದುಕಿನ ಒಳತೋಟಿಗಳ ಚೌಕಟ್ಟಿನಲ್ಲಿ ನಾಟಕಗಳನ್ನು ರಚಿಸಿ ಪ್ರಯೋಗಿಸಿದರು. ಅಮೃತ ಸೋಮೇಶ್ವರ ಮತ್ತಿತರ

ಶಿಕ್ಷಿತ ತಜ್ಞರು ಗೋಂದೋಳುವಿನಂತಹ ಮಾದರಿ ನಾಟಕಗಳನ್ನು ರಚಿಸಿಕೊಟ್ಟರು. ರಂಗತರಬೇತಿ ಪಡೆದ ನಿರ್ದೇಶಕರು ತುಳುನಾಟಕಗಳನ್ನು ಕೈಗೆತ್ತಿಕೊಳ್ಳತೊಡಗಿದರು.

ಹೀಗೆ ಅಲ್ಲೊಂದು ಇಲ್ಲೊಂದು ಪ್ರಯತ್ನ ಆಧುನಿಕ ರಂಗಭೂಮಿ ದೃಷ್ಟಿಯಿಂದ ನಡೆದರೆ ವೃತ್ತಿಪರ ನಾಟಕ ರಂಗ ಒಂದು ರೀತಿಯ ನಿಂತ ನೀರಿನಂತಾದ ಸಂದರ್ಭದಲ್ಲಿ ನಗೆನಾಟಕಗಳು ಪ್ರವೇಶಿಸಿ, ಅದ್ದೂರಿ ಜಯಭೇರಿ ಹೊಡೆದವು. ಹಣ ಕೊಟ್ಟು ಅಳುವುದೋ, ಚಿಂತನೆಯ ತಾಕಲಾಟಕ್ಕೆ ಪಕ್ಕಾಗುವುದೋ ಬೇಕಾಗಿಲ್ಲ, ಹೊಟ್ಟೆ ಹುಣ್ಣಾಗುವಂತೆ ನಕ್ಕುಬಿಟ್ಟರೆ ಸಾಕು ಎನ್ನುವ ಪ್ರೇಕ್ಷಕ ಸಮುದಾಯದ ಧೋರಣೆಯನ್ನು ಲಕ್ಷಿಸಿ ಅಥವಾ ಕಮರ್ಶಿಯಲ್ ದೃಷ್ಟಿಯಿಂದ ಇದೇ ಸುಗಮದಾರಿ ಎಂದು ಅರ್ಥ ಮಾಡಿಕೊಂಡು ಹಾಸ್ಯನಾಟಕ ತಂಡಗಳು ಅದನ್ನೇ ನಿರಂತರವಾಗಿ ಕೊಡುತ್ತಾ ಬಂದವು.

ನಾಟಕರಂಗ ಬೆಳೆಯಬೇಕಾದ ದಾರಿ ಇದಲ್ಲ. ನಾಟಕವೆಂದರೆ ಕೇವಲ ಮನರಂಜನೆ, ಹಾಸ್ಯ ಅಲ್ಲ ಅದು ಸಮಾಜಕ್ಕೆ ಶಿಕ್ಷಣ ನೀಡಬೇಕು, ಚಿಂತನೆ, ಸಂಘರ್ಷವನ್ನು ಪ್ರದರ್ಶಿಸಿ ಮನೋವಿಕಾಸಕ್ಕೆ ಪ್ರೇರೇಪಿಸಬೇಕು ಎನ್ನುವಂತಹ ಕಾಳಜಿ ಕಾಡಿತು. ಆಗ ಹಲವು ಹವ್ಯಾಸಿ ತಂಡಗಳ ಯುವ ಉಗಮವಾಯಿತು. ಕ್ರಮೇಣ ನಿರ್ದೇಶಕರು, ನಟರು, ರಂಗತಜ್ಞರು, ತಂತ್ರಜ್ಞರು, ಪೋಷಕರು-ಹವ್ಯಾಸಿ ರಂಗಭೂಮಿಯ ಬೆಳವಣಿಗೆಗಾಗಿ ಶ್ರಮಿಸಲು ಬಂದರು. ತುಳುವಿನ ಪ್ರಾದೇಶಿಕತೆಯನ್ನು ಆರಾಧನಾ ವಸ್ತು ವಿನ್ಯಾಸಗಳನ್ನೂ ತುಳು ನಾಟಕಗಳು ಇತ್ತೀಚಿನ ಸಂದರ್ಭಗಳಲ್ಲಿ ಬಳಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತಿವೆ. (ಹಾಗೆ ನೋಡಿದರೆ ಕೆ.ಎನ್. ಟೇಲರರು ಅರ್ವತ್ತರ ದಶಕದ ತನ್ನ 'ತಮ್ಮಲೆ ಅರ್ವತ್ತನ ಕೋಲ' ನಾಟಕದಲ್ಲೂ 'ಭೂತಕೋಲ' ದೃಶ್ಯವನ್ನು ಬಳಸಿಕೊಂಡದ್ದುಂಟು). ಮನೋ ವಿಶ್ಲೇಷಣಾತ್ಮಕವಾದ 'ಗುಡ್ಡೆದ ಭೂತ', 'ಬಸ್ತಿ', 'ಪಡೀಲ್ ಪಂಪೆ', 'ಗೋಂದೋಳು', 'ಅಸುದ್ದೊ', 'ಒಯ್ಲ್‌ಗ್ ತಿಕಿನಕ್ಲು', 'ಬೊಜ್ಜ', 'ಊರೇ ಗತಿ', 'ಪಿಲಿಪತ್ತಿ ಗಡಸ್', 'ಧರ್ಮೆತ್ತಿ ಮಾಯೆ', 'ಕತ್ತಲೆದ ತಾದಿ', 'ಚಂದ್ರಪ್ಪನ ಚಟ್ಟೊದ ಯಾತ್ರೆ' ಮುಂತಾದ ನಾಟಕಗಳು ತುಳುರಂಗಭೂಮಿಯನ್ನು ಆಧುನಿಕ ರಂಗಚಳುವಳಿಯ ಅಂಗವಾಗಿ ಕಾಣಿಸಿದ ಸಾರ್ಥಕ ಪ್ರಯತ್ನಗಳಾದವು.

ಅಖಿಲ ಭಾರತ ತುಳು ಒಕ್ಕೂಟ (ರಿ) ಇವರ ಬೆಳ್ಳಿಹಬ್ಬ ವಿಶ್ವ ತುಳುವೆರೆ ಪರ್ಬ -2014 ಇದರ ಅಂಗವಾಗಿ ಅಡ್ಯಾರಿನ ಸಹ್ಯಾದ್ರಿ ಕಾಲೇಜ್ ವೇದಿಕೆಯಲ್ಲಿ 4-12-2014ರಿಂದ 11-12-2014ರವರೆಗೆ ತುಳು ನಾಟಕ ಪರ್ಬ -ನಾಟಕ ಸಪ್ತಾಹ ಏರ್ಪಟ್ಟಿತು. ಅಲ್ಲಿ ದಿನಕ್ಕೊಂದರಂತೆ ಹಳೆಯ ಹೊಸ ಎಂಟು ನಾಟಕಗಳು ಪ್ರದರ್ಶಿತವಾದವು. ಮಾನಸ ಕಲಾವಿದೆರ್ ಫರಂಗಿಪೇಟೆ ಬಂಟ್ವಾಳ ಇವರಿಂದ "ಆರತಿ" (ರಚನೆ ಕೆ.ವಿ. ಭಟ್, ನಿರ್ದೇಶನ ಎಸ್. ಸಿ. ಅಂಚನ್, ಸುಜೀರು), ಸುಮನಸಾ ಕೊಡವೂರು ಅವರ 'ಕೋಟಿ ಚೆನ್ನಯ್ಯ' (ರಚನೆ ಎಂ. ಜಾನಕಿ ಬ್ರಹ್ಮಾವರ, ನಿರ್ದೇಶನ : ಬಾಲಕೃಷ್ಣ ಕೊಡವೂರು) ಸ್ನೇಹ ಕಲಾವಿದರ್ ಮಣಿಲ, ಪುಣಚ ಇವರ 'ನಮ ತೆರಿಯೊನುಗ' (ರಚನೆ, ನಿರ್ದೇಶನ, ರವಿಶಂಕರ್ ಶಾಸ್ತ್ರಿ, ಮಣಿಲ), ದೋಸ್ತಿ ಕಲಾವಿದೆರ್ ಪೆರ್ಮಾಯಿ

ಇವರ 'ಬಂಗಾರ್ ಕಂಡನಿ' (ರಚನೆ, ನಿರ್ದೇಶನ : ಮಾಧವ ಜೆಪ್ಪುಪಟ್ನ) ಸ್ಪೂರ್ತಿ ಮಹಿಳಾ ಮಂಡಳಿ, ಪದವಿನಂಗಡಿ ಇವರ 'ಸತ್ಯೊದ ಸಿರಿ' (ರಚನೆ : ಕದ್ರಿ ನವನೀತ ಶೆಟ್ಟಿ, ನಿರ್ದೇಶನ ತಾರಾನಾಥ್ ಉರ್ವ) ಪೃಥ್ವಿ ಆರ್ಟ್ಸ್, ಬೆಳ್ತಂಗಡಿ ಇವರ 'ಆ... ನಾಗಮಚ್ಚೆ' (ರಚನೆ, ನಿರ್ದೇಶನ : ಅನಂತ ಎಸ್. ಇರ್ವತ್ರಾಯ); ವೈಷ್ಣವಿ ಕಲಾವಿದೆರ್, ಮಂಜೇಶ್ವರ ಇವರ 'ನೆನಪು ದೀಲೆ' (ರಚನೆ, ನಿರ್ದೇಶನ, ರಾಜೇಶ್ ಮಂಜೇಶ್ವರ) ಕಲಾಜಗತ್ತು (ರಿ) ಮುಂಬೈ ಇವರ 'ಪಗರಿದ ಮಂಚವು' (ರಚನೆ, ನಿರ್ದೇಶನ : ತೋನ್ಸೆ ವಿಜಯಕುಮಾರ್ ಶೆಟ್ಟಿ, ಮುಂಬೈ), ಸುಮನಸಾ ಕೊಡವೂರು ಮತ್ತು ಕಲಾಜಗತ್ತು ತಂಡಗಳ ನಿರ್ವಹಣೆ ನೆನಪಿಡುವುದಾಗಿತ್ತು.

ಉಡುಪಿ ತುಳುಕೂಟದ ಕೆಮ್ತೂರು ತುಳು ನಾಟಕ ಸ್ಪರ್ಧೆಯಲ್ಲಿ ಹಲವು ಹೊಸ ಆಧುನಿಕ ನಾಟಕಗಳು, ಅನುವಾದ ನಾಟಕಗಳು, ಚಿಂತನಶೀಲ ಪ್ರಯೋಗಗಳು ನಡೆಯುತ್ತ ಬಂದಿವೆ.

ನಿರಂತರ ಮೂಡುಬೆಟ್ಟು ಕಲಾವಿದರು, ರಂಜನಾ ಕಲಾವಿದರು, ಭೂಮಿಕಾ ಹಾರಾಡಿ, ವಡಭಾಂಡೇಶ್ವರ ಮಲ್ಪೆ ಕಲಾವಿದರು, ಸಂಗಮ ಕಲಾವಿದರು ಮಣಿಪಾಲ, ಸುಮನಸಾ ಕೊಡವೂರು, ನವಸುಮ (ರಿ.), ಕೊಡವೂರು, ವನಸುಮ (ರಿ.) ಕಟಪಾಡಿ ಮುಂತಾದ ಹವ್ಯಾಸಿ ನಾಟಕ ತಂಡಗಳು ಈ ಸ್ಪರ್ಧೆಯ ಆರಂಭಕಾಲದಿಂದಲೇ ತಜ್ಞ ನಿರ್ದೇಶಕರ ನೇತೃತ್ವದಲ್ಲಿ ರಂಗಕ್ಕೆ ಬರತೊಡಗಿದರು.

2015ರ (ನವೆಂಬರ್-ಡಿಸೆಂಬರ್ ತಿಂಗಳುಗಳಲ್ಲಿ ಉಡುಪಿ ಎಂ.ಜಿಎಂ ಕಾಲೇಜಿನ ಮುದ್ದಣ ಮಂಟಪದಲ್ಲಿ ಪ್ರಯೋಗಕ್ಕೆ ಬಂದ ನಾಟಕಗಳೆಂದರೆ 'ಅಮಾಸ ಕಲಾ ತಂಡ' ಉಡುಪಿ ಇವರ 'ಮಾರಿ ಗಿಡಪ್ಪುಲೆ' (ರಚನೆ, ಮನು ಇದ್ಯ; ನಿರ್ದೇಶನ ರಾಜೇಶ್ ಕುಂದರ್ ಬೈಕಾಡಿ), ರಂಜನಾ ಕಲಾವಿದರು ಕಟಪಾಡಿ ಇವರ 'ಅಮ್ಮ ರಿಟಾಯರ್ ಆಪೆರ್' (ನಿರ್ದೇಶನ : ವಿದ್ದು ಉಚ್ಚಿಲ್), 'ಸಂಗಮ ಕಲಾವಿದರು ಮಣಿಪಾಲದವರ 'ಚೋಮನ ದುಡಿ' (ಮೂಲ : ಡಾ. ಶಿವರಾಮಕಾರಂತ ತುಳು ರೂಪಾಂತರ ಅರುಣ್ ಮಣಿಪಾಲ, ನಿರ್ದೇಶನ ಪೃಥ್ವಿನ್ ಕೆ.) ಕರಾವಳಿ ಕಲಾವಿದರು (ರಿ) ಮಲ್ಪೆಯವರ 'ಪಂಚವಟಿ' ಮೂಲ : ಕುವೆಂಪು, ನಿರ್ದೇಶನ ಗಣೇಶ್ ಎಂ.) ವನಸುಮ ವೇದಿಕೆ (ರಿ) ಕಟಪಾಡಿ ಇವರ 'ದಗಲ್ಬಾಜಿಲು' (ಮೂಲ : ಬ್ರೆಕ್ಟ್ ಕನ್ನಡಕ್ಕೆ ಕೆ. ವಿ. ಸುಬ್ಬಣ್ಣ, ತುಳು ಅನುವಾದ, ನಿರ್ದೇಶನ : ಬಾಸುಮ ಕೊಡಗು), ಕಲಾಭಾರತಿ ಕರ್ನಾಟಕ ಸಂಘ ಮುಂಬಯಿ ಇವರ 'ಶಾಕುಂತಲ' ಮೂಲ : ಮಹಾಕವಿ ಕಾಳಿದಾಸ; ತುಳು ಅನುವಾದ, ನಿರ್ದೇಶನ ಡಾ. ಭರತ್ ಕುಮಾರ್ ಪೊಲಿಪು, ನಮ ತುಳುವೆರ್ ಕಲಾ ಸಂಘಟನೆ (ರಿ) ನಾಟ್ಕದೂರು, ಮುದ್ರಾಡಿ, ಇವರ 'ಮಂಡೋದರಿ ರಾವಣಾಯನೊ' ಮೂಲ ವ್ಯಾಸ ದೇಶಪಾಂಡೆ. ತುಳು ಅನುವಾದ : ಸತ್ಯ ಉಡುಪಿ, ನಿರ್ದೇಶನ : ಸುಕುಮಾರ್ ಮುದ್ರಾಡಿ.

ಭೂಮಿಗೀತಾ ಸಾಂಸ್ಕೃತಿಕ ವೇದಿಕೆ ಪಟ್ಲ – ಇವರ 'ಗುಣಮುಖ' ಮೂಲ

ಕನ್ನಡ: ಪಿ. ಲಂಕೇಶ್ : ತುಳು ರೂಪಾಂತರ ಸಂತೋಷ್ ಶೆಟ್ಟಿ ಹಿರಿಯಡಕ ನಿರ್ದೇಶನ : ಸಂತೋಷ್ ನಾಯಕ್ ಪಟ್ಲ.

ಇಂತಹ ನಾಟಕಗಳ ಮೂಲಕ ಹಲವು ನುರಿತ ಮತ್ತು ಹೊಸ ನಿರ್ದೇಶಕರು ಹಲವು ಹವ್ಯಾಸಿ ರಂಗಕರ್ಮಿಗಳನ್ನು ತರಬೇತಿಗೊಳಿಸಿದ್ದಾರೆ. ಹಳಬರು ಮತ್ತಷ್ಟು ಮಾಗಿದ ನಿರ್ವಹಣೆ ತೋರ್ಪಡಿಸಿ ಉಡುಪಿ ಭಾಗದ ಪ್ರೇಕ್ಷಕರ ಮನ ಗೆದ್ದಿದ್ದಾರೆ.

ಮಂಗಳೂರಿನಲ್ಲಿ ನಿಂತ ನೀರಾಗಿದ್ದ ಪ್ರಯೋಗ ರಂಗಭೂಮಿಗೆ ಉರುಳು, ಕೋರ್ಟ್ ಮಾರ್ಷಲ್ ಮುಂತಾದ ಕನ್ನಡ ನಾಟಕಗಳ ಮೂಲಕ ಹೊಸ ಸಂಚಲನ ಮೂಡಿಸಿದ ಸದಾನಂದ ಸುವರ್ಣರು ತುಳುಹಾಸ್ಯನಾಟಕಗಳೇ ವಿಜೃಂಭಿಸುತ್ತಿದ್ದ ಕಾಲಘಟ್ಟದಲ್ಲಿ (2014) 'ಕಲಂಕ್‌ದಿ ನೀರ್' ಎನ್ನುವ ಅನುವಾದ ನಾಟಕವನ್ನು ಮಂಗಳೂರಿನಲ್ಲಿ ಪ್ರಯೋಗಕ್ಕೆ ತಂದರು. (ಮೂಲ ಜಿ.ಬಿ. ಜೋಶಿ ಅವರ 'ಕದಡಿದ ನೀರ್') ಮಹಾತ್ವಾಕಾಂಕ್ಷೆಯ ಈ ನಾಟಕದ ತಾಲೀಮು ಸುಮಾರು ಒಂದು ವರ್ಷದ ಅವಧಿ ತೆಗೆದುಕೊಂಡಿತು. ಪ್ರಯೋಗ ನಿರೀಕ್ಷಿತ ಪರಿಣಾಮ ಬೀರದಿರಲು ಭಾಷೆ, ಕಾಲ, ಪ್ರದೇಶದ ಭಿನ್ನತೆಯೂ ಕಾರಣವಾಗಿರಬಹುದು. ಆದರೆ ಸುವರ್ಣರು ಈ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳದೆ 'ಮಳೆ ನಿಲ್ಲುವವರೆಗೆ' ಕನ್ನಡ ನಾಟಕದತ್ತ ಮನನೆಟ್ಟರು, ಎಂದಿನ ಯಶಸ್ಸು ಕಂಡರು.

ಮುಂಬಯಿಯಿಂದ ಬಂದು ಮಂಗಳೂರಲ್ಲಿ ನೆಲೆಸಿದ ಸದಾನಂದ ಸುವರ್ಣರ ನಾಟಕದ ನಿರ್ದೇಶನ, ಶಿಸ್ತು, ತಾಲೀಮು, ರಂಗಪರಿಣಾಮಗಳು ಪರೋಕ್ಷವಾಗಿ ತುಳು ರಂಗಭೂಮಿಯನ್ನು ಸಾಕಷ್ಟು ಎಚ್ಚರಿಸಿ, ಪ್ರಭಾವಿಸಿವೆ.

* * *

ತುಳುವಿನ ಹಳೆಯ ನಾಟಕಗಳ ವಸ್ತು ಹೆಚ್ಚು ಸಾಂಸಾರಿಕ ಸ್ವಲ್ಪ ಸಾಮಾಜಿಕ, ಅಲ್ಪ ಜಾನಪದ. ತಿಂಗಳಾಯ, ಶಿವಣ್ಣ ಹೆಗ್ಡೆ, ದೂಮಪ್ಪ ಮಾಸ್ತರ್ ಮುಂತಾದವರ ನಾಟಕದ ವಸ್ತುಗಳು ಸಮಾಜ ಸುಧಾರಣೆಯ ಆಶಯದಿಂದ ಹುಟ್ಟಿಕೊಂಡವು.ಇದನ್ನು ಮುಂದುವರಿಸಿದ ಕೆಮ್ತೂರರು ಸಂಸಾರ, ಕುಟುಂಬಗಳೊಳಗಿನ ವೈರುಧ್ಯ, ಹಾಸ್ಯ ಪ್ರಸಂಗಗಳನ್ನು ಗಾದೆ, ಒಗಟು, ನುಡಿಕಟ್ಟುಗಳನ್ನು ಒಳಗೊಂಡ ಸಂಭಾಷಣೆ, ಹಾಡುಗಳನ್ನೂ, ಪರಿಸರದ ಪ್ರಾಣಿಪಕ್ಷಿ, ಜಲಚರ (ಉದಾ : ದನ, ಎಮ್ಮೆ, ಕೋಣ, ಮೀನು, ಕಪ್ಪೆ ಇತ್ಯಾದಿ)ಗಳನ್ನೂ ಅವಿಭಾಜ್ಯವಾಗಿಸತೊಡಗಿದರು. ರಾಮ ಕಿರೋಡಿಯನ್‌ರಂಥವರು ಪುಷ್ಟವಾದ ಜನಪದ ಸಾಹಿತ್ಯದ ಸಂದಿ, ಪಾಡ್ದನದ ಕತೆಗಳನ್ನೂ (ಉದಾ: ಸರ್ಪಸಂಕಲೆ, ಬಿರ್ದದ ಬೈರವೆರ್) ಜತೆಗೆ ಸಾಮಾಜಿಕ (ಮಗೆ ಮಂಜಣೆ, ಮುತ್ತು ಮಾನಿಕಾ ಇತ್ಯಾದಿ) ಸಮರ್ಥವಾಗಿ ಬಳಸಿಕೊಳ್ಳತೊಡಗಿದರು; ಪಾತ್ರಸೃಷ್ಟಿಯಲ್ಲಿ ಗಟ್ಟಿತನ ತೋರಿದರು. ಮುಂದೆ ವೈವಿಧ್ಯಮತ ನಾಟಕಗಳು ವಿವಿಧ ವಸ್ತು ವಿಷಯಗಳೊಂದಿಗೆ ಬಂದವು. ಸಾಮಾಜಿಕ, ಐತಿಹಾಸಿಕ ನಾಟಕಗಳು ಪ್ರೊಸೀನಿಯನ್ ಮಾದರಿಯಲ್ಲಿ ರಂಗಕೃತಿಗಳಾದವು.

ಎಪ್ಪತ್ತರ ದಶಕದಿಂದೀಚೆಗೆ ಆಧುನಿಕ ಗಾಳಿ ಬೀಸತೊಡಗಿದಾಗ ಗ್ರೀಕ್, ಮರಾಠೀ ಬಂಗಾಳಿ, ಕನ್ನಡದ ನಾಟಕಗಳ, ಆಧುನಿಕ ಚಿಂತನೆಯ ಪ್ರಭಾವದ ನಾಟಕಗಳು ಬಂದವು. ಪುರಾಣ, ಐತಿಹ್ಯಗಳ ಕಥಾವಸ್ತು, ಆಧುನಿಕ ಮನೋವಿಶ್ಲೇಷಣಾತ್ಮಕ ಚಿಂತನೆ ಗಳೊಂದಿಗೆ ಸದಾನಂದ ಸುವರ್ಣ, ಅಮೃತ ಸೋಮೇಶ್ವರ, ಮನು ಇಡ್ಯಾರಂಥವರಿಂದ ಮೊದಲಾಗಿ ಡಿ.ಕೆ. ಚೌಟರ ಎತ್ತರಕ್ಕೆ ತಲುಪಿದವು. ಪ್ರಬುದ್ಧ ನಿರ್ದೇಶಕರ ಪರಿಕಲ್ಪನೆಯಲ್ಲಿ ನೂತನ ರಂಗತಂತ್ರಗಳೊಂದಿಗೆ ನಾಟಕಗಲು ಪ್ರಭಾವೀ ರಂಗಕೃತಿಗಳಾಗುವತ್ತ ಪ್ರಯೋಗಶೀಲವಾದವು. ಸಂಪೂರ್ಣವಾದ ನಾಟಕದಲ್ಲಿ ಐದು ಅಂಕಗಳು ಇರಲೇಬೇಕು ಎನ್ನುವ ಗ್ರೀಕ್ ನಾಟಕ ತತ್ವವನ್ನು ಬಹುತೇಕ ತುಳು ನಾಟಕಕಾರರೂ ಅನುಸರಿಸಿಕೊಂಡು ಬಂದರು.

## ಭಾಷೆ

1969ರಲ್ಲಿ ಎಂ. ಪುರುಷೋತ್ತಮರ 'ಬೊಲ್ಪುದಾಂತಿ ತುಡಾರ್' ನಾಟಕಕೃತಿ ಸಹೋದರ ಕಲಾವೃಂದ ಮಣ್ಣಗುಡ್ಡೆ ಇವರಿಂದ ಪ್ರಕಟಗೊಂಡಾಗ ಒಳಪುಟದಲ್ಲಿ ಪಾತ್ರ ವಿವರ ಮತ್ತು ಕಲಾವಿದರ ಹೆಸರುಗಳನ್ನು ವಿವರವಾಗಿ ಕಾಣಿಸಿದ್ದಾರೆ. 2015ರಲ್ಲಿ ಪ್ರಕಟವಾದ ತಮ್ಮಲಕ್ಷ್ಮಣರ 'ಸತ್ಯ ಮುನೀಂಡಾ' (ಪ್ರಥಮ ಪ್ರಯೋಗ 1976) ಕೃತಿಯಲ್ಲಿ ಪುಸ್ತಕದ ಕೊನೆಯಲ್ಲಿ ರಂಗಪರಿಕರಗಳ ಸುದೀರ್ಘ ವಿವರಣೆಯಿದೆ.

ತುಳುನಾಟಕಗಳ ಭಾಷೆಯ ದೃಷ್ಟಿಯಿಂದ ಗಮನಿಸಿದರೆ ಕೆಮ್ತೂರು ದೊಡ್ಡಣ್ಣ ಶೆಟ್ಟರದು ಗ್ರಾಮೀಣ ಜನಬಳಕೆಯ ಆಡುಮಾತುಗಳ ಸರಸ ಸಂಭಾಷಣೆಯಾದರೆ ಪಡುಬಿದ್ರಿ ಶಿವಣ್ಣ ಹೆಗ್ಡೆ ತನ್ನ 'ವಿದ್ಯೆದ ತಾದಿ'(1936) ನಾಟಕದಲ್ಲಿ ಶ್ಲೇಷಾರ್ಥ – ವಿಡಂಬನಾ ಸಂಭಾಷಣೆಯನ್ನು ರುಚಿಶುದ್ಧಿಯೊಂದಿಗೆ ಮೇಳೈಸಿದ್ದು ಕಾಣುತ್ತದೆ. ಉದಾ : 'ಪುಚ್ಚೆದ ಮಿತ್ತ್ ಗೋಣಿ ದೀವೊಂದು ಎಲಿ ಸಂತೆಗ್ ಪೋಪುಂಡು' (ಬೆಕ್ಕಿನ ಮೇಲೆ ಹೊರೆಚೀಲ ಹೇರಿಸಿಕೊಂಡು ಇಲಿ ಸಂತೆಗೆ ಹೋಗುತ್ತಿದೆ); 'ಸಂತೆಡ್ ಒಂಜಿ ಪಿಜಿನ್ ಕುಲ್ಲುದು ಆನೆದ ಬ್ಯಾರ ಮಲ್ಪುಂಡು' (ಸಂತೆಯಲ್ಲೊಂದು ಇರುವೆ ಕೂತು ಆನೆಯ ವ್ಯಾಪಾರ ಮಾಡುತ್ತಿದೆ) – ಇಂತಹ ಸಮರ್ಥ ಭಾಷೆಯ ಬಳಕೆ ಅಲ್ಲಿ ಕಾಣಿಸುತ್ತದೆ. ಕೆ.ಎನ್.ಟೇಲರ್‌ರದು ಬಿಗುವಾದ ಚೌಕಟ್ಟಿನ – ಎಲ್ಲೂ ಸಡಿಲಿಸಲು ಕಷ್ಟವಾದ ಆಯ್ದ ಪದಪುಂಜಗಳ ವಾಕ್ಯಸರಣಿ – ಸಂಭಾಷಣೆ. ಅವರ ನಾಟಕದ ಹಾಡುಗಳೂ ಪ್ರಾಸಬದ್ಧ. ಕುಲಾಲರದು ಸಾಹಿತ್ಯಿಕ ಸುಭಗ ಭಾಷೆಯಾದರೆ, ಮಚ್ಚೇಂದ್ರನಾಥ ಪಾಂಡೇಶ್ವರರದು ಹಾಸ್ಯಮಿಶ್ರಿತ ಭಾಷೆ, ದಂಡಕೇರಿ, ಅಡ್ಯಾರು ಮತ್ತಿತರರದು ವಸ್ತುವಿಗನುಗುಣವಾಗಿ ಬದಲಾಗುವ ಸರಳ, ಭಾವುಕ ಪದಪುಂಜಗಳ ಸಂಭಾಷಣೆ.

ರಾಮ ಕಿರೋಡಿಯನ್ನರು ಹಳ್ಳಿ–ನಗರ ಜನಜೀವನದ ಅಂತರಂಗ ಅರಿತವರು. ಬದಲಾವಣೆಯ ನೋಟ ಅವರಲ್ಲಿತ್ತು. ಸಾಮಾಜಿಕ ಬದ್ಧತೆ ಮತ್ತು ಕಲಾತ್ಮಕತೆ ಅವರ

ಶೈಲಿಯಾಯಿತು. ಸಮಾಜದಲ್ಲಿದ್ದ ಅಸ್ಪೃಶ್ಯತೆ, ಜಾತಿ, ಭೇದ ಮುಂತಾದ ಪಿಡುಗುಗಳನ್ನು ಆಳದಲ್ಲಿ ಗ್ರಹಿಸಿ, ಅಭಿರುಚಿಶುದ್ಧವಾಗಿ ನಿರೂಪಿಸಲು ಅವರು ಪ್ರಯತ್ನಿಸಿ ಯಶಸ್ವಿಯಾದರು. ಈ ನಾಟಕಗಳು ಬಹು ಬೇಡಿಕೆ ಪಡೆದವು. ಆದರೆ ಮೂಲ ತುಳುವಿನ

| | | |
|---|---|---|
| ಪೆರ್ಗಡೆ | : | ನಿನ ಮಿತ್ತ್ ದಯದೀಡೆ ಬತ್ತಿನಾಯೆ ಯಾನ್ ! ಇಂದದೆ, ಈಯಿ ಒರೊ ಇಂಚಿ ಬಲ. ಪಣ್ಪೆ ! |
| ದೇಬೆ | : | ಇಂಚಿತ್ತಿ ಪಾಪ ಕರ್ಮೊಗು ದಾಯೆ ಅಂಗಲ್ಪು ಮಲ್ಪುವರ್ ! |
| | | **\|\| ಹಿಂದೋಳ -ರೂಪಕ \|\|** |
| | | **ಒಲ್ತು ಬತ್ತಿನ ಬುದ್ಧಿ ಮರ್ಲ್ ತೆಲಿಕೆ ತೆಲ್ತ್**<br>**ನಲ್ತೊಂದು ಬತ್ತಾರೆ ಇಂಚಿ ?**<br>**ಕಲ್ತಿ ಕಲ್ಪಾಟ ಹೆಚ್ಚಾದ್ ರಾವಣೆ ದುಂಬು**<br>**ಮಲ್ತಿನನ್ಯಾಯ ಪಿನಯರ \|\|** |
| ಪೆರ್ಗಡೆ | : | ಅಹ್ಹಹ್ಹಹ್ಹ ! ... ಬಾರೀ ಕಲ್ಪಾಟದ ಪೊಣ್ಣುಯು ಈಯಿ ! ಎಂಕ್ ರಾಮಾಯಣೊ ಪಂಡ್ ಕೊರ್ಪ ! ಪುರಾಣೊಳೆಡ್ ಮಲ್ಲ ಮಲ್ಲ ದೇವೆರ್‌ನಾಕುಳೇ ಪೊಣ್ಣುಳೆ ಬೆರಿಯೆ ತಿರ್ಗ್‌ದೆರ್. ಎನ್ನ ನಿನ್ನ ಕತೆ ಬುಡು! |
| ದೇಬೆ | : | ಅಂಚಿತ್ತಿ ಕತೆಟ್ ಎಂಕ್ ಇಷ್ಟ ಇಜ್ಜಿ ದನಿಕುಳೆ. ನಿಲೆದಾಂತಿ ಕಯೊಕು ಎನನ್ ನೂಕಾಡೆ. |
| ಪೆರ್ಗಡೆ | : | ಒಂಜಿ ಪಾತೆರ ತೆರಿಯೊಣು, ಆಣ್‌ಪೊಣ್ಣುನ ಉಳಯಿದ ಒಯಿಪಾಟದ ಸೂತ್ರೊಡೇ ಈ ಲೋಕದ ಆಟೊ ಪೂರಾ ನಡಪ್ಪುನೆ ! ನನಾಂಡಲಾ ಈ ಉಳಮರ್ಮ ತೆರಿಯೊನ್ಲ. |
| ದೇಬೆ | : | ಕೈಪತ್ತಿನಾರೆಗ್ ಏನಿಗ್‌ಲಾ ಯಾನ್ ರಡ್ಡ್ ಎಣ್ಣಾಯೆ ದನಿಕುಳೆ ! |
| ಪೆರ್ಗಡೆ | : | ಕೈಪತ್ತಿನಾಯೆ ಇತ್ತೊನಾಡ್‌ಯ ಕೈಸಾಂಗ್ ಲೆಕ್ಕೊ ಆಧಾರೊಗು ! ನಿನ್ನ ಪಿರ್ತಿದ ಪರಿಪುಗು ಪಾಪು ಯಾನಾಪೆ, |
| ದೇಬೆ | : | ದನಿಕುಳೆ, ಇಂಚ ಪಂಡ್‌ದ್ ದೋಸ ಕಟ್ಟಡೆ, ಪಾಪೊ ತುಂಬಡೆ ! |
| ಪೆರ್ಗಡೆ | : | ಅಂದಯ, ಊರುದ ಗುರ್ಕಾರೆ ಯಾನ್ ಮೋಕೆಡ್ ಮಲ್ಲ ಮನಸ್ಸ್ ಮಲ್ತ್‌ದ್ ಲೆಪ್ಪುನೆ ಮಲ್ಲೆನಾ, ಈಯಿ ಓಕೊಣುನೆ ಮಲ್ಲೆನಾ ? ಈತ್‌ಲಾ ಆಲೋಚನೆ ಮಲ್ಪುಜತ್ತೆ ಈಯಿ? ಈ ಊರುದ ತಿರ್ಲ್‌ಪೊರ್ಲುದ ಬಸ್ತ್ ಬದ್‌ಕ್ ಪೂರಾ ನಮ್ಮವುಂದು ನನಲಾ ನಿಕ್ಕ್ ಗೊತ್ತಿಜ್ಜಾ ? |
| ದೇಬೆ | : | ಪೆರಣ ಪೋಂಡಲಾ ಯಾನ್ ಈರೆ ಲೆಪ್ಪುಗು ಅಂಚ ಓಕೊಣಯೆ ದನಿಕುಳೆ! |

**ಅಮೃತ ಸೋಮೇಶ್ವರರ 'ಗೋಂದೋಳು' ನಾಟಕದ ಸಂಭಾಷಣೆಯ ಮಾದರಿ**

ಭಾಷೆಯ ಬಳಕೆ ಧ್ವನಿಪೂರ್ಣವಾಗಿ ಬರಲು ಪ್ರೇಕ್ಷಕರು ಸುದೀರ್ಘಕಾಲ ಕಾಯ ಬೇಕಾಯಿತು. ವಿಶುಕುಮಾರ್ ತನ್ನ ಕೋಟಿಚೆನ್ನಯ (1963) ನಾಟಕದಲ್ಲಿ ಚಾರಿತ್ರಿಕ ವಸ್ತುವನ್ನು ಆಧುನಿಕ ಚಿಂತನೆ, ತಂತ್ರದೊಂದಿಗೆ ನೀಡಿದರು. ಕಿರೋಡಿಯನ್, ಅಮೃತರು, ಕ್ಯಾಥರಿನ್, ಮನು ಇಡ್ಯ, ಸದಾನಂದ ಸುವರ್ಣ, ಚೌಟರದು ತುಳು ಜನಪದ ಸೊಗಡಿನ ಕಸುವಿನ ಭಾಷೆ, ಕುದ್ಕಾಡಿ ವಿಶ್ವನಾಥ ರೈಯವರ 'ಅಬ್ಬಕ್ಕಬ್ಬೆ' (1987) ನಾಟಕದಲ್ಲಿ ತುಳುವಿನ ನವ್ಯಪ್ರಯೋಗವಾಗಿ ದೃಶ್ಯಗಳಿಗೆ ಮುನ್ನೀರ್, ಒಯ್ಬುನೀರ್, ಸುಳಿ ನೀರ್, ಪನ್ನೀರ್, ಕೊದಿ ನೀರ್ ಎಂಬಂತೆ ದೃಶ್ಯಗಳನ್ನು ಹೆಸರಿಸಿದ್ದಾರೆ. ಆಧುನಿಕ ನಾಟಕಗಳು ಚಿಂತನ ಪ್ರಧಾನ ವಸ್ತು, ಭಾಷೆಯಿಂದ ನಿರ್ದೇಶಕ, ನಟರಿಗೆ ಸವಾಲಾದವುಗಳು. ಕೊಡಿಯಾಲ್, ಕಾಪಿಕಾಡ್ ನಿತ್ಯದ ಹಾಸ್ಯ ಸನ್ನಿವೇಶಗಳ ಸಂಭಾಷಣೆಗಳ ಆಕರ್ಷಕ ಪಂಚ್'ಗಳನ್ನೇ ಸಶಕ್ತವಾಗಿ ಪೋಷಿಸಿದ ರಂಗರೂಪಗಳು.

## ತಂತ್ರ

ರಂಗತಂತ್ರವೆಂಬುದು ಮೊದಲು ಕಂಪೆನಿ ನಾಟಕಗಳ ಮಾದರಿಯಲ್ಲಿ ತುಳುವಿನಲ್ಲೂ ಮುಂದುವರಿಯಿತು. ಗ್ಯಾಸ್‌ಲೈಟ್, ಬೇಗಡೆಗಳ ಬೆಳಕು ವಿನ್ಯಾಸ ಅಂದಿನ ಸಾಧ್ಯತೆ ಯಾಗಿದ್ದರೆ ಆಧುನಿಕ ಸವಲತ್ತು ಪ್ರಭಾವಗಳು ಬೆಳೆದಂತೆಲ್ಲ, ಕಾಲಕಾಲಕ್ಕೆ ರಂಗವಿನ್ಯಾಸ, ಪರದೆ, ದೃಶ್ಯಾಂತರ, ಧ್ವನಿಬಳಕೆ, ಹಾವಭಾವ, ಸಂಗೀತ, ರಂಗಚಲನೆ – ಇಲ್ಲೆಲ್ಲ ಪರಿಷ್ಕಾರಗಳು ಆಗುತ್ತಲಿವೆ. ವಿಶುಕುಮಾರರು 60ರ ದಶಕದಲ್ಲಿ ಕೋಟಿಚೆನ್ನಯ ನಾಟಕದಲ್ಲಿ ಹಳ್ಳಿಯ ಸೆಟ್ಟಿಂಗ್ ಬಳಸಿದ್ದರು. 1970ರ ಸುಮಾರಿಗೆ ಮುಂಬೈಯಲ್ಲಿ ಸದಾನಂದ ಸುವರ್ಣರು ತನ್ನ 'ಗುಡ್ಡೆದ ಭೂತ' ನಾಟಕಕ್ಕೆ ಸಿಂಗಲ್ ಸ್ಟೇಜ್ ಸೆಟ್ ಮಾಡಿದರು. ಮುಂಬಯಿಯ ಅನ್ಯಭಾಷಾ ರಂಗಭೂಮಿಯ ಪರಿಚಯ ಪ್ರಭಾವದಿಂದಾಗಿ ಅವರ ಈ ನಾಟಕದ ಪ್ರಯೋಗ ತುಳು ರಂಗಭೂಮಿಗೆ ಹೊಸ ದಿಕ್ಕನ್ನು ಪರಿಚಯಿಸಿದರು. ಅನಂತರ ಸುವರ್ಣರು ಮರಾಠಿಯಿಂದ ಅನುವಾದಿತ 'ಯಾನ್ ಪಿನಾಯೆ' (ತುಳುವಿಗೆ ಅನುವಾದ : ಶಿಮುಂಜೆ ಪರಾರಿ) ಎಂಬ ಪೂರ್ಣಪ್ರಮಾಣದ ನಾಟಕವನ್ನು ನಿರ್ದೇಶಿಸಿದರು. ತಿರುಗುಮಂಚ ತಂತ್ರವನ್ನು ತುಳು ರಂಗಭೂಮಿಗೆ ಪರಿಚಯಿಸಿದ ಪ್ರಥಮ ನಾಟಕ ಎಂಬುದಾಗಿ ಹೆಗ್ಗಳಿಕೆ ಪಡೆಯಿತು. ಮಚ್ಚೇಂದ್ರನಾಥ್ ಪಾಂಡೇಶ್ವರರ 'ಅಲೆಗ್ಸಾಂಡರ್' (ಎಂಬತ್ತರ ದಶಕದಲ್ಲಿ) ನಾಟಕದಲ್ಲಿ ಅದ್ದೂರಿಯ ದೃಶ್ಯಗಳು, ಧ್ವನಿ ಬೆಳಕಿನ ವಿನ್ಯಾಸವನ್ನು ಪ್ರೇಕ್ಷಕರು ಮೆಚ್ಚಿಕೊಂಡಿದ್ದರು. ತೊಂಭತ್ತರ ದಶಕದಲ್ಲಿ ವಿಜಯಕುಮಾರ್ ಕೊಡಿಯಾಲ್‌ಬೈಲರು ತಮ್ಮ 'ತೈಮೂರ್‌ಲಂಗ್' (ಮರಾಠಿಯಿಂದ ಅನುವಾದಿತ) ನಾಟಕದಲ್ಲಿ ಮೊದಲ ಬಾರಿ ಮಹಡಿ ದೃಶ್ಯವನ್ನು ತುಳುವಿಗೆ ಪರಿಚಯಿಸಿದರು. ತಮ್ಮ ಲಕ್ಷ್ಣಣರಂತಹ ರಂಗತಂತ್ರಜ್ಞರ ಪ್ರಯೋಗಗಳು ಕಮರ್ಶಿಯಲ್ ರಂಗಭೂಮಿಯಲ್ಲೂ ತಾಂತ್ರಿಕ ನೈಪುಣ್ಯವನ್ನು ತೋರ್ಪಡಿಸುವಲ್ಲಿ ಯಶಸ್ವಿಯಾಗಿದೆ.

ಸೀಮಿತ ಸೆಟ್ಟಿಂಗ್ ಧ್ವನಿ ವಿನ್ಯಾಸ, ಬೆಳಕಿನ ಪರಿಣಾಮ, ಪ್ರಭಾವೀ ರಂಗತಂತ್ರ, ಕಲಾವಿದರ ಸಾಮರ್ಥ್ಯವರ್ಧನೆ, ನಿರ್ದೇಶಕರ ಪ್ರಬುದ್ಧತೆ ಮುಂತಾದ ಅಂಶಗಳಿಗೆ ಒತ್ತು ನೀಡುತ್ತ ಆಧುನಿಕ ತುಳು ರಂಗಭೂಮಿ ಸೃಜನಶೀಲವಾಗುತ್ತ ಸಾಗಿದೆ.

ತುಳು ರಂಗಪ್ರದರ್ಶನದ ತಾಂತ್ರಿಕತೆ ಇಂದು ಬಹಳಷ್ಟು ಮುಂದುವರಿದಿದೆ. ಒಂದೇ ಸೆಟ್ಟಿಂಗ್‌ನಲ್ಲಿ ಎಲ್ಲವನ್ನು ನಿಭಾಯಿಸುವುದು, ಸೌಂಡ್ಸ್, ಲೈಟಿಂಗ್ ಹೆಚ್ಚು

ಆಕರ್ಷಕ, ಪರಿಣಾಮಕಾರಿಯಾಗಿ ಬೆಳೆದಿದೆ. ಕೆಲವೊಮ್ಮೆ ಇಡಿಯ ನಾಟಕವನ್ನು ಮೊದಲೇ ರೆಕಾರ್ಡ್ ಮಾಡಿಟ್ಟುಕೊಂಡು ರಂಗದಲ್ಲಿ ಪಾತ್ರಧಾರಿ ಕೇವಲ ತುಟಿ ಚಲನೆ ಹಾವಭಾವ ಮಾಡಿದರೆ ಸಾಕಾಗುವ ತಾಂತ್ರಿಕತೆ ಪ್ರಯೋಗ ಇದೆ. ಮರಾಠೀ ಕನ್ನಡ, ಮಲಯಾಳಂ ರಂಗಭೂಮಿ ಎತ್ತರಕ್ಕೆ ಬೆಳೆದಿರುವಾಗ ಅದನ್ನು ಗಮನಿಸಿಕೊಂಡು ತುಳು ಕೂಡಾ ಬೆಳೆಯುತ್ತಿದೆ. ಅದೇ ಎತ್ತರವನ್ನು ತಲುಪಲು ಹವಣಿಸುತ್ತಿದೆ.

ಕೆಲವೊಮ್ಮೆ ಪತ್ರಿಕೆಗಳ ಒಂದು ಪುಟವಿಡೀ ಹತ್ತಾರು ತುಳುನಾಟಕಗಳ ಪ್ರದರ್ಶನ ಜಾಹೀರಾತು ಮೈನವಿರೇಳಿಸುತ್ತಿದೆ.

**ತುಳುನಾಟಕಗಳ ಸಂಭಾಷಣೆ**

ಅಸಾಮಾನ್ಯ ಕ್ರಿಯಾಶೀಲತೆ ಇರುವ ಸಂಭಾಷಣೆ ರಚಿಸುವುದೂ ತುಳು ನಾಟಕಕಾರರಿಗೊಂದು ಸವಾಲೇ.

ಈ ಸವಾಲನ್ನು ಸಮರ್ಥವಾಗಿ ನಿಭಾಯಿಸಿದವರಲ್ಲಿ ಓರ್ವರಾಗಿರುವ ಮನು ಇಡ್ಯರ 'ತಿರ್ಸಂಕು' (ಪ್ರಯೋಗ 1975; ಪ್ರಕಟ 1990) ರಂಗನಾಟಕದಲ್ಲಿ ಪ್ರತಿಯೊಂದು ಮಾತುಗಳೂ ಅಭಿನಯಕ್ಕೆ ತಾನಾಗಿ ಎಡೆಗೊಡುವಂತಿವೆ. ಊರಗುತ್ತಿನ ಗುರ್ಕಾರ ನಡೆಸುವ ಶೋಷಣೆಯ ಲವಲವಿಕೆಯ ಚಿತ್ರಣವಿರುವ ಈ ನಾಟಕದ ಮೊದಲ ದೃಶ್ಯಗಳಲ್ಲಿ 'ಗುರ್ಕಾರ' ಮತ್ತು ಅವನ 'ತೈನಾತಿ' (ಸೇವಕನ) ನಡುವಣ ಸಂಭಾಷಣೆ ಹೀಗಿದೆ :

ಗುರ್ಕಾರ್ಲು : ನಾಯಿಡ್ದ್ ಎಚ್ಚ ಕೂಕುರು ಕೊರೆಪುಂಡತ್ತಂಬೇ ದ್ಯಾಪೋ.

ದ್ಯಾಪೋ : ಇರೆ ಇಕ್‌ಮತ್ ಆ ಆಣಗ್ ದಾನೆ ಗೊತ್ತು. ತೆತ್ತಿಡೇ ಅಲಂಕುನ ಪಾರೊಡು ಒರಿವಾ? ಅವುಲಾ ಊರ್ದ ಗುತ್ತಿನಾರ್ನಂಚಿನ ಕಟ್ಟದ ಕೋರಿ ಉಪ್ಪುನಗ?

ಗುರ್ಕಾರ್ಲು : ದ್ಯಾಪೋ....

ದ್ಯಾಪು : ಗುರ್ಕಾರ್ಲೇ....

ಗುರ್ಕಾರ್ಲು : ಕಲನ್ ತೂದು ಕೋರಿ ಜೈಪೊಡುಂಬೇ. ತೂದು ಬರೊಡಾಂಡೇ. ಪೋಯಿಂಬೆ ಅಡೆ... (ದುಂಬುಡ್ದು ಗುರ್ಕಾರ್ಲು, ಪಿರವುಡ್ದು ದ್ಯಾಪು – ಇಲ್ಲದ ಜಾಲ್ ಜತ್ ಪೋಪೆರ್)

* * *

1987ರಲ್ಲಿ ಕ್ಯಾಥರಿನ್ ರಾಡ್ರಿಗಸ್ ಇವರ 'ಕೇದಗ' ನಾಟಕ ಹಸ್ತಪ್ರತಿಯು ದಿ। ರತ್ನವರ್ಮ ಹೆಗ್ಗಡೆ ತುಳುನಾಟಕ ಕೃತಿ ಸ್ಪರ್ಧೆಯಲ್ಲಿ ಬಹುಮಾನಿತವಾಗಿ 1992ರಲ್ಲಿ ಪ್ರಕಟವಾಯಿತು.

'ಜೋವು ಕೇದಗ' ತುಳುಪಾಡ್ದನದ 'ಕೇದಗೆ' ಸಿದ್ದುಲ್ಲರಾಯನ ಸಾಂಸಾರಿಕ ದುರಂತ ಮತ್ತು ಆಧುನಿಕ ಕಾಲದ ಕೆಸರಿನಲ್ಲಿ ಜನಿಸಿದ ಹೆಣ್ಣು ಕಮಲ–ಇಂಜಿನಿಯರ್

ಮಂಜುನಾಥನ ಪ್ರೇಮದ ಬಲೆಗೆ ಬಿದ್ದು ಮದುವೆಯಾದರೂ ಅನ್ಯಾಯಕ್ಕೆ ಬಲಿಯಾಗುವ ವೈರುಧ್ಯವನ್ನು ಮುಖಾಮುಖಿಯಾಗಿಸಿ ರಚಿಸಿದ ಪರಿಣಾಮಕಾರೀ ನಾಟಕ. **24 ದೃಶ್ಯಗಳ ಈ ನಾಟಕದ ಆರಂಭದ ದೃಶ್ಯ 2ರ ಸನ್ನಿವೇಶ ಹೀಗಿದೆ :**

(ಬೊಲ್ಪು ಬನ್ನಗ ಸಿದ್ದುಲ್ಲಾ ರಾಯೆರ್ನ್ಲಾ ಬೂಡು ಬೂಡುಡು ಕುಲ್ಲುದಿನ ರಾಯೆರ್ದ್ಲಾ ಊರ್ದಕುಲು ಬತ್ತ್‌ದ್ ಕಷ್ಟೊನು ಪಂಡ್‌ದ್ ಬುಲಿಪುವೆರ್ ಉಂದು ನಟನೆದ ರೂಪುಡು ತೋಜಾವೊಡು) (ಒಂತೆ ಪೊರ್ತುಡು)

ರಾಯೆ : ಊರ್ದ ಬಂಧುಲೇ ಅಂಜಿಕೆ ಮಲ್ಪಡೆ. ನಿಕ್ಲೆನ ಕಷ್ಟ ಎಂಕ್ ಅರ್ಥ ಆಪುಂಡು ಅವು ನಮ ಬೊಂಟೆ ಪಾರೊಗು ಪೋಯಿ. ಎಂಕ್‌ಲಾ ಊರುಗು ಆಪತ್ತ್ ಉಂಡು ಮಲ್ಪುನ ಮುರ್ಗೊಲೆನ್ ನಾಶ ಮಲ್ಪೊಡು ಪಂಡ್‌ದ್ ಮನಸ್ಸ್ ಆತ್‌ಂಡ್. ಆೖಕಾದ್ ನಿಕ್ಲು ಪೋದು ನಾಯ್ದು ಮಲ್ಲುನು, ಕೋಲು ಪತ್ತು ಕೊಂಕಣನ್, ಬೆಡಿ ಪತ್ತುನ ಬೇಡವಾನ್ ಪಂಡ್‌ದ್ ಒರಿದಿನ ಮಾತಾ ಮಂದೆಲೆನ್ ಕೂಡು ಪಾಡೊಂದು ಬೇಗ ಬಲೆ.

(ಜನಕುಲು ಪೋಪೆರ್. ಅಪ್ಪೆ ಬರ್ಪೊಲು.)

ಅಪ್ಪೆ : ಮಗಾ ಸಿದ್ಧುಲ್ಲಾ ರಾಯ, ನಾಯ್ದು ಮಲ್ಲು ಪಿದಾಯಿಡೇ ಕಾತೊಂದುಲ್ಲೆ. ಅತ್ತ್ ಇತ್ತೇನೇ ಬೋಂಟೆಗ್ ಪಿದಾಡ್ದನೇ ದಾನೆ ಅಮಸರ.

ರಾಯೆ : ಅಪ್ಪೆರೇ ಕಾಡ್‌ದ ಮುರ್ಗೊಲು ನಾಡ್‌ದ ಪಾಪದಕ್ಲೆಗ್ ಉಪದ್ರೊನು ಕೊರುಂದುಲ್ಲ ಪನ್ಪಿನ ಸಂಗತಿ ಕೇನಿನ ಬೊಕ್ಕ ಅರಸುಲಾಯಿನ ನಮ ಆ ಆಪತ್ತ್‌ನ್ ದೂರ ಮಲ್ಪೊಡಾಯಿನ ನಮ್ಮ ಧ್ಯೇಯೊ ಅತ್ತೆ?

(ಮಲ್ಲು ಬರ್ಪೆ)

ಮಲ್ಲು : ಪತ್ತ್ ಬಿರೆಲಾ ಸೊರಣ ಮಲ್ತೊಂದುಲ್ಲೆ ರಾಯೆರೇ

ರಾಯೆ : ಓ ಮಲ್ಲಾ! ಲಕ್ಕೊನು ಹಾಂ... ಮಲ್ಲೊ ಏತ್ ನಾಯಿಲೆನ್ ದೇರೊಂದು ಬೈದ?

* * *

ಶ್ರೀ ಭವ್ಯಾ (ಕೆ.ವಿ. ಭಟ್) ಅವರ 'ಝಾನ್ಸಿದ ರಾಣಿ ಲಕ್ಷ್ಮೀಬಾಯಿ' ಚಾರಿತ್ರಿಕ ನಾಟಕದ ಒಂದು ಸಂಭಾಷಣೆ :

ಲಕ್ಷ್ಮಿ : ಓ ನೀಚ ಸೇನಾನಿ, ನನ ದಮ್ಮ್ ದೆಪ್ಪಡ. ಹಿಂದೂ ಪೊಂಜೊವುಂದ್ ಪಂಡ್‌ಂಡ ಅರ್ಲುನ ತೂ. ಅನೀತಿಡ್ ಅಲ್ನ ಕೈತಡೆ ಪಜ್ಜ ಪಾಡ್ಯನ ಪಜ್ಜಿ ಕಂರ್ಬಿದ್ ಪೋವ ನೆಂಪು ದೀಲ.

ರಾಮರಾಯ : ರಾಜ ಕಾರ್ಯಂದ್ ಬತ್ತ್‌ದ್, ತತ್ತ್‌ದ್ ಪಾತೆರುನ ಇಂಬ್ಯನ ಪತ್ತ್‌ದ್ ಕಾರಾಗೃಹೊಕು ಪಾಡ್ಯರೆ ಅಪ್ಪಣೆ ಕೊರ್ಲೆ ಮಹಾರಾಣಿ.

ಲಕ್ಷ್ಮಿ : ರಾಮರಾಯಾ, ಅವು ಬಲ್ಲಿ. ಸಂಧಾನದ ಓಲೆ ಕನ್ನೆದಿನಾಯನ್, ಕಟ್‌ಪಾಡುನವು 'ರಾಜದ್ರೋಹ'. (ಪು. 55)

(ಇತರ ಆಧುನಿಕ ನಾಟಕಗಳು ಬೇರೆಡೆ ಚರ್ಚಿತವಾಗಿವೆ.)

# ಸಮಕಾಲೀನ ವೃತ್ತಿಪರ ನಾಟಕ ತಂಡಗಳು

1947ರಲ್ಲೇ ಸ್ಥಾಪನೆಗೊಂಡು ಹಲವು ವರ್ಷ ತುಳು ನಾಟಕಗಳನ್ನಾಡಿದ ಕರ್ನಾಟಕ ಜೋಲಿ ಆರ್ಟ್ಸ್ (ಕೆ.ಜೆ. ಆರ್ಟ್ಸ್) ಮಂಗಳೂರು, ನಟೇಶ ಕಲಾವೃಂದ, ಮಾರಿಯಮ್ಮ ನಾಟಕ ಸಭಾ ವೀಣಾ ಸಂಗೀತ ನಾಟಕ ಸಭಾ, ಫ್ರೆಂಡ್ಸ್ ಸರ್ಕಲ್ ಅತ್ತಾವರ, ಉರ್ವ ಬ್ರದರ್ಸ್ ಕ್ರಿಕೆಟ್ ಕ್ಲಬ್, ಜೆಪ್ಪಿನಮೊಗರು, ಗ್ರಾಮ ಯುವಕ ಸಂಘ, ಜೈಭಾರತಿ ಫ್ರೆಂಡ್ಸ್ ಹ್ಯೊಗೆಬೈಲ್, ನವಜ್ಯೋತಿ ಯುವಕ ಮಂಡಲ, ಮೂಡುಬೆಳ್ಳೆ, ವಿದ್ಯಾವಿನಾಯಕ ಯುವಕ ಮಂಡಲ, ಹಳೆಯಂಗಡಿ, ಮೂಲ್ಕಿ ಬಿಲ್ಲವ ಸಂಘ, ಬಂಟರ ಸಂಘ ಮುಂಬಯಿ, ನಿಸರ್ಗ ಕಲಾವಿದರು ಎಡ್ಮೇರು, ಕೆ.ಕೆ. ಫ್ರೆಂಡ್ಸ್ – ಮುಂತಾದ ನಾಟಕ ತಂಡಗಳ ಸೇವೆಯೂ ರಂಗಭೂಮಿಯ ಇತಿಹಾಸದಲ್ಲಿ ದಾಖಲಾರ್ಹವಾಗಿದೆ.

ಕಳೆದ ಶತಮಾನದ ಎಂಭತ್ತರ ದಶಕದಲ್ಲಿ ಹಿರಿಯ ತಲೆಮಾರಿನ ಶತಕ ನಾಟಕವೀರ ದಿ। ಮಚ್ಚೇಂದ್ರನಾಥ ಪಾಂಡೇಶ್ವರರ 'ತೆಲ್ಪರೆ ಕಲ್ಪಿ' ಎನ್ನುವ ಹಾಸ್ಯ ನಾಟಕದ ಪ್ರೇರಣೆಯಿಂದ ಚಿಗುರಿಕೊಂಡ 'ಚಾಪರ್ಕ' ತಂಡ ಹಾಗೂ 'ಕಲಾಸಂಗಮ' ತಂಡಗಳು ಯಶಸ್ವಿಯಾಗಿ ಇಂದಿಗೂ ಕ್ರಿಯಾಶೀಲವಾಗಿರುವಂತೆಯೇ, ಅವುಗಳ ಬೆನ್ನಿಗೆ ಹುಟ್ಟಿಕೊಂಡ ಮಂಗಳೂರಿನ ಕಿಶೋರ್ ಡಿ. ಶೆಟ್ಟಿ ನೇತೃತ್ವದ 'ಲಕುಮಿ' ತಂಡ ಸಾಮಾಜಿಕ ಹಾಸ್ಯನಾಟಕಗಳನ್ನೂ, 'ಶ್ರೀಲಲಿತೆ' ತಂಡ ಪೌರಾಣಿಕ ನಾಟಕಗಳನ್ನೂ ಪ್ರದರ್ಶಿಸುತ್ತಾ ನಿರಂತರ ವೃತ್ತಿನಿರತವಾಗಿವೆ. ಅತ್ತ ಕಾಪು, ಕಾಸರಗೋಡು, ಕಿನ್ನಿಗೋಳಿ, ಬಿ.ಸಿ.ರೋಡ್, ಮೂಡಬಿದ್ರೆ, ಮಂಜೇಶ್ವರ, ಮುಂಬಯಿ ಮುಂತಾದೆಡೆ ಹಲವಾರು ನೂತನ ರಂಗಕರ್ಮಿಗಳು ಪ್ರಯೋಗನಿರತರಾಗಿದ್ದಾರೆ.

**ಬಿ.ಆರ್. ಕುಲಾಲ್ – ವಿನಾಯಕ ನಾಟಕ ಸಭಾ, ಬಿ.ಸಿ. ರೋಡ್**

1989–90ರಲ್ಲಿ ಆರ್. ಮುರುಗೇಶ್ ನೇತೃತ್ವದಲ್ಲಿ 'ನವಜೀವನ ಬಿ.ಸಿ.ರೋಡ್' ಹೆಸರಿನ ತಂಡವು ಕೆ.ಬಿ. ಭಂಡಾರಿ ಅವರ 'ಬಂಗಾರ್ ಬಾಲೆ' ನಾಟಕ ಪ್ರದರ್ಶನದ ನೆವದಿಂದ ಹುಟ್ಟಿಕೊಂಡು ಕೆಲವು ಪ್ರದರ್ಶನ



ಗಳನ್ನು ನೀಡಿತು. ಇಷ್ಟರಲ್ಲಿ ಪ್ರವರ್ಧಮಾನ ನಾಟಕಕಾರರಾಗಿ ಬೆಳೆಯುತ್ತಿದ್ದ ಬಿ.ಆರ್. ಕುಲಾಲ್ ತನ್ನ ನಾಟಕಗಳನ್ನು 'ವಿನಾಯಕ ನಾಟಕ ಸಭಾ' ಎನ್ನುವ ತಂಡದ ಮೂಲಕ ಬಂಟ್ವಾಳ ಪ್ರದೇಶದಲ್ಲಿ ಪ್ರಯೋಗಿಸತೊಡಗಿದರು. 1991ರಲ್ಲಿ **ರಮಾ ಬಿ.ಸಿ.ರೋಡ್** (ರಮೇಶ್ ಮಾಸ್ಟರ್) ಎನ್ನುವ ಸಮರ್ಥರ ನಿರ್ದೇಶನ ದೊರಕಿದ್ದು ಗಟ್ಟಿ ನೆಲಗಟ್ಟಾಯಿತು. ಬಿ.ಆರ್. ಕುಲಾಲರು ಪೂತ ಪೂಜೆ (1991), ಕರಿಯನ ಕರಿಯಣಿ (1992), ನೆನೆಪಾನಗ (93–94), ಸತ್ಯಪನ್ಲೆ (1995), ಬಸ್ಸ್ ಪೋಂಡಾ (95–96) ಬನ್ನಗ ಕನ್ಯೆದನಾ (95–96) ಮುಂತಾದ ನಾಟಕಗಳನ್ನು ರಮಾ ಬಿ.ಸಿ.ರೋಡ್ ಅವರ ನಿರ್ದೇಶನದಲ್ಲಿ ರಂಗಕ್ಕೆ ತಂದು, ಪ್ರತೀ ನಾಟಕಗಳ ಹಲವಾರು ಪ್ರಯೋಗಗಳ ಯಶಸ್ಸು ಪಡೆದರು.

**ರಂಗತರಂಗ ಕಾಪು**

ಅನುಭವೀ ಹಿರಿಯ ರಂಗಕರ್ಮಿ ಕಾಪು ಲೀಲಾಧರ ಶೆಟ್ಟರ ಸಂಚಾಲಕತ್ವದಲ್ಲಿ 'ರಂಗತರಂಗ' ತಂಡ ಪೂರ್ಣ ಪ್ರಮಾಣದಲ್ಲಿ ನಾಟಕ ಚಟುವಟಿಕೆಯಲ್ಲಿ ಕಳೆದ ಎರಡು ದಶಕಗಳಿಂದಲೂ ಸಕ್ರಿಯವಾಗಿದೆ. 350ಕ್ಕೂ ಮಿಕ್ಕ ಪ್ರದರ್ಶನ ಕಂಡ 'ತಿಲಕೆ ತಿರ್ಗಯೆ', 'ಆಯೆ ಸುಬಗೆ' – ಇವುಗಳಂತೆಯೇ ವಿವಿಧ ನಿರ್ದೇಶಕರ ಕೈಯ್ಯಲ್ಲಿ ಈ

ತಂಡದ ಇತರ ಹತ್ತಾರು ನಾಟಕಗಳೂ ಹಲವು ಪ್ರದರ್ಶನ ಕಂಡವುಗಳೇ.

2007ರಲ್ಲಿ ಪ್ರಥಮ ಪ್ರಯೋಗವಾದ ಶ್ಯಾಂಕುಮಾರ್ ಚಿತ್ರಾಪುರ ಅವರು ಬರೆದ 'ತಿಲಕೆ ತಿರ್ಗಯೆ' ಜಗದೀಶ್ ಶೆಟ್ಟಿ ಕೆಂಚನಕೆರೆ ನಿರ್ದೇಶಿಸಿ, ರಂಗದಲ್ಲಿ ಗೆಲುವು ಪಡೆದು ಈ ವೇಳೆಗೆ 356 ಪ್ರದರ್ಶನಗಳನ್ನು ಮುಗಿಸಿದೆ. ಪಿರಬನ್ನಗ(2007) 115 ಪ್ರಯೋಗ, ಯಾಪಲಾ 36 ಅತ್ತ್ 63 (2008) (94 ಪ್ರಯೋಗ) ಇವೆರಡೂ ದಿನಕರ ಭಂಡಾರಿ ಕಣಂಜಾರ್ ಅವರ ರಚನೆಗಳು. ಶ್ಯಾಂಕುಮಾರ್ ಚಿತ್ರಾಪುರ ಅವರ 85 ಪ್ರಯೋಗ ಕಂಡ, 'ಖಂಡಿತಾ ಬುಡ್ದು ಪೋಪುಜಿ'(2008), 'ಆಪಿನಿ ಬೇತೆನೇ' (2009) (ಪ್ರಯೋಗ 19) ಇವೆಲ್ಲಕ್ಕೂ ಜಗದೀಶ್ ಕೆಂಚನಕೆರೆ ದಿಗ್ದರ್ಶನ. 2010ರಲ್ಲಿ ಬಾಸುಮ ಕೊಡಗು ಅವರ ನಿರ್ದೇಶನದ ಶ್ಯಾಂಕುಮಾರ್ ಚಿತ್ರಾಪುರ ಇವರ 'ಆಯೆ ಸುಬಗೆ' (340 ಪ್ರದರ್ಶನ) 2011ರಲ್ಲಿ 'ಆ ನಿರೆಲ್' (ಪ್ರಯೋಗ 35) ರಚನೆ, ನಿರ್ದೇಶನ ಬಾಸುಮ ಕೊಡಗು 2012ರಲ್ಲಿ 'ಯಾಪಲಾ ಲೆಕ್ಕ ಪಾಡೊಡ್ಚಿ' (ರಚನೆ : ಶ್ಯಾಂಕುಮಾರ್ ಚಿತ್ರಾಪುರ, ನಿರ್ದೇಶನ : ಸುಜಿತ್ ಶೆಟ್ಟಿ, (ಪ್ರಯೋಗ 1040) ಅದೇ ವರ್ಷದ ಮತ್ತೊಂದು ರಂಗ ಕೃತಿ.

'ಇಲ್ಲ್ ಬದ್ಕ್' – ರಚನೆ ವಿರಾಜ್ ನಂದಿಕೂರು. ನಿರ್ದೇಶನ : ಪ್ರಸನ್ನ ಬೈಲೂರು (90 ಪ್ರದರ್ಶನ) 2014ರಲ್ಲಿ ಲೀಲಾಧರ ಶೆಟ್ಟರು ರಚಿಸಿದ 'ಕುಟೀರ' ಪ್ರಕಾಶ್ ಕೋಟ್ಯಾನರ ನಿರ್ದೇಶನದಲ್ಲಿ 52 ಬಾರಿ ಪ್ರಯೋಗವಾಯಿತು. 2014ರಿಂದ ನಿರಂತರ ಮೂರು ವರ್ಷ ಶ್ಯಾಂಕುಮಾರ್ ಚಿತ್ರಾಪುರರ ನಾಟಕಗಳು ಪ್ರದರ್ಶನಕ್ಕೆ ಬಂದವು. ದುಂಬುಪಿರ ಎನ್ನ್‌ಲೆ (2014) ನಿರ್ದೇಶನದ ಶಿವಪ್ರಕಾಶ್ ಪೂಂಜ (96 ಪ್ರಯೋಗ) 'ಇಂದ್ರಾಳಿ ಜಂಕ್ಷನ್' 2015 – ನಿರ್ದೇಶನ ಸಂದೀಪ್ ಶೆಟ್ಟಿ (110 ಪ್ರದರ್ಶನ)

2016ರ ಶ್ಯಾಂಕುಮಾರ ಚಿತ್ರಾಪುರ ವಿರಚಿತ 'ಪೊಪ್ಪ' ಶರತ್ ಉಚ್ಚಿಲರ ನಿರ್ದೇಶನದಲ್ಲಿ ಈಗಾಗಲೇ 160 ಪ್ರದರ್ಶನಗಳನ್ನು ಕ್ರಮಿಸಿ ಮುಂದುವರಿಯುತ್ತಿದೆ.

ಈ ತಂಡದಲ್ಲಿ ಪ್ರಬುದ್ಧ ರಂಗನಟ ನಟಿಯರಿದ್ದಾರೆ. ಶಿವಪ್ರಕಾಶ್ ಪೂಂಜ, ರೂಪಶ್ರೀ, ಶಮಿತ್ ರಾವ್ ಇನ್ನ, ಸಂದೀಪ್ ಶೆಟ್ಟಿ, ಕೃಷ್ಣಪ್ಪ ಕಾರ್ನಾಡ್, ವಿವೇಕ್ ಮಾಡೂರು, ಲೀಲಾಧರ ಶೆಟ್ಟಿ, ರಾಜೀವ್ ಅಳಪೆ, ವಿರಾಜ್ ನಂದಿಕೂರು, ಸುಜಿತ್ ಶೆಟ್ಟಿ, ಮರ್ವಿನ್ ಶಿರ್ವ, (ಸ್ತ್ರೀ ಪಾತ್ರಧಾರಿ), ಶಶಿ ಗುಜರನ್, ಮಧುಕರ ಅಮೀನ್ ಪಲಿಮಾರ್, ಪ್ರಸನ್ನ ಶೆಟ್ಟಿ ಬೈಲೂರು– ಮತ್ತಿತರ ಪ್ರತಿಭಾವಂತರು ಈ ತಂಡದ ವಿವಿಧ ನಾಟಕ ಪ್ರಯೋಗಗಳ ಯಶಸ್ಸಿನಲ್ಲಿ ಪಾಲ್ಗೊಂಡಿದ್ದಾರೆ.

* * *

**ತುಳುವಪ್ಪೆ ಜೋಕ್ಲು, ಕಲ್ಲಡ್ಕ'** ಎಂಬ ಲಾಂಛನದಲ್ಲಿ ಎಪ್ಪತ್ತರ ದಶಕದಿಂದಲೂ ವೇಳೆಗೆ ದಿ। ಶಾಂತಾರಾಂ ಕಲ್ಲಡ್ಕ ತನ್ನದೇ ನಾಟಕಗಳನ್ನು ನಿರ್ದೇಶಿಸಿ ರಂಗ ಮಂಚಕ್ಕೆ ತಂದಿದ್ದರು. ಅವರ ಬಳಿಕ ಈಗ ಈ ತಂಡವನ್ನು ಅವರ ಮಗ ಸವ್ಯರಾಜ್ ಕಲ್ಲಡ್ಕ

ಮುಂದುವರಿಸಿದ್ದಾರೆ.

**ಕಲಾವಿದರ ಬಳಗ ಜೋಡುಮಾರ್ಗ** ಎಂಬ ತಂಡವು ರಮಾ ಬಿ.ಸಿ.ರೋಡ್ ನಿರ್ದೇಶನದಲ್ಲಿ ಚಂದ್ರಶೇಖರ ಜೋಗಿ ಬಿ.ಸಿ.ರೋಡ್‌ರ 'ಡ್ಯಾಡಿ', ರತ್ನಾಕರ ರಾವ್ ಕಾವೂರರ 'ತಬುರನ ತೆಲಿಕೆ', ದಿ| ಮಚ್ಚೇಂದ್ರನಾಥ ಪಾಂಡೇಶ್ವರರ, 'ನೆತ್ತೆರಾ ನೀರಾ' – ಮುಂತಾದ ನಾಟಕಗಳನ್ನು 97–98ರ ಅವಧಿಯಲ್ಲಿ ಪ್ರಯೋಗಿಸಿತು.

### ಮಾನಸ ಕಲಾವಿದರು ಬಿ.ಸಿ.ರೋಡ್



1997–98ರ ವೇಳೆಗೆ ನಾಟಕರಚನೆಗೆ ತೊಡಗಿದ ತರುಣ ಪೀಳಿಗೆಯು ಅರುಣ್‌ಚಂದ್ರ (ರಮಾ ಬಿ.ಸಿ.ರೋಡ್‌ರ ಪುತ್ರ)ರಿಗಾಗಿ ಹೊಸ ನಾಟಕ ತಂಡ ಸಿದ್ಧವಾಯಿತು. ಇದುವೇ **ಮಾನಸ ಕಲಾವಿದರು ಬಿ.ಸಿ.ರೋಡ್**. ಈ ತಂಡ ರಮಾ ಬಿ.ಸಿ.ರೋಡ್ ಇವರ ನಿರ್ದೇಶನದಲ್ಲಿ ಅರುಣ್‌ಚಂದ್ರರ 'ನಿಕುಲು ಎನ್ನ್‌ದಿತ್ತರಾ', 'ನನ ಒಂತೆ ದಿನ', 'ಎನ್ನಪುಣ್ಯ', 'ರಮಣಿ ಬರ್ಪಲ್', 'ಚಡ್ಡಿ ದೋಸ್ತಿ', 'ಅಣ್ಣು', 'ಸಾವಿತ್ರಿಗ್ ಮದ್ಮೆಗೆ', 'ಕಾಸ್ದನೆ ತಾಪತ್ರಯ', 'ಜೋಜೋ ಲಾಲಿ', 'ಬದ್ಕೆರೆ ಕಲ್ಪಿ', 'ತೂಯಿನಕುಲು ದಾದ ಪನುವೆರ್', 'ಬಂಗಾರ್ ಬಾಬು', 'ಪನಿ ಪನಿ ಬರ್ಸ', 'ಗೊತ್ತಾಯೆರೆ ಬಲ್ಲಿ', 'ಬಾಯಿ ಬುಡೊಡ್ಚಿ'– ಮುಂತಾಗಿ ಸಾಲುಸಾಲು ನಾಟಕಗಳನ್ನು ಬಂಟ್ವಾಳದಲ್ಲೂ ಜಿಲ್ಲೆ, ಹೊರ ಪ್ರದೇಶದಲ್ಲೂ ಪ್ರದರ್ಶಿಸಿದರು. ದಾಖಲೆ ಸಂಖ್ಯೆಯ ನಾಟಕಗಳನ್ನು ರಚಿಸಿದ ಅರುಣ್‌ಚಂದ್ರ ಬಿ.ಸಿ.ರೋಡ್ ಇವರ ಅರಸೆ, ಎಲ್ಯಣ್ಣೆ, ಊರುಗೊರಿ ವಿಶ್ವನಾಥೆ, ಪನ್ಪುನಕುಲು ಪನ್ಪೆರ್, ಪೊಸ ಬದ್‌ಕ್, 'ಉಬ್ಬೆರ್ಲೆತ್ತ್ ನಿಂಗೆರ್ಲತ್ತ್' ಮುಂತಾದ ಕೆಲವು ನಾಟಕಗಳನ್ನು ಇವರ ತಂಡವಲ್ಲದೆ **ರಾಜಶ್ರೀ ಮೋಕೆದ ಕಲಾವಿದೆರ್ ಪೊಳಲಿ, ನಮ್ಮ ಕಲಾವಿದೆರ್ ನೆಲ್ಯಾಡಿ, ಹರಿಣಿ ಕಲಾವಿದೆರ್ ಬಿ.ಸಿ.ರೋಡ್** ಮೊದಲಾದ ತಂಡಗಳೂ ಪ್ರಯೋಗಿಸಿದವು. ಈ ಎಲ್ಲ ನಾಟಕಗಳ ದಿಗ್ದರ್ಶನವೂ ರಮಾ ಬಿ.ಸಿ.ರೋಡ್ ಅವರದೇ. (ಇವರು ದೇವದಾಸ್ ಕಾಪಿಕಾಡ್‌ರ ಚಾಪರ್ಕ ತಂಡದ ಬಹುಪಾಲು ನಾಟಕಗಳಲ್ಲಿ ಅಭಿನಯಿಸಿದ ಪ್ರತಿಭಾನ್ವಿತ ನಟರೂ ಹೌದು)

### ವಿಜಯ ಕಲಾವಿದರು ಕಿನ್ನಿಗೋಳಿ

ಕಳೆದ ಎರಡು ದಶಕಗಳಿಂದ ಕ್ರಿಯಾಶೀಲವಾಗಿ ಎಲ್ಲೆಡೆ ತುಳು ನಾಟಕ ಪ್ರದರ್ಶನ ನೀಡುತ್ತಿರುವವರಲ್ಲಿ ಕಿನ್ನಿಗೋಳಿಯ ವಿಜಯಾ ಕಲಾವಿದರ ತಂಡವೂ ಗಮನಾರ್ಹ. ಪತ್ರಕರ್ತ, ನಿರ್ದೇಶಕ **ಶರತ್ ಶೆಟ್ಟಿ** ಈ ತಂಡದ ಸಾರಥಿ. ಮುಂಬಯಿಯಲ್ಲೂ ತಾಯ್ನಾಡಲ್ಲೂ ನಾಟಕ ನಿರ್ದೇಶಕರಾಗಿ ಜನಪ್ರಿಯರಾಗಿರುವ **ಜಗದೀಶ್ ಶೆಟ್ಟಿ ಕೆಂಚನಕೆರೆ**

ಮತ್ತು ಶರತ್ ಶೆಟ್ಟಿ ವಿಜಯಾ ಕಲಾವಿದರು ತಂಡದ ನಾಟಕಗಳನ್ನು ನಿರ್ದೇಶಿಸಿದ್ದಾರೆ. ನಿರಂತರ ಪ್ರದರ್ಶನದ ಈ ತಂಡದ ನಾಟಕಗಳಲ್ಲಿ ಕೆಲವು 50-70, 300 ಪ್ರಯೋಗಗಳ ಗಡಿದಾಟಿದ ಯಶಸ್ಸು ಕಂಡಿವೆ.

1998ರಲ್ಲಿ ಹರೀಶ್ ಪಡುಬಿದ್ರಿಯವರ 'ಕಡೀರಮಗೆ' (75 ಪ್ರಯೋಗ)ಯೊಂದಿಗೆ ಪ್ರಾರಂಭವಾದ ವಿಜಯಾ ಕಲಾವಿದರ ರಂಗಪಯಣ ಕಡೀರಮಗೆ (1998) 75 ಪ್ರಯೋಗ, ಅಜ್ಜಿಗೇರ್ಲ ಇಜ್ಜಿ (1999) 70 ಪ್ರಯೋಗ, ಪುಲ್ಯಾನಗ (2000) 53 ಪ್ರಯೋಗ, ಏಪ ಸುದಾರುವರಾ (2001) 38 ಪ್ರಯೋಗ, ಒರ ಮುಲ್ತ್ ಪೋ (2002) 35 ಪ್ರಯೋಗ, **ಬೈರಾಸ್ ಭಾಸ್ಕರೆ (2003) 306 ಪ್ರದರ್ಶನ,** ಜೋಜೋ ಲಾಲಿ (2004) 18 ಪ್ರಯೋಗ, ಆರ್ ಎನ್ನಾರ್ (2005) 60 ಪ್ರಯೋಗ, ಬೇಲೆ ಕಲ್ವೆರ್  (2006) 59 ಪ್ರಯೋಗ, ನಂಬುವರಾ ಬುಡ್ಪರಾ (2007) 78 ಪ್ರಯೋಗ ಎಲ್ಲ ನಾಟಕಗಳ ರಚನೆ ಹರೀಶ್ ಪಡುಬಿದ್ರಿ, ನಿರ್ದೇಶನ : ಶರತ್ ಶೆಟ್ಟಿ ಕಿನ್ನಿಗೋಳಿ.

ಜಗದೀಶ್ ಶೆಟ್ಟಿ ಕೆಂಚನಕೆರೆಯವರ ನಿರ್ದೇಶನದಲ್ಲಿ ಹರೀಶ್ ಪಡುಬಿದ್ರಿಯವರ ಲೆಕ್ಕ ತತ್ತಿ ಬೊಕ್ಕ -2016 (216 ಪ್ರಯೋಗ), ತೂಪಿನಾರೇ ಆಪಿನಾರ್ 2017 (53 ಪ್ರಯೋಗ), ಬಿಲೆ ಕಟ್ಟರೆ ಆವಂದಿನ 2018 (49 ಪ್ರದರ್ಶನ), ರಾಜೇಶ್ ಕೆಂಚನಕೆರೆಯವರ 'ಗೋಕುಲನ ಜೋಕುಲು' 2000 (70 ಪ್ರಯೋಗ ಲೋಕುಗು ಲೋಕಇಜ್ಜಿ - 2001 (53 ಪ್ರಯೋಗ), ಅಪ್ಪೆದಾನಿ ಚಪ್ಪೆ -2010 (79 ಪ್ರಯೋಗ), ಮರ್ಲ್ ಕಟ್ಟೊಡ್ಚಿ -2011 (70 ಪ್ರಯೋಗ) ಹೀಗೆ ತಾಯ್ನಾಡಿನಲ್ಲೂ ಮುಂಬಯಿಯಲ್ಲೂ ನಿರಂತರ ಪ್ರದರ್ಶನ ದಾಖಲೆ ತಂಡದ ನಿರ್ದೇಶಕ ಶರತ್ ಶೆಟ್ಟಿ ನಿರ್ದೇಶನದಲ್ಲಿ ವಿಜಯ ಕಲಾವಿದರು ಡಾ. ಸಂಜೀವ ದಂಡೆಕೇರಿಯವರ 'ಬಯ್ಯಮಲ್ಲಿಗೆ', ಕೆ.ಜೆ. ಕೊಕ್ರಾಡಿಯವರ ಕಾವೇರಿ, ಗೋಪಾಲ ಶೆಟ್ಟರ ಸತ್ಯ ಹರಿಶ್ಚಂದ್ರ, ಚಂದ್ರಶೇಖರ ಬಿ.ಸಿ.ರೋಡ್ ಅವರ ಆಪಿನಿ ಪೂರಾ ಎಡ್ಡೆಗೆ - ಮಹಮ್ಮದ್ ಬಜಪೆ ಅವರ ಪರಕೆ ಮುಂತಾದ ನಾಟಕಗಳನ್ನು ಹಲವು ಬಾರಿ ಪ್ರಯೋಗಕ್ಕೆ ತಂದಿರುವರು.

ಅಲ್ಲದೆ 2001ನೇ ಇಸವಿಯಲ್ಲಿ ಕೆ. ಎನ್. ಟೇಲರರ 'ಕಂಡನೆ ಬುಡೆದಿ', 2002ರಲ್ಲಿ ವಿಜಯಕುಮಾರ್ ಕೆಮ್ಮಣ್ಣು ಅವರ 'ವಸುಂಧರಾ' ಮತ್ತು 2018ರಲ್ಲಿ ತುಳು ಅಕಾಡೆಮಿಯ ನಾಟಕ ಪರ್ಬ ಸಪ್ತಾಹದಲ್ಲಿ ಬಿ. ರಾಮ ಕಿರೋಡಿಯನ್‌ರ 'ಕಾನೂನ್ದ ಕಣ್ಣ್' ನಾಟಕವನ್ನೂ ಶರತ್ ಶೆಟ್ಟರ ನಿರ್ದೇಶನದಲ್ಲಿ ಸಮರ್ಥವಾಗಿ ಪ್ರಯೋಗಿಸಿರುವ ವಿಜಯಾ ಕಲಾವಿದರ ತುಳುರಂಗಭೂಮಿ ಸೇವೆ ಬೆರಗಾಗಿಸುವುದಾಗಿದೆ.

ಯುಗಪುರುಷದ ಸಹಯೋಗದಲ್ಲಿ ರಂಗಭೂಮಿಯಲ್ಲಿ ಹೆಚ್ಚು ಕ್ರಿಯಾಶೀಲವಾಗಿ ತುಳುನಾಟಕ ಸ್ಪರ್ಧೆ, ಸಪ್ತಾಹಗಳನ್ನು ನಡೆಸುತ್ತಾ ಬರುತ್ತಿರುವ ಕಿನ್ನಿಗೋಳಿಯ ವಿಜಯಾ

ಕಲಾವಿದರು ಸಂಘಟನೆ 2005ರಲ್ಲಿ 'ಸ್ತ್ರೀ ಪಾತ್ರ ನಿರ್ವಹಣೆ' ಕುರಿತಾದ ವಿಶಿಷ್ಟ ಸಂವಾದ ಕಾರ್ಯಕ್ರಮವೊಂದನ್ನು ಏರ್ಪಡಿಸಿದರು. ವಿವಿಧೆಡೆಯ ಸ್ತ್ರೀಪಾತ್ರದ ಪ್ರಬುದ್ಧ ಕಲಾವಿದರೇ ಒಂದಷ್ಟು ಮಂದಿ ಸಂವಾದದಲ್ಲಿ ಪಾಲ್ಗೊಂಡರು, ಪ್ರಾತ್ಯಕ್ಷಿತೆ ನೀಡಿದರು. 2005ರ ನವೆಂಬರ್ ತಿಂಗಳಲ್ಲಿ ಕಿನ್ನಿಗೋಳಿಯ ತುಳುನಾಟಕ ಸ್ಪರ್ಧೆಯಲ್ಲಿ ಡಾ. ಪಿ. ಎಸ್. ದಂಡಕೇರಿಯವರ 'ಬಯ್ಯಮಲ್ಲಿಗೆ' ನಾಟಕವು ವಿವಿಧ ತಂಡಗಳಿಂದ ಪ್ರದರ್ಶನಗೊಂಡಿತ್ತು. ನಾಟಕ ಕಲಾವಿದರ ಸಮಾವೇಶ ಜರಗಿತು.

ಇದೀಗ 20ನೆಯ ವರ್ಷಾಚರಣೆಯಲ್ಲಿರುವ ವಿಜಯ ಕಲಾವಿದರ ಪ್ರಥಮ ನಾಟಕ 'ಕಡೀರ ಮಗೆ' (ರಚನೆ : ಹರೀಶ್ ಪಡುಬಿದ್ರಿ) ಮಂಗಳೂರು ಪುರಭವನದಲ್ಲಿ 50ನೇ ಪ್ರಯೋಗದ ಸಂಭ್ರಮ ಮತ್ತು 300ಕ್ಕೂ ಹೆಚ್ಚು ಬಾರಿ ರಂಗದ ಮೇಲೆ ಬಂದ 'ಬೈರಾಸ್ ಭಾಸ್ಕರೆ' ತುಳುನಾಟಕಗಳು ಈ ಬಾರಿ (2018 ಜೂನ್) ಕಿನ್ನಿಗೋಳಿಯ ಯುಗಪುರುಷ ಸಭಾಂಗಣದಲ್ಲಿ ಮರು ಪ್ರದರ್ಶನಕ್ಕೆ ಬಂದು ಸಮಾಜಕ್ಕೆ ಉತ್ತಮ ಸಂದೇಶ ನೀಡಬಲ್ಲ ಹಾಸ್ಯ ನಾಟಕಗಳು ಹೆಚ್ಚು ಜನಮೆಚ್ಚುಗೆ ಗಳಿಸುವುದರ ಸಂಕೇತವಾಗಿದೆ.

**ಶ್ರೀ ಮುರುಘೇಂದ್ರ ಮಿತ್ರಮಂಡಳಿ (ರಿ) ಪುಂಜಾಲಕಟ್ಟೆ**

1981ರಲ್ಲಿ ಹುಟ್ಟಿಕೊಂಡ ಈ ಸಂಸ್ಥೆ ತನ್ನ ಇನ್ನಿತರ ಸಾಮಾಜಿಕ ಕಾರ್ಯಗಳೊಂದಿಗೆ ತುಳು ಭಾಷೆ, ಸಂಸ್ಕೃತಿಯ ಉತ್ಥಾನದ ಹಂಬಲದಿಂದ ಸುಮಾರು 5 ಬಾರಿ 'ಜಿಲ್ಲಾ ಮಟ್ಟದ ತುಳುನಾಟಕ ಸ್ಪರ್ಧೆ ನಡೆಸಿದೆ. 2017ರಲ್ಲಿ ಉಡುಪಿ, ದ.ಕ. ಹಾಗೂ ಕಾಸರಗೋಡು ಜಿಲ್ಲೆಗಳ ಮಟ್ಟಕ್ಕೆ ಅದನ್ನು ವಿಸ್ತರಿಸಿ ಸ್ಪರ್ಧೆ ನಡೆಸಿತು. ದಿನಾಂಕ 14-01-2017ರಿಂದ ಮೊದಲ್ಗೊಂಡು ಪಂಚಶ್ರೀ ಕಲಾವಿದೆರ್ ಬಂಟ್ವಾಳ ಇವರ 'ದೇವೆರ್ ತೂಪೆರ್' ನಮ್ಮ ಕಲಾವಿದೆರ್ ನೆಲ್ಯಾಡಿಯವರ 'ಪನ್ಪಿನಕುಲು ಪನ್ಪೆರ್' ತೆಲಿಕೆದ ತೆನಾಲಿ ಕರ್ಲ ಇವರಿಂದ ಮದಿರೆಂಗಿ, ಶ್ರೀ ಶಾರದಾ ಕುಸಲ್ದ ಕಲಾವಿದೆರ್ ಇವರಿಂದ 'ಉಲಾಯಿ ಲೆಪ್ಪುಗ', ಪ್ರಸನ್ನ ಶೆಟ್ಟಿ ಬೈಲೂರು ಇವರ ಚೈತನ್ಯ ಕಲಾವಿದೆರ್ ಬೈಲೂರು ಇವರ 'ಸ್ಟಾರ್', ತುಳುವೆರೆ ಉಡಲ್ ಜೋಡುಕಲ್ಲು ಉಪ್ಪಳ ಕಾಸರಗೋಡು ಇವರಿಂದ 'ಮದ್ಮೆ ಒಂಜಿ ಆಂಡ್‌ಗೆತ್ತಾ' ಮುಂತಾಗಿ ನಾಟಕಗಳು ಸ್ಪರ್ಧೆಯಲ್ಲಿ ಪಾಲ್ಗೊಂಡವು. ಶ್ರೇಷ್ಠ ನಾಟಕಕ್ಕೆ ರೂ. 30,000/- ರೂ. 20,000/- ಹಾಗೂ ರೂ. 15,000/- ಮತ್ತು ಫಲಕಗಳನ್ನು ಪ್ರಥಮ, ದ್ವಿತೀಯ, ತೃತೀಯ ಸ್ಥಾನ ಗಳಿಸಿದ ನಾಟಕಗಳಿಗೆ ನೀಡಲಾಯಿತು. ಶ್ರೀ ಮುರುಘೇಂದ್ರ ವನಿತಾ ಸಮಾಜವೂ ಈ ತುಳು ರಂಗ ಚಟುವಟಿಕೆಗೆ ನೀಡುತ್ತಿದೆ.

ಪುಂಜಾಲಕಟ್ಟೆಯಿಂದ ತುಂಗಪ್ಪ ಬಂಗೇರ ನೇತೃತ್ವದ ಸ್ವಸ್ತಿಕ್ ಫ್ರೆಂಡ್ಸ್ ಕ್ಲಬ್ ಮುಖ್ಯವಾಗಿ ಸಾಮಾಜಿಕ ಅಭ್ಯುದಯದ ಕಾರ್ಯಕ್ರಮಗಳಿಗೆ ಹೆಸರಾದರೂ ತುಳು ರಂಗಭೂಮಿಗೆ ಪ್ರೋತ್ಸಾಹ, ಬೆಳವಣಿಗೆ ದೃಷ್ಟಿಯಿಂದಲೂ ಸೇವೆ ಸಲ್ಲಿಸುತ್ತ ಬಂದಿದೆ.

**ಶಾರದಾ ಆರ್ಟ್ಸ್ ಕಲಾವಿದರು (ರಿ) ಮಂಜೇಶ್ವರ**



1999ರಲ್ಲಿ ಮಂಜೇಶ್ವರದಲ್ಲಿ ರಂಗಚಟುವಟಿಕೆ ಆರಂಭಿಸಿದ ಈ ತಂಡದ ವ್ಯವಸ್ಥಾಪಕ, ನಾಟಕರಚನಾಕಾರ ಹಾಗೂ ನಿರ್ದೇಶಕರು **ಕೃಷ್ಣ ಜಿ. ಮಂಜೇಶ್ವರ,** ತಂಡದ ಬಹುಪಾಲು (13ರಷ್ಟು) ನಾಟಕಗಳನ್ನು ಇವರೇ ರಚಿಸಿದ್ದರೆ ಜಿ.ಪಿ. ತೂಮಿನಾಡು, ಸೋಮನಾಥ ಶೆಟ್ಟಿ ಮಂಗಲ್ಪಾಡಿ ಯವರ ಒಂದೊಂದು ನಾಟಕಕೃತಿಗಳು ಕೃಷ್ಣ ಜಿ. ಮಂಜೇಶ್ವರ ಹಾಗೂ ಜಗದೀಶ್ ಕೆಂಚನಕೆರೆಯವರ ನಿರ್ದೇಶನದಲ್ಲಿ ಬಹು ಪ್ರದರ್ಶನ ಕಂಡಿವೆ. ತುಳುನಾಡಿ ನಾದ್ಯಂತವೂ ಮಾತ್ರವಲ್ಲದೆ ಮುಂಬಯಿಯಲ್ಲಿ ಸತತ ಪ್ರದರ್ಶನ ಗುಜರಾತ್‌ಗೂ 2018ರಲ್ಲಿ ಹೋಗಿ ಈ ತಂಡ ಪ್ರದರ್ಶನ ನೀಡಿದೆ.

1999ರಿಂದ 'ಬಾಳ್ವೆದಾಂತಿ ಪ್ರೀತಿ', 'ದಾಯೆ ಪಂಡಿಜರ್' (60 ಪ್ರದರ್ಶನ), 'ಕತೆ ಯಾನ್ ಪನ್ಪೆ' (40 ಪ್ರಯೋಗ), 'ಬರುವೆರಾ?' (65 ಪ್ರಯೋಗ), 'ಏರ್ಲಾ ಸರಿ ಇಜ್ಜೆರ್' (25 ಪ್ರಯೋಗ), 'ಮುಗಿಯಂದಿ ಕತೆ' (ಸುಧೀರ್‌ರಾಜ್ ಉರ್ವ ನಿರ್ದೇಶನದಲ್ಲಿ 2008ರಲ್ಲಿ ಅಂತರ್ಜಿಲ್ಲಾ ಮಟ್ಟದ ಪ್ರಶಸ್ತಿ ಗೆದ್ದಿದೆ) ಇವೆಲ್ಲವೂ ಕೃಷ್ಣ ಜಿ. ಮಂಜೇಶ್ವರ ರಚನೆ ಹಾಗೂ ನಿರ್ದೇಶನದಲ್ಲಿ ಪ್ರಯೋಗವಾದವು.

ಕೃಷ್ಣರ ಮುಂದಿನ ನಾಟಕಗಳಾದ ಒಟ್ಟಿಗೆ ಪೋಯಿ (80 ಪ್ರದರ್ಶನ), ಎಲ್ಲೆ ಗೊತ್ತಾವು (60 ಪ್ರಯೋಗ), ತಿರ್ಗ್‌ದ್ ತೂಲೆ (75 ಪ್ರಯೋಗ), ಎಡ್ಡೆಡುಪ್ಪುಗ (125 ಪ್ರಯೋಗ) 'ಸಾದಿ ತಪ್ಪೊಡ್ಚಿ' (131 ಪ್ರಯೋಗ) ಜಗದೀಶ್ ಶೆಟ್ಟಿ ಕೆಂಚನಕೆರೆಯವರ ನಿರ್ದೇಶನದಲ್ಲಿ ಅದ್ದೂರಿ ಪ್ರಯೋಗ ಕಂಡವು. ಕೃಷ್ಣ ಜಿ. ಮಂಜೇಶ್ವರರ 'ಆರ್ ಪನ್ಲೆಕ' (128 ಪ್ರಯೋಗ – 2017ರಲ್ಲಿ ಅಂತರ್ಜಿಲ್ಲಾ ಮಟ್ಟದ ಪ್ರಶಸ್ತಿ ವಿಜೇತ), ಎಡ್ಡೆ ಆತ್‌ಂಡ್ (25 ಪ್ರಯೋಗ) ಸುದ್ದಿ ತಿಕ್‌ಂಡ್ (60 ಪ್ರಯೋಗ) ಈ ರಂಗಕೃತಿಗಳನ್ನು

ಶಾರದಾ ಆರ್ಟ್ಸ್ ಮಂಜೇಶ್ವರ ಇವರ 'ಆರ್ ಪನ್ಲೆಕ' ನಾಟಕದ ದೃಶ್ಯ

ಅವರೇ ಸ್ವತಃ ನಿರ್ದೇಶಿಸಿದ್ದಲ್ಲದೆ ಅವರದೇ ದಿಗ್ದರ್ಶನದಲ್ಲಿ ಜೆ. ಪಿ. ತೂಮಿನಾಡು ಇವರ 'ನಿತ್ಯೆ ಬನ್ನಗ' 130 ಬಾರಿ ಪ್ರದರ್ಶನಗೊಂಡಿದೆ. ಸೋಮನಾಥ ಶೆಟ್ಟಿ ಮಂಗಲ್ಪಾಡಿ ಇವರ 'ಅಣ್ಣೆ ಬರ್ಪೆಗೆ' ನಾಟಕ 40 ಪ್ರಯೋಗಗಳನ್ನೂ ಕಾಣುತ್ತಾ ಮಂಜೇಶ್ವರ ಶಾರದಾ ಆರ್ಟ್ಸ್ ಕಲಾವಿದರ ವ್ಯಾಪಕ, ವ್ಯವಸ್ಥಿತ ರಂಗಚಟುವಟಿಕೆ ತುಳು ರಂಗಭೂಮಿ ಇತಿಹಾಸಕ್ಕೆ ಅಪಾರ ಕೊಡುಗೆ ನೀಡುವಂತಾಗಿದೆ. ಈ ಯಶಸ್ಸಿಗೆ ತಂಡದ ಕಲಾವಿದರಾದ ದೀಪಕ್ ರೈ ಪಾಣಾಜೆ, ನಾಗಾರ್ಜುನ ಮಂಗಲ್ಪಾಡಿ (ಸಂಗೀತ), ಜೆ.ಪಿ. ತೂಮಿನಾಡು, ರಾಜೇಶ್ ಮುಗುಳಿ, ಪ್ರವೀಣ್ ಕಣಿಯೂರು(ಸಂಗೀತ), ನಮಿತಾ ಮಂಗಳೂರು, ಸುರೇಶ್ ವಿಟ್ಲ, ಸೋಮನಾಥ್ ಶೆಟ್ಟಿ ಮಂಗಲ್ಪಾಡಿ ಮುಂತಾದವರೂ ಕಾರಣರಾಗಿದ್ದಾರೆ.

2015ರ ಜುಲೈ 10ರಂದು ಶಾರದಾ ಆರ್ಟ್ಸ್ ತಂಡದ 'ಐಸಿರಿ ಕಲಾವಿದೆರ್ ಮಂಜೇಶ್ವರ' ಎಂಬ ಎರಡನೆಯ ತಂಡವೂ ಸ್ಥಾಪನೆಯಾಗಿರುವುದು ಇವರ ಯಶಸ್ಸಿನ ಮತ್ತೊಂದು ಹೆಜ್ಜೆ. ಈ ತಂಡವೂ 'ಕೈಪತ್ತಿನಾರ್' (75 ಪ್ರಯೋಗ – ನಿರ್ದೇಶನ ಕೃಷ್ಣ ಜಿ. ಮಂಜೇಶ್ವರ, ರಚನೆ ರಾಜೇಶ್ ಬಂದ್ಯೋಡು), 'ಜನನೇ ಬೇತೆ' (35ನೇ ಪ್ರಯೋಗ ರಚನೆ ರಾಜೇಶ್ ಬಂದ್ಯೋಡು. ನಿರ್ದೇಶನ ಕೃಷ್ಣ ಜಿ. ಮಂಜೇಶ್ವರ) ಪ್ರದರ್ಶಿಸಿದುವುದಲ್ಲದೆ 2017–18ರಲ್ಲಿ ನವೀನ್ ಡಿ. ಪಡೀಲ್ ಅವರ ನಿರ್ದೇಶನದಲ್ಲಿ ಕೃಷ್ಣ ಜಿ. ಮಂಜೇಶ್ವರರ 'ಅಂಚಗೆ–ಇಂಚಗೆ' ನಾಟಕ ಕೇವಲ 8 ತಿಂಗಳಲ್ಲಿ 106 ಪ್ರದರ್ಶನ ಕಂಡು ಪ್ರಸಿದ್ಧಿ ಪಡೆದಿದೆ. 'ಇತ್ತ್‌ನಾತ್‌ದಿನ', 'ಬಂಜಿಗ್ ಹಾಕೊಡ್ಚಿ' ಈ ಎರಡು ನಾಟಕಗಳು 2018ರ ನೂತನ ಕಲಾಕಾಣಿಕೆಗಳು.

**ದಿನಾಂಕ 1–7–2018ರಂದು ಕಡಂಬಾರಿನಲ್ಲಿ ಜರಗಿದ ಶಾರದಾ ಆರ್ಟ್ಸ್ ಕಲಾವಿದರು ಮತ್ತು ಐಸಿರಿ ಕಲಾವಿದರು ತಂಡಗಳ ನೂತನ ನಾಟಕಗಳ ಮುಹೂರ್ತ ಸಂದರ್ಭದಲ್ಲಿ ಏರ್ಪಟ್ಟ ಕಲಾವಿದರ ಸಮಾವೇಶ. ಚಿತ್ರದಲ್ಲಿ ಶ್ರೀ ಮಾಣಿಲ ಸ್ವಾಮೀಜಿ, ಶ್ರೀ ಮಹಾಬಲ ಸ್ವಾಮೀಜಿ (ಆಶೀರ್ವಚನ), ಮುದ್ದು ಮೂಡುಬೆಳ್ಳೆ (ಅಧ್ಯಕ್ಷತೆ), ವಿಜಯಕುಮಾರ್ ಕೊಡಿಯಾಲ್‌ಬೈಲ್, ಲಕ್ಷ್ಮಣಕುಮಾರ್ ಮಲ್ಲೂರು, ಸುಂದರ ರೈ ಮಂದಾರ, ವಿದ್ದು ಉಚ್ಚಿಲ್, ಭೋಜರಾಜ್ ವಾಮಂಜೂರು ಮುಂತಾದವರು ಪಾಲ್ಗೊಂಡರು**

ಈ ತಂಡದಲ್ಲಿ ಸುಂದರ ರೈ ಮಂದಾರ, ಮಂಜುಳಾ ಜನಾರ್ದನ, ಪುಷ್ಪರಾಜ್ ಬೊಳ್ಳಾರ್, ದೀಪಕ್ ರೈ ಪಾಣಾಜೆ, ಶ್ರೀಮತಿ ಪಿಂಕಿರಾಣಿ, ರವಿ ರಾಮಕುಂಜ – ಮುಂತಾದ ಕಲಾವಿದರು ನಟನಟಿಯರಾಗಿ ಪ್ರೇಕ್ಷಕರ ಗಮನ ಸೆಳೆದವರಾಗಿದ್ದಾರೆ. ಶಾರದಾ ಆರ್ಟ್ಸ್ ತಂಡದ ನಟ, ನಿರ್ದೇಶಕ ಪ್ರಕಾಶ್ ತೂಮಿನಾಡು ಈಗ ತುಳು, ಕನ್ನಡ ಚಿತ್ರರಂಗದಲ್ಲೂ ನಟರಾಗಿ ಹೆಸರು ಮಾಡುತ್ತಿದ್ದಾರೆ.

## ನಮ್ಮ ಕಲಾವಿದೆರ್ ಬೆದ್ರ – ಉಮೇಶ್ ಮಿಜಾರ್

ಸುಮಾರು ಎರಡು ದಶಕಗಳ ಹಿಂದೆಯೇ ನಾಟಕದ ತೀವ್ರ ಅಭಿರುಚಿ ಹೊಂದಿ ರಂಗಾಸಕ್ತ ಗೆಳೆಯರನ್ನು ಸೇರಿಸಿ ನಾಟಕವಾಡತೊಡಗಿದ ಮೂಡಬಿದ್ರೆಯ 'ಬಲೆ ತೆಲಿಪಾಲೆ' ಖ್ಯಾತಿಯ ರಂಗನಟ ಉಮೇಶ್ ಮಿಜಾರ್‌ರು ಆರಂಭದಲ್ಲಿ ದಂಡೆಕೇರಿ, ಕೆ.ಜೆ. ಕೊಕ್ರಾಡಿ, ಕೆ.ವಿ.ಶೆಟ್ಟಿ, ಶಾಂತಾರಾಂ ಕಲ್ಲಡ್ಕ ಮುಂತಾದ ಖ್ಯಾತನಾಮರ ನಾಟಕಗಳನ್ನು ಆಡುತ್ತ ಬಂದವರು. ಸುಮಾರು 18 ವರ್ಷಗಳ ಹಿಂದೆ 'ನಮ್ಮ ಬೆದ್ರ' ಎನ್ನುವ ಸ್ವಯಂಪೂರ್ಣ ನಾಟಕ ತಂಡವನ್ನೇ ಕಟ್ಟಿದರು. ಅನೇಕ ಮಂದಿ ಕಲಾವಿದರನ್ನು ಬೆಳೆಸುವ ಮತ್ತು ಪೋಷಿಸುವುದರಲ್ಲಿ ಸಕ್ರಿಯರಾಗಿ ಸದ್ಯ ಈ ತಂಡದಲ್ಲಿ 16 ಮಂದಿ ಖಾಯಂ ಕಲಾವಿದರು, ಓರ್ವ ಸಂಗೀತ ಕಲಾವಿದ, ನಾಲ್ಕು ಮಂದಿ ತಂತ್ರಜ್ಞರಿದ್ದಾರೆ. ಸುರೇಂದ್ರ ಕುಮಾರ್ ಕಲತ್ರಪಾಡೆಯವರ 'ಬೈಲಕುರಲ್, 'ದೇವೆರ್ ಮುನೀಂಡ', 'ಗುರ್ಕರೆ ಗುವೆಲ್ದ್', 'ಮೇಘ ಮುರಾರಿ' ಮತ್ತಿತರ ನಾಟಕಗಳನ್ನು ಪ್ರಯೋಗಕ್ಕೆ ತಂದಿದ್ದಾರೆ. ಈಗ ಯಶಸ್ವಿ ಪ್ರಯೋಗದಲ್ಲಿರುವ ನಾಟಕಗಳೆಂದರೆ ಉಮೇಶ್ ಮಿಜಾರರ 'ಬುದ್ದಿ ಬುಡಯೆ' (335 ಪ್ರದರ್ಶನ), ಆತೆ ಪನೊಡಾತೆ (175 ಪ್ರದರ್ಶನ), ಆಮುಜಿಪಂಡ ದೀಮುಜಿ (180 ಪ್ರದರ್ಶನ) ಉಲಾಯಿ–ಪಿದಾಯಿ (60 ಪ್ರಯೋಗ), ಪಾಂಡುನ ಅಲಕ್ಕ ಪೋಂಡು (25 ಪ್ರದರ್ಶನ) ದಿನಕರ ಭಂಡಾರಿ ಕಣಂಜಾರು ಅವರ ನೆಟ್‌ವರ್ಕ್ ತಿಕ್ಕುಜಿ (130 ಪ್ರದರ್ಶನ)ಗಳನ್ನು ಕಂಡು ಈಗಲೂ ಮುಂದುವರಿಯುತ್ತಿದೆ.

ತಂಡದ ಮುಂಬೈ ಸಂಚಾಲಕರು ಪ್ರಕಾಶ್ ಶೆಟ್ಟಿ ಸುರತ್ಕಲ್ ಹಾಗೂ ನವೀನ್ ಪಡು ಇನ್ನಾ ಬೆಂಬಲಕ್ಕಿದ್ದಾರೆ. ಮುಂಬೈಗೆ ಆರು ಬಾರಿ ಪ್ರವಾಸ ಮಾಡಿ ಈ ತಂಡ ನಾಟಕ ಪ್ರದರ್ಶಿಸಿದೆ.

1992ರಲ್ಲಿ ಜಿ.ಜಿ.ಪುತ್ತಿಗೆ ಬರೆದ 'ಪುಂಚದ ಪೂ' ನಾಟಕವನ್ನು ಅಚ್ಯುತ ಮಾಸ್ಟರ್ ಅವರ ನಿರ್ದೇಶನದಲ್ಲಿ 'ನಮ್ಮ ಬೆದ್ರ ಕಲಾವಿದೆರ್' ಲಾಂಛನದಲ್ಲಿ ಆಡತೊಡಗಿದ ತನ್ನ ತಂಡದ ನಾಟಕಗಳನ್ನು ಸ್ವತಃ ಉಮೇಶ್ ಮಿಜಾರ್ ನಿರ್ದೇಶನ ಮಾಡತೊಡಗಿ, 'ಮಚ್ಚರದ ಮಾಮಿ (1998–ರಚನೆ ಸುಲೇಮಾನ್ ಅಲಂಗಾರು), ಏರೆಗ್ಲಾ ಗೊತ್ತುಜ್ಜಿ




(1999 –ರಚನೆ ಅಶೋಕ್ ತೋಡಾರ್), ಬಿರ್ಸೆರೆಡೊರಿ ಬಿರ್ಸೆ (2000 – ರಚನೆ ಇಂದು ಎಸ್. ಮಂಗಳೂರು), ಪುಲ್ಯಾನಗ – 2008 ರಚನೆ ಹರೀಶ್ ಪಡುಬಿದ್ರೆ), ಸೀದೊಗು ಸಾದಿಜ್ಜಿ (2011–ರಚನೆ ಶ್ರೀನಾಥ್ ಪಡುಬಿದ್ರಿ), ಬುದ್ದಿ ಬುಡಯೆ (2010 –ರಚನೆ ಉಮೇಶ್ ಮಿಜಾರ್ (335 ಪ್ರದರ್ಶನ) ನೆಟ್‌ವರ್ಕ್ ತಿಕ್ಕುಜಿ (2015 ರಚನೆ ದಿನಕರ ಭಂಡಾರಿ 130 ಪ್ರದರ್ಶನ) ಹೀಗೆ ತಾಯ್ನಾಡಲ್ಲೂ, ಮುಂಬಯಿಯಲ್ಲೂ ತನ್ನ ತಂಡದ ರಂಗಯಾತ್ರೆ ನಡೆಸಿದ್ದಾರೆ.

**ವಿಧಾತ್ರೀ ಕಲಾವಿದರು ಕೈಕಂಬ**

ನಾಟಕ ಪ್ರದರ್ಶನಕ್ಕಾಗಿಯೇ ಹುಟ್ಟಿಕೊಂಡ ಈ ಸಂಘಟನೆಯ ಸೂತ್ರಧಾರಿ ಕಲಾವಿದ ರಮೇಶ್ ರೈ ಕುಕ್ಕುವಳ್ಳಿ, 2008ರಲ್ಲಿ ಗುರುಪುರ ಕೈಕಂಬದಲ್ಲಿ ಶ್ರೀ ರಾಜಶೇಖರಾನಂದಸ್ವಾಮೀಜಿಯವರಿಂದ ಉದ್ಘಾಟಿಸಲ್ಪಟ್ಟ ಈ ತುಳುನಾಟಕ ತಂಡದ ಬಹುಪಾಲು ನಾಟಕಗಳ ನಿರ್ದೇಶಕರು ಚಿದಾನಂದ ಅದ್ಯಪಾಡಿ.

ವಿಧಾತ್ರೀ ಕಲಾವಿದರು 2008ರಲ್ಲಿ ಬಿ.ಎಸ್. ಕರ್ಕೇರರ ದೈವರಾಜೆ ಬಬ್ಬುಸ್ವಾಮಿ

'ಚೊಚ್ಚಲ ಪ್ರಯೋಗದೊಂದಿಗೆ ರಂಗಕ್ಕೆ ಹೆಜ್ಜೆಯಿರಿಸಿ ಗೆದ್ದು ಈಗ ನಾಟಕ 75 ಪ್ರದರ್ಶನ ಕಂಡು ಯಶಸ್ವಿಯಾಯಿತು. 2010ರಲ್ಲಿ ಬಿ.ಎಸ್. ಕರ್ಕೇರರ ಕಾರ್ನಿಕದ ಕಲ್ಲುರ್ಟಿ (35 ಪ್ರದರ್ಶನ), 2011ರಲ್ಲಿ ಧರ್ಮರಸು ಶಿವಾಜಿ ಮಹಾರಾಜನ ಐತಿಹಾಸಿಕ ಕಥನಾಧಾರಿತ) 30 ಪ್ರಯೋಗ ಅದೇ ವರ್ಷದ ಮತ್ತೊಂದು ಬಹು ಯಶಸ್ಸಿನ ರಂಗಕೃತಿ 'ನಿಕ್ಕ್ ಗೊತ್ತುಂಡಾ?' – ಇದು 320 ಪ್ರದರ್ಶನ ಕಂಡು ಇನ್ನೂ ಮುಂದುವರಿಯುತ್ತಿದೆ. 2012ರಲ್ಲಿ ಸೋಮನಾಥ ಶೆಟ್ಟಿ ಮಂಗಲ್ಪಾಡಿಯವರ, 'ಎನ್ನಿಲೆಕ ಆಪುಜಿ' – 60 ಪ್ರದರ್ಶನ 2013ರಲ್ಲಿ ಚಿದಾನಂದ ಅದ್ಯಪಾಡಿ ರಚಿಸಿದ ಕಾಸ್ ಬೋಡಾ – 192 ಪ್ರಯೋಗ, 2014ರಲ್ಲಿ ಚಿದಾನಂದ ಅದ್ಯಪಾಡಿಯವರ 'ನಮ್ಮ ಮರ್ಯಾದಿದ ಪ್ರಶ್ನೆ' – 50 ಪ್ರದರ್ಶನ ಕಂಡಿತು.

2016ರಲ್ಲಿ ಈ ತಂಡ ಸೀತಾರಾಮ್ ಕುಲಾಲ್ ವಿರಚಿತ 'ಮಣ್ಣಿನ ಮಗಳು ಅಬ್ಬಕ್ಕ' ಕನ್ನಡ ನಾಟಕವನ್ನು ಪ್ರಯೋಗಿಸಿ 10 ಪ್ರದರ್ಶನ ನೀಡಿತು. 2017ರಲ್ಲಿ ಕದ್ರಿ ನವನೀತ ಶೆಟ್ಟರ 'ರಾಮ ಪಗರಿ' (ವಾಲಿಮೋಕ್ಷದ ಪೌರಾಣಿಕ ನಾಟಕ) –ಇದರ ಐದು ಪ್ರದರ್ಶನ ನೀಡಿದರು. 2017ರಲ್ಲಿ ಬಿ.ಎಸ್. ಕರ್ಕೇರರ 'ಕುಸಲ್ ಬೊರ್ಚಿ' ನಾಟಕದ 5 ಪ್ರದರ್ಶನ ನೀಡಿದರು.

ಈಚೆಗೆ 2018ರಲ್ಲಿ ನೂತನ ಕೃತಿ ಚೇತನ್ ಜಿ. ಪಿಲಾರ್ ಅವರ ಕೃತಿ 'ಬಚ್ಚಂಗಾಯಿ'

ವಿಧಾತ್ರಿ ಕಲಾವಿದರು ಕೈಕಂಬದವರ 'ರಾಮ ಪಗರಿ' ಪೌರಾಣಿಕ ನಾಟಕ.
ವಾಲಿಯ ಪಾತ್ರದಲ್ಲಿ ರಮೇಶ್ ರೈ ಕುಕ್ಕುವಳ್ಳಿ

‘ಅದ್ಯಪಾಡಿ’ ಈ ತಂಡವಾಗಿ ಕೃತಿಯ ಸಿದ್ಧತೆ ವೇಳೆ ಪ್ರಯೋಗಕ್ಕೆ ರಿಹರ್ಸಲ್ ನಡೆಸಿದ್ದಾರೆ. ‘ಎನ್ನಿಲೆಕ ಆಪುಜಿ’ ನಾಟಕವನ್ನು ರಮೇಶ್ ರೈ ನಿರ್ದೇಶಿಸಿದ್ದರೆ ಉಳಿದೆಲ್ಲ ನಾಟಕಗಳನ್ನು ಚಿದಾನಂದ ಅದ್ಯಪಾಡಿಯವರೇ ನಿರ್ದೇಶಿಸಿದ ಸಮರ್ಥರು. ದಂಡೆಕೇರಿಯವರ 54 ವರ್ಷ ಹಿಂದಿನ ಬಯ್ಯಮಲ್ಲಿಗೆ ನಾಟಕವನ್ನು ಈ ವರ್ಷ (2018) ಪ್ರಯೋಗಕ್ಕೆ ಆಯ್ದುಕೊಂಡಿದ್ದಾರೆ.

ಈ ತಂಡದಲ್ಲಿ ಚಲನಚಿತ್ರ, ಕಿರುತೆರೆಗಳಲ್ಲೂ ಅಭಿನಯಿಸಿದ ಪ್ರಬುದ್ಧ ಕಲಾವಿದರಿದ್ದಾರೆ. ರಮೇಶ್ ರೈ ಕುಕ್ಕುವಳ್ಳಿ, ಚಿದಾನಂದ ಅದ್ಯಪಾಡಿ, ಬಾಬು ಅದ್ಯಪಾಡಿ, ಸುನೀತಾ ಎಕ್ಕೂರು, ರಂಜನ್ ಬೋಳೂರು, ಸಚಿನ್ ಅತ್ತಾಜೆ, ದೀಪಿಕಾ ಮಂಗಳೂರು, ಶ್ರೇಯಸ್ ಕಲ್ಲಡ್ಕ, ರವಿಕುಮಾರ್ ನಾಡಾಜೆ, ಚೇತನ್ ಪಿಲಾರ್ ಪ್ರಮುಖ ಕಲಾವಿದರಿದ್ದಾರೆ. ಪೌರಾಣಿಕ, ಸಾಮಾಜಿಕ – ಹಾಸ್ಯ, ಚಾರಿತ್ರಿಕ, ಜಾನಪದ, ನಾಲ್ಕೂ ಬಗೆಯ ನಾಟಕಗಳನ್ನು ನೀಡುತ್ತಿರುವ ವಿಶಿಷ್ಟ ತಂಡ ‘ವಿಧಾತ್ರಿ’.

**ಸುಂಕದಕಟ್ಟೆಯಲ್ಲಿ ನೂತನ ತ್ರಿವಳಿ ರಂಗ ತಂಡಗಳು**

**1. ಕುಸಲ್ದ ಕಲಾವಿದೆರ್ (ಸಂಚಾಲಕರು : ಜಿತೇಶ್ ಉಳಿಯ)**

**2. ಇಂಚರ ಕಲಾವಿದೆರ್ (ಸಂಚಾಲಕರು : ವಿನಯ್)**

**3. ಮೋಕೆದ ಕಲಾವಿದೆರ್ (ಸಂಚಾಲಕರು : ಧನಂಜಯ ಹೆಗಡೆ)**

ಕಳೆದೆರಡು ವರ್ಷಗಳ ಹಿಂದೆ ಸುಂಕದಕಟ್ಟೆ ಅಂಬಿಕಾ ಅನ್ನಪೂರ್ಣೇಶ್ವರಿ ಕ್ಷೇತ್ರ ಸಾನಿಧ್ಯದಲ್ಲಿ ಹುಟ್ಟಿಕೊಂಡ ಕುಸಲ್ದ ಕಲಾವಿದೆರ್ ತಂಡವು ರಂಗಭೂಮಿಯಲ್ಲಿ ಯಶಸ್ವಿ ನಾಟಕ ಪ್ರದರ್ಶನ ನೀಡುತ್ತಿದೆ.

ಯುವ ನಾಟಕಕಾರ ನವೀನ್‌ಕುಮಾರ್ ಪೆರಾರ ಇವರ ಕಥೆ, ಸಂಭಾಷಣೆಯ 'ಬರೆದಾತ್‌ಂಡ್ ಒಚ್ಚೆರಾಪುಜಿ' ನಾಟಕ ಜಿತೇಶ್‌ಕುಮಾರ್ ಉಳಿಯ ನಿರ್ದೇಶನದಲ್ಲಿ 2016ರಲ್ಲಿ ಪ್ರಯೋಗಕ್ಕೆ ಬಂದು ರಂಗದಲ್ಲಿ ಚಮಕು ಹುಟ್ಟಿಸಿ ವಿವಿಧ ಕಡೆ ಹಲವಾರು ಪ್ರದರ್ಶನ ಕಂಡಿದೆ. 'ವಿಧಾತ್ರಿ ಕಲಾವಿದರು' ತಂಡದಲ್ಲಿ ಗಮನ ಸೆಳೆದಿದ್ದ ನಿರ್ದೇಶಕರಲ್ಲದೆ ಪ್ರಸಿದ್ಧ ಕಲಾವಿದರಾದ ಸುಂದರ್ ರೈ ಮಂದಾರ, ಪ್ರಸಾದ್ ಪಾಚ್ಯಾರು, ಅಕ್ಷಯ್ ಕೊಂಪದವು, ಕೀರ್ತಿದಾಸ್, ಜಗದೀಶ್ ಕರಿಯಂಗಳ, ಪೃಥ್ವಿ ಪೊಳಲಿ, ಪುಷ್ಪಾ, ದೇವರಾಜ್, ಮಾನ್ಯ ಸುಂಕದಕಟ್ಟೆ, ದಿವ್ಯಾ ಪೆರಾರ, ಕಾವ್ಯ ಜೋಕಟ್ಟೆ ಮುಂತಾದ ನಟ, ನಟಿಯರ ಅದ್ಭುತ ನಟನೆಯಿಂದ ಈ ತಂಡ ಮುಂದುವರಿದಿದೆ. ಹಾಸ್ಯವೇ ಈ ನಾಟಕದ ಜೀವಾಳವಾದರೂ ಸಾಂಸಾರಿಕ ಕತೆಯಿದೆ. ಮಂಗಳೂರು, ಕಾಸರಗೋಡು, ಚಿಕ್ಕಮಗಳೂರು, ಮುಂಬಯಿ ಮುಂತಾದೆಡೆ ಪ್ರದರ್ಶನ ನೀಡಿರುವ ಈ ತಂಡದ ಹೊಸ ನಾಟಕ 'ಅಂಚಾಯಿನೆಟ್ಟ್ ಇಂಚಾಂಡ್' ಜಿತೇಶ್ ಉಳಿಯ ನಿರ್ದೇಶನದಲ್ಲಿ ಯಶಸ್ವಿಯಾಗಿ ಮುಂದುವರಿದಿದೆ.

ಇದರ ಬೆನ್ನಲ್ಲೇ 2017ರಲ್ಲಿ ಚಿಗುರಿದ ಸುಂಕದಕಟ್ಟೆಯ 'ಇಂಚರ ಕಲಾವಿದೆರ್

ತಂಡಕ್ಕೆ ವಿನಯಕುಮಾರ್ ಅದ್ಯಪಾಡಿ, ಅಶ್ವಿನಿ ಕೊಳ್ತಮಜಲ್ ಮುಂತಾದ ನವ ತರುಣರ ಸಾರಥ್ಯ. ವಿನಯಕುಮಾರರ 'ಮದಿಮಾಲ್' ಈ ತಂಡದ ಯಶಸ್ವಿ ನಾಟಕ ಹಿನ್ನೆಲೆ ಸಂಗೀತ, ಗೀತರಚನೆ ಇಲ್ಲೆಲ್ಲ ಹೊಸ ಮುಖಗಳಾದರೂ ಗಮನ ಸೆಳೆದಿದ್ದಾರೆ. ಬಲೆ ತೆಲಿಪಾಲೆ, ಮಜಾ ಭಾರತ ಸರಣಿಗಳಲ್ಲಿ ಮಿಂಚಿದ ಕಲಾವಿದರೂ ಈ ತಂಡದಲ್ಲಿದ್ದಾರೆ.

ಧನಂಜಯ ಹೆಗಡೆ ಇವರ ನೇತೃತ್ವದಲ್ಲಿ ಹುಟ್ಟಿಕೊಂಡ 'ಮೋಕೆದ ಕಲಾವಿದೆರ್' ತಂಡವೂ ರಂಗಭೂಮಿಯಲ್ಲಿ ಸಕ್ರಿಯವಾಗಿದೆ.

ಕಳೆದೊಂದು ದಶಕದಿಂದ ಚಾಪರ್ಕ, ಕಲಾಸಂಗಮ, ಲಕುಮಿ ತಂಡದಿಂದ ಹಿಡಿದು ತುಳು ನಾಟಕ ರಂಗದ ಬೇಡಿಕೆಯ ನಟರೂ, ಹೊಸಬರೂ ಧಾವಂತದ ತುಳು ಚಿತ್ರರಂಗದಲ್ಲಿ ವ್ಯಸ್ತರಾಗಿದ್ದಾರೆ. ಆದರೂ ಇನ್ನೊಂದೆಡೆ ನಾಟಕ ಪ್ರದರ್ಶನಗಳೂ 'ಮರೆತಿಲ್ಲ' ಎನ್ನುವಂತೆ ಮುಂದುವರೆದಿವೆ.

**ಸಿಂಧೂರ ಕಲಾವಿದೆರ್ ಕಾರ್ಲ**

28.03.2016ರಲ್ಲಿ ಕಾರ್ಕಳದಲ್ಲಿ ಆರಂಭಗೊಂಡ ನಾಟಕ ತಂಡ. ಚಿತ್ರನಟಿ ಲೀಲಾವತಿ ಪೊಸಲಾಯಿ ಸಾರಥ್ಯದಲ್ಲಿ, ಹಿರಿಯ ನಟ ರವೀಂದ್ರ ಶಾಂತಿ ಪುಲ್ಕೇರಿಯವರ ಸಹಕಾರದೊಂದಿಗೆ ಪ್ರಾರಂಭಗೊಂಡ ತಂಡ ಇದೀಗ ಮೂರನೇ ವರ್ಷದ ಹೊಸ್ತಿಲಲ್ಲಿ ಮುಂದುವರಿಯುತ್ತಿದೆ. ಕಳೆದ ಮೂರು ವರ್ಷಗಳಲ್ಲಿ ಮೂರು ವಿಭಿನ್ನ ಕತೆಗಳನ್ನೊಳಗೊಂಡ ಸಂದೀಪ್ ಬಾರಾಡಿಯವರ 'ಎಂಕ್ ಗೊತ್ತುಂಡು'; ಆರ್ ಏರ್?, ಪ್ರವೀಣ್ ನೆಲ್ಲಿಕಟ್ಟೆಯವರ 'ಪನೊಂಡಿತ್ತ್ಂಡ್, ಸೋರಿ' ಎನ್ನುವ ನಾಟಕಗಳನ್ನು ರಂಗಭೂಮಿಗೆ ಅರ್ಪಣೆ ಮಾಡಿರುವರು. ಈ ತಂಡದಲ್ಲಿ ತುಳು ಚಿತ್ರರಂಗದಲ್ಲಿ (ಮೈನೇಮ್ ಈಸ್ ಅಣ್ಣಪ್ಪ) ಸಹನಿರ್ದೇಶಕರಾಗಿ ದುಡಿದ ಸಂದೀಪ್ ಬಾರಾಡಿ ಯಂಥವರಿದ್ದಾರೆ, ಕನ್ನಡದ 'ಕಲರ್ಸ್ ಸೂಪರ್'ನಲ್ಲಿ ಪ್ರಸಾರವಾದ 'ಮಜಾಭಾರತ' ಕಾರ್ಯಕ್ರಮದಲ್ಲಿ ಈ ತಂಡ ಅಭಿನಯಿಸಿದೆ. 'ಬಲೇ ತೆಲಿಪಾಲೆ' ಸೀಜನ್ 3ರಲ್ಲಿ ಈ ತಂಡ ಫೈನಲ್ಸ್ ತನಕ ಹೋಗಿದೆ.

ತಂಡದ ಕಲಾವಿದರು ರವೀಂದ್ರ ಶಾಂತಿ ಪುಲ್ಕೇರಿ, ತಾರಾನಾಥ್ ಬೋಳ, ಹಮೀದ್ ಮಿಯ್ಯಾರು, ಸಂತೋಷ್ ಮುಡಾರು, ಸಂದೀಪ್ ಬಾರಾಡಿ, ಪ್ರವೀಣ್ ನೆಲ್ಲಿಕಟ್ಟೆ, ವಿಠಲ್ ಅಮೀನ್ ಪುಲ್ಕೇರಿ, ಸಂದೀಪ್ ಮಿಯ್ಯಾರು, ಅನಿಲ್ ಕಾಬೆಟ್ಟು, ನಿತಿನ್ ಕಾಬೆಟ್ಟು, ಸೌರಭ್ ಪುಲ್ಕೇರಿ, ರಾಜೇಶ್ ದಾನಶಾಲೆ, ಕು.ಕಾವ್ಯ, ಕು.ಸ್ವಾತಿ, ಕು. ದಾಕ್ಷಾಯಿಣಿ ಮುಂತಾದವರು.

'ಕೊಪ್ಪರಿಗೆ' ರಂಗಪ್ರಯೋಗದ ಮೂಲಕ ಗಮನ ಸೆಳೆದ ಮಧು ಬಂಗೇರ ಕಲ್ಲಡ್ಕ ಸಾರಥ್ಯದ 'ತುಳುವೆರೆ ತುಡರ್ ಕಲಾತಂಡ ಸುರತ್ಕಲ್' ಇವರು ಅರುಣ್‌ಚಂದ್ರ ಬಿ.ಸಿ.ರೋಡ್ ನಿರ್ದೇಶನದಲ್ಲಿ 'ಶಾಂತಿನಗರ 2nd ಕ್ರಾಸ್' (ರಚನೆ : ನರೇಶ್ ಕುಮಾರ್ ಸಸಿಹಿತ್ಲು) ಮುಂತಾದ ಹಾಸ್ಯಮಯ ಕುತೂಹಲಕಾರಿ ನಾಟಕಗಳೊಂದಿಗೆ

ಮುಂದುವರಿದಿದ್ದಾರೆ. ಇನ್ನೊಂದೆಡೆ 'ತುಳುವೆರೆ ಉಡಲ್' ಜೋಡುಕಲ್ಲು ಇವರ ನೂತನ ನಾಟಕ 'ಶ್ರೀಮತಿ W/o ಚಂದು' ನಾಟಕವೂ 2019ರಲ್ಲಿ ಪ್ರದರ್ಶನ ಮುಂದುವರಿಸಿದೆ.

**ಸಮಕಾಲೀನ ನಾಟಕ ತಂಡಗಳ ಸೂತ್ರಧಾರರು**

'ಕಾಪುರಂಗತರಂಗ' ತಂಡದ ಲೀಲಾಧರ ಶೆಟ್ಟಿ, 'ನಮ್ಮ ಬೆದ್ರ' ತಂಡ ಉಮೇಶ್ ಮಿಜಾರ್, ಐಸಿರಿ ಕಲಾವಿದರು ಮತ್ತು ಶಾರದಾ ಆರ್ಟ್ಸ್ ಕಲಾವಿದೆರ್ನ ಕೃಷ್ಣ ಜಿ. ಮಂಜೇಶ್ವರ ವಿಧಾತ್ರಿ ಕಲಾವಿದರ ರಮೇಶ್ ರೈ ಕುಕ್ಕುವಳ್ಳಿ ವಿಜಯ ಕಲಾವಿದರು ಕಿನ್ನಿಗೋಳಿಯ ಶರತ್ ಶೆಟ್ಟಿ ಮುಂಡ್ಕೂರು, ಲೀಲಾವತಿ ಪೊಸಲಾಯಿ ಮತ್ತಿತರರು ವಿವಿಧ ನಾಟಕ ತಂಡಗಳ ಸೂತ್ರಧಾರರಾಗಿ ಹಿರಿಯ ಜವಾಬ್ದಾರಿಗಳನ್ನು ನಿಭಾಯಿಸಿ ಕೊಂಡು ಸಾಗುತ್ತಿದ್ದರು.

* * *

# ತುಳು ನಾಟಕರಂಗ ಪ್ರಗತಿನೋಟದ ಹೆಜ್ಜೆ ಗುರುತುಗಳು

ತುಳು ನಾಟಕ ರಂಗದ ಪುನರುತ್ಥಾನದ ದೃಷ್ಟಿಯಿಟ್ಟುಕೊಂಡು ಸುಮಾರು ಎಪ್ಪತ್ತು–ಎಂಬತ್ತರ ದಶಕದಿಂದೀಚೆಗೆ ಆಗಾಗ ಕೆಲವೊಂದು ಮಹತ್ವದ ಪ್ರಯತ್ನಗಳಾಗುತ್ತ ಬಂದವು ಅವುಗಳ ಬಗೆಗಿನ ಸಂಕ್ಷೇಪ ವಿವರಗಳನ್ನು ಹೀಗೆ ಗಮನಿಸಬಹುದು.

1970ರಲ್ಲಿ ಮಂಗಳೂರಿನಲ್ಲಿ ದಿ. ಎಸ್.ಆರ್. ಹೆಗ್ಡೆ, ರತ್ನಕುಮಾರ್ ಎಂ., ಎ.ಸಿ. ಭಂಡಾರಿ ಮುಂತಾದವರ ನೇತೃತ್ವದಲ್ಲಿ ತುಳುಕೂಟ ಹುಟ್ಟಿಕೊಂಡಿತು. 1976ರ ದಶಂಬರ ತಿಂಗಳಲ್ಲಿ ಕಾರ್ಯಾರಂಭ ಮಾಡಿದ ಮಂಗಳೂರು ಆಕಾಶವಾಣಿ ತುಳುನಾಟಕಗಳ ಪ್ರಸಾರಕ್ಕೂ ಅವಕಾಶ ಕಲ್ಪಿಸಿ, ಹಲವು ನೂತನ ನಾಟಕಗಳ ಹುಟ್ಟಿಗೆ ಪ್ರೇರಣೆ, ಪ್ರೋತ್ಸಾಹ ಒದಗಿಸಿತು. ಮುಂದೆ ಕಾಲಕಾಲಕ್ಕೆ ಸಂವಾದ, ಚರ್ಚೆಗಳನ್ನು ಪ್ರಸಾರ ಮಾಡಿತು, ನಾಟಕರಚನಾ ಕಮ್ಮಟ ಏರ್ಪಡಿಸಿತು. 1977ರಿಂದ ಮಂಗಳೂರು ತುಳುಕೂಟವು ಧರ್ಮಸ್ಥಳ ಹೆಗ್ಗಡೆಯವರ ಆರ್ಥಿಕ ನೆರವಿನಿಂದ ರತ್ನವರ್ಮ ಹೆಗ್ಗಡೆ ತುಳು ನಾಟಕ ಕೃತಿ ಸ್ಪರ್ಧೆ ಏರ್ಪಡಿಸಿ, ಪ್ರತಿವರ್ಷ ಆಯ್ದ ಹಸ್ತಪ್ರತಿಗಳಿಗೆ ಬಹುಮಾನ ನೀಡಲು ಆರಂಭಿಸಿತು. ಅದು ಇಂದಿಗೂ ನಡೆಯುತ್ತಾ, ಈ ಬಾರಿ 50ನೆಯ ವರ್ಷದಲ್ಲಿದೆ.

1980ರಲ್ಲಿ ಮಂಗಳೂರಿನಲ್ಲಿ ದಿ. ದಾಮೋದರ ಆರ್. ಸುವರ್ಣರ ಮುಂದಾಳ್ತನದಲ್ಲಿ ತುಳು ನಾಟಕ ಕಲಾವಿದರ ಸಮಾವೇಶ, ಚರ್ಚೆ ಮತ್ತು ಸಂಘಟನೆ ಪ್ರಯತ್ನ ನಡೆಯಿತು. ಮಾರ್ಗದರ್ಶಕರಾಗಿ ಬೆಂಗಳೂರಿನಿಂದ ವಿಶುಕುಮಾರ್ ಬಂದಿದ್ದು ಪಾಲ್ಗೊಂಡವರಲ್ಲಿ ಈ ಲೇಖಕನೂ ಓರ್ವ.

1981ರಲ್ಲಿ ಬೆಂಗಳೂರು ತುಳುಕೂಟದ ಅಧ್ಯಕ್ಷರಾಗಿ ದಿ. ವಿಶುಕುಮಾರ್ ಬೆಂಗಳೂರಿನಲ್ಲಿ 'ತುಳುವರ ವೈಭವ' ಕಲಾತ್ಮಕ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿದ್ದಲ್ಲದೆ ಅದೇ ವೇಳೆ ಬೆಂಗಳೂರು ತುಳುಕೂಟವು ತುಳು ನಾಟಕ ಕೃತಿ ಸ್ಪರ್ಧೆ ಏರ್ಪಡಿಸಿ, ಬಹುಮಾನ ನೀಡಿತು.

ಮಂಗಳೂರಿನಲ್ಲಿ ನವಭಾರತ-ತುಳುಕೂಟ ಜಂಟಿಯಾಗಿ 'ತುಳುನಾಟಕ ಸಪ್ತಾಹ' ಏರ್ಪಡಿಸಿ ಪಾಂಡೇಶ್ವರ, ಕಿರೋಡಿಯನ್, ಎಮ್. ಕೆ. ಸೀತಾರಾಂ ಕುಲಾಲ್, ಕೆ.ಬಿ. ಭಂಡಾರಿ ಮುಂತಾದವರ ನಾಟಕಗಳನ್ನು ವಿವಿಧ ತಂಡಗಳು ಪ್ರದರ್ಶಿಸಿದವು. ತುಳುನಾಟಕ ಸ್ಪರ್ಧೆಗಳೂ ಪುರಭವನ ಮುಂತಾದೆಡೆ 1973ರಿಂದ ಕೆಲವು ವರ್ಷ ನಡೆದವು.

ಎಂಬತ್ತರ ದಶಕದಲ್ಲಿ ಮಂಗಳೂರಿನ ಡಾ. ರಿಚರ್ಡ್ ಕ್ಯಾಸ್ಟಲಿನೊ ಅವರು ಕಲಾವಿದರ ಸಂಘಟನೆ ಹುಟ್ಟುಹಾಕಿ ರಚನಾತ್ಮಕ ಕೆಲಸಗಳನ್ನು ಕೈಗೊಂಡರು. ತನ್ನ ಅರುಣ್-ಕಿರಣ್ 'ಪ್ರೊಡಕ್ಷನ್' ಲಾಂಛನದಲ್ಲಿ ಅನೇಕರ ನಾಟಕ ಪ್ರದರ್ಶನ ವ್ಯವಸ್ಥೆಗೊಳಿಸಿದರು.

1982ರಲ್ಲಿ ಕಾರ್ಕಳದ ಶ್ರೀ ಗುರುನಾರಾಯಣ ಕಲಾವೃಂದವು 'ಕೆಮ್ತೂರು ದೊಡ್ಡಣ್ಣ ಶೆಟ್ಟಿ ಅಭಿನಂದನೆ' ಸಮಾರಂಭ ಏರ್ಪಡಿಸಿ, ಆ ಸಂದರ್ಭದಲ್ಲಿ ಸನ್ಮಾನ, ನಾಟಕಾವಲೋಕನ ನಡೆಸಿತು. ಎಂಬತ್ತರ ದಶಕದಲ್ಲಿ ಕಾರ್ಕಳ ಜೇಸಿಸ್ ಸಂಸ್ಥೆ ಆಶ್ರಯದಲ್ಲಿ ಹಲವು ವರ್ಷ ತುಳುನಾಟಕ ಸ್ಪರ್ಧೆ ಜರಗಿತು. ಅದೇ ವೇಳೆಗೆ ಅಂದಿನ "ನವಭಾರತ", ದೈನಿಕದಲ್ಲಿ ತುಳು ನಾಟಕಗಳ ಸಮೀಕ್ಷೆಯನ್ನು ಮುದ್ದು ಮೂಡುಬೆಳ್ಳೆ, ಮಚ್ಚೇಂದ್ರನಾಥ ಪಾಂಡೇಶ್ವರ ಮುಂತಾದವರು ಬರೆದರು.

1984ರಲ್ಲಿ ಮಂಗಳೂರಿನಲ್ಲಿ ಎರಡು ದಿನ ಕಾಲ ಜರಗಿದ ತುಳುಸಾಹಿತ್ಯ ಸಮ್ಮೇಳನ (ತುಳುಪರ್ಬ)ದಲ್ಲಿ ಪ್ರಥಮ ಬಾರಿಗೆ 'ತುಳು ನಾಟಕ ವಿಚಾರ ಸಂಕಿರಣ' ಜರಗಿತು. ಅದರಲ್ಲಿ 'ತುಳುನಾಟಕ ವಸ್ತು, ಭಾಷೆ, ತಂತ್ರ' ಎನ್ನುವ ವಿಷಯವಾಗಿ ಪ್ರಬಂಧ ಮಂಡಿಸಿದವರು ಮುದ್ದು ಮೂಡುಬೆಳ್ಳೆ. ದಿ. ಕೆಮ್ತೂರು ದೊಡ್ಡಣ್ಣ ಶೆಟ್ಟರು ಅಧ್ಯಕ್ಷತೆವಹಿಸಿದ್ದ ಆ ಗೋಷ್ಠಿಯಲ್ಲಿ ಬಿ. ರಾಮ ಕಿರೋಡಿಯನ್, ಬಿ. ಭೋಜ ಸುವರ್ಣ, ವಿಶುಕುಮಾರ್, ಮಚ್ಚೇಂದ್ರನಾಥ್ ಪಾಂಡೇಶ್ವರ, ಕೆ.ಜೆ. ಕೊಕ್ರಾಡಿ, ಭಾಸ್ಕರ ಕುಲಾಲ್, ಮುಂತಾದವರು ಪಾಲ್ಗೊಂಡು ತುಳು ರಂಗಭೂಮಿಯ ಸ್ಥಿತಿಗತಿಯ ಬಗ್ಗೆ ಅಭಿಪ್ರಾಯ ಮಂಡನೆ ಮಾಡಿದ್ದರು.

ಬೆಂಗಳೂರಿನಲ್ಲಿ ತುಳುಕೂಟ ಸಂಸ್ಥೆಯಂತೆಯೇ 'ತುಳುವೆರೆಂಕುಲು' ಎಂಬ ಸಂಸ್ಥೆಯ ಆಶ್ರಯದಲ್ಲಿ ಅಖಿಲ ಭಾರತ ತುಳು ಸಮ್ಮೇಳನ 1987ರಲ್ಲಿ ಜರಗಿತು. ಅದರಲ್ಲಿ ತುಳುನಾಟಕಗಳ ಕುರಿತಾಗಿ ಮುದ್ದು ಮೂಡುಬೆಳ್ಳೆ ಹಾಗೂ ರತ್ನಕುಮಾರ್ ಪ್ರಬಂಧ ಮಂಡಿಸಿದರು.

1989ರಲ್ಲಿ ಮುಲ್ಕಿಯಲ್ಲಿ ಪ್ರೊ. ಅಮೃತ ಸೋಮೇಶ್ವರ ಅವರ ಅಧ್ಯಕ್ಷತೆಯಲ್ಲಿ ಜರಗಿದ ಅಖಿಲಭಾರತ ತುಳು ಸಮ್ಮೇಳನದಲ್ಲಿ ತುಳು ನಾಟಕಕೃತಿಗಳಿಗೆ ಸ್ಪರ್ಧೆ, ಬಹುಮಾನ ನೀಡಲಾಯಿತು.

1994ರಲ್ಲಿ ಮಂಗಳೂರಿನಲ್ಲಿ ಧರ್ಮಸ್ಥಳ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಜರಗಿದ 'ವಿಶ್ವ ತುಳು ಸಮ್ಮೇಳನ'ದ ವೇಳೆ ತುಳುನಾಟಕಗಳ

ಕುರಿತು ಗೋಷ್ಠಿಯಲ್ಲಿ ಹಿರಿಯ ನಾಟಕಕರ್ತೃ ಶ್ರೀ ಯು.ಆರ್. ಚಂದರ್ ಪ್ರಬಂಧ ಮಂಡಿಸಿದರು. ಐ.ಕೆ. ಬೊಳುವಾರು ಅಭಿಪ್ರಾಯ ಮಂಡಿಸಿದರು.

ಈ ಪ್ರಮುಖ ಘಟನೆಗಳ ಸಂದರ್ಭಗಳಲ್ಲಿ ಹಿರಿಯ ತುಳು ನಾಟಕಕಾರರು, ಕಲಾವಿದರಿಗೆ ಪ್ರಶಸ್ತಿ, ಗೌರವಗಳೂ ಆರಂಭವಾದವು. ಮುಂದೆ ಅಡ್ಯಾರು, ಎಲ್ಲೂರು, ಉಡುಪಿ, ಉದ್ಯಾವರ, ಕಿನ್ನಿಗೋಳಿ, ಬಂಟ್ವಾಳ, ಪುತ್ತೂರು, ಮುಂಬಯಿ ಮುಂತಾದೆಡೆ ತುಳುನಾಟಕ ಸ್ಪರ್ಧೆಗಳು ನಡೆಯತೊಡಗಿದವು.

ದಿನಾಂಕ 12.01.2003ರಲ್ಲಿ ಉಡುಪಿ ತುಳುಕೂಟದ ಆಶ್ರಯದಲ್ಲಿ 'ತುಳುನಾಟಕ ಕೋಡೆ–ಇನಿ–ಎಲ್ಲೆ' ಎನ್ನುವ ವಿಚಾರಗೋಷ್ಠಿ ಜರಗಿತು. ಶ್ರೀ ಗುರುರಾಜ ಮಾರ್ಪಳ್ಳಿ, ಬಿ. ಸೀತಾರಾಮ ಶೆಟ್ಟಿ, ಪ್ರೊ. ಮುರಳೀಧರ ಉಪಾಧ್ಯ ಮತ್ತಿತರರು ತುಳುನಾಟಕಗಳ ವರ್ತಮಾನವನ್ನು ವಿಶ್ಲೇಷಿಸಿದರು. ಮುಂಬಯಿಯಲ್ಲಿ ಸದಾನಂದ ಸುವರ್ಣ, ಸಾಂಸ್ಕೃತಿಕ ವೇದಿಕೆ ಆಶ್ರಯದಲ್ಲಿ 2002ರ ಅಕ್ಟೋಬರ್‌ನಲ್ಲಿ ತುಳುನಾಟಕ ಕಲಾವಿದರ ಸಮಾವೇಶ, ವಿಚಾರಮಂಥನ ಜರಗಿತು. ಶ್ರೀ ಸದಾನಂದ ಸುವರ್ಣ, ಪ್ರೊ. ಸುನೀತಾ ಶೆಟ್ಟಿ, ವಿಜಯಕುಮಾರ್ ಶೆಟ್ಟಿ ಕೆಮ್ಮಣ್ಣು ಶ್ರೀನಾಥ್ ಮೂಲ್ಕಿ, ಈಶ್ವರ ಅಲೆವೂರು ಮುಂತಾದ ವಿದ್ವಾಂಸರು, ರಂಗಕರ್ಮಿಗಳು ಪ್ರಬುದ್ಧ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಅಂದಿನ ಅಧ್ಯಕ್ಷ ಡಾ. ವಾಮನ ನಂದಾವರ ಅವರ ಅಧ್ಯಕ್ಷತೆಯಲ್ಲಿ ಈ ಕಾರ್ಯಕ್ರಮ ಜರಗಿತು.

ಮುಂಬಯಿಯ ಭಗೀರಥ ಶ್ರೀ ಎಚ್.ಬಿ.ಎಲ್. ರಾಯರ ನೇತೃತ್ವದಲ್ಲಿ ಹಲವು ವರ್ಷ ಮುಂಬಯಿಯಲ್ಲಿ ಜರಗಿದ 'ತುಳುಪರ್ಬ' ಸಂದರ್ಭಗಳಲ್ಲೂ ತುಳುನಾಟಕಗಳ ಚಿಂತನ ಮಂಥನ ನಡೆಯಿತು. ಚಂದ್ರಪ್ರಕಾಶ್ ಥಿಯೇಟರ್ಸ್‌ನವರೂ ನಾಟಕ ಗೋಷ್ಠಿಯೊಂದನ್ನು ಏರ್ಪಡಿಸಿದರು.

**2003 – ಮುಂಬಯಿಯಲ್ಲಿ ಸದಾನಂದ ಸುವರ್ಣ ಸಾಂಸ್ಕೃತಿಕ ಪ್ರತಿಷ್ಠಾನ ಆಶ್ರಯದಲ್ಲಿ ಗೋರೆಗಾಂವ್ ಕರ್ನಾಟಕ ಸಂಘದಲ್ಲಿ ಜರಗಿದ ನಾಟಕ ಕಲಾವಿದರ ಸಮಾವೇಶ. ರವಿ ರಾ. ಅಂಚನ್, ಪ್ರಿಯತಮ, ಡಾ. ಸಂಜೀವ ಶೆಟ್ಟಿ, ಮುದ್ದು ಮೂಡುಬೆಳ್ಳೆ, ಡಾ. ಜೆ.ಪಿ. ಕುಸುಮ, ನಂದಳಿಕೆ ನಾರಾಯಣ ಶೆಟ್ಟಿ, ಜಗದೀಶ್ ಶೆಟ್ಟಿ ಕೆಂಚನಕೆರೆ ಮುಂತಾದವರಿದ್ದಾರೆ.**

ತುಳುನಾಡ ಸಂಘ (ರಿ) ಸಾಂಗ್ಲಿ–ಮೀರಜ್ ಇವರು 2003ರಲ್ಲಿ ವಾರ್ಷಿಕ ಹಬ್ಬದ ವೇಳೆ 'ಸದಾನಂದ ಸುವರ್ಣ ದತ್ತಿ ಉಪನ್ಯಾಸ' ಅಂಗವಾಗಿ, ತುಳು ಅಕಾಡೆಮಿ ಸಹಯೋಗದಲ್ಲಿ ತುಳುನಾಟಕಗಳ ಕುರಿತ ವಿಚಾರಗೋಷ್ಠಿಯೊಂದನ್ನು ಏರ್ಪಡಿಸಿದರು. ಖ್ಯಾತ ರಂಗನಿರ್ದೇಶಕ ಜೀವನ್‌ರಾಂ ಸುಳ್ಯ ಹಾಗೂ ಮುದ್ದು ಮೂಡುಬೆಳ್ಳೆ ಉಪನ್ಯಾಸಕರಾಗಿ ಪಾಲ್ಗೊಂಡರು.

ಪುತ್ತೂರಿನ ಬಾಲವನದಲ್ಲಿ ಡಿ.ಕೆ. ಚೌಟರ 'ಪಿಲಿಪತ್ತಿ ಗಡಸ್' ನಾಟಕದ ಕುರಿತ ಸಂವಾದವೊಂದು 2004ರಲ್ಲಿ ಏರ್ಪಟ್ಟಾಗ ನಾಟಕರಂಗದ ಹಳೆಹೊಸ ತಲೆಮಾರಿನ ಅನೇಕರು 2003ರಲ್ಲಿ ತುಳುನಾಟಕ ಕಲಾವಿದರ ಒಕ್ಕೂಟ (ರಿ) ಅಸ್ತಿತ್ವಕ್ಕೆ ಬಂದ ಮೇಲೆ ನಾಟಕದ ಹಿನ್ನೆಲೆ ಮುನ್ನೆಲೆಯ ಕಲಾವಿದರ ಸಮಾವೇಶ, ಸಂಘಟನೆ ಒಂದಿಷ್ಟು ವಿಸ್ತೃತವಾಯಿತೆನ್ನಬಹುದು.

2004ರಲ್ಲಿ ಮಚ್ಚೇಂದ್ರನಾಥ ಪಾಂಡೇಶ್ವರ 70ರ ಸಂದರ್ಭದಲ್ಲಿ ಮಂಗಳೂರು ಕೆನರಾ ಕಾಲೇಜಿನಲ್ಲಿ ನಾಟಕ ಗೋಷ್ಠಿಯೊಂದು ನಡೆಯಿತು. ಡಾ. ಎಂ. ಮೋಹನ ಆಳ್ವ, ಡಾ. ನಾ.ದಾ. ಶೆಟ್ಟಿ, ಐ.ಕೆ. ಬೊಳುವಾರು, ಯು.ಕೆ. ಕುಮಾರನಾಥ್, ಅಚ್ಯುತ ಕಲ್ಲಾಪು, ಚರಣ್ ಕುಮಾರ್ ಮುಂತಾದವರು ಅಭಿಪ್ರಾಯ ಮಂಡಿಸಿದರು. ತಾ. 18.01.2004ರಂದು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಹಾಗೂ ತುಳುನಾಟಕ ಕಲಾವಿದರ ಒಕ್ಕೂಟದ ಆಶ್ರಯದಲ್ಲಿ 'ತುಳು ರಂಗಭೂಮಿ ಕೋಡೆ–ಇನಿ–ಎಲ್ಲೆ' ಎಂಬ ಸಂವಾದ ಕಾರ್ಯಕ್ರಮ ಏರ್ಪಟ್ಟಿತು. ಕೆ.ಎನ್. ಟೇಲರ್, ಡಾ. ಪಿ.ಎಸ್. ದಂಡಕೇರಿ, ಆನಂದ ಗಾಣಿಗ, ಯು.ಆರ್. ಚಂದರ್ ಸೇರಿದಂತೆ ಅವಿಭಜಿತ ದ.ಕ. ಜಿಲ್ಲೆಯ

**ತುಳುನಾಡು ಸಂಘ (ರಿ.) ಸಾಂಗ್ಲಿ–ಮೀರಜ್, 2004 – ತುಳು ರಂಗಭೂಮಿಯ ಕುರಿತಾದ ವಿಚಾರಗೋಷ್ಠಿ. ಪಾಲ್ಗೊಂಡವರು : ಜೀವನ್‌ರಾಂ ಸುಳ್ಯ, ಡಾ. ವಾಮನ ನಂದಾವರ, ಶ್ರೀನಿವಾಸ ಮಂಕುಡೆ, ಮುದ್ದು ಮೂಡುಬೆಳ್ಳೆ ಮತ್ತಿತರರು**

ಹಿರಿಯ ನಾಟಕಕಾರ, ನಿರ್ದೇಶಕರು ಇಲ್ಲಿ ಒಂದೆಡೆ ಕಲೆತು ಸಂವಾದ ನಡೆಸಿದರು. ತಾ. 6.6.2005ರಂದು ತುಳು ಅಕಾಡೆಮಿಯ ಚಾವಡಿಯಲ್ಲಿ ಮಧುಬನ್ ಗ್ರಾಫಿಕ್ಸ್‌ನವರ ಸಹಯೋಗದಲ್ಲಿ ಕುಸೆಲ್ದ ಕಲಾವಿದರ 'ಗಂಗುನ ಗಮ್ಮತ್ತ್' ನಾಟಕ ಕಲಾವಿದರೊಂದಿಗೆ ಸಂವಾದ ನಡೆಯಿತು.

* * *

**2018ರಲ್ಲಿ ತುಳು ಅಕಾಡೆಮಿ ನಾಟಕ ಪರ್ಬ**

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯು ಜನಮನದಲ್ಲಿ ದಾಖಲೆ ಮೂಡಿಸಿ ಹೆಸರಾಗಿ ಸಂದುಹೋದ ಹಿರಿಯ ತಲೆಮಾರಿನ ನಾಟಕಕಾರರನ್ನು ಸ್ಮರಿಸಿಕೊಂಡು ಅವರ ನಾಟಕಗಳನ್ನು ಮತ್ತೆ ಪ್ರದರ್ಶಿಸಬೇಕು ಎನ್ನುವ ಆಶಯದಿಂದ ಮಂಗಳೂರು ಮಹಾನಗರ ಪಾಲಿಕೆಯ ಸಹಭಾಗಿತ್ವದೊಂದಿಗೆ ಮಂಗಳೂರು ಪುರಭವನದಲ್ಲಿ 2018ರ ಮಾರ್ಚ್ 21ರಿಂದ 31ರವರೆಗೆ ತುಳುನಾಟಕ ಪರ್ಬ ನಾಟಕ ಸಪ್ತಾಹವನ್ನು ಏರ್ಪಡಿಸಿತು.

ವಯೋ ಹಿರಿತನ, ತುಳುರಂಗಭೂಮಿಗೆ ನೀಡಿದ ಕೊಡುಗೆಯ ಮಹತ್ತನ್ನು ಪರಿಗಣಿಸಿ ಎಂಟು ಮಂದಿ ಹಿರಿಯರ ಸ್ಮರಣೆ ಮತ್ತು ಅವರ ಆಯ್ದ ನಾಟಕವೊಂದರ ಪ್ರದರ್ಶನದ ಈ ಯೋಜನೆಯಲ್ಲಿ ಹಿರಿಯ ತುಳು ನಾಟಕ ದಿಗ್ಗಜರಾದ ವಿಶುಕುಮಾರ್, ಕೆ.ಎನ್.ಟೇಲರ್, ಯು.ಆರ್. ಚಂದರ್, ಶಾಂತಾರಾಂ ಕಲ್ಲಡ್ಕ, ಮಚ್ಚೇಂದ್ರನಾಥ ಪಾಂಡೇಶ್ವರ, ಕೆ.ಬಿ. ಭಂಡಾರಿ, ಬಿ. ರಾಮ ಕಿರೋಡಿಯನ್, ಉಳ್ಳಾಲ ಮಚ್ಚೇಂದ್ರನಾಥ್ ನಿರ್ದೇಶನದ ಎನ್. ಗೋಪಾಲಕೃಷ್ಣರ ನಾಟಕಗಳನ್ನು ಆಯ್ದುಕೊಳ್ಳಲಾಗಿತ್ತು.

**1. ಕೋಟಿ ಚೆನ್ನಯ :**

ಮೊದಲ ದಿನ ಮಾ, 24 ಶನಿವಾರದಂದು ವಿಶುಕುಮಾರರ 'ಕೋಟಿಚೆನ್ನಯ' ನಾಟಕವನ್ನು ಯುವವಾಹಿನಿ (ರಿ) ಸಂಘಟನೆಯವರು ನರೇಶ್ ಕುಮಾರ್ ಸಸಿಹಿತ್ಲು

ನಿರ್ದೇಶನದಲ್ಲಿ ಪ್ರದರ್ಶಿಸಿದರು. ಸುಮಾರು 50ರಷ್ಟು ಕಲಾವಿದರನ್ನು ಸೇರಿಸಿಕೊಂಡು ಮೂರು ತಾಸುಗಳ ಅವಧಿಯ ನಾಟಕ ಪ್ರದರ್ಶಿಸಿದ್ದು ವಿಶೇಷ ಪ್ರಯತ್ನವಾಗಿತ್ತು. ಇಡಿಯ ನಾಟಕಕ್ಕೆ ಉತ್ತಮ ದೃಶ್ಯ ಸಂಯೋಜನೆಯಿತ್ತು. ತಂಡದಲ್ಲಿ ವೃತ್ತಿಪರ ಕಲಾವಿದರಿಲ್ಲದೆಯೂ ಪ್ರಸ್ತುತಿ ಚೆನ್ನಾಗಿಯೇ ಇತ್ತು.

**2. ಕೋರ್ದಬ್ಬು ತನ್ನಿಮಾನಿಗ**

ಎರಡನೆಯ ದಿನ ಯು.ಆರ್. ಚಂದರ್ ಅವರು ರಚಿಸಿದ 'ಕೋರ್ದಬ್ಬು-ತನ್ನಿಮಾನಿಗ' ನಾಟಕವನ್ನು ದಿನೇಶ್ ಅತ್ತಾವರ ನಿರ್ದೇಶನದಲ್ಲಿ ಪ್ರಸ್ತುತಪಡಿಸಿದವರು ರಂಗಚಲನ ತಂಡ. ಪೂರ್ತಿ ಸಂಭಾಷಣೆಯನ್ನು ಧ್ವನಿಗ್ರಹಣಮಾಡಿಕೊಂಡು ಬಳಸಿದ್ದು ನಾಟಕ ವೇಗವಾಗಿ ಸಾಗಲು ನೆರವಾಯಿತು. ಪ್ರೇಕ್ಷಕರ ಮಧ್ಯದಿಂದ ಸಾಗಿ ಬರುವ ದಿಬ್ಬಣ ಸನ್ನಿವೇಶ ವಿಶೇಷ ಕಳೆನೀಡಿರು. ಇಡೀ ತಂಡದ ಅಭಿನಯ ಚೆನ್ನಾಗಿತ್ತು. ರೆಕಾರ್ಡ್ ಮಾಡಿದ ಧ್ವನಿ ಮತ್ತು ಕಲಾವಿದರ ತುಟಿಚಲನೆ ಕೆಲವೊಮ್ಮೆ ವ್ಯತ್ಯಾಸವಾಗುತ್ತಿದ್ದುದು ಸೂಕ್ಷ್ಮವಾಗಿ ಗಮನಿಸಿದಾಗ ತಿಳಿಯುವಂತಿದ್ದರೂ ದಿನೇಶ್ ಅತ್ತಾವರ ಅಂತಹ ಅನುಭವಿ ಕಲಾವಿದರು ತಂಡದಲ್ಲಿ ಇದ್ದುದರಿಂದ ನಾಟಕದ ಪ್ರಸ್ತುತಿ ಚೆನ್ನಾಗಿಯೇ ಮೂಡಿಬಂತು.

**3. ಕುಂಕುಮ**

ಮೂರನೆಯ ದಿನ ಶಾಂತಾರಾಂ ಕಲ್ಲಡ್ಕ ರಚಿಸಿದ 'ಕುಂಕುಮ' ನಾಟಕವನ್ನು ಅವರ ಪುತ್ರ ಸವ್ಯರಾಜ್ ಕಲ್ಲಡ್ಕ ನಿರ್ದೇಶನ ಮಾಡಿದರು. ತುಳುವಪ್ಪೆ ಜೋಕ್ಲು ಕಲ್ಲಡ್ಕ' ತಂಡ ಈ ನಾಟಕವನ್ನು ಪ್ರಸ್ತುತಪಡಿಸಿತ್ತು. ಹಿರಿಯ ಕಲಾವಿದರ ತಂಡ ಮನೋಜ್ಞವಾಗಿ ಅಭಿನಯಿಸಿ ಗಮನ ಸೆಳೆಯಿತು. ದುರಂತ ಮುಕ್ತಾಯ ಕಾಣುವ ಈ ನಾಟಕವನ್ನು ಈಗಿನ ಹಾಸ್ಯನಾಟಕ ಟ್ರೆಂಡ್‌ಗೆ ಅನುಕೂಲಿಸುವಂತೆ ಬಳಸಿಕೊಂಡದ್ದರಿಂದ ಹಾಸ್ಯಕ್ಕೆ ಅತಿಯಾಗಿ ನೆಚ್ಚಿಕೊಂಡಂತೆ ಕಾಣಿಸಿತು.



ಮದುವೆ ಸಂಬಂಧದ ಸುತ್ತ ಸಾಗುವ ಕತೆಯೇ ಕುಂಕುಮ ನಾಟಕದ ವಸ್ತು ಒತ್ತಾಯದ ನೆಂಟಸ್ತಿಕೆಯನ್ನುನ ನಿರಾಕರಿಸಲಾಗದೆ ಅಡಕತ್ತರಿಯಲ್ಲಿ ಸಿಕ್ಕಿಕೊಳ್ಳುವ ಹೆಣ್ಣು ಕೊನೆಗೆ ಪತಿಯನ್ನು ಕಳೆದುಕೊಂಡು ತನ್ನ ಕುಂಕುಮ ಅಳಿಸುವ ದುರಂತಕತೆಯನ್ನು ತುಳು ಅಪ್ಪೆ ಜೋಕ್ಲು ತಂಡ ಯಶಸ್ವಿಯಾಗಿ ನಿರ್ವಹಿಸಿತು.

**4. ಪೊರ್ತು ಕಂತ್'ಂಡ್**

ನಾಲ್ಕನೆಯ ದಿನ ಮಚ್ಚೇಂದ್ರನಾಥ್ ಪಾಂಡೇಶ್ವರರ 'ಪೊರ್ತು ಕಂತ್'ಂಡ್' ನಾಟಕವನ್ನು ಚಿದಾನಂದ ಅದ್ಯಪಾಡಿ ಹಾಗೂ ರಮೇಶ್ ರೈ ಕುಕ್ಕುವಳ್ಳಿ ನಿರ್ದೇಶನದಲ್ಲಿ

'ವಿಧಾತ್ರಿ ಕಲಾವಿದೆರ್' ತಂಡ ಪ್ರಸ್ತುತಪಡಿಸಿದರು. ಅಂದಿನ ಕಾಲದ ನಾಟಕದಲ್ಲಿ ಬಳಕೆಯಲ್ಲಿದ್ದ ಸ್ವರೂಪದ ಪರದೆಯನ್ನು ಈ ನಾಟಕದಲ್ಲೂ ಅಳವಡಿಸಿಕೊಂಡದ್ದು ಈ ತಂಡದ ಸ್ವಂತಿಕೆಯಾಗಿತ್ತು. ವೃತ್ತಿಪರ ಹಾಗೂ ಹವ್ಯಾಸಿ ಕಲಾವಿದರ ಸಮ್ಮಿಳನದ ತಂಡದಿಂದಾಗಿ ಈ ನಾಟಕ ಯಶಸ್ವಿಯಾಗಿ ಮೂಡಿ ಬರುವಂತಾಯಿತು.

### 5. ತಮ್ಮಲೆ ಅರ್ವತ್ತನ ಕೋಲ

ಐದನೇ ದಿನದ ತುಳುನಾಟಕ ಮತ್ತು ಸಿನೆಮಾರಂಗದ ಅತಿರಥ ಕೆ. ಎನ್. ಟೇಲರ್ ಅವರ 'ತಮ್ಮಲೆ ಅರ್ವತ್ತನ ಕೋಲ'. ನಾಟಕವನ್ನು ಪೆರ್ಡೂರಿನ 'ಕೂಡ್ದಿ ಕಲಾವಿದೆರ್' ಪ್ರಸ್ತುತ ಪಡಿಸಿದರು. ನಿರ್ದೇಶಿಸಿದವರು ರಮೇಶ್ ಆಚಾರ್ಯ ಪೆರ್ಡೂರು. ಅತ್ತ ಪರದೆಯನ್ನೇ ನೆಚ್ಚಿಕೊಳ್ಳದೆ, ಇತ್ತ ಅಬ್ಬರದ ಸೆಟ್ಟಿಂಗ್‌ಗೆ ಶರಣಾಗದೆ ಆಧುನಿಕ ರಂಗ ತಂತ್ರ ಶೈಲಿಯಲ್ಲಿ ರಂಗವನ್ನು ಸಿದ್ಧಪಡಿಸಲಾಗಿತ್ತು. ಅಂದಿನ ಮೂಲ ನಾಟಕ ಪ್ರದರ್ಶನ ಕಂಡವರಿಗೆ ಅಂದಿನ ನಾಟಕ ಎಬ್ಬಿಸುತ್ತಿದ್ದ ಹಾಸ್ಯದ ಅಲೆ ಇವರ ಪ್ರಯೋಗದಲ್ಲಿ ಕಂಡುಬರಲಿಲ್ಲ ಎಂಬ ಅಭಿಪ್ರಾಯದ ನಡುವೆಯೂ ಒಟ್ಟಾರೆ ಕಲಾವಿದರ ನಟನೆ ಚೆನ್ನಾಗಿಯೇ ಇತ್ತು.

ಹಳ್ಳಿಯ ಮುಗ್ಧ ಬದುಕಿನಲ್ಲಿ ಚುನಾವಣೆ ಎಬ್ಬಿಸುವ ಬಿರುಗಾಳಿ, ಓಟಿನ ಸಲುವಾಗಿ ನಡೆಯುವ ತಂತ್ರ ಕುತಂತ್ರದ ಸುತ್ತ ನಾಟಕ ಸಾಗುತ್ತದೆ. ಮಾವ, ಅಳಿಯನ ಜಿದ್ದಾಜಿದ್ದಿನ ನಡುವೆ ಮೂಗು ತೂರಿಸುವ ಸಮಯ ಸಾಧಕರು ಪರಿಸ್ಥಿತಿಯ ಲಾಭ ಪಡೆದುಕೊಳ್ಳುವುದು ಒಂದೆಡೆಯಾದರೆ, ಮಾವನ ಕುತಂತ್ರಕ್ಕೆ ಅಳಿಯ ಮೋಸ ಹೋಗುವುದು ಈ ನಾಟಕದ 'ಕಥಾಹಂದರ' ಹಳೆಯ ಕಾಲದ ಕತೆಯಾದರೂ ಇವತ್ತಿನ ಪರಿಸ್ಥಿತಿಯ ಕೈಗನ್ನಡಿಯೂ ಆದಂತಿತ್ತು.

### 6. ನಾರದೆರೆನ ವಕಾಲತ್ತ್

ಕೆ. ಬಿ. ಭಂಡಾರಿಯವರ ಈ ನಾಟಕವನ್ನು 'ಪರ್ಬದ' ಆರನೆಯ ದಿನ ಪಡೀಲ್‌ನ ಅಮೃತ ಕಾಲೇಜು ವಿದ್ಯಾರ್ಥಿಗಳು ಪ್ರಸ್ತುತಪಡಿಸಿದರು. ಪ್ರಾಂಶುಪಾಲರಾದ ಚಂದ್ರಹಾಸ್

ಕಣ್ವತೀರ್ಥ ಮತ್ತು ಹರೀಶ್ ಶಕ್ತಿನಗರ ಅವರ ನಿರ್ದೇಶನವಿತ್ತು. ಹಳೆಯ ನಾಟಕವನ್ನು ಹೊಸಕಾಲದ ಎಳೆಯ ವಿದ್ಯಾರ್ಥಿಗಳು ತನ್ಮಯತೆಯಿಂದಲೇ ಒಪ್ಪಿಸಿದರು. ತಂಡದ ಬಹುಪಾಲು ಮಕ್ಕಳು ಮೊದಲ ಬಾರಿ ರಂಗವೇರಿ ಬಂದವರು. ಆದರೂ ತುಳುವಿನ ಬಗ್ಗೆ ಅಭಿಮಾನ, ಉತ್ಸಾಹ ಹೊಸ ತಲೆಮಾರಿನಲ್ಲೂ ಅಭಿವ್ಯಕ್ತಿಗೊಳ್ಳಬೇಕೆಂಬ ಆಶಯಕ್ಕೆ ಈ ತಂಡದ ಪಾಲ್ಗೊಳ್ಳುವಿಕೆ ಪೂರಕವಾಗಿತ್ತು. ನಾರದರು ಯಮನ ಆಸ್ಥಾನದಲ್ಲಿ ವಂಚಕ ರಾಜಕಾರಣಿಯ ಕೋರಿಕೆಯಂತೆ ಅವರ ಪರವಾಗಿ ವಕಾಲತ್ತು ಮಂಡಿಸುವುದು, ಪಾಪ ಪುಣ್ಯದ ಲೆಕ್ಕಾಚಾರದಲ್ಲಿ ರಾಜಕಾರಣಿಗೆ ಸೋಲಾಗುವ ಕಥಾವಸ್ತುವಿನ ಈ ನಾಟಕದಲ್ಲಿ ವಿದ್ಯಾರ್ಥಿಗಳ ಪ್ರಯತ್ನ, ಶ್ರಮ ಸ್ತುತ್ಯರ್ಹ. ನಾರದನಾಗಿ ಮನೀಷ್, ಕಾಳ, ಕರಾಳರಾಗಿ ಅಮರನಾಥ್, ಕಾವ್ಯ, ಯಮನಾಗಿ ಕೌಶಿಕ್ ದೃಢವಾದ, ನಿರರ್ಗಳ ಮಾತುಗಾರಿಕೆ, ಹಾವಭಾವಗಳಿಂದ ಸಹಜತೆ ತೋರಿದರೆ ಟೀಚರ್, ಸಾಹೇಬ್, ಗೋವಿಂದರಾವ್ ಮತ್ತಿತರ ಪಾತ್ರಗಳಲ್ಲಿದ್ದ ಶೋನಿತ್‌ರಾಜ್, ದಿವ್ಯ, ದಿಶಾ ಮುಂತಾದ ಸುಮಾರು 16–17 ಮಂದಿ ವಿದ್ಯಾರ್ಥಿಗಳು ಒಪ್ಪವಾದ ಪಾತ್ರ ನಿರ್ವಹಣೆ ಮಾಡಿದರು.

### 7. ಕಾನೂನ್ದ ಕಣ್ಣ್

ನಾಟಕೋತ್ಸವದ ಏಳನೆಯ ದಿನ ರಾಮಕಿರೋಡಿಯನ್‌ರ 'ಕಾನೂನುದ ಕಣ್ಣ್' ನಾಟಕವನ್ನು ಅಭಿನಯಿಸಿದವರು ವಿಜಯ ಕಲಾವಿದರು ಕಿನ್ನಿಗೋಳಿ ನಿರ್ದೇಶಕರು ಶರತ್ ಶೆಟ್ಟಿ, ಅನುಭವಿ ಹವ್ಯಾಸಿ ಕಲಾವಿದರು ಸಮರ್ಥವಾಗಿಯೇ ಈ ನಾಟಕವನ್ನು ರಂಗಕ್ಕೆ ತಂದರು. ತನ್ನಿಗ ಪಾತ್ರಧಾರಿಯ ನಟನೆಯಲ್ಲಿ ಹೆಣ್ಣು ಮಕ್ಕಳನ್ನೂ ನಾಚಿಸುವ ಸಹಜತೆಯಿತ್ತು. ವೃತ್ತಿಪರ ಮತ್ತು ಹವ್ಯಾಸಿ ಎರಡೂ ವರ್ಗದ ಕಲಾವಿದರ ಸಮ್ಮಿಳನ ಇಲ್ಲಿ ಹದನಾದ ಒಪ್ಪವಿರಿಸಿತ್ತು.

8. ಲಚ್ಚು

ಕೊನೆಯ ದಿನ ನೆಕ್ಕಿತಪುಣಿ ಗೋಪಾಲಕೃಷ್ಣ ಅವರು ರಚಿಸಿದ 'ಲಚ್ಚು' ನಾಟಕ ಪ್ರದರ್ಶನ. ಮೂಲ 'ಲಚ್ಚುನ ಕೊರಗೆ ನಾಟಕದಲ್ಲಿ ಯು. ಮಚ್ಚೇಂದ್ರನಾಥರು 400ಕ್ಕೂ ಹೆಚ್ಚಿನ ಪ್ರದರ್ಶನದಲ್ಲಿ ನಿರ್ದೇಶನ ಮತ್ತು ಅಪಾರ ಪ್ರೇಕ್ಷಕರ ಮೆಚ್ಚಿನವರಾದ ಕಾರಣದಿಂದ 'ಮೂಕಪಾತ್ರಧಾರಿ'ಯಾಗಿ ಯು. ಮಚ್ಚೇಂದ್ರನಾಥರದೇ ನಾಟಕವಿದು ಎಂಬುವಷ್ಟರ ಮಟ್ಟಿಗೆ ಈ ನಾಟಕ ಪ್ರಸಿದ್ಧಿ ಪಡೆದಿತ್ತು. ಆ ಇಬ್ಬರು ಆಪ್ತಮಿತ್ರರ ಒಡನಾಟದ ನೆನಪಿಗಾಗಿ ಮೂಲ ನಾಟಕಕರ್ತೃ ನೆಕ್ಕಿತಪುಣಿ ಗೋಪಾಲಕೃಷ್ಣರೂ ಪ್ರದರ್ಶನ ದಿನದ ಸಮಾರಂಭದಲ್ಲಿ ಅತಿಥಿಯಾಗಿ ಉಪಸ್ಥಿತರಿದ್ದು ಮಾತನಾಡಿದರು.

ಮಂಗಳೂರಿನ ಸಂಕೇತ ಕಲಾವಿದರು ಪ್ರದರ್ಶಿಸಿದ ಪ್ರಯೋಗವನ್ನು ಜಗನ್ ಪವಾರ್ ಬೇಕಲ್ ನಿರ್ದೇಶಿಸಿದ್ದರು. ಒಟ್ಟು ಅಭಿನಯ ಚೆನ್ನಾಗಿಯೇ ಮೂಡಿಬಂತು. ನಾಟಕವನ್ನು ಒಂದೂ ಕಾಲು ಗಂಟೆ ಅವಧಿಗೆ ನಿರ್ದೇಶಕರು ಇಳಿಸಿದ್ದರು.

ಈ ನಾಟಕೋತ್ಸವದ ಬಹುತೇಕ ಎಲ್ಲ ನಾಟಕಗಳು ದುರಂತ ಅಂತ್ಯದ ಕತೆಯನ್ನು ಹೊಂದಿದ್ದವು. ಜೊತೆಗೆ ಸಾಮಾಜಿಕ ಕಾಳಜಿ, ಜಾಗೃತಿಯ ಸಂದೇಶವನ್ನು ಮನೋರಂಜನೆಯ ಜೊತೆಗೆ ಮನೋವಿಕಾಸದ ಆಶಯವನ್ನು ಹೊಂದಿದ್ದು ನಾಟಕೋತ್ಸವದ ಆಶಯಕ್ಕೆ ಪೂರಕವಾಗಿದ್ದವು (ಸಮೀಕ್ಷೆ ನೆರವು : ತಾರಾನಾಥ್ ಕಾಪಿಕಾಡ್.)

2018ರ ತುಳುನಾಟಕ ಪರ್ಬಕ್ಕೆ ಪ್ರೇಕ್ಷಕರ ಪ್ರೋತ್ಸಾಹದ ಯಶಸ್ಸಿನಿಂದಾಗಿ 2019ರಲ್ಲೂ ತುಳು ಅಕಾಡೆಮಿ ಮತ್ತು ಮಂಗಳೂರು ಮಹಾನಗರಪಾಲಿಕೆ ಸಹಭಾಗಿತ್ವದಲ್ಲಿ 'ತುಳುನಾಟಕೋತ್ಸವ'ವನ್ನು ನಡೆಸಿತು. ಈ ಬಾರಿ ಹಿರಿಯ ತಲೆಮಾರಿನ ಏಳು ಮಂದಿ ನಾಟಕಕಾರರ ನಾಟಕಗಳನ್ನು ಸಪ್ತಾಹದಲ್ಲಿ ಏಳು ವಿವಿಧ ತಂಡಗಳು ಪ್ರದರ್ಶಿಸಿದವು.

* * *

**ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯು 1994ರಲ್ಲಿ ಪ್ರಾರಂಭಗೊಂಡಲ್ಲಿಂದ ನಾಟಕದ ಸಾಧನಾ ಕ್ಷೇತ್ರದಲ್ಲಿ ವಾರ್ಷಿಕ ಗೌರವ ಪ್ರಶಸ್ತಿ ನೀಡಿದ ನಾಟಕರಂಗದ ಹಿರಿಯರು**

ಬಿ. ರಾಮಕಿರೋಡಿಯನ್, ಕೆ.ಎನ್. ಟೇಲರ್, ಸದಾನಂದ ಸುವರ್ಣ, ಪಿ.ಎಸ್. ರಾವ್, ಮಚ್ಚೇಂದ್ರನಾಥ ಪಾಂಡೇಶ್ವರ, ಡಾ. ಪಿ. ಸಂಜೀವ ದಂಡೆಕೇರಿ, ಶ್ರೀಮತಿ ಜಯಶೀಲ, ವಿ.ಜಿ. ಪಾಲ್, ರಾಮದಾಸ್ ದೇವಾಡಿಗ, ಬಿ.ಎಸ್. ರಾವ್ ಬೋಳೂರು, ಬಿ. ಭೋಜ ಸುವರ್ಣ, ಶಾಂತಾರಾಮ್ ಕಲ್ಲಡ್ಕ, ಜೆ. ಸೀತಾರಾಮ್ ಶೆಟ್ಟಿ, ರೋಹಿದಾಸ್ ಕದ್ರಿ, ಎಮ್.ಕೆ. ಸೀತಾರಾಮ ಕುಲಾಲ್, ಕೆ. ಆನಂದ ಶೆಟ್ಟಿ, ಅಶೋಕನಗರ ಹಾಗೂ ಮನು ಇಡ್ಯಾ ಸುರತ್ಕಲ್.

**ನಾಟಕಕೃತಿ ರಚನೆಗಾಗಿ ಪುಸ್ತಕ ಬಹುಮಾನ ಪಡೆದವರು**

ಕೋಡು ಭೋಜ ಶೆಟ್ಟಿ (ಕಪ್ಪು ನೆತ್ತೆರ್), ಶಾರದಾ ಆರ್. ರಾವ್ (ಬೂದಮ್ಮನ ಬಿರ್ಸಾತಿಗೆ), ಆನಂದಕೃಷ್ಣ (ಪಿಲಿಪತ್ತಿ ಗಡಸ್) ಎ. ಶಿವಾನಂದ ಕರ್ಕೇರ (ಎರುಮೈಂದೆ), ಎಚ್ಕೆ ಕರ್ಕೇರ (ಅನುವಾದ : ಪುರುಷೆ), ಕೆ. ವಿಜಯಕುಮಾರ್ ಶೆಟ್ಟಿ (ಬದಿ) ಜಯಂತಿ ಎಸ್. ಬಂಗೇರ (ಸತ್ಯ ನೆನಪುನಗ), ಶಿಮುಂಜೆ ಪರಾರಿ (ಅನು : ಜೋಕುಲು ಬಾಲೆಲು) ಕದ್ರಿ ನವನೀತ ಶೆಟ್ಟಿ (ಬೀರೆ ದೇವುಪೂಂಜೆ, ಮೈಮೆ) ಯು. ಆರ್. ಚಂದರ್ (ಕೋರ್ದಬ್ಬು ತನ್ನಿಮಾನಿಗ), ಜಗದೀಶ ಶೆಟ್ಟಿ (ಸತ್ಯದ ಸಿರಿ) ನಾಗರಾಜ ಗುರುಪುರ (ತಂಬಿಲ), ಕೇಶವ ಕುಡ್ಲ ಮಾಯೆಯ ಎರಡು ನಾಟಕಗಳು, ರತ್ನಕರರಾವ್ ಕಾವೂರು (ಭೂತಾಳ ಪಾಂಡ್ಯೆ), ಶಿಮಂತೂರು ಚಂದ್ರಹಾಸ ಸುವರ್ಣ (ಗಾಲ) ಶಶಿರಾಜ್ ಕಾವೂರು (ಬರ್ಬರಿಕ).

**ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಪಡೆದವರು**

ಈ ಹಿಂದೆ ಸದಾನಂದ ಸುವರ್ಣ, ಮಚ್ಚೇಂದ್ರನಾಥ ಪಾಂಡೇಶ್ವರ, ಕೆ.ಎನ್. ಟೇಲರ್, ವಿ.ಜಿ. ಪಾಲ್, ಲಕ್ಷ್ಮಣಕುಮಾರ್ ಮಲ್ಲೂರು, ಜೀವನ್‌ರಾಂ ಸುಳ್ಯ ಮುಂತಾದವರು ಈ ಗೌರವಕ್ಕೆ ಪಾತ್ರರಾಗಿರುವರು. 2018ರಲ್ಲಿ ಈ ಪ್ರಶಸ್ತಿ ಪಡೆದ ಪಿ. ಪ್ರಭಾಕರ ಕಲ್ಯಾಣಿ, ಉಷಾ ಭಂಡಾರಿ, ಮೋಹನ್ ಮಾರ್ನಾಡ್ ಈ ಮೂವರೂ ಮೂಲತಃ ತುಳು ರಂಗಕಲಾವಿದರು. ತೊಕ್ಕೊಟ್ಟು ಮೂಲದ ಉಷಾ ಭಂಡಾರಿಯವರು ಬೆಂಗಳೂರು ಸೇರಿದ ಮೇಲೆ ಡಿ.ಕೆ. ಚೌಟರ 'ಪಿಲಿಪತ್ತಿ ಗಡಸ್' ಮುಂತಾದ ನಾಟಕಗಳಲ್ಲಿ ಅಭಿನಯಿಸಿ ಮುಂದೆ ಕಿರುತೆರೆಯಲ್ಲಿ ಪ್ರಸಿದ್ಧರಾದವರು.

* * *

50–60ರ ದಶಕದಲ್ಲಿ ಮಂಗಳೂರಿನ ಹಲವಾರು ಸ್ಥಿತಿವಂತರು ರಂಗಭೂಮಿಗೆ ಆರ್ಥಿಕ ಬೆಂಬಲಿಗರಾಗಿ ಪ್ರೋತ್ಸಾಹಿಸಿದ್ದರು. ಮೋಹಿನಿ ವಿಲಾಸದ ಕಾಮತರು, ಇಂದ್ರಭವನದ ಉಡುಪರು (ಇವರು ಎಂ.ಕೆ. ನಾಟಕ ಸಭಾ ಎಂಬ ಸಂಸ್ಥೆ ನಡೆಸಿದ್ದರು.), ಕೃಷ್ಣಾ ಪೆಟ್ರೋಲ್ ಬಂಕ್‌ನ ಕೃಷ್ಣನಾಯಕ್, ಬಾಲ್ಕೊ ಸ್ಟುಡಿಯೋದ ಎಸ್.ಆರ್. ಬಾಲಗೋಪಾಲ್ (ಇವರು ಪ್ರಸಿದ್ಧ ಹಾಸ್ಯನಟರೂ ಆಗಿದ್ದರು), ಕಾರ್ಕಳದ ಸದಾನಂದ ಕಾಮತರು, ಮಲ್ಪೆ ಮಧ್ವರಾಜರು, ಪಿ.ವಿ.ಎಸ್. ಮಾಲಕರು, ಮೂಲ್ಕಿಯ ಬಿಲ್ಲವ ಸಂಘ, ಮಂಗಳೂರಿನ ದಾಮೋದರ ಆರ್. ಸುವರ್ಣರು, ಮೀನೂಟ ಹೋಟೆಲಿನ ಅಕ್ಕಮಕ್ಕ, ಕೆ. ನಾರಾಯಣ ಶೆಟ್ಟಿ, ಎಲ್ಲೂರು ಉಮೇಶರಾವ್, ಡಾ. ಎಚ್.ಎಲ್. ನಾಗೇಗೌಡ, ಡಾ. ರಿಚಾರ್ಡ್ ಕೆಸ್ತಲಿನೋ, ಡಾ. ನಾಗಪ್ಪ ಆಳ್ವ, ಹಂಪನಕಟ್ಟೆ ನಿತ್ಯಾನಂದ ಗ್ರಂಥಾಲಯದ ದಿ| **ಮಾನ್ಯ ವೆಂಕಟರಾವ್** (ಇವರು 16 ತುಳು ನಾಟಕಗಳನ್ನು ಪ್ರಕಟಿಸಿ ತುಳು ಸೇವೆ ಸಲ್ಲಿಸಿದವರು) ಮುಂತಾದವರು ವಿವಿಧ ರೀತಿಯಲ್ಲಿ ತುಳುರಂಗಕ್ಕೆ ನೆರವಾದವರು.





ಕಲಾಪೋಷಕ, ಕಲಾಭಿಮಾನಿ ಪರಂಪರೆಯ ಧರ್ಮಸ್ಥಳದ **ಶ್ರೀ ವೀರೇಂದ್ರ ಹೆಗ್ಗಡೆಯವರು** ಬಹುತೇಕ ತುಳುನಾಟಕಗಳ ಒಂದು ಪ್ರದರ್ಶನವನ್ನು ಧರ್ಮಸ್ಥಳದ ವಸಂತ ಮಹಲಿನಲ್ಲಿ ನಡೆಯಿಸಿ ಪ್ರೋತ್ಸಾಹಿಸುವುದು ಲಾಗಾಯ್ತಿನಿಂದ ನಡೆದುಬಂದಿದೆ.

ಈಚಿನ ದಶಕಗಳಲ್ಲಿ ಮಂಗಳೂರಿನಲ್ಲಿ ಹುಟ್ಟಿಕೊಂಡ ವಿ.ಜಿ. ಪಾಲ್ ಅವರ 'ರಂಗಸ್ಪಂದನ', ಸುರತ್ಕಲ್ಲಿನಲ್ಲಿ

ಜಗನ್ನಾಥ ಶೆಟ್ಟಿ ಬಾಳ ಇವರ 'ರಂಗ ಚಾವಡಿ', ಕಾವೂರರ 'ರಂಗಸಂಗಾತಿ' ಮುಂತಾದ ಸಂಸ್ಥೆಗಳೂ ಅಲ್ಲದೆ ಮುಖ್ಯವಾಗಿ ತುಳು ನಾಟಕ ಕಲಾವಿದರ ಒಕ್ಕೂಟ (ರಿ.) ಸಂಸ್ಥೆಯು ತುಳುನಾಟಕಗಳ ಪ್ರದರ್ಶನ, ವಿಚಾರ ವಿಮರ್ಶೆಗಳಿಗೆ, ರಂಗಸಂಗೀತಕ್ಕೆ, ಕಲಾವಿದರ ಪ್ರೋತ್ಸಾಹಕ್ಕೆ ತಮ್ಮದೇ ಆದ ಕೊಡುಗೆ ನೀಡುತ್ತಿವೆ.

* * *

## ನಾಟಕ ಅವಲೋಕನ, ವಿಮರ್ಶೆ, ಪತ್ರಿಕೆಗಳು ಇತ್ಯಾದಿ

ತುಳುವಿನ ನಾಟಕ ಚಟುವಟಿಕೆಗಳಿಗೆ ರಚನಾತ್ಮಕ ವಿಮರ್ಶೆಗೆ ಮೀಸಲಾಗಿರುವ ಪ್ರತ್ಯೇಕ ಪತ್ರಿಕೆ ಇಲ್ಲ. ಆದರೆ ಕೆಲವು ಪತ್ರಿಕೆಗಳು ಎಪ್ಪತ್ತರ ದಶಕದಿಂದಲೂ ರಂಗಚಟುವಟಿಕೆಗಳ ವಿವರಗಳನ್ನು ಪ್ರಕಟಿಸುತ್ತಾ ಬಂದಿವೆ. ಎಂಭತ್ತರ ದಶಕದ ಹೊತ್ತಿಗೆ ಆಗ ಮೂಡಬಿದ್ರೆಯಲ್ಲಿದ್ದ ರಂಗಕರ್ಮಿ ಐ.ಕೆ. ಬೊಳುವಾರು 'ಚದುರಂಗ'ದ ಆಶ್ರಯದಲ್ಲಿ ರಂಗಪತ್ರ ಪ್ರಕಟಿಸುತ್ತಿದ್ದರು. ಮುಂದೆ ಮಂಗಳೂರಿನಲ್ಲಿ ಸಂಕೇತ ಕಲಾವಿದರ ರೂವಾರಿ ಜಗನ್‌ಪವಾರ್ ಬೇಕಲ್, 1997–99ರ ನಡುವೆ ರಂಗಭೂಮಿಗಾಗಿಯೇ ಮೀಸಲಾದ 'ಸಂಕೇತ' ಪಾಕ್ಷಿಕ ನಡೆಸಿದರು. ಈಗ ಅವೆರಡು ನಿಂತುಹೋಗಿವೆ.

'ನವಭಾರತ' ದೈನಿಕ 70–80ರ ದಶಕದಲ್ಲಿ ತುಳುನಾಟಕಗಳ ಸಮೀಕ್ಷೆ, ವರದಿಗಳನ್ನು ಪ್ರಕಟಿಸುತ್ತಿತ್ತು. ಈ ದಿಸೆಯಲ್ಲಿ ಉದಯವಾಣಿಯ ಪ್ರೋತ್ಸಾಹವೂ ದೊಡ್ಡದೇ. ನಾಟಕ ಸ್ಪರ್ಧೆಯ ಸಮೀಕ್ಷೆಗಳು, ಪ್ರಯೋಗದ ವಿಮರ್ಶೆ, ಕಲಾವಿದರ ಪರಿಚಯ ಮುಂತಾಗಿ ಪ್ರಕಟಿಸುತ್ತಲೇ ಬಂದಿವೆ. ವಿಜಯ ಕರ್ನಾಟಕ, ವಿಜಯವಾಣಿ, ಕನ್ನಡ ಪ್ರಭ, ಪ್ರಜಾವಾಣಿ, ಹೊಸದಿಗಂತ, ತೂಟೆ (ಈಗಿಲ್ಲ), ಮಂಗಳೂರು ವಾರ್ತೆ (ಮಾಸಿಕ), ತುಳುರಾಜ್ಯ, ತುಳುಬೊಳ್ಳಿ, ಮುಂಗಾರು, ಜನವಾಹಿನಿ ಪತ್ರಿಕೆಗಳು, ಅಂತೆಯೇ ಕರಾವಳಿ ಅಲೆ, ಮಂಗಳೂರು ಮಿತ್ರ, ಜಯ ಕಿರಣ, ಸಂಜೆ ಸುದ್ದಿ, ಕರಾವಳಿ ವಾರ್ತೆ, ಸಂಜೆವಾಣಿ ಮುಂತಾದ ಸಂಜೆ ಪತ್ರಿಕೆಗಳು ಕಾಸರಗೋಡಿನ ಕಾರವಲ್ ಮತ್ತಿತರ ಪತ್ರಿಕೆಗಳು, ತುಳುಸಾಹಿತ್ಯ ಅಕಾಡೆಮಿಯ ತ್ರೈಮಾಸಿಕ ಮದಿಪು, ಉಡಲ್, ಟೈಮ್ಸ್ ಆಫ್ ಕುಡ್ಲ, ಮುಂಬಯಿಯ ಅಕ್ಷಯ, ಮೊಗವೀರ ಮಾಸಿಕಗಳು, ಇವೆಲ್ಲ ತುಳು ನಾಟಕಗಳಿಗೆ ಸಂಬಂಧಿಸಿದ ವರದಿ, ವಿಮರ್ಶೆಗಳನ್ನು ಪ್ರಕಟಿಸಿವೆ. ಸಿಂಚನ, ಬ್ರಹ್ಮಶ್ರೀ ಗುರುವಾಣಿ, ಗೃಹಪತ್ರಿಕೆ ಮುಂತಾದ ಪತ್ರಿಕೆಗಳೂ ಈ ದಿಸೆಯಲ್ಲಿ ತಮ್ಮ ಸೇವೆ ಸಲ್ಲಿಸುತ್ತಲಿವೆ. 'ಈ ಮಾಸ ನಾಟಕ' ಪತ್ರಿಕೆಯು ತುಳುವಿನ ನೂತನ ಕೃತಿ, ಪ್ರಯೋಗಗಳ ಪರಿಚಯವನ್ನೂ ಆರಂಭಿಸಿತ್ತು.

ಮಂಗಳೂರು ಆಕಾಶವಾಣಿಯಂತೆಯೇ, ಬೆಂಗಳೂರು ದೂರದರ್ಶನ ತನ್ನ ಚಂದನವಾಹಿನಿಯಲ್ಲಿ ತುಳು ನಾಟಕ ಪ್ರಸಾರ, ಸಂದರ್ಶನ, ಚರ್ಚೆಗಳನ್ನು ಪ್ರಸಾರ ಮಾಡಿವೆ. ಮಂಗಳೂರಿನ ಸಿ.ಸಿ.ಇಂಡಿಯಾ, ನಮ್ಮ ಕುಡ್ಲ, ನಮ್ಮ ಟಿ.ವಿ. ದಾಯ್ಜಿವರ್ಲ್ಡ್,

ಅಬ್ಬಕ್ಕ ಟಿವಿ, ಉಡುಪಿ ಚಾನಲ್ ಮುಂತಾದ ಸ್ಥಳೀಯ ಚಾನೆಲ್‌ಗಳಲ್ಲೂ ತುಳು ನಾಟಕ ಸಂಬಂಧೀ ಕಾರ್ಯಕ್ರಮಗಳು ಪ್ರಸಾರವಾಗುತ್ತಲೇ ಇವೆ. ಇಷ್ಟಿದ್ದರೂ ತುಳು ರಂಗಭೂಮಿಗೆ ಪೂರ್ಣವಾಗಿ ಮೀಸಲಾಗುವ ಪತ್ರಿಕೆಯೊಂದರ ಅವಶ್ಯಕತೆಯಿದೆ.

ನಮ್ಮ ಜನಪ್ರಿಯವೆನಿಸಿದ ಹಾಸ್ಯ ನಾಟಕಗಳೆಂಬ ಬ್ರಾಂಡ್ ಇರುವ ಒಂದು ವಿಭಾಗದ ನಾಟಕಗಳ ಕುರಿತಂತೆ ಇತ್ತೀಚೆಗೆ ಡಾ. ಧರ್ಮ ಅವರು ಪತ್ರಿಕೆಯೊಂದರಲ್ಲಿ ('ಆತ್ಮಶಕ್ತಿ' – ಆ–ಡಿಂ–2005) ಬರೆದಿರುವ ಲೇಖನದ ಕೆಲವಂಶಗಳನ್ನು ನಾನಿಲ್ಲಿ ಅಗತ್ಯವಾಗಿ ಉಲ್ಲೇಖಾರ್ಹ ಎಂದುಕೊಳ್ಳುತ್ತೇನೆ. "…. ನಮ್ಮವರೇ ಆಗಿರುವ, ನಮ್ಮ ಪರಿಸರದಲ್ಲೇ ಬದುಕುತ್ತಿರುವ ಮತ್ತು ಅವರ ನೆಲೆಯಲ್ಲಿ ಸೃಜನಶೀಲರಾಗಿರುವ ತುಳುನಾಟಕ ಬಂಧುಗಳು ಮಾಡಿರುವ ಸಾಧನೆಗಳು ಮತ್ತು ಅವರ ಅಂತರ್ಗತ ಉದ್ದೇಶಗಳನ್ನು ನಾವೆಲ್ಲ ಈ ಜಿಲ್ಲೆಯಲ್ಲಿ ಸರಿಯಾಗಿ ಗುರುತಿಸಿಲ್ಲ. ಬಹುಷಃ ಕಾರಣಗಳು ಇತ್ತೀಚಿನ ತುಳುನಾಟಕಗಳು ಬ್ರಾಂಡೆಡ್ ಅಲ್ಲ. ಯಾವುದೇ ರಾಷ್ಟ್ರೀಯ ಅಥವಾ ಅಂತರಾಷ್ಟ್ರೀಯ ವೇದಿಕೆಗಳನ್ನು ಪ್ರತಿನಿಧಿಸುವ ಐಡೆಂಟಿಟಿ ಅವುಗಳಿಗಿಲ್ಲ. ಜೊತೆಗೆ ತುಳುಭಾಷೆಯ ಸೀಮಿತ ಅಥವಾ ಪ್ರಾದೇಶಿಕತೆಯು ಒಂದರ್ಥದಲ್ಲಿ ಅದಕ್ಕೆ ಕಾರಣವಾಗಿರಬಹುದು. ವಿವಿಧ ವೇದಿಕೆಗಳಿಗೆ ಅವರು ಪರಿಚಿತರಾಗಿಲ್ಲದಿರಬಹುದು. ಆದರೆ ನಾವು ಯಾರನ್ನು ಸಾರ್ವಜನಿಕರು ಹಾಗೂ ಸಾಮಾನ್ಯ ಜನರು ಅಂತ ಕರೆಯುತ್ತೇವೆಯೋ ಅವರಿಗೆ ಸರಳವಾಗಿ ಸಮಂಜಸವಾಗಿ ತಲುಪಿರುವ ತುಳುನಾಟಕವು ಬೇರೆ ಯಾವುದೇ ಮಾಧ್ಯಮಕ್ಕಿಂತಲೂ ರ್‍ಯಾಂಕ್‌ನಲ್ಲಿ ಪ್ರಥಮ ಸ್ಥಾನದಲ್ಲಿದೆ ಎನ್ನಬಹುದು….

ಬಲೇ ಚಾಪರ್ಕ, ಒರಿಯದರ್ೊರಿ ಅಸಲ್, ವೈವಾಟ್ ವಸಂತೆ, ಅಸಲ್ ಏರ್ ಮತ್ತಿತರ ತುಳು ನಾಟಕಗಳು ಕೇವಲ ಮನರಂಜನೆಯ ಕಾರಣದಿಂದ ರೂಪುಗೊಂಡವುಗಳು ಖಂಡಿತಾ ಅಲ್ಲ. ಅಂತಹ ನಾಟಕಗಳ ಮುಖಾಂತರ ಕೆಲವು ಗಂಭೀರವಾದ ಸಾಮಾಜಿಕ ಬದುಕಿನ ವಿಷಯಗಳನ್ನು ಸರಳವಾಗಿ ನಮಗೆಲ್ಲ ಹೇಳುವ ಕೆಲಸವನ್ನು ನಾಟಕದ ಕುಟುಂಬ ಮಾಡುತ್ತಾ ಬಂದಿದೆ…"

ತುಳು ರಂಗಭೂಮಿಯ ಪ್ರಮುಖ ವೃತ್ತಿಪರರು ಮತ್ತು ಹವ್ಯಾಸಿಗಳ ನಡುವಿನ ವಿಶಾಲ ಅಂತರ ಕರಗುತ್ತಾ, ಈ ಎರಡೂ ವಿಭಾಗಗಳು ತುಳು ಸಂಸ್ಕೃತಿಯ ಉಳಿವು, ಬೆಳವಣಿಗೆಯಲ್ಲಿ ಮಹತ್ತರ ಪಾತ್ರ ವಹಿಸುತ್ತಾ ಮುಂದುವರಿದಿವೆ.

* * *

# ತುಳುರಂಗಭೂಮಿ - ಇಂದಿನ ಸವಾಲುಗಳು

**1. ಗಟ್ಟಿ ನಾಟಕಗಳ ಕೊರತೆ**

ಕಮರ್ಶಿಯಲ್ ತುಳುರಂಗಭೂಮಿಯ ಕಾವು, ಹುರುಪುಒಮ್ಮೆ ಕಡಿಮೆಯಾದಂತೆ ತೋರಿದ್ದರೂ ಈಚೆಗೆ ಸ್ಪರ್ಧಾತ್ಮಕವಾಗಿ ಮತ್ತೆ ಚುರುಕುಗೊಂಡಿದೆ. ಹವ್ಯಾಸಿ ರಂಗಭೂಮಿ ಮಾತ್ರ ಕಳೆದ ದಶಕಗಳ ಹುರುಪನ್ನು ಕಳೆದುಕೊಂಡಿರುವುದು ಗೋಚರವಾಗುತ್ತಿದೆ. ಅಲ್ಲೊಂದು ಇಲ್ಲೊಂದು ಹವ್ಯಾಸಿ ತಂಡಗಳು ಮಾತ್ರ ಅದೇ ನೀನಾಸಂ ತರಬೇತುದಾರರನ್ನು ಆಹ್ವಾನಿಸಿ ಅವರ ನಿರ್ದೇಶನದಲ್ಲಿ ಸಾಮಾನ್ಯವಾಗಿ ಈಗಾಗಲೇ ಯಶಸ್ವಿಯಾಗಿರುವ ಒಂದು ನಾಟಕವನ್ನು ಸಿದ್ಧಗೊಳಿಸಿದ್ದು ಬಿಟ್ಟರೆ ಹೊಸ ಪ್ರಯೋಗಗಳ ಸಂಖ್ಯೆ ಕಡಿಮೆಯಿತ್ತು. ಸದಾನಂದ ಸುವರ್ಣರ (ಹೆಚ್ಚಾಗಿ ಕನ್ನಡ) ರಂಗ ಚಟುವಟಿಕೆಯ ಅವಲೋಕನ, ಉಡುಪಿ ಕೆಮ್ತೂರು ನಾಟಕ ಸ್ಪರ್ಧೆಯ ಉತ್ತೇಜನದಿಂದಾಗಿ ಒಂದಷ್ಟು ಹೊಸ ಅನುವಾದ ನಾಟಕಗಳಷ್ಟೇ ಬರುತ್ತಿವೆ. ಅಮೃತ ಮನು ಇಡ್ಯರ ನಾಟಕಗಳ ಬಳಿಕ ಹಿರಿಯರಾದ ಡಿ. ಕೆ. ಚೌಟ ಪಿಲಿಪತ್ತಿ ಗಡಸ್, ಧರ್ಮೆತ್ತಿ ಮಾಯೆ, ಬಳಿಕ ಮೂಜಿಮುಟ್ಟು ಮೂಜಿಲೋಕಗಳ ಗಂಭೀರ ಪ್ರಯೋಗಗಳ ನಂತರ ಈಚೆಗೆ ಪ್ರಕಟವಾದ ಶಶಿರಾಜ ಕಾವೂರರ 'ಬರ್ಬರೀಕಾ' ಯುವ ರಂಗಕರ್ಮಿ ಶ್ರೀ ವಿದ್ದು ಉಚ್ಚಿಲ್‌ರ ಕೈಯ್ಯಲ್ಲಿ ಪ್ರಾಯೋಗಿಕವಾಗಿ ರಂಗಕ್ಕೆ ಬಂದಿದೆ. ಹಾಗೆಯೇ ಮುಂಬಯಿಯಲ್ಲಿ ಈಚಿನ ವರ್ಷಗಳಲ್ಲಿ ನಡೆಯುತ್ತಿರುವ ತುಳು ನಾಟಕ ಸ್ಪರ್ಧೆಗಳ ಮೂಲಕ ಹೊಸ ನಾಟಕ ಕೃತಿಗಳು ಹೊಸ ಹೊಸ ನಿರ್ದೇಶಕರು, ನೂರಾರು ಹೊಸ ಕಲಾವಿದರು ಮತ್ತು ರಂಗಪ್ರಸ್ತುತಿಯ ಆಧುನಿಕ, ತಾಂತ್ರಿಕ ಆಯಾಮಗಳು ಆಶಾದಾಯಕವಾಗಿವೆ. ಬೆಂಗಳೂರಿನಲ್ಲಿ ತುಳುವರಾದ ಕೃಷ್ಣಮೂರ್ತಿ ಕವತ್ತಾರರ ನಿರ್ದೇಶನದಲ್ಲಿ ಡಿ.ಕೆ. ಚೌಟರ ಶಕ್ತಿಶಾಲಿ ತುಳುನಾಟಕಗಳ ಕನ್ನಡ ರೂಪಾಂತರವನ್ನು ಮತ್ತೆ ಮತ್ತೆ ಹಲವು ಪ್ರದರ್ಶನಗಳಲ್ಲಿ ಯಶಸ್ವಿಯಾಗಿವೆ. ಚೌಟರ 'ಕರಿಯವಜ್ಜೆರೆ ಕತೆಕ್ಲು', 'ಮಿತ್ತಬೈಲ್ ಯಮುನಕ್ಕ' ಕಾದಂಬರಿಯ ರಂಗರೂಪಗಳೂ ಹಲವು ಪ್ರಯೋಗಗಳಲ್ಲಿ ಪ್ರೇಕ್ಷಕರ ಗಮನಸೆಳೆದಿವೆ. ಕರ್ನಾಟಕದ

ನೀನಾಸಂ, ರಂಗಾಯಣಗಳ ಚಟುವಟಿಕೆಗಳು, ಸಾಣೆಹಳ್ಳಿಯಲ್ಲಿ ಪ್ರತಿವರ್ಷ ಜರಗುತ್ತಿರುವ 'ನಾಟಕಜಾತ್ರೆ'ಯ ಸ್ವರೂಪಗಳ ವೀಕ್ಷಣೆ, ಅಧ್ಯಯನ – ತುಳು ರಂಗಭೂಮಿಯಲ್ಲಿ ಪ್ರತಿಫಲಿಸುವಂತಾದರೆ ಹೇಗೆ ಎಂದು ಯೋಚಿಸಬಹುದು. ಅರೆಹೊಳೆ ಪ್ರತಿಷ್ಠಾನವು 2018ರ ಡಿಸೆಂಬರ್ ತಿಂಗಳಲ್ಲಿ ಮಂಗಳೂರು ಡಾನ್‌ಬಾಸ್ಕೋದಲ್ಲಿ ಏರ್ಪಡಿಸಿದ ರಾಜ್ಯ ಮಟ್ಟದ ರಂಗಹಬ್ಬಕ್ಕೆ ಪ್ರೇಕ್ಷಕರ ಪ್ರೋತ್ಸಾಹದ ಕೊರತೆ ಕಾಡಿತು. ಇವೆಲ್ಲ ಅಂಶಗಳು ಸ್ಥಳೀಯ ರಂಗಭೂಮಿಯ ಗಮನಕ್ಕೂ ಪರಿಣಾಮ ಬೀರಬೇಕಾಗಿದೆ.

2. ಗ್ರಾಮಾಂತರದಲ್ಲಿ ರಂಗಮಂದಿರಗಳ ಕೊರತೆಯೂ ಒಂದು ಮುಖ್ಯ ಸಮಸ್ಯೆ.

3. ನಾಟಕೋತ್ಸವಗಳ ಅಪರೂಪ ಸಂದರ್ಭ ಹೊರತುಪಡಿಸಿ ಉಳಿದಂತೆ ಟೀವಿ ಚಾನಲ್‌ಗಳಿಂದಾಗಿ ಪ್ರೇಕ್ಷಕರು ಈಗ ಮನೆಯೊಳಗಿನ ಟಿ.ವಿ. ಪರದೆಯಲ್ಲೇ ಪ್ರಪಂಚ ಕಾಣುವುದು.

4. ಕಮರ್ಶಿಯಲ್ ವೃತ್ತಿಪರ ನಾಟಕಗಳ ವೇಗ ಮತ್ತು ಚಮತ್ಕಾರದ ರಂಜನೆ, ಆ ವಾಚಿಕ – ಸಂಭಾಷಣೆಯ ಬಿಗುವಿಗೆ ದಂಗಾಗಿ 'ಅಯ್ಯೊ ನಾನು ಹೋಗಿ ಸ್ಟೇಜ್‌ನಲ್ಲಿ ಹಾಗೆ ಮಾಡಲು ಆಗ್ಲಿಕ್ಕಿಲ್ಲಪ್ಪಾ' ಎಂದು ಹೊಸ ಕಲಾವಿದರು ಅಥವಾ ಅನುಭವೀ ಹಳಬರೂ ಕೂಡ ಹಿಂಜರಿಯುವುದು.

**5. ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆಯ ಕೊರತೆ :** ಶಾಲಾ ಕಾಲೇಜುಗಳಲ್ಲಿ ವಿ.ವಿ.ಮಟ್ಟದಲ್ಲಿ ಕನ್ನಡ ನಾಟಕ ಪ್ರಯೋಗ ಕೆಲವೊಮ್ಮೆ ನಡೆಯುತ್ತಿದ್ದರೂ ತುಳುನಾಟಕ ಕೈಗೆತ್ತಿಕೊಳ್ಳುವ ಶಿಕ್ಷಕರೂ, ವಿದ್ಯಾರ್ಥಿಗಳೂ ವಿರಳವಾಗುತ್ತಿರುವುದು. ಇದಕ್ಕೆ ಅಪವಾದವೆಂಬಂತೆ ಈಚೆಗೆ 2018ರಲ್ಲಿ ತುಳು ಅಕಾಡೆಮಿ ಏರ್ಪಡಿಸಿದ 'ನಾಟಕ ಪರ್ಬ'ದಲ್ಲಿ ಪಡೀಲಿನ ಅಮೃತ ಕಾಲೇಜಿನ ವಿದ್ಯಾರ್ಥಿಗಳು –ಚಂದ್ರಹಾಸ ಕಣ್ವತೀರ್ಥರ ನಿರ್ದೇಶನದಲ್ಲಿ ಕೆ.ಬಿ. ಭಂಡಾರಿಯವರ 'ನಾರದೆರೆನ ವಕಾಲತ್ತ್' ನಾಟಕವನ್ನು ಚೊಕ್ಕವಾಗಿ ಅಭಿನಯಿಸಿ ಪ್ರಶಂಸೆಗೆ ಪಾತ್ರರಾದರು.

**6. ಕಾಂಟ್ರಾಕ್ಟ್ ನಾಟಕಗಳಲ್ಲೇ ತೃಪ್ತಿಪಟ್ಟುಕೊಳ್ಳುವುದು :** ರಂಗರಂಜನೆ ಬೇಕೆನಿಸಿದವರು ಸಹಾಯಾರ್ಥವಾಗಿ ಕಾಂಟ್ರಾಕ್ಟ್ ನಾಟಕ ಆಡಿಸಿ ಹಗುರಾಗುತ್ತಿದ್ದಾರೆ. ಇದರಿಂದ ಸ್ಥಳೀಯವಾಗಿ ಕಲಾವಿದರು ತರಬೇತುಗೊಂಡು ಸಿದ್ಧಗೊಳ್ಳುವ ಶ್ರಮ ಇಲ್ಲ. ಹಿಂದೆಲ್ಲ ನಾಲ್ಕಾರು ನಾಟಕಗಳಲ್ಲಿ ಪಾತ್ರವಹಿಸಿದ ಕಲಾವಿದರು ಮೂಲ ನಾಟಕದ ಒಂದೆರಡು ಸಂಭಾಷಣೆ ಮಾತ್ರ ನೆನಪಿಟ್ಟುಕೊಂಡು ಉಳಿದೆಲ್ಲವನ್ನು ತಮ್ಮ, ಸ್ವಂತ ಬತ್ತಳಿಕೆಯಿಂದ ಬಳಸುವುದಿತ್ತು ಆದರೆ ಈಗೀಗ ಆ ಬೇಳೆ ಬೇಯುವುದಿಲ್ಲ. ನಿರ್ದೇಶಕನ ಸೂಚನೆಯಂತೆ. ವಾಚಿಕ, ಆಂಗಿಕ ಅಭಿನಯ, ಆಹಾರ್ಯ (ಉಡುಗೆ ತೊಡುಗೆ), ಇರಬೇಕಾಗುತ್ತದೆ. ಈ ಎಲ್ಲ ರಗಳೆಗೆ ಬದ್ಧರಾಗಿ ಬರುವವರ ಬರ ಕಾಡುತ್ತಿದೆ.

ಆದರೆ ಕಳೆದೆರಡು ದಶಕದಿಂದ ಅನೇಕ ಹೊಸ ತುಳು ನಾಟಕ ತಂಡಗಳು ಹುಟ್ಟಿಕೊಂಡು ಅಥವಾ ಹೊಂದಾಣಿಕೆ ಮಾಡಿಕೊಂಡು ಹೊಸ ಪೌರಾಣಿಕ, ಸಾಮಾಜಿಕ ನಾಟಕಗಳ ಪ್ರದರ್ಶನದಲ್ಲಿ ಉತ್ಸಾಹದಿಂದ ತೊಡಗಿಕೊಂಡಿರುವುದು ಆಶಾದಾಯಕವಾಗಿದೆ.

**ಬದಲಾಗುತ್ತಿರುವ ಸಮಾಜವಿನ್ಯಾಸ**

ತುಳುವರ ಸಮಾಜ ಸ್ವರೂಪ ಕಾಲಕಾಲಕ್ಕೆ ಬದಲಾಗುತ್ತ ಸಾಗಿದೆ. ಸ್ವಾತಂತ್ರ್ಯ ಕಾಲ, ಭೂಮಸೂದೆಯ ಜ್ಯಾರಿ ಹಿನ್ನೆಲೆಯ ನಂತರ, ಜಾಗತೀಕರಣ ಪ್ರಭಾವದ ನಂತರ ಸ್ತ್ರೀ ಸಬಲೀಕರಣ ಹೀಗೆ ಕಾಲಕಾಲಕ್ಕೆ ಬದಲಾಗುವ ಸಾಮಾಜಿಕ ಸ್ಥಿತಿಗತಿಗಳು, ರಾಜಕೀಯ ಧೋರಣೆಗಳು, ಮಾರುಕಟ್ಟೆ, ಸಾಮಾಜಿಕ, ಕೌಟುಂಬಿಕ ನೆಲೆಗಳು – ಇವಕ್ಕೆಲ್ಲ ಸಂವಾದಿಯಾಗಿ ರಂಗಕೃತಿಯೊಂದು ಬರಬೇಕಾದರೆ ನಾಟಕಕಾರರ, ಕಲಾವಿದರ, ತಂತ್ರಜ್ಞರ – ಅಧ್ಯಯನಶೀಲ ಪರಿಷ್ಕರಣಗಳು ಗಂಭೀರ ಶ್ರಮವನ್ನು ಬಯಸುತ್ತವೆ.

**ತುಳು ನಾಟಕಗಳ ಪ್ರಕಟಣೆ**

1933ರಲ್ಲಿ ಮಾಧವ ತಿಂಗಳಾಯರ 'ಜನಮರ್ಲ್', 1940ರ ಶಿವಣ್ಣ ಹೆಗ್ಗಡೆಯವರ 'ಏದ್ಯೆದ ತಾದಿ'ಯಿಂದ ಹಿಡಿದು, ಕಳೆದ ಸುಮಾರು 8–9 ದಶಕಗಳಲ್ಲಿ ಮುದ್ರಿತವಾಗಿ ದೊರೆತಿರುವ ತುಳು ನಾಟಕ ಪುಸ್ತಕಗಳು ಸುಮಾರು 200ರಷ್ಟು. ಈಚೆಗೆ ತುಳು ಅಕಾಡೆಮಿ ಮಕ್ಕಳ ನಾಟಕಗಳೂ ಸೇರಿದಂತೆ ಹೊರ ತಂದಿರುವ 3 ಸಂಕಲನಗಳಲ್ಲಿ ಸೇರಿರುವ ಸುಮಾರು 21ರಷ್ಟು ನಾಟಕಗಳು. ಇವಿಷ್ಟರ ಹೊರತು ಉಳಿದ ಸಹಸ್ರಾರು ರಂಗ ನಾಟಕಗಳು ಹಸ್ತ ಪ್ರತಿ ರೂಪದಲ್ಲೇ ಪ್ರದರ್ಶನವಾಗಿವೆ.

**ಸದಾನಂದ ಸುವರ್ಣರ** ತುಳುನಾಟಕ 'ಗುಡ್ಡೆದ ಭೂತ' (ಪ್ರದರ್ಶನ 1972ರಿಂದ, ಪ್ರಕಟಣೆ : 1983) ವಿಭಿನ್ನ ಕುತೂಹಲಕಾರಿ ಅನ್ವೇಷಣಾತ್ಮಕ ತಾರ್ಕಿಕ ಚಿಂತನೆಯ ಸಂಭಾಷಣೆ, ಮಾತು ಮೌನ–ಸನ್ನಿವೇಶ ಚಿತ್ರಣದ ಅರ್ಥಗಾಂಭೀರ್ಯದ ಕಥಾ ಚೌಕಟ್ಟು, ಸುವರ್ಣರ ಸ್ವಂತ ಧ್ವನಿಯ ಡೆನ್ನಾನ ಡೆನ್ನಾನ...' ಪಾಡ್ದನ ಸಾಲಿನ ಮಾಧುರ್ಯದೊಂದಿಗೆ, ನಟರ ಅದ್ಭುತ ನಟನೆಯೊಂದಿಗೆ, ಮಿಗಿಲಾಗಿ ಸುವರ್ಣರ ತಾಂತ್ರಿಕ ಶಿಸ್ತಿನ ನಿರ್ದೇಶನದೊಂದಿಗೆ ಪ್ರೇಕ್ಷಕರನ್ನು ತಟ್ಟಿತು. ವಿನೂತನ ಪರಿಣಾಮ ಬೀರಿತು, ಯಶಸ್ವಿಯಾಯಿತು. ಮುಂಬಯಿ, ಉಡುಪಿ, ಸುರತ್ಕಲ್, ಮಂಗಳೂರು, ಬರೋಡಾ, ಪೂನಾಗಳಲ್ಲಿ ಐದು ವರ್ಷ ಕಾಲ ಪ್ರದರ್ಶನಗೊಂಡು ಜನಮೆಚ್ಚುಗೆ ಪಡೆಯಿತು. ಮುಂದೆ ಇದರ ಕನ್ನಡರೂಪ 'ಗುಡ್ಡೆದಭೂತ' ಬೆಂಗಳೂರು ದೂರದರ್ಶನದಲ್ಲಿ ಧಾರಾವಾಹಿಯಾಗಿ ಹರಿದುಬಂದು ಕರ್ನಾಟಕದಾದ್ಯಂತ ಮನೆಮಾತಾಯಿತು.

1980ರಲ್ಲಿ ಪ್ರಕಟವಾದ ಅಮೃತರ 'ಗೋಂದೋಳು' ತುಳುತನಕ್ಕೆ ನೂತನ ಸಾಕ್ಷಿಯಾದ ರಂಗಕೃತಿ. **ಅಮೃತ ಸೋಮೇಶ್ವರರು** ಪುತ್ತೂರಿನಲ್ಲಿ ಪ್ರಾಧ್ಯಾಪಕರಾಗಿದ್ದ ವೇಳೆ ಏಳು ಗಮನಾರ್ಹ ನಾಟಕಗಳನ್ನು ಬರೆದರು. 'ಗೋಂದೋಳು' ಬರೆಯುವ ಮುನ್ನವೇ 1975ರಲ್ಲಿ ಅವರು 'ತುಳುನಾಡ ಕಲ್ಕುಡೆ' ಬರೆದವರು. ಪುತ್ತೂರಿನ ಕಾಲೇಜು ವಿದ್ಯಾರ್ಥಿಗಳಿಂದ ಪ್ರದರ್ಶನಕ್ಕಾಗಿ ಬರೆದುದು 'ರಾಯರಾವುತೆ' (ಕುಮಾರರಾಮನ ಕತೆಗೆ 'ತುಳುನಾಡಿನ ದುಸ್ಸೈತ' ತೊಡಿಸಿದ ನಾಟಕ). ಇದು ಆಕಾಶವಾಣಿಯಲ್ಲೂ ಪ್ರಸಾರವಾಗಿತ್ತು. 'ಆಟೊಮುಗಿಂಡ್' (ಯಕ್ಷಗಾನ ಕಲಾವಿದನ ಉತ್ಕರ್ಷ, ಅವನತಿಗಳ

ಚಿತ್ರ) ಇದನ್ನು ಅಮೃತರು 1980ರಲ್ಲಿ ಮಂಗಳೂರಿನ 'ಭೂಮಿಕಾ' ತಂಡದ ಪ್ರದರ್ಶನಕ್ಕಾಗಿ ಬರೆದುದು. 1989ರಲ್ಲಿ ಪ್ರಥಮ ಪ್ರಕಟಣೆ.

'ಸತ್ಯನಾಪುರೊತ್ತ ಸಿರಿ' ಮತ್ತು 'ಪೆರಿಂಜೆಗುತ್ತು ದೇವು ಪೂಂಜೆ' ಈ ನಾಟಕಗಳೂ ಆಕಾಶವಾಣಿಯಲ್ಲಿ ಪ್ರಸಾರವಾಗಿ ಅಪಾರ ಶ್ರೋತೃ ಸಮುದಾಯವನ್ನು ತಟ್ಟಿವೆ. ಈ ಏಳೂ ನಾಟಕಗಳು ತುಳುನಾಟಕ ಸಂಪುಟವಾಗಿ 2005ರಲ್ಲಿ ಪ್ರಕೃತಿ ಪ್ರಕಾಶನದಿಂದ ಪ್ರಕಟವಾಗಿವೆ. ಅಮೃತರ ಒಟ್ಟು ನಾಟಕಗಳ ಕುರಿತಂತೆ 1989ರಲ್ಲಿ ಡಾ.ಎಂ. ಪ್ರಭಾಕರ ಜೋಶಿಯವರು 'ಪನಿಯಾರ' ಸಂಚಿಕೆಯಲ್ಲಿ ತಿಳಿಸುವಂತೆ 'ಅಮೃತರ ನಾಟಕಗಳ ಪ್ರಧಾನ ಲಕ್ಷಣವೆಂದರೆ ಕಲಾತ್ಮಕ ಸದಭಿರುಚಿ. ಸನ್ನಿವೇಶ ಚಿತ್ರಣಕ್ಕೆ ತೂಕ, ಗಾಂಭೀರ್ಯ ಬರುವಂತೆ, ಹೇಳಬೇಕಾದುದನ್ನು ಸುಂದರ ಭಾಷೆ, ನುಡಿಕಟ್ಟು, ಗಾದೆಗಳಲ್ಲಿ ಹುದುಗಿಸಿ ಹೇಳುವ ಕ್ರಮ ಅದರ ಸೊಗಸೇ ಪ್ರತ್ಯೇಕ ಭಾಷೆ ಮತ್ತು ಸಂಸ್ಕೃತಿ ಚಿತ್ರಣದಲ್ಲಿ ಅಸಾಧಾರಣ ಪ್ರತಿಭೆ ತೋರುವ ಅಮೃತರ ಸಿದ್ಧಿ, ಸಾಧನೆ, ತುಳುನಾಟಕ ಚರಿತ್ರೆಗೆ ಹೊಳೆಯುವ ಕಿರೀಟವೇ ಹೌದು. (ಈ ಲೇಖಕ ಮಂಗಳೂರು ಆಕಾಶವಾಣಿಯ ಮೂರು ದಶಕಗಳ ಸೇವಾವಧಿಯಲ್ಲಿ ಅಮೃತರ ಎಲ್ಲ ನಾಟಕ, ರೂಪಕಗಳನ್ನು ಬಾನುಲಿಗೆ ಅಳವಡಿಸಿ ನಿರ್ಮಾಣ ಮಾಡಿರುವ ಕೃತಕೃತ್ಯತೆ ಇದೆ.)

ಮನು ಇಡ್ಯರ ಬಲಿ, ತಿರ್ಸಂಕು, ಮಾರಿ ಗಿಡಪುಲೆ, ನನ ಉಚ್ಚಯ ಮುಂತಾದ ನಾಟಕಗಳು ಸಾಮಾಜಿಕ ಚಿಂತನೆ, ತಾರ್ತಿಕತೆಯನ್ನು ಬಡಿದೆಬ್ಬಿಸಿದವು. ಕೆದಂಬಾಡಿಯವರು ಅನುವಾದಿಸಿದ ನಾಟಕಗಳು ಪ್ರಕಟವಾಗಿ ಮನೋವಿಕಾಸ ಭೂಮಿಕೆ ಸಿದ್ಧವಾಯಿತು. ಒಳನಾಡು, ಮುಂಬಯಿಯಂತಹ ಹೊರನಾಡಿನ ವಿರಳ ನೂತನ ಕೃತಿಗಳು ಭರವಸೆ ಹುಟ್ಟಿಸಿದವು. ಆನಂದ ಕೃಷ್ಣರ ಪಿಲಿಪತ್ತಿ ಗಡಸ್(2008), ಧರ್ಮೆತ್ತಿ ಮಾಯೆ(2011), ಮೂಜಿ ಮುಟ್ಟು ಮೂಜಿ ಲೋಕ(2011) ನಾಟಕ ಕೃತಿಗಳು ಹೊಸ ಚಿಂತನಾಕ್ರಮಕ್ಕೆ ನಾಂದಿಯಾದವು. ಅನಂತರ ತುಳುನಾಡಿನ ಮತ್ತು ಮುಂಬೈಯಂತಹ ಹೊರನಾಡಿನಲ್ಲಿ ಅಲ್ಲೊಂದು ಇಲ್ಲೊಂದು ತುಳು ಕೃತಿಗಳು ಹೊರಬಂದಿವೆ.

**ಶಶಿರಾಜ ಕಾವೂರರ ಬರ್ಬರೀಕ (2016) ಹೊಸ ಅಲೆಯ ತುಳುನಾಟಕ**

ಬರ್ಬರೀಕ ಪುರಾಣದ ಒಂದು ಪಾತ್ರ. ಮಹಾಭಾರತದ ಸಂದರ್ಭದಲ್ಲಿ ಭೀಮ – ಹಿಡಿಂಬೆಯರ ಪುತ್ರ ಘಟೋತ್ಕಚ ಇವರ ಮಗನೇ ಬರ್ಬರೀಕ. ಸಕಲ ಮಂತ್ರಸಿದ್ಧಿಗಳನ್ನು ಪಡೆದ ಬರ್ಬರೀಕನ ಪಾತ್ರವನ್ನು ಇಟ್ಟುಕೊಂಡು ಅದನ್ನೊಂದು ಹೊಸ ದೃಷ್ಟಿಕೋನದಿಂದ ನೋಡುವ ಹಾಗೂ ಆಧುನಿಕ ಸಂವೇಧನೆಗಳಿಗೆ ಒಳಗೊಳ್ಳುವ ರೀತಿ ಇಲ್ಲಿ ಪಾತ್ರ ನಿರ್ಮಿಸಿರುವುದು ಇಲ್ಲಿನ ವೈಶಿಷ್ಟ. ಸಾಮಾಜಿಕ ಅನ್ಯಾಯಕ್ಕೆ ಗುರಿಯಾದವರ

ನೋವನ್ನು ದುಃಖ ದುಮ್ಮಾನಗಳನ್ನು ಬಿಚ್ಚಿಡುತ್ತಾ ಹೋಗುವ ನಾಟಕವಿದು. ಇಲ್ಲಿ ಬುದ್ಧಿ ಮತ್ತು ಮನಸ್ಸು ಎಂಬ ಎರಡು ವಿಶಿಷ್ಟ ಪಾತ್ರಗಳ ಮೂಲಕ ಆಧುನಿಕ ಮಾನವನ ಅಂತರಂಗ ತೊಳಲಾಟವನ್ನು ತೆರೆದಿಡುವ ಯತ್ನವಿದೆ. ಹಾಸ್ಯವೂ ಇದೆ. ಶಶಿರಾಜ್ ಮೊದಲು ಕನ್ನಡದಲ್ಲಿ ಬರೆದ ಈ ನಾಟಕ ಮೂಡಬಿದ್ರೆ ಆಳ್ವಾಸ್ ರಂಗ ಅಧ್ಯಯನ ತಂಡದಿಂದ ಹಲವಾರು ಬಾರಿ ಪ್ರಯೋಗವಾಯಿತು. ತುಳು ಅನುವಾದ ಪ್ರಕಟವಾದ ಮೇಲೆ ರಂಗಾಯಣವಿದ್ದು ಉಚ್ಚಿಲ್ 'ಬರ್ಬರೀಕ'ವನ್ನು ಉಚ್ಚಿಲದ ತರುಣಕೂಟಕ್ಕೆ ನಿರ್ದೇಶಿಸಿ ಪ್ರಯೋಗದಲ್ಲಿ ಹೊಸತನ ಮೆರೆದಿದೆ.

2013ರಲ್ಲಿ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಶ್ರೀ ಉಮಾನಾಥ ಎ. ಕೋಟ್ಯಾನರ ಅಧ್ಯಕ್ಷತೆಯ ಅವಧಿಯಲ್ಲಿ ಅಂದಿನ ಸದಸ್ಯರಾದ ದಾಮೋದರ ಬಿ. ಬಂಗೇರ ಹಾಗೂ ಕದ್ರಿ ನವನೀತ ಶೆಟ್ಟರ ಸಂಪಾದಕತ್ವದಲ್ಲಿ 'ತುಳು ರಂಗನಾಟಕೊಲು' ಗೊಂಚಿಲ್-1, ಗೊಂಚಿಲ್-2, ಹೀಗೆ ಎರಡು ನಾಟಕ ಸಂಕಲನಗಳು ಪ್ರಕಟವಾದವು. ಹಳೆಯ ಮತ್ತು ಹೊಸ ತಲೆಮಾರಿನ ನಾಟಕಕಾರರ ಅಪ್ರಕಟಿತ ನಾಟಕಗಳಿವು. ಶಾಂತಾರಾಮ ಕಲ್ಲಡ್ಕ ಅವರ 'ಕುಂಕುಮ' ರಾಜು ಬಿ. ತೋನ್ಸೆಯವರ 'ಜಲಜನ ಮಗಲೆಗ್ ಜಪಾನ್ದ ಕಂಡನಿ', ಉಮಾನಾಥ ಎ. ಕೋಟ್ಯಾನ್ ಅವರ 'ಪಗೆಕ್‌ಪಗೆ' ಬಿ. ರಾಮಕಿರೋಡಿಯನ್‌ರ 'ಕಾನೂನುದ ಕಣ್ಣ್', ಸಂಜೀವ ಅಡ್ಯಾರು ಇವರ 'ನೆತ್ತೆರ್ದ ಕಾನಿಗೆ' – ಇಂತಹ ನಾಟಕಗಳು ಈ ಸಂಕಲನದಲ್ಲಿದ್ದು ಅಂದಿನ ಸಾಮಾಜಿಕ, ಸಾಂಸಾರಿಕ ನಾಟಕ ಬಂಧವನ್ನು ಪರಿಚಯಿಸುವಲ್ಲಿ ಸಫಲವಾಗಿವೆ.

ಡಾ. ಗಣೇಶ್ ಅಮೀನರ 'ಮಾಯದ ಕಾಯಿ', ಕೇಶವ ಕುಡ್ಲರ 'ಮಾಯೆಯ ಮೂರು ನಾಟಕಗಳು' (ಅನುವಾದ) ಹಾಗೂ ಈಚೆಗೆ 2018ರಲ್ಲಿ ಪ್ರಕಟವಾದ ರಘು ಇಡ್ಕಿದು ಅವರ 'ಕಿನ್ಯಗ', 'ಮೋಕೆದ ತಂಗಡಿ', 'ಜೈಲ್' ಹಾಗೂ ಅನುವಾದಿತ 'ಇಲ್ಲ್ ಜತ್ತಿ ಪೊಣ್ಣು' (ಮೂಲ ಕನ್ನಡ ಪೇಜಾವರ ಸದಾಶಿವ ರಾವ್) ಈ ನಾಟಕ ಕೃತಿಗಳು ರಂಗಪ್ರದರ್ಶನ ಪರಿಣಾಮದ ನೂತನ ಸಾಧ್ಯತೆಗಳನ್ನು ಧ್ವನಿಸುತ್ತವೆ.

### ಮಕ್ಕಳ ನಾಟಕಗಳು

ಮಕ್ಕಳ ನಾಟಕಗಳೆಂದರೆ ಒಂದೋ ಮಕ್ಕಳೇ ಬರೆದ ನಾಟಕಗಳು. ಅಥವಾ ಮಕ್ಕಳಿಗಾಗಿ ದೊಡ್ಡವರು ಬರೆದ ನಾಟಕಗಳು. ಮಕ್ಕಳು ಬರೆದವುಗಳು ಪ್ರಕಟವಾದುದು ವಿರಳ. ಆದರೆ ದೊಡ್ಡವರು – ಹೆಚ್ಚಾಗಿ ಶಿಕ್ಷಕರು – ಹೆಣ್ಣುಮಕ್ಕಳಿಗಾಗಿ ಪೌರಾಣಿಕ ನಾಟಕಗಳನ್ನಾಡಿಸುವುದು, ಹುಡುಗರಿಂದ ಸಾಮಾಜಿಕ ನಾಟಕಗಳನ್ನು ಬರೆದು ಆಡಿಸುವುದು ನಡೆದುಬಂದಿದೆ. ಪಣಿಯಾಡಿ ತುಳು ಚಳುವಳಿ ಕಾಲ ಮತ್ತು ಮುಂದೆ ಸ್ವಾತಂತ್ರ್ಯ ಚಳುವಳಿ ಕಾಲದಲ್ಲೂ ಮಕ್ಕಳ ರಂಗಭೂಮಿಯು ಶಿಕ್ಷಕರು, ಶಿಕ್ಷಕ ವಿದ್ಯಾರ್ಥಿಗಳು ಮತ್ತು ದೂಮಪ್ಪ ಮಾಸ್ತರ್, ಕೆಮ್ತೂರು ದೊಡ್ಡಣ್ಣ ಶೆಟ್ಟಿ ಮುಂತಾದವರಿಂದ ವಿವಿಧ ರಂಗರೂಪಗಳಲ್ಲಿ ವಿರಳವಾಗಿ ಸಾಗಿಬಂದಿತ್ತು. ಮೋಹನ ಸೋನಾ, ಮೈಮ್

ರಮೇಶ್, ಪರಿವಾರ ರಂಗ, ಗುರುರಾಜ ಮಾರ್ಪಳ್ಳಿ, ಐ.ಕೆ. ಬೊಳುವಾರು, ಗೋಪಾಡ್ಕರ್ ಮೊದಲಾದವರು ಮಕ್ಕಳ ರಂಗಭೂಮಿಗಾಗಿ ದುಡಿದರು. ಕೆದಂಬಾಡಿಯವರ ಅನುವಾದಗಳಲ್ಲೂ ಕೆಲವು ಮಕ್ಕಳಿಗಾಗಿ ಬರೆದವುಗಳು. ಮುಂದೆ ಎಂ. ವೆಂಕಪ್ಪಯ್ಯ ಕಾರಂತ, ಟಿ.ಜಿ. ಮುಡೂರು, ಯು. ಗೋಪಾಲ ಶೆಟ್ಟಿ, ಕನರಾಡಿ ವಾದಿರಾಜ ಭಟ್, ರಮೇಶ್ ಉಳಯ, ಜಯಂತಿ ಸುವರ್ಣ ಮುಂತಾದವರು ಮಕ್ಕಳಿಗಾಗಿ ನಾಟಕ ಬರೆದರು. ಹೆಸರು ಪ್ರಸಿದ್ಧಿಗೆ ಬಾರದ ಊರೂರಿನ ನೂರಾರು ಶಿಕ್ಷಕರೂ ತಮ್ಮ ತಮ್ಮ ಶಾಲೆಗಳಲ್ಲಿ ಮಕ್ಕಳಿಂದ ನಾಟಕವಾಡಿಸುತ್ತಾ ಬಂದಿದ್ದಾರೆ.

ಇಂದಿನ ಶಿಕ್ಷಣದಲ್ಲಿ ರಂಗಕಲೆಯನ್ನು ಕಲಿಕೆಯ ಒಂದು ಭಾಗವಾಗಿ ಶಿಕ್ಷಣ ಇಲಾಖೆ ಪರಿಗಣಿಸಿದರೂ, ಮಕ್ಕಳಿಗೆ ನಾಟಕ ಕಲಿಸಿಕೊಡುವ ಶಿಕ್ಷಕರು ಕಡಿಮೆ. ಸೂಕ್ತ ನಾಟಕ ಪುಸ್ತಕಗಳ ಕೊರತೆಯೂ ಇದೆ. (ಕೆಲವು ಕಾಲೇಜುಗಳ ಹೊರತಾಗಿ) ಶಿಕ್ಷಣ ಹಿನ್ನೆಲೆಯ ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್ ಅವರು ತುಳು ಅಕಾಡೆಮಿ ಅಧ್ಯಕ್ಷರಾಗಿದ್ದ ವೇಳೆ ಈ ಕೊರತೆ ನೀಗಿಸಲು ಅಕಾಡೆಮಿಯಿಂದ ಮೊದಲ ಬಾರಿ 2011ರಲ್ಲಿ 'ರಂಗೊದ ರಂಗ್ – ಪತ್ತೊಂಜಿ ನಾಟಕೊಲೆದ ಕೋಪೆ' ಪ್ರಕಟಿಸಿದರು. ಸರಪಾಡಿ ಅಶೋಕ ಶೆಟ್ಟಿ ಅವರ ಸಂಪಾದಕತ್ವದ ಈ ಸಂಕಲನದಲ್ಲಿ ಹನ್ನೊಂದು ನಾಟಕಗಳಿವೆ. 1. ಲೀಲಾವತಿ ಬಿ.ಎ. ಅವರ 'ಗದ್ದುಗೆ' 2. ಸರಪಾಡಿ ಅಶೋಕ ಶೆಟ್ಟಿಯವರ 'ಕೃಷಿ ವಿಜಯ', 3. ಭಾಸ್ಕರ ರೈ ಕುಕ್ಕುವಳ್ಳಿ ಅವರ 'ತುಳುವೆರೆ ಬಲಿಯೇಂದ್ರೆ', 4. ತೋನ್ಸೆ ವಿಜಯಕುಮಾರ್ ಶೆಟ್ಟಿ ಅವರ 'ಜೋಕುಲು ದೇವೆರ್', 5. ಪ್ರಶಾಂತ್ ಅನಂತಾಡಿ ಅವರ 'ಜೋಕ್ಲೆ ಜಾತ್ರೆ', 6. ವಾಣಿಸೀತಾರಾಮ ಬರೆದ 'ಒತ್ತೆಮೆಡ್ ಬಲ ಉಂಡು' 7. ರೂಪಾ ಸುಧಾಕರ್ ಅವರ 'ಗೊಬ್ಬು', 8. ವಸಂತಿ ಶೆಟ್ಟಿ ಬ್ರಹ್ಮಾವರ 'ಭೂತಾಳ ಪಾಂಡ್ಯ', 9. ಶಕುಂತಳಾ ಭಟ್‌ರ 'ತುಳುನಾಡ್ದ ತುಡರ್', 10. ನಾರಾಯಣ ಕಂಗಿಲ ಅವರ 'ಮರೊತ ಮರ್ಮರ', ನೆಕ್ಕಿದಮಣಿ ಗೋಪಾಲಕೃಷ್ಣರ 'ಬಲಿದಾನ' ಈ ಹನ್ನೊಂದು ನಾಟಕಗಳು 'ಪೌರಾಣಿಕ', ಸಾಮಾಜಿಕ ಮತ್ತು (ಒಂದು) ಹಕ್ಕಿಗಳ ಕಥಾವಸ್ತು ಹೊಂದಿದ್ದು ಮಕ್ಕಳು ಆಡಿತೋರಿಸಲು ಪ್ರಶಸ್ತವಾದ ನಾಟಕಗಳಾಗಿವೆ.

### ಈಗಲೂ ಅಲ್ಲೊಂದು ಇಲ್ಲೊಂದು ರಂಗ ತರಬೇತಿಗಳು

ಈಚೆಗೆ ರಂಗಾಯಣದ ವಿದ್ದು ಉಚ್ಚಿಲ್ ಮಂಜೇಶ್ವರದಲ್ಲಿ ರಂಗಾಸಕ್ತರಿಗಾಗಿ ನಡೆಸಿದ ರಂಗವಿನ್ಯಾಸ ಧ್ವನಿ, ಬೆಳಕು ಕುರಿತಂತೆ ಕಾರ್ಯಾಗಾರ ನಡೆಸಿಕೊಟ್ಟರು. 2018ರ ಮೇ 4, 5, 6ರಂದು ದಿನೇಶ್ ಅತ್ತಾವರ ಸಂಚಾಲಕತ್ವದ 'ರಂಗಚಲನ ಕುಡ್ಲ' ಹಾಗೂ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಸಹಭಾಗಿತ್ವದಲ್ಲಿ ಉಳ್ಳಾಲದಲ್ಲಿ ಮಕ್ಕಳಿಗಾಗಿ ಮೂರು ದಿನಗಳ ಅವಧಿಯ ಬಾಲರಂಗ ತರಬೇತಿ ಶಿಬಿರವನ್ನುರಂಗಕರ್ಮಿ ದಿನೇಶ್ ಅತ್ತಾವರ ನಡೆಸಿಕೊಟ್ಟರು. ಇಲ್ಲಿ ಪಾಲ್ಗೊಂಡ ಪರಿಸರದ ಮಕ್ಕಳಿಗೆ ಭಾಷೆ, ಸಂಸ್ಕೃತಿ, ಆಂಗಿಕ, ವಾಚಿಕ ಅಭಿನಯ ರಂಗದ ತರಬೇತಿಯ ಬದಲಾಗುತ್ತಿರುವ ಕಾಲಘಟ್ಟದಲ್ಲಿ

ಮಹತ್ವದ್ದಾಗಿತ್ತು. ಮಂಗಳೂರಿನ ಅರೆಹೊಳೆ ಪ್ರತಿಷ್ಠಾನವು 2018ರ ಜೂನ್ ಕೊನೆಯವಾರ ರಂಗನಿರ್ದೇಶಕ ಅವಿನಾಶ್ ರೈ ಅವರ ನಿರ್ದೇಶನದಲ್ಲಿ ಒಂದು ವಾರದ ರಂಗತರಬೇತಿ ಶಿಬಿರ ಆಯೋಜಿಸಿತು. ಪುತ್ತೂರಿನಲ್ಲಿ ಕಲಾಶ್ರಮ ಮಂಗಳೂರು ಹಾಗೂ ನಾಟ್ಯರಂಗ ಪುತ್ತೂರು ಇವರು ಜಂಟಿಯಾಗಿ ಆಯೋಜಿಸಿದ 'ಆ್ಯಕ್ಟ್ –ಇಂಪ್ಯಾಕ್ಟ್ ರಂಗಕಲಿಕೆಯ ಸುತ್ತಮುತ್ತ' ಎಂಬ ಕಾರ್ಯಾಗಾರಕ್ಕೆ ರಂಗನಿರ್ದೇಶಕ ಯತೀಶ್ ಕೊಳ್ಳೆಗಾಲರು ಸಂಪನ್ಮೂಲ ವ್ಯಕ್ತಿಯಾಗಿ ಬಂದಿದ್ದರು. ಈ ಎಲ್ಲವೂ ತುಳುವಿನ ಒಂದಷ್ಟು ಹೊಸ ತಲೆಮಾರಿನ ಎಳೆಯರಲ್ಲಿ ರಂಗಭೂಮಿಯ ಒಲವನ್ನು ನಿರ್ಮಿಸುವ ಆಶಯವನ್ನು ಹೊಂದಿದ್ದು, ಫಲಿತಾಂಶ ಮುಂದೆ ನಿರೀಕ್ಷಿಸಬಹುದು.

* * *

ಹೀಗೆ ಎಂಭತ್ತರ ದಶಕಾರಂಭದಲ್ಲಿ ಮುಂಬಯಿಯಿಂದ ಸದಾನಂದ ಸುವರ್ಣರು 'ಗುಡ್ಡೆದ ಭೂತ'ದ ಮೂಲಕ ಹೊಳೆಯಿಸಿದ ಹೊಸ ಚಿಂತನೆ ಸುರತ್ಕಲ್‌ನ ಮನು ಇಡ್ಯರು 'ಸಿಂಗಾರ ತಂಡ'ದ ಮೂಲಕ ಬಡಿದೆಬ್ಬಿಸಿದ ನವ್ಯ ಧ್ವನಿಯಾದ, ಬಲಿ, ತ್ರಿಶಂಕುಗಳ ಕ್ರಾಂತಿ ಕಥಾವಸ್ತುಗಳು, ಆ ನಡುವೆ ಕೆದಂಬಾಡಿಯವರಿಂದ ಅನುವಾದಿತ 'ಕಾಬೂಲಿವಾಲೆ', 'ಪಡಿಲ್ ಪಂಪೆ', 'ಬೆರಳ್‌ಗೆ ಕೊರಳ್' ಇತ್ಯಾದಿ ನಾಟಕಗಳು. 'ಭೂಮಿಕಾ'ದ 'ಚಕ್ರವ್ಯೂಹ'ದ ಸಂಕೀರ್ಣ ಕಥಾಹಂದರ, ಅಮೃತ ಸೋಮೇಶ್ವರರ ಸಶಕ್ತ ತುಳು ತೊಡುಗೆಯ 'ಜೋಕುಮಾರಸ್ವಾಮಿ', ತುಳು ಜಾನಪ ಸಿರಿಯನ್ನೊಳಗೊಂಡು ಯಶಸ್ಸಿ ಪಡೆದ 'ಗೋಂದೋಳು' ಜತೆಗೆ ಅವರದೇ ರಾಯರಾವುತೆ, ಕಲ್ಕುಡೆ ಮುಂತಾದ ರಂಗಕೃತಿಗಳು ಕುದ್ಕಾಡಿಯವರ ಗಟ್ಟಿ ಕೃತಿಗಳು. ಸಮುದಾಯ, ಭೂಮಿಕಾ, ಅಭಿವ್ಯಕ್ತ ಆಯನದ ಹವ್ಯಾಸಿ, ಚಳುವಳಿಗಳು ಅಲೋಶಿಯಸ್ ರಂಗದಲ್ಲಿ ಎದ್ದ 'ಕೊಂಬುದ ಮಾನಿಲು' ಇತ್ಯಾದಿ ಅಲೆಗಳು ಬಳಿಕಬಂದ ಡಿಕೆ ಚೌಟರ ಪಿಲಿಪತ್ತಿ ಗಡಸ್‌ನಂತಹ ಗಟ್ಟಿ ವಸ್ತುವಿನ್ಯಾಸದ ನಾಟಕಗಳು, ಕನ್ನಡ, ಮಲಯಾಳಂ, ಮರಾಠೀ ಬಂಗಾಲಿ ನಾಟಕಗಳ ಅನುವಾದಗಳು, ನೀನಾಸಂ ಸಂಚಾರಿ ನಾಟಕಗಳು ಹೊಸ ಅಲೆಯ ಚಲನಚಿತ್ರಗಳ ಕಲಾತ್ಮಕತೆಯ ದರ್ಶನದ ಪ್ರಭಾವಗಳು, ಅವಿಭಜಿತ ಜಿಲ್ಲೆಯ ಅಲ್ಲಲ್ಲಿ ನಡೆಯತೊಡಗಿದವು. ತುಳುನಾಟಕ ಸ್ಪರ್ಧೆಗಳು, ಉತ್ಸವ ವಿಚಾರಗೋಷ್ಠಿಗಳು, 1977ರಿಂದ ನಡೆಯತೊಡಗಿದ ಕುಡ್ಲ ತುಳುಕೂಟದ 'ರತ್ನವರ್ಮ ಹೆಗಡೆ ತುಳುನಾಟಕ ಹಸ್ತಪ್ರತಿ' ಸ್ಪರ್ಧೆಗಳು ಮತ್ತು ಬಹಳ ಮುಖ್ಯವಾಗಿ 2002ರಿಂದ ಉಡುಪಿ ತುಳುಕೂಟದ ಆಶ್ರಯದಲ್ಲಿ ಆರಂಭಗೊಂಡ **'ಕೆಮ್ತೂರು ನಾಟಕ ಸ್ಪರ್ಧೆ'**ಯಿಂದಾಗಿ ವರ್ಷ ವರ್ಷ ನಾಟಕಕಾರರು ತೆರೆದ ಕಣ್ಣಿಂದ ಗಮನಿಸಬೇಕಾದ ಸಂದರ್ಭ ಮತ್ತು ಸಾಧನೆಗಳ ಅವಕಾಶಗಳು. ತುಳುನಾಟಕಗಳಲ್ಲಿ ಆಧುನಿಕ ಚಿಂತನೆಗೆ ಬೌದ್ಧಿಕ ಸ್ತರವನ್ನು ಎತ್ತರಿಸಬೇಕಾದ ಸಾಮಾಜಿಕ ಹೊಣೆಗಳಿಗೆ ಸ್ಪಂದಿಸಿ ಬೆಳೆದಿವೆ. ಈಚಿನ ವರ್ಷಗಳಲ್ಲಿ ಕೆಮ್ತೂರು ತುಳುನಾಟಕ ಸ್ಪರ್ಧೆಯಲ್ಲಿ ವಿವಿಧ ಆಯ್ದ ತಂಡಗಳ ಪ್ರಯೋಗಗಳು ತಾಂತ್ರಿಕವಾಗಿ ಉನ್ನತ ಸ್ತರಕ್ಕೆ

ತುಳು ರಂಗಭೂಮಿ ತಲುಪುತ್ತಿರುವುದನ್ನು ದಾಖಲಿಸುತ್ತಿವೆ. ಅನುವಾದ ನಾಟಕಗಳಂತೆಯೇ ಹೆಚ್ಚು ಮೂಲ ತುಳುನಾಟಕ ಕೃತಿಗಳು ಬರಬೇಕಾಗಿದೆ.ಇನ್ನೊಂದೆಡೆ ಮನೋರಂಜನಾ ಪ್ರಧಾನ ನಾಟಕಗಳಿಗೂ ಇರುವ ವಿಫುಲ ಅವಕಾಶವನ್ನು ಅರಿತುಕೊಂಡ ನೂರಾರು ವೃತ್ತಿಪರರು ಹತ್ತಾರು ನಾಟಕ ತಂಡಗಳನ್ನು ಸಂಘಟಿಸಿ ಬಿರುಸಿನ ನಿರಂತರ ರಂಗಪ್ರದರ್ಶನ, ರಂಗಸಂಚಾರಗಳನ್ನು ನೀಡುತ್ತಾ ಕಲಾಸೇವೆಯ ಮೂಲಕ ಇದೊಂದು ಉದ್ಯಮವೂ ಹೌದು ಎನಿಸುವಷ್ಟು ಸಾವಿರಾರು ಕಲಾವಿದರಿಗೆ ಖಾಯಂ ಉದ್ಯೋಗ ಒದಗಿಸುತ್ತಿರುವ ಶ್ಲಾಘನೀಯ ಸೇವೆ – ಹೀಗೆ ನಾಟಕ ಪರಂಪರೆಯು ಹೊಸ ಹೊಸ ನಾಟಕಗಳ ರಚನೆ, ನಿರಂತರ ರಂಗ ಪ್ರಯೋಗಗಳ ಮೂಲಕ ತುಳು ಭಾಷೆ, ಸಂಸ್ಕೃತಿಗೂ ಮಹತ್ತರ ಕೊಡುಗೆ ನೀಡುತ್ತಿದೆಯೆಂದರೆ ಅತಿಶಯೋಕ್ತಿಯಲ್ಲ.

**ಇತರ ಭಾಷೆಗಳ ಮತ್ತು ಹೊರನಾಡಿನ ರಂಗಪ್ರಗತಿಯನ್ನು ಗಮನಿಸಿಕೊಂಡು, ಒಳ್ಳೆಯ ನಾಟಕ ಕೃತಿ ಒದಗಿದಾಗ, ಹೊಸ ಹೊಸ ಕಲಾವಿದರನ್ನು ತರಬೇತುಗೊಳಿಸಬಲ್ಲ, ಸಮರ್ಥ ನಿರ್ದೇಶಕರು ಮುಂಬಯಿ, ಉಡುಪಿ ಭಾಗದಲ್ಲಿರುವ ಕೆಲವರಂತೆ ಮುಂದೆ ಬಂದಾಗ ಹವ್ಯಾಸಿ ಮತ್ತು ವೃತ್ತಿಪರ ಎರಡೂ ವಿಭಾಗಗಳ ತುಳು ರಂಗಭೂಮಿ ಬಾಳುತ್ತದೆ. ಸಂಘಟಕರು, ಪ್ರೇಕ್ಷಕರು ನೀಡಬಹುದಾದ ಪ್ರೋತ್ಸಾಹದಿಂದ ತುಳುನಾಟಕ ರಂಗ ಮತ್ತಷ್ಟು ಎತ್ತರಕ್ಕೆ ಏರುತ್ತದೆ.**

* * *

(2003ರಲ್ಲಿ ತುಳು ರಂಗಭೂಮಿ ಸಂಕ್ಷಿಪ್ತ ಕೃತಿ ಪ್ರಕಟಣೆ ಸಿದ್ಧತೆಯ ಸಂದರ್ಭದಲ್ಲಿ ತುಳು ನಾಟಕ ಕಲಾವಿದರ ಒಕ್ಕೂಟದ ಸ್ಥಾಪಕ ಅಧ್ಯಕ್ಷರಾಗಿದ್ದ ದಿ। ಮಚ್ಚೇಂದ್ರನಾಥ ಪಾಂಡೇಶ್ವರ ಅವರ ನುಡಿಗಳು)

## ಸವಿನುಡಿ

ದ್ರಾವಿಡ ಕುಲದಲ್ಲಿ 23 ಭಾಷೆಗಳಿವೆ. ಈ 23 ಭಾಷೆಗಳಲ್ಲಿ 4 ಭಾಷೆಗಳು ಅಂದರೆ, ತೆಲುಗು, ತಮಿಳು, ಕನ್ನಡ ಮತ್ತು ಮಲೆಯಾಳ ಭಾಷೆಗಳು ಮಾತ್ರ ಪ್ರಮುಖ ಭಾಷೆಗಳಾಗಿ ಗತ 2000 ವರ್ಷಗಳಿಂದ ಅಭಿವೃದ್ಧಿಗೊಳ್ಳುತ್ತಾ ಬಂದುವು. ದ್ರಾವಿಡ ಭಾಷೆಗಳಲ್ಲಿ ಒಂದಾದ ತುಳು ಭಾಷೆಯು ಅದೇಕೋ ಮೂಲೆಗುಂಪಾಗಿ, ಆಡುನುಡಿಯಾಗಿ ಉಳಿದುಹೋಯಿತು. ಸಮೃದ್ಧ ಸಂಪದ್ಭರಿತ ತುಳುಭಾಷೆಯ ಅಭಿವೃದ್ಧಿಯ ಬಗ್ಗೆ ಕಾಳಜಿ ವಹಿಸಿಕೊಂಡು ಇದೀಗ ಅನೇಕ ವಿದ್ವಾಂಸರು ಮಾಡುತ್ತಿರುವ ಪ್ರಯತ್ನಗಳು ಶ್ಲಾಘನೀಯ. ಈ ನಿಟ್ಟಿನಲ್ಲಿ ಶ್ರೀ ಮುದ್ದುಮೂಡುಬೆಳ್ಳೆಯವರು ಒಬ್ಬರು.

ಶ್ರೀ ಮುದ್ದುಮೂಡುಬೆಳ್ಳೆಯವರು, ಮಂಗಳೂರು ಆಕಾಶವಾಣಿ ನಿಲಯದಲ್ಲಿ ಹಿರಿಯ ಉದ್ಘೋಷಕರಾಗಿ ಪ್ರಸ್ತುತ ದುಡಿಯುತ್ತಿದ್ದಾರೆ. ತುಳು ಭಾಷೆ, ಸಂಸ್ಕೃತಿ, ಪರಂಪರೆ ಹಾಗೂ ತುಳು ರಂಗಭೂಮಿ – ನಾಟಕಗಳ ಬಗ್ಗೆ, ಅವರ ಬಾಲ್ಯದಿಂದ ಅದೆಷ್ಟು ಆಸಕ್ತಿ, ಜಿಜ್ಞಾಸೆ ಇದೆ ಎಂಬುದಕ್ಕೆ, ಶ್ರೀಯುತರ ಈ ತುಳು ರಂಗಭೂಮಿ (ಒಂದು ಅವಲೋಕನ) ಅಧ್ಯಯನ ಜೀವಂತ ಸಾಕ್ಷಿಯಾಗಿದೆ. ತುಳುನಾಟಕ ಬೆಳೆದು ಬಂದ ದಾರಿಯ ಬಗ್ಗೆ ಸಮೀಕ್ಷೆಯ ನೆಲೆಯಲ್ಲಿ ಇದು ಪ್ರಪ್ರಥಮ ಕೃತಿ. ಈ ಪುಸ್ತಕದಲ್ಲಿ ನಿರೂಪಿಸಲ್ಪಟ್ಟಿರುವ, ಶೇಖರಿಸಿರುವ ವಿಷಯ – ಮಾಹಿತಿಗಳು ಅತ್ಯಂತ ಗಮನೀಯವಾದವುಗಳು ಮತ್ತು ಅಮೂಲ್ಯವಾದವುಗಳು. ಶ್ರೀಯುತರು ಅದೆಷ್ಟು ಶ್ರದ್ಧೆ – ನಿಷ್ಠೆ, ಹುಮ್ಮಸ್ಸು, ಉತ್ಸಾಹ ಹಾಗೂ ಶ್ರಮದಿಂದ ಈ ಅಮೂಲ್ಯವಾದ ಭಂಡಾರವನ್ನು ಸಂಗ್ರಹಿಸಿದ್ದಾರೆ ಎಂಬುದು ಇದನ್ನು ಓದಿದಾಗ ಮನದಟ್ಟಾಗಬಹುದು.

1892ನೇ ಇಸವಿಯಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಕನ್ನಡ ನಾಟಕಗಳ ಚಟುವಟಿಕೆ ಆರಂಭವಾದಂದಿನಿಂದ, 1933ನೇ ಇಸವಿಯಲ್ಲಿ ದಿ. ಶ್ರೀ ಮಾಧವ ತಿಂಗಳಾಯರ 'ಜನಮರ್ಲ್' ನಾಟಕದ ಯುಗದಿಂದ, ದಿ. ಶ್ರೀ ಪಣಿಯಾಡಿ ಶ್ರೀನಿವಾಸ ಉಪಾಧ್ಯಾಯ, ದಿ. ಶ್ರೀ ಪಡುಬಿದ್ರಿ ಶಿವಣ್ಣ ಹೆಗ್ಡೆ ಹಾಗೂ ದಿ. ಶ್ರೀ ಸತ್ಯಮಿತ್ರ ಬಂಗೇರ, ಇವರು ತುಳುನಾಟಕ ರಂಗಭೂಮಿಯ ಏಳಿಗೆಗಾಗಿ ಪಟ್ಟ ಶ್ರಮ – ಗೈದ ತ್ಯಾಗದಿಂದ ಮೊದಲಾಗಿ ಪ್ರಸ್ತುತ ತುಳು ರಂಗಭೂಮಿಯ ಬೆಳವಣಿಗೆಯವರೆಗೆ ಶ್ರೀ ಮುದ್ದು ಮೂಡುಬೆಳ್ಳೆಯವರು ಈ ಪುಸ್ತಕದಲ್ಲಿ ಬೆಳಕು ಬೀರಿದ್ದಾರೆ.

ತುಳು ರಂಗಭೂಮಿಯ ಬೆಳವಣಿಗೆ ತಾದಾತ್ಮ್ಯಕವಾಗಿ ಚಾಲನೆ ನೀಡಿದವರು ದಿ. ಶ್ರೀ ಕೆಮ್ತೂರು ದೊಡ್ಡಣ್ಣ ಶೆಟ್ಟಿಯವರು. ಅಂದಿನಿಂದ, ತುಳುನಾಟಕ ರಂಗಭೂಮಿಗೆ,

ಅದರ ಬೆಳವಣಿಗೆಗೆ ಒಂದುವಿಶೇಷ ಮಜಲು ದೊರೆತಂತಾಗಿ, ತುಳು ನಾಟಕಗಳ ಮೂಲಕ, ತುಳು ಭಾಷೆಯ ಪ್ರಚಾರ ಈ ಮಾಧ್ಯಮದ ಮೂಲಕ ಸಾಗಿಬಂತು. ಬೆಳವಣಿಗೆಯ ಬಗ್ಗೆ ಶ್ರಮಿಸಿದ ನಾಟಕ ಸಂಸ್ಥೆಗಳ ಬಗ್ಗೆ ನಾಟಕಕರ್ತರ, ರಂಗಭೂಮಿಯ ಹಿನ್ನೆಲೆ-ಮುನ್ನೆಲೆಯ ರಂಗಕರ್ಮಿಗಳ ಬಗ್ಗೆ ಸವಿವರವಾದ ಮಾಹಿತಿಗಳನ್ನು ಶ್ರೀಮುದ್ದುಮೂಡುಬೆಳ್ಳೆಯವರು ಈ ಅವಲೋಕನದಲ್ಲಿ ದಾಖಲಿಸಿದ್ದಾರೆ.

ಈ ಅವಲೋಕನದಲ್ಲಿರುವ ವಿಷಯಗಳು -ಮಾಹಿತಿಗಳು ಅತೀ ಅಮೂಲ್ಯವಾದವುಗಳು. ಈ ಒಂದು ಸವಿಸ್ತಾರವಾದ ಅಧ್ಯಯನವನ್ನು ಗೈದು, ಈ ಉಪಯುಕ್ತವಾದ 'ಆಕರಗ್ರಂಥ'ವನ್ನು ಸಂಕ್ಷಿಪ್ತವಾಗಿ ರಚಿಸಿರುವ ಶ್ರೀ ಮುದ್ದು ಮೂಡುಬೆಳ್ಳೆಯವರು ತುಳುನಾಟಕ ಕ್ಷೇತ್ರಕ್ಕೆ ಹಾಗೂ ತುಳು ಸಾಹಿತ್ಯ ಪ್ರಪಂಚಕ್ಕೆ ತನ್ನ ಶ್ರೀಮಂತ ಸೇವೆಯನ್ನು ಸಲ್ಲಿಸಿದ್ದಾರೆ. ಶ್ರೀ ಮುದ್ದು ಮೂಡುಬೆಳ್ಳೆಯವರ ಈ ಅಧ್ಯಯನವು ಶ್ಲಾಘನೀಯ. ಈ ಪ್ರಾಮಾಣಿಕ ಪ್ರಯತ್ನಕ್ಕೆ ಅವರು ಅಭಿನಂದನೀಯರು. ಶ್ರೀಯುತರಿಂದ ತುಳು ಭಾಷೆ-ನಾಡು-ನುಡಿ ರಂಗಭೂಮಿಯ ಅಧ್ಯಯನದ ಬಗ್ಗೆ ಇನ್ನೂ ಹಲವಾರು ಕೃತಿಗಳು ಮೂಡಿಬರಲಿ ಎಂದು ಹಾರೈಸುತ್ತೇನೆ.

**ಮಚ್ಚೇಂದ್ರನಾಥ್ ಪಾಂಡೇಶ್ವರ**
ಸ್ಥಾಪಕ ಅದ್ಯಕ್ಷರು, ನಾಟಕ ಕಲಾವಿದರ ಒಕ್ಕೂಟ (ರಿ.)
ಮಂಗಳೂರು

ಬರೆದ ದಿನಾಂಕ : 21-03-2003

## ಅಭಿಪ್ರಾಯಗಳು

1. 2003ರಲ್ಲಿ 'ನಾಡುನುಡಿಯಿದೊಂದು ಬಗೆ' ಕೃತಿಗೆ ಮುನ್ನುಡಿ ಬರೆದಿದ್ದ ಪ್ರೊ. ಬಿ. ಎ. ವಿವೇಕ ರೈಯವರು ಅದರ ತುಳು ರಂಗಭೂಮಿ ಲೇಖನ ಭಾಗದ ಕುರಿತು ಬರೆದ ಸಾಲುಗಳು :

'....ತುಳು ನಾಟಕ ರಂಗ' ಎನ್ನುವ ಲೇಖನ ತನ್ನ ಮಾಹಿತಿ ಬಾಹುಳ್ಯ, ಅಧ್ಯಯನಶೀಲತೆ, ಸಂಶೋಧಕ ದೃಷ್ಟಿ – ಈ ಎಲ್ಲ ನೋಟಗಳಿಂದಲೂ ಈ ಸಂಕಲನದಲ್ಲಿಯೇ ಬಹಳ ಮುಖ್ಯವಾದುದು...".

## 2005ರಲ್ಲಿ 'ತುಳು ರಂಗಭೂಮಿ' ಪ್ರಕಟವಾದಾಗ

ಪ್ರಿಯ ಮುದ್ದುಮೂಡುಬೆಳ್ಳೆ ಅವರಿಗೆ ವಂದನೆಗಳು.

ತುಳು ರಂಗಭೂಮಿಯ ಸುದೀರ್ಘ ಚರಿತ್ರೆಯನ್ನು ದಾಖಲು ಮಾಡಿದ ಈ ಗ್ರಂಥ ಕನ್ನಡದ ಅತ್ಯಂತ ಪ್ರಮುಖ ಗ್ರಂಥ. ರಂಗಭೂಮಿಗೆ ಆಕರ ಗ್ರಂಥ. ಸ್ವಾತಂತ್ರ್ಯಪೂರ್ವದಿಂದ ಇಲ್ಲಿಯವರೆಗೂ ನಿಮ್ಮ ದಾಖಲೆಯ ಕ್ರಮಗಳಲ್ಲಿ ಸಂಶೋಧನಾ ವಿದ್ಯಾರ್ಥಿಗಳಿಗಿಂತಲೂ ಹೆಚ್ಚಿನ ಶ್ರದ್ಧೆಯನ್ನೇ ನೋಡುತ್ತೇವೆ.

ಇದರ ಜೊತೆಯಲ್ಲಿ ಫೋಟೋಗಳನ್ನು ಬಳಸಿದ್ದು ಅದ್ಭುತವಾಗಿದೆ. ಆದರೆ ಫೋಟೋಗಳನ್ನು ಇನ್ನೂ ಚೆನ್ನಾಗಿ ಮುದ್ರಿಸಬೇಕಾಗಿತ್ತು. ಬೇರೆ ಆರ್ಟ್ ಪೇಪರ್ ಹಾಕಬಹುದಿತ್ತು.

ಅದು ಏನೇ ಇರಲಿ. ನಿಮ್ಮ ಈ ಅಧ್ಯಯನ ತುಳು ರಂಗಭೂಮಿಗೆ ಒಂದು ಮೌಲಿಕ ಗ್ರಂಥ ಅಭಿನಂದನೆಗಳು.

**ಡಾ. ಜಯಪ್ರಕಾಶ ಮಾವಿನಕುಳಿ**

15-01-2006

* * *

...... ಒಟ್ಟು ತುಳು ರಂಗಭೂಮಿಯ ಸಮಗ್ರ ಚರಿತ್ರೆ ಸಂಕ್ಷಿಪ್ತವಾಗಿಯಾದರೂ ದೊರಕುವ ಕನ್ನಡದ ಮೊದಲ ಕೃತಿಯಿದು. ಅತ್ಯಂತ ಉಪಯುಕ್ತ ಮಾಹಿತಿಗಳ ಸಂಗ್ರಹ ಇಲ್ಲಿದೆ. ಇದನ್ನು ಕಲೆಹಾಕಿ ವ್ಯವಸ್ಥಿತವಾಗಿ ಕೊಡುವುದು ಸುಲಭ ಸಾಧ್ಯವಾದ ಕೆಲಸವಲ್ಲ. ಈ ನಿಟ್ಟಿನಲ್ಲಿ ನಿಮ್ಮ ಶ್ರಮಸಾಹಸಕ್ಕಾಗಿ ತುಂಬು ಹೃದಯದ ಕೃತಜ್ಞತೆಗಳು.

ಬರೇ ನಿರೂಪಣೆ ಮಾತ್ರವಲ್ಲ ಕೆಲವು ಅಪರೂಪದ ಚಿತ್ರಗಳನ್ನು ಜೋಡಿಸಿರುವುದು ಪುಸ್ತಕದ ಯೋಗ್ಯತೆಯನ್ನು ಹೆಚ್ಚಿಸಿದೆ.

ಇದನ್ನೇ ಸ್ವಲ್ಪ ಹಿಗ್ಗಿಸಿದರೆ ಒಂದು 'ಪಿಎಚ್‌ಡಿ' ಪ್ರಬಂಧವಾಗುವ ಅರ್ಹತೆ ಈ ಪುಸ್ತಕದ ವಸ್ತುವಿಗಿದೆ.

**ಐರ್ವ ಲಕ್ಷ್ಮೀ ನಾರಾಯಣ ಆಳ್ವ**

**17-01-2006**

* * *

...... ಈ ಕೃತಿಯು ತುಳು ರಂಗಭೂಮಿಯ ವಿವಿಧ ಮಜಲುಗಳನ್ನು ವಿವರಿಸುವ ಜೊತೆಗೆ ಬಣ್ಣದ ಬದುಕಿಗೆ ಕೊಡುಗೆ ನೀಡಿದ ನೂರಾರು ಕಲಾವಿದರು, ನಿರ್ದೇಶಕರು, ಸಂಗೀತಗಾರರು ಹಾಗೂ ನೇಪಥ್ಯದವರನ್ನು ಗುರುತಿಸುವ ಕೆಲಸ ಮಾಡುತ್ತದೆ.

**ಡಾ. ಈಶ್ವರ ಅಲೆವೂರು, 'ಅಕ್ಷಯ' ರಂಗಾವಲೋಕನದಲ್ಲಿ**

## ಪ್ರಕಟಿತ ತುಳುನಾಟಕಗಳು (ಒಂದು ಸ್ಥೂಲ ಯಾದಿ)

| ಪ್ರಕಟಿತ ವರ್ಷ | ಲೇಖಕ | ಕೃತಿ | ಪ್ರಕಾಶನ |
|---|---|---|---|
| 1933 | ಮಾಧವ ತಿಂಗಳಾಯ | ಜನ ಮರ್ಲ್ | ತುಳುವ ಸಾಹಿತ್ಯ ಮಾಲೆ |
| 1937 | ತುಳುವಾಲೆ | ವಂದೇ ಮಾತರಂ | ನವಯುಗ ತುಳು ಸಂಚಿಕೆಗಳು |
| 1937 | ಬಾಲಬಂಧು, 'ಬಾಲವೃಂದೊ'-ಸುಳ್ಯ | ಮಾತಲಾ ಇಂಚನೇ | ನವಯುಗ ತುಳು ಸಂಚಿಕೆಗಳು |
| | (ನಿರಂಜನ) | ಅತ್ತ್ಂಡ ಮಡಿತ್ತ ಛಡಿ | |
| 1940 | ಪಡುಬಿದ್ರಿ ಶಿವಣ್ಣ ಹೆಗ್ಡೆ | ವಿದ್ಯೆದ ತಾದಿ | ಲೇಖಕರು :<br>(ಕೆನರಾ ಛಾಪಖಾನೆಯಲ್ಲಿ ಮುದ್ರಿತ) |
| 1964 | ಬಿ. ರಾಮ ಕಿರೋಡಿಯನ್ | ಕಾಂಪರನ ಕಟಿಪಿಟಿ | |
| 1965 | ” | ಈ ಪಿರಯೊಡ್ಲಾ ಬರವಾ? | ಜ್ಯುಲಿಯೆಟ್ ಪ್ರಿಂಟಿಂಗ್ ಪ್ರೆಸ್, ಮಂಗಳೂರು |
| 1970 | ” | ಸರ್ಪಸಂಕಲೆ | ಕೋಕಿಲಾ ಆರ್ಟ್ಸ್, ಮಂಗಳೂರು |
| 1965 | ಇಬ್ರಾಹಿಂ ಯಂ.ಯಸ್. | ಪೊಣ್ಣೆ ಸಮಾಜದ ಕಣ್ಣ್ | ವೀಣಾ ಸಾಹಿತ್ಯ ನಿಲಯ, ಮಂಗಳೂರು |
| 1971 | ಇಬ್ರಾಹಿಂ ಯಂ.ಯಸ್. | ಒಂಜಿ ಪೊಣ್ಣು ಆಜಿ ಕಣ್ಣ್ | ” |
| 1992(4ನೇ ಮು.) | ” | ಮೋಕೆದ ಪೊದು | ” |
| 1992(3ನೇ ಮು.) | ” | ನಂಜಿದ ನಾಲಾಯಿ | ” |
| 1966 | ಬಿ.ಎಸ್.ರಾವ್ | ಸಂಶಯದ ಸಂಕಲೆ | ಯಂ. ವೆಂಕಟರಾವ್, ಮಂಗಳೂರು |
| 1967 | ವಿಶುಕುಮಾರ್ | ಕೋಟಿಚೆನ್ನಯ | ಲೇಖಕ |

| | | | |
|---|---|---|---|
| – | ಕೆ. ಬಿ. ಭಂಡಾರಿ | ಬದಿತ್ತ ಬಯಕೆ | |
| – | | ಕಪ್ಪು ಪೊಣ್ಣು | |
| – | | ನಾರದೆರೆನ ವಕಾಲತ್ | ಲೇಖಕ |
| 1965 ? | ಕೆ.ಯನ್.ಟೇಲರ್ | ಯೇರ್ ಮಲ್ತಿನ ತಪ್ಪು? (ದ್ವಿ. ಮು.1974) | ಯಂ. ವೆಂಕಟರಾವ್, ಮಂಗಳೂರು–1 |
| 1968 | ” | ಕಲ್ಲ್‌ದ ದೇವೆರ್ | ಜಯಂತಿ ಪಬ್ಲಿಕೇಶನ್ಸ್, ಮಂಗಳೂರು |
| 1970 | ” | ತಮ್ಮಲೆ ಅರುವತ್ತನ ಕೋಲ | ಯಂ. ವೆಂಕಟರಾವ್, ಮಂಗಳೂರು–1 |
| 1979 | ” | ಕಾಸ್‌ದಾಯೆ ಕಂಡನಿ | ಜಯಂತಿ ಪಬ್ಲಿಕೇಶನ್ಸ್, ಮಂಗಳೂರು |
| 1983 | ” | ಕಂಡನೆ ಬುಡೆದಿ | ಜಯಂತಿ ಪಬ್ಲಿಕೇಶನ್ಸ್, ಮಂಗಳೂರು |
| 1985 | ” | ದೇವೆರ್ ಕೊರ್ಪೆರ್ | ಯಂ.ವೆಂಕಟರಾವ್, ಮಂಗಳೂರು–1 |
| – | ” | ಇಂದ್ರನ ಆಸ್ತಿ | – |
| – | ” | ಯಾನ್ ಸನ್ಯಾಸಿ ಆಪೆ | – |
| – | ” | ವಿಶ್ವಾಮಿತ್ರ ಮೇನಕ | – |
| – | ” | ಶಾಂತಿ | – |
| 1998 | ಡಾ। ಸಂಜೀವ ದಂಡಕೇರಿ | ಬಯ್ಯಮಲ್ಲಿಗೆ | ಲೇಖಕರು |
| 1969 | ” | ಪಾದ ಕಾನಿಗೆ | ಲೇ |
| – | ” | ರಾಧಾ ಕೃಷ್ಣ | ” |
| – | ” | ಗಂಗಾ ರಾಮ್ | ” |

| | | | |
|---|---|---|---|
| – | ” | ಸರಸ್ವತಿ | ” |
| 1969 | ಎಂ. ಪುರುಷೋತ್ತಮ | ಬೊಲ್ಪುದಾಂತಿ ತುಡರ್ | ಸಹೋದರ ಕಲಾವೃಂದ, ಮಂಗಳೂರು |
| 1970 | ಸಂಜೀವ ಎ. ಬಿ.ಎಸ್ಸಿ | ನೆತ್ತೆರ್‌ದ ಕಾನಿಗೆ | ಲೇಖಕರು |
| 1972 | ” | ಮರ್ಲೆದಿ | ಯಂ. ವೆಂಕಟರಾವ್, ನಿತ್ಯಾನಂದ ಗ್ರಂಥಾಲಯ, ಮಂಗಳೂರು |
| 1972 | ” | ಎನ್ನ ಮಾಮಿ | ” |
| 1977 | ” | ಗಾಳಿಗ್ ತಿಕ್ಕಿನ ತುಡರ್ | ” |
| 1980 | ” | ಗಂಗೆ–ಗೌರಿ | ” |
| 1982 | ” | ಪೊರ್ತುರ್ ಕಂತ್‌ನಗ | ” |
| 1980 | ಕೆ.ಪಿ.ಶೆಟ್ಟಿ, ಮಂಗಳೂರು | ಜೋಡುಕಾಯಿ | ತುಳು ತುಡರ್ ಪ್ರಕಾಶನ, ಮಂಗಳೂರು |
| 1970 | ಪಿ.ಯಸ್.ರಾವ್ | ಪಗೆತ ಪುಗೆ | ಯಂ. ವೆಂಕಟರಾವ್, ನಿತ್ಯಾನಂದ 1970 |
| | ” | ಸೊರ್ಕುದ ಪೊಣ್ಣು | ಸಹೋದರ ಕಲಾವೃಂದ, ಮಂಗಳೂರು |
| 1971 | ” | ಮತಿದಾಂತಿ ಮಾಟ | ” |
| 1971 | ” | ಬೆನ್ನಿನ ಪೊಣ್ಣು | ” |
| 1972 | ” | ಪೊಸ ಜೋಡಿ | ” |
| 1973 | ” | ಈ ಪ್ರೀತಿ ಬದ್ಕೊಡಾ? | ” |
| 1974 | ” | ಕೆಸರ್ | ” |
| 1977 | ” | ಇಂಚಾಂಡ ಎಂಚ? | ” |

| | | | |
|---|---|---|---|
| 1979 | ” | ನಿಲೆದಾಂತಿ ಪೊಣ್ಣು | ” |
| 1980 | ” | ಮಾಮಣ್ಣ | ” |
| 1980 | ” | ಮಾರಪ್ಪಣ್ಣನ ಮಗೆ | ” |
| 1982 | ” | ಪನಂದೆ ಪದ್ರಾಡ್ | ” |
| 1983 | ” | ಪಿಕ್‌ನಿಕ್‌ದ ಪೊಲ್ರ್ಯು | ” |
| 1984 | ” | ಪೊಲ್ರ್ಯುದ ಪೊಣ್ಣು | ” |
| 1985 | ” | ಪೊತ್ತಂದಿ ಪಗೆ | ” |
| 1985 (2ನೇ ಮು.) | ” | ಊರು ಪೂರಾ ಸುದ್ದಿ | ” |
| 1985 | ” | ಸೊರ್ಕುದ ಸವಾಲ್ | ” |
| 1986(2ನೇ ಮು.) | ” | ಜವಾನ್ದಿ ಪೊಣ್ಣು | ” |
| 1986 | ” | ಮರ್ಯಾದಿ ಮುಖ್ಯ | ” |
| 1986 | ” | ತಿಂಗೊಲ್ದ ಕಾನಿಕೆ | ” |
| 1987(5ನೇ ಮು.) | ” | ಎಂಕ್‌ಲಾ ಮದ್ಮೆ ಆವೊಡೇ | ” |
| 1987 | ” | ಮೋಕೆ ಮರ್ಲಾ | ” |
| 1988 | ” | ತಬುರನ ಪರಕೆ | ” |
| 1988 | ” | ಗೊಬ್ಬುದ ಗೊಬ್ಬು | ” |
| 1990(3ನೇ ಮು.) | ” | ಯಾನ್ ಬುಡಾಯೆ | ” |
| 1990 | ” | ಅಮ್ಮೆಗೊರಿ ಅಂಡೆ ಮಗೆ | ” |

| | | | |
|---|---|---|---|
| 1991 | ” | ಆಣ್ ಮಗೆ ಸೋಂಪೆ | ” |
| 1991 | ” | ಬರ್ಪನಾ? | ” |
| 1991 | ” | ಎನ್ನ ಕಂಡಾನಿಗ್ ಯಾನೇ ಬುಡೆದಿ | ” |
| 1991 | ” | ಮುತ್ತಾಳ ಮಾಮೆ? | ” |
| 1993(2ನೇ ಮು.) | ” | ಬದಿತ್ತ ಉರ್ಲು | ” |
| 1994 | ” | ಪದ್ದಕ್ಕನ ಕಂಡನಿ ಪಿರಬೈದೆ | ” |
| (?) | ” | ಲವ್ marriage | ” |
| 2000 | ” | ಬರಡ್! ಬರಡ್!!! | ” |
| 2005 | ” | ತಾಕತ್ತ್ ಇತ್ತ್ಂಡ ತಾಂಟ್‌ಲ! | ದುರ್ಗಾ ಪ್ರಕಾಶನ, ಮಂಗಳೂರು |
| 2005 | ” | ಮಾಮಿಗೊಂತೆ ಕಮ್ಮಿ | ದುರ್ಗಾ ಪ್ರಕಾಶನ, ಮಂಗಳೂರು |
| 1970 | ಎಂ. ವೆಂಕಪ್ಪಯ್ಯ ಕಾರಂತ್ | ಮಾಸ್ಟೆರೆ ಫಜೀತಿ | ಎಂ. ತಿರುಮಲೇಶ್ವರ ಭಟ್ |
| (?) | ಎನ್. ಗೋಪಾಲಕೃಷ್ಣ | ಪವಿತ್ರ ಪಾಪಿ | ಯಂ.ಬಿ. ದೇವಾಡಿಗ, ಮಂಗಳೂರು |
| 1974 | ” | ಗೊಮ್ಮಡ್ದೇವೆರ್ | ” |
| 1984 | ” | ಕಲ್ಕುಡ-ಕಲ್ಲುರ್ಟಿ | ” |
| 2011 | ” | ಲಚ್ಚುನ ಕೊರಗೆ | ಲೇಖಕರು |
| 1971 | ಟಿ.ಜಿ. ಮುಡೂರು | ಜೋಕುಳೆ ಬುದ್ಧಿ | ಪ್ರತಿಮಾ ಪ್ರಕಾಶನ, ಪಂಜ |
| 2003 | ” | ಅಮರ ಕಲ್ಯಾಣ ಕ್ರಾಂತಿ | |
| 1973 | ಬಿ. ಚಿತ್ತರಂಜನ್ ದಾಸ್ ಶೆಟ್ಟಿ | ಪೊಣ್ಣು ಮಣ್ಣ್‌ದ ಬೊಂಬೆ | ನಾಗಶಕ್ತಿ ಪ್ರಕಾಶನ, ಬೋಳ |

| | | | |
|---|---|---|---|
| 1975 | ಬಾಲಕೃಷ್ಣ ಮುದ್ಯ | ಚೇರ್‌ಮೇನ್ ಕಿಟ್ಟಣ್ಣೆ | ವಿಪಿಸಿ ಪಬ್ಲಿಕೇಶನ್ಸ್, ಮಂಗಳೂರು |
| 1979 | " | ಲಿಲ್ಲಿ | " |
| 1987 | " | ಯಾನ್ ಬದ್‌ಕೊಡಾ | " |
| 1975 | ಕೆ. ಕೆ. ಸಾಲಿಯಾನ್ | ಮುಗಲ್ ಕಬಿನಗ | ಶ್ರೀ ದುರ್ಗ ಸೇವಾದಳ, ಬಡಾನಿಡಿಯೂರು |
| 1976 | ಕೆ. ಆರ್. ಶೆಟ್ಟಿ | ಕೊಲೆಗಾರೆ ಯೇರ್? | ವೀಣಾ ಸಾಹಿತ್ಯ ನಿಲಯ, ಮಂಗಳೂರು |
| 1978 | ಭಾಸ್ಕರ ಟಿ. ಬಂಗೇರ | ಬಂಗಾರ್ದ ಬಿಸತ್ತಿ | ವೀಣಾ ಸಾಹಿತ್ಯ ನಿಲಯ, ಮಂಗಳೂರು |
| 1978 | ಶಿಮಂತೂರು ಚಂದ್ರಹಾಸ ಸುವರ್ಣ | ಬ್ರಹ್ಮನ ಬರವು | – |
| 2015 | " | ಗಾಲ | ಪೂಜಾ ಪ್ರಕಾಶನ, ಮುಂಬಯಿ |
| | " (ತುಳು ಏಕಾಂಕ ನಾಟಕೊಲು) | ಚಕ್ರ, ಅಗ್ನಿಸಾಕ್ಷಿ, | |
| | | ಸಯ್ಯರಾಂಡಲ ಬುಡ್ಲೆ | " |
| 1980 | ಅಮೃತ ಸೋಮೇಶ್ವರ | ಗೋಂದೋಳು | ಪ್ರಕೃತಿ ಪ್ರಕಾಶನ, ಕೋಟೆಕಾರು |
| 1982 | " | ರಾಯರಾವುತೆ | ತುಳುವ ಪ್ರಕಾಶನ, ಮಂಗಳೂರು |
| 1984 | " | ಪುತ್ತೂರ್ದ ಪುತ್ಥೊಳಿ | ಸಮೀರ ಪ್ರಕಾಶನ, ಪುತ್ತೂರು |
| 1989 | " | ಎಳುವೆರ್ ದೆಯ್ಯಾರ್ | ಪ್ರಕೃತಿ ಪ್ರಕಾಶನ, ಕೋಟೆಕಾರು |
| 1989 | " | ತುಳುನಾಡ ಕಲ್ಕುಡೆ | ಪ್ರಕೃತಿ ಪ್ರಕಾಶನ, ಕೋಟೆಕಾರು |
| 1990 | " | ಆಟೊ ಮುಗಿಂಡ್ | ತುಳು ಸಂಘ, ವಿವೇಕಾನಂದ ಕಾಲೇಜು, ಪುತ್ತೂರು |
| 2005 | " | ತುಳು ನಾಟಕ ಸಂಪುಟ | ಪ್ರಕೃತಿ ಪ್ರಕಾಶನ, ಕೋಟೆಕಾರು |

| | | | |
|---|---|---|---|
| 2005 | ” | ತುಳು ನಾಟ್ಯ ರೂಪಕೊಲು | ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ |
| 1981(2ನೆಯ ಮು.) | ಸೀತಾನದಿ ಗಣಪಯ್ಯ ಶೆಟ್ಟಿ | ಕೋಟಿ ಚೆನ್ನಯ | ಸುಬೋಧ ಸಾಹಿತ್ಯ ಭಂಡಾರ, ಹಿರಿಯಡಕ |
| 1981 | ಕುದ್ಕಾಡಿ ವಿಶ್ವನಾಥ ರೈ | ಸಂಕ್ರಾಂತಿ | ತುಳುಕೂಟ ಬೆಂಗಳೂರು |
| 1983 | ” | ಮಂಜತ ಕಾಪಡೆ | |
| | | ಸತ್ಯೊಮ್ಮ ದೆಯ್ಯಾರ್ | ವಿಶ್ವಕಲಾ ನಿಕೇತನ, ಪುತ್ತೂರು |
| 1987 | ” | ಅಬ್ಬಕ್ಕಬ್ಬೆ | ವಿಪಿಸಿ ಪಬ್ಲಿಕೇಶನ್ಸ್, ಮಂಗಳೂರು |
| 1982 | ಎಂ.ಬಿ.ಸಾಲ್ಯಾನ್ | ಬಂಗಾರ್ದ ಕುರಲ್ | ಮೈನಾ ಪಬ್ಲಿಕೇಶನ್ಸ್, ಮಂಗಳೂರು |
| 1984 | ” | ಧರ್ಮ ಕೈ ಬುಡಂದ್ | ” |
| 1985 | ” | ಸತ್ಯದ ತುಡರ್ | ” |
| 1989 | ” | ಕತ್ತಲೆದ ಕಥೆ | ” |
| 1983 | ಸದಾನಂದ ಸುವರ್ಣ | ಗುಡ್ಡೆದ ಭೂತ | ರಂಗ ರಶ್ಮಿ ಪ್ರಕಾಶನ, ಮುಂಬಯಿ |
| 1983 | ಪಾ. ಕೃ. ಆನಂದ | ಚದಿತ್ತ ಬದಿ | ಸುಪ್ರಿಯಾ ಪ್ರಕಾಶನ, ಮಾಡಾವು |
| 1984 | ” | ಗೂಡುಡಿತ್ತಿನ ಪಕ್ಕಿ | ವಿಶ್ವ ಕಲಾನಿಕೇತನ ಪ್ರಕಾಶನ, ಪುತ್ತೂರು |
| 1985 | ” | ಒಂಜಿ ತಾಳಿ ರಡ್ಡ್ ಸಾದಿ | ಪ್ರತಿಮಾ ಪ್ರಕಾಶನ, ಪಂಜ |
| 1986 | ” | ಬ್ರಹ್ಮರ್ಕಟ್ | ಸುಪ್ರಿಯಾ ಪ್ರಕಾಶನ, ಮಾಡಾವು |
| 1988 | ” | ಕಲ್ಯಾಣಿ | ಆನಂದ ಪ್ರಕಾಶನ, ಪಾಲ್ತಾಡಿ |
| 2000 | ” | ರಾಮೆ | ” |
| 2003 | ” | ದೈವೊ ನಿರ್ಣಯೊ | ” |

| | | | |
|---|---|---|---|
| 1984 | ಬಿ. ಉಮೇಶ ಶೆಟ್ಟಿ | ಸಾದಿದ ಬೊಲ್ಪು | ಸರಳ ಪ್ರಕಾಶನ, ಪಚ್ಚಿನಡ್ಕ |
| 1984 | ಕೆ. ಜೆ. ಕೊಕ್ರಾಡಿ | ಕಾವೇರಿ | ಲೇಖಕ |
| 1984 | ” | ಒಂಜಿ ಪೊಣ್ಣನ ಕಥೆ | ” |
| 1984 | ” | ಬೈರನ ಬದ್‌ಕ್ | ” |
| 1987 | ” | ಭಾಗ್ಯಲಕ್ಷ್ಮಿ | ” |
| 1999 | ” | ರಕ್ಕಸೆರ್ | ” |
| 1985 | ಸೋಮನಾಥ ಎಸ್. ಕರ್ಕೇರ | ರಜನಿ | ಸರ್ವೋದಯ ಸಾಹಿತ್ಯ ಮಾಲೆ, ಡೊಂಬಿವಿಲಿ |
| 1989 | ” | ಅಂಚಿ-ಇಂಚಿ | ” |
| 1991 | ” | ಪರ್ದೆದ ಪಿರಾವುದ ನಾಟಕ | ಸರ್ವೋದಯ ಸಾಹಿತ್ಯ ಮಾಲೆ, ಮುಂಬಯಿ |
| 1986 | ಎಂ. ಶ್ಯಾಮರಾಯ ಆಚಾರ್ಯ | ಬೆಚ್ಚ ನೆತ್ತೆರ್ | ಲೇಖಕ |
| 1986 | ಶ್ರೀ ಭವ್ಯಾ | ಆರತಿ | ಕೆ.ವಿ. ಭಟ್, ಮಂಗಳೂರು |
| 1986 | ” | ತೂ-ತುಡರ್ | ” |
| 1993 | ” | ಝೂನ್ಸಿದ ರಾಣಿ ಲಕ್ಷ್ಮೀಬಾಯಿ | ” |
| 1995 | ” | ಅಂಗಲಾಪು | ” |
| 1986 | ಡಿ.ಕೆ. ಜೈನ್, ಕೊಯ್ಯೂರು | ಪಲಯನ ಪ್ರೀತಿ | ಲೇಖಕ |
| 1987 | ಗಂಗಾಧರ ಕಿದಿಯೂರು | ವಿಜಯಲಕ್ಷ್ಮೀ | ಮಧುಶ್ರೀ ಪ್ರಕಾಶನ, ಕಿದಿಯೂರು, ಉಡುಪಿ |
| 1992 | ” | ಬದ್‌ಕೊಂಜಿ ಸರಿಗಮ | ” |
| 1994 | ” | ಇಲ್ಲ್ ಒಕ್ಕೆಲ್ | ” |

| | | | |
|---|---|---|---|
| 1995 | ” | ವಿಧಿ ತೋಜಾಯಿ ನಿಧಿ | ” |
| 1996 | ” | ಬಗ್ಗನ ಭಾಗ್ಯೊ | ” |
| 1999 | ” | ಎಣ್ಣೆದಾಂತಿ ತುಡರ್ | ” |
| 2002 | ” | ಪೊಣ್ಣೊಂಜಿ ಕಲ್ಪವೃಕ್ಷ | ” |
| 2003 | ” | ಇಲ್ಲ್‌ಗೊಂಜಿ ಯೋಧೆ | ” |
| 2004 | ” | ಪಿಂಗಾರದ ಬಾಲೆಸಿರಿ | ” |
| 1988 | ಮಚ್ಚೇಂದ್ರನಾಥ್ ಪಾಂಡೇಶ್ವರ | ಕೌನ್ಸಿಲರ್ ಕೊಗ್ಗಣ್ಣೆ | ವಿಪಿಸಿ ಪಬ್ಲಿಕೇಶನ್ಸ್, ಮಂಗಳೂರು |
| 2004 | ” | ನೆತ್ತೆರಾ?... ನೀರಾ...? | ಮಚ್ಚೇಂದ್ರನಾಥ ಪಾಂಡೇಶ್ವರ ಅಭಿನಂದನ ಸಮಿತಿ, ಮಂಗಳೂರು |
| 2004 | ” | ಅಜ್ಜಿ ತಾಂಕಿನ ಪುಳ್ಳಿ | ” |
| 1989 | ಮನು, ಇಡ್ಯಾ | ಬಲಿ | ಸಿಂಗಾರ, ಸುರತ್ಕಲ್ |
| 1992 | ” | ತ್ರಿಸ್ಂಕು | ” |
| 2016 | ” | ಮಾರಿ ಗಿಡಪುಲೆ | ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ |
| – | ವೀರಪ್ಪ ಯನ್. ಬಂಗೇರ | ಭಾಗ್ಯದ ಜ್ಯೋತಿ | – |
| 1990 | ” | ಬೀದಿದ ಭಿಕಾರಿ | ಲೇಖಕ |
| 1989 | ವಿಠಲಗಟ್ಟಿ ಉಳಿಯ | ಬೇಲಿ | ಅಭಿಮನ್ಯು ಪ್ರಕಾಶನ, ಕಾಸರಗೋಡು |
| 1989 | ಲೀಲಾಬ್ಯಾ, ಸುರತ್ಕಲ್ | ವಂಶದ ಗೌರವ | ಲೇಖಕಿ |
| 1989 | ರಾಮಚಂದರ್ ಬೈಕಂಪಾಡಿ | ಪಿಂಗಾರ | ಅಂಜನಿ ಪ್ರಕಾಶನ, ನವಮಂಗಳೂರು |

| | | | |
|---|---|---|---|
| 1989 | ಚೆಲುವರಾಜ್ ಪೆರಂಪಳ್ಳಿ | ಸಂಸಾರಡೊಂಜಿ ಸನ್ಯಾಸಿ | ಪ್ರಿಯದರ್ಶಿನಿ ಪ್ರಕಾಶನ, ಪೆರಂಪಳ್ಳಿ |
| 1991 | ಯನ್. ಮೋಹನ್ ಭಟ್ | ಮದ್ಮೆಗ್ ಬರೊಡು | ಶ್ರೀ ವಿನಾಯಕ ಶಕ್ತಿ ನಾಟಕ ಸಭಾ, ಮಂಗಳೂರು–02 |
| (?) | ” | ಮಾಮಿಗ್ ಪನ್ತ್‌ನ ಮರ್ಮಾಲ್ | ” |
| 1991 | ಮುದ್ದುಮೂಡುಬೆಳ್ಳೆ | ನಮ ಎಡ್ಡೆನಾ ಊರ್ಯೆಡ್ಡೆ | ತುಳು ಚೇತನ, ಬೆಂಗಳೂರು–08 |
| 1991 | ” | ಇನೆ ರೂಪಕೊಲು | ” |
| 2018 | ” | ಆಕಾಶವಾಣಿ ನಾಟಕ, ರೂಪಕೊಲು<br>1. ಅಬ್ಬಗ ದಾರಗ<br>2. ಮಿರ್ಲೋಕದ ಕುರ್ಲೆ<br>3. ತಿರ್ಮಂತ್ರ<br>4. ತಾರ್ಕಣೆ<br>5. ಕಾಂತಬಾರೆ ಬೂದಬಾರೆ<br>6. ಪದ ಪಾರ್ದನ ಪಣ್ಪುನಾ | ಸಾಹಿತ್ಯ ಸಂಸ್ಕೃತಿ ವೇದಿಕೆ, ಬೆಳ್ಳೆ |
| 1991 | ಕೆ. ಅನಂತರಾಮ ಬಂಗಾಡಿ | ದೇವು ಪೂಂಜೆ | ವಿ.ಪಿ.ಸಿ. ಪ್ರಕಾಶನ, ಮಂಗಳೂರು–1 |
| 1991 | ” | ಸಿರಿಗಂಗೆ | ” |
| 1992 | ಕ್ಯಾಥರೀನ್ ರಾಡ್ರಿಗಸ್ | ಕೇದಗ | ತುಳುಕೂಟ ಉಡುಪಿ |
| 1995 | ” | ಸಿರಿತುಪ್ಪೆ | ಪ್ರೀತಿ ಪ್ರಕಾಶನ, ಕಟಪಾಡಿ |
| 1992 | ಕೋಡು ಭೋಜ ಶೆಟ್ಟಿ | ಕಪ್ಪು ನೆತ್ತೆರ್ | ಸಾಹಿತ್ಯ ಲಹರಿ ಪ್ರಕಾಶನ, ಔರಂಗಾಬಾದ್ |

| | | | |
|---|---|---|---|
| 1992 | ” | ಪೊಸ ಬಿನ್ನೆರ್ | ” |
| 1993 | ಪಿ. ಅಶೋಕ್ ಕುಮಾರ್ | ಸುಳಿಕ್ ತಿಕ್ಕಿನ ಬದ್‌ಕ್ | ಸಾಜ್ ಎಂಟರ್‌ಪ್ರೈಸಸ್, ಮಂಗಳೂರು–5 |
| 1993 | ” | ನಿಲೆದಾಂತಿ ಬದ್‌ಕ್ | ” |
| 1994 | ” | ಬದ್‌ಕ್‌ದ ಎತೆ–ಕತೆ | ” |
| 1994 | ಯಂ. ತಿಮ್ಮಪ್ಪ ಪುತ್ತೂರು | ಧ್ರುವನಕ್ಷತ್ರ | ಪ್ರಜ್ವಲ ಪ್ರಕಾಶನ, ಬೆಳ್ತಂಗಡಿ |
| 1996 | ” | ಮಧುಚಂದ್ರ | ” |
| 1997 | ” | ಗಗನ ಕುಸುಮ | ” |
| 1998 | ” | ಕಡಲ್ | ” |
| 2001 | ” | ಚಂದ್ರೆದಾಂತಿ ಬಾನ | ” |
| 2003 | ” | ಮರತ್ ಬುಡಡೆ | ಲೇಖಕ |
| 2003 | ” | ಪೊರ್ಲುಗಾದ್ ಮುಡಿತಿನ ಪೂ | ” |
| 1995 | ಮಾಧವ ಕಾಡ್ಬೆಟ್ಟು | ಸತ್ಯೊದ ಬೊಲ್ಪು | ಕೃತ್ತಿಕಾ ಪ್ರಕಾಶನ, ಕಾಡ್ಬೆಟ್ಟು, ಉಡುಪಿ |
| 1996 | ವಿಜಯ ಕುಮಾರ ಶೆಟ್ಟಿ | ಬೂತೊದ ಇಲ್ಲ್ | ಕಲಾಜಗತ್ತು ಪ್ರಕಾಶನ, ಮುಂಬಯಿ |
| 1997 | ” | ಈ ನಲ್ಕೆದಾಯೆ | ” |
| 1999 | ” | ಬದಿ | ” |
| 1996 | ಶಾರದಾ ರಮೇಶ್ ರಾವ್ | ಬೂದಮ್ಮನ ಬಿಸ್ರಾತಿಕೆ | ಸಂದೀಪ ಸಾಹಿತ್ಯ ಅತ್ರಾಡಿ |
| 2001 | ” | ಪ್ರೀತಿದ ಬಿಲೆ | ಸಂದೀಪ ಸಾಹಿತ್ಯ ಅತ್ರಾಡಿ |
| 1996 | ಅನಂತ್ ಎಸ್.ಇರ್ವತ್ರಾಯ | ಆಸೆಗ್ ಒಂಜಿ ಅಂತ್ಯ | ಕಲಾ ಸಂಗಮ ಬಾಳ |

| | | | |
|---|---|---|---|
| 1997 | ಆನಂದಕೃಷ್ಣ | ಪಿಲಿಪತ್ತಿ ಗಡಸ್ | ದುರ್ಗಾ ಪ್ರಕಾಶನ, ಪೆರ್ಲಂಪಾಡಿ |
| 2011 | ” | ಮೂಜಿ ಮುಟ್ಟು ಮೂಜಿ ಲೋಕ | ರಂಗ ಚೇತನ ಟ್ರಸ್ಟ್, ಬೆಂಗಳೂರು |
| 1997 | ರವಿಪ್ರಸಾದ್ ಪೆರ್ಲಂಪಾಡಿ | ಮಾಮು ಬರ್ಪೆರ್ | ಕಲಾಶ್ರೀ ಪ್ರಕಾಶನ, ಪೆರ್ಲಂಪಾಡಿ |
| 1997 | ಸದಾನಂದ | ಅಂಧ್ವೆ... ಮರ್ಯಾದ್ವೆಪ್ಪಡೆ | ಯುಗಪುರುಷ ಮುದ್ರಣಾಲಯ, ಕಿನ್ನಿಗೋಳಿ |
| 1997 | ಅತ್ತಾವರ ಶಿವಾನಂದ ಕರ್ಕೇರಾ | ಎರುಮ್ಯೆಂದೆ | ಸ್ವೀಕಾರ್ ಪ್ರಕಾಶನ, ಮಂಗಳೂರು |
| 2005 | ” | ಕಾರ್ನಿಕದ ದೈವ ವೈದ್ಯನಾಥ | ” |
| 1998 | ಕೆ. ಅಬೂಬಕ್ಕರ್ | ಭಕ್ತೆರ್ನ ಓಲೆ | ಲೇಖಕ |
| 1998 | ಸುಧಾಕರ ಕೋಟ್ಯಾನ್ ಪರಂಪಳ್ಳಿ | ಸಂಶಯದ ಸಂಕಲೆ | ಯುವಕ ಮಂಡಲ, ಪೆರಂಪಳ್ಳಿ |
| 1999 | ಜಯಂತಿ ಎಸ್. ಬಂಗೇರ | ಸತ್ಯ ನೆಗೆಪುನಗ | ದುರ್ಗಾ ಪ್ರಕಾಶನ, ಮಂಗಳೂರು |
| 2017 | ” | ಪೂಜೆದ ಪೂ | ಸುಜಯಾ ಪ್ರಕಾಶನ |
| 1999 | ನೆಟ್ಟಣಿಗೆ ಪುರುಷೋತ್ತಮ ಆಚಾರ್ಯ | ಬದಿತ ಕೊದಿ | ಕಲಾಸಾಹಿತ್ಯ ವೇದಿಕೆ, ಬೆಳ್ಳೂರು |
| 2000 | ಮಂಗಳೂರು ಮಣಿ | ಬೊಳ್ಳಿ ಮೂಡ್ಂಡ್, | |
| | | ಸಿಗ್ನಲ್ ವೀರಪ್ಪ | ದುರ್ಗಾ ಪ್ರಕಾಶನ, ಮಂಗಳೂರು |
| 2000 | ಉದಯಶಂಕರ್ ಎನ್. ಎ. | ದಾರೆದಾಂತಿ ಮದಿಮೆ | ನವರಂಗ ಆರ್ಟ್ಸ್<br>ಕೊಲ್ಲಂಗಾನ, ಕಾಸರಗೋಡು |
| 2000 | ಪಿ. ಶಿವಾನಂದ ಗಟ್ಟಿ | ಬೊಡ್ಚೆಂಕ್ ಈ ಬದ್‌ಕ್ | ಲೇಖಕ |
| 2001 | ಯಮ್.ಕೆ.ಸೀತಾರಾಮ ಕುಲಾಲ್ | ನಾಟಕದಾಯೆ | ಶುಭಾ ಪ್ರಕಾಶನ, ಮಂಗಳೂರು |

| | | | |
|---|---|---|---|
| 2001 | ಕದ್ರಿ ನವನೀತ ಶೆಟ್ಟಿ | ಬೀರೆ ದೇವು ಪೂಂಜೆ | ಜಾಗತಿಕ ಬಂಟರ ಸಂಘಗಳ ಒಕ್ಕೂಟ, ಮಂಗಳೂರು |
| 2016 | ” | ಕುಕ್ಕೆದಸ್ವಾಮಿ ಸುಬ್ರಾಯೆ | ತುಳುಕೂಟ(ರಿ) ಕುಡ್ಲ |
| 2002 | ” | ಯಕ್ಷಮಣಿ | ಕಲ್ಲೂರ ಪ್ರಕಾಶನ, ಮಂಗಳೂರು |
| 2001 | ರವಿ ಕುಮಾರ್ ಕಡೆಕಾರ್ | ಸೂರ್ಯೆ ಕಂತಿಯೆ | ಶ್ರೀ ವಿಠೋಭ ರುಕುಮಾಯಿ ಭಜನಾ ಮಂದಿರ ಕಡೆಕಾರ್ |
| 2004 | ” | ಕಡಲ್‌ಗ್ ಸೇರಂದಿ ಸುದೆ | ” |
| 2002 | ನಂದಳಿಕೆ ನಾರಾಯಣ ಶೆಟ್ಟಿ | ಬೊಜ್ಜ | ಪಲ್ಲವಿ ಆರ್ಟ್ಸ್, ಮುಂಬಯಿ |
| 2002 | ಎಚ್. ಶಕುಂತಳಾ ಭಟ್ | ಪಂಚಾಕ್ಷರಿ | ಲೇಖಕಿ |
| 2002 | ಗಣೇಶ್ ಅಮೀನ್ ಸಂಕಮಾರ್ | ಮಾಯದ ಕಾಯಿ | ಸಿರಿಪ್ರಕಾಶನ, ಹಳೆಯಂಗಡಿ |
| 2003 | ಆಲ್ವಿನ್ ದೇವದಾಸ್ | ಸಾಧನ | ಲೇಖಕ |
| 2003 | ಯು. ಗೋಪಾಲ ಶೆಟ್ಟಿ, ಕವತ್ತಾರು | ಜೋಕ್ಲೆನ ನಾಟಕೊಲು | ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ |
| 2004 | ಸಾ. ದಯಾ | ಒಸರ್ | ಜಗಜ್ಯೋತಿ ಕಲಾವೃಂದ, ಡೊಂಬಿವಿಲಿ |
| 2004 | ನಾಗರಾಜ ಗುರುಪುರ | ಸಂಶಯ | ತುಳು ಸಮಿತಿ, ಕನ್ನಡ ಸೇವಾ ಸಂಘ, |
| 2004 | | ತೆಡಿಲ್ | ಪೋವಾಯಿ( ರಿ.) |
| 2008 | ” | ತಂಬಿಲ | – |
| 2004 | ಯು.ಆರ್.ಚಂದರ್ | ಕೋರ್ದಬ್ಬು ತನ್ನಿಮಾನಿಗ | ಸಂಗಾತಿ ಪ್ರಕಾಶನ, ಸುಂದರಬಾಗ್, ಉಳ್ಳಾಲ |

| | | | |
|---|---|---|---|
| 2010 | ಜಾನಕಿ ಬ್ರಹ್ಮಾವರ | ಸ್ಮಶಾನ ಕುರುಕ್ಷೇತ್ರ | ಹೇಮಾಂಶು ಪ್ರಕಾಶನ |
| 2004 | ಡಾ. ಭಾಸ್ಕರಾನಂದ ಕುಮಾರ್ | ಭೀಷ್ಮನ ಕಡೆತ ದಿನಕೊಲು | – |
| 2005 | ಪ್ರಭಾಕರ ನೀರ್‌ಮಾರ್ಗ | ಭೀಕರ ನ್ಯಾಯಕಟ್ಟೆ | ಹೇಮಾವತಿ ಪ್ರಕಾಶನ, ನೀರ್‌ಮಾರ್ಗ |
| 2005 | ರತ್ನಾಕರ ರಾವ್, ಕಾವೂರು | ತಬುರನ ತೆಲಿಕೆ | ಶಶಿಪ್ರಕಾಶ್ ಪಬ್ಲಿಕೇಶನ್, ಮಂಗಳೂರು |
| 2005 | ಎಚ್ಕೆ ನಯನಾಡು | ಮಾರಿ ಗಿಡಪುಲೆ | ಅಕ್ಷರ ಪ್ರಕಾಶನ, ಆಲದಪದವು |
| 2005 | ಜಗದೀಶ್ ಶೆಟ್ಟಿ ಕೆಂಚನಕೆರೆ | ಸತ್ಯದ ಸಿರಿ | ಬಂಟರ ಸಂಘ, ಮುಂಬಯಿ |
| 2005 | ಪುತ್ತಿಗೆ ಈಶ್ವರ ಭಟ್ಟ | ದುಡ್ಡುದ ಸೊರ್ಕು | ಗಾಯತ್ರಿ ಪ್ರಕಾಶನ, ಕಿನ್ನಿಗೋಳಿ |
| 2009 | ಜಾನಕಿ ಬ್ರಹ್ಮಾವರ | ಮಾಯೊದಮುರ್ಗ(ಮೂಲ ಕೆ.ಟಿ.ಗಟ್ಟಿ) | |
| 2009 | ” | ಅಮರ್ ಬೈದ್ಯೆರ್ | |
| 2009 | ಡಾ. ಭಾಸ್ಕರಾನಂದ ಕುಮಾರ್ | ಭೀಷ್ಮನ ಕಡೆತ ದಿನೊಕುಲು | ತುಳುಕೂಟ, ಉಡುಪಿ |
| 2010 | ಕೇಶವ ಕುಡ್ಲ | ಮಾಯೆಯ ಮೂರು ನಾಟಕಗಳು | ” |
| 2010 | ಟಿ.ಎಲ್. ಗಟ್ಟಿ | ಸರಿತಿ | .................. |
| 2010 | ಜಾನಕಿ ಬ್ರಹ್ಮಾವರ | ಏಕಲವ್ಯ (ಮೂಲ ಕನ್ನಡ : ಡಾ. ಸಿದ್ದಲಿಂಗಯ್ಯ) | ಹೇಮಾಂಶು ಪ್ರಕಾಶನ |
| 2010 | ಜಾನಕಿ ಬ್ರಹ್ಮಾವರ | ಸ್ಮಶಾನ ಕುರುಕ್ಷೇತ್ರ | ಹೇಮಾಂಶು ಪ್ರಕಾಶನ |
| 2010 | ಜಾನಕಿ ಬ್ರಹ್ಮಾವರ | ರಕ್ತಾಕ್ಷಿ | ಹೇಮಾಂಶು ಪ್ರಕಾಶನ |
| 2011 | ರತ್ನಾಕರ ರಾವ್ ಕಾವೂರು | ಭೂತಾಳಪಾಂಡ್ಯೆ | ” |
| 2011 | ” | ಸಾಮ್ರಾಟ್ ಸಂಕಣ್ಣೆ | ” |

| | | | |
|---|---|---|---|
| 2011 | ” | ನಳ ದಮಯಂತಿ | ” |
| 2011 | ತಮ್ಮ ಲಕ್ಷ್ಮಣ | ಸತ್ಯ ಮುನೀಂಡಾ | ಲೇಖಕರು |
| 2011 | ಸರಪಾಡಿ ಅಶೋಕ್ ಶೆಟ್ಟಿ (ಸಂ.) | ರಂಗೊದ ರಂಗ್<br>ಪತ್ತೊಂಜಿ ನಾಟಕೊಲೆನ ಕೋಪೆ | ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ<br>” |
| 2013 | ದಾಮೋದರ ಬಂಗೇರ | ತುಳು ರಂಗನಾಟಕೊಲು ಗೊಂಚಿಲ್ | ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ |
| | ಕದ್ರಿ ನವನೀತ ಶೆಟ್ಟಿ | ತುಳು ನಾಟಕೊಲು ಗೊಂಚಿಲ್ 2 | ” |
| 2014 | ಜಯಂತಿ ಎಸ್. ಸುವರ್ಣ ಎರ್ಮಾಳ್ | ಲೋಕೊದ ಬೊಳ್ಪು | ಮಧು ಪ್ರಕಾಶನ |
| 2014 | ಡಾ. ಕಾತ್ಯಾಯಿನಿ ಕುಂಜಿಬೆಟ್ಟು | ನಾಗಮಂಡಲ (ಅನು)<br>ಮೂಲ ಕನ್ನಡ : ಗಿರೀಶ್ ಕಾರ್ನಾಡ್ | ................................ |
| 2014 | ದಾಮೋದರ ಬಂಗೇರ (ಸಂ.) | ತುಳುರಂಗನಾಟಕೊಲು | ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ |
| | ಕದ್ರಿ ನವನೀತ ಶೆಟ್ಟಿ (ಸಂ.) | ಗೊಂಚಿಲ್ ಒಂಜಿ | |
| | ವಿಲಾಸ್ ಕುಮಾರ್ ನಿಟ್ಟೆ | ಗಗ್ಗರ | ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ |
| | ತಮ್ಮ ಲಕ್ಷ್ಮಣ | ಸತ್ಯ ಮುನೀಂಡಾ | ” |
| | ಈಶ್ವರ ಚಿಟ್ಪಾಡಿ | ದೋಲು ಕೋಲ | ” |
| | ನವನೀತ ಶೆಟ್ಟಿ ಕದ್ರಿ | ಮೈಮೆದ ಸಿರಿದುರ್ಗೆ | ” |
| | ಕೆ.ವಿ. ಶೆಟ್ಟಿ | ಗಗ್ಗರ | ” |
| 2014 | ದಾಮೋದರ ಬಂಗೇರ (ಸಂ.) | ತುಳುರಂಗನಾಟಕೊಲು | ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ |
| | ಕದ್ರಿ ನವನೀತ ಶೆಟ್ಟಿ (ಸಂ.) | ಗೊಂಚಿಲ್ ರಡ್ಡ್ | |

| | | | |
|---|---|---|---|
| | ರಾಜು ಬಿ. ತೋನ್ಸೆ | ಜಲಜನ ಮಗಲೆಗ್ ಜಪಾನ್ದ ಕಂಡನಿ | |
| | ಉಮಾನಾಥ ವಿ. ಕೋಟ್ಯಾನ್ | ಪಗೆಕ್‌ಪಗೆ | |
| | ಬಿ. ರಾಮ ಕಿರೋಡಿಯನ್ | ಕಾನೂನ್ದ ಕಣ್ಣ್ | |
| | ಸಂಜೀವ ಅಡ್ಯಾರು | ನೆತ್ತೆರ್ದ ಕಾನಿಗೆ | |
| | ಅಮೃತ ಸೋಮೇಶ್ವರ | ವೀರರಾಣಿ ಅಬ್ಬಕ್ಕ | |
| 2014 | ಮಾರಿ ಗಿಡಪುಲೆ | ಮನು ಇಡ್ಯಾ | ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ |
| 2015 | ಜಯಂತಿ ಎಸ್. ಸುವರ್ಣ, ಎರ್ಮಾಳು | ಗರ್ವಭಂಗ | ಮಧು ಪ್ರಕಾಶನ, ಒಡಿಯೂರು |
| 2015 | ” | ಮನಸ್ಸ್ ಬದಲಾನಗ | ” |
| 2016 | ಶಶಿರಾಜ್ ರಾವ್ ಕಾವೂರು | ಬರ್ಬರೀಕಾ | ರಂಗಸಂಗಾತಿ, ಮಂಗಳೂರು |
| 2018 | ರಘು ಇಡ್ಕಿದು | ಐನ್ ನಾಟಕೊಲು | ವಿದ್ಯಾ ಪ್ರಕಾಶನ, ಮಂಗಳೂರು |
| 2018 | ” | ಮೋಕೆದ ತಂಗಡಿ | ವಿದ್ಯಾ ಪ್ರಕಾಶನ, ಮಂಗಳೂರು |
| 2018 | ” | ಜೈಲ್, ಕಿನ್ಯಗ | ” |
| 2018 | ” | ಒಂದು ಪ್ರೀತಿಯ ಕತೆ | ” |
| 2018 | ” | ಇಲ್ಲ್ ಜತ್ತಿ ಪೊಣ್ಣು (ಕನ್ನಡ ಮೂಲ : ಪೇಜಾವರ ಸದಾಶಿವ ರಾವ್ | ” |

**ಇಷ್ಟರ ಹೊರತಾಗಿಯೂ ಹೆಸರುಗಳು ಬಿಟ್ಟುಹೋಗಿರಬಹುದಾದಲ್ಲಿ ಲೇಖಕರ ವಿಷಾದವಿದೆ**

# ಆಕರ/ಮಾಹಿತಿ ಮೂಲಗಳು


1. ಕನ್ನಡ ರಂಗಭೂಮಿಯ ಪುರೋಭಿವೃದ್ಧಿ, ಆದ್ಯ ರಂಗಾಚಾರ್ಯ, 1968.
2. ರಂಗಪ್ರಪಂಚ–ಕೆ.ವಿ. ಅಕ್ಷರ– 1994, ಅಕ್ಷರ ಪ್ರಕಾಶನ, ಹೆಗ್ಗೋಡು
3. ಲೇಖನ: ಹೊಸ ಜಾಡಿನ ಅನ್ವೇಷಣೆಯಲ್ಲಿ (ಕಾರ್ಕಳದ) ರಂಗಭೂಮಿ; ಮುದ್ದು ಮೂಡುಬೆಳ್ಳೆ, ನವಭಾರತ
4. 'ಕಾರ್ಕಳ ಜೇಸೀಸ್ ತುಳು ನಾಟಕ ಸ್ಪರ್ಧೆ' – ಸಮೀಕ್ಷಾ ಲೇಖನ– ಮುದ್ದು ಮೂಡುಬೆಳ್ಳೆ –7.11.83, ನವಭಾರತ
5. 1984– ತುಳು ಬದುಕು– 'ತುಳು ಸಾಹಿತ್ಯ' ಅಮೃತ ಸೋಮೇಶ್ವರ.
6. 22.4.85– ಉದಯವಾಣಿ – 'ತುಳು ನಾಟಕ ಕೃತಿಗಳು', ಮುದ್ದು ಮೂಡುಬೆಳ್ಳೆ
7. 1985 ಜುಲಾಯಿ–ತಾಯ್ನುಡಿ (ಮುಂಬಯಿ) – 'ತುಳು ನಾಟಕಗಳು', ಮುದ್ದು ಮೂಡುಬೆಳ್ಳೆ
8. 7.5.89ರಿಂದ 19.9.89ರವರೆಗೆ – 'ಮಂಗಳೂರು ವಾರ್ತೆ' ಪತ್ರಿಕೆಯಲ್ಲಿ ಬರೆದ 'ತುಳು ನಾಟಕೊಲು'– ಅಂಕಣ, ಮುದ್ದು ಮೂಡುಬೆಳ್ಳೆ
9. 1989– 'ತುಳು ನಾಟಕೊಲು–ನಾಲ್ ಪಾತೆರೊ'–ಪನಿಯಾರ (ಅಖಿಲ ಭಾರತ ತುಳು ಸಮ್ಮೇಳನ ಸ್ಮರಣ ಸಂಚಿಕೆ–89), ಐ.ಕೆ. ಬೊಳುವಾರು
10. 1994 ಏಪ್ರಿಲ್– 'ತುಳು ರಂಗಭೂಮಿದ ಸಮಸ್ಯೆಲು'– 'ಕದಿಕೆ' (ವಿಶ್ವ ತುಳು ಸಮ್ಮೇಳನ ಸ್ಮರಣ ಸಂಚಿಕೆ), ಯು. ಆರ್. ಚಂದರ್.
11. 1996 ಮೇ– 'ತುಳುವರ ಬೊಂಬಾಯಿ ಸಂಸ್ಕೃತಿ ಬಿಂಬಿಸುವ 'ಊರೆ ಗತಿ'– ಹರೀಶ್ ಹೆಜ್ಮಾಡಿ, 'ಅಕ್ಷಯ' ಮುಂಬಯಿ.
12. ಕರಾವಳಿ ಹವ್ಯಾಸಿ ರಂಗಭೂಮಿಯ ಒಲವುಗಳು– ಡಾ. ನಾ. ದಾಮೋದರ ಶೆಟ್ಟಿ, 'ಪೊಲಿ', 2000.
13. ಅನ್ಯ ಮಾತೃಭಾಷಾ ತುಳು ನಾಟಕಕಾರರು', ಡಾ. ವಾಮನ ನಂದಾವರ, ಪು.185–ತುಳುವರಿವರು, ಸಂ.: ಪಾದೇಕಲ್ಲು ವಿಷ್ಣುಭಟ್ಟ, ರಾ.ಗೋ. ಸಂಶೋಧನ ಕೇಂದ್ರ, ಉಡುಪಿ.
14. ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಗ್ರಂಥಾಲಯದ ತುಳು ನಾಟಕ ಕೃತಿಗಳು.
15. ಪ್ರಯೋಗಶೀಲ ಪಥದಲ್ಲಿ 'ತುಳು ರಂಗಭೂಮಿ', ಮುದ್ದು ಮೂಡುಬೆಳ್ಳೆ, 'ಈ ಮಾಸ ನಾಟಕ', ಅಕ್ಟೋಬರ್, 2004.
16. ನಮ್ಮ ತುಳು ನಾಟಕಗಳು ಗಮನಿಸಬೇಕಾದ ಅಂಶಗಳು, ಡಾ. ಪಿ.ಎಲ್. ಧರ್ಮ, ಆತ್ಮಶಕ್ತಿ, ತ್ರೈಮಾಸಿಕ, ಅ.ಡಿ.2005.
17. ಪ್ರಕಟಿತ ತುಳು ನಾಟಕಗಳು, ಕೆ. ಮಹಾಲಿಂಗ, ತುಳು ಸಾಹಿತ್ಯ ಚರಿತ್ರೆ, ಕನ್ನಡ

ವಿಶ್ವವಿದ್ಯಾಲಯ, ಹಂಪಿ, 2007
18. ತುಳು ರಂಗಭೂಮಿ – ಮಂಗಳೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಆಶ್ರಯದಲ್ಲಿ 31–1–2017ರಂದು ಇದೇ ಲೇಖಕನು ನೀಡಿದ ಉಪನ್ಯಾಸ.
19. ದಿ. ಕೆಮ್ತೂರ್, ದಿ. ರಾಮ ಕಿರೋಡಿಯನ್, ಶ್ರೀ ವಿ.ಜಿ. ಪಾಲ್ ಹಾಗೂ ಹಿರಿಕಿರಿಯ ತುಳು ನಾಟಕಕಾರರೊಂದಿಗೆ ಕಾಲಕಾಲಕ್ಕೆ ನಡೆಸಿದ ಮಾತುಕತೆ ಹಾಗೂ ಡಾ। ಕಾತ್ಯಾಯಿನಿ ಕುಂಜಿಬೆಟ್ಟು, ಗಂಗಾಧರ ಕಿದಿಯೂರು, ಎಚ್ಕೆ ನಯನಾಡು, ಡಾ। ಈಶ್ವರ ಅಲೆವೂರು, ತಾರಾನಾಥ ಕಾಪಿಕಾಡು, ತಮ್ಮ ಲಕ್ಷ್ಮಣ ಇವರು ನೀಡಿದ ಮಾಹಿತಿಗಳು.



ತುಳು ಭಾಷೆ, ಸಂಸ್ಕೃತಿಯನ್ನು ಉಳಿಸಿ ಬೆಳೆಸುವಲ್ಲಿ ಈ ನಾಡಿನ ಆರಾಧನಾ ರಂಗಭೂಮಿಯಂತೆಯೇ ತುಳುನಾಟಕಗಳ ಪಾತ್ರವೂ ಮಹತ್ವದ್ದಾಗಿದೆ. ಹಳೆಯ ಕಾಲದ ಸಾಂಪ್ರದಾಯಿಕ ನಾಟಕಗಳಂತೆಯೇ ಕಳೆದ ಸುಮಾರು ನಾಲ್ಕು ದಶಕಗಳಿಂದ ತುಳುನಾಡಿನಲ್ಲೂ, ಮುಂಬಯಿ ಮುಂತಾದ ಹೊರನಾಡಿನಲ್ಲೂ ಈಚಿನ ತುಳುವಿನ ಹವ್ಯಾಸಿ ಪ್ರಯೋಗ ರಂಗಭೂಮಿಯಲ್ಲಿ ಸಾಕಷ್ಟು ಕೆಲಸಗಳು ನಡೆಯುತ್ತಿವೆ. ಮುದ್ದು ಮೂಡುಬೆಳ್ಳೆಯವರು ಕಳೆದ ಅನೇಕ ವರ್ಷಗಳಿಂದ ತುಳು ನಾಟಕರಂಗವನ್ನು ಅಧ್ಯಯನ ಮಾಡುತ್ತಾ ಆ ಕುರಿತು ಬರೆಯುತ್ತ ಬಂದವರು.

ತುಳು ನಾಟಕ ಪರಂಪರೆ ಮತ್ತು ಪ್ರಯೋಗಗಳ ಬಹುಮುಖಿ ಅಧ್ಯಯನದ ಈ ಕೃತಿ ವ್ಯಾಪಕ ಕ್ಷೇತ್ರಕಾರ್ಯ, ಮರುಪರಿಶೀಲನೆಗಳಿಂದಾಗಿ ಅಪೂರ್ವ ಭಾವಚಿತ್ರಗಳು ಮತ್ತು ಮಾಹಿತಿಗಳೊಂದಿಗೆ ಕೂಡಿದ್ದು ತುಳು ರಂಗಭೂಮಿಯ ಸಮಗ್ರ ಇತಿಹಾಸವನ್ನು ಕಟ್ಟಿಕೊಡುತ್ತದೆ.

**ಸದಾನಂದ ಸುವರ್ಣ**

ರಂಗಭೂಮಿ ಮತ್ತು ಚಲನಚಿತ್ರ ನಿರ್ದೇಶಕರು

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯು 1994ರಲ್ಲಿ ಸ್ಥಾಪನೆಗೊಂಡು ಇದೀಗ ಬೆಳ್ಳಿಹಬ್ಬದ ಸಂಭ್ರಮವನ್ನು ಕಾಣುತ್ತಿದೆ. ಈ ಸಂದರ್ಭದ ಅಕಾಡೆಮಿಯ ವಿವಿಧ ಕಾರ್ಯಯೋಜನೆಗಳಲ್ಲಿ ರಂಗಭೂಮಿಗೆ ಸಂಬಂಧಿಸಿ 2018 ಹಾಗೂ 2019ರಲ್ಲಿ 'ತುಳುನಾಟಕ ಪರ್ಬ'ವನ್ನು ಆಯೋಜಿಸಲಾಯಿತು. ಇಷ್ಟೇ ಅಲ್ಲದೇ ನೂರು ವರ್ಷಗಳ ಇತಿಹಾಸವಿರುವ ತುಳು ನಾಟಕರಂಗದ ಇತಿಹಾಸವನ್ನು ದಾಖಲಿಸುವ ಗ್ರಂಥ ಪ್ರಕಟಣೆಯ ಯೋಜನೆಯನ್ನೂ ಹಾಕಿಕೊಳ್ಳಲಾಯಿತು.

ಅಕಾಡೆಮಿಯ ಮಾಜಿ ಸದಸ್ಯ, ಹಿರಿಯ ಲೇಖಕ, ಹವ್ಯಾಸಿ ರಂಗಕರ್ಮಿ, ಮಾಧ್ಯಮತಜ್ಞ ಮತ್ತು ಆಕಾಶವಾಣಿಯ ನಿವೃತ್ತ ಅಧಿಕಾರಿಯಾಗಿರುವ ಶ್ರೀ ಮುದ್ದು ಮೂಡುಬೆಳ್ಳೆಯವರು ಈ ಕೃತಿಯಲ್ಲಿ ತುಳು ರಂಗನಾಟಕಗಳು ಬೆಳೆದು ಬಂದ ಮಾಹಿತಿಗಳನ್ನು ದೀರ್ಘಕಾಲದ ಕ್ಷೇತ್ರಕಾರ್ಯದ ಮೂಲಕ ದಾಖಲಿಸಿ, ರಂಗಭೂಮಿಯ ವಿವಿಧ ಅಂಗಗಳನ್ನು ಇಲ್ಲಿ ವಿಶ್ಲೇಷಣೆ ಮಾಡಿದ್ದಾರೆ. ತುಳುವೇತರರ ಅರಿವಿಗೂ ಬರಬೇಕು ಎಂಬುದಕ್ಕಾಗಿ ಈ ಕೃತಿ ಕನ್ನಡ ಭಾಷೆಯಲ್ಲಿದೆ. ಇದೊಂದು ಸಾರ್ವಕಾಲಿಕ ಮಹತ್ವದ ಕೃತಿ ಎಂಬುದಾಗಿ ಅಭಿಮಾನದಿಂದ ತುಳು ಅಕಾಡೆಮಿ ಇದನ್ನು ಸಮರ್ಪಿಸುತ್ತಿದೆ.

**ಎ.ಸಿ. ಭಂಡಾರಿ**

ಅಧ್ಯಕ್ಷರು, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ
ತುಳುಭವನ, ಉರ್ವಸ್ಟೋರ್
ಮಂಗಳೂರು – 575 006 ಬೆಲೆ : ರೂ. 400